ಭಕ್ತಿರೂಪವಾದ ಧರ್ಮವು ಭಾಗವತದಲ್ಲಿ ಪ್ರತಿಪಾದಿತವಾಗಿದೆ. ಸರ್ವೋತ್ತಮ ಶ್ರೇಯಸ್ಸನ್ನುಂಟು ಮಾಡುವ ಮಹಾ ಕಾವ್ಯ ಇದು. ಅಪ್ರಾಕೃತ ಸಹಜಗುಣ ವಿಶಿಷ್ಟನಾದ ಪರಮಾತ್ಮನ ಸ್ವರೂಪವನ್ನು ತಿಳಿಸತಕ್ಕ ಮಹಾಗ್ರಂಥ. ಮಹರ್ಷಿ ಪ್ರೋಕ್ತವಾದ ಈ ಸದ್ಗ್ರಂಥವನ್ನು ಕೇಳುವವರು ಧನ್ಯರು. ಭಾಗವತ ಪುರಾಣದ ವಿಷಯವಾಗಿ ಮಹಾತ್ಮರೊಬ್ಬರು ಹೀಗೆ ಹೇಳಿದ್ದಾರೆ.

ನಿಗಮಕಲ್ಪತರೋರ್ಗಳಿತಂ ಫಲಂ ಶುಕಮುಖಾದಮೃತದ್ರವ ಸಂಯುತಂ |
ಪಿಬತ ಭಾಗವತಂ ರಸಮಾಲಯಂ ಮುಹುರಹೋ ರಸಿಕಾ ಭುವಿ ಭಾವುಕಾಃ ||

ಎಲೈ | ರಸಜ್ಞರಾದ ಸಜ್ಜನರೇ ! ವೇದಗಳೆಂಬ ವೃಕ್ಷದಲ್ಲಿ ಗಾಳಿಯಿಂದ ಕಚ್ಚಿ ಬಿದ್ದ ಹಣ್ಣಿನಂತೆ ಸರ್ವವೇದಸಾರಭೂತವಾಗಿ ಶುಕಮುನಿಯಿಂದ ಮುಖೋದ್ಗತವಾದ ಈ ಭಾಗವತವೆಂಬ ಅಮೃತ ಸಮಾನವಾದ ರಸವನ್ನು ನೀವು ಸದಾ ಆಸ್ವಾದಿಸುತ್ತಿರಿ"

ಶ್ರೀ ಕೃಷ್ಣಯ್ಯನು ಇಂತಹ ಮಹಾಭಾಗ್ಯವನ್ನು ಒದಗಿಸಿಕೊಟ್ಟು ಧನ್ಯನಾಗಿದ್ದಾನೆ. ನೀವು ನಿಜವಾಗಿ ಪುಣ್ಯಶಾಲಿಗಳು ಭಾಗವತಸಪ್ತಾಹವನ್ನು ಕೇಳಿ ಪರಮಾತ್ಮಕೃಪೆಗೆ ಪಾತ್ರರಾಗಿರುವುದಲ್ಲದೆ, ಭಾಗವತರನ್ನು ಸತ್ಕರಿಸಿ, ಗುರು ಪೂಜೆ ಸಲ್ಲಿಸಿ, ಧನ್ಯರಾಗಿದ್ದೀರಿ. ಇದಕ್ಕಿಂತ ಹೆಚ್ಚಿನ ಧರ್ಮಕಾರ್ಯ ಇನ್ನೊಂದಿಲ್ಲ ಎಂದು ಹೇಳಿ ತಮ್ಮ ಉಪದೇಶವನ್ನು ಮುಕ್ತಾಯ ಮಾಡಿದರು. ಶ್ರೀ ಶ್ರೀಗಳು ಮಾರನೆಯದಿನ ಅಲ್ಲಿಯೇ ಇದ್ದು ಶ್ರೀಶ್ರೀಗಳು ಅನೇಕಮಂದಿ ಶಿಷ್ಯರಿಗೆ ಚಕ್ರಾಂಕನ, ಮಂತ್ರೋಪದೇಶ ಅನುಗ್ರಹಿಸಿದರು. ಸಮಾಶ್ರಯಣದ ಮಹಿಮೆಯನ್ನು ಅವರಿಗೆ ವಿವರಿಸಿದರು. ಅನಂತರ ಶ್ರೀ ಶ್ರೀಗಳು ತಮ್ಮ ಪರಿವಾರ ಸಮೇತ ಬೆಂಗಳೂರಿಗೆ ದಯಮಾಡಿಸಿದರು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಧರ್ಮ ದಿಗ್ವಿಜಯ

ಬೆಂಗಳೂರು ಸ್ವಾಗತಸಮಿತಿಯವರು, ಶ್ರೀ ಪರಕಾಲಮಠದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತ ಪ್ರಚಾರದೃಷ್ಟಿಯಿಂದ ಹತ್ತುದಿನಗಳ ಉಪನ್ಯಾಸಮಾಲೆಯನ್ನು ಏರ್ಪಡಿಸಿದ್ದರು. ವೇದಾಂತ ವಿದ್ಯಾ ನಿಪುಣರೂ, ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರು, ಪಂಡಿತೋತ್ತಮರೂ ಉಪನ್ಯಾಸಕರಾಗಿದ್ದರು. ಉಪನ್ಯಾಸಗಳು ವೈವಿಧ್ಯತೆಯಿಂದ ಕೂಡಿತ್ತು. ಪ್ರತಿದಿನವೂ ಶ್ರೀ ಶ್ರೀಗಳವರು ಅಧ್ಯಕ್ಷತೆ ವಹಿಸುತ್ತಿದ್ದರು. ಜನರು ಸಭಾಂಗಣದಲ್ಲಿ ಕಿಕ್ಕಿರಿದು ತುಂಬುತ್ತಿದ್ದರು. ಆ ಹತ್ತು ದಿನ ಬಹು ದೊಡ್ಡ ಹಬ್ಬದಂತೆ ಕಳೆಯಿತು.

ಮೊದಲಿನ ದಿವಸದ ಉಪನ್ಯಾಸವನ್ನು ಉದ್ಘಾಟಿಸುತ್ತ ಶ್ರೀ ಶ್ರೀಗಳು ಹೀಗೆ ಅಪ್ಪಣೆ ಕೊಡಿಸಿದರು "ಉತ್ಪತ್ತಿ, ಸ್ಥಿತಿ, ನಾಶ ಎಲ್ಲವೂ ಪರಮಾತ್ಮಾಧೀನ, ಗರ್ಭಸಂಸ್ಕೃತನಾದ ಚೇತನನ ವಿಷಯದಲ್ಲಿ ಸ್ವಾಮಿಯು ಮೊದಲೇ ಸಂಕಲ್ಪಿಸಿದ್ದಾನೆ. ಸಂಸಾರದ ದುಃಖ ಮಿಶ್ರಚಕ್ರದಿಂದ ತಪ್ಪಿಸಿಕೊಳ್ಳಬೇಕಾದರೆ ಭಗವದ್ಗುಣಾನುಭವ ಬಹುಮುಖ್ಯ. ಚೇತನನು ಅಹಂಕಾರ, ಮಮಕಾರಗಳನ್ನು ಬಿಟ್ಟು, ಇಂದ್ರಿಯಭೋಗವನ್ನು ತ್ಯಜಿಸಿ ಪರಮಾತ್ಮನ ಕಡೆಗೆ ಮನಸ್ಸು ತಿರುಗಿಸಬೇಕು. ಸತ್ಸಂಗ, ಸತ್ಕಾರ್ಯ, ಸತ್ಕಾಲಕ್ಷೇಪಗಳಲ್ಲಿ ನಿರತನಾಗಬೇಕು. ಶಾಸ್ತ್ರ ವಿಷಯ ಕೇಳಿ ತಿಳಿಯಬೇಕು. ಇದರಿಂದ ನಿರ್ದುಷ್ಟವಾದ ಮನೋಹರವಾದ ಭಾವನೆಗಳನ್ನು ಬಿಡುವುದು. ಆತ್ಮೋಜ್ಜೀವನಕ್ಕೆ ಇಂತಹ ಪ್ರಯತ್ನ ಅಗತ್ಯ. ಈ ಉಪನ್ಯಾಸ ಮಾಲೆಯು ಇಂತಹ ಅವಕಾಶ ಕಲ್ಪಿಸುವುದು. ಸರ್ವರೂ ಈ ಸದವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಶ್ರೀ ಲಕ್ಷ್ಮೀ ಹಯಗ್ರೀವಸ್ವಾಮಿಯು ಕರುಣಿಸಲಿ ಎಂದು ಶ್ರೀ ಶ್ರೀಗಳು ಹೇಳಿ ಉಪನ್ಯಾಸಮಾಲೆಯ ಪ್ರಾರಂಭೋತ್ಸವ ನೆರವೇರಿಸಿದರು.

ಉಪನ್ಯಾಸಮಾಲೆಯ ವಿಷಯಗಳು ಬಹುಪ್ರಕಾರವಾಗಿದ್ದುವು. ವೇದಾಂತದೇಶಿಕರ ಕಾವ್ಯಸಮೃದ್ಧಿ, ವಿಶಿಷ್ಟಾದ್ವೈತ ಮತ್ತು ಬ್ರಹ್ಮಾನುಭವ, ಅಪೃಥಕ್ಸಿದ್ಧಿ, ಪಾಂಚರಾತ್ರಾಗಮ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತ, ಸಿದ್ಧಾಂತದ ಸ್ವರೂಪ ಮತ್ತು ಲಕ್ಷಣ-ಮುಂತಾದ ವಿಷಯಗಳ ಮೇಲೆ ಉಪನ್ಯಾಸಗಳಾದವು. ತಂಡೋಪತಂಡವಾಗಿ ಜನರು ಸೇರುತ್ತಿದ್ದರು. ಪ್ರತಿದಿನದ ಉಪನ್ಯಾಸಕ್ಕೂ ಶ್ರೀ ಶ್ರೀಗಳವರೇ ಅಧ್ಯಕ್ಷರು. ಆಯಾಯ ದಿನದ ಉಪನ್ಯಾಸ ವಿಷಯಕ್ಕೆ ತಕ್ಕಂತೆ ಸಂದರ್ಭೋಚಿತವಾಗಿ ಶ್ರೀ ಶ್ರೀಗಳು ತಮ್ಮ ಮುಕ್ತಾಯ ಭಾಷಣಗಳನ್ನು ಅರ್ಥವತ್ತಾಗಿಯೂ, ಎಲ್ಲರಿಗೂ ತಿಳಿಯುವಂತೆ ಸುಲಭವಾಗಿಯೂ ಉಪದೇಶ ಮಾಡುತ್ತಿದ್ದರು. ಅವರ ಮುಕ್ತಾಯ ಭಾಷಣಗಳನ್ನು ಹೀಗೆ ಒಟ್ಟುಗೂಡಿಸಬಹುದು.

ವೇದಾಂತದೇಶಿಕರ ಮಹಿಮೆ ಅತ್ಯದ್ಭುತವಾದುದು. ಅದನ್ನು ತಿಳಿಯುವುದು ಕಷ್ಟ. ನಿಶ್ಶೇಷ ಮಂಬರತಲಂ ಯದಿ ಪತ್ರಿಕಾ ಸಾ'ತ್' ಎಂದು ಅವರೇ ಹೇಳಿರುವಂತೆ ಅವರ ಪ್ರಭಾವ, ಪಾಂಡಿತ್ಯ ಆಶ್ಚರ್ಯಕರ ರೀತಿಯದು. ಮಾನವ ಜನ್ಮವು ಸುಕೃತ ವಿಶೇಷದಿಂದ ಉಂಟಾಗಿದೆ. ಅದನ್ನು ಸಾರ್ಥಕ ಪಡಿಸಿಕೊಳ್ಳಬೇಕು. ವೇದಾಂತದೇಶಿಕರು, ಇಂತಹ ಆತ್ಮೋಜ್ಜೀವನ ಮಾರ್ಗವನ್ನು ಬಹು ಚೆನ್ನಾಗಿ ವಿವರಿಸಿದ್ದಾರೆ. ಅದನ್ನು ಮುಖ್ಯವಾಗಿ ತಿಳಿಯಬೇಕು. ನೀರಿನಲ್ಲಿರುವ ಕಮಲವನ್ನು ಸೂರ್ಯನು ಅರಳಿಸಿ ಸಂತೋಷವನ್ನುಂಟು ಮಾಡುವಂತೆ, ಆಚಾರ್ಯರ ಶಿಷ್ಯರಿಗೆ ವಿಷ್ಣು ಭಕ್ತಿಯ ಸ್ವರೂಪ, ರೂಪ, ಲಕ್ಷಣಗಳನ್ನು ಉಪದೇಶ ಮಾಡಿ ಭಕ್ತಿ ಪ್ರಚೋದನೆಯನ್ನುಂಟು ಮಾಡಿ, ಚೇತನೋಜ್ಜೀವನವಾಗುವಂತೆ ಕರುಣಿಸಿದ್ದಾರೆ.

ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಅಪೃಥಕ್ಸಿದ್ಧಿಸಂಬಂಧ ಮೂಲಭೂತವಾದುದು. ಬ್ರಹ್ಮನಲ್ಲಿ ಗುಣವಿದೆ ಎಂದು ಒಪ್ಪಿಕೊಂಡರೆ ಅಧಃಪತನವಾಗುವುದು ಎಂದು ಹೇಳುವವರು ಇರಬಹುದು. ಜೀವನು ಬ್ರಹ್ಮನಲ್ಲಿ ಐಕ್ಯವಾದರೆ ಬ್ರಹ್ಮನು ಇನ್ನೂ ದೊಡ್ಡವನಾಗಬೇಕಲ್ಲವೇ ? ಇದನ್ನು ಗಮನಿಸಬೇಡವೇ ? ಎಳ್ಳಿನಲ್ಲಿ ಎಣ್ಣೆ ಇರುವುದೂ, ಮೊಸರಿನಲ್ಲಿ ಬೆಣ್ಣೆ ಇರುವುದೂ, ನೀರಿನಲ್ಲಿ ಅಗ್ನಿ ಇರುವುದೂ ಬಾಹ್ಯದಲ್ಲಿ ಗೊತ್ತಾಗುವುದಿಲ್ಲ. ಆದರೆ ಶ್ರುತಿಯು ಇದನ್ನು ಸಮರ್ಥನೆ ಮಾಡುವುದು. ಶ್ರುತಿ ವಾಕ್ಯವನ್ನು ನಂಬಬೇಕು. ಸರ್ವ ಸಮ್ಮತ ರೀತಿಯಲ್ಲಿ ಶ್ರುತಿಗಳಿಗೆ ಅರ್ಥ ಹೇಳಬೇಕು. ಅಪೃಥಕ್ಸಿದ್ಧಿ ಎಂದರೆ ಭಗವಂತನಿಗೂ ಚೇತನನಿಗೂ ಬಿಡಿಸಲಾಗದ ಎರಡು ವಿಧ ಸಂಬಂಧ. ಒಂದೇ ಮುಖವಾದ ಸಂಬಂಧವಿದೆ ಎಂದರು ದ್ವೈತಿಗಳು. ಇದು ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಸಮ್ಮತವಲ್ಲ. ಚೇತನನ ಉದ್ಧಾರಕ್ಕೆ ಭಗವಂತನಿದ್ದಾನೆ. ಅವನ ಕೈಂಕರ್ಯಕ್ಕೆ ಚೇತನ ಇದ್ದಾನೆ. ಇದು ಎರಡು ಮುಖ್ಯವಾದ ಸಂಬಂಧ. ನಾರಾಯಣ ಶಬ್ದದಲ್ಲಿಯೇ ಅಪೃಥಕ್ಸಿದ್ಧಿ ಇದೆ. "ವಿಧಿ ನಿರ್ಮಿತ ಮೇತದನ್ವಯಂ ಭಗವ ! ಪಾಲಯ ಮಾಸ್ಮ ಜೀಹಪಃ" ಎಂದರು ಯಾಮುನ ಮುನಿಗಳು. 'ಯದಿ ಮೇ ನ ದಯಿಷ್ಯಸೇ ತತಃ ದಯನೀಯಸ್ತವ ನಾಥ ದುರ್ಲಭಃ' 'ಜ್ಞಾನೀತು ಆತ್ಮೈವ ಮೇಮತಂ' ಎಂಬ ವಾಕ್ಯಗಳು ಅಪೃಥಕ್ಸಿದ್ಧಿಗೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಉತ್ತಮ ಉದಾಹರಣೆ. 'ಹೇ ಗೋವಿಂದಾ ! ನಿನ್ನ ನನ್ನ ಸಂಬಂಧ ಅಳಿಸಿದರೂ ಅಳಿಯದೆ ಇರುವಂತಹುದು. "ಅರಿವೊನ್ರುವಿಲ್ಲಾದ ವಾಯ್‌ಕುಲತ್, ಕುರ್ಯೆವೊನ್ನುವಿಲ್ಲಾದ ಗೋವಿಂದಾ !" 'ಅರಿಯಾದ ಪಿಳ್ಳೆಗಳೋಂ, ಶಿರಿಪೇರುತ್ತನಂ ಶೀರಿ ಅರುಳಾದೆ' ಎಂದಳು ಗೋದಾದೇವಿ. ಇಂತಹ ಪರಮಾತ್ಮ ಸಂಬಂಧವನ್ನು ಸದಾ ಮನನ ಮಾಡುತ್ತಿರಬೇಕು.

ಮಾನವರಿಗೆ ತತ್ವ, ಹಿತ, ಪುರುಷಾರ್ಥದಲ್ಲಿ ನಿಷ್ಠೇ ಇರಬೇಕು. ಈಶ್ವರ ಸಂಕಲ್ಪವಿಲ್ಲದೆ ಯಾವುದೂ ನಡೆಯುವುದಿಲ್ಲ ಎಂಬ ನಿಶ್ಚಯಜ್ಞಾನವಿರಬೇಕು. ಚೇತನನ ಪಾಪ ಮೇರು ಪರ್ವತದಷ್ಟಿದ್ದರೂ ಸ್ವಾಮಿಯು ಅದನ್ನು ಒಂದು ಕ್ಷಣದಲ್ಲಿ ಹೋಗಲಾಡಿಸುತ್ತಾನೆ. ಅಂತಹ ಶಕ್ತಿ ಅವನಿಗಿದೆ. ಆದರೆ ಚೇತನನು ಅಂತಹ ಭಕ್ತಿಯಿಂದ ಪ್ರಾರ್ಥಿಸಬೇಕು. 'ಗಜೇಂದ್ರನನ್ನು ಕಾಪಾಡಿದ ಗಜೇಂದ್ರ ವರದ ಸ್ವಾಮಿಯೇ', ! ದ್ರೌಪದಿಯನ್ನು ರಕ್ಷಿಸಿದ ಶ್ರೀಕೃಷ್ಣಪರಮಾತ್ಮನೇ ಕಾಪಾಡು ಎಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸಬೇಕು.

ಶ್ರೀಮನ್ನಾರಾಯಣನೇ ಪರತತ್ವ ಎಂದು ಭಾಷ್ಯಕಾರರು ವೇದಾರ್ಥ ಸಂಗ್ರಹದಲ್ಲಿ ಸ್ಥಾಪಿಸಿದ್ದಾರೆ. ಎಲ್ಲರಿಂದ ಯಾವನು ಪ್ರೀತಿಸಲ್ಪಡುವನೋ, ಪೂಜಿಸಲ್ಪಡುವನೋ, ಎಲ್ಲದರಲ್ಲಿ ಯಾವನು ಅಂತರಾತ್ಮನಾಗಿರುವನೋ ಅವನೇ ಶ್ರೀಮನ್ನಾರಾಯಣನು. ಸಕಲ ಚರಾಚರಗಳಲ್ಲಿ ಶ್ರೀಮನ್ನಾರಾಯಣನು ಅನುಪ್ರವೇಶಮಾಡಿ ಜಗತ್ತನ್ನು ರಕ್ಷಿಸುವನು. ಅಂತಹ ಶ್ರೀಮನ್ನಾರಾಯಣನನ್ನು ಎಲ್ಲರೂ ಉಪಾಸನೆಮಾಡಿ ಕೃತಾರ್ಥರಾಗಬೇಕು.

'ವಿಶಿಷ್ಟ, ಸ್ಯ ಅದ್ವೈತಂ' 'ವಿಶಿಷ್ಟಂಚ ವಿಶಿಷ್ಯಯೋಃ ಅದ್ವೈತಂ' ಎಂದರು ಪಂಡಿತರು. ಜಗತ್ತೆಲ್ಲವೂ ಪರಮಾತ್ಮನ ಶರೀರ. ಅವನು ಚೇತನಾಚೇತನಗಳನ್ನೊಳಗೊಂಡಿದ್ದಾನೆ. ಅವನಿಲ್ಲದ ಸ್ಥಳವಿಲ್ಲ, ಸರ್ವವಸ್ತುಗಳಲ್ಲಿ ಸ್ವಾಮಿಯು ಅಂತರಾತ್ಮನಾಗಿದ್ದಾನೆ ಎಂದಿತು ವಿಶಿಷ್ಟಾದ್ವೈತ. 'ಅನಿತ್ಯಂ ಅಸುಖಂ ಲೋಕಂ' ಎಂದಿತು ಗೀತೆ. ಜಗತ್ತಿನಲ್ಲಿ ಎಲ್ಲಿಯೂ ಸುಖವಿಲ್ಲ. ಎಲ್ಲೆಲ್ಲಿಯೂ ಕಷ್ಟವೇ ಎಂದಿತು ವೇದ. ಜಗತ್ತಿನಲ್ಲಿ ಅಲೆಯದೆ ನಿನ್ನ ಹೃದಯದಲ್ಲಿ ಅಂತರ್ಯಾಮಿಯಾಗಿರುವ ನನ್ನನ್ನು ನಂಬು ಎಂದಿತು ವೇದ. ಇದೇ ವಿಶಿಷ್ಟಾದ್ವೈತ. ನಾಥಮುನಿಗಳ ಕಾಲದಲ್ಲಿ ಇದು ಪ್ರಮಾಣಕ್ಕೆ ಬಂದಿತು. ಯಾಮುನಮುನಿಗಳು ಇದನ್ನು ಬೆಳೆಸಿದರು. ರಾಮಾನುಜಮುನಿಗಳು. ವೇದ, ಆಗಮ ಎರಡನ್ನು ಸಮನ್ವಯ ಮಾಡಿ ವಿಶಿಷ್ಟಾದ್ವೈತದರ್ಶನವನ್ನು ಪ್ರಕಾಶಪಡಿಸಿದರು. ಪ್ರತಿಪಾದಿಸಿ, ಪ್ರಚಾರ ಮಾಡಿದರು. 'ತ್ವದಂಘ್ರಿಮುದ್ದಿಶ್ಯ ಕದಾಪಿಕೇನಚಿತ್' ಒಂದು ಸಲ ಪರಮಾತ್ಮನಿಗೆ ನಮಸ್ಕಾರ ಮಾಡಿದರೆ ಸಾಕು, ಅವನು ಮೋಕ್ಷವನ್ನು ಕರುಣಿಸುವನು ಎಂದರು ಯಾಮುನಮುನಿಗಳು. ಆದುದರಿಂದ ಎಲ್ಲರೂ ಪರಮಾತ್ಮನನ್ನು ಭಕ್ತಿಯಿಂದ ಪ್ರಾರ್ಥಿಸಿ ಕೃತಾರ್ಥರಾಗಬೇಕು.

ಚೇತನನು ಆಚಾರ್ಯರ ಮೂಲಕ ಪರಮಾತ್ಮನಲ್ಲಿ ಪ್ರಪತ್ತಿ ಮಾಡುವನು. ದೇಹಾವಸಾನಾನಂತರ ಭಗವದನುಭವ ಪಡೆಯುವನು. ಇದೇ ರಾಮಾನುಜ ಸಿದ್ಧಾಂತ. ಪರಮಾತ್ಮನಸ್ವರೂಪ, ರೂಪ, ಗುಣ, ವಿಭವವನ್ನು ಅನುಭವಿಸುವುದಕ್ಕೆ ಹುಟ್ಟಿದವನು. ಜೀವಾತ್ಮ. ಇದನ್ನು ಅವನು ಮರೆಯದೇ ಸದಾಪರಮಾತ್ಮನನ್ನು ಸೇವಿಸುತ್ತಿರಬೇಕು.

ಪರಮಾತ್ಮ ಸಾಕ್ಷಾತ್ಕಾರ ಪಡೆದ ಆಳ್ವಾರರನ್ನೂ, ಹಾಗೆಯೇ ಉಪದೇಶ ಮಾಡಿದ ಆಚಾರ್ಯೋಕ್ತಿಗಳನ್ನೂ ನಂಬಿ, ಪರಮಾತ್ಮನನ್ನು ಧ್ಯಾನಿಸಿ, ಪೂಜಿಸಿದರೆ, ಮೋಕ್ಷ ದೊರೆಯುವುದು. ಆಳ್ವಾರರು ಪರಮಾತ್ಮನನ್ನು ತಂದೆಯಂತೆ, ತಾಯಿಯಂತೆ, ಬಂಧುಮಿತ್ರಕಳತ್ರರಂತೆ ಭಾವಿಸಿ, ಲಾಲಿಸಿ ಅನುಭವಿಸಿ ಹಾಡಿದ್ದಾರೆ. ಚೇತನರ ಉದ್ಧಾರಕ್ಕೆ ಪರಮಾತ್ಮನು ಆಳ್ವಾರರನ್ನು ಕಳುಹಿಸಿದ್ದಾನೆ. ಅವರ ಉಕ್ತಿಯನ್ನು ಅನುಸಂಧಾನಮಾಡಿ ಆನಂದಪಡೆದು, ಅನುಭವಿಸಿ, ಉಜ್ಜೀವಿಸಬೇಕು. ಅಂತಹ ಅವಕಾಶವನ್ನು ಶ್ರೀ ಲಕ್ಷ್ಮೀಹಯಾಸ್ಯನು ಸರ್ವರಿಗೂ ಕರುಣಿಸಲಿ ಎಂದು ಶ್ರೀಶ್ರೀಗಳು ತಮ್ಮ ಉಪದೇಶ ಭಾಷಣ ಮುಗಿಸಿದರು. ಹೀಗೆ ಸರ್ವಾಕರ್ಷಕವಾಗಿದ್ದ, ಉಪನ್ಯಾಸಮಾಲೆ ಮುಕ್ತಾಯಗೊಂಡಿತು.

ಬೆಂಗಳೂರಿನಲ್ಲಿ ಶ್ರೀಶ್ರೀಗಳು ದಯಮಾಡಿಸಿದ್ದ ಕಾಲದಲ್ಲಿ ಬಿಡುವಿಲ್ಲದ ಕಾರ್ಯಕ್ರಮಗಳಿದ್ದವು, ಪ್ರಾತಃಕಾಲ ಅಭಿಗಮನ ಆರಾಧನ, ಸಮಾಶ್ರಯಣ ಭರನ್ಯಾಸಾದಿಗಳು ಮುಗಿದಮೇಲೆ, ಇಜ್ಯಾರಾಧನವಾಗುತ್ತಿತ್ತು. ಮಧ್ಯಾಹ್ನ ಸಾಯಂಕಾಲ ಅನೇಕ ಸಂಘಸಂಸ್ಥೆಗಳು ಶ್ರೀಶ್ರೀಗಳವರನ್ನು ಆಹ್ವಾನಿಸಿ ಗೌರವಿಸುತ್ತಿದ್ದರು. ಕೆಲವು ವೇಳೆ ಶಿಷ್ಯರು, ಶ್ರೀ ಲಕ್ಷ್ಮೀಹಯಗ್ರೀವ ಸ್ವಾಮಿಯನ್ನು ತಮ್ಮ ಮನೆಗೆ ಬಿಜಯಮಾಡಿಸಿ ವಜ್ರದ ಡೋಲೋತ್ಸವ ನಡೆಸಬೇಕೆಂದು ಪ್ರಾರ್ಥಿಸುತ್ತಿದ್ದರು. ಚಾಮರಾಜಪೇಟೆ ರಾಮಸೇವಾಮಂಡಲಿ, ನರಸಿಂಹರಾಜ ಕಾಲನಿ, ಶ್ರೀರಾಮಮಂದಿರ, ಆಗಮತ್ರಯಮಂಡಳಿ, ಮಲ್ಲೇಶ್ವರಂ ಉಭಯ ವೇದಾಂತ ಪ್ರವರ್ತನ ಸಭೆ, ಮಲ್ಲೇಶ್ವರಂ ಶ್ರೀರಾಮಮಂದಿರ, ಹೆಬ್ಬಾರ್ ಶ್ರೀವೈಷ್ಣವಸಭೆ, ವೇದಧರ್ಮ ಪರಿಪಾಲನಸಭೆ, ಶೇಷಾದ್ರಿಪುರಂ ಆಂಡಾಳ್ ಗೋಷ್ಠಿ, ಬಳೇಪೇಟೆ ಶ್ರೀನಿವಾಸಮಂದಿರ ಮುಂತಾದ ಧಾರ್ಮಿಕ ಸಂಸ್ಥೆಗಳು ಶ್ರೀಶ್ರೀಗಳವರನ್ನು ಹಾರ್ದಿಕವಾಗಿ ಆಹ್ವಾನಿಸಿ ಗೌರವಿಸಿ, ಬಿನ್ನವತ್ತಳೆ ಅರ್ಪಿಸಿ,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅವರ ಅನುಗ್ರಹಕ್ಕೆ ಪಾತ್ರರಾದರು. ಶ್ರೀಶ್ರೀಗಳು ಆಯಾಸಂದರ್ಭಕ್ಕೆ ತಕ್ಕಂತೆ, ಸೂಕ್ತವಾದ ಸ್ಫೂರ್ತಿದಾಯಕ ಉಪದೇಶ ಭಾಷಣ ಮಾಡಿದರು. ಹೀಗೆ ಶ್ರೀ ಶ್ರೀಗಳು ವಿವಿಧ ಸಂಸ್ಥೆಗಳ ಬಿನ್ನವತ್ತಳೆಗೆ ಕೊಟ್ಟ ಉತ್ತರವು ಶ್ಲಾಘನೀಯವಾಗಿಯೂ, ವಿತ್ಕಾರ್ಹವಾದುವೂ ಆಗಿರುತ್ತಿದ್ದುವು.

1972ನೆಯ ಇಸವಿ ಮಾರ್ಚಿ ಹದಿನಾರು, ಪರಿಧಾವಿಸಂವತ್ಸರ ಚೈತ್ರ ಪ್ರಥಮ ಯುಗಾದಿ ಹಬ್ಬದ ದಿವಸ ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಮಹಾ ಮಂಡಳಿಯು ಶ್ರೀ ಶ್ರೀಗಳವರನ್ನು ಹಾರ್ದಿಕವಾಗಿ ಆಹ್ವಾನಿಸಿ ಗೌರವಿಸಿತು ಮಂಡಳಿಯ ಇತಿಹಾಸದಲ್ಲಿ ಅದು ಪವಿತ್ರದಿನ. ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ. ಅತ್ಯಪೂರ್ವವಾದ ಶ್ರೀವೈಷ್ಣವಭಾಗವತಗೋಷ್ಠಿ ನೆರೆದಿದ್ದಿತು ಅಲ್ಲಿ. ಶ್ರೀವೈಷ್ಣವಗೋಷ್ಠಿಯ ಪರವಾಗಿ ವಿಶ್ರಾಂತ ನ್ಯಾಯಮೂರ್ತಿ ಶ್ರೀ ಗೋಪೀವಲ್ಲಭ ಅಯ್ಯಂಗಾರ್ಯರು ವಿಜ್ಞಾಪನ ಪತ್ರಿಕೆಯನ್ನು ಅರ್ಪಿಸಿದರು. ಹೊಸವರ್ಷದ ಆರಂಭವಾದ ಶುಭದಿನದಂದು, ಶ್ರೀಗಳವರನ್ನು ಆಹ್ವಾನಿಸಿ ದರ್ಶನ ಮಾಡುವ ಸುಯೋಗವು ಲಭಿಸಿದುದು ಮುಂದೆ ಇಡೀ ಸಂವತ್ಸರದಲ್ಲಿ ಇಂತಹ ಶುಭ ಸಂದರ್ಭಗಳು ದೊರಕುವುದರ ಸಂಕೇತವಾಗಿದೆ ಎಂದು ಪ್ರಾರಂಭಿಸಿದರು ತಮ್ಮ ವಿಜ್ಞಾಪನ ಪತ್ರಿಕೆಯನ್ನು.

'ಯತಿವರ್ಯರನೇಕರು ಅಲಂಕರಿಸಿದ ದಿವ್ಯಪೀಠದ ಸ್ಮರಣೆಯು ಚರಿತ್ರಾರ್ಹವಾಗಿ ಅವರ ನಿಸ್ಸೀಮವೈಭವವನ್ನು ನಮ್ಮ ನೆನಪಿಗೆ ತರುತ್ತಿದೆ. ಶ್ರೀ ಮಠದ ಆರಾಧ್ಯ ದೇವರಾದ ಶ್ರೀ ಲಕ್ಷ್ಮೀಹಯಗ್ರೀವರ ದಿವ್ಯಮಂಗಳ ವಿಗ್ರಹವನ್ನು ಭಗವದ್ರಾಮಾನುಜರು, ತಮ್ಮ ಕಾಶ್ಮೀರ ಧರ್ಮ ದಿಗ್ವಿಜಯ ಕಾಲದಲ್ಲಿ ಅಲ್ಲಿಯ ಸರಸ್ವತೀ ಪೀಠದಲ್ಲಿ ಸಾಕ್ಷಾತ್ ಶಾರದಾ ದೇವಿಯಿಂದಲೇ ಪಡೆದರೆಂದು ಪ್ರತೀತಿ. ಅವರು ಬಹುಕಾಲ ಆರಾಧಿಸುತ್ತಿದ್ದು ಅನಂತರ ತಮ್ಮ ಶಿಷ್ಯರು ಪಿಳ್ಳೈ ಅವರಿಗೂ, ಅವರಿಂದ ಪುಂಡರೀಕಾಕ್ಷರಿಗೂ ಲಭಿಸಿತು. ಪುಂಡರೀಕಾಕ್ಷರು ವಿಜಯನಗರದ ದೊರೆಗಳಿಂದ ಗೌರವಿಸಲ್ಪಟ್ಟು, ತಾವು ಆರಾಧಿಸುತ್ತಿದ್ದ ಶ್ರೀ ಲಕ್ಷ್ಮೀಹಯಾಸ್ಯನ ದಿವ್ಯ ಮೂರ್ತಿಯನ್ನು ತಮ್ಮ ವಂಶಜರಾದ ಶ್ರೀ ವೇಂದಾಂತದೇಶಿಕರಿಗೆ ಅನುಗ್ರಹಿಸಿದರು. ಅವರು ತಮ್ಮ ಜ್ಞಾನಪುತ್ರರಾದ ಬ್ರಹ್ಮತಂತ್ರ ಸ್ವತಂತ್ರ ಜೀಯರಿಗೆ ಕೊಟ್ಟರು. ಇವರೇ ಶ್ರೀಪರಕಾಲಮಠವನ್ನು ಸ್ಥಾಪಿಸಿದ ಮೂಲಪುರುಷರು. ಶ್ರೀ ಮಠದ ಮೂಲಸ್ಥಾನವು ಮೊದಲು ಕಾಂಚೀಪುರದಲ್ಲಿದ್ದು ಅಲ್ಲಿಂದ ತಿರುಪತಿಗೂ ಮೇಲುಕೋಟೆಗೂ, ಶ್ರೀರಂಗಪಟ್ಟಣಕ್ಕೂ ವರ್ಗವಾಗಿ ಕೊನೆಗೆ ಮೈಸೂರುನಗರಕ್ಕೆ ಬಂದಿತು.

'ಶ್ರೀ ಮಠದ ವೈಶಿಷ್ಟ್ಯವೇನೆಂದರೆ, ಶ್ರೀವೇದಾಂತ ದೇಶಿಕರ ಉಪದೇಶದ ಮುಖ್ಯಾಂಶಗಳಾದ ಜ್ಞಾನ, ವೈರಾಗ್ಯ, ಕೈಂಕರ್ಯಗಳು ಶ್ರೀ ಮಠದ ಹೆಗ್ಗುರಿಯಾಗಿ ಪರಂಪರೆಯಿಂದ ಬಂದಿದೆ. ಜ್ಞಾನಕೈಂಕರ್ಯದಲ್ಲಿ ವಿಶಿಷ್ಟಾದ್ವೈತ ದರ್ಶನಕಾರರು, ಆಳ್ವಾರರು, ಶ್ರೀ ರಾಮಾನುಜರು ಮತ್ತು ಶ್ರೀ ವೇದಾಂತದೇಶಿಕರು ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿರುವ ಸಿದ್ಧಾಂತ ಸ್ವರೂಪವನ್ನು ಪರಿಚಯ ಮಾಡಿಸಿ, ಪ್ರಚಾರ ಮಾಡುತ್ತ ಬಂದಿರುವ ಮಹಾಜ್ಞಾನಿಗಳ ಪರಂಪರೆಯಾಗಿದೆ ಶ್ರೀ ಮಠವು.

'ಶ್ರೀಮಠದ ಗುರುವರ್ಯಪರಂಪರೆಯಲ್ಲಿ ತಾವು 35ನೇಯ ಯತಿಶ್ರೇಷ್ಠರು. ಧಾನ್ಯ, ಅರ್ಚನ, ಚಕ್ರಾಂಕನ, ಪ್ರಪದನ, ಉಪದೇಶ ಮತ್ತು ಗ್ರಂಥರಚನೆ ಮುಂತಾದುವನ್ನು ಪೂರ್ವಾಚಾರ್ಯರಂತೆ ತಾವು ಅನುಗ್ರಹಿಸುತ್ತಿರುವಿರಿ. ಇಂತಹ ಮಹೋಪಕಾರಕ್ಕಾಗಿ ನಾವು ಚಿರಋಣಿಗಳಾಗಿದ್ದೇವೆ.

'ಪೂಜ್ಯರಾದ ಗುರುವರ್ಯರೇ' ನಮ್ಮ ಸಂಘದ ಆಹ್ವಾನವನ್ನು ಅಂಗೀಕರಿಸಿ, ನಮ್ಮನ್ನು ಆಶೀರ್ವದಿಸಲು ದಯಮಾಡಿಸಿ ನಮ್ಮನ್ನು ಪುನೀತರನ್ನಾಗಿ ಮಾಡಿರುವಿರಿ. ಇದಕ್ಕಾಗಿ ಪ್ರಣಾಮ ಪೂರ್ವಕ ಧನ್ಯವಾದಗಳು. ಹೀಗೆಯೇ ಅನುಗ್ರಹ ದಯಪಾಲಿಸುತ್ತಿರಬೇಕೆಂದು ವಿನಯ ಪೂರ್ವಕ ಪ್ರಾರ್ಥಿಸಿ, ಹಾರ್ದಿಕ ಸ್ವಾಗತನೀಡಲು ಅಪ್ಪಣೆ ಬೇಡುತ್ತೇವೆ."

ಶ್ರೀ ಶ್ರೀಗಳು ನೆರೆದಿದ್ದ ಸಭಿಕರಿಗೆ ನೂತನವರ್ಷದ ಶುಭಾಶಯ ಕೋರಿದರು. ಶ್ರೀ ವೈಷ್ಣವದೀಕ್ಷೆ, ಪ್ರಪತ್ತಿಯ ಮಹಿಮೆ, ಸತ್ಸಂಗ, ಸದಾಚಾರ ಮುಂತಾದ ವಿಷಯಗಳನ್ನು ವಿವರಿಸಿ, ಎಲ್ಲರಿಗೂ ಫಲ ಮಂತ್ರಾಕ್ಷತೆ ಅನುಗ್ರಹಿಸಿದರು.

1972ನೆಯ ಇಸವಿ ಏಪ್ರಿಲ್ ಐದರಿಂದ ಹನ್ನೊಂದನೆ ತಾರೀಖಿನವರೆಗೆ ಶ್ರೀ ಶ್ರೀಗಳು ಹಿಂದೂಪುರದ ವೈಶ್ಯಮಹಾಮಂಡಳಿಯ ಆಹ್ವಾನವನ್ನು ಅಂಗೀಕರಿಸಿ ಅಲ್ಲಿಗೆ ದಯಮಾಡಿಸಿದರು. ಶ್ರೀಮದಭಿನವ ರಂಗ ಮಂದಿರದ ಬಳಿ ಶ್ರೀ ಶ್ರೀಗಳವರಿಗೆ ಅಭೂತಪೂರ್ವ ಸ್ವಾಗತ ನೀಡಲು ನೂರಾರುಮಂದಿ ಶಿಷ್ಯರು ಸೇರಿದ್ದರು. ಶ್ರೀಮದಭಿನವರಂಗನಾಥ ಪರಕಾಲ ಸ್ವಾಮಿಗಳ ಜ್ಞಾಪಕಾರ್ಥವಾಗಿ ಅಲ್ಲಿನ ಶಿಷ್ಯರು ಲಕ್ಷಾಂತರರೂಪಾಯಿ ವೆಚ್ಚದಲ್ಲಿ ಭವ್ಯವಾದ ಮಂದಿರವನ್ನು ಕಟ್ಟಿಸಿ, ಅಲ್ಲಿ ತಮ್ಮ ಗುರುಗಳ ಚಿತ್ರಪಠವನ್ನು ಪಾದುಕೆಗಳನ್ನು ಇಟ್ಟು ಪೂಜೆಮಾಡಿಸುತ್ತಿರುವುದಲ್ಲದೆ ಪುರಾಣ, ಪ್ರವಚನ, ಉಪನ್ಯಾಸ, ವಾಚನಾಗಿ ಸಂಸ್ಕೃತಿ ಕಾರ್ಯಕ್ರಮಗಳನ್ನೇರ್ಪಡಿಸಿದ್ದಾರೆ ಇಂದು ಒಂದು ಉತ್ತಮ ಸಾಸ್ಕೃತಿಕ ಕೇಂದ್ರವಾಗಿದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಮದಭಿನವರಾಮಾನುಜ ಬ್ರಹ್ಮತಂತ್ರಪರಕಾಲಸ್ವಾಮಿಗಳು ಅಲ್ಲಿ ದಯಮಾಡಿಸಿದ್ದ ಐದು ದಿನಗಳು ಅಲ್ಲಿಯ ಶಿಷ್ಯರಿಗೆ ದೊಡ್ಡ ಹಬ್ಬದಂತಿತ್ತು. ಬೆಳಿಗ್ಗೆ ಅಭಿಗಮನ ಆರಾಧನವಾದ ಮೇಲೆ ಶಿಷ್ಯರಿಗೆ ತೀರ್ಥಪ್ರಸಾದವಿನಿಯೋಗ, ಅನಂತರ ಸಮಾಶ್ರಯಣ, ಭರನ್ಯಾಸಾದಿಗಳು. ಇಜ್ಯಾರಾಧನ ಆದಮೇಲೆ ತೀರ್ಥಪ್ರಸಾದ ವಿನಿಯೋಗ. ಮಧ್ಯಾಹ್ನ ಭಾಷಣ ಮತ್ತು ಉಪದೇಶ ಸಾಯಂಕಾಲ ಆರಾಧನೆ. ತ್ರಿಕಾಲ ಆರಾಧನೆಕಾಲದಲ್ಲಿಯೂ ಶಿಷ್ಯರು ಕಿಕ್ಕಿರಿದು ತುಂಬುತ್ತಿದ್ದರು. ಅನೇಕ ಶಿಷ್ಯರು ತಮ್ಮ ನೆಚ್ಚಿನಗುರುಗಳನ್ನು ತಮ್ಮ ಮನೆಗಳಿಗೆ ಆಹ್ವಾನಿಸಿ ಗೌರವಿಸುತ್ತಿದ್ದರು. ಶ್ರೀ ಲಕ್ಷ್ಮಿ ಹಯಗ್ರೀವ ದೇವರನ್ನು ಬಿಜಯ ಮಾಡಿಸಿ, ಡೋಲೋತ್ಸವ ಮಾಡಿಸಿ, ಪರಮಾತ್ಮನ ದರ್ಶನ ಪಡೆದು ಗುರುಗಳ ಅನುಗ್ರಹ ಪಡೆದು ಕೃತಾರ್ಥರಾಗುತ್ತಿದ್ದರು. ಅಲ್ಲಿನ ಗುರುಶಿಷ್ಯರಸಂಬಂಧ ಆತ್ಯಾಕರ್ಷಕವೂ, ಆಹ್ಲಾದಕರವೂ ಆಗಿತ್ತು. 11-4-72ರ ಸಾಯಂಕಾಲ ಶ್ರೀ ಶ್ರೀಗಳವರು ತಮ್ಮ ಆರಾಧ್ಯ ಮೂರ್ತಿಯೊಡನೆ ಬೆಂಗಳೂರು ಶ್ರೀಮಠಕ್ಕೆ ಹಿಂತಿರುಗಿ ದಯಮಾಡಿಸಿದರು.

1972ನೆಯ ಇಸವಿ ಏಪ್ರಿಲ್ 18ರಲ್ಲಿ ಮಲ್ಲೇಶ್ವರಂ ವೇದಧರ್ಮ ಪರಿಪಾಲನ ಸಭೆ ಮತ್ತು ಶ್ರೀರಾಮಭವನ ಸೇವಾಸಭೆ ಇವುಗಳ ಕಾರ್ಯಕಾರೀ ಸಮಿತಿಯು ಶ್ರೀ ಶ್ರೀಗಳವರನ್ನು ಶ್ರೀರಾಮ ಮಂದಿರಕ್ಕೆ ಆಹ್ವಾನಿಸಿ ವಿಜ್ಞಾಪನ ಪತ್ರಿಕೆಯನ್ನು ಅರ್ಪಿಸಿದರು. ಅದೇ ಸಮಯದಲ್ಲಿ ಶಿವಗಂಗಾ ಮಠಾಧೀಶರನ್ನೂ, ಉಡುಪಿಭಂಡಾರಕೇರಿ ಯತಿವರ್ಯರನ್ನೂ ಆಹ್ವಾನಿಸಿ ಗೌರವಿಸಲಾಯಿತು. ಹೀಗೆ ಮತತ್ರಯ ಯತಿಶ್ರೇಷ್ಠರನ್ನು ಒಂದೇ ವೇದಿಕೆಯ ಮೇಲೆ ಬಿಜಯ ಮಾಡಿಸಿ ಸಾವಿರಾರು ಮಂದಿ ದರ್ಶನಮಾಡಿ ಹರ್ಷಗೊಂಡದ್ದು ಅಪೂರ್ವ ಸನ್ನಿವೇಶವಾಗಿತ್ತು.

ಶ್ರೀ ಶ್ರೀಗಳವರಿಗೆ ಅರ್ಪಿಸಿದ ವಿಜ್ಞಾಪನ ಪತ್ರಿಕೆಯಲ್ಲಿ ಹೀಗೆ ತಿಳಿಸಲಾಗಿತ್ತು "ಕಲ್ಯಾಣನಗರಿ ಎಂದು ಪ್ರಸಿದ್ಧವಾಗಿರುವ ಬೆಂಗಳೂರು ಮಹಾನಗರಕ್ಕೆ ಯತಿವರ್ಯರಾದ ತಾವು ಮೊದಲ ಬಾರಿಗೆ ದಯಮಾಡಿಸಿ, ತಮ್ಮ ಪಾದ ರಜಸ್ಸಿನಿಂದ ಈ ನಗರವನ್ನು ಪವಿತ್ರಗೊಳಿಸುತ್ತಿರುವುದು ನಮ್ಮಗಳ ಭಾಗ್ಯೋದಯ. ತಾವು ಎರಡುತಿಂಗಳಿಂದ ಗ್ರಂಥಕಾಲಕ್ಷೇಪ, ಉಪದೇಶಾದಿಗಳಿಂದ ಅನೇಕ ಭಕ್ತರನ್ನು ಪರಮ ಭಕ್ತರನ್ನಾಗಿಯೂ, ಸಾಮಾನ್ಯಜನರನ್ನು ಆಸ್ತಿಕ ಶಿಖಾಮಣಿಗಳನ್ನಾಗಿಯೂ ಪರಿವರ್ತಿಸುತ್ತ, ವಿಜೃಂಭಿಸುತ್ತಿರುವುದು ಮಹದಾನಂದ ಕರವಾಗಿದೆ. ಸನಾತನ ಧರ್ಮ ಉಜ್ಜೀವನಕ್ಕೂ, ವಿಶಿಷ್ಟಾದ್ವೈತ ಪ್ರಚಾರಕ್ಕೂ ತಾವು ಅನವರತ ಶ್ರಮಿಸುತ್ತಿರುವುದು ಸರ್ವರಿಗೂ ವಿದಿತವಾದ ಅಂತವಾಗಿದೆ. ಈ ದಿವಸ ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ದಯಮಾಡಿಸಿರುವುದಕ್ಕಾಗಿ, ನಾವು ಸನ್ನಿಧಾನಕ್ಕೆ ಸರ್ವದಾ ಚಿರಋಣಿಗಳಾಗಿದ್ದೇವೆ.

"ಯತಿವರ್ಯರೆ ! ತಮ್ಮ ಪೂರ್ವಪೀಠಾಧಿಪತಿಗಳಾಗಿದ್ದ ಶ್ರೀ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳು ನಮ್ಮ ಪ್ರಾರ್ಥನೆಯಂತೆ 1966ರಲ್ಲಿ ಇಲ್ಲಿಗೆ ದಯಮಾಡಿಸಿ, ನಮ್ಮ ಕಾರ್ಯಕಲಾಪಗಳನ್ನು ಮೆಚ್ಚಿ ನಮ್ಮ ಸಾಮೂಹಿಕ ಉಪನಯನಕ್ರಮವನ್ನು ಪ್ರಶಂಸೆಮಾಡಿ, ಅದು ಶಾಶ್ವತವಾಗಿ ನಡೆದುಕೊಂಡುಬರಲಿ ಎಂದು ಆಶೀರ್ವದಿಸಿ ಉಪನಯನ ನಿಧಿಗೆ ಒಂದು ಸಾವಿರ ರೂಪಾಯಿಗಳನ್ನು ಅನುಗ್ರಹಿಸಿದುದಲ್ಲದೆ, ಪ್ರತಿವರ್ಷವೂ ಉಪನಯನ ನಡೆಯುವ ಕಾಲದ ವೆಚ್ಚಕ್ಕಾಗಿ ಇಪ್ಪತ್ತೈದು ರೂಪಾಯಿಗಳನ್ನು ಕೊಡುವುದಾಗಿ ಅಪ್ಪಣೆ ಇತ್ತಿರುವ ವಿಷಯವನ್ನು ಸನ್ನಿಧಾನದಲ್ಲಿ ಅರಿಕೆಮಾಡಲು ಇಷ್ಟಪಡುತ್ತೇವೆ.

"ಈ ಮಹಾಸನ್ನಿಧಾನವು ಪೂರ್ವಾಶ್ರಮದಲ್ಲಿದ್ದಾಗ ಮೈಸೂರು ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಸಂಗ ಮಾಡಿ ಸಾಹಿತ್ಯವೇದಾಂತಶಾಸ್ತ್ರದಲ್ಲಿ ಅದ್ವಿತೀಯ ಪಾಂಡಿತ್ಯಪಡೆದುದಲ್ಲದೆ ಶ್ರೀಮದಭಿನವ ರಂಗನಾಥ ಪರಕಾಲಸ್ವಾಮಿಗಳ ಸಮ್ಮುಖದಲ್ಲಿ ಅನೇಕ ವರ್ಷಕಾಲ ಸಂಪ್ರದಾಯ ಗ್ರಂಥಗಳ ಕಾಲಕ್ಷೇಪ ನಡೆಸಿರುತ್ತೀರಿ. ತಮ್ಮ ಪಾಂಡಿತ್ಯವನ್ನು ವಿದ್ಯಾದಾನದ ಮೂಲಕ ಸಾರ್ಥಕ ಪಡಿಸಿರುತ್ತೀರಿ. ತಮ್ಮಂತಹ ಮಹಾನುಭಾವರು ಆಗಾಗ ಇಲ್ಲಿಗೆ ದಯಮಾಡಿಸಿ ನಮ್ಮನ್ನು ಅನುಗ್ರಹಿಸುತ್ತಿರಬೇಕಾಗಿ ಬೇಡುತ್ತೇವೆ."

ವಿಜ್ಞಾಪನ ಪತ್ರಿಕೆಗೆ ಉತ್ತರವಾಗಿ ಶ್ರೀ ಶ್ರೀಗಳು ಸಭೆಯ ಕಾರ್ಯಕಲಾಪಗಳನ್ನು ಪ್ರಶಂಸೆಮಾಡುತ್ತ, ಸನಾತನಧರ್ಮದ ಹಿರಿಮೆ, ವೇದ ಧರ್ಮಪರಿಪಾಲನದ ಅಗತ್ಯ, ಭಾರತ ಸಂಸ್ಕೃತಿಯ ಪ್ರಭಾವ ಮತ್ತು ಲಕ್ಷಣ, ಧಾರ್ಮಿಕ ಪ್ರವೃತ್ತಿಯ ಪ್ರಾಶಸ್ತ್ಯ, ಮುಂತಾದ ವಿಷಯಗಳ ಮೇಲೆ ಸುಲಭವಾಗಿ ಎಲ್ಲರಿಗೂ ತಿಳಿಯುವಂತೆ ಕನ್ನಡದಲ್ಲಿಯೇ ಉಪದೇಶ ಭಾಷಣ ಮಾಡಿದರು.

1972ನೆಯ ಇಸವಿ ಏಪ್ರಿಲ್ 24ರಿಂದ 19-5-72ರವರೆಗೆ ಶ್ರೀ ಮದಭಿನವ ರಾಮಾನುಜಪರಕಾಲಸ್ವಾಮಿಗಳು ಹೈದರಾಬಾದಿನಲ್ಲಿ ಧರ್ಮದಿಗ್ವಿಜಯಕ್ಕಾಗಿ ಪ್ರವಾಸ ಮಾಡಿದರು. ಹೈದರಾಬಾದಿನ ಶಿಷ್ಯರೂ ಅಭಿಮಾನಿಗಳೂ ಒಟ್ಟಿಗೆ ಸೇರಿ ಶ್ರೀ ವೇದಾಂತಾಚಾರಿ ಎಂಬುವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿಯನ್ನು ರಚಿಸಿಕೊಂಡರು. ಡಾಕ್ಟರ್. ಡಿ.ಎಚ್. ಆಚಾರ್ಯ ಅವರು ಸಮಿತಿಯ ಕಾರ್ಯದರ್ಶಿಗಳಾಗಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಬೆಂಗಳೂರಿಗೆ ಬಂದು ಶ್ರೀ ಶ್ರೀಗಳವರನ್ನು ಪ್ರತ್ಯಕ್ಷವಾಗಿ ಆಹ್ವಾನಿಸಿದರು., ಹೈದರಾಬಾದಿನ ಶಿಷ್ಯರ ಅಭಿಮಾನ ವಿಶೇಷ ರೀತಿಯದು. ಶ್ರೀಮಠದ ಪೂರ್ವಾಚಾರ್ಯರು ಅಲ್ಲಿಗೆ ದಯಮಾಡಿಸಿ, ಶಿಷ್ಯಾನುಗ್ರಹಮಾಡಿದ್ದರು. ಪತೇದರ್ವಾಜದಲ್ಲಿ ಶ್ರೀನಿವಾಸದೇವರ ದೇವಾಲಯವನ್ನು ಸ್ಥಾಪಿಸಿ, ಭಕ್ತಾದಿಗಳಿಗೆ ದರ್ಶನಮಾಡಲು ಅನುಕೂಲ ಕಲ್ಪಿಸಲಾಗಿತ್ತು.

ಹೈದರಾಬಾದಿಗೆ ಪ್ರಯಾಣ ಬೆಳೆಸುವಾಗ ಮಧ್ಯೆ ದಾರಿಯಲ್ಲಿ, ಧರ್ಮವರ, ಅನಂತಪುರ, ಕರ್ನೂಲು, ನಂದ್ಯಾಲ್, ಮೆಹಬೂಬ್‌ನಗರಗಳಲ್ಲಿ ಒಂದೊಂದುರಾತ್ರಿ ತಂಗಿ, ವಿಶ್ರಮಿಸಿಕೊಂಡು ಮುಂದೆ ಪ್ರಯಾಣಮಾಡಬೇಕೆಂದು, ಅಲ್ಲಲ್ಲಿ ಶಿಷ್ಯರು ಮುಂಗಡವಾಗಿ ಪತ್ರಬರೆದು ಶ್ರೀ ಶ್ರೀಗಳವರ ಆಗಮನ ನಿರೀಕ್ಷಿಸುತ್ತಿದ್ದರು. ಹೀಗೆ ಮೇಲ್ಕಂಡ ಪ್ರಮಾಣಗಳಲ್ಲಿ ಶಿಷ್ಯರಿಗೆ ಸಮಾಶ್ರಯಣ, ಭರನ್ಯಾಸಗಳನ್ನು ಅನುಗ್ರಹಿಸಿ, ದೇವರ ದರ್ಶನಮಾಡಿಸಿ, 30-4-72ರ ಸಾಯಂಕಾಲ ನಾಲ್ಕೂವರೆ ಘಂಟೆಗೆ ಸರಿಯಾಗಿ ಶ್ರೀಶ್ರೀಗಳು ಹೈದರಾಬಾದನ್ನು ತಲುಪಿದರು. ಆಂಧ್ರರಾಜ್ಯದ ಧರ್ಮದತ್ತಿ ಸಚಿವರು, ಮಾಜಿ ಮಂತ್ರಿಗಳು, ಎಂಡೋಮೆಂಟ್ ಕಮೀಷನರ್, ಸ್ವಾಗತ ಸಮಿತಿಯ ಅಧ್ಯಕ್ಷರು, ಕಾರ್ಯದರ್ಶಿಗಳಾದಿಯಾಗಿ ನೂರಾರು ಮಂದಿ ನೆರೆದಿದ್ದು, ಶ್ರೀ ಶ್ರೀಗಳವರಿಗೆ ಅದ್ಭುತಸ್ವಾಗತವನ್ನಿತ್ತರು.

ಹೈದರಾಬಾದಿನಲ್ಲಿ ಶ್ರೀಶ್ರೀಗಳು ಹದಿನೈದು ದಿನಗಳು ದಯಮಾಡಿಸಿದ್ದರು. ಇಷ್ಟು ದಿನಗಳು ಒಂದೆರಡು ದಿನಗಳಂತೆ ಕಳೆದುಹೋಯಿತು. ಅಷ್ಟು ಬಿಡುವಿಲ್ಲದ ಕೆಲಸ ಅಲ್ಲಿ. ಶಿಷ್ಯರು ತಾಮುಂದು ನಾಮುಂದು ಎಂದು ತಮ್ಮ ತಮ್ಮ ಮನೆಗಳಿಗೆ ಶ್ರೀ ಲಕ್ಷ್ಮೀ ಹಯಗ್ರೀವ ಸ್ವಾಮಿಯನ್ನು ಕರೆಸಿ ಆರಾಧಿಸಿ, ದರ್ಶನ ಪಡೆಯಲು ಕಾತುರರಾಗಿದ್ದರು. ನಗರದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವ ಕ್ರಮ ಮತ್ತು ಅನಾನುಕೂಲಗಳೊಂದನ್ನೂ ಲೆಕ್ಕಿಸದೆ, ಪ್ರಾರ್ಥನೆ ಮಾಡಿದ ಪ್ರತಿಯೊಬ್ಬ ಶಿಷ್ಯರ ಮನೆಗೂ ಶ್ರೀ ಶ್ರೀಗಳು ದಯಮಾಡಿಸಿ ಅನುಗ್ರಹಿಸುತ್ತಿದ್ದರು. ದೇವರನ್ನು ಬಿಜಯಮಾಡಿಸಿ, ಬಹು ಸೊಗಸಾಗಿ ಅಲಂಕರಿಸಿ, ಶಿಷ್ಯರಿಗೆ ತೃಪ್ತಿಯಾಗುವಂತೆ ದರ್ಶನ ಮಾಡಿಸಿ ಶ್ರೀ ಶ್ರೀಗಳು ತಮ್ಮ ಬಿಡಾರಕ್ಕೆ ಹಿಂತಿರುಗುತ್ತಿದ್ದರು. ಹೀಗೆ ಅತ್ಯಂತ ಚಟುವಟಿಕೆಯಿಂದ ಕೂಡಿದ ಧಾರ್ಮಿಕ ಹವ್ಯಾಸಗಳು ವಿಚ್ಛಿತಿಯಿಲ್ಲದೆ ಒಂದು ಪಕ್ಷ ಕಾಲ ನಡೆಯಿತು.

ಹೈದರಾಬಾದಿನಲ್ಲಿರುವ ಗಂಡಿ ಕೋಟೆ ಶ್ರೀ ವೈಷ್ಣವ ಮಹಾಸಭೆ ಮತ್ತು ಶ್ರೀ ವೇದಾಂತ ದೇಶಿಕ ಸಭೆ ಮುಂತಾದ ಸಂಸ್ಥೆಗಳು ಶ್ರೀ ಶ್ರೀಗಳವರಿಗೆ ಭಿನ್ನವತ್ತಳೆ ಅರ್ಪಿಸಿ ಗೌರವಿಸಿದರು. ಆಂಧ್ರಸರ್ಕಾರದ ಪರವಾಗಿ ಅಲ್ಲಿಯ ಮುಜರಾಯಿ ಸಚಿವರು, ಶ್ರೀ ಶ್ರೀಗಳವರಿಗೆ ಒಂದು ಸಾವಿರದ ಒಂದುನೂರು ರೂಪಾಯಿ ಸಂಭಾವನೆ ಸಲ್ಲಿಸಿ, ಶಾಲು ಜೋಡಿಯನ್ನು ಅರ್ಪಿಸಿದರು. ಹೈದರಾಬಾದಿನಲ್ಲಿ ನೂರಾರು ಮಂದಿ ಶಿಷ್ಯರು ಸಮಾಶ್ರಯಣ ಮಾಡಿಸಿಕೊಂಡರು. ಅನೇಕ ಮಂದಿ ಆಸ್ತಿಕಮಹಾಶಯರು ಶ್ರೀ ಲಕ್ಷ್ಮೀಹಯಗ್ರೀವ ದೇವರಿಗೆ ಡೋಲೋತ್ಸವ ಮಾಡಿಸಿದರು. ಬೆಂಗಳೂರಿನಿಂದ ಆಗಮಿಸಿರುವ ರಾಜಗುರುಗಳ ತಿರುವಡಿಗಳನ್ನು ಆಶ್ರಯಿಸಿ ಅವರ ಅನುಗ್ರಹಕ್ಕೆ ಪಾತ್ರರಾದರು. ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳ ಹೈದರಾಬಾದ್ ಪ್ರವಾಸವು ಸ್ವಲ್ಪ ಕಾಲದ್ದೇ ಆಗಿದ್ದರೂ ಚಿತ್ತಾಕರ್ಷಕವೂ ಮತ್ತು ಪ್ರಯೋಜನಕಾರಿಯೂ ಆಗಿದ್ದಿತು. ಅಲ್ಲಿರುವ ಕಾಲದಲ್ಲಿ ಶ್ರೀಶ್ರೀಗಳು ತಮ್ಮ ದೇಹಾಲಸ್ಯನ್ನು ಲೆಕ್ಕಿಸಲಿಲ್ಲ.

ಹೈದರಾಬಾದಿನಿಂದ ಶ್ರೀಶ್ರೀಗಳವರು ಬೆಂಗಳೂರಿಗೆ ದಯಮಾಡಿಸಿದ ನಂತರ ಶೀಘ್ರಕಾಲದ ಪ್ರವಾಸದ ಪರಿಣಾಮವಾಗಿ ದೇಹಶ್ರಮವನ್ನು ತಿಳಿದರು. ಆದರೆ ಬೆಂಗಳೂರಿನ ಆಕರ್ಷಯುತ ಮತ್ತು ಆರೋಗ್ಯಕರ ವಾತಾವರಣವು ಶ್ರೀ ಶ್ರೀಗಳವರು ಬೇಗ ಚೇತರಿಸಿಕೊಳ್ಳುವಂತೆ ಮಾಡಿತು. ಶ್ರೀಮಠದ ಧಾರ್ಮಿಕ ಹವ್ಯಾಸಗಳು ಪುನಃ ಪ್ರಾರಂಭವಾದುವು. ಶ್ರೀ ಮಠದಲ್ಲಿ ಸುಮಾರು ಇಪ್ಪತ್ತು ಥರ್ಮೋಪಯನಗಳು ನಡೆಯುವಂತೆ ಶ್ರೀಶ್ರೀಗಳವರು ವ್ಯವಸ್ಥೆಪಡಿಸಿದರು. ಚಕ್ರಾಂಕನ, ಮಂತ್ರೋಪದೇಶ, ಭರನ್ಯಾಸ, ಡೋಲೋತ್ಸವಾದಿಗಳು ನಡೆಯುತ್ತಲೇ ಇದ್ದವು.

ಬಳೇಪೇಟೆ ಶ್ರೀನಿವಾಸಮಂದಿರದ ಧರ್ಮಸಂಸ್ಥೆಯ ಕಾರ್ಯಕರ್ತರು ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳನ್ನು ಆಹ್ವಾನಿಸಿ ಭಿನ್ನವತ್ತಳೆ ಅರ್ಪಿಸಿದರು.

'ಪೂಜ್ಯಗುರುವರ್ಯರೇ ! ಈ ಪವಿತ್ರ ಸಂದರ್ಭದಲ್ಲಿ ಈ ಧರ್ಮ ಸಂಸ್ಥೆಯು ಸೂಕ್ಷ್ಮ ಪರಿಚಯ ಮಾಡಿಕೊಡಲು ಅಪ್ಪಣೆಬೇಡುತ್ತೇವೆ. ಇದು ಕೀರ್ತಿಶೇಷ ಜನೋಪಕಾರಿ ಎ. ಗೋಪಾಲಾಚಾರ್ಲು ಅವರು 1916ರಲ್ಲಿ ಶ್ರೀಮತಿ ಸಿಂಗಮ್ಮನವರಿಗೆ ನಿರ್ವಹಣೆ ಮಾಡಲು ವಹಿಸಿಕೊಟ್ಟ ಧರ್ಮಸಂಸ್ಥೆ, ಶ್ರೀ ಗೋಪಾಲಾಚಾರ್ಲು ಮತ್ತು ಶ್ರೀಮತಿ ಸಿಂಗಮ್ಮ ತಮ್ಮ ಜೀವಿತಕಾಲದಲ್ಲಿ ಆರ್ಜಿಸಿದ ಮತ್ತು ಪಿತ್ರಾರ್ಜಿತವಾದ ಚರಸ್ಥಿರ ಸ್ವತ್ತನ್ನು, ಶ್ರೀನಿವಾಸ ಮಂದಿರ ಮತ್ತು ಅದಕ್ಕೆ ಸಂಬಂಧಿಸಿದ ಆಶ್ರಯಸಂಸ್ಥೆಗಳಾದ ಮಹಿಳಾಸಂಘ ಮತ್ತು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅನಾಥಾಲಯವನ್ನು ನಡೆಸಿಕೊಂಡು ಹೋಗಬೇಕೆಂದು ಒಂದು ಸಮಿತಿಯನ್ನು ರಚಿಸಿದರು. ಈ ಸಂಸ್ಥೆಯ ಧರ್ಮಕಾರ್ಯಗಳು ಸಾರೋದ್ಧಾರವಾಗಿ ನಡೆದುಕೊಂಡು ಬರಬೇಕೆಂಬ ಉದ್ದೇಶದಿಂದ ಸಿಂಗಮ್ಮನವರು 16-1-1929ರಲ್ಲಿ ಒಂದು ವಿಲ್ಲು ಬರೆದು, ಸರ್ಕಾರದಿಂದ ಚುನಾಯಿತವಾದ ಸಮಿತಿಗೆ ವಹಿಸಿಕೊಟ್ಟರು. ಆ ಸಮಿತಿಯು ಎಲ್ಲ ಸೇವಾ ಕೈಂಕರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

'ದಾತೃಗಳು ಕೊಟ್ಟಿರುವ ದತ್ತಿ ಮತ್ತು ಸಂಸ್ಥೆಗೆ ಸೇರಿದ ಕಟ್ಟಡದ ಬಾಡಿಗೆ ಇತ್ಯಾದಿ ವರಮಾನದಿಂದ ಜಾತಿ, ಕುಲ, ಮತ ಭೇದವಿಲ್ಲದೆ ಅನಾಥ ಮಕ್ಕಳಿಗೆ ಹದಿನಾರು ವರ್ಷದವರೆಗೆ ಅನ್ನ ವಸತಿ ಮತ್ತು ವ್ಯಾಸಂಗದ ವೆಚ್ಚವನ್ನು ಮಂದಿರವು ಒದಗಿಸುತ್ತದೆ. ಅವರು ಉತ್ತಮ ಪ್ರಜೆಗಳಾಗಬೇಕೆಂಬುದು ದಾತೃಗಳ ಉದ್ದೇಶ. ಇದರ ಜೊತೆಗೆ ಧಾರ್ಮಿಕ ಮತ್ತು ಸಾಮಾಜಿಕ ಪುನರುದ್ಧಾರ ಕಾರ್ಯಗಳನ್ನು ನಡೆಸುತ್ತಿದೆ. ಸಂಸ್ಕೃತ ವಿದ್ಯಾಭ್ಯಾಸಕ್ಕೆ ಸಂಸ್ಥೆಯು ಪ್ರೋತ್ಸಾಹ ನೀಡುತ್ತಿದೆ. ಇಂತಹ ಧಾರ್ಮಿಕ ಹವ್ಯಾಸಗಳಿಗೆ ಶ್ರೀನಿವಾಸ ದೇವರ ಕೃಪೆಯೂ, ಶ್ರೀಶ್ರೀಗಳ ಆಶೀರ್ವಾದ ಬಲವೂ ರಕ್ಷಾಕವಚವಾಗಬೇಕು.

'ಯತಿಶ್ರೇಷ್ಠರೇ' ತಮ್ಮ ಪೂರ್ವಾಶ್ರಮದ ಪೂರ್ವಿಕರು ಕೋಲಾರ ಜಿಲ್ಲೆಯ ಪಾಳೆಯಗಾರರ ಗುರುಗಳಾಗಿದ್ದು, ತಾವು ಈಗ ರಾಜಗುರುಗಳಾಗಿ ಶ್ರೀ ಪರಕಾಲಾಸ್ಥಾನವನ್ನು ಅಲಂಕರಿಸಿರುವುದು ತಮ್ಮ ಶಿಷ್ಯ ಕೋಟಿಗೆ ಅಮಿತಾನಂದವನ್ನುಂಟುಮಾಡಿದೆ. ತಮ್ಮ ಆಳವಾದ ಪಾಂಡಿತ್ಯ, ಸದಾಚಾರ ಸಂಪ್ರದಾಯ ಶಾಸ್ತ್ರಾಭ್ಯಾಸ, ಅನೇಕ ಭಾಷಾಜ್ಞಾನ, ಎಲ್ಲಕ್ಕಿಂತ ಮೇಲಾಗಿ ಶ್ರೀಮಠದಲ್ಲಿ ತಮಗೆ ಪೂರ್ವಾಶ್ರಮದಲ್ಲಿ ದೊರೆತ ಸೇವಾಕೈಂಕರ್ಯಗಳ ಅನುಭವ, ಶೀಲಾದಿ ಸದ್ಗುಣಗಳು-ಎಲ್ಲವೂ ತಮ್ಮ ಶಿಷ್ಯ ಗೋಷ್ಠಿಗೆ ಅಪಾರತೃಪ್ತಿಯನ್ನೂ, ಹೆಮ್ಮೆಯನ್ನೂ ಉಂಟುಮಾಡಿದೆ.

ಶ್ರೀಶ್ರೀಗಳು ಕೃಪೆಯಿಟ್ಟು ಇಲ್ಲಿಯವರೆಗೆ ದಯಮಾಡಿಸಿ ಇಲ್ಲಿಯ ಕಾರ್ಯ ಕಲಾಪಗಳನ್ನು ಪರಿಚಯಮಾಡಿಕೊಂಡು ಅನುಗ್ರಹಿಸುತ್ತಿರುವುದು ದಾತೃಗಳ ಮತ್ತು ನಮ್ಮೆಲ್ಲರ ಮಹಾಭಾಗ್ಯವೆಂದು ಅರಿಕೆಮಾಡಿಕೊಳ್ಳುತ್ತೇವೆ.

ಅನಂತರ ಶ್ರೀಶ್ರೀಗಳು ವಿಜ್ಞಾಪನಾ ಪತ್ರಕ್ಕೆ ಉತ್ತರವಾಗಿ ಧಾರ್ಮಿಕ ಸಂಸ್ಥೆಗಳ ಅಗತ್ಯ, ಅವುಗಳ ಉದ್ದೇಶ ಮತ್ತು ಅವುಗಳಿಂದ ಸಮಾಜಕ್ಕಾಗುತ್ತಿರುವ ಪ್ರಯೋಜನವನ್ನು ಕುರಿತು ಭಾಷಣ ಮಾಡಿದರು. ಇಂತಹ ಧಾರ್ಮಿಕ ಹವ್ಯಾಸಗಳು ಎಷ್ಟು ಹೆಚ್ಚಾಗಿ ನಡೆದರೆ ಅಷ್ಟು ಬೇಗ ಜನರು ಆಸ್ತಿಕರೂ, ಧಾರ್ಮಿಕರೂ ಮತ್ತು ಸಂಸ್ಕೃತಿ ಸಂಪನ್ನರೂ ಆಗುವರೆಂದು ತಿಳಿಸಿ, ಶ್ರೀ ಲಕ್ಷ್ಮೀಹಯಗ್ರೀವ ಸ್ವಾಮಿಯು ಇಂತಹ ಅವಕಾಶ ಕರುಣಿಸಲಿ ಎಂದರು.

ಬೆಂಗಳೂರಿನಲ್ಲಿ 1972ನೇಯ ಇಸವಿ ಜೂನ್ 28ರ ವರೆಗೂ ಶ್ರೀ ಶ್ರೀಗಳು ದಯಮಾಡಿಸಿದ್ದರು. ಅನಂತರ ಅದೇ ದಿವಸ ಮಧ್ಯಾಹ್ನ ಅಲ್ಲಿಂದ ಪ್ರಯಾಣ ಮಾಡಿ ಮೈಸೂರು ಸೇರಿದರು. ಶ್ರೀಮಠದಲ್ಲಿ ಯಥಾಕ್ರಮವಾಗಿ, ಆರಾಧನಾದಿ ಕೈಂಕರ್ಯಗಳು, ವಿಶೇಷ ಉತ್ಸವಗಳು ನಡೆಯುತ್ತಿದ್ದವು. ಶ್ರೀ ಶ್ರೀಗಳು ತಮ್ಮ ಧರ್ಮದಿಗ್ವಿಜಯ ಪ್ರವಾಸದ ಶ್ರಮವನ್ನು ಪರಿಹರಿಸಿಕೊಂಡು, ಆರಾಧನ, ಕಾಲಕ್ಷೇಪಾದಿಕಾರ್ಯಗಳಲ್ಲಿ ನಿರತರಾದರು.

1972ನೆಯ ಇಸವಿ ಜುಲೈ ಎಂಟನೆಯ ತಾರೀಖು, ಶ್ರೀ ಶ್ರೀಗಳು ರಾಮನಾಥಪುರದಲ್ಲಿ ಶ್ರೀಮಠದ ಕಟ್ಟಡವನ್ನು ಪರೀಕ್ಷಿಸಿ, ಅಲ್ಲಿ ಶ್ರೀ ಲಕ್ಷ್ಮೀಹಯಗ್ರೀವ ಸ್ವಾಮಿಯ ದಿವ್ಯಮಂಗಳವಿಗ್ರಹ ಪ್ರತಿಷ್ಠೆಗೆ ಅಗತ್ಯವಾದ ಮಂಟಪನಿರ್ಮಾಣ ಕಾರ್ಯವನ್ನು ವ್ಯವಸ್ಥೆಗೊಳಿಸಲು ದಯಮಾಡಿಸಿದರು. ರಾಮನಾಥಪುರದ ಪಟ್ಟಾಭಿರಾಮದೇವರ ದೇವಸ್ಥಾನದ ಪಕ್ಕದಲ್ಲಿ ಶ್ರೀಮಠಕ್ಕೆ ಸೇರಿದ ಕಟ್ಟಡವಿದೆ. ಈ ಕಟ್ಟಡದ ಮಧ್ಯೆ ಒಂದು ನೂತನ ಮಂಟಪವನ್ನು ಕಟ್ಟಿಸಿ, ಅಲ್ಲಿ ಶ್ರೀ ಲಕ್ಷ್ಮೀಹಯಗ್ರೀವಸ್ವಾಮಿ ವಿಗ್ರಹವನ್ನು ಪ್ರತಿಷ್ಠೆಮಾಡಿಸಿ ಆರಾಧನಾದಿ ಸೌಕರ್ಯವೇರ್ಪಡಿಸಲು ರಾಮನಾಥಪುರದ ವಿದ್ವಾ ತಿರುಮಲಾಚಾರ್ಯರ ಧರ್ಮಪತ್ನಿ ಕಮಲಮ್ಮನವರು ಎಲ್ಲ ವೆಚ್ಚ ನಿರ್ವಹಿಸಲು ಸಿದ್ಧವಾಗಿದ್ದಾರೆ. ಆ ಬಗ್ಗೆ ಅಗತ್ಯವಾದ ಮೊಬಲಗನ್ನು ಶ್ರೀ ಮಠದಲ್ಲಿಯೇ ಇಟ್ಟಿದ್ದಾರೆ. ಆದಷ್ಟು ಬೇಗ ಈ ಧರ್ಮಕಾರ್ಯ ನಡೆಯಬೇಕೆಂಬ ಉದ್ದೇಶದಿಂದ ಶ್ರೀಶ್ರೀಗಳು ರಾಮನಾಥಪುರಕ್ಕೆ ಹಠಾತ್ತನೆ ದಯಮಾಡಿಸಿದರು.

8-7-1972 ಮಧ್ಯಾಹ್ನ ಮೂರುಗಂಟೆಗೆ ರಾಮನಾಥಪುರವನ್ನು ತಲುಪಿದಾಗ, ಅಲ್ಲಿಯ ಶಿಷ್ಯರೂ, ಅಭಿಮಾನಿಗಳು, ಛತ್ರಿ, ಚಾಮರ, ಶಠಕೋಪ, ಪೂರ್ಣಕುಂಭ ಮರ್ಯಾದೆಯೊಡನೆ, ಶ್ರೀಶ್ರೀಗಳವರಿಗೆ ಅಭೂತಪೂರ್ವ ಸ್ವಾಗತವಿತ್ತರು. ವಾದ್ಯ ಸಮೇತ, ಶ್ರೀಶ್ರೀಗಳವರನ್ನು ಊರು ಬೀದಿಗಳಲ್ಲಿ ಮೆರವಣಿಗೆಯಾಗಿ ಬಿಜಯಮಾಡಿಸಿ, ಪ್ರತಿಯೊಂದು ಮನೆಯ ಮುಂದೆ ಮಣೆ ಹಾಕಿ, ಶ್ರೀಶ್ರೀಗಳವರನ್ನು ಬಿಜಯ ಮಾಡಿಸುವಂತೆ ಪ್ರಾರ್ಥಿಸಿ, ಆರತಿ ಎತ್ತಿದರು. ಅನಂತರ ಪಟ್ಟಾಭಿರಾಮದೇವರ ದರ್ಶನಮಾಡಿ, ಶ್ರೀಮಠದ ಕಟ್ಟಡಕ್ಕೆ ಬರುವವೇಳೆಗೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನೂರಾರುಮಂದಿ ಸೇರಿದ್ದರು. ಅಲ್ಲಿ ನೆರದಿದ್ದ ಸಭಿಕರಿಗೆ, ಶ್ರೀಶ್ರೀಗಳು ತಾವು ಅಲ್ಲಿಗೆ ದಯಮಾಡಿಸಿದ ಉದ್ದೇಶವನ್ನು ವಿವರಿಸಿ, ಅಲ್ಲಿ ನಡೆಯಬೇಕಾಗಿರುವ ಶ್ರೀಲಕ್ಷ್ಮೀ ಹಯಗ್ರೀವ ದೇವರ ಪ್ರತಿಷ್ಠಾಪನ ಉತ್ಸವಕ್ಕೆ ಎಲ್ಲರೂ ನೆರವಾಗಬೇಕೆಂದು ತಿಳಿಸಿದರು. ಅಲ್ಲಿಯ ಹೈಸ್ಕೂಲ್ ಅಡಳಿತ ಸಮಿತಿಯ ಕಾರ್ಯದರ್ಶಿಯವರು, ಹೈಸ್ಕೂಲನ್ನು ಬೇರೆ ಕಟ್ಟಡಕ್ಕೆ ವರ್ಗಾಯಿಸಿ ಸ್ಕೂಲು ತೆರವು ಮಾಡಿಕೊಡುವುದಾಗಿಯೂ, ಪ್ರತಿಷ್ಠಾಕಾರ್ಯಕ್ಕೆ ಎಲ್ಲ ಅನುಕೂಲ ಒದಗಿಸುವುದಾಗಿಯೂ, ಭರವಸೆ ಇತ್ತರು. ಅಲ್ಲಿಯ ಶಿಷ್ಯರ ಉತ್ಸಾಹಕರ ಶ್ರದ್ಧೆಯಿಂದ ಪ್ರೀತರಾದ ಶ್ರೀ ಶ್ರೀಗಳು ನೆರದಿದ್ದವರಿಗೆಲ್ಲ ಫಲ ಮಂತ್ರಾಕ್ಷತೆ ಅನುಗ್ರಹಿಸಿ, ಅದೇ ದಿವಸ ಸಾಯಂಕಾಲದ ವೇಳೆಗೆ ಮೈಸೂರನ್ನು ಸೇರಿದರು. ಬರುವಾಗ ದಾರಿಯಲ್ಲಿ ಸಾಲಿಗ್ರಾಮದ ಶ್ರೀ ಭಾಷ್ಯಕಾರರ ಶ್ರೀ ಪಾದ ತೀರ್ಥ ಕೊಳವನ್ನು ದರ್ಶನ ಮಾಡಿಬಂದರು.

1972ನೆಯ ಇಸವಿ ಆಗಸ್ಟ್ ಹನ್ನೊಂದು ತಿರುವಾಡಿಪ್ಪೂರಂ, ಶ್ರೀ ಮಹಾಲಕ್ಷ್ಮಿಯು ಅವತಾರ ಮಾಡಿದ ಪವಿತ್ರ ದಿವಸ. ಅಂದು ವಾಣಿವಿಲಾಸಮೊಹಲ್ಲ. ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಗೋದಾದೇವಿ ದಿವ್ಯಮಂಗಳ ವಿಗ್ರಹ ಪ್ರತಿಷ್ಠಾಪನಮಹೋತ್ಸವ. ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳ ಸಮ್ಮುಖದಲ್ಲಿ ಪೂರ್ಣಾಹುತಿ ಮತ್ತು ಮಹಾಮಂಗಳಾರತಿ ನಡೆಯಬೇಕೆಂದು ಅಲ್ಲಿಯ ಅರ್ಚಕರು ಶ್ರೀ ಶ್ರೀಗಳವರಲ್ಲಿ ಪ್ರಾರ್ಥಿಸಿದರು. ಹತ್ತುಘಂಟೆಗೆ ಸರಿಯಾಗಿ ಶ್ರೀ ಶ್ರೀಗಳು ಅಲ್ಲಿಗೆ ದಯಮಾಡಿಸಿ, ಪ್ರತಿಷ್ಠಾಪನಾ ಕಾರ್ಯ ಸಾಂಗವಾಗಿ ನೆರವೇರುವಂತೆ ಅನುಗ್ರಹಿಸಿದರು. ಮಧ್ಯಾಹ್ನ ಅಲ್ಲಿಯೇ ವಾಸವಾಗಿರುವ ಕೊಗೋಡು ಕೃಷ್ಣಯ್ಯಂಗಾರ್ಯರ ಬಂಗಲೆಯಲ್ಲಿ ಶ್ರೀ ಹಯಗ್ರೀವ ಸ್ವಾಮಿಯ ಇಚ್ಛಾರಾಧನೆ, ವಜ್ಯದ ಡೋಲೋತ್ಸವದ ಏರ್ಪಾಡಾಗಿತ್ತು. ಸಾಯಂಕಾಲ ಐದುಘಂಟೆಗೆ ಸರಿಯಾಗಿ ಶ್ರೀ ಶ್ರೀಗಳು ಗೋದಾದೇವಿಯ ವಿಷಯವಾಗಿ ಸುಮಾರು ಒಂದು ಘಂಟೆ ಕಾಲ ಅಮೋಘವಾದ ಭಾಷಣ ಮಾಡಿದರು. ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಕೇಳಲು ಬಹು ಮಂದಿ ನೆರೆದಿದ್ದರು. ಭಾಷಣದ ಸಾರಾಂಶ ಹೀಗಿತ್ತು.

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ | ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂದು ಪರಮಾತ್ಮನು ಅಪ್ಪಣೆ ಕೊಟ್ಟಿದ್ದಾನೆ. ಪರಮಾತ್ಮನು ಅವತಾರ ಮಾಡುವಾಗ, ಶ್ರೀ ಮಹಾಲಕ್ಷ್ಮಿಯು ಧರ್ಮ ಸಂಸ್ಥಾಪನೆಗೆ ಸಹಾಯ ಮಾಡಲು ತಾನೂ ಅವತಾರಮಾಡುವಳು. ರಾಮಾವತಾರದಲ್ಲಿ ಸೀತೆಯಾಗಿ ಅವತಾರಮಾಡಿದರೆ, ಕೃಷ್ಣಾವತಾರದಲ್ಲಿ ರುಕ್ಮಿಣಿಯಾಗಿ ಅವತಾರಮಾಡಿದ್ದಾಳೆ. ಸೀತೆಯಂತೆ ಗೋದಾದೇವಿಯೂ ಅಯೋನಿಜೆ. ಗೋದಾ ಎಂದರೆ ಸೊಗಸಾದ ಮೋಕ್ಷಸೂಚಕವಾದ ಮಾತು ಕೊಟ್ಟವಳು. ಕಿರಣದಂತಹ ಜ್ಞಾನಕೊಟ್ಟವಳು. ಜೀವನಿಗೆ ಸ್ವಸ್ವರೂಪ ಬರುವಂತಹ, ಅಜ್ಞಾನವನ್ನು ತೊಲಗಿಸುವಂತಹ ಜ್ಞಾನ ಕೊಟ್ಟವಳು ಎಂದು ಅರ್ಥ ಮಾಡಬಹುದು. ಇವಳಿಗೆ ಆಂಡಾಳ್ ಎಂಬ ಇನ್ನೊಂದು ಹೆಸರೂ ರೂಢಿಯಲ್ಲಿ ಬಂದಿದೆ. ಆಂಡಾಳ್ ಎಂದರೆ ಆಳಿದವಳು. ಸರ್ವೇಶ್ವರನು ಜಗತ್ತನ್ನು ಆಳುವುದಕ್ಕೆ ಅವತಾರ ಮಾಡಿದರೆ ಅಂತಹ ಸರ್ವೇಶ್ವರನನ್ನು ಆಳುವುದಕ್ಕೆ ಬಂದವಳು ಎಂದೂ ಹೇಳಬಹುದು. ಆಣ್ ಎಂದರೆ ಪುರುಷ. ಡಾಳ್ ಎಂದರೆ ಪಾದುಕೆ, ಪರಮಾತ್ಮನ ಪಾದುಕೆಯ ಪ್ರಭಾವವನ್ನು ಪ್ರಕಾಶಪಡಿಸಿದವಳು ಎಂದು ಅರ್ಥ.

ಶ್ರೀವಿಲ್ಲಿಪುತ್ತೂರಿನ ವಟಪತ್ರಶಾಯಿ ಸ್ವಾಮಿಗೆ ನಿತ್ಯ ಪುಷ್ಪ ಕೈಂಕರ್ಯಕ್ಕಾಗಿ, ಪೆರೀಯಾಳ್ವಾರರು, (ವಿಷ್ಣುಚಿತ್ತರು) ಒಂದು ತುಳಸಿಪುಷ್ಪ ಉದ್ಯಾನವನ್ನು ನಿರ್ಮಿಸಿಕೊಂಡು, ಕೈಂಕರ್ಯ ನಡೆಸುತ್ತಿದ್ದರು. ಒಂದು ದಿನ ತುಳಸಿ ಕಾನನದಲ್ಲಿ ಏಗೆಯುತ್ತಿದ್ದಾಗ, ಭೂಮಿಯ ಗರ್ಭದಲ್ಲಿ ಒಂದು ಸುಂದರವಾದ ಹೆಣ್ಣುಮಗುವು ಸಿಕ್ಕಿತು. ಮಕ್ಕಳಿಲ್ಲದ ಆಳ್ವಾರರು ದರಿದ್ರನಿಗೆ ಅಪಾರ ನಿಧಿ ಸಿಕ್ಕಿದಾಗ ಸಂತೋಷವುಂಟಾಗುವಂತೆ ಹರ್ಷಿಸಿ, ಭೂಗರ್ಭದಲ್ಲಿ ದೊರೆತ ಮಗುವಿಗೆ ಗೋದಾ ಎಂದು ಹೆಸರಿಟ್ಟು, ಪೋಷಿಸಿದರು. ಮಗುವು ದೊರೆತ ದಿನವನ್ನು ದೊಡ್ಡ ಹಬ್ಬವನ್ನಾಗಿ ಆಚರಿಸಿದರು. ಅಂತಹ ಸುದಿನ ಇಂದು.

ಗೋದಾದೇವಿಯ ನಡೆನುಡಿಗಳು, ರೀತಿನೀತಿಗಳು ವಿಶೇಷ ರೀತಿಯದಾಗಿದ್ದವು. ಅವಳ ಅನುಪಮ ದೈವೀಸಂಪತ್ತು, ಗ್ರಹಣ, ಧಾರಣ ಶಕ್ತಿಯನ್ನು ಕಂಡು ವಿಷ್ಣುಚಿತ್ತರು ಆಶ್ಚರ್ಯಪಟ್ಟು, ಅವಳಿಗೆ ಚಿಕ್ಕಂದಿನಿಂದಲೇ ಇತಿಹಾಸ, ಪುರಾಣ ವೇದಾಂತ ವಿಷಯಗಳನ್ನು ತಿಳಿಸಿದರು. ಭಗವಂತನ ಸೌಂದರ್ಯ, ಲಾವಣ್ಯ, ಗಾಂಭೀರ್ಯಾದಿ ಸಕಲ ಕಲ್ಯಾಣ ಗುಣಗಳನ್ನು ಉಪದೇಶ ಮಾಡಿದರು. ಇವನ್ನೆಲ್ಲ ಕೇಳಿ ಅವಳಿಗೆ ಪರಮಾತ್ಮನಲ್ಲಿ ವಿಶೇಷ ರೀತಿಯ ಪ್ರೇಮವುಂಟಾಯಿತು.

ವಿಷ್ಣುಚಿತ್ತರು ಪರಮಾತ್ಮನಿಗೆ ನಿತ್ಯವೂ ಪುಷ್ಪಹಾರಕಟ್ಟಿ ಅರ್ಪಿಸುತ್ತಿದ್ದರು. ಈ ಕೆಲಸದಲ್ಲಿ ಗೋದಾದೇವಿಯೂ ಸಹಾಯಕಳಾಗಿದ್ದಳು. ಅವಳು ಮಾಲೆ ಕಟ್ಟಿ, ಅಷ್ಟರಿಂದ ತೃಪ್ತಳಾಗದೆ, ಅದನ್ನು ತಾನು ಮುಡಿದು ಪರಮಾತ್ಮನಿಗೆ ಅರ್ಪಿಸಲು,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ಅವನ ಅಲಂಕಾರಕ್ಕೆ ಅರ್ಹವಾಗಿರುವುದೇ ಎಂಬುದನ್ನು ದೃಢಪಡಿಸಿಕೊಂಡು, ಅನಂತರ ಮಾಲೆಯನ್ನು ಬುಟ್ಟಿಯಲ್ಲಿಡುತ್ತಿದ್ದಳು. ಇದು ಹೇಗೋ ವಿಷ್ಣುಚಿತ್ತರಿಗೆ ತಿಳಿದು, ದೇವರಿಗೆ ಅಪಚಾರವಾಯಿತೆಂದು ದುಃಖಪಟ್ಟರು. ಆದರೆ ಸ್ವಾಮಿಯು ಅವರ ಸ್ವಪ್ನದಲ್ಲಿ ಕಾಣಿಸಿಕೊಂಡರು ಮಗಳು ಮುಡಿದ ಮಾಲೆಯು ತಮಗೆ ಪ್ರಿಯವಾಗಿರುವುದೆಂದೂ, ಅದರಿಂದ ಅದರ ಸುವಾಸನೆ ಹೆಚ್ಚಿನದಾಗುವುದೆಂದೂ ತಿಳಿಸಿದರು. ಹೀಗೆ ತಂದೆ ಮಗಳ ಮಧ್ಯೆ ಉಂಟಾಗಿದ್ದ ಬಿಕ್ಕಟ್ಟು ಹರಿಯಿತು. ಅಂದಿನಿಂದ ಗೋದಾದೇವಿಗೆ ಶೂಡಿಕುಡುತ್ತ ನಾಚ್ಚಿಯಾರ್ ಎಂಬ ಇನ್ನೊಂದು ಹೆಸರು ರೂಢಿಯಲ್ಲಿ ಬಂದಿತು,

ಗೋದಾದೇವಿಯ ಅನ್ಯಾದೃಶ ಸೌಂದರ್ಯ, ಪ್ರತಿಭೆ, ಭಗವತ್ಪ್ರಾವಣ್ಯ ಭಗವಂತನನ್ನೇ ಪಡೆಯಬೇಕೆಂಬ ದೃಢ ನಿರ್ಧಾರ ಎಲ್ಲವೂ ತಂದೆಗೆ ಬಿಡಿಸಲಾಗದ ಸಮಸ್ಯೆಯಾಯಿತು. ಗೋಪಿಯರು ಶ್ರೀಕೃಷ್ಣನನ್ನು ಹೊಂದಲು ಕಾತ್ಯಾಯಿನಿ ವ್ರತ ಮಾಡಿದಂತೆ, ತಾನೂ ವ್ರತವನ್ನಾಚರಿಸಿ ಶ್ರೀಕೃಷ್ಣನನ್ನು ಒಲಿಸಿಕೊಳ್ಳುವುದಾಗಿ ಹೇಳಿದಳು. ಈ ಭಾವನಾ ಪ್ರಕರ್ಷದ ಬಲದಿಂದ ನಾನೊಬ್ಬ ಗೋಪಕನ್ಯೆ ಎಂದೂ, ತನ್ನ ಕೆಳದಿಯರೆಲ್ಲ ಗೋಪಬಾಲೆಯರೆಂದೂ, ಇರುವ ಗ್ರಾಮವೇ ಗೋಕುಲವೆಂದೂ, ಅಲ್ಲಿಯ ಆರಾಧ್ಯ ದೇವರೇ ಶ್ರೀಕೃಷ್ಣನೆಂದೂ ಭಾವಿಸಿ, ತಾನು ಆಚರಿಸುವ ವ್ರತದ ವಿಚಾರವನ್ನು ಅವಳು ವಿವರಿಸಿದ್ದಾಳೆ. ಶ್ರೀ ಕೃಷ್ಣ ಸಂಶ್ಲೇಷಣಕ್ಕಾಗಿ ವ್ರತಾನುಷ್ಠಾನ ಮಾಡುತ್ತಾಳೆ. ನಿತ್ಯವೂ ಮುಂಜಾನೆ ಎದ್ದು ಸಖಿಯರನ್ನು ಒಬ್ಬೊಬ್ಬರನ್ನಾಗಿ ಎಬ್ಬಿಸಿ, ನಿದ್ರಿಸುತ್ತಿರುವ ಶ್ರೀಕೃಷ್ಣನನ್ನು ಎಬ್ಬಿಸೋಣ ಬನ್ನಿ ಎಂದು ಕರೆಯುತ್ತಾಳೆ. ಹೀಗೆ ಎಲ್ಲ ಭಕ್ತೆಯರನ್ನು ಸೇರಿಸಿ, ಬಾಗಿಲಿನಲ್ಲಿರುವ ದ್ವಾರಪಾಲಕರನ್ನು, ನಂದಗೋಪನನ್ನೂ ....ರಾಮನನ್ನು ಏಳುವಂತೆ ಪ್ರಾರ್ಥಿಸಿ, ನೀಳಾಸಮೇತನಾದ ಶ್ರೀಕೃಷ್ಣ ದರ್ಶನ ಮಾಡಿಸಿ ಎಂದು ಪ್ರಾರ್ಥಿಸುತ್ತಾಳೆ. ಹೀಗೆ ಗೆಳತಿಯರನ್ನು ಎಬ್ಬಿಸುವ ರೀತಿ ಕೃಷ್ಣ ದರ್ಶನದ ವಿವರಣೆ ಎಲ್ಲವೂ ಮನೋಹರವಾಗಿರುವುದಲ್ಲದೆ, ಅರ್ಥಗರ್ಭಿತವಾಗಿದೆ. ವೇದಾಂತ ರಹಸ್ಯಗಳನ್ನೊಳಗೊಂಡಿದೆ.

ಹೀಗೆ ಗೋದಾದೇವಿಯು ಹಾಡಿರುವ ಮೂವತ್ತು ಪದ್ಯಗಳು ತಿರುಪ್ಪಾವೈ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ತಮಿಳು ಸಾಹಿತ್ಯದಲ್ಲಿ ಇದಕ್ಕೆ ಅತ್ಯುನ್ನತ ಸ್ಥಾನವಿದೆ. ಇದರಲ್ಲಿ ಕಂಡುಬರುವ ಭಕ್ತ್ಯತಿಶಯವು ಅನ್ಯಾದೃಶರೀತಿಯದು ಕಾವ್ಯದೃಷ್ಟಿಯಿಂದ ಕೂಡ ಇದು ಅತ್ಯಂತ ರಸ ಪುಷ್ಪವಾಗಿದೆ. ಇಂತಹ ಅದ್ಭುತ ಪ್ರಬಂಧವನ್ನು ಗೋದಾದೇವಿಯು ತನ್ನ ಪೂರ್ವ ವಯಸ್ಸಿನಲ್ಲಿ ಹಾಡಿದಳು. ಇದನ್ನು ನಿತ್ಯವೂ ಹಾಡುತ್ತಿದ್ದಾಗ, ತಾನು ಪರಮಾತ್ಮನನ್ನೇ ವಿವಾಹ ಮಾಡಿಕೊಂಡಂತೆ ಕನಸು ಕಾಣುವಳು. ಈ ಕನಸನ್ನು 'ನಾಚ್ಚಿಯಾರ್ ತಿರುಮೊಳಿ ಎಂಬ ಇನ್ನೊಂದು ದಿವ್ಯ ಪ್ರಬಂಧದಲ್ಲಿ ವಿವರಿಸಿದ್ದಾಳೆ. ತಾನು ಶ್ರೀರಂಗದ ಶ್ರೀ ರಂಗನಾಥನನ್ನೇ ವಿವಾಹವಾಗುವುದಾಗಿ ತನ್ನ ದೃಢ ನಿರ್ಧಾರವನ್ನು ತನ್ನ ತಂದೆಗೆ ತಿಳಿಸಿದಳು. ಅದೇ ಕಾಲಕ್ಕೆ ಸರಿಯಾಗಿ ಪಾಂಡ್ಯ ದೇಶದ ದೊರೆಯಾದ ವಲ್ಲಭದೇವರಾಯನಿಗೂ, ವಿಷ್ಣುಚಿತ್ತರಿಗೂ ಭಗವತ್ಪ್ರೇರಣೆಯಾಗುವುದು. ರಾಜನು ಸಕಲ ಮರ್ಯಾದೆಯೊಡನೆ ಪಲ್ಲಕ್ಕಿಯನ್ನು ಕಳುಹಿಸಿದನು ಆಳ್ವಾರರು ಮಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಶ್ರೀರಂಗನಾಥಸ್ವಾಮಿಯ ಸನ್ನಿಧಿಗೆ ಕಳುಹಿಸಲು ಅವಳು ಅಲ್ಲಿಗೆ ಬಂದು ಶೇಷ ಶಯ್ಯೆಯನ್ನು ಹತ್ತಿ ಮಾಯವಾಗುವಳು. ಹೀಗೆಂದು ವಿಷ್ಣುಚಿತ್ತರೇ ತಿಳಿಸಿದ್ದಾರೆ.

ವಿಷ್ಣು ಚಿತ್ತರು ಶ್ರೀರಂಗನಾಥನನ್ನು ಕುರಿತು "ಹೇ ! ಜಗನ್ನಾಯಕ ! ಪಾವನ ಮೂರ್ತಿ ! ನಿನ್ನ ಚರಣ ಕಮಲಗಳನ್ನೇ ಸದಾ ಧ್ಯಾನಿಸಿ, ಅದೇ ಜೀವನಾಧಾರವೆಂದು ದೃಢವಾಗಿ ನಂಬಿರುವ ನನಗೆ ನನ್ನ ಮಗಳನ್ನು ವಿವಾಹ ಮಾಡಿಕೊಡುವ ನೋಟವನ್ನು ನೀನು ಕರುಣಿಸಬೇಡವೇ ? ಈಗಲಾದರೂ ಕೃಪೆಮಾಡುವೆಯಾ ? ಎಂದು ದೈನ್ಯದಿಂದ ಬೇಡಿದರು.

ಶ್ರೀರಂಗನಾಥನು, ರಂಗನಾಥಸ್ವಾಮಿಯಾಗಿ, ಗೋದಾದೇವಿಯೊಡನೆ ಗರುಡಾರೂಢನಾಗಿ ಶ್ರೀವಲ್ಲಿಪುತ್ತೂರಿಗೆ ದಯಮಾಡಿಸಿ ಆಳ್ವಾರರಿಗೆ ದಿವ್ಯಚಕ್ಷುಸ್ಸನ್ನು ಕರುಣಿಸಿ, ಗೋದಾದೇವಿಯನ್ನು ವಿವಾಹಮಾಡಿಕೊಂಡ ವೈಭವವನ್ನು ನೋಡುವಂತೆ ಕೃಪೆಮಾಡಿದನು. ಸಕಾಲದಲ್ಲಿ ಗರುಡನು ಶ್ರೀರಂಗದಿಂದ ಶ್ರೀವಲ್ಲಿಪುತ್ತೂರಿಗೆ ಬಂದು ತನ್ನ ಸಾಕು ತಂದೆಗೆ ಸಂತೋಷವುಂಟಾಗುವಂತೆ ಮಾಡಿದ ಕೃತಜ್ಞತೆಗಾಗಿ, ಗೋದಾದೇವಿಯು ಗಂಡನಿಗೆ ತನ್ನ ಸಮಾನ ಸ್ಥಾನವನ್ನು ಕರುಣಿಸಿದ್ದಾಳೆ. ಗೋದಾದೇವಿ, ರಂಗಮನ್ನಾರ್, ಗರುಡ-ಮೂರು ದಿವ್ಯಮಂಗಳ ವಿಗ್ರಹಗಳು ಸಾಲಾಗಿ ನಿಂತಿರುವುದನ್ನು ನಾವು ಅಲ್ಲಿ ಈಗಲೂ ದರ್ಶನ ಮಾಡಬಹುದು.

ಗೋದಾದೇವಿಯು ಹಾಡಿರುವ ಪ್ರಬಂಧಗಳು, ಎರಡು ತಿರುಪ್ಪಾವೈ. ನಾಚ್ಚಿಯಾರ್ ತಿರುಮೊಳಿ. ತಿರುಪ್ಪಾವೈ 30 ಪದ್ಯಗಳು ನಾಚ್ಚಿಯಾರ್ ತಿರುಮೊಳಿ 143 ಪದ್ಯಗಳು. ತಿರುಪ್ಪಾವೈಯಲ್ಲಿ ಮೊದಲಿನಿಂದ ಕೊನೆಯವರೆಗೆ ಶ್ರೀ ಕೃಷ್ಣಪ್ರೇಮದವಿಷಯವೇ ಇದೆ. ಪರಮಾತ್ಮ ಸಾನ್ನಿಧ್ಯ ಪಡೆಯುವ ಅನುಕೂಲಗಳ ಪರಿಸ್ಥಿತಿಯನ್ನು ತಿಳಿಸುವುದು. ಇಲ್ಲಿ ವರ್ಣಿಸಿರುವ ಭಕ್ತ್ಯತಿಶಯವು ಅನ್ಯಾದೃಶ್ಯವಾಗಿದೆ. ಅತ್ಯಂತ ರಸಪುಷ್ಪಿಯಿಂದ ಕೂಡಿದೆ. ನಾಚ್ಚಿಯಾರ್ ತಿರುಮೊಳಿಯು ಭಾವಾವೇಶವನ್ನು ಹುಟ್ಟಿಸತಕ್ಕ ಸೊಗಸಾದ ಗೀತೆ. ಇದರಲ್ಲಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪರಮಾತ್ಮ ಸಾಕ್ಷಾತ್ಕಾರಕ್ಕೆ ಅಗತ್ಯವಾದ ಮಾನಸಿಕಭಾವನೆ, ಧಾರ್ಮಿಕ ಯೋಚನೆ ಪ್ರಣಯಗೀತೆ ಎಲ್ಲವೂ ಇವೆ. ಸಂಪೂರ್ಣವಾದ ಭಾವಾವೇಶ ಸಮೃದ್ಧಿಯನ್ನು ಉಂಟುಮಾಡುವ ಕಾವ್ಯ ಸಂಪತ್ತಿನಿಂದ ಕೂಡಿದೆ ಈ ಗೀತೆ.

'ಪತಿಂ ವಿಶ್ವಸ್ಯ' ಎಂಬಂತೆ ಸಕಲ ಚೇತನರಿಗೂ ಪತಿಯಾದ ಪುರುಷೋತ್ತಮನನ್ನು ಸ್ತ್ರೀ ಪ್ರಾಯರಾಗಿ ಎಲ್ಲಿಬೇಕಾದರೂ ವರಿಸಬೇಕೆಂದೂ, ಇವರಿಗೆ ತೀಕ್ಷ್ಣವು "ಆತ್ಮಾ ಸಂಸ್ಕೃತ್ಯ ಸಂಸ್ಕೃತ್ಯ" "ಪರೋಪಕರಿಣೇಕೃತಃ" ಎಂಬಂತೆ ದಿವ್ಯಾಲಂಕಾರ ಪೂರ್ವಕವಾಗಿ ಸ್ವಾಮಿಯೊಡನೆ ಸಾಯುಜ್ಯವೆಂಬ ಪಾಣಿಗ್ರಹಣ ಪೂರ್ವಕವಾದ ವಿವಾಹವೆಂತಲೂ, ಇವರೆಲ್ಲರೂ ಸ್ವಾಮಿಗೇಭೋಗ್ಯವಾಗಿ ನಿತ್ಯ ನಿರತಿಶಯಾನಂದವನ್ನು ಹೊಂದಿ 'ಪರಮಂ ಸಾಮ್ಯ ಮುಪೈತಿ' ಎಂಬ ಶ್ರುತಿ ಅರ್ಥಕ್ಕನುಸಾರವಾಗಿ ಅವನೊಡನೆ ಪರಮ ಸಾಮ್ಯವೆಂಬ ಮೋಕ್ಷ ಪಡೆಯಬೇಕೆಂಬುದು, ಈ ಪದ್ಯಗಳಲ್ಲಿ ವ್ಯಕ್ತವಾಗಿದೆ. ಅಂತಹ ಮಹಾಲಕ್ಷ್ಮಿಯ ಅವತಾರವಾದ ಗೋದಾದೇವಿಯ ಜನ್ಮದಿನ ಈ ದಿವಸ. ಅವಳನ್ನು ಪ್ರಾರ್ಥಿಸಿ ಅವಳ ಕೃಪೆಗೆ ಎಲ್ಲರೂ ಪಾತ್ರರಾಗಬೇಕು. ಎಂದು ಶ್ರೀ ಶ್ರೀಗಳು ತಮ್ಮ ಭಾಷಣವನ್ನು ಮುಗಿಸಿದರು. ಮಾರನೆಯ ದಿವಸ ಶ್ರೀ ಲಕ್ಷ್ಮೀ ಹಯಗ್ರೀವ ಸ್ವಾಮಿಯನ್ನು ಶ್ರೀ ವೆಂಕಟರಮಣ ಸ್ವಾಮಿ ಕಲ್ಯಾಣ ಮಂದಿರಕ್ಕೆ ಬಿಜಯ ಮಾಡಿಸಿ, ಆರಾಧನೆ ಮಾಡಿದರು. ನೂರಾರು ಮಂದಿ ಭಕ್ತರೂ ದೇವಸ್ಥಾನದ ಟ್ರಸ್ಟಿಗಳೂ ಬಂದು ದೇವರ ದರ್ಶನ ಮಾಡಿದರು. ಅದೇ ರಾತ್ರಿ ಶ್ರೀ ಶ್ರೀಗಳು, ತಮ್ಮ ಆರಾಧ್ಯ ದೇವರೊಡನೆ ಶ್ರೀ ಮಠಕ್ಕೆ ದಯಮಾಡಿಸಿದರು.

1972ನೆಯ ಇಸವಿ ಆಗಸ್ಟ್ 23ನೆಯ ತಾರೀಖು ಶ್ರೀ ಮಠದಲ್ಲಿ ಹಯಗ್ರೀವ ಜಯಂತಿ ಉತ್ಸವವನ್ನು ಆಚರಿಸಲಾಯಿತು. ಪ್ರಾತಃಕಾಲ ಶ್ರೀಲಕ್ಷ್ಮೀಹಯಗ್ರೀವ, ಶ್ರೀ ಲಕ್ಷ್ಮೀನಾರಾಯಣ ಮತ್ತು ಶ್ರೀಕೃಷ್ಣ ದೇವರ ದಿವ್ಯಮಂಗಳ ವಿಗ್ರಹಗಳಿಗೆ ಅಭಿಷೇಕವಾದ ಮೇಲೆ, ವಜ್ರದ ತೊಟ್ಟಿಲಲ್ಲಿ ದಯಮಾಡಿಸಿ, ದಿವ್ಯಾಭರಣಗಳನ್ನು ಧರಿಸಿ ಆರಾಧನೆ ಮಾಡಲಾಯಿತು. ನೂರಾರು ಭಕ್ತರು ಬಂದು ದೇವರನ್ನು ದರ್ಶನಮಾಡಿ ಸಂತೋಷಪಟ್ಟರು. ಮಧ್ಯಾಹ್ನ ಇಜ್ಯಾರಾಧನೆ ಆದ ಮೇಲೆ ಭಾಗವತಾರಾಧನೆ. ಅನಂತರ ಸ್ವಸ್ತಿವಾಚನ ತಾಂಬೂಲ ವಿನಿಯೋಗ. ಶ್ರೀ ಶ್ರೀಗಳು ಶ್ರೀ ಹಯಗ್ರೀವ ಅವತಾರದ ಮಹಿಮೆಯ ವಿಷಯವಾಗಿ ಅಮೋಘ ಭಾಷಣವಿತ್ತರು ಅವರ ಭಾಷಣದ ಸಾರಾಂಶವನ್ನು ಹೇಗೆ ಸಂಗ್ರಹಿಸಲಾಗಿದೆ.

ಶ್ರೀ ಹಯಗ್ರೀವಾವತಾರ ಜ್ಞಾನೋಪದೇಶಕ್ಕಾಗಿಯೇ ಬಂದುದು. ಜ್ಞಾನಕ್ಕೆ ವೇದವೇ ಮೂಲ. ಈ ಮೂಲಕ್ಕೆ ಶ್ರಿಯಃ ಪತಿಯಾದ ನಾರಾಯಣನೇ ಕಾರಣನು. ಅವನೇ ಜ್ಞಾನದಾತ. ಅವನ ಕೃಪೆ ಇಲ್ಲದೆ, ಅವನ ಸಹಾಯವಿಲ್ಲದೆ, ಯಾವ ವಿದ್ಯೆಯೂ ಲಭಿಸುವುದಿಲ್ಲ. ಜ್ಞಾನಿಗಳಾದ ಋಷಿಗಳು, ಭಕ್ತರು ಎಲ್ಲ ಆಚಾರ್ಯರು, ಶ್ರೀ ಹಯಗ್ರೀವರೂಪಿಯಾದ ಪರಮಾತ್ಮನ ಧ್ಯಾನ ಚಿಂತನೆಗಳಿಂದ ಜ್ಞಾನಪಡೆದು ಶಾಶ್ವತ ಕೀರ್ತಿಗಳಿಸಿದ್ದಾರೆ. ಪರಮಾತ್ಮ ಪ್ರಾಪ್ತಿಗೆ ಆಧಾರಭೂತವಾದ ಅವತಾರ ಇದು.

ಹಯಗ್ರೀವ ಉಪಾಸನವು ವೇದಕಾಲದ ಋಷಿಗಳಿಂದ ಹಿಡಿದು ಇಲ್ಲಿಯವರೆಗೂ ನಡೆದು ಬರುತ್ತಿದೆ. ವೇದಗಳಲ್ಲಿಯೇ ಅಲ್ಲದೆ ದಿವ್ಯ ಪ್ರಬಂಧಗಳಲ್ಲಿಯೂ ಹಯಗ್ರೀವಾವತಾರದ ಮಹಿಮೆ ಕೊಂಡಾಡಲ್ಪಟ್ಟಿದೆ. ನಮ್ಮಾಳ್ವಾರವರು ರಚಿಸಿರುವ ಜಗತ್ಪ್ರಸಿದ್ಧವಾದ ಭಗವದ್ವಿಷಯದಲ್ಲಿ ಹಯಾಸ್ಯನನ್ನು ಸ್ತೋತ್ರಮಾಡಿದ್ದಾರೆ. ಅದರ ಮೊದಲ ಪದ್ಯವೇ ಹೀಗಿದೆ.

ಉಯರ್ವರ ಉಯರ್‌ನಲ ಮುಡೈಯವ ಯವನವ, ಮಯರ್ವರ ಮದಿನಲ ಮರುಳಿನ ಯವನವ,
ಆಯರ್ವರು ಮಮರರ್ ಕಳಧಿಪತಿ ಯವನವ, ತುಯರರು ಶುಡರಡಿ ತೊಳುದಳ್ಳಿ ಮನನೇ !"

ಅಪ್ರಮೇಯವಾದ ಮಹಾತ್ಮೆಯುಳ್ಳವನಾಗಿಯೂ, ನಿರತಿಶಯಾನನ್ದ ಮೂರ್ತಿಯಾಗಿಯೂ, ಅಜ್ಞಾನಾಂಧಕಾರ ಧ್ವಂಸಕನಾಗಿಯೂ, ದಿವ್ಯ ತೇಜಃ ಪ್ರಭಾವದಿಂದ ಚೇತನರಿಗೆ ಭಕ್ತ್ಯಾದಿಗಳನ್ನು ಅನುಗ್ರಹಿಸುತ್ತಿರುವವನಾಗಿಯೂ, ದಿವ್ಯಜ್ಞಾನವುಳ್ಳವನಾಗಿ ನಿತ್ಯ ಸೂರಿಗಳಿಗೆ ನಿಯಾಮಕನಾಗಿಯೂ, ಶ್ರಿಯಃ ಪತಿಯಾಗಿ ಸರ್ವ ಚೇತನರ ಸಂತಾಪಹರವಾದ ಪಾದಾರವಿಂದವುಳ್ಳವನಾಗಿಯೂ ಇರುವ ಶ್ರೀ ಹಯಾಸ್ಯನ ಉಪಾಸನೆ ಮಾಡು, ಎಲೈ-ಮನಸ್ಸೇ !

ಹಾಗೆಯೇ ಈ ದಿವ್ಯ ಪ್ರಬಂಧದ ಕೊನೆಯ ದಶಕದಲ್ಲಿಯೂ ಕೂಡ

ಮುನಿಯೇ ನಾನ್ಮುಕನೇ ! ಮುಕ್ಕಣ್ಣಪ್ಪಾ ! ಎಂಪೊಲ್ಲಾ
ಕ್ಕನಿವಾಯ್ ತಾಮರೈಕ್ಕಣ್ ಕರುಮಾಣಿಕ್ಕಮೇ ಯೆಂಕಳ್ವಾ
ತ್ತನಿಯೇ ನಾರುಯಿರೇ ಯೆಂತಲೈ ಮಿಶೈಯಾಯ್ ವನ್ಪಿಟ್ಟು,
ಇನಿನ್ನಾ ಪೋಕಲೊಟ್ಟೇ ಒನ್ರುಂ ಮಾಯಮ್ ಶೆಯ್ಯೇಲೆನ್ಮೆಯೇ ||

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇಲ್ಲಿ ಮುನಿ ರೂಪದಲ್ಲಿ ಬಂದವನು ಹಯಗ್ರೀವಸ್ವಾಮಿಯೇ ವಿನಹ ಇನ್ಯಾರೂ ಅಲ್ಲ. ಇಲ್ಲಿಯ ವಿಶೇಷಣಗಳಿಲ್ಲವೂ, ಹಯಾಸ್ಯನನ್ನು ಹೇಳಿದ್ದೇ ಎಂದು ಹೇಳಬಹುದು. ಸೃಷ್ಟ್ಯಾದಿಕಾರ್ಯಗಳಲ್ಲಿ ಚಿಂತಾಸಕ್ತನಾದವನು. ಬ್ರಹ್ಮರುದ್ರರಿಗೆ ಅಂತರಾತ್ಮನಾದವನು. ಪುಂಡರೀಕಾಕ್ಷನು. ನೀಲಮಣಿವರ್ಣನು, ಮಾಯಾ ಚೇಷ್ಟಿತನು, ಇಂತಹ ಸ್ವಾಮಿಯು ನನ್ನ ತಲೆಯ ಮೇಲೆ ಬಂದು ನಿಂತರೆ, ಬಿಡುವೆನೇ ನಾನು ನಿನ್ನನ್ನು ಬಿಟ್ಟಿರಲಾರೆನು. ಇಂತಹ ಪರಂಜ್ಯೋತಿ ಸ್ವರೂಪನಾದ ಹಯಾಸ್ಯನೇ ನನ್ನನ್ನು ವಂಚಿಸಬೇಡ ಎಂದು ನಮ್ಮಾಳ್ವಾರರು ಪ್ರಾರ್ಥಿಸಿದ್ದಾರೆ.

ಶ್ರೀಮಠದಲ್ಲಿ ಬಿಜಯಮಾಡಿಸಿರುವ ಶ್ರೀಲಕ್ಷ್ಮೀನಾರಾಯಣ, ಶ್ರೀ ಲಕ್ಷ್ಮಿ ಹಯಗ್ರೀವ ಮತ್ತು ಶ್ರೀ ಕೃಷ್ಣಪರಮಾತ್ಮನ ದಿವ್ಯ ಮಂಗಳವಿಗ್ರಹ ಮೂರ್ತಿಗಳನ್ನು ಕುರಿತು ಹಾಡಿರುವರೋ ಎನ್ನುವಂತೆ ಆಳ್ವಾರರು, ಈ ಪದ್ಯವನ್ನು ರಚಿಸಿದ್ದಾರೆ.

ಮಾನೈನೋಕ್ಕಿ ಮಡವಾಳೈ ಮಾರ್ಬಿಲ್ ಕೊಂಡರಿಯ ಮಾಧವಾ !
ಕೂನೇ ಶಿದೆಯ ಉಂಡೈವಿಲ್ ನಿಲತ್ತಿಲ್ ತೆರಿತ್ತಾಯ್, ಗೋವಿಂದಾ !
ವಾನಾರ್‌ಶೋದಿ ಮಣಿವಣ್ಣಾ ಮದುಶೂದಾ ನೀ ಅರುಳಾಯ್
ರ್ಉತೇನೇ ಮಲರುಂತಿರುಪ್ಪಾದಂ ಶೇರುಮಾರ್ ವಿನೈಯೇನೇ ||

ಮಹಾಲಕ್ಷ್ಮಿಯನ್ನು ಹೃದಯದಲ್ಲಿ ಸದಾಹೊಂದಿ ಮಾಧವನೆಂದು ಪ್ರಸಿದ್ಧನಾದ ಲಕ್ಷ್ಮೀನಾರಾಯಣನೇ ! ಗೂನಿಯನ್ನು ಅನುಗ್ರಹಿಸಿ ಸುಂದರಿಯನ್ನಾಗಿ ಮಾಡಿದ ಶ್ರೀ ಕೃಷ್ಣರೂಪಿಯಾದ ಗೋವಿಂದಾ ! ನೀಲ ಮೇಘವರ್ಣನಾಗಿ ಜ್ಞಾನಪ್ರದಾನಮಾಡುವ ಲಕ್ಷ್ಮೀ ಹಯಗ್ರೀವ ಸ್ವಾಮಿಯೇ, ಪುಷ್ಪಸದೃಶವಾದ ನಿನ್ನ ಚರಣಕಮಲಗಳನ್ನು ಸೇರುವಂತೆ ಕೃಪೆಮಾಡು ಸ್ವಾಮಿ ಎಂದು ಆಳ್ವಾರರು ಭಕ್ತಿ ಪೂರ್ವಕವಾಗಿ ಹಾಡಿದ್ದಾರೆ.

ಕ್ಷೀರಸಾಗರತರಂಗಶೀಕರಾಸಾರತಾರಕಿತಚಾರು ಮೂರ್ತಯೇ
ಭೋಗಿಭೋಗಶಯನೀಯಶಾಯಿನೇ ಮಾಧವಾಯ ಮಧುವಿದ್ವಿಷೇ ನಮಃ !

ಕ್ಷೀರಸಾಗರದ ಶೀತಲವಾದ ತರಂಗಗಳ ಮೇಲೆ ಶೇಷಶಯನನಾಗಿ ಮಧು ಕೈಟಭರನ್ನು ಸಂಹಾರಮಾಡಿದ ಲಕ್ಷ್ಮೀಸಮೇತನೂ ಮನಮೋಹನಸ್ವರೂಪನೂ ಆದ ದಿವ್ಯ ಮೂರ್ತಿಯಾದ ಹಯಾಸ್ಯನೇ ನಿನಗೆ ನಮಸ್ಕಾರ ಎಂದರು ಕುಲಶೇಖರಾಳ್ವಾರರು.

ವಾಲ್ಮೀಕಿ ಅಂಶದಿಂದ ಜನಿಸಿದ ತಿರುಮಂಗೈಯಾಳ್ವಾರರು ತಮ್ಮ ದಿವ್ಯ ಪ್ರಬಂಧದ ಐದು ಮತ್ತು ಏಳನೆಯ ಶತಕಗಳಲ್ಲಿ ಶ್ರೀ ಹಯಗ್ರೀವಾವತಾರವನ್ನು ಕುರಿತು ಹಾಡಿದ್ದಾರೆ.

ವೇದಾಪಹಾರ ಗುರುಪಾತಕ ದೈತ್ಯಪೀಡಾ | ದ್ಯಾಪದ್ವಿಮೋಚನ ಮಹಿಷ್ಪಫಲಪ್ರದಾನೈಃ ||
ಕೋನ್ಯಃ ಪ್ರಜಾ ಪಶುಪತೀ ಪರಿಪಾತಿ ಕಸ್ಯ | ಪಾದೋದಕೇನ ಸಶಿವಸ್ಸಶಿರೋಧೃತೇನ ||

ಎಂದರು ಯಾಮುನಾಚಾರ್ಯರು.

ಭಗವದ್ರಾಮಾನುಜರ ಪ್ರಿಯಶಿಷ್ಯರಾದ ಪರಾಶರ ಭಟ್ಟರು ರಂಗರಾಜ ಸ್ತವದಲ್ಲಿ ಹೀಗೆ ಹೇಳಿದ್ದಾರೆ.

ಮಧು ಕೈಟಭಶ್ಚೇತಿರೋದ್ಧಂ ವಿಭೂಯ ತ್ರಯೀ ದಿವ್ಯ ಚಕ್ಷುರ್ವಿಧಾತುರ್ವಿಧಾಯ |
ಸ್ಮರಸ್ಯಂಗ | ರಂಗಿಸ್ತುರಂಗಾವತಾರಃ ಸಮಸ್ತಂ ಜಗಜ್ಜೀವಯಿಷ್ಯಸ್ಯ ಕಸ್ಮಾತ್ ||

ಮೇಲೆ ಕಂಡಂತೆ ಶಿಷ್ಟಾಚಾರ ಪರಂಪರೆಯಿಂದ ಶ್ರೀ ಹಯಗ್ರೀವ ಉಪಾಸನೆಯ ಫಲವು ರಾಮಾನುಜರಿಗೆ ಸಾಕ್ಷಾತ್ ಶಾರಾದಾದೇವಿಯಿಂದ ಲಭಿಸಿತು. ಇಂತಹ ದಿವ್ಯಮೂರ್ತಿಯನ್ನು ಅವರು ಬಹುಕಾಲ ಆರಾಧಿಸುತ್ತಿದ್ದು ಅನಂತರ ಶಿಷ್ಯ ಪರಂಪರೆಗೆ ಲಭ್ಯವಾಗಿ, ಶ್ರೀಮನ್ನಿಗಮಾಂತಮಹಾದೇಶಿಕರ ವಶವಾಯಿತು. ಅವರು ತಮ್ಮ ಜ್ಞಾನ ಪುತ್ರರಾದ ಬ್ರಹ್ಮತಂತ್ರ ಜೀಯರಿಗೆ ಆರಾಧನೆಗಾಗಿ ಅನುಗ್ರಹಿಸಿದರು. ಬ್ರಹ್ಮತಂತ್ರ ಸ್ವತಂತ್ರ ಬಿಜಯ ಮಾಡಿಸಿದರು. ಅಂದಿನಿಂದ ಶ್ರೀ ಹಯಾಸ್ಯನ ದಿವ್ಯಮಂಗಳ ವಿಗ್ರಹವು, ಶ್ರೀ ಪರಕಾಲಮಠದ ಯತಿವರ್ಯರಿಂದ ಇಂದಿನವರೆಗೆ ಪೂಜಿಸಲ್ಪಡುತ್ತ ಬರುತ್ತಿದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಈ ಚರಿತ್ರಾತ್ಮಕ ವಿಷಯವನ್ನು ಶ್ರೀ ರಾಮಾನುಜರ ಶಿಷ್ಯರಾದ ಆಂಧ್ರಪೂರ್ಣರು ಯತಿರಾಜ ವೈಭವದಲ್ಲಿ ಹೀಗೆ ವಿವರಿಸಿದ್ದಾರೆ.

ಯದ್ಭಾಷ್ಯ ಮಾವೃತ್ಯ ನಿಧಾಯ ಮೂರ್ಧ್ನಿ ಶ್ರೀ ಭಾಷ್ಯಮೇತತ್ ವರಭಾಷ್ಯಕೃತ್ಭಂ |
ಇತೀಚ ತಸ್ಮೈ ಪ್ರದದೇ ಚ ದೇವೀ ಭಾಷ್ಯಂ ಹಯಗ್ರೀವಮಪಿ ಸ್ವಕೀಯಂ ||

ವಿದ್ಯಾಧಿದೇವತೆಯಾದ ಹಯಗ್ರೀವಾನುಗ್ರಹದಿಂದಲೇ ವೈಷ್ಣವಾಗ್ರೇಸರರಾದ ಪೂರ್ವಾಚಾರ್ಯರು, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸಂಶಯಾಸ್ಪದವಿಲ್ಲದೆ, ಶ್ರುತಿಯ ಆಧಾರದಿಂದ ಪ್ರತಿಷ್ಠಾಪನೆ ಮಾಡಿದರು ಎಂಬ ಅಂಶವನ್ನು ಶ್ರೀ ವೇದಾಂತ ದೇಶಿಕರು ತಿಳಿಸಿದ್ದಾರೆ

ನಾಥೋಪಜ್ಞಂ ಪ್ರವೃತ್ತಂ ಬಹುಭಿರುಪಚಿತಂ ಯಾಮುನೇಯ ಪ್ರಬಂಧೈಃ
ತ್ರಾತಂ ಸಮ್ಯಗ್ಯತೀಂದ್ರೈಃ ಇಹನಿಖಿಲತನುಃ ಕರ್ಶನಂ ದರ್ಶನಂ ನಃ ||

ಭಗವದ್ರಾಮಾನುಜರಿಗೆ ಹಯಗ್ರೀವ ಮೂರ್ತಿ ಪ್ರಾಪ್ತವಾದ ವಿಷಯವನ್ನು ಶ್ರೀ ಲಕ್ಷ್ಮೀಹಯಗ್ರೀವದಿವ್ಯಪಾದುಕಾಸೇವಕ ಶ್ರೀಮದಭಿನವರಂಗನಾಥ ಬ್ರಹ್ಮತಂತ್ರ ಯತೀಂದ್ರರು, ಹೀಗೆ ನಿರೂಪಿಸಿದ್ದಾರೆ.

ಭಾಷ್ಯಂ ಯಸ್ಯ ನಿಶಮ್ಯ ಲಕ್ಷ್ಮಣಮುನೇಃ ಕೌತೂಹಲಾತ್ ಭಾರತೀ
ಸೂತ್ರಾಣಾಮಿದಮುತ್ತಮಂ ವಿವರಣಂ ನಿಶ್ಚಿತ್ಯಮಾನಾನುಗಂ |
ವಾಗೀಶಸ್ಯ ನಿಜಪ್ರಿಯಾಯ ನಿಖಿಲಾ ವೇದಾ ಪ್ರದಾತುಶ್ಶುಭಾಂ
ಮೂರ್ತಿಂ ಸ್ವೇನ ಸದರ್ಚಿತಾಂ ಸಮದದಾದ್ಯಸ್ಮೈ ಸಜೇಯಾನ್ಮುನಿಃ ||

ಶ್ರೀ ವೇದಾಂತ ದೇಶಿಕರು ತಮಗೆ ಜ್ಞಾನಶಕ್ತಿಗಳು ಶ್ರೀ ಹಯಗ್ರೀವ ಸ್ವಾಮಿಯಿಂದಲೇ ಪ್ರಾಪ್ತವಾಯಿತೆಂದೂ, ಅದರಿಂದಲೇ ತಮಗೆ ಗ್ರಂಥರಚನಾ ಶಕ್ತಿ ಉಂಟಾಯಿತೆಂದೂ ತಿಳಿಸಿದ್ದಾರೆ. ಶ್ರೀ ಲಕ್ಷ್ಮೀಹಯಾಸ್ಯನನ್ನು ಸಾಕ್ಷಾತ್ಕರಿಸಿಕೊಂಡ ಮಹಾಮಹಿಮರು ಅವರು. ಸ್ವಾಮಿಯೇ ತಮ್ಮ ಹೃದಯದಲ್ಲಿ ನಿಂತು ವಾಗ್ರೂಪಿಯಾಗಿ ಸಕಲವೇದಾರ್ಥಸಾರವನ್ನೂ, ತತ್ವಗಳನ್ನೂ, ಗುಣಗಳನ್ನೂ ಸಕಲಶಾಸ್ತ್ರ ಕಲಿಸುವ ಶಕ್ತಿಯನ್ನೂ ಅನುಗ್ರಹಿಸಿದುದಲ್ಲದೆ, ಅವನೇ ವಕ್ತನೂ ಬೋಧಕನೂ ಆಗಿರುತ್ತಾನೆಂದು ಪದೇ ಪದೇ ತಮ್ಮ ಗ್ರಂಥಗಳಲ್ಲಿ ನಿರೂಪಿಸಿದ್ದಾರೆ.

"ವಕ್ತ್ರೇತಸ್ಯ ಸರಸ್ವತೀ ಬಹುಮುಖೀ ಭಕ್ತಿಃ ಪರಾಮಾನಸೇ |
ಶುದ್ಧಿಃ ಕ್ವಾಪಿತನೌ ದಿಶಾಸು ದಶಸು ಖ್ಯಾತಿಃ ಪರಾಜೃಂಭತೇ ||"
"ಹೃದ್ಯಾಃ ಹೃತ್ಪದ್ಮ ಸಿಂಹಾಸನರಸಿಕ ಹಯಗ್ರೀವ ಹೇಷೋರ್ಮಿಘೋಷಃ"
"ಜಿಗೀಷಿತೋವಿಮೇ ಕರಿತಾರ್ಕಿಕೇಂದ್ರಾ ಜಿಹ್ವಾಗ್ರಸಿಂಹಾಸನ ಮಭ್ಯುಪೇಯಾ"
"ಆಧಾರಂ ಸರ್ವವಿದ್ಯಾನಾಂ ಹಯಗ್ರೀವಮುಪಾಸ್ಮಹೇ"

ಇತ್ಯಾದಿ ಉಕ್ತಿಗಳಿಂದ ಶ್ರೀ ಹಯಗ್ರೀವ ಸ್ವಾಮಿಯ ಮಹಿಮೆಯನ್ನು ಕೊಂಡಾಡಿದ್ದಾರೆ.

ಮೂವತ್ತೊಂದು ಶ್ಲೋಕಗಳನ್ನೊಳಗೊಂಡ ಹಯಗ್ರೀವ ಸ್ತೋತ್ರದಲ್ಲಿ ನಿಗಮಾಂತ ಮಹಾದೇಶಿಕರು, ಹಯಾಸ್ಯನನ್ನು ಸ್ತೋತ್ರಮಾಡಿ, ಸ್ವಾಮಿಯನ್ನು ಸಾಕ್ಷಾತ್ಕರಿಸಿಕೊಂಡು, ಅವನ ರೂಪಧ್ಯಾನ ಪದವಿಯನ್ನು ಎಲ್ಲರೂ ಪಡೆಯಲಿ ಎಂದು ಕೃಪೆಯಿಂದ ವಿವರಿಸಿದ್ದಾರೆ.

ವ್ಯಾಖ್ಯಾಮುದ್ರಾಂ ಕರಸರಸಿಚ್ಹೈಃ ಪುಸ್ತಕಂ ಶಂಖಿಚಕ್ರೇ
ಬಿಭ್ರದ್ಧಿನ್ನ ಸ್ಫಟಿಕ ರುಚಿರೇ ಪುಂಡರೀಕೇ ನಿಷಣ್ಣಃ
ಆಮ್ಲಾನ ಶ್ರೀರಮೃತ ವಿಶದೈ ರಂಶುಭಿಃ ಪ್ಲಾವಯನ್ಮಾ
ಮಾವಿರ್ಭೂಯಾದನಘ ಮಹಿಮಾ ಮಾನಸೇ ವಾಗಧೀಶಃ ||

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತನ್ನ ನಾಲ್ಕು ಕೈಗಳಲ್ಲಿ ಹಯಾಸ್ಯನು, ಒಂದು ಕೈಯ್ಯಲ್ಲಿ ಶಂಖ, ಒಂದು ಕೈಯ್ಯಲ್ಲಿ ಚಕ್ರವನ್ನೂ ಧರಿಸಿದ್ದಾನೆ. ಬಲಗೈಯಲ್ಲಿ ಉಪದೇಶ ಮುದ್ರೆಯನ್ನೂ, ಐಡಗೈಯ್ಯಲ್ಲಿ ಪುಸ್ತಕವನ್ನೂ ಹಿಡಿದು, ಭಗವಂತನು ನಮ್ಮ ಅಜ್ಞಾನಾಂಧಕಾರವನ್ನು ಕಳೆದು ತತ್ವಜ್ಞಾನವನ್ನುಪದೇಶಿಸುತ್ತಾನೆ. ಆಗತಾನೆ ಒಡೆದ ಸ್ಫಟಿಕ ಮಣಿಯಂತೆ ಶುಭ್ರವೂ, ಸ್ವಚ್ಛವೂ, ಧವಳವೂ ಆದ ಮನೋಹರವಾದ ಬಿಳಿಯ ತಾವರೆಯ ಮೇಲೆ ಕುಳಿತಿದ್ದಾನೆ. ಲಕ್ಷ್ಮೀ ಸಮೇತನಾದ ಹಯಗ್ರೀವನು ಹೊರಹೊಮ್ಮುವ ಕಾಂತಿಯಿಂದ ವಿರಾಜಮಾನನಾಗಿದ್ದಾನೆ 'ಅಮ್ಲಾನ ಶ್ರೀಃ' ಎಂಬುದರಿಂದ ಲಕ್ಷ್ಮಿಯು ಎಂದೆಂದೂ ಕಾಂತಿಯುಕ್ತಳಾಗಿಯೇ ಇರುವಳೆಂದೂ, ಕುಂದದ ಕಾಂತಿಯುಳ್ಳ ಶ್ರೀ ದೇವಿಯ ನಿತ್ಯಯೋಗ ಸ್ವಾಮಿಗೆ ಇರುವುದೆಂದೂ ಸೂಚಿತವಾಗಿದೆ. ವಿದ್ಯಾಧಿದೇವನಾದ ಹಯಾಸ್ಯನ ಕರುಣಾಕಟಾಕ್ಷಗಳು ಅಮೃತಾಯಮಾನವಾಗಿ ನಮಗೆ ಉಜ್ಜೀವಕವಾಗಿವೆ. ಇಂತಹ ದೇವದೇವನು ಸರ್ವಕಾಲದಲ್ಲಿ ನಮ್ಮ ಮನಸ್ಸಿನಲ್ಲಿ ನೆಲಸಿ, ದಿವ್ಯಮಂಗಳ ವಿಗ್ರಹದ ದರ್ಶನ ಕೊಟ್ಟು ರಕ್ಷಿಸಲಿ ಎಂದು ಆಚಾರ್ಯರು ಪ್ರಾರ್ಥಿಸಿದ್ದಾರೆ.

ಭಗವದ್ರಾಮಾನುಜ ಸಿದ್ಧಾಂತ ನಿರ್ಧಾರಣ ಸಾರ್ವಭೌಮರೆಂದು ಪ್ರಸಿದ್ಧರಾದ ನಿಗಮಾಂತ ಮಹಾದೇಶಿಕರು ಆರಾಧಿಸಿ, ಕೃಪೆಯಿಂದ ಪರಂಪರಾನುಗತವಾಗಿ ಶ್ರೀ ಪರಕಾಲ ಮಠದಲ್ಲಿ ವಿರಾಜಮಾನವಾಗಿರುವಂತೆ ಅನುಗ್ರಹಿಸಿದ ಶ್ರೀ ಲಕ್ಷ್ಮೀಹಯಗ್ರೀವ ಸ್ವಾಮಿಯ ದಿವ್ಯ ಮಂಗಳ ವಿಗ್ರ ಅರ್ಚಾಮೂರ್ತಿಯನ್ನು ಎಲ್ಲರೂ ಇಂದು ದರ್ಶನ ಮಾಡಿ ಕೃತಾರ್ಥರಾಗಬಹುದು. ಅಂತಹ ಅವಕಾಶವನ್ನು ನಿಮಗೆ ಪದೇ ಪದೇ ಶ್ರೀ ಹಯಾಸ್ಯನೇ ಕರುಣಿಸಲಿ, ಎಂದು ಶ್ರೀಶ್ರೀಗಳು ತಮ್ಮ ಭಾಷಣವನ್ನು ಮುಕ್ತಾಯ ಮಾಡಿದರು.

ಇಂತಹ ಪವಿತ್ರ ಪ್ರಾಚೀನ ಶ್ರೀಮಠವೂ, ದಕ್ಷರೂ, ವಿಚಕ್ಷಣರೂ, ಅನುಭವಿಗಳೂ, ಉತ್ಸಾಹಶಾಲಿಗಳೂ ಆಗಿರುವ ಯತಿಶ್ರೇಷ್ಠರೂ ಇರುವಲ್ಲಿ ಶ್ರೀಮಠದ ಪುರೋಭಿವೃದ್ಧಿ ಏಕಪ್ರಕಾರವಾಗಿ ಮುಂದುವರಿದು, ಶಿಷ್ಯಾನುಗ್ರಹವೂ, ಸಿದ್ಧಾಂತ ಪ್ರಚಾರವೂ ಅವಿಚ್ಛಿನ್ನವಾಗಿ ನಡೆಯುವಂತೆ, ಶ್ರೀ ಲಕ್ಷ್ಮೀಹಯಗ್ರೀವ ಸ್ವಾಮಿಯು ಕರುಣಿಸುವುದರಲ್ಲಿ ಸಂದೇಹವಿಲ್ಲ.

ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ
ಮಹಾದೇಶಿಕರ ಧರ್ಮ ದಿಗ್ವಿಜಯ ಯಾತ್ರಾ
19-3-73 ರಿಂದ 39-4-73

ತಿರುಪತಿ ಕ್ಷೇತ್ರದರ್ಶನ

ತಿರುಪತಿ ಕ್ಷೇತ್ರದ ಶ್ರೀ ವೇದಾಂತ ದೇಶಿಕ ಸುಧಾ ಸ್ವಾದಿನೀ ಸಭೆಯು ಬಿಹಾರ್ ರಾಜ್ಯದ ವಿಶ್ರಾಂತ ಗೌವರ್ನರ್ ಶ್ರೀ ಅನಂತಶಯನಂ ಅಯ್ಯಂಗಾರ್ಯರ ಆಶ್ರಯದಲ್ಲಿ ಒಂದು ಸ್ವಾಗತ ಸಮಿತಿಯನ್ನು ಚುನಾಯಿಸಿ ಮೈಸೂರು ಶ್ರೀ ಪರಕಾಲ ಮಠಾಧೀಶರನ್ನು ತಿರುಪತಿಗೆ ಆಹ್ವಾನಿಸಿತು. ಸಮಿತಿಯ ಸದಸ್ಯರು ಮೈಸೂರಿಗೆ ಬಂದು ಶ್ರೀ ಶ್ರೀಗಳವರನ್ನು ಪ್ರತ್ಯಕ್ಷದಲ್ಲಿ ಕಂಡು, ತಿರುಪತಿ ಕ್ಷೇತ್ರಕ್ಕೆ ದಯ ಮಾಡಿಸಿ ಮಂಗಳಾಶಾಸನ ಮಾಡಬೇಕೆಂದು ಪ್ರಾರ್ಥಿಸಿದ ಪ್ರಕಾರ, ಶ್ರೀ ಶ್ರೀಗಳು 18-3-73ರ ಮಧ್ಯಾಹ್ನ ಮೈಸೂರಿನಿಂದ ಪ್ರಯಾಣಮಾಡಿ, ರಾತ್ರಿ ಬೆಂಗಳೂರು ಶ್ರೀಮಠದಲ್ಲಿ ತಂಗಿದ್ದು, ಮಾರನೆಯ ದಿನ ಇಜ್ಯಾರಾಧನೆಯಾದ ಮೇಲೆ ಮುಂದಕ್ಕೆ ಹೊರಟು ಸಾಯಂಕಾಲ 8 ಘಂಟೆಗೆ ಚಿತ್ತೂರನ್ನು ತಮ್ಮ ಪರಿವಾರ ಸಮೇತ ಸೇರಿದರು.

ಚಿತ್ತೂರು ಶ್ರೀ ರಾಮನಿವಾಸ ಮಂಡಳಿಯ ಸದಸ್ಯರು ಶ್ರೀ ಶ್ರೀಗಳವರನ್ನು ವೈಭವಪೂರಿತವಾಗಿ ಸ್ವಾಗತಿಸಿ ಮಂಡಳಿಯ ವಿಶಾಲವಾದ ಭವ್ಯವಾದ ಕಟ್ಟಡಕ್ಕೆ ಮೆರವಣಿಗೆಯಲ್ಲಿ ಕರೆತಂದರು. ರಾತ್ರಿ ಅಲ್ಲಿ ಶ್ರೀ ಲಕ್ಷ್ಮೀಹಯಗ್ರೀವ ದೇವರಿಗೆ ವಜ್ರದ ಡೋಲೋತ್ಸವದ ಏರ್ಪಾಡು ಮಾಡಿದರು. ದೇವರ ಸೇವೆಗಾಗಿ ನೂರಾರುಮಂದಿ ಸೇರಿದ್ದರು. ಶ್ರೀ ಶ್ರೀಗಳು ನೆರೆದಿದ್ದವರನ್ನು ಕುರಿತು ಶ್ರೀ ಲಕ್ಷ್ಮೀಹಯಗ್ರೀವ ದೇವರ ಮಹಿಮೆ, ವಿದ್ಯೆ ಮತ್ತು ಜ್ಞಾನವನ್ನು ಕೊಡತಕ್ಕ ಪ್ರಧಾನ ಅವತಾರವೆಂದು ಸುಮಾರು ಅರ್ಧಗಂಟೆ ತೆಲುಗು ಭಾಷೆಯಲ್ಲಿ ಭಾಷಣ ಮಾಡಿದರು. ನೆರೆದಿದ್ದವರಿಗೆಲ್ಲಾ ತೀರ್ಥಪ್ರಸಾದ ವಿನಿಯೋಗವಾದ ಮೇಲೆ, ಶ್ರೀ ಶ್ರೀಗಳು ಅವರಿಗೆಲ್ಲಾ ಫಲ ಮಂತ್ರಾಕ್ಷತೆ ಅನುಗ್ರಹಿಸಿದರು.

ಮಾರನೆಯ ದಿನ ಅಂದರೆ 20-3-73ರ ಮಧ್ಯಾಹ್ನ ಎರಡು ಗಂಟೆಗೆ ಚಿತ್ತೂರನ್ನು ಬಿಟ್ಟು ಶ್ರೀ ಶ್ರೀಗಳು ತಮ್ಮ ಪರಿವಾರ ಸಮೇತ ತಿರುಪತಿಗೆ ಬರುವ ವೇಳೆಗೆ ಸಾಯಂಕಾಲ ನಾಲ್ಕುಘಂಟೆ. ಗೋವಿಂದರಾಜ ಪಟ್ಟಣದ ಗಡಿಯಲ್ಲಿ ಸುಧಾಸ್ವಾದಿನೀ ಸಭೆಯ ಸದಸ್ಯರು,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತಿರುಮಲೆ ದೇವಸ್ಥಾನದ ಡೆಪ್ಯುಟಿ ಎಕ್ಸಿಕ್ಯುಟೀವ್ ಆಫೀಸರು, ಶ್ರೀ ಅನಂತಶಯನಂ ಅಯ್ಯಂಗಾರ್ಯರು, ಇತರ ಪುರಪ್ರಮುಖರು, ದೇವಸ್ಥಾನದ ಸಕಲ ಮರ್ಯಾದೆಯಿಂದ ಶ್ರೀ ಶ್ರೀಗಳವರಿಗೆ ಭವ್ಯವಾದ ಸ್ವಾಗತವಿತ್ತರು. ಶ್ರೀಮಠದ ಪಲ್ಲಕ್ಕಿಯನ್ನು ತರಿಸಿ, ವೈಭವಯುತವಾಗಿ ಅಲಂಕರಿಸಿ, ಶ್ರೀಶ್ರೀಗಳ ಮೆರವಣಿಗೆಗೆ ಅಲ್ಲಿಯೇ ಸಿದ್ಧಪಡಿಸಿದ್ದರು. ಕುಶಲ ಸಂಭಾಷಣೆಗಳಾದ ಮೇಲೆ ಹಾರ, ಪುಷ್ಪ, ಫಲ ಸಮರ್ಪಣೆಯಾದ ನಂತರ ಶ್ರೀ ಲಕ್ಷ್ಮೀಹಯಗ್ರೀವ ದೇವರನ್ನು ಹೊಸದಾಗಿ ಮಾಡಿಸಿದ ಮೇನಾದಲ್ಲಿ ಬಿಜಯಮಾಡಿಸಲಾಯಿತು. ಶ್ರೀ ಶ್ರೀಗಳವರು ಪಲ್ಲಕ್ಕಿಯಲ್ಲಿ ಮಂಡಿಸಿದರು. ದೇವಸ್ಥಾನದ ಛತ್ರಿ, ಚಾಮರ, ಭಲ್ಲೆ, ನಡುಚಪ್ಪರ ಇತ್ಯಾದಿ ಸಕಲ ಮರ್ಯಾದೆ ಸಮೇತ, ಶ್ರೀ ಶ್ರೀಗಳ ಮೆರವಣಿಗೆ ಹೊರಟಿತು ಇಂತಹ ಅಭೂತಪೂರ್ವ ಉತ್ಸವವನ್ನು ಅಲ್ಲಿಯ ಜನರು ನೋಡಿ ಬಹುಕಾಲವಾಯಿತೆಂದು ಹೇಳಿಕೊಳ್ಳುತ್ತಿದ್ದರು. ಮೆರವಣಿಗೆ ಸುಮಾರು ಅರ್ಧಮೈಲಿದೂರವಿತ್ತು. ಉತ್ಸವದಲ್ಲಿ ತಿರುಪತಿ ದೇವಸ್ಥಾನದ ಡೆಪ್ಯುಟಿ ಎಕ್ಸಿಕ್ಯೂಟಿವ್ ಅಫೀಸರು, ಶ್ರೀ ಅನಂತಶಯನಂ ಅಯ್ಯಂಗಾರ್ಯರು ಸ್ವಾಗತ ಸಮಿತಿಯ ಸದಸ್ಯರು, ವಿಶ್ವವಿದ್ಯಾನಿಲಯದ ಅಧ್ಯಾಪಕರು, ವಕೀಲರು, ಪುರಪ್ರಮುಖರು, ಗೋವಿಂದರಾಜಸ್ವಾಮಿ ದೇವಾಲಯದ ಕಾರ್ಯನಿರ್ವಾಹಕರು, ಇತ್ಯಾದಿ ಬಹುಮಂತಿ ಸೇರಿದ್ದರು. ಉತ್ಸವವು ಗಾಂಧಿರಸ್ತೆ, ರಥದಬೀದಿ, ಮೂಲಕ ಗೋವಿಂದರಾಜಸ್ವಾಮಿ ದೊಡ್ಡ ಗೋಪುರದ ಹತ್ತಿರ ಬರುವವೇಳೆಗೆ ದೇವಸ್ಥಾನದ ಶತಗೋಪುರ ಮರ್ಯಾದೆಯಿಂದ ಅರ್ಚಕರು, ಇತರ ಅಧಿಕಾರಿಗಳು ಶ್ರೀ ಶ್ರೀಗಳವರನ್ನು ಗೌರವ ಪೂರ್ವಕವಾಗಿ ಸ್ವಾಗತಿಸಿದರು.

ಸ್ವಾಮಿಗಳು ಗೋಪುರದ ಹತ್ತಿರ ಪಲ್ಲಕ್ಕಿಯಿಂದ ಇಳಿದು ಸಕಲ ಮರ್ಯಾದೆ ಸಮೇತ ಗೋವಿಂದರಾಜಸ್ವಾಮಿ ಸನ್ನಿಧಿ, ಆಂಡಾಳ ಸನ್ನಿಧಿ, ಪುಂಡರೀಕವಲ್ಲಿ ಅಮ್ಮನವರ ಸನ್ನಿಧಿ, ಇತರ ಆಳ್ವಾರಾಚಾರ್ಯರ ಸನ್ನಿಧಿಗೆ ದಯಮಾಡಿಸಿ, ದರ್ಶನಪಡೆದು, ವಸ್ತ್ರಾದಿಗಳನ್ನು ಅರ್ಪಿಸಿ, ತೀರ್ಥಪ್ರಸಾದ ಸ್ವೀಕರಿಸಿದರು. ಅನಂತರ ಪುನಃ ಪಲ್ಲಕ್ಕಿಯಲ್ಲಿ ಕುಳಿತು, ದೇವಸ್ಥಾನದ ಸುತ್ತಲಿರುವ ನಾಲ್ಕು ಬೀದಿಗಳಲ್ಲಿ ಮೆರವಣಿಗೆಯಾಗಿ ದಯಮಾಡಿಸಿ, ಅಲ್ಲಿಯ ಶ್ರೀ ಪರಕಾಲಮಠವನ್ನು ಸೇರುವ ವೇಳೆಗೆ ರಾತ್ರಿ 8 ಗಂಟೆಯಾಯಿತು. ಆ ರಾತ್ರಿ ಶ್ರೀ ಮಠದಲ್ಲಿ ನಡೆದ ಹಯಗ್ರೀವಸ್ವಾಮಿಯ ಆರಾಧನೆ ವೇಳೆಯಲ್ಲಿ ನೂರಾರು ಮಂದಿ ದೇವರ ದರ್ಶನ ಪಡೆದರು. ದೇವಸ್ಥಾನದ ಆನೆ, ಕುದುರೆ, ಛತ್ರಿ ಚಾಮರ, ಬಾಜಾಭಜಂತ್ರಿ ಎಲ್ಲವೂ ಉತ್ಸವಕ್ಕೆ ವೈಭವ ಪೂರಿತವಾದ ಕಳೆಯನ್ನು ನೀಡಿದವು.

21-3-73ರ ಬೆಳಿಗ್ಗೆ ಅಭಿಗಮನ ಆರಾಧನೆ ಆದ ಮೇಲೆ 3-15 ಘಂಟೆಗೆ ಸರಿಯಾಗಿ ಶ್ರೀ ಶ್ರೀಗಳು ತಮ್ಮ ಪರಿವಾರ ಸಮೇತ ತಿರುಚ್ಚಾನೂರಿಗೆ ಪ್ರಯಾಣ ಮಾಡಿದರು. ಊರು ಇನ್ನು ಎರಡು ಫರ್ಲಾಂಗು ದೂರ ಇದೆ ಎನ್ನುವಾಗ, ಪಂಚಮ ತೀರ್ಥಪಡಿ ಮೋಡೆ ಎಂಬ ಸ್ಥಳದಲ್ಲಿ, ದೇವಸ್ಥಾನದ ಸಕಲ ಸಮಸ್ತ ಮರ್ಯಾದೆಯಿಂದ ಅರ್ಚಕರು, ಅಧಿಕಾರಿಗಳು, ಅನಂತಶಯನಂ ಅಯ್ಯಂಗಾರ್ಯರು, ಸಭೆಯ ಸದಸ್ಯರು ಶ್ರೀ ಶ್ರೀಗಳವರಿಗೆ ಅದ್ಭುತ ಸ್ವಾಗತವಿತ್ತರು. ಶ್ರೀ ಶ್ರೀಗಳವರನ್ನು ಪಲ್ಲಕ್ಕಿಯಲ್ಲಿ ಬಿಜಯಮಾಡಿಸಿ, ವೇದಪಠಣ ವಾದ್ಯಘೋಷ, ಆಚಾರ್ಯ ಘೋಷಣೆ ಸಮೇತ, ತಿರುಚ್ಚಾನೂರು ನಾಲ್ಕು ಬೀದಿಗಳಲ್ಲಿ ಮೆರವಣಿಗೆಯಲ್ಲಿ ಕರೆತರಲಾಯಿತು. ದಾರಿಯುದ್ದಕ್ಕೂ ನಾಲ್ಕಾರು ಕಡೆ ಪೂರ್ಣಕುಂಭ ಮರ್ಯಾದೆ, ಆರತಿ, ಫಲಪುಷ್ಪ ಸಂಭಾವನಾದಿಗಳನ್ನು ಭಕ್ತರು ಅರ್ಪಿಸಿದರು. ಹೀಗೆ ವೈಭವಪೂರಿತ ಉತ್ಸವವು ಪದ್ಮಾವತಿ ಅಮ್ಮನವರ ದೊಡ್ಡ ಗೋಪುರದ ಎದುರಿಗೆ ಬಂದಾಗ ದೇವಸ್ಥಾನದ ಮಹಾದ್ವಾರವು ಇನ್ನೂ ನೂರುಗಜ ದೂರವಿದೆಯೆನ್ನುವಾಗ ದೇವಸ್ಥಾನದ ಶತಗೋಪುರ, ಪರಿವಟ್ಟ, ಮಾಲೆಮರ್ಯಾದೆಯಿಂದ ಶ್ರೀಶ್ರೀಗಳವರನ್ನು ಎದುರುಗೊಂಡು, ಗೌರವ ಸಲ್ಲಿಸಲಾಯಿತು. ಶ್ರೀ ಶ್ರೀಗಳು ಪರಿವಟ್ಟ ಸಮೇತ ಅಮ್ಮನವರ ಸನ್ನಿಧಿಗೆ ಬಂದು ಮಂಗಳಾಶಾಸನಮಾಡಿದರು. ಶ್ರೀಸ್ತುತಿ ಸ್ತೋತ್ರ ಪಾರಾಯಣ ಮಾಡಲಾಯಿತು. ಅಮ್ಮನವರಿಗೆ ಅಷ್ಟೋತ್ತರ ಅರ್ಚನೆ ಆಯಿತು. ಶ್ರೀಮಠದ ಪರವಾದಿ ತಂದಿದ್ದ ರೇಷ್ಮೆ ಸೀರೆಯನ್ನು ಅಮ್ಮನವರಿಗೆ ಧರಿಸಲಾಯಿತು. ಮಂಗಳಾರತಿ, ಮಾಲೆ, ಪರಿವಟ್ಟ, ತೀರ್ಥ ವಿನಿಯೋಗ ಆದ ಮೇಲೆ, ಶ್ರೀ ಶ್ರೀಗಳವರು ಅಂತರಂಗದಿಂದ ಸುಮಾರು 10-15 ನಿಮಿಷ ಕಾಲ ಅಮ್ಮನವರ ದರ್ಶನಮಾಡಿ ಮಂಗಳಾಶಾಸನ ಮಾಡಿದರು. ಅನಂತರ ಸುಂದರರಾಜಸ್ವಾಮಿ, ಶ್ರೀಕೃಷ್ಣ ದೇವರ ಸನ್ನಿಧಿಗೆ ದಯಮಾಡಿಸಿ, ತೀರ್ಥ, ಮಾಲೆ, ತುಳಸಿ ಪ್ರಸಾದ ಸ್ವೀಕರಿಸಿ, ಪ್ರದಕ್ಷಿಣವಾಗಿ, ಬಾಜಾಭಜಂತ್ರಿ ಸಮೇತ ದೇವಸ್ಥಾನದ ಮುಂದೆ ಇರುವ ಕಲ್ಯಾಣಮಂಟಪದಲ್ಲಿ ಶ್ರೀ ಶ್ರೀಗಳು ಮಂಡಿಸಿದರು. ದೇವಸ್ಥಾನದ ಅರ್ಚಕರು, ಬೆಂಗಳೂರಿನಿಂದ ಬಂದಿದ್ದ ಶ್ರೀ ಸಂಪತ್ಕುಮಾರ ಭಟ್ಟರು ಶ್ರೀ ಶ್ರೀಗಳವರಿಗೆ ಸ್ವಾಗತವನ್ನಿತ್ತು ಭಾಷಣ ಮಾಡಿದರು. ಶ್ರೀಶ್ರೀಗಳು ಅವರ ಕೋರಿಕೆಯ ಮೇರೆಗೆ, ಅಲ್ಲಿ ನೆರೆದಿದ್ದವರಿಗೆ ಚೆನ್ನಾಗಿ ತಿಳಿಯುವಂತೆ ತೆಲುಗು ಭಾಷೆಯಲ್ಲಿ ಆಸ್ತಿಕತೆ ಭಗವದ್ಭಕ್ತಿ ಮುಂತಾದ ವಿಷಯಗಳನ್ನು ತಿಳಿಸಿ, ಇಲ್ಲಿಗೆ ಬರುವ ಭಕ್ತರನ್ನು ಅನುಗ್ರಹಿಸುವುದಕ್ಕಾಗಿ ಅವರನ್ನು ನಿರೀಕ್ಷಿಸುತ್ತ, ಇಲ್ಲಿಯ ದಿವ್ಯಕ್ಷೇತ್ರದಲ್ಲಿ ಬಿಜಯ ಮಾಡಿಸಿರುವ ಪದ್ಮಾವತಿ ಅಮ್ಮನವರ ಕೃಪಾಕಟಾಕ್ಷಕ್ಕೆ ಎಲ್ಲರೂ ಪಾತ್ರರಾಗಿ ಕೃತಾರ್ಥರಾಗಬೇಕೆಂದು ತಿಳಿಸಿ, ತಮ್ಮ ಭಾಷಣವನ್ನು ಮುಕ್ತಾಯಮಾಡಿದರು. ಅಮೇಲೆ ಪಲ್ಲಕ್ಕಿಯಲ್ಲಿಯೇ ಉತ್ಸವದಿಂದ ದಯಮಾಡಿಸಿ, ಪುನಃ ತಿರುಮಡ್ಯೆ ಕ್ಷೇತ್ರದವರೆಗೆ ಬಂದು, ಅಲ್ಲಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತಿರುಚ್ಚಾನೂರು ಭಕ್ತರಿಂದ ಬೀಳ್ಕೊಂಡು, ಶ್ರೀ ಶ್ರೀಗಳು ಗೋವಿಂದರಾಜಪಟ್ಟಣ ಸೇರಿದರು. ಅಂದಿನ ಉತ್ಸವವು ಅತ್ಯಂತ ವಿಜೃಂಭಣೆಯಿಂದ ಕೂಡಿತ್ತು.

22-3-73ರಲ್ಲಿ ಪ್ರಾತಃಕಾಲದ ಅಭಿಗಮನ ಆರಾಧನವಾದ ಮೇಲೆ, ಶ್ರೀ ಶ್ರೀಗಳು ತಮ್ಮ ಪರಿವಾರ ಸಮೇತ ತಿರುಮಲೆಗೆ ದಯಮಾಡಿಸಿದರು. ಅವರು ಅಲ್ಲಿಗೆ ಬರುವ ವೇಳೆಗೆ ಸುಧಾಸ್ಥಾದಿನೀ ಸಭೆಯ ಸದಸ್ಯರು ತಿರುಮಲೆ ದೇವಸ್ಥಾನದ ಡೆಪ್ಯುಟಿ ಎಕ್ಸಿಕ್ಯುಟೀವ್ ಆಫೀಸರು, ಇತರ ಪ್ರಮುಖರೆಲ್ಲರೂ ದೇವಸ್ಥಾನದ ಸಕಲ ಮರ್ಯಾದೆಯಿಂದ ಕೂಡಿ ಆಂಜನೇಯ ದೇವಸ್ಥಾನದ ಬಳಿ ನೆರೆದಿದ್ದು. ಶ್ರೀ ಶ್ರೀಗಳವರಿಗೆ ಅಭೂತ ಪೂರ್ವ ಸ್ವಾಗತವನ್ನಿತ್ತರು. ಕುಶಲ ಸಂಭಾಷಣೆಗಳಾದ ಮೇಲೆ, ಶ್ರೀ ಶ್ರೀಗಳವರಿಗೆ ಶಠಾರಿ, ಮಾಲೆ, ಸಲ್ಲಿಸಲಾಯಿತು. ದೇವಸ್ಥಾನದ ಛತ್ರಿ, ಚಾಮರ, ಬಾಜಾಭಜಂತ್ರಿ ಸಮೇತ ಉತ್ಸವವು ನೇರವಾಗಿ ದೇವಸ್ಥಾನಕ್ಕೆ ಬಂದಿತು. ಧ್ವಜಸ್ತಂಭದ ಹತ್ತಿರ ಛತ್ರಿ, ಛಾಮರ, ಬೆಳ್ಳಿದಂಡ-ಮುಂತಾದುವನ್ನು ಇಟ್ಟು ಶ್ರೀ ಶ್ರೀಗಳು ತಮ್ಮ ಪರಿವಾರ ಸಮೇತ ದೇವಸ್ಥಾನದ ಅಧಿಕಾರಿಗಳೊಡನೆ ಪ್ರದಕ್ಷಿಣವಾಗಿ ಬಂಗಾರ ಬಾಗಿಲ ಮೂಲಕ ವೆಂಕಟಾಚಲಪತಿ ದೇವರ ಗರ್ಭಗುಡಿಗೆ ಬಂದರು. ದೇವರಿಗೆ ಮಹಾಮಂಗಳಾರತಿ ಆಯಿತು ಮಾಲೆ ಪರಿವಟ್ಟ ಮರ್ಯಾದೆ ಮಾಡಲಾಯಿತು. ತೀರ್ಥ, ತುಳಸಿ, ಶ್ರೀಪಾದರೇಣು ವಿನಿಯೋಗವಾಯಿತು. ಶ್ರೀನಿವಾಸ ದೇವರಿಗೆ 24 ಮೊಳದ ರೇಷ್ಮೆ ಉಡುವ ಧೋತ್ರ, 12ಮೊಳದ ಹೊದೆಯವು ವಸ್ತ್ರ, ವಕ್ಷಸ್ಸ್ಥಲದಲ್ಲಿ ಬಿಜಯಮಾಡಿರುವ ಅಮ್ಮನವರಿಗೆ ಎರಡು ರೇಷ್ಮೆ ಲಂಗ, ಉಭಯನಾಚ್ಯಾರ್ ಸಮೇತ ಬಿಜಯ ಮಾಡಿರುವ ಉತ್ಸವ ದೇವರಿಗೆ ರೇಷ್ಮೆ ಮಗುಟ, ಸೀರೆ, ದ್ವಾರಪಾಲಕರಿಗೆ ಪಂಚೆ, ಹೀಗೆ ಎಲ್ಲ ದೇವರಿಗೂ ವಸ್ತ್ರಗಳನ್ನು ಶ್ರೀ ಶ್ರೀಗಳ ಪರವಾಗಿ ಅರ್ಪಿಸಲಾಯಿತು. ದೇವಸ್ಥಾನದಲ್ಲಿ ಬಿಜಯಮಾಡಿಸಿರುವ ದೇವರುಗಳನ್ನು ದರ್ಶನ ಮಾಡಿ. ತೀರ್ಥ, ತುಳಸಿ ಪ್ರಸಾದ ಸ್ವೀಕರಿಸಿ, ಶ್ರೀ ಶ್ರೀಗಳು ಗೋಪುರದ ಬಳಿಗೆ ದಯಮಾಡಿಸುವ ವೇಳೆಗೆ ದೇವಸ್ಥಾನದ ಛತ್ರಿ, ಚಾಮರ, ಬಾಜಾಭಜಂತ್ರಿ ಎಲ್ಲವೂ ಸಿದ್ಧವಾಗಿ, ಗುರುಗಳನ್ನು ದೇವಸ್ಥಾನದ ನಾಲ್ಕು ಬೀದಿಗಳಲ್ಲಿ ಉತ್ಸವವಾಗಿ ಕರೆದುಕೊಂಡು ಬಂದು, ಶ್ರೀ ಪರಕಾಲಮಠದಲ್ಲಿ ಬೀಳ್ಕೊಟ್ಟರು. ಮೆರವಣಿಗೆ ವೈಭವಪೂರಿತವಾಗಿತ್ತು. ಮಧ್ಯಾಹ್ನ ಮೂರು ಘಂಟೆಗೆ ಶ್ರೀಮಠದ ಪರವಾಗಿ ಶ್ರೀನಿವಾಸ ದೇವರ ಕಲ್ಯಾಣೋತ್ಸವ, ಅಂದು ಇದೊಂದೇ ಕಲ್ಯಾಣ ಉತ್ಸವ. ಉತ್ಸವಕ್ಕೆ ಎಲ್ಲವೂ ಸಿದ್ಧವಾದ ಮೇಲೆ, ಶ್ರೀ ಶ್ರೀಗಳವರನ್ನು ಶ್ರೀ ಮಠದಿಂದ ವಾದ್ಯ ಸಮೇತ ಬಿಜಯ ಮಾಡಿಸಲಾಯಿತು. ಕಲ್ಯಾಣೋತಸವ ಆದ ಮೇಲೆ, ಶ್ರೀ ಮಠದ ಗೌರವಾರ್ಥವಾಗಿ ಸ್ವಾಮಿಯ ಬೀದಿ ಉತ್ಸವದ ಏರ್ಪಾಡಾಗಿತ್ತು. ಸಾಯಂಕಾಲ ಏಳುವರೆ ಘಂಟೆಗೆ ಸರಿಯಾಗಿ ವಾದ್ಯ ಸಮೇತ ಶ್ರೀ ಶ್ರೀಗಳವರನ್ನು ಪರಿವಾರ ಸಮೇತ ಪೂಲಂಗಿ ಸೇವೆಗಾಗಿ ದೇವಸ್ಥಾನಕ್ಕೆ ಬಿಜಯ ಮಾಡಿಸಲಾಯಿತು. ಅಂದು ದೇವರನ್ನು ಪುಷ್ಪದಿಂದಲೇ ಅಲಂಕರಿಸಲಾಗಿತ್ತು. ಪುಷ್ಪದ ಕಿರೀಟ, ಪುಷ್ಪಶಂಖ, ಚಕ್ರ, ಹಸ್ತ ಎಲ್ಲವೂ ಪುಷ್ಪವೇ. ಇತರ ಆಭರಣಗಳೊಂದನ್ನೂ ಧರಿಸಿರಲಿಲ್ಲ. ಪರಮಾತ್ಮನ ಅಂದಿನ ದರ್ಶನ, ಅತ್ಯದ್ಭುತ, ಆಶ್ಚರ್ಯಕರ ಮತ್ತು ಆನಂದಕರ, ಅಮೃತಸಮಾನ, ಇಂತಹ ಆಕರ್ಷಯುತ, ದರ್ಶನಭಾಗ್ಯ ಸುಮಾರು 20 ನಿಮಿಷಕಾಲದವರೆಗೆ ದೊರೆಕಿತು. ದೇವರಿಗೆ ಧರಿಸಿದ್ದ 24 ಮೊಳದ ರೇಷ್ಮೆ ಧೋತ್ರವನ್ನು ಶ್ರೀ ಶ್ರೀಗಳವರಿಗೆ ಶೇಷವಸ್ತ್ರವಾಗಿ ಅರ್ಚಕರು ಹೊದಿಸಿ ಮರ್ಯಾದೆ ಮಾಡಿದರು. ಶೇಷ ವಸ್ತ್ರದೊಡನೆ, ಒಂದು ಶಾಲು ಮತ್ತು ಒಂದು ವಲ್ಲಿಯನ್ನು ಕೊಡಲಾಯಿತು. ಜರಿ ರೇಷ್ಮೆ ಹಸಿರು ಪರಿವಟ್ಟ ಮತ್ತು ಐದು ಜೊತೆ ಪಂಚೆಗಳನ್ನು ಶ್ರೀಮಠಕ್ಕೆ ಮರ್ಯಾದಾರ್ಥವಾಗಿ ಕಳುಹಿಸಿ ಕೊಡಲಾಯಿತು.

ಮಾರನೆಯ ದಿವಸ ಅಂದರೆ 23-3-73 ಶುಕ್ರವಾರ ಶ್ರೀನಿವಾಸ ದೇವರ ಅಭಿಷೇಕದ ದಿನ. ಅಂದು ಏಳೂಕಾಲು ಘಂಟೆಗೆ ಶ್ರೀಮಠದಿಂದ ಶ್ರೀ ಶ್ರೀಗಳವರನ್ನು ವಾದ್ಯಸಮೇತ ಉತ್ಸವವಾಗಿ ದೇವಸ್ಥಾನಕ್ಕೆ ಕರೆತರಲಾಯಿತು. ಶ್ರೀ ಶ್ರೀಗಳು ಮಿತ ಪರಿವಾರ ಸಮೇತ ಗರ್ಭಗುಡಿಗೆ ದಯ ಮಾಡಿಸಿದರು. ಕೆಲವು ಸೇವಾರ್ಥಗಾರರು ಮಾತ್ರ ಅಲ್ಲಿದ್ದರು. ಸುಮಾರು ಒಂದು ಘಂಟೆ ಕಾಲ ಶ್ರೀ ಶ್ರೀಗಳವರು ನಿಂತು ವೆಂಕಟಾಚಲಪತಿ ಸ್ವಾಮಿಯ ಅಭಿಷೇಕದರ್ಶನ ಮಾಡಿ ಮಂಗಳಾಶಾಸನ ಮಾಡಿದರು. ಅನಂತರ ಶರೀ ಮಠಕ್ಕೆ ದಯಮಾಡಿಸಿದರು. ಹೀಗೆ ತಿರುಮಲೆ ಬೆಟ್ಟದ ಮೇಲೆ ಶ್ರೀ ಶ್ರೀಗಳು ದಯಮಾಡಿಸಿದ್ದ ಮೂರು ದಿನವೂ ಶ್ರೀನಿವಾಸ ದೇವರ ವೈಭವ ಪೂರಿತ ದರ್ಶನ ಮಾಡಿದರು, ಶ್ರೀ ಶ್ರೀಗಳು ದೇವಸ್ಥಾನಕ್ಕೆ ದರ್ಶನಕ್ಕಾಗಿ ದಯಮಾಡಿಸುವಾಲೆಲ್ಲ, ದೇವಸ್ಥಾನದ ಅಧಿಕಾರಿಗಳು ಬಹು ಆದರದಿಂದ ಗೌರವಪೂರ್ವಕವಾಗಿ ಅವರನ್ನು ಆಹ್ವಾನಿಸಿ, ಸ್ವಾಮಿಯ ಏಕಾಂತ ಮಂಗಳಾ ಶಾಸನಕ್ಕಾಗಿ ಬಹು ಸಮರ್ಪಕವಾದ ಏರ್ಪಾಡು ಮಾಡಿದ್ದರು.

24-3-73ರ ಪ್ರಾತಃಕಾಲ ಶ್ರೀ ಶ್ರೀಗಳವರು ಶ್ರೀನಿವಾಸ ದೇವರ ಸನ್ನಿಧಿಗೆ ಶಾತ್ತುಮುರೈ ಕಾಲದಲ್ಲಿ ದಯಮಾಡಿದಸಿದ್ದರು. ಆ ಕಾಲದ ಸೇವೆಯಂತೂ ವೈಭವಪೂರಿತವಾಗಿತ್ತು. ಅದೇ ದಿವಸ ಮಧ್ಯಾಹ್ನ ಮೈಸೂರು ಛತ್ರದ ಮ್ಯಾನೇಜರು ಗೋವಿಂದಪ್ಪನವರು ಶ್ರೀ ಶ್ರೀಗಳವರನ್ನು ಛತ್ರಕ್ಕೆ ಆಹ್ವಾನಿಸಿದ, ಅಲ್ಲಿಯ ಏರ್ಪಾಡುಗಳನ್ನು ವಿವರಿಸಿ, ಫಲ, ಪುಷ್ಪ ಸಂಭಾವನೆ ಅರ್ಪಿಸಿದರು. ದೇವಸ್ಥಾನದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕೈಂಕರ್ಯ ಪರರಾದ ಆರಾಮಮುದ ಅಯ್ಯಂಗಾರ್ಯರು, ಶ್ರೀ ಮಠದಲ್ಲಿ ಶ್ರೀ ಲಕ್ಷ್ಮೀ ಹಯಗ್ರೀವ ದೇವರ ವಜ್ರಪಡಿ ಡೋಲೋತ್ಸವ ಸೇವೆ ಮಾಡಿಸಿದರು. ಮಾರನೆಯ ದಿವಸ ತಿರುಮಲೆಯಿಂದ ಶ್ರೀ ಶ್ರೀಗಳವರು ತಮ್ಮ ಪರಿವಾರ ಸಮೇತ ತಿರುಪತಿಗೆ ದಯಮಾಡಿಸಿದರು. ಸಾಯಂಕಾಲ ಅಲ್ಲಿ ವೈಭವಪೂರಿತ ಮೆರವಣಿಗೆಯ ಏರ್ಪಾಡಾಗಿತ್ತು. ಶ್ರೀ ಶ್ರೀಗಳವರನ್ನು ಪಲ್ಲಕ್ಕಿಯಲ್ಲಿ ಬಿಜಯಮಾಡಿಸಿ, ದೇವಸ್ಥಾನದ ಛತ್ರೀ ಚಾಮರ, ಬಾಜಾಭಜಂತ್ರಿ ಸಮೇತವಾದ ಉತ್ಸವ ಅತ್ಯಂತ ಆಕರ್ಷಯುತವಾಗಿತ್ತು. ಶ್ರೀ ಮಠಕ್ಕೆ ಎರಡು ಮೈಲಿ ದೂರದಲ್ಲಿರುವ ತ್ಯಾಗರಾಜ ಮಂಟಪಕ್ಕೆ ಉತ್ಸವ ಬರುವ ವೇಳೆಗೆ ಸಾಯಂಕಾಲ ಏಳು ಘಂಟೆಯಾಗಿತ್ತು. ವಿಶಾಲವಾದ ಮಂಟಪದಲ್ಲಿ ಪುರಪ್ರಮುಖರೂ, ಸುಧಾಸ್ವಾದಿನೀ ಸಭಾ ಸದಸ್ಯರೂ, ಸತ್ಸಂಗ, ಸಂಸ್ಕೃತಿಸಂಘ, ಕಲಾಸಂಘದ ಸದಸ್ಯರಾದಿಯಾಗಿ ಸುಮಾರು ಒಂದು ಸಾವಿರ ಮಂದಿ ನೆರೆದಿದ್ದರು.

ಶ್ರೀ ಶ್ರೀಗಳವರನ್ನು ವೇದಿಕೆಯ ಮೇಲೆ ಮಂಡಿಸುವಂತೆ ಪ್ರಾರ್ಥಿಸಿ, ವೇದಾಂತದೇಶಿಕಸುಧಾಸ್ವಾದನೀ ಸಭೆಯ ಪರವಾಗಿ ಸಂಸ್ಕೃತ ಭಾಷೆಯಲ್ಲಿ ವಿಜ್ಞಾಪನ ಪತ್ರಿಕೆಯನ್ನು ಅರ್ಪಿಸಲಾಯಿತು. ಅದರಲ್ಲಿ ಒಂದು ಕಡೆ ಹೀಗೆ ನಿರೂಪಿಸಲಾಗಿದೆ "ಇದಮಪಿ ಸರ್ವವಿದಿತಂ ಯತ್ ಚತುರ್ದಶ ಶತಾಬ್ದ್ಯಾ ಆರಭ್ಯ ಐಷಮಸ್ತನ ಶತಾಬ್ದೀ ಪರ್ಯನ್ತಂ ಸರ್ವೇಪಿ ಕರ್ಣಾಟಕ ರಾಜಾಧಿರಾಜಾಃ ಶ್ರೀ ಲಕ್ಷ್ಮೀಹಯವದನ ಭಕ್ತಾಃ, ಸನ್ತಃ ಬ್ರಹ್ಮತಂತ್ರ ಸ್ವತಂತ್ರ ಸಂಯಮೀಂದ್ರ ಪರಂಪರಾನುಗೃಹೀತೋಪದೇಶಭಾಜಃ ಸ್ವಾಚಾರ್ಯಾಣಾಂ ದಿವ್ಯದೇಶಾಂತರಗಮನಜಂ ವಿರಹಮನಹಮಾನಾಃ ತತ್ರೈವ ಮಹೀಶೂರಪುರ್ಯಾಂ ಶಾಶ್ವತಮಠಪ್ರತಿಷ್ಠಾಪನೇನ ಶಾಶ್ವತಾಧಿವಾಸಂ ಪರ್ಯವೀಕ್ಷಪನಂ ಇತಿ, ಬ್ರಹ್ಮತಂತ್ರಸ್ವತಂತ್ರ ಪರಕಾಲ ಯತೀಂದ್ರ ಪರಂಪರಾಯಾಂ ಪ್ರಾಯಃ ಕತಿಪಯೈರೇವಾನುಭೂತಂ ಇದಂ ಕ್ಷೇತ್ರ ದಿವ್ಯದೇಶ ಶುಭಾಶ್ರಯಂ ಮಂಗಳಾಶಾಸನಂ ತತ್ರ ಭವದ್ಪಿರಾಚಾರ್ಯಪಾದೈರನು ಭೂಯಾತ್ ಇತಿ ಯತ್ ತತ್ ಭವತಾಮನಿತರಸಾಧಾರಣಂ ಭಾಗ್ಯಂ ವೈಭವಂ ಚ ಭೂಯಸ್ತಮಾಂ ಪ್ರಕಾಶಯತಿ".

ತಿರುಪತಿ ಸಂಸ್ಕೃತಿ ಸಂಘದ ಸದಸ್ಯರು ಅರ್ಪಿಸಿದ ತಮಿಳುಭಾಷೆ ಭಿನ್ನವತ್ತಳೆಯಲ್ಲಿ ಹೀಗೆ ನಿರೂಪಿಸಲಾಗಿದೆ:

"ಶ್ರೀ ಬ್ರಹ್ಮತಂತ್ರ ಪರಕಾಲಮಠದ ಮೊದಲ್ ಮೊದಲಾಹ ನಿರ್ವಹಿಕ್ಕ ಪಟ್ಟ ಇಡಂಗಳುಳ್ ಇರಂಡಾವದಾಹತ್ತಿಗಳುಂ ತಿರುಪ್ಪದಿಯಾಲ್, ಸತ್ಯಂ, ಶಾಂತಂ, ಶಿವಂ, ಸುಂದರಂ ಎನ್ನುಂ ಅಡಿಪ್ಪಡೈಮದಾಪ್ಪುಗಳಿಲುಂ ಉಲಹಂಗಳನೈತ್ತುರಕ್ಕುಂ ಒರೇ ಕುಟುಂಬಂ ಎನ್ನುಂ ಶೀರಿಯ ಲಕ್ಷ್ಯತ್ತಿಲುಂ ಉರುದಿ ಯಾಹ ನಂಬಿಕೆಕ್ಕೊಂಡು ಕಲೆಕಲ್ವಿ, ಸಮೂಹಸೇವೈ, ಆದಿಯವೈವಾಯಿ ಲಾಹ ಮನಿದರ್ನಿ, ಸಮೂಹಕಲಾಚಾರ ಅನ್ಮಿಗಮೇಂ ಪಾಟ್ಟರ್ಕುಂ, ಮುಳುವರ್ಚಿಕ್ಕುಂ ತನ್ನೈ ಪಣೆತ್ತಕೊಂಡು ಯಳಿಯ ಮೊರೆಯಿಲ್‌ತೊಂಡು ಪುರಿಂದವರುಂ ಎಂಗಳದ್ ತಿರುಪತಿ ಕಲಾಶಾಲ ಸಂಘಂ ತಂಗಳಕ್ಕೆ ವೇರ್ತವಳಂಗಂ ಅರಿಯವಾಪ್ಪೈ ಎಂಗಳಕ್ಕು ಅರುಳಿಯ ತಂಗಳಕ್ಕೆ ಎಂಗಳಂ ಪಣಿವಾಣ ಮಣಕ್ಕುಂ".

ತಿರುಪತಿ ಸತ್ಸಂಗದ ಪರವಾಗಿ ಆಸ್ಥಾನವಿದ್ವಾ ಸುಸ್ವರ ಗೋಪೋಲ ಕೃಷ್ಣಾಚಾರ್ಯರು ಕನ್ನಡದಲ್ಲಿ ಅರ್ಪಿಸಿ ವಿಜ್ಞಾಪನ ಪತ್ರಿಕೆಯಲ್ಲಿ ಹೀಗೆ ತಿಳಿಸಿದ್ದಾರೆ:

"ಮೈಸೂರು ಮಹಾರಾಜರ ಉತ್ಕಟ ಪ್ರಾರ್ಥನೆಯಿಂದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಮಠವು ಮೈಸೂರಿನಲ್ಲಿ ನೆಲಸಿರುವುದು. ಆ ಮಠದ ಪರಂಪರೆಯಲ್ಲಿ ಬಂದಿರುವ ಯತಿವರ್ಯರೆಲ್ಲರು, ಆಧ್ಯಾತ್ಮಜ್ಞಾನಸಂಪನ್ನರಾಗಿಯೂ ವೈರಾಗ್ಯನಿಧಿಗಳಾಗಿಯೂ, ಕವಿಸಾರ್ವಭೌಮರಾಗಿಯೂ, ಸಿದ್ಧಾನ್ತ ಪ್ರವಚನದಕ್ಷರಾಗಿಯೂ, ನಿತ್ಯಾರಾಧನಪರರಾಗಿಯೂ, ಗ್ರನ್ಥಕಾಲಕ್ಷೇಪ ವಿಚಕ್ಷಣರಾಗಿಯೂ, ಇರುವುದು ಲೋಕಪ್ರಸಿದ್ಧವಾಗಿದೆ. ಅಂತಹ ಪರಂಪರೆಯಲ್ಲಿ ಬಂದ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ ಪರಮಾನುಗ್ರಹಕ್ಕೆ ಪಾತ್ರರಾದ ಪೂರ್ವಾಶ್ರಮದಲ್ಲಿ ಚತುಶ್ಶಾಸ್ತ್ರ ಪಂಡಿತರೂ, ಸದಾಚಾರಸಂಪನ್ನರೂ ಆಗಿ, ಸಂಸ್ಥಾನಾಧಿಪತ್ಯವನ್ನ ವಹಿಸಿದ ಅತಿ ಶೀಘ್ರಕಾಲದಲ್ಲಿಯೇ, ತಮ್ಮ ಮೂಲಪುರುಷರಿಂದ ಸೇವಿತವಾದ ಈ ದಿವ್ಯಕ್ಷೇತ್ರಕ್ಕೆ ದಿಗ್ವಿಜಯ ಮಾಡಿರುವಿರಿ. ಪರಮಪಾವನರಾದ ತಮ್ಮ ದರ್ಶನದಿಂದ ತಿರುಪತಿ ಮಹಾಜನರು ಪುನೀತಾರಾದೆವು."

ಮೇಲ್ಕಂಡ ವಿಜ್ಞಾಪನ ಪತ್ರಿಕೆಗಳಿಗೆ ಸೂಕ್ತರೀತಿಯಲ್ಲಿ ಶ್ರೀ ಶ್ರೀಗಳು ತೆಲಗು ಭಾಷೆಯಲ್ಲಿ ಎಲ್ಲರಿಗೂ ತಿಳಿಯುವಂತೆ ಸುಮಾರು ಒಂದು ಘಂಟೆಕಾಲ ಉಪದೇಶ ಭಾಷಣವಿತ್ತರು. ನೆರೆದಿದ್ದವರೆಲ್ಲಾ ಬಹಳ ಉತ್ಸಾಹದಿಂದ ಗಮನವಿಟ್ಟು ಉಪನ್ಯಾಸ ಕೇಳಿದರು. ಕೊನೆಯಲ್ಲಿ ವಿದ್ವಾ ಅಣ್ಣಾದೂರು ವರಧಾಚಾರ್ಯರು ಹಯಗ್ರೀವ ಅವತಾರದ ಮಹಿಮೆಯನ್ನು ಕುರಿತು ಭಾಷಣ ಮಾಡಿದರು. ಅನಂತರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ ಶ್ರೀಗಳವರು ಪಲ್ಲಕ್ಕಿಯಲ್ಲಿ ಕುಳಿತು ಉತ್ಸವವಾಗಿಯೇ ಶ್ರೀಮಠಕ್ಕೆ ದಯಮಾಡಿಸಿದರು. ಇಂತಹ ಆಶ್ಚರ್ಯಕರ ಮತ್ತು ವೈಭವಯುತ ಮೆರವಣಿಗೆ ಹೀಗೆ ಹಿಂದೆ ನಡೆದಿರಲಿಲ್ಲವೆಂದು ಹೇಳುತ್ತ ಎಲ್ಲರೂ ಸಂತೋಷಪಟ್ಟರು.

ತಿರುಪತಿಗೆ ಸುಮಾರು ಇಪ್ಪತ್ತೈದು ಮೈಲಿ ದೂರದಲ್ಲಿರುವ ನಾರಾಯಣವನಂ ಎಂಬ ಕ್ಷೇತ್ರಕ್ಕೆ ಶ್ರೀ ಶ್ರೀಗಳು 25-3-73ರ ಪ್ರಾತಃಕಾಲ ಅಭಿಗಮನ ಆರಾಧನವಾದ ಮೇಲೆ ತಮ್ಮ ಪರಿವಾರ ಸಮೇತ ದಯಮಾಡಿಸಿದರು. ನಾರಾಯಣ ಪುಣ್ಯಕ್ಷೇತ್ರದಲ್ಲಿ ಕಲ್ಯಾಣ ವೆಂಕಟೇಶ್ವರಸ್ವಾಮಿಯು ಮೊದಲು ಪದ್ಮಾವತಿ ಅಮ್ಮನವರನ್ನು ವಿವಾಹವಾದನೆಂದು ಪ್ರಸಿದ್ಧಿಯಾಗಿದೆ. ದೇವರ ಕೈಗೆ ಆಗ ಕಟ್ಟಿದ ಕಂಕಣ ಇನ್ನು ಹಾಗೆಯೇ ಇದೆ. ದೇವಾಲಯ ವಿಸ್ತಾರವಾಗಿದೆ. ಶ್ರೀನಿವಾಸ, ಪದ್ಮಾವತಿ, ಆಂಡಾಳ್, ಶ್ರೀರಾಮ, ಶ್ರೀ ರಂಗನಾಥಸ್ವಾಮಿ, ಮತ್ತು ಅಳ್ವಾರಾಚಾರ್ಯರ ಸನ್ನಿಧಿಗಳಿವೆ ಇಲ್ಲಿ. ಊರಿನ ಗಡಿಯಲ್ಲಿ ಶ್ರೀ ಶ್ರೀಗಳವರನ್ನು ಸಭೆಯ ಸದಸ್ಯರು, ಊರಿನ ಪ್ರಮುಖರು, ಮತ್ತು ಅರ್ಚಕರು, ಗೌರವಯುತವಾಗಿ ಸ್ವಾಗತಿಸಿ ಮೆರವಣಿಗೆಯಲ್ಲಿ ಗುರುಗಳನ್ನು ಬಿಜಯಮಾಡಿಸಿದರು. ಶ್ರೀ ಶ್ರೀಗಳವರು ದೇವರಿಗೆ ವಸ್ತ್ರಗಳನ್ನು ಅರ್ಪಿಸಿ, ದರ್ಶನಮಾಡಿ, ತೀರ್ಥಪ್ರಸಾದ ಸ್ವೀಕರಿಸಿದರು. ದೇವರ ಸೇವೆ ಅತ್ಯಾಕರ್ಷಕವಾಗಿತ್ತು. ಅಲ್ಲಿಂದ ಹಿಂತಿರುಗುವಾಗ ಪುತ್ತೂರಿನ ವೈಶ್ಯ ಮಹಾ ಮಂಡಳಿಯವರು ಶ್ರೀ ಶ್ರೀಗಳವರನ್ನು ತಮ್ಮ ಕಲ್ಯಾಣಮಂಟಪಕ್ಕೆ ಆಹ್ವಾನಿಸಿ, ಫಲಪುಷ್ಪ, ಸಂಭಾವನೆ ಅರ್ಪಿಸಿ, ಫಲಮಂತ್ರಾಕ್ಷತೆಯನ್ನು ಪಡೆದರು.

ತಿರುಪತಿ ಕ್ಷೇತ್ರದ ಸುಧಾ ಸ್ವಾದಿನಿ ಸಭೆಯ ಸದಸ್ಯರಾದ ಸರ್ವಶ್ರೀ ವಕೀಲ್ ದೊರೆರಾಜ್, ದೊರೆಸ್ವಾಮಿ, ವೆಂಕಟೇಶ ಅಯ್ಯರ್ ಮತ್ತು ರಂಗಾಚಾರ್, ಅವರು ತಮ್ಮ ತಮ್ಮ ಮನೆಗಳಿಗೆ ಶ್ರೀ ಲಕ್ಷ್ಮೀಹಯಗ್ರೀವ ದೇವರನ್ನು ಬಿಜಯಮಾಡಿಸಿ, ವಜ್ರದಡೋಲೋತ್ಸವ ಸೇವೆಯನ್ನು ಅತ್ಯಂತ ವೈಭವ ಯುತವಾಗಿ ನಡೆಸಿದರು. ತಿರುಚ್ಚಾನೂರು ಶ್ರೀನಿವಾಸಭಟ್ಟರ ಮನೆಯಲ್ಲಿಯೂ ಇಂತಹ ಉತ್ಸವ ನಡೆಯಿತು. ಪ್ರತಿಯೊಂದು ಉತ್ಸವ ಸಮಯದಲ್ಲಿ ಶ್ರೀ ಶ್ರೀಗಳವರು ನೆರೆದಿದ್ದ ಭಕ್ತರನ್ನು ಶಿಷ್ಯರನ್ನೂ ಕುರಿತು ಉಪದೇಶ ಭಾಷಣ ಇತ್ತರು.

ತಿರುಪತಿ ವೇಂಕಟೇಶ್ವರ ಪ್ರಾಚ್ಯಕಲಾಶಾಲಾ ಶ್ರೀ ಪಾಂಚರಾತ್ರ ರಘುನಾಥಭಟ್ಟಾಚಾರ್ಯರು ಶ್ರೀ ಶ್ರೀಗಳವರನ್ನು ತಮ್ಮ ಕಲಾಶಾಲ ಸಭಾಂಗಣಕ್ಕೆ ಆಹ್ವಾನಿಸಿ, ಕುಸುಮಾಂಜಲಿರೂಪವಾದ ಕೆಲವು ಶ್ಲೋಕಗಳನ್ನು ಓದಿ ಶ್ರೀ ಶ್ರೀಗಳವರಿಗೆ ಫಲಪುಷ್ಪ ಸಂಭಾವನೆ ಅರ್ಪಿಸಿದರು. ಈ ಕುಸುಮಾಂಜಲಿಯ ಒಂದೆರಡು ಶ್ಲೋಕಗಳು ಹೀಗಿವೆ:

ಸಂಸಾರದಾವಪರಿತಪ್ತಹೃದಾಂ ಪ್ರಶಾಂತ್ಯೈ
ಲಕ್ಷ್ಮೀ ಸವಿಭ್ರಮಕಟಾಕ್ಷವಶೇನ ಶಶ್ವತ್ |
ಶ್ರೀ ವಾಸುದೇವ ಹೃದಯಾಬ್ಜಭವಾಮನಂತಾಂ
ದೇವೀಮನಲ್ಪ ಮಹಿಮಾಂ ಕರುಣಾಮುಪಾಸೇ ||
ತ್ರಿದಂಡಿ ರಾಮಾನುಜ ಸಂಯಮೀಂದ್ರಾತ್
ಉದ್ದಂಡವಾದಹವ ಬದ್ಧ ಶೂರ್ಣಾ |
ಋತೇ ಸ್ವಸಿದ್ಧಾಂತ ಕೃತೇ ಕ್ಷಮಃ ಕಃ
ಮತಾಂತರೋಪದ್ರುವ ನಾಶನಾಯ ||
ಯಸ್ಯನ್ಯಾಸಿ ಮುನಿಃ ಯಮಾಹುರನಘಾ ರಾಮಾನುಜಾರ್ಯಂ ನವಂ
ಯೇನಾಸ್ತಿಕ್ಯಗತಿಶ್ಚಕಾಸ್ತಿ ಸುಧಿಯೋ ಯಸ್ಮೈ ನಮಂತವನ್ನಹಂ |
ಯಸ್ಮಾತ್ಪುಣ್ಯತಮಾಧರಾಸುವಿದಿತೋ ಯಸ್ಯ ಸಮಂತವನ್ನಹಂ |
ಯಸ್ಮಾತ್ಪುಣ್ಯತಮಾಧರಾಸುವಿದಿತೋ ಯಸ್ಯ ಪ್ರಭಾವಂ ಪರ್ಣ
ಯಸ್ಮಿ ಶ್ರೀಪತಿ ದಿವ್ಯಭೂತಿರಧಿಕಾ ಸ ತ್ವಂ ಪ್ರಸೀದ ಪ್ರಭೋ ||

ತಿರುಪತಿಯಲ್ಲಿ ಶ್ರೀ ಶ್ರೀಗಳವರು 25-3-73 ರಿಂದ 31-3-73ರವರೆಗೆ ದಯಮಾಡಿಸಿದ ಕಾಲ ಬಿಡುವಿಲ್ಲದ ಸಮಯವಾಗಿತ್ತು. ಪ್ರಾತಃಕಾಲ ಅಭಿಗಮನಾರಾಧನ, ಅನಂತರ ಸಮಾಶ್ರಯಮ, ಭರನ್ಯಾಸ, ಮತ್ತು ಇಜ್ಯಾರಾಧನ ಸಾಯಂಕಾಲ ಡೋಲೋತ್ಸವ ಇತ್ಯಾದಿ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

29-3-73 ರಲ್ಲಿ ಶ್ರೀ ಶ್ರೀಗಳವರ ಅಧ್ಯಕ್ಷತೆಯಲ್ಲಿ ವಿದ್ವತ್ಸಮ್ಮೇಳನ ನಡೆಯಿತು. ಸುಮಾರು ಐವತ್ತು ಮಂದಿ ವಿದ್ವಾಂಸರು ನೆರೆದಿದ್ದರು. ಶ್ರೀಭಾಷ್ಯ, ವ್ಯಾಕರಣಶಾಸ್ತ್ರ, ಪಾಂಚರಾತ್ರಾ ಗಮ-ಇತ್ಯಾದಿ ಶಾಸ್ತ್ರಗಳಲ್ಲಿ ವಾಕ್ಯಾರ್ಥ ನಡೆಯಿತು. "ಸ್ರೀಕಲ್ಯಾಣಂ ಅಯ್ಯಂಗಾರ್ಯರಿಗೆ" 'ಸತ್ಸಂಪ್ರದಾಯ ಭೂಷಣ' ಎಂಬ ಬಿರುದನ್ನೂ, ವಕೀಲಂ ದೊರೆರಾಜ್ ಅವರಿಗೆ 'ಸಂಪ್ರದಾಯಧುರಂಧರ' ಎಂಬ ಬಿರುದನ್ನು ಶ್ರೀ ಶ್ರೀಗಳು ದಯಪಾಲಿಸಿ ಜರತಾರಿ ಶಾಲು ಹೊದಿಸಿದರು. ನೆರೆದಿದ್ದ ವಿದ್ವಾಂಸರಿಗೆಲ್ಲ ಸಂಭಾವನೆ ಕೊಡಲಾಯಿತು. ಅದೇ ಸಮಯ ತಿರುಮಲೆ ದೇವಸ್ಥಾನದ ಎಕ್ಸಿಕ್ಯುಟೀವ್ ಆಫೀಸರು ಶ್ರೀ ಸುಬ್ರಮಣ್ಯ I.A.S. ಅವರು ಸಭೆಯನ್ನು ಅಲಂಕರಿಸಿದ್ದರು. ವೇದಾಂತವಿಚಾರವಾಗಿ, ವಿದ್ವಾ ರಾಮಾನುಜಾಚಾರ್ಯರಿಗೂ; ವಿದ್ವಾ ವರದಾಚಾರ್ಯರಿಗೂ ನಡೆದ ಪ್ರಶ್ನೋತ್ತರ ರೂಪವಾದ ಸಂಭಾಷಣೆ ಕೇಳಿ ಸಂತೋಷಪಟ್ಟರು. ಕೊನೆಯಲ್ಲಿ ಅನಂತಶಯನಂ ಅಯ್ಯಂಗಾರ್ಯರು, ಶ್ರೀ ಪರಕಾಲ ಮಠದ ವೈಭವವನ್ನು ಪ್ರಶಂಸೆ ಮಾಡಿ, ಶ್ರೀ ಶ್ರೀಗಳು ಪದೇ ಪದೇ ಇಲ್ಲಿಗೆ ದಯಮಾಡಿಸಿ ಆಶ್ರಿತರನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿದರು.

ಮದ್ರಾಸು ಪ್ರವಾಸ

ಶ್ರೀ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು ತಿರುಪತಿಯಲ್ಲಿರುವಾಗ, ಮದ್ರಾಸು ನಗರದ ಶ್ರೀರಂಗಂ ಶ್ರೀಮದಾಂಡವರ್ ಸ್ವಾಮಿಗಳ ತಿರುನಕ್ಷತ್ರ ಸ್ವಾಗತಸಮಿತಿ ಸದಸ್ಯರಲ್ಲಿ ಕೆಲವರು, ನೇರವಾಗಿ ತಿರುಪತಿಗೆ ಬಂದು, ಶ್ರೀ ಶ್ರೀಗಳು ಮದ್ರಾಸು ನಗರಕ್ಕೆ ದಯಮಾಡಿಸಬೇಕೆಂದೂ, ಶ್ರೀಮದಾಂಡವರ್ ತಿರುನಕ್ಷತ್ರ ಸಂದರ್ಭದಲ್ಲಿ 2-4-73 ರಲ್ಲಿ ನಡೆಯುವ ವೇದಾಂತ ವಿದ್ವತ್ ಸಮ್ಮೇಳನವನ್ನು ಉದ್ಘಾಟಿಸಬೇಕೆಂದೂ ಶ್ರೀ ಶ್ರೀಗಳವರನ್ನು ಪ್ರಾರ್ಥಿಸಿದರು. ಶ್ರೀಮದಾಂಡವರ್ ಸ್ವಾಮಿಗಳು ತಮ್ಮ ಶ್ರೀಕಾರ್ಯ ಸ್ವಾಮಿಗಳ ಮೂಲಕ ಕಳುಹಿಸಿದ ಒತ್ತಾಯ ಪೂರ್ವಕ ಆಹ್ವಾನವೂ ಬಂದಿತ್ತು. ಈ ಆದರದ ಕರೆಯನ್ನು ಶ್ರೀ ಶ್ರೀಗಳವರು ಅಂಗೀಕರಿಸಿದರು.

31-3-1973ರಲ್ಲಿ ಶ್ರೀ ಶ್ರೀಗಳು ತಮ್ಮ ಪರಿವಾರ ಸಮೇತ ಶ್ರೀ ನರಸಿಂಹಸ್ವಾಮಿ ದಿವ್ಯಕ್ಷೇತ್ರವಾದ ಘಟಿಕಾಚಲ ಎಂದು ಪ್ರಸಿದ್ಧವಾದ ಷೋಲಿಂಗರ್ ಕ್ಷೇತ್ರಕ್ಕೆ ದಯಮಾಡಿಸಿ, ಬೆಟ್ಟದ ಅಡಿಪಾದದಲ್ಲಿರುವ ವಸಂತ ಮಂಟಪದಲ್ಲಿ ಬಿಡಾರಮಾಡಿದರು. ಪ್ರಾತಃ ಕಾಲ ಅಭಿಗಮನ ಆರಾಧನೆ ಮುಗಿಸಿ, ನರಸಿಂಹಸ್ವಾಮಿ ಬೆಟ್ಟವನ್ನು ಹತ್ತಿ ಗೋಪುರದ ಬಳಿಗೆ ಬರುವ ವೇಳೆಗೆ, ದೇವಸ್ಥಾನದ ಅಧಿಕಾರಿಗಳು, ಅರ್ಚಕರು, ಪೂರ್ಣಕುಂಬ ಸಮೇತ ಶ್ರೀ ಶ್ರೀಗಳವರನ್ನು ಆದರದಿಂದ ಸ್ವಾಗತಿಸಿ, ಮೆರವಣಿಗೆಯಾಗಿ ದೇವಸ್ಥಾನದ ಮರ್ಯಾದೆಯೊಡನೆ ಸ್ವಾಮಿ ಸನ್ನಿಧಾನಕ್ಕೆ ಕರೆತಂದರು. ಶ್ರೀ ಶ್ರೀಗಳು ದೇವರಿಗೆ ನೂತನ ವಸ್ತ್ರ ಅರ್ಪಿಸಿದರು. ಮಹಾಮಂಗಳಾರತಿಯಾಯಿತು. ಅರ್ಚಕರು ಶ್ರೀ ಶ್ರೀಗಳವರಿಗೆ ಮಾಲೆ, ಪರಿವಟ್ಟ, ಶೇಷವಸ್ತ್ರ ಅರ್ಪಿಸಿದರು. ಅಮ್ಮನವರ ಸನ್ನಿಧಿಗೆ ಬಂದು ದೇವರ ದರ್ಶನಮಾಡಿ, ಅರ್ಚನಾದಿಗಳನ್ನು ಮಾಡಿಸಿದರು. ದೇವಸ್ಥಾನದ ಅಧಿಕಾರಿಗಳಿಗೂ, ಅರ್ಚಕರಿಗೂ ಫಲ ಮಂತ್ರಾಕ್ಷತೆ, ಸಂಭಾವನೆ ಕೊಟ್ಟನಂತರ ಶ್ರೀ ಶ್ರೀಗಳು ತಮ್ಮ ಪರಿವಾರ ಸಮೇತ ತಮ್ಮ ಬಿಡಾರಕ್ಕೆ ಹಿಂತಿರುಗಿದರು. ಇಚ್ಯಾರಾಧನೆ ಆದ ಮೇಲೆ ಮಧ್ಯಾಹ್ನ ಎರಡು ಗಂಟೆಗೆ ಶ್ರೀ ಶ್ರೀಗಳವರು ಮದ್ರಾಸಿಗೆ ಪ್ರಯಾಣ ಮಾಡಿದರು.

ಮದ್ರಾಸು ಮೈಲಾಪುರ ಬಾಲಾಜಿ ದೇವಸ್ಥಾನದ ಬಳಿಗೆ ಶ್ರೀ ಶ್ರೀಗಳು ಬರುವ ವೇಳೆಗೆ ಅಲ್ಲಿ ಅಸಾಧ್ಯ ಶ್ರೀವೈಷ್ಣವ ಜನಸಂದಣಿ ಸೇರಿತ್ತು. ಸುಮಾರು ನಾಲ್ಕು ಸಾವಿರಕ್ಕಿಂತ ಹೆಚ್ಚಿನ ಭಾಗವತ ಗೋಷ್ಠಿ ಸೇರಿತ್ತು. ಛತ್ರಿ, ಚಾಮರ, ಪೂರ್ಣಕುಂಭ ಮರ್ಯಾದೆಯಿಂದ ಶ್ರೀ ಶ್ರೀಗಳವರಿಗೆ ಅತ್ಯದ್ಭುತ ಸ್ವಾಗತ ನೀಡಲಾಯಿತು. ಪ್ರಸಿದ್ಧ ವಕೀಲರಾದ ಸರ್ವಶ್ರೀ ಗೋಪಾಲಸ್ವಾಮಯ್ಯಂಗಾರ್, ವಿ.ಟಿ. ರಂಗಸ್ವಾಮಯಂಗಾರ್, ಶ್ರೀನಿವಾಸ್, ದೇವನಾಥ್ ಮುಂತಾದ ಪುರಪ್ರಮುಖರೂ, ವಿದ್ವಾಂಸರೂ, ಇತ್ಯಾದಿ ನಾಯಕರು ಶ್ರೀ ಶ್ರೀಗಳವರನ್ನು ಮೆರವಣಿಗೆಯಾಗಿ ಶ್ರೀನಿವಾಸ ದೇವರ ದೇವಾಲಯ, ವೇದಾಂತದೇಶಿಕರ ಸನ್ನಿಧಿಗೆ ಕರೆದುಕೊಂಡು ಬಂದು, ಮಾಲೆ, ಪರಿವಟ್ಟ, ಶೇಷ್ಯೆಸ್ತ್ರಗಳನ್ನು ಅರ್ಪಿಸಿದರು. ಅಲ್ಲಿ ಶ್ರೀ ಶ್ರೀಗಳವರು ಭಕ್ತರ ದರ್ಶನಾರ್ಥವಾಗಿ ಸ್ವಲ್ಪ ಕಾಲ ಇದ್ದು, ಅನಂತರ ಸಕಲ ಮರ್ಯಾದೆ ಸಮೇತ, ವೇದ, ಸ್ತೋತ್ರ ಪಾರಾಯಣ, ಇತ್ಯಾದಿ ಜಯಘೋಷದೊಡನೆ ಉತ್ಸವವಾಗಿ, ಆಳ್ವಾರ್‌ಪೇಟೆ ಶ್ರೀರಂಗಂ ಶ್ರೀಮದಾಂಡವರ್ ಸ್ವಾಮಿ ದಿವ್ಯ ಆಶ್ರಮಕ್ಕೆ ದಯಮಾಡಿಸಿದರು. ಉತ್ಸವದಲ್ಲಿ ಅಸಾಧ್ಯ ಜನರು ಸೇರಿದ್ದರು. ಆಶ್ರಮದ ಮುಂದೆ ಶ್ರೀಮದಾಂಡವರ್ ಸ್ವಾಮಿಗಳು, ಪೂರ್ಣಕುಂಭ ಮರ್ಯಾದೆಯೊಡನೆ, ಶ್ರೀ ಪರಕಾಲಸ್ವಾಮಿಗಳಿಗೆ ಹಾರ್ದಿಕವಾದ ಸ್ವಾಗತವಿತ್ತರು. ಇಬ್ಬರು ಯತಿಶ್ರೇಷ್ಠರ ಕುಶಲಸಂಭಾಷಣೆ ಅತ್ಯಾಕರ್ಷಕವಾಗಿತ್ತು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆಶ್ರಮದ ವಿಸ್ತಾರವಾದ ಸಭಾಂಗಣದಲ್ಲಿ ಭಾಗವತಗೋಷ್ಠಿ ಕಿಕ್ಕಿರಿದು ತುಂಬಿತ್ತು. ಶ್ರೀಮದ್ರಪುರಿವಾಸರಸಿಕ ಆಸ್ತಿಕಲೋಕವು ಶ್ರೀ ಪರಕಾಲ ಸ್ವಾಮಿಗಳಿಗೆ ಹಾರ್ದಿಕವಾದ ಸ್ವಾಗತವಿತ್ತರು. ಸ್ತುತಿಪದ್ಯಪುಷ್ಪಾಂಜಲಿ ರೂಪನಾದ ಕೆಲವು ಶ್ಲೋಕಗಳನ್ನು ಓದಿ ಅರ್ಪಿಸಿದರು. ಅದರ ಎರಡು ಶ್ಲೋಕವು ಹೀಗಿದೆ:

ವೈರಾಗ್ಯಜ್ಞಾನಭಕ್ತ್ಯಾ ಚರಣಶುಭಗುಣಸ್ಯಾನ ವಂಶಾವತೀರ್ಣಾನ್
ಶಿಕ್ಷಾ ಸೌಕರ್ಯತುಷ್ಟಸ್ಯ ಗುರುಕರುಣಯಾ ಲಬ್ಧ ಸಾರ್ವಜ್ಞ್ಯ ರಮ್ಯಾ |
ಭಕ್ತ್ಯಾ ವಂದೇ ಮಹಿಶ್ರೀ ಹಯವದನ ಪತತ್ರ್ಯಾಣಸೇವಾರಜಜ್ಞಾ
ನೂತ್ನಾ ರಾಮಾನುಜಾಚಾರ್ಯಾ ಪರಕಲನಪರ್ಮಾ ಬ್ರಹ್ಮತಂತ್ರ್ಯಾ ಯತೀಂದ್ರ್ಯಾ ||
ವೇದಾಂತದ್ವಂದ್ವ ಸಾರಾಮೃತಮಖಿಲ ರುಜಾಂ ನಾಶನಂ ಯೈರ್ನಿಪೀತಂ
ಶ್ರೀಭಾಷ್ಯಾಂಬುಧಿಃ ಪರತ್ಯಹಮಿಹ ಸುದೃಶಾಂ ಸಂಸದಾ ಕ್ರೀಡಿತೋ ಯೈಃ |
ಶಶ್ವತ್ ಗಾಢಾವಗೂಢಾ ಶ್ರುತಿಮಕುಟ ಗುರೋವಾರ್ವಾಕಂ ಸುರಸ್ಯಂದಿನೀಯೈಃ
ಯೈಃ ಶ್ರೀ ಲಕ್ಷ್ಮೀಹಯಾಸ್ಯಾಮಲಪದಕಮಲಂ ಪೂಜ್ಯತೇ ಲೋಕಹೇತೋಃ ||

ಶ್ರೀರಂಗಂ ಶ್ರೀಮದಾಂಡವರ್ ಸ್ವಾಮಿಗಳ ವಾಷಿರ್ಕ ತಿರನಕ್ಷತ್ರ ಪ್ರಯುಕ್ತ ನಡೆಯುವ ವೇದಾಂತಶಾಸ್ತ್ರ ವಿದ್ವತ್ ಸಮ್ಮೇಳನವನ್ನು 2-4-73ರ ಪ್ರಾತಃಕಾಲ ಉದ್ಘಾಟಿಸಬೇಕೆಂದು ಶ್ರೀ ಪರಕಾಲ ಮಠಾಧೀಶರನ್ನು ತಿರುನಕ್ಷತ್ರ ಸ್ವಾಗತಸಮಿತಿಯ ಸದಸ್ಯರು ಪ್ರಾರ್ಥಿಸಿದರು. ಸುಮಾರು ಅರವತ್ತು ಮಂದಿ ವಿದ್ವಾಂಸರು ನೆರೆದಿದ್ದರು. ಸಂಪ್ರದಾಯ ರೀತಿಯ ಸ್ವಾಗತಭಾಷಣವಾದ ಮೇಲೆ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲಸ್ವಾಮಿಗಳು, ಅಲ್ಲಿ ಸೇರಿದ್ದ ವೇದಾಂತಶಾಸ್ತ್ರ ಪ್ರಕಾಂಡರನ್ನು ಕುರಿತು ಸಂಸ್ಕೃತ ಭಾಷೆಯಲ್ಲಿ ಉದ್ಘಾಟನಸಮಾರಂಭ ನೆರವೇರಿಸಿದರು. ಅವರ ಭಾಷಣದ ಸಾರಾಂಶ ಹೀಗಿತ್ತು:

"ಜ್ಞಾನಕ್ಕೆ ಭಾವವೂ, ಸಾಧನೆಗೆ ಸಂಕಲ್ಪವೂ, ಭಕ್ತಿಗೆ ಪ್ರೀತಿಯೂ, ಕಾರ್ಯಕ್ಕೆ ಗುರಿಯೂ ಅತ್ಯಗತ್ಯವಾಗಿದೆ. ವಿಶೇಷಶಬ್ದರೀತಿಯಿಂದ ಕೂಡಿದ ವೇದಗಳಲ್ಲಿ ಅಡಗಿರುವ, ಅತಿ ಸೂಕ್ಷ್ಮವೂ, ರಹಸ್ಯವೂ ಆದ ಭಾವಗಳನ್ನು ಭಗವಾನ್ ವೇದವ್ಯಾಸರು, ಶಬ್ದ, ತರ್ಕ, ನ್ಯಾಯಸಲಕರಣೆಯಿಂದ ಕೂಡಿಸಿ, ಚಿತ್ರಿಸಿರುವ ಬ್ರಹ್ಮಸ್ವರೂಪ ದರ್ಶನವನ್ನು ಅವರು ರಚಿಸಿರುವ ಸೂತ್ರದಲ್ಲಿ ಕಾಣಬಹುದು. ಬ್ರಹ್ಮಸೂತ್ರಗಳೆಂದರೆ ಬ್ರಹ್ಮದರ್ಶನ ಎಂದು ತಿಳಿಯಬೇಕು. ಬ್ರಹ್ಮಸೂತ್ರಗಳಿಗೆ ಅನೇಕ ಮಹಾಮಹಿಮರು ಭಾಷ್ಯ ಮಾಡಿದ್ದಾರೆ. ಅವುಗಳಲ್ಲಿ ಶ್ರೀಮದ್ರಾಮಾನುಜಾಚಾರ್ಯರು ರಚಿಸಿರುವ ಶ್ರೀ ಭಾಷ್ಯ ಗ್ರಂಥಕ್ಕೆ ವಿಶೇಷರೀತಿಯ ಪ್ರಾಶಸ್ತ್ಯವೂ ವೈಶಿಷ್ಟ್ಯವೂ ಇದೆ ಸೂತ್ರ ಭಾವ, ಪದಗಳ ಅರ್ಥವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಾಯವಾಗುವಂತೆ ವೇದಾಂತಸಾರ, ವೇದಾಂತದೀಪ ಎಂಬ ಎರಡು ಗ್ರಂಥಗಳನ್ನು ಮೊದಲು ರಚಿಸಿ, ಅನಂತರ ಉದ್ದಾಮವಾದ ಶ್ರೀ ಭಾಷ್ಯವನ್ನು ಬರೆದಿದ್ದಾರೆ. ಸೂತ್ರಾಧ್ಯಾಯನವು ಇದರಿಂದ ಪರಿಪೂರ್ಣವಾಗುವುದು. ಇದರಲ್ಲಿ ಎಲ್ಲ ಮತಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ, ವಿವಾದಾಸ್ಪದವಾದಗಿರುವ ಶ್ರುತಿ, ಸ್ಮೃತಿ ವಾಕ್ಯಗಳನ್ನು ಪೂರ್ಣವಾಗಿ ವಿಮರ್ಶೆಮಾಡಿದ್ದಾರೆ. ಆದುದರಿಂದ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಮೂಲಭೂತವಾದ ಶ್ರೀ ಭಾಷ್ಯದ ವಿಚಾರಸರಣಿಯ ಪರಿಚಯವನ್ನು ಪ್ರತಿಯೊಬ್ಬ ಶ್ರೀವೈಷ್ಣವ ಭಕ್ತರೂ ಪಡೆಯಬೇಕಾದುದು ಅತ್ಯಗತ್ಯ.

ವಿಶಿಷ್ಟಾದ್ವೈತ ಸಿದ್ಧಾಂತವನ್ನು ಬೃಹದಾರಣ್ಯಕ ಉಪನಿಷತ್ತು ಹೀಗೆ ತಿಳಿಸಿದೆ. 'ಯತ್ರಹಿ ದ್ವೈತಮಿವ ಭವತಿ ತತ್ ಇತರಂ ಪಶ್ಯತಿ. ಯತ್ರ ತು ಸರ್ವಂ ಆತ್ಮೈವಭೂತ್ ತತ್ ಕೇನ ಕಂ ಪಶ್ಯೇತ್ ಕೇನ ಕಂ ವಿಜಾನೀ ಯಾತ್', ಮೇಲಿನ ವಾಕ್ಯವೂ 'ಯಸ್ಮಿನ್ ಸರ್ವಾಣಿ ಭೂತಾನಿ' ಎಂಬ ಈಶಾವಾಸ್ಯ ವಾಕ್ಯವೂ ಶರೀರಾತ್ಮಭಾವದಿಂದ ಕೂಡಿರುವ ಶ್ರೀ ರಾಮಾನುಜ ಸಿದ್ಧಾಂತವನ್ನು ವ್ಯಕ್ತಪಡಿಸುವುದು. ಈ ಸಿದ್ಧಾಂತಕ್ಕೆ ಸವಿಶೇಷಾದ್ವೈತವೆಂದು ಹೆಸರು. ಶಂಕರಸಿದ್ಧಾಂತ ನಿರ್ವಿಶೇಷಾದ್ವೈತ ವೃತ್ತಿಕಾರರಿಗೆ ಸಮ್ಮತವಾದ, ಭಗವತ್ರಾಮಾನುಜಾಚಾರ್ಯರಿಂದ ಪ್ರಕಾಶಪಡಿಸಲ್ಪಟ್ಟ ಈ ಸಿದ್ಧಾಂತವು ಪುರಾತನವಾದುದು; ವೇದಸಮ್ಮತವಾದುದು. ಈ ವಿಷಯವನ್ನು ಬ್ರಹ್ಮಸೂತ್ರ ಭಾಷ್ಯದಲ್ಲಿ ಶ್ರೀ ಶಂಕರ ಭಗವತ್ಪಾದರೂ ಸಹ ಸಮನ್ವಯಾಧಿಕರಣ, ದಹರಾಧಿಕರಣ ಭಾಗಗಳಲ್ಲಿ ಸೂಚಿಸಿರುವರು.

ಇಂದು ವಿಶಿಷ್ಟಾದ್ವೈತ ಸಿದ್ಧಾಂತದ ರಕ್ಷಣೆಯಾಗಬೇಕಾಗಿದೆ. ಈ ಬಗ್ಗೆ ಹೆಚ್ಚು ಪ್ರಚಾರವಾಗಬೇಕಾಗಿದೆ. ಇಂತಹ ಸಿದ್ಧಾಂತ ರಕ್ಷಣಾಕಾರ್ಯವನ್ನು ಪ್ರತಿಯೊಬ್ಬ ಶ್ರೀವೈಷ್ಣವನೂ ಕೈಗೊಂಡು ಇದನ್ನು ಭಗವತ್ಕೈಂಕರ್ಯವೆಂದು ತಿಳಿದು ಪ್ರಯತ್ನಿಸಬೇಕು. ಶ್ರೀಮದಾಂಡವರ್ ಸ್ವಾಮಿಗಳು, ಇಂತಹ ವಿದ್ವತ್ ಸಭೆಗಳನ್ನು ಪ್ರತಿ ವರ್ಷವೂ ಏರ್ಪಡಿಸಿ, ವಾಕ್ಯಾರ್ಥಗಳನ್ನು ನಡೆಸಿ, ಸಿದ್ಧಾಂತಪ್ರಚಾರಕ್ಕೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಹೋಪಕಾರ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ. ಶ್ರೀ ಲಕ್ಷ್ಮೀಹಯಾಸ್ಯನು ಇಂತಹ ಉತ್ತಮ ಕೈಂಕರ್ಯರೂಪವಾದ ಸಭಾ ಕಾರ್ಯಕ್ರಮಕ್ಕೆ ಸಕಲ ಶ್ರೇಯಸ್ಸನ್ನೂ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತ ನಾರಾಯಣ ಸ್ಮೃತಿ ಮೂಲಕ ಈ ಸಭೆಯನ್ನು ಉದ್ಘಾಟಿಸುತ್ತೇನೆ" ಎಂದರು.

ಈ ವೇದಾಂತ ವಿದ್ವತ್ ಸಭೆಯಲ್ಲಿ ಹತ್ತು ದಿವಸ, ವಿದ್ವಾಂಸರು, ಶ್ರೀ ಭಾಷ್ಯದ ವಿವಿಧ ಭಾಗಗಳನ್ನು ಕುರಿತು ವಾಕ್ಯಾರ್ಥ ನಡೆಸಿದರು. ಇಂತಹ ವಾಕ್ಯಾರ್ಥ ಸಮಯದಲ್ಲಿ ಶ್ರೀಮದಾಂಡವರ್ ಸ್ವಾಮಿಗಳೂ, ಶ್ರೀ ಪರಕಾಲಸ್ವಾಮಿಗಳೂ ಭಾಗವಹಿಸುತ್ತಿದ್ದರು. 11-4-73 ಸಭೆಯ ವಾಕ್ಯಾರ್ಥ ಮುಕ್ತಾಯದ ದಿನ. ಅಂದೇ ಶ್ರೀಮದಾಂಡವರ್ ಸ್ವಾಮಿಗಳ ವರ್ಷ ತಿರುನಕ್ಷತ್ರ. ಅಂದಿನ ಗೋಷ್ಠಿ ಅಸಾಧ್ಯ ಜನಸಂದಣಿಯಿಂದ ಕೂಡಿತ್ತು. ಸುಮಾರು ನಾಲ್ಕುಸಾವಿರ ಮಂದಿ ಇರಬಹುದು. ಅಷ್ಟು ಮಂದಿಗೂ ಸಮಾರಾಧನೆ ಏರ್ಪಾಡಾಗಿತ್ತು. ಶ್ರೀ ಪರಕಾಲಮಠದ ಪರವಾಗಿ ಸಾಯಂಕಾಲ ಶ್ರೀ ಶ್ರೀಗಳವರು ವಜ್ರದ ಡೋಲೋತ್ಸವವನನ್ನು ಏರ್ಪಡಿಸಿದ್ದರು. ಸಾಯಂಕಾಲದ ಸಭೆ ಕಿಕ್ಕಿರಿದು ತುಂಬಿತ್ತು. ತಿರು ನಕ್ಷತ್ರ ಕೈಂಕರ್ಯ ಸಭೆಯವರು ತಮ್ಮ ವ್ಯವಹಾರದ ಸೂಕ್ಷ್ಮಪರಿಚಯ ಮಾಡಿಕೊಟ್ಟು, ಶ್ರೀಮದಾಂಡವರ್ ಸ್ವಾಮಿಗಳಿಗೂ, ಸ್ರೀ ಪರಕಾಲಸ್ವಾಮಿಗಳಿಗೂ ಫಲ, ಪುಷ್ಪ, ಮಾಲೆ ಸಂಭಾವನೆ ಅರ್ಪಿಸಿದರು. ಸಭೆಯಲ್ಲಿ ಹೈ ಕೋರ್ಟ್ ಜಡ್ಜರು, ಶ್ರೀ ಟಿ.ಎಸ್. ರಾಜನ್, ಶ್ರೀ ಕೃಷ್ಣನ್, ಶ್ರೀ ಸದಾಶಿವಂ, ಶ್ರೀಮತಿ ಸುಬ್ಬಲಕ್ಷ್ಮೀ, ಇತ್ಯಾದಿ ಪುರಪ್ರಮುಖರು ಬಹುಸಂಖ್ಯೆಯಲ್ಲಿ ನೆರೆದಿದ್ದರು. ಶ್ರೀಮತಿ ಸುಬ್ಬಲಕ್ಷ್ಮೀ ಸಂಗೀತ ಕಛೇರಿ ನಡೆಯಿತು. ಅನಂತರ ಶ್ರೀಮದಾಂಡವರ್ ಸ್ವಾಮಿಗಳು ಸುಮಾರು ಒಂದೂವರೆ ಘಂಟೆಯ ಕಾಲ ಸಿದ್ಧಾಂತಪ್ರಚಾರ, ಶ್ರೀ ಲಕ್ಷ್ಮೀಹಯಾಸ್ಯನ ಮಹಿಮೆ, ಅವನನ್ನು ಆರಾಧಿಸುವ ಆ ಯತಿಶ್ರೇಷ್ಠ ಪರಂಪರೆಯ ಪ್ರಭಾವ, ಇತ್ಯಾದಿ ವಿಷಯಗಳನ್ನು ಕುರಿತು ಅತ್ಯಮೋಘ ಭಾಷಣಮಾಡಿದರು. ಕೊನೆಯಲ್ಲಿ ಮದ್ರಾಸ್ ನಗರದ ಪೌರರ ಪರವಾಗಿ, ಮೈಲಾಪುರ ಪ್ರಸಿದ್ಧ ಪಂಡಿತರೂ, ವಕೀಲರೂ ಆದ ಶ್ರೀ ಡಿ. ರಾಮಸ್ವಾಮಯ್ಯಂಗಾರ್ಯರು ರಚಿಸಿದ ಇಂಗ್ಲಿಷ್ ಭಾಷೆಯ ಪದ್ಯಗಳನ್ನು ಅಡ್ವೋಕೇಟ್ ಶ್ರೀ ಶ್ರೀನಿವಾಸ್ ಅವರು ಓದಿದರು. ಪದ್ಯವು ಶ್ರೀ ಪರಕಾಲ ಸ್ವಾಮಿಗಳ ಪ್ರಶಂಸಾರೂಪವಾಗಿತ್ತು. ಅದರ ಪ್ರತಿಯನ್ನು ಇಲ್ಲಿ ಕೊಡಲಾಗಿದೆ.:

His Holiness, Sri Abhinava Ramanuja Bramhatantra Parakala Yateendra Maha Desikar of Mysore.

A Welcome in acrostic

Hail Sri Abhinava Ramanuja Parakala Yatindra Maha Desika

Archaka devoted of Lord Lakshmi Hayagreeva

Ishta-Devata of Nigamantha Maha Desika

Lovingly worshipped and loftily adored,

Shining Rajaguru of Karnataka Bhoopathies,

Revered Acharya in the hoary line of bramhatantra Paramacharya,

Illustrious head of ancient and reputed Parakala Mutt

Propagating Philoso[hy and Religion according to Desika's Cult.,

A warm and hearty welcome doth Madras etend to thee Respecful and reverntial, with Pranams at thy holy feet:

Afforded hast thou to us in distant Madras

Kindly and graciously, the boon and blessing

a rare opportunity to worship Lord

Hayagreeva sweet and supple

Like Ganga waters pouring on the head of a cripple

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

Adding the reto the privilege of prostrating before thee,
Seeing thee in person, listening to thy words of wisdom
what great good could we have done in the past
As to qualify us for this soul's rich repast ?
May the gracious Lord confer on thee His great bounty
Tears and Tears to live there in peace and plenty.

Mylapore,
6-4-1973

Citizens of Madras

ಶ್ರೀಮದಭಿನವ ರಾಮಾನುಜ ಪರಕಾಲಸ್ವಾಮಿಗಳು ಏಪ್ರಿಲ್ ತಾರೀಖು 2ರಿಂದ25ರ ವರೆಗೆ ಮದ್ರಾಸು ನಗರದಲ್ಲಿ ದಯಮಾಡಿಸಿದ್ದರು. ಪ್ರತಿಯೊಂದು ದಿವಸವು ಒಬ್ಬೊಬ್ಬ ಭಕ್ತರು ಶ್ರೀ ಲಕ್ಷ್ಮೀಹಯಗ್ರೀವ ದೇವರ ವಜ್ರಪಡಿ ಡೋಲೋತ್ಸವ ಮಾಡಿಸುತ್ತಿದ್ದರು. ಒಂದು ದಿವಸವೂ ಬಿಡುವಿಲ್ಲದೇ ನಡೆಯಿತು ಕೆಲವು ಭಕ್ತರು ಪ್ರಾತಃ ಕಾಲ ಅಭಿಗಮನ ಆರಾಧನಕ್ಕೇ ದೇವರನ್ನು ಬಿಜಯಮಾಡಿಸಿ, ಅಭಿಷೇಕ, ಇಜ್ಯಾರಾಧನ, ಮತ್ತು ಸಾಯಂಕಾಲದ ವಜ್ರಪಡಿ ಡೋಲೋತ್ಸವ ನಡೆಸಬೇಕೆಂದು ಪ್ರಾರ್ಥಿಸುತ್ತಿದ್ದರು ಹಾಗೆಯೇ ಅನೇಕ ಕಡೆ ನಡೆಯಿತು. ಮದ್ರಾಸ್ ನಗರದ ವಿಸ್ತರಣವಾದ ಮೈಲಾಪುರ, ವಿಲ್ಲಿವಾಕಂ, ಕೊಡಂಬಾಕಂ, ತ್ಯಾಗರಾಜನಗರ, ಅಡ್ಯಾರ್ ಮುಂತಾದ ಕಡೆಯಲ್ಲಿರುವ ಭಕ್ತರ ಮತ್ತು ಶಿಷ್ಯರ ಮನೆಗಳಲ್ಲಿ ಶ್ರೀ ಲಕ್ಷ್ಮೀಹಯಗ್ರೀವ ದೇವರ ಉತ್ಸವವೂ ಅತ್ಯಂತ ವೈಭವಯುತವಾಗಿ ನಡೆಯಿತು. ಇಂತಹ ಪ್ರತಿಯೊಂದು ಉತ್ಸವವೂ ಅತ್ಯಂತ ವೈಭವಯುತವಾಗಿ ನಡೆಯಿತು. ಇಂತಹ ಪ್ರತಿಯೊಂದು ಉತ್ಸವ ಸಮಯದಲ್ಲಿ ಸಾವಿರಾರು ಮಂದಿ ಭಕ್ತರು ದೇವರ ದರ್ಶನಕ್ಕಾಗಿ ಸೇರುತ್ತಿದ್ದರು. ಅಂತಹ ಸಮಯಗಳಲ್ಲಿ ಶ್ರೀ ಶ್ರೀಗಳು ಧರ್ಮ, ಜ್ಞಾನ, ಭಕ್ತಿ, ಚಕ್ರಾಂಕನ, ಪ್ರಪತ್ತಿ ಮುಂತಾದ ಸಂಪ್ರದಾಯ ವಿಷಯಗಳ ಮೇಲೆ ಉಪದೇಶ ಭಾಷಣ ಮಾಡುತ್ತಿದ್ದರು.

ಇಂತಹ ಸಂದರ್ಭಗಳಲ್ಲಿ ಅತ್ಯಂತ ಆಕರ್ಷಕಯುತವಾಗಿ ನಡೆದ ಒಂದು ಉತ್ಸವವನ್ನು ಮಾತ್ರ ಇಲ್ಲಿನಿರೂಪಿಸಬಹುದು. ಶ್ರೀಮಾ ಕೃಷ್ಣಸ್ವಾಮಿ ಶರ್ಮ ಅವರು ಲಿಟಲ್ ಫ್ಲವರ್ ಕಂಪನಿಯ ಮಾಲೀಕರು. ಶ್ರೀ ಮಠದ ಶಿಷ್ಯರು. ತ್ಯಾಗರಾಜನಗರದ ವಿಸ್ತರಣದಲ್ಲಿ ವಾಸವಾಗಿದ್ದಾರೆ ಇವರಿಗೆ ಐದು ಮಂದಿ ಗಂಡು ಮಕ್ಕಳು. ಶ್ರೀ ಶ್ರೀಗಳು ಶ್ರೀಲಕ್ಷ್ಮೀಹಯಾಸ್ಯನನ್ನು ತಮ್ಮ ಮನೆಗೆ ಬಿಜಯಮಾಡಿಸಿ, ಇಡೀ ದಿನ ಅಲ್ಲಿಯೇ ಇದ್ದು, ರಾತ್ರಿ ವಜ್ರಪಡಿ ಡೋಲೋತ್ಸವ ಮಾಡಿ ಮುಗಿಸಿ, ಹಿಂತಿರುಗಬೇಕೆಂದೂ, ಅದೇ ದಿನ, ತಮ್ಮ ಐದು ಮಂದಿ ಮಕ್ಕಳಿಗೂ ಅವರ ಪತ್ನಿಯರಿಗೂ ಶರಣಾಗತಿ ಅನುಗ್ರಹಿಸಬೇಕೆಂದೂ ಬೇಡಿದ್ದರು. ಇದಕ್ಕಾಗಿ ಮನೆಯನ್ನೆಲ್ಲಾ ಖಾಲಿ ಮಾಡಿಸಿ, ಅಂದವಾಗಿ ಚಪ್ಪರ ಹಾಕಿಸಿ, ಎಲ್ಲ ಅನುಕೂಲಗಳನ್ನು ಕಲ್ಪಿಸಿದ್ದರು. 9-4-73 ರಂದು ಪ್ರಾತಃಕಾಲ ಆರು ಘಂಟೆಗೆ ಶ್ರೀ ಶ್ರೀಗಳು ತಮ್ಮ ಆರಾಧ್ಯ ದೇವರೊಡನೆ, ಪರಿವಾರ ಸಮೇತ ಶ್ರೀ ಕೃಷ್ಣಶರ್ಮರ ಮನೆಗೆ ಹೊರಟರು. ಅವರ ಮನೆ ಇನ್ನೂ ಒಂದು ಫರ್ಲಾಂಗು ದೂರ ಇದೆ ಎನ್ನುವಾಗಲೆ, ರಸ್ತೆಯಲ್ಲಿ ಅನೆ, ಕುದುರೆ, ಛತ್ರಿ, ಚಾಮರ ಪೂರ್ಣಕುಂಭ ಮರ್ಯಾದೆಯೊಡನೆ ತಮ್ಮ ನೆಚ್ಚಿನ ಗುರುಗಳನ್ನು ಆದರದಿಂದ ಸ್ವಾಗತಿಸಿ, ಅಲ್ಲಿಂದಲೇ ಮೆರವಣಿಗೆಯಲ್ಲಿ ತಮ್ಮ ಮನೆಗೆ ಕರೆತಂದರು. ಬಹು ಚೆನ್ನಾಗಿ ಅಲಂಕರಿಸಿದ್ದ ಚಪ್ಪರದಲ್ಲಿ ಶ್ರೀ ಶ್ರೀಗಳನ್ನು ಬಿಜಯಮಾಡಿಸಿದರು, ಸಂಸ್ಕೃತದಲ್ಲಿ ಸ್ವಾಗತಪದ್ಯಮಾಲಿಕೆಯನ್ನು ಸುಶ್ರಾವ್ಯವಾಗಿ ಹಾಡಿಸಿದರು. ಕನ್ನಡ, ತೆಲಗು, ತಮಿಳು, ಸಂಸ್ಕೃತ, ಹಿಂದಿ, ಇಂಗ್ಲೀಷು ಭಾಷೆಯ ಸಂಗ್ರಹರೂಪವಾದ ಬಿನ್ನವತ್ತಳೆಯನ್ನು ಒಬ್ಬೊಬ್ಬರು ಒಂದೊಂದು ಭಾಷೆಯಲ್ಲಿ ಓದಿದರು. ಈ ಏರ್ಪಾಡು, ಅತ್ಯಂತ ಆಕರ್ಷಯುತವಾಗಿದ್ದುದಲ್ಲದೆ, ಆಶ್ಚರ್ಯಕರವಾಗಿಯೂ ಇದ್ದಿತು. ಎಲ್ಲವೂ ಬಹು ಶೀಘ್ರದಲ್ಲಿ, ಹೆಚ್ಚು ಶಿಸ್ತಿನಿಂದ ನಡೆಯಿತು. ಅವರ ಕನ್ನಡದ ಬಿನ್ನವತ್ತಳೆ ಹೀಗಿತ್ತು:

"ಜ್ಞಾನಿಗಳ ಮತ್ತು ವಿಜ್ಞಾನಿಗಳ ನೆಲೆವೀಡು ಕರ್ನಾಟಕರಾಜ್ಯ. ಆ ರಾಜ್ಯವನ್ನು ಆಳಿದ ರಾಜರು ದೈವಭಕ್ತರು ಮತ್ತು ಆಚಾರ್ಯಭಕ್ತಿಯಿಂದ ಅಲಂಕೃತರು. ಆ ಮಹಾರಾಜ ವಂಶದವರು ಭಕ್ತಿಯಿಂದ ಪೂಜಿಸಿದ ರಾಜಗುರು ಪರಂಪರೆಯೇ ಸ್ರೀ ಪರಕಾಲ ಮಠದ ಪರಂಪರೆ ಆದುದರಿಂದ ಶ್ರೀ ಪರಕಾಲಮಠದ ಯತಿವರ್ಯರಿಂದ ಪೂಜಿಸಲ್ಪಟ್ಟ ಆಶ್ರಿತವತ್ಸಲ ಶ್ರೀ ಲಕ್ಷ್ಮೀಹಯಗ್ರೀವ ದೇವರು ಆ ದೇಶವನ್ನು ಜ್ಞಾನಿಗಳ ಮತ್ತು ವಿಜ್ಞಾನಿಗಳ ಆಗಾರವನ್ನಾಗಿ ಮಾಡಿದ್ದಾರೆನ್ನುವುದರಲ್ಲಿ ಏನೂ ಆಶ್ಚರ್ಯವಿಲ್ಲ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ ಪರಮಪೂಜ್ಯ ಯತಿವರ್ಯರ ದಿಗ್ವಿಜಯ ಯಾತ್ರೆಯಿಂದ ಆ ದಿವ್ಯಜ್ಞಾನಜ್ಯೋತಿ ದೇಶಗಳಲ್ಲೆಲ್ಲಾ ಹಬ್ಬಿ ರಾಮರಾಜ್ಯ ಪುನಃ ಸ್ಥಾಪಿತವಾಗಲಿ ಎಂದು ಶ್ರೀ ಲಕ್ಷ್ಮೀಹಯಗ್ರೀವ ದೇವರನ್ನು ಪ್ರಾರ್ಥಿಸುವೆವು".

ಅವರ ಭಿನ್ನವತ್ತಳೆಯ ಕೊನೆಯ ಸಂಸ್ಕೃತ ಶ್ಲೋಕವು ಅರ್ಥಗರ್ಭಿತವಾಗಿತ್ತು:

"ವೈರಾಗ್ಯಜ್ಞಾನಭಕ್ತ್ಯಾ ಚರಣ ಶುಭಗುಣಸ್ಥಾನ ವಂಶಾವತೀರ್ಣಾನ್
ನೂತ್ನಾನ್ ರಾಮಾನುಜಾರ್ಯಾನ್ ಪರಕಲನಪಟೂನ್ ಬ್ರಹ್ಮತಂತ್ರಾನ್ ಯತೀಂದ್ರಾನ್ |
ಭಕ್ತ್ಯಾ ವಂದೇಮಹಿ ಶೀಲಘುಕುಸುಮ ಮಹಾಭಿಖ್ಯಯಾ ಖ್ಯಾತಿ ಭಾಜಃ
ಸದ್ಗ್ರಂಥಾನಾಂ ಪ್ರಕಾಶಾತ್ ಸಕಲಜನಹಿತಂ ಕುರ್ಮಆಚಾರ್ಯದೃಷ್ಟ್ಯಾ" ||

ಕೊಡಂಬಾಕಂ ಕಲ್ಯಾಣಮಂದಿರ, ವಿಲ್ಲಿವಾಕಂ, ಮಣಿಕಲ್ಯಾಣ ಮಂದಿರ, ತಿರುವಲ್ಲಿಕ್ಕೇಣಿ ವಸಂತಕಲ್ಯಾಣಮಂಟಪ ಮತ್ತು ದೇಶಿಕಭವನಗಳಲ್ಲಿ ಶ್ರೀ ಲಕ್ಷ್ಮೀಹಯಗ್ರೀಯವದೇವರ ದರ್ಶನಕ್ಕಾಗಿಯೇ ಸಾವಿರಾರು ಮಂದಿ ನೆರೆದಿದ್ದರು. ಸಾಯಂಕಾಲ ವಜ್ರಪಡಿ ಡೋಲೋತ್ಸವ ದರ್ಶನಕ್ಕಾಗಿ ಅಸಾಧ್ಯ ಜನಸಂದಣಿ ಸೇರಿತ್ತು. ಆ ಸಭೆಗಳಲ್ಲಿ ಮಾನವ ಜನ್ಮದ ಸಾರ್ಥಕ್ಯ, ಅವತಾರಮಹಿಮೆ, ಅತಹ ಅನಂತ ಅವತಾರಗಳಲ್ಲಿ ಹಯಗ್ರೀವಾವತಾರದ ಪ್ರಾಶಸ್ತ್ಯ - ಮುಂತಾದ ವಿಷಯಗಳ ಮೇಲೆ ಶ್ರೀ ಶ್ರೀಗಳವರು ಉಪದೇಶ ಭಾಷಣವಿತ್ತರು. ಇಂತಹ ಅಪೂರ್ವ ಉತ್ಸವವನ್ನು ದರ್ಶನಮಾಡಿ, ಜನರು ಹಿರಿಹಿಗ್ಗಿ ಕೃತಾರ್ಥರಾದೆವೆಂದು ಭಾವಿಸಿ ಸಂತೋಷದಿಂದ ಹಿಂತಿರುಗಿದ್ದರು.

25-3-73 ರಲ್ಲಿ ಶ್ರೀ ಶ್ರೀಗಳು ಮದ್ರಾಸಿನಿಂದ ತಿರುವಳ್ಳೂರು, ಶ್ರೀ ಪೆರುಂಬೂದೂರು ದಿವ್ಯ ಕ್ಷೇತ್ರಗಳಲ್ಲಿ ದೇವರ ದರ್ಶನಮಾಡಿ, ಮಂಗಳಾ ಶಾಸನ ಮಾಡಿದ ನಂತರ ಕಾಂಚೀಪುರಕ್ಕೆ ದಯಮಾಡಿಸಿ, ತೂಪ್ಪಿಲ್ ಅಗ್ರಹಾರದಲ್ಲಿರುವ ಶ್ರೀ ಪರಕಾಲಮಠದಲ್ಲಿ ತಂಗಿದ್ದರು. ಅಲ್ಲಿ ದೇವರಾಜಸ್ವಾಮಿ ದೇವಸ್ಥಾನದಲ್ಲಿ ಶ್ರೀ ಶ್ರೀಗಳವರಿಗೆ ಅಭೂತ ಪೂರ್ವ ಸ್ವಾಗತ ದೊರೆಯಿತು. ಅಲ್ಲಿಯ ದೇವರ ಸನ್ನಿಧಿಯಲ್ಲಿ ಮಂಗಳಾಶಾಸನ ಮಾಡಿ ಶ್ರೀ ಮಠಕ್ಕೆ ಹಿಂತಿರುಗಿದರು. ಕಾಂಚೀಪುರದ ಶ್ರೀ ಘಂಟಾವತಾರ ಸುದರ್ಶನಾಚಾರ್ಯರ ಮನೆಯಲ್ಲಿ ಶ್ರೀ ಲಕ್ಷ್ಮೀಹಯಗ್ರೀವ ದೇವರಿಗೆ ವೈಭೂವಪೂರಿತ ವಜ್ರಪಡಿ ಡೋಲೋತ್ಸವ ನಡೆಯಿತು. ಕಾಂಚೀಪುರದಿಂದ ಶ್ರೀ ಶ್ರೀಗಳವರು ತಮ್ಮ ಪರಿವಾರ ಸಮೇತ ಬೆಂಗಳೂರಿಗೆ 30-4-73ರ ಸಾಯಂಕಾಲ ದಯ ಮಾಡಿಸಿದರು.

ಹೀಗೆ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲಸ್ವಾಮಿಗಳು ನಲವತ್ತೆರಡು ದಿವಸ, ದಿವ್ಯ ದೇಶಗಳ ಆರ್ಚಾವತಾರರೂಪ ಪರಮಾತ್ಮನಿಗೆ ಮಂಗಳಾಶಾಸನ ಮಾಡಿದರು. ತಿರುಪತಿ, ಮತ್ತು ಮದ್ರಾಸು ನಗರಗಳಲ್ಲಿ ದೀರ್ಘಕಾಲ ತಂಗಿದ್ದು ಶ್ರೀ ಲಕ್ಷ್ಮೀಹಯಾಸ್ಯನ ವೈಭವಪೂರಿತ ಉತ್ಸವವನ್ನು ಭಕ್ತರ ಮನೆಗಳಲ್ಲಿಯೇ ನಡೆಸಿ, ಸಾವಿರಾರು ಮಂದಿ ಭಾಗವತರಿಗೆ ದೇವರ ದರ್ಶನಭಾಗ್ಯವನ್ನು ಕರುಣಿಸಿದರು. ಅಷ್ಟೇ ಅಲ್ಲದೆ, ಚಕ್ರಾಂಕನ, ಪ್ರಪತ್ತಿ, ಉಪದೇಶಭಾಷಣ ಮುಂತಾದ ಸಂಪ್ರದಾಯ ಧರ್ಮಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿ, ತಮ್ಮ ಧರ್ಮ ದಿಗ್ವಿಜಯವನ್ನು ಯಶಸ್ವಿಗೊಳಿಸಿ, ತಮ್ಮ ಸ್ವಸ್ಥಾನಕ್ಕೆ ಹಿಂತಿರುಗಿದರು.

ವಿಕಾರಿಸಂವಸ್ಸರ ಮಾಘ ಶುಕ್ಲ 15 ರಲ್ಲಿ ನೂತನವಾಗಿ ನಿರ್ಮಾಣವಾಗಿ ಶ್ರೀ ಪರಕಾಲಮಠದಲ್ಲಿ ಶ್ರೀಕೃಷ್ಣ ಬ್ರಹ್ಮತಂತ್ರ ಪರಕಾಲಸ್ವಾಮಿಗಳು ರಚಿಸಿ, ಗೋಡೆಗೆ ಸೇರಿಸಿರುವ ಶಾಸನದ ಶ್ಲೋಕಗಳು -

ಶ್ರೀಶ್ರೀ ಲಕ್ಷ್ಮೀಹಯಗ್ರೀವ ಲಕ್ಷ್ಮೀನಾರಾಯಣೌ ವಿಜಯೇತಾಂ -
ಶ್ರೀಮತೇ ರಾಮಾನುಜಾಯನಮಃ || ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ ||
ಶ್ರೀ ಬ್ರಹ್ಮತಂತ್ರ ಪರಕಾಲ ಗುರುಪರಂಪರಾಯೈ ನಮಃ ||

ಓಂ ಓಂ ಓಂ

ಸಾತ್ವಿಕರಾದ ಭಗವದ್ಭಕ್ತರ ಮನಸ್ಸನ್ನು ಬಹುಮಟ್ಟಿಗೂ ಸಂತೋಷಪಡಿಸು.

– ಸ್ವಾಮಿ ದೇಶಿಕ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕರ್ಮ ಸಿದ್ಧಾಂತ

ವೇದಾಂತ ವಿದ್ವಾನ್, ದೇಶಿಕದರ್ಶನ ಚೂಡಾಮಣಿ, ಮಹಾಮಹೋಪಾಧ್ಯಾಯ
ಶ್ರೀಮಾನ್ ಉ. ವೇ ಸ್ವಚ್ಛಂದಂ ಡಾ|| ಎನ್. ಎಸ್ ಅನಂತರಂಗಾಚಾರ್ಯ
ಬೆಂಗಳೂರು

ಅನಾದಿಯಾದ ಈ ಜಗತ್ತಿನಲ್ಲಿರುವ ಕೋಟ್ಯನುಕೋಟಿ ಮಾನವರೂ, ಪಶು ಪಕ್ಷಿ ಮೃಗ ಸರೀಸೃಪಾದಿಗಳೂ ಯಾವುದೋ ಒಂದು ಅಜ್ಞಾತವಾದ ಆದರೆ ಅವರ್ಜನೀಯವಾದ ನಿಯಮದ ಸುಳಿಗೆ ಸಿಕ್ಕಿದ್ದಾರೆ. ಈ ವಿಶಾಲವಾದ ಜಗತ್ತು ವಿಚಿತ್ರವೂ, ವೈವಿಧ್ಯಪೂರ್ಣವೂ ಆಗಿದೆ. ಒಬ್ಬನು ಮುತ್ತಿನ ಸತ್ತಿಗೆಗೆ ಒಡೆಯನಾಗಿ ಸರ್ವರಿಂದ ಓಲೈಸಲ್ಪಟ್ಟರೆ ಮತ್ತೊಬ್ಬನು ದತ್ತದರಿದ್ರನಾಗಿ ಅವನೆದುರು ನಿಂತು ಪಲ್ಗಿರಿದು ಅವನ ಬಾಯ್ದಂಬುಲಕ್ಕೆ ಕೈಯಾನುವನು. ಒಬ್ಬ ಸಬಲ, ಒಬ್ಬ ದುರ್ಬಲ, ಒಬ್ಬ ಸಂಯಮಿಯಾದರೆ ಒಬ್ಬ ಲಂಪಟ, ಒಬ್ಬನಿಗೆ ಆತ್ಮಸಾಧನೆಗನುಕೂಲವಾದ ವಾತಾವರಣ ಲಭಿಸುವುದಾದರೆ ಮತ್ತೊಬ್ಬನಿಗೆ ಅಂಥ ಅವಕಾಶವೇ ಸಿಗದು! ಮನೋಭಾವದಲ್ಲಾಗಲಿ, ಆಕಾರದಲ್ಲಾಗಲಿ, ವರ್ಣದಲ್ಲಾಗಲಿ, ಬುದ್ಧಿಯಲ್ಲಾಗಲಿ, ಒಬ್ಬರಂತೆ ಒಬ್ಬರಿಲ್ಲ. ನಮಗಿಷ್ಟ ಬಂದ ಕಡೆ ಜನಿಸಲು ನಮಗೆ ಶಕ್ತಿಯಿಲ್ಲ. ಜನ್ಮ ನಮ್ಮ ಕೈಮೀರಿದುದು. ಏಕೆ ನಾವು ಈ ಲೋಕದಲ್ಲಿ ಜನಿಸಿ ಕೆಲಕಾಲ ಬಾಳಿದಂತೆ ನರಳಿ ಸಾಗಬೇಕು? ಮುಂದಿನ ಕ್ಷಣದಲ್ಲಿ ಏನೆಂಬುದನ್ನು ತಿಳಿಯಲಾಗದ ಈ ಹುಲು ಮನುಜ "ಕೋಽನ್ಯೋಽಸ್ತಿ ಸದೃಶೋಮಯಾ" ಎಂದು ಹೆಮ್ಮೆ ತೋರಬೇಕೆ? ಇದನ್ನು ಗಾಢವಾಗಿ ಯೋಚಿಸಿದರೆ ಇದು ಒಂದು ನಿಗೂಢವಾದ ಸಮಸ್ಯೆ ಎಂದು ತೋರುವುದು. ನಮ್ಮ ಹಿರಿಯರು ಈ ರಹಸ್ಯವನ್ನು ಭೇದಿಸದೆ ಬಿಟ್ಟಿಲ್ಲ. ಈ ರಹಸ್ಯಕ್ಕೆ ಅವರು ಒದಗಿಸಿದ ಉತ್ತರವೇ ಕರ್ಮಸಿದ್ಧಾಂತ.

ಕರ್ಮ ಸಿದ್ಧಾಂತದ ಸ್ವರೂಪ

ಕರ್ಮ ಸಿದ್ಧಾಂತವು ಲೋಕದ ಬಗೆಬಗೆಯಾದ ವೈಷಮ್ಯಕ್ಕೆ ಆಧಾರವಾಗಿದೆ. ಈ ವಿಧವಾದ ವಿಷಮತೆಗೆ ಜೀವರೇ ಹೊಣೆಯಂದು ಇದು ತಿಳಿಸುವುದು. ಸತ್ಕರ್ಮದಿಂದ ಸದ್ಭಾವ ಪ್ರೇರಿತನೂ ದುಷ್ಕರ್ಮದಿಂದ ದುರಾಚಾರಿಯೂ ದುರ್ಭಾವಯುತನೂ ಆಗುವನು. ಕಾರಣವಿಲ್ಲದೆ ಕಾರ್ಯವಾಗದು. ಹಾಗೆಯೇ ವೈಷಮ್ಯವೆಂಬ ಕಾರ್ಯಕ್ಕೆ ಪ್ರತಿನಿಯತವಾದ ಕರ್ಮವು ಕಾರಣ. ದುಶ್ಶೀಲದಲ್ಲಿ ತೊಳಲುವ ಉನ್ಮಾರ್ಗಗಾಮಿ ಮತ್ತೂ ಅಧಃಪತನವನ್ನೂ, ಸತ್ಕರ್ಮನಿರತನಾದ ಪರೋಪಕಾರಿ ಅಧಿಕತರವಾದ ಕಲ್ಯಾಣವನ್ನೂ ಪಡೆಯುವನೆಂಬುದು ಈ ಸಿದ್ಧಾಂತದ ತಿರುಳು. 'ಪಾಪಃ ಪಾಪೇನ ಕರ್ಮಣಾ, ಪುಣ್ಯಃ ಪುಣ್ಯೇನ ಕರ್ಮಣಾ' ಇದು ಕರ್ಮದ ನಿಯಮ. ಜೀವನು ತನ್ನ ಕ್ರಿಯೆಗಳಿಂದಲೇ ತಾನೇ ಕಡಿಯಲಾಗದ ಬಲವಾದ ಸಂಕೋಲೆಯನ್ನು ತನ್ನ ಕಾಲುಗಳಿಗೆ ರಚಿಸಿಕೊಳ್ಳುತ್ತಾನೆ. 'ನಾನು ಬಲವಾದ ಸಂಕೋಲೆ ರಚಿಸಿದೆ. ಕೆಲಸ ಮುಗಿಯುವ ಹೊತ್ತಿಗೆ ಆದೇ ನನ್ನ ಕೈಯನ್ನು ಬಂಧಿಸಿತ್ತು.' ಎಂದು ರವೀಂದ್ರನಾಥ ಠಾಕೂರರು ಸುಂದರವಾಗಿ ವರ್ಣಿಸುತ್ತಾರೆ. ಹೀಗೆ ಸುಕೃತ–ದುಷ್ಕೃತಗಳೆಂಬ ಎರಡು ಸಂಕೋಲೆಗಳಿಗೆ ಜೀವನು ಒಳಗಾಗಿದ್ದಾನೆ ಎನ್ನಲಾಗಿದೆ. ಹೀಗೆ ವಿವೇಚಿಸಿದಲ್ಲಿ ಇಂದಿನ ನಮ್ಮ ದುಃಸ್ಥಿತಿಗೆ ಬೇರೆ ಯಾರೋ ಹೊರಗಿನವರು ಕಾರಣರಾಗದೆ ನಾವೇ ಆಗಿರುವುದು ಗೊತ್ತಾಗುವುದು. ನಮ್ಮ ಹಿಂದಿನ ಭಾವನೆ, ಕ್ರಿಯೆಗಳ ಪರಿಣಾಮವಾದ ಫಲವನ್ನು ಇಂದು ನಾವು ಅನುಭವಿಸುತ್ತಿದ್ದೇವೆ. ಮುಂದೆ ನಮಗೆ ಏನಾಗುವುದೆಂಬುದು ಇಂದಿನ ನಮ್ಮ ನಡೆ ನುಡಿ ವಿಚಾರಗಳಿಗೆ ಅಧೀನವಾಗಿರುತ್ತದೆ. ಹೀಗೆ ಈ ಸಂಸಾರವು ಕರ್ಮದ ಗಾಲಿಯಿಂದ ಉರುಳುತ್ತಾ ಇರುತ್ತದೆ.

ಕರ್ಮ ಎಷ್ಟು ಬಗೆ?

ಕರ್ಮ ಮೂರು ಬಗೆ – ಸಂಚಿತ, ಪ್ರಾರಬ್ಧ ಮತ್ತು ಆಗಾಮಿ ಎಂದು. ಪ್ರಾರಬ್ಧ ಕರ್ಮ ಬಿಟ್ಟ ಬಾಣದಂತೆ. ಬಿಲ್ಗಾರನ ಕೈದಾಟಿ ಹೋದ ಬಾಣವನ್ನು ಹಿಂದಕ್ಕೆ ತೆಗೆದುಕೊಳ್ಳುವುದಸಾಧ್ಯ. ಹಾಗೆ ಪ್ರಾರಬ್ಧಕ್ಕೆ ಭೋಗದಿಂದಲೇ ಕ್ಷಯ. "ಪ್ರಾರಬ್ಧಂ ಪರಿಭುಜ್ಯ ಕರ್ಮಶಕಲಂ ಪ್ರಕ್ಷೀಣ ಕರ್ಮಾಂತರಃ" ಎಂದು ಹಿರಿಯರು ಹೇಳುತ್ತಾರೆ. ಸಂಚಿತವೆಂಬುದು ಬಿಡಲು ಸಿದ್ಧವಾಗಿ ತೊಟ್ಟ ಬಾಣ. ಅನೇಕಾನೇಕ ಗತಜನ್ಮಗಳ ಸಕಲಕರ್ಮಸಂಚಯವೇ ಸಂಚಿತವೆನಿಸುವುದು. ಅನೇಕ ಕೋಟಿ ಯುಗಗಳು ಅನುಭವಿಸಿದರೂ ಮುಗಿಯದಷ್ಟು ಪಾಪವನ್ನು ಕ್ಷಣಾರ್ಧದಲ್ಲಿ ಜೀವರು ಸೃಜಿಸುವರೆಂದಮೇಲೆ ಈ ಸಕಲ ಕರ್ಮವನ್ನೂ ಅನುಭವಿಸಲು ಸಾಧ್ಯವೇ? ಆದ್ದರಿಂದಲೇ 'ಅನುಭವಿತುಂ ಆಫೌಘಂ ನ ಅಲಂ ಆಗಾಮಿ ಕಾಲಃ' ಎಂದರು. ಈ ಪಾಪ ಕೋಟಿ ಪ್ರಾರಬ್ಧದಂತೆ ಅವಿನಾಶಿಯಲ್ಲ. ಪ್ರಾಯಶ್ಚಿತ್ತದಿಂದಲೋ ಅಥವಾ ಜ್ಞಾನದಿಂದಲೋ ಇದು ನಿರ್ಮೂಲವಾಗುವುದೆಂದು ಹೇಳಲಾಗಿದೆ.

ಇವೆರಡೂ ಪೂರ್ವವೃತ್ತವಾದರೆ ಆಗಾಮಿ' ಎಂಬುದು ಮುಂದೆ ಬರುವಂಥದು. ಇದನ್ನು ಬತ್ತಳಿಕೆಯ ಬಾಣಕ್ಕೆ ಹೋಲಿಸುತ್ತಾರೆ. ಮುಂದೆಯಾದರೂ ನಾವು ಕರ್ಮಪಾಶಕ್ಕೆ ಸಿಕ್ಕದಂತೆ ಇರಲು ಸಾಧ್ಯ. ಬುದ್ಧಿಪೂರ್ವಕವಾಗಿ ಧರ್ಮಾಚರಣೆಯನ್ನು ಅನಾಸಕ್ತಿಯಿಂದ ಮಾಡಲು ಕರ್ಮ ಲೇಪಿಸದು. ನಾವೂ ದೈವತ್ವದ ಕಡೆಗೆ ಸಾಗುವೆವು. ಆದನ್ನುಳಿದು "ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ ಜಾನಾಮಿ ಅಧರ್ಮಂ ನ ಚ ಮೇ ನಿವೃತ್ತಿಃ" ಎಂದೂ, ಮತ್ತು 'ಮುಹ್ಯಂತಂ ಅನುಮುಹ್ಯಾಮಿ' ಎಂದೂ ಹೇಳಿದ ಸರ್ವಾತ್ಮನಾ ಅಂಧನಾದ ಧೃತರಾಷ್ಟ್ರನಂತೆ ಆಗದಿರಬೇಕಷ್ಟೇ!

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕರ್ಮ ಸಿದ್ಧಾಂತದ ವ್ಯಾಪ್ತಿ

ಕರ್ಮ ಸಿದ್ಧಾಂತವು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ. ಸಾಮಾನ್ಯವಾಗಿ ಎಲ್ಲಾ ಹಿಂದೂ ದರ್ಶನಗಳೂ ಕರ್ಮಸಿದ್ಧಾಂತಕ್ಕೆ ತಮ್ಮ ಅಂಗೀಕಾರಮುದ್ರೆಯೊತ್ತಿವೆ. ಚಾರ್ವಾಕ ದರ್ಶನವು ಕರ್ಮಕ್ಕೆ ಎಡೆಯೀಯದು. ಸಕಲವೂ ಆಯಾಯಾ ವಸ್ತು ಸ್ವಭಾವಕ್ಕನುಗುಣವಾಗಿರುವುದೆಂದು ಅವರ ನೆಲೆ. ದೇಹಾತ್ಮವಾದಿಗಳಾದ ಇವರನ್ನು ಬಿಟ್ಟರೆ ಉಳಿದ ದರ್ಶನಗಳು ಕರ್ಮವನ್ನು ಪುರಸ್ಕರಿಸಿವೆ. ವೇದಾಂತ ದರ್ಶನ, ಜೈನ ದರ್ಶನ, ಸಾಂಖ್ಯ ದರ್ಶನ, ಬೌದ್ಧ ದರ್ಶನ ಮತ್ತೆ ಶೈವ ದರ್ಶನ, ಯೋಗ ದರ್ಶನ ಇವೆಲ್ಲಾ ಕರ್ಮಸಿದ್ಧಾಂತವನ್ನು ತಮ್ಮ ತಮ್ಮ ಸಿದ್ಧಾಂತಗಳ ಮೂಲಭೂತ ತತ್ವಗಳಿಗನುಸಾರವಾಗಿ ಅಂಗೀಕರಿಸಿವೆ. ವೇದಾಂತ ದರ್ಶನದ ಉಪಶಾಖೆಗಳಾದ ದ್ವೈತಾದ್ವೈತ ಪಂಥಗಳವರೂ ತಮ್ಮ ತಮ್ಮ ಸಂಪ್ರದಾಯಕ್ಕನುಸಾರ ಕರ್ಮ ನಿಯಮವನ್ನು ಒಪ್ಪಿದ್ದಾರೆ. "ಕರ್ಮಾವಿದ್ಯಾದಿಚಕ್ರೇ ಪ್ರತಿಪುರುಷಮಿಹಾನಾದಿ ಚಿತ್ರಪ್ರವಾಹೇ ತತ್ತತ್ಕಾಲೇ ವಿಪತ್ತಿರ್ಭವತಿ ಹಿ ವಿವಿಧಾಸರ್ವಸಿದ್ಧಾಂತಸಿದ್ಧಾ॥" ಎಂದು ಈ ಅಂಶ ಹೇಳಲಾಗಿದೆ.

ಭೇದವಾದಿಗಳೂ ಕರ್ಮವೂ

ಜೀವ–ಪರಮಾತ್ಮ ಭೇದವಾದಿಗಳು ಪ್ರತಿನಿಯತವಾದ ಕರ್ಮಾರ್ಜಿತಗತಿಯನ್ನು ಜೀವರಿಗೆ ಹೇಳುತ್ತಾರೆ. ಜೀವನ ಸರ್ವಕೃತ್ಯಗಳು ಪರಮಾತ್ಮಾಯತ್ತವಾದುದರಿಂದ, ಆ ಪರಮಾತ್ಮನೇ ಸರ್ವಜಂತುಗಳಿಗೂ ಆಂತರ್ಯಾಮಿಯಾಗಿ, ಪ್ರೇರಕನಾಗಿ, ನಿಯಾಮಕನಾಗಿ, ಧಾರಕನಾಗಿ ಸರ್ವವನ್ನೂ ನಡೆಸುವಾಗ ಜೀವನಿಗೆ ಕರ್ತೃತ್ವವೇ ಸಲ್ಲದೆಂಬುದು ಒಂದು ಆಕ್ಷೇಪ. ಶ್ರುತಿಯಾದರೂ "ಏಷ ಏವ ಸಾಧುಕರ್ಮ ಕಾರಯತಿ ತಂ ಯಮೇಭ್ಯೋ ಲೋಕೇಭ್ಯಃ ಉನ್ನಿನೀಷತಿ, ಏಷ ಏವ ಅಸಾಧು ಕರ್ಮ ಕಾರಯತಿ ತಂ ಯಮಧೋ ನಿನೀಷತಿ" ಎಂದು ತಾನೇ ಸಾರುವುದು? ಈ ಆಕ್ಷೇಪಕ್ಕೆ ಉತ್ತರ ಹೀಗೆ ಹೇಳಬೇಕು. ಎಲ್ಲ ಜೀವಿಗಳಿಗೂ ಪರಮಾತ್ಮ ಚಿಚ್ಛಕ್ತಿಯೋಗ ಮತ್ತು ಪ್ರವೃತ್ತಿ ಶಕ್ತಿಯೋಗಗಳನ್ನು ಕರುಣಿಸಿ ಸರ್ವವಿಧವಾದ ಪ್ರವೃತ್ತಿ ನಿವೃತ್ತಿಗೆ ಆವಶ್ಯಕವಾದ ಕರಣ ಕಳೇಬರಾದಿಗಳು, ಬಾಹ್ಯ ಶಕ್ತಿಗಳು, ಜ್ಞಾನ–ಚಿಕೀರ್ಷಾ–ಪ್ರಯತ್ನ ಶಕ್ತಿಗಳು ಮತ್ತು ಸ್ವಾತಂತ್ರ್ಯ – ಇವಿಷ್ಟನ್ನೂ ಒದಗಿಸುತ್ತಾನೆ. ಇವಿಷ್ಟು ಒದಗಿದ ಮೇಲೆ ಪ್ರಕೃತಿ ತನ್ನ ಕೆಲಸವನ್ನು ಆರಂಭಿಸುವುದು ಸ್ವಯಂ ಪ್ರವೃತ್ತವಾಗಿ. ಆಗ ಪರಮಾತ್ಮಾಪೇಕ್ಷೆ ಇರದು. ಆದರೂ ಪರಮಾತ್ಮನು ಇವುಗಳೆಲ್ಲದರ ನಿರ್ವಾಹಕನಾಗಿ, ಆಧಾರಭೂತನಾಗಿ, ಅಂತಃಪ್ರವೇಶಿಸಿ ಅನುಮಂತೃವಾಗಿ ನಿಲ್ಲುವನು. ಮತ್ತು ಸ್ವತಂತ್ರನಾದ ಜೀವನ ಪ್ರವೃತ್ತಿಗೆ ಅನುಸಾರವಾಗಿ ಪ್ರವರ್ತಕನಾಗುವನು. ಹೀಗೆ ಪರಮಾತ್ಮದತ್ತವಾದ ಶಕ್ತಿಯುಳ್ಳ ಜೀವನು ಪ್ರವೃತ್ತಿ ನಿವೃತ್ತಿಗಳನ್ನು ಸ್ವತಃ ನಡೆಸುವನು. ಜೀವ ಪ್ರಥಮ ಕ್ಷಣದಲ್ಲಿ ಪ್ರವೃತ್ತಿ ತೋರುವನು. ಆಗ ಉಪೇಕ್ಷೆತೋರಿ ಪರಮಾತ್ಮ ಅವನು ಕೋರಿದುದನ್ನೇ ಅನುಮೋದಿಸಿ ಅವುಗಳನ್ನು ನೆರವೇರಿಸಲು ಒದಗಿ ಅವುಗಳಿಗೆ ಅನುರೂಪವಾದ ಶುಭಾಶುಭ ಫಲಗಳನ್ನು ಕೊಡುವನು. ಈ ಅಂಶವನ್ನು ಕೆಳಗಿನ ಶ್ಲೋಕದಲ್ಲಿ ಸುಂದರವಾಗಿ ಹೇಳಲಾಗಿದೆ.

ಆದೌ ಈಶ್ವರದತ್ತಯೈವ ಪುರುಷಃ ಸ್ವಾತಂತ್ರ್ಯಶಕ್ತ್ಯಾಸ್ವಯಂ
ತತ್ತತ್ಕರ್ಮ ಚಿಕೀರ್ಷಣಪ್ರಯತನಾನಿ ಉತ್ಪಾದಯನ್ ವರ್ತತೇ ।
ತತ್ರ ಉಪೇಕ್ಷ್ಯ ತತಃ ಅನುಮತ್ಯ ವಿದಧತ್ತನ್ನಿಗ್ರಹಾನುಗ್ರಹೌ
ತತ್ತತ್ಕರ್ಮ ಫಲಂ ಪ್ರಯಚ್ಛತಿ ಯತಃ ಸರ್ವಾನುಮಂತಾಹರಿಃ ॥

ಸಾಧು ಅಸಾಧು ಕರ್ಮಗಳನ್ನು ಪರಮಾತ್ಮನೇ ಮಾಡಿಸುವನೆಂದು ಮೇಲೆ ಪ್ರಸ್ತಾಪಿಸಲಾಯಿತು. ಇದು ಸುವ್ಯವಸ್ಥಿತವಾದ ವಿಚಾರವೆಂದು ಸಮಾಧಾನಕಾರರು ಹೇಳುತ್ತಾರೆ. ಸ್ವಯಂ ಅತಿಮಾತ್ರವಾದ ಅನುಕೂಲ್ಯವನ್ನು ಪರಮಾತ್ಮನಲ್ಲಿ ತೋರುವವನಿಗೆ ಕಲ್ಯಾಣತಮವೂ, ಆಕಂಪನೀಯವೂ ಆದ ಬುದ್ಧಿಯೋಗವನ್ನೂ, ಅತಿಯಾದ ಭಗವತ್ಪ್ರಾತಿಕೂಲ್ಯದಲ್ಲಿಯೇ ನಿರತನಾದವನಿಗೆ ಕ್ರೂರ ಬುದ್ಧಿಯನ್ನೂ ಕೊಡುವವನೆಂದೂ ಗೀತೆಯೂ ಸಾರುತ್ತದೆ. ಇದೇ ಅಂಶ ಬ್ರಹ್ಮಸೂತ್ರಗಳಿಂದಲೂ ಸ್ಥಾಪಿತವಾಗಿದೆ. 'ಕರ್ತಾಶಾಸ್ತ್ರಾರ್ಥವತ್ವಾತ್' ಎಂಬ ಸೂತ್ರ ಜೀವನಿಗೆ ಜ್ಞಾತೃತ್ವದಂತೆ ಕರ್ತೃತ್ವವೂ ಉಂಟೆಂದು ಸಮರ್ಥಿಸುವುದು. ಸ್ವರ್ಗಾಪವರ್ಗ ಸಾಧನಾನುಷ್ಠಾನವನ್ನು ವಿಧಿಸುವ ಶಾಸ್ತ್ರ ಅರ್ಥಯುತವಾದ ಕಾರಣ ಜೀವನ ಕರ್ತೃತ್ವ ಸಿದ್ಧವಾಗುವುದು. 'ಪರಾತ್ತು ತಚ್ಛ್ರುತೇಃ' ಎಂಬ ಸೂತ್ರ ಜೀವನ ಕರ್ತೃತ್ವ ಪರಮಪುರುಷಾಯತ್ತವಾದುದೆಂದೂ ಜೀವನು ಸ್ವಬುದ್ಧಿಯಿಂದ ಪ್ರಯತ್ನಿಸಿದುದನ್ನು ಪರಮಾತ್ಮನು ಅನುಮತಿದಾನದಿಂದ ನಡೆಸಿಕೊಡುವನೆಂದೂ ಸಾರುವುದು. ನಾವು ಒಳ್ಳೆಯದನ್ನು ಮಾಡಲು ಸಂಕಲ್ಪಿಸಿದರೆ ಅದನ್ನು ನಡೆಸುವನು; ಕೆಡುಕನ್ನು ಮಾಡಲು ಸಂಕಲ್ಪಿಸಿದರೆ ಅದನ್ನೂ ನಡೆಸುವನು. ಇಲ್ಲಿ ಸಂಕಲ್ಪಿಸುವುದು ನಮ್ಮ ಜವಾಬ್ದಾರಿ. ಆದ್ದರಿಂದ ಆ ಶುಭಾಶುಭ ಸಂಕಲ್ಪಗಳ ಫಲವೂ ನಮ್ಮ ತಲೆಗೇ ಕಟ್ಟಿದುದು. ಆದಕಾರಣ ಅವನು ಉದಾಸೀನನು ಮತ್ತು ವೈಷಮ್ಯ ನೈರ್ಘೃಣ್ಯ ದೂರನು. ಅವನು ಮಾಡುವ ಫಲಪ್ರಧಾನ ಜೀವನ ಕರ್ಮಕ್ಕನುಸಾರವಾದುದು. Southey ಕವಿ ಈ ಅಂಶವನ್ನು –

He the indifferent Judge of all, regards
Nations and hues and dialects alike:

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

According to their works shall they be Judged,
When even handed Justice in the scale
Their good and evil weighs.

ಎಂದು ವರ್ಣಿಸಿರುವುದನ್ನು ನೋಡಬಹುದು.

ಜೀವನಿಗೆ ಸ್ವತಂತ್ರವಾದ ಕರ್ತೃತ್ವವಿದೆಯೆಂಬ ಅಂಶವನ್ನು ವಿಶ್ವವಿಖ್ಯಾತನಾದ ಮಿಲ್ಟನ್ ಕವಿ "Paradise lost" ಎಂಬುವುದರಲ್ಲಿ ಹೇಳಿರುವುದನ್ನು ಮೇಲಿನ ಹಿಂದೂ ದಾರ್ಶನಿಕ ಸಿದ್ಧಾಂತದೊಡನೆ ಹೋಲಿಸಬಹುದು.

... So will fall
He and his progeny whose fault?
Whose but his own? Ingrate, he had of me.
All he could have; I made him Just and right
Sufficient to have stood, though free to fall
Freely they stood who stood, and fell who fell,
Not free, what proof could they have given sincere
Of true allegiance, constant faith or love,
Where only what they needs must do appeared
Not what they would? What praise could they receive
What pleasure I, from such obedience paid
When will and reason (reason also his choice)
Useless and vain, of freedom and despoiled
Made passine both had served necessity,
Not me?

ಮೇಲಿನ ಉದಾಹರಣೆಯೂ ಜೀವನ ಕರ್ತೃತ್ವವನ್ನು ಸ್ವೀಕರಿಸುವುದು. 'ಏಷಪಂಥಾಃ ವಿದರ್ಭಾಣಾಂ ಏಷ ಗಚ್ಛತಿ ಕೋಸಲಃ' ಎಂದು ನಳನು ದಮಯಂತಿಗೆ ತಿಳಿಸಿದಂತೆ ಪರಮಾತ್ಮನಾದರೂ ಶುಭಾಶುಭಗಳ ವಿಚಾರ ತಿಳಿಸಿ ಆಯ್ಕೆಯ ಸ್ವಾತಂತ್ರ್ಯವನ್ನು ಜೀವನಿಗಿತ್ತಿದ್ದಾನೆ. ಈ ಅಂಶವನ್ನು ಸ್ಪಷ್ಟಗೊಳಿಸಲು ಕೆಳಗಿನ ಉದಾಹರಣೆ ಕೊಡಲಾಗಿದೆ –

ವಿಷಮ ಗುಣಾಂಕುರ ಪ್ರಕರೇ ಜಲಮಿವ ಸಾಮಾನ್ಯಕಾರಣಂ ತವಕೇಳಿಃ ।
ನಿಜಕರ್ಮ ಶಕ್ತಿನಿಯತಾಃ ಅಚ್ಯುತ ಬ್ರಹ್ಮಾದಿ ಸ್ಥಾವರಾಂತ ವಿಶೇಷಾಃ ॥

ಜಲವು ಸಸ್ಯಪ್ರರೋಹಕ್ಕೆ ಸಾಮಾನ್ಯ ಕಾರಣ. ಆದರೆ ಆ ಸಸ್ಯಗಳ ವೈವಿಧ್ಯಕ್ಕೆ ಭಿನ್ನ ಭಿನ್ನ ಗುಣಗಳುಳ್ಳ ಆಯಾ ಬೀಜಗಳು ಕಾರಣ. ಹಾಗೆಯೇ ಭಗವಂತನ ಲೀಲಾಕೇಳಿ ಎಲ್ಲರ ಪ್ರವೃತ್ತಿಗೂ ಸಾಮಾನ್ಯ ಕಾರಣ. ಆದರೆ ಪ್ರತಿನಿಯತವಾದ ಕರ್ಮದ ಶಕ್ತಿಗನುಸಾರ ಭೇದಗಳು ಉಪಪನ್ನವಾಗುವುವು.

ಹೀಗೆ ಕರ್ಮಬಂಧನವನ್ನು ಸಾಧಿಸಿದ ಮೇಲೆ ಅದರ ನಿವೃತ್ತಿಯನ್ನೂ ತಿಳಿಸಬೇಕು. ೩೨ ವಿಧವಾದ ಬ್ರಹ್ಮೋಪಾಸನೆಯಿಂದ ಕರ್ಮವನ್ನು ಕಳೆಯಬಹುದೆಂದು ತಿಳಿಸಲಾಗಿದೆ. ಬ್ರಹ್ಮೋಪಾಸನೆಗೆ ಪೂರ್ವಕಾಲೀನವಾದುದು ಮತ್ತು ಉತ್ತರಕಾಲೀನವಾದುದು ಎಂದು ಕರ್ಮ ಎರಡು ಬಗೆಯಾಗುವುದು. ಪೂರ್ವಕಾಲೀನವಾದ ಕರ್ಮದ ಪ್ರಾರಬ್ಧಾಂಶವನ್ನುಳಿದು ಸಂಚಿತವೂ, ಅಬುದ್ಧಿಪೂರ್ವಕವಾದ ಉತ್ತರಾಫವೂ ಉಪಾಸಕನಿಗೆ ಸಂಬಂಧಿಸವೆಂಬುದನ್ನು "ತದಧಿಗಮ ಉತ್ತರ ಪೂರ್ವಾಫಯೋಃ ಆಶ್ಲೇಷವಿನಾಶೌ ತದ್ವ್ಯಪದೇಶಾತ್" ಎಂಬ ಸೂತ್ರ ತಿಳಿಸುವುದು. ಉಪಾಸಕನ ಬುದ್ಧಿಪೂರ್ವಕವಾದ ಕ್ರಿಯೆಗಳೆಲ್ಲವೂ ಅಸಂಗಕರ್ಮವಾಗುವುದರಿಂದ ಅವೂ ಆವನಿಗೆ ಲೇಪಿಸವು. ಆದರಿಂದ ಉಪಾಸಕ ಪ್ರಾರಭ್ಧಾಂಶವನ್ನು ಅನುಭವಿಸಿದ ಮೇಲೆ ಮುಕ್ತನಾಗುವನು. ಬುದ್ಧಿಪೂರ್ವಕವಾದ ಕ್ರಿಯೆಗಳು ಸಂಗಪೂರ್ವಕವಾದರೆ ಮಾತ್ರ ಬಂಧನತಪ್ಪದು. ಹೀಗೆ ಉಪಾಸನ ಮಾಡುವವರ ದೇಹಪಾತವಾದಾಗ "ತಸ್ಯ ಪುತ್ರಾಃ ದಾಯಂ ಉಪಯಂತಿ ಸುಹೃದಃ ಸಾಧುಕೃತ್ಯಾಂ ದ್ವಿಷಂತಃ ಪಾಪಕೃತ್ಯಾಂ" ಎಂಬ ನ್ಯಾಯದಿಂದ ಪ್ರಿಯ ಅಪ್ರಿಯರಲ್ಲಿ ಸುಕೃತ ದುಷ್ಕೃತಗಳನ್ನು ಬಿಡುವರೆನ್ನಲಾಗಿದೆ. ಉಪಾಸಕನು ತನ್ನ ಬ್ರಹ್ಮೋಪಾಸನೆಯ ಪ್ರಭಾವದಿಂದ ಭಗವಂತನಿಗೆ ತನ್ನ ಮೇಲಿದ್ದ ನಿಗ್ರಹ ಅನುಗ್ರಹಗಳನ್ನು ಶಮನಗೊಳಿಸುವನು. ಎಂದರೆ ಉಪಾಸಕನ ಸಂಚಿತ ಕರ್ಮದ ಮತ್ತು ಅಬುದ್ಧಿಪೂರ್ವಕವಾದ ಆಗಾಮಿ ಕರ್ಮದ ಪುಣ್ಯ ಪಾಪಾಂಶವನ್ನು ಶತ್ರು ಮಿತ್ರರಿಗೆ ಕೊಡುವನೆನ್ನಲಾಗಿದೆ. ಇದರಿಂದ ಬ್ರಹ್ಮಜ್ಞರಿಗೆ ಉಪಕಾರವನ್ನೋ, ಅಪಕಾರವನ್ನೋ ಮಾಡಿದುದರ ಫಲ ಸಿದ್ಧಿಸಿದಂತಾಗುವುದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪರಮಾತ್ಮನ ಉಪಾಸನೆ ಹೀಗೆ ಕರ್ಮಕ್ಷಯಕ್ಕೆ ಕಾರಣ. ಆದರೆ ಇದಕ್ಕಿಂತಲೂ ಸುಕರವಾದ "ಆತ್ಮಾರ್ಪಣ" ಎಂಬ ಉಪಾಯವೂ ವಿಧಿಸಲ್ಪಟ್ಟಿದೆ. ಅಪ್ರಕಂಪ್ಯವಾದ ಭಕ್ತಿ ಸರ್ವರಿಗೂ ಸಿದ್ಧಿಸದು. ಆರ್ತನಾದವನು ಅನನ್ಯಶರಣನಾಗಿ ಮಹಾ ವಿಶ್ವಾಸದೊಡನೆ ಭಗವಂತನಲ್ಲಿ ಶರಣಾಗತಿ ಮಾಡುವುದು ಸರ್ವಸಾಧ್ಯವಾದ ಉಪಾಯ. ಇದರ ಪರಿಣಾಮವಾಗಿ ಭಗವಂತನ ದಯೆಯುಂಟಾಗಿ ಸಂಚಿತ, ಆಗಾಮಿಗಳಲ್ಲದೆ ಅನಭ್ಯುಪಗತವಾದ ಪ್ರಾರಬ್ಧಾಂಶವೂ ಕಳೆಯುವುದೆಂದು ತಿಳಿಸಲಾಗಿದೆ. ಭಗವದೌನ್ಮುಖ್ಯ ಸಿದ್ಧಿಸಿದರೆ ಕರ್ಮಭೀತಿ ತಪ್ಪಿದಂತೆಯೇ! ಅಂಥ ಭಗವದ್ಭಕ್ತರು ಭಗವದ್ದಯೆಯನ್ನು ಆಶ್ರಯಿಸಿದವರಾಗಿ ಮೃತ್ಯುವಿನಿಂದ ಅಮೃತಕ್ಕೂ, ತಮಸ್ಸಿನಿಂದ ಜ್ಯೋತಿಗೂ, ಅಜ್ಞಾನದಿಂದ ಸುಜ್ಞಾನಕ್ಕೂ ಸಾರುವರು. ಹೀಗೆ ಭಗವಂತನನ್ನು ಆಶ್ರಯಿಸಿದವರು ಕರ್ಮಪಾಶದಿಂದ ಪಾರಾಗುವರು. ಈ ರೀತಿಯಲ್ಲಿ ಕರ್ಮಪಾಶ ಪ್ರಗ್ರಥಿತರಾದವರು ಭಗವಂತನಲ್ಲಿ ಭಕ್ತಿಯಿಂದಲೋ, ಅನನ್ಯಶರಣತೆಯಿಂದಲೋ ಕರ್ಮವನ್ನು ಕಳೆಯಬಹುದೆಂಬ ಅಂಶ ಸಿದ್ಧಿಸುವುದು.

ಅಭೇದವಾದಿಗಳೂ ಕರ್ಮವೂ

ಆತ್ಮೈಕ್ಯವನ್ನು ಸಾರುವ ಅಭೇದವಾದಿಗಳೂ ಒಂದು ಬಗೆಯಲ್ಲಿ ಕರ್ಮಸಿದ್ಧಾಂತವನ್ನೂ ಅದರ ಪ್ರಭೇದಗಳನ್ನೂ ಒಪ್ಪಿದ್ದಾರೆ. ಪಾರಮಾರ್ಥಿಕ ಸತ್ತೆಯಲ್ಲಿ ಕರ್ಮವೂ ಇಲ್ಲ, ಅದರ ಫಲವೂ ಇಲ್ಲ; ಆದರೆ ಭಿನ್ನ ಜ್ಞಾನದ ಕಾರಣ ಅದು ಇರುವಂತೆ ತೋರುವುವು. ಹೀಗೆ ವ್ಯಾವಹಾರಿಕ ಸತ್ತೆಯಲ್ಲಿ ಕರ್ಮ ಕ್ಲೇಶಾದಿಗಳೂ ಬಂಧನಾದಿಗಳೂ ಇರುವಂತೆ ತೋರುವುವು. ಐಕ್ಯ ಜ್ಞಾನದತಿಳಿವು ಹರಡುವವರೆಗೂ ಹೀಗೆಯೇ. ಆ ತಿಳಿವು ಮೂಡಿದಾಗ –

ಭಿದ್ಯತೇ ಹೃದಯ ಗ್ರಂಥಿಃ ಛಿದ್ಯಂತೇ ಸರ್ವ ಸಂಶಯಾಃ ।
ಕ್ಷೀಯಂತೇ ಚಾಸ್ಯಕರ್ಮಾಣಿ ತಸ್ಮಿನ್ ದೃಷ್ಟೇಪರಾವರೇ ॥

ಎಂಬ ನ್ಯಾಯದಂತೆ ಸಕಲ ಸಂದೇಹ ನಿವೃತ್ತಿಯು, ಸರ್ವ ಕರ್ಮಗಳ ಅಭಾವವು ಸಿದ್ಧಿಸುವುದು. 'ನಾಸೀತ್, ನಾಸ್ತಿ, ನ ಭವಿಷ್ಯತಿ' ಎಂಬ ಅನುಭವ ಆಗುವುದು. ರಜ್ಜುವಿನಲ್ಲಿ ಸರ್ಪ ಭ್ರಾಂತಿ ಜಾರಿದಾಗ ಆ ರಜ್ಜುವಿನಲ್ಲಿ ಸರ್ಪತ್ವ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ ಮತ್ತು ಮುಂದೆಯೂ ಇರಲಾರದು ಎಂಬ ತಿಳಿವು ಉಂಟಾಗುತ್ತದೆ. ಹಾಗೆಯೇ ಈ ಅಧ್ಯಾಸದ ನಿರಾಸ ಆತ್ಮೈಕ್ಯಜ್ಞಾನದಿಂದ ಆದಾಗ ಇವೇ ಎಂದು ತೋರುತ್ತಿದ್ದ ಕರ್ಮಾದಿಗಳು ಸಂಪೂರ್ಣವಾಗಿ ಮರೆಯಾಗುವುವು ಮತ್ತು ಅವು ಇರಲಿಲ್ಲವೆಂಬ ಅರಿವುಂಟಾಗುವುದು. ಆ ರೀತಿಯ ಐಕ್ಯಜ್ಞಾನ ಉಂಟಾಗುವವರೆಗೂ ಕರ್ಮ ಸಿದ್ಧಾಂತವು ಅನುವರ್ತಿಸುವುದು ಎಂದು ಹೇಳಲಾಗಿದೆ. ಇಲ್ಲಿ ಕರ್ಮ ಅಪಾರಮಾರ್ಥಿಕ ಬಂಧನ ಅಪಾರಮಾರ್ಥಿಕ, ಆದರೆ ಸತ್ಯದಂತೆ ತೋರುವುದು. ಐಕ್ಯಜ್ಞಾನ ಉಂಟಾದಾಗ ಸತ್ಯಸ್ಥಿತಿಯ ಸ್ವರೂಪ ತಿಳಿಯುವುದು. ಎಲ್ಲವೂ ಭ್ರಾಂತಿ ಮಾತ್ರವೆಂದು ಸಿದ್ಧವಾಗುವುದು. ಅದುವರೆಗೆ ಕರ್ಮಾಧೀನತೆಯೂ ಸಿದ್ಧವಾಗುವುದು.

ಸಾಂಖ್ಯಸಿದ್ಧಾಂತವೂ ಕರ್ಮವೂ

ಸಾಂಖ್ಯದರ್ಶನ ಅನಂತಕೋಟಿ ಪುರುಷರನ್ನೂ ಪ್ರಕೃತಿಯನ್ನೂ ಒಪ್ಪುವುದು. ಪುರುಷನು ನಿರ್ವಿಕಾರನೂ, ಕೂಟಸ್ಥನೂ, ಮಧ್ಯಸ್ಥನೂ ಆದವನು. ಆ ಕಾರಣ ಅವನನ್ನು ನಿರತಿಶಯ ವಸ್ತು ಎನ್ನುವರು. ಇಂಥ ಜೀವರಿಗೆ ಸೃಷ್ಟಿಕಾಲದಲ್ಲಿ ಶರೀರವೆಂಬ ಆಶ್ರಯ ದೊರೆಯುವುದೆಂದು ಹೇಳಲಾಗಿದೆ. ಪ್ರಕೃತಿಯಿಂದ ಸೃಷ್ಟಿಪ್ರಳಯಾದಿಗಳು ಆಗುವುವು. ಇವಕ್ಕೆ ಆದಿಯಾಗಲಿ, ಅಂತ್ಯವಾಗಲಿ ಇಲ್ಲ. ಸಾಂಖ್ಯದರ್ಶನ ಪ್ರಕೃತಿಯ ಪರಿಣಾಮವಾದ ಬುದ್ಧಿಗೇ ಸುಖ, ದುಃಖ, ಜ್ಞಾನ, ಇಚ್ಛಾ, ರಾಗ, ದ್ವೇಷ, ಪುಣ್ಯ, ಪಾಪ, ಸ್ವರ್ಗ, ನರಕ, ಬಂಧ, ಮೋಕ್ಷ ಮೊದಲಾದವನ್ನು ಹೇಳುತ್ತದೆ. ಈ ಬುದ್ಧಿಗೇ ಭಾವಾಷ್ಟಕಗಳೆಂದು ಸಾಂಖ್ಯದರ್ಶನದ ಮತ. ಇವೆಲ್ಲವನ್ನೂ ನೋಡುತ್ತಿರುವವನು ಪುರುಷ. ಇವನು ಕೇವಲ ದ್ರಷ್ಟಾ ಮಾತ್ರ, ಭೋಕ್ತಾ ಮಾತ್ರ. ಸಾಂಖ್ಯದರ್ಶನಕ್ಕನುಸಾರವಾಗಿ ಪ್ರಕೃತಿ ಪುರುಷ ವಿವೇಕವಿಲ್ಲದಿರುವುದೇ ಬಂಧಕ್ಕೆ ಕಾರಣ. ಪುಣ್ಯಪಾಪಾದಿಗಳು ಪ್ರಕೃತಿ ಪರಿಣಾಮವಾದ ಬುದ್ಧಿಗೇ ಇರುವುದರಿಂದ ಬಂಧಮೋಕ್ಷಾದಿಗಳೂ ಪ್ರಕೃತಿಗೇ ಆಗುವುವು. ಪ್ರಕೃತಿ ಪುರುಷ ವಿವೇಕರೂಪವಾದ ತತ್ವಜ್ಞಾನ ಮೋಕ್ಷಕ್ಕೆ ಕಾರಣವೆನ್ನಲಾಗಿದೆ. ತತ್ವಜ್ಞಾನ ಉಂಟಾದಮೇಲೆ ಕರ್ಮಬೀಜಗಳು ಜ್ಞಾನಾಗ್ನಿಯಿಂದ ದಗ್ಧಪ್ರಾಯವಾಗುವುದರಿಂದ ಸುಖದುಃಖಗಳ ಅಂಕುರಗಳನ್ನು ಹುಟ್ಟಿಸದು. ಹೀಗೆ ಕರ್ಮಬೀಜಗಳು ಪುರುಷನಿಗೆ ಸಂಬಂಧಿಸದೆ ಪ್ರಕೃತಿಗೇ ಉಂಟೆಂಬುದು ಸಾಂಖ್ಯಸಿದ್ಧಾಂತದ ನೆಲೆಯಾಗಿದೆ.

ಬೌದ್ಧದರ್ಶನವೂ ಕರ್ಮವೂ

ಬೌದ್ಧದರ್ಶನದಲ್ಲಿಯೂ ಕರ್ಮವನ್ನು ಅಂಗೀಕರಿಸಿದ್ದಾರೆ. ಬೌದ್ಧರು ಸಮುದಯದ ವಿಚಾರ ಹೇಳುತ್ತಾರೆ. ಆಧ್ಯಾತ್ಮ ವಿಷಯದಲ್ಲಿಯೂ ಎರಡು ವಿಧವಾದ ಹೇತು ಪ್ರತ್ಯಯೋಪ ನಿಬಂಧಗಳನ್ನು ಹೇಳುತ್ತಾರೆ.

ಈ ದರ್ಶನಕ್ಕನುಸಾರವಾಗಿ ಆಧ್ಯಾತ್ಮವೆಂದರೆ ದೇಹೇಂದ್ರಿಯವಿಜ್ಞಾನ ಸಂಘಾತ. ವಿಜ್ಞಾನವೆಂದರೆ ಮನಸ್ಸು ಅಥವಾ ಚಿತ್ತ. ಇದರ ಪರಿಣಾಮಗಳೇ ಚೈತ್ಯಗಳು. ಈ ವಿಜ್ಞಾನವೆಂಬ ವಸ್ತು ಕ್ಷಣಿಕ ಎಂದರೆ ಪ್ರತಿಕ್ಷಣದಲ್ಲಿಯೂ ಹುಟ್ಟಿ ನಾಶವಾಗುತ್ತಿರುವುದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆದರೂ ಸಂತತಿರೂಪವಾಗಿ ಕೆಲಸ ಮಾಡುತ್ತಿರುವುದು. ಈ ಸಂತತಿಯಲ್ಲಿ ಸಂಸ್ಕಾರ ಮತ್ತು ವಾಸನೆ ಎಂಬ ಶಕ್ತಿ ಇದೆಯನ್ನಲಾಗಿದೆ. ಇದರಲ್ಲಿ ಕರ್ಮವಾಸನೆ ಮತ್ತು ಜ್ಞಾನವಾಸನೆಗಳು ಸೇರುವುವು. ಕರ್ಮವಾಸನೆಯಿಂದ ಪುಣ್ಯಪಾಪಗಳುಂಟಾಗುವುವು. ಕರ್ಮವಾಸನೆಯಿಂದ ಈ ವಿಜ್ಞಾನ ಸಂತತಿ ಜನ್ಮಾದಿಗಳನ್ನು ಹೊಂದುವುದೆನ್ನಲಾಗಿದೆ. ಇದನ್ನು

ಯಸ್ಮಿನ್ನೇವ ಹಿ ಸಂತಾನೇ ಆಹಿತಾ ಕರ್ಮವಾಸನಾ ।
ಫಲಂ ತತ್ರೈವ ಬಧ್ನಾತಿ ಕಾರ್ಪಾಸೇ ರಕ್ತತಾ ಯಥಾ ॥

ಎಂದು ಹೇಳಲಾಗಿದೆ.

ಈ ಕರ್ಮ ವಾಸನೆಯನ್ನು ಕಳೆಯಲು ಪ್ರಯತ್ನಶೀಲರಾಗಬೇಕು. ದಯಾಪಾರಮಿತಾ, ದಾನಪಾರಮಿತಾ, ಶೀಲಪಾರಮಿತಾ ಮೊದಲಾದ ಸದಾಚಾರಗಳನ್ನು ಅನುಷ್ಠಿಸಿ ಪಾರಾರ್ಥ್ಯಪರಾಕಾಷ್ಠೆಯನ್ನು ಪಡೆಯಬೇಕು. ಆಗಲೀಗ ಸಕಲ ರಾಗಾದಿ ಕ್ಲೇಶಾವರಣವೂ ತೊಲಗಿ ಕರ್ಮ ವಾಸನೆ ಕಳೆಯುವುದು ಮತ್ತು ಸಕಲ ಪ್ರಾಣಿಗಳ ದುಃಖ ನಿರಾಕರಣೆಯಲ್ಲಿ ಪ್ರಾವೀಣ್ಯವೂ, ಆದಕ್ಕೆ ಅವಶ್ಯಕವಾದ ಕಾರುಣ್ಯವೂ ಸಿದ್ಧಿಸಿ ಬೋಧಿ ಸತ್ವ ಪದಕ್ಕೆ ಅರ್ಹತೆ ಲಭಿಸುವುದು. ಹೀಗೆ ಬೌದ್ಧ ದರ್ಶನದಲ್ಲಿ ಕರ್ಮ ಸಿದ್ಧಾಂತದ ಸ್ಥಾನವನ್ನು ಕಾಣಬಹುದು.

ಜೈನ ಸಿದ್ಧಾಂತವೂ ಕರ್ಮವೂ

ಜೈನ ಸಿದ್ಧಾಂತದಲ್ಲಿಯೂ ಕರ್ಮಕ್ಕೆ ಸ್ಥಾನವಿದೆ. ಕರ್ತೃದ್ರವ್ಯ ಮತ್ತು ಕಾರಣದ್ರವ್ಯವೆಂದು, 'ದ್ರವ್ಯ' ಎರಡು ಬಗೆಯಾಗಿದೆ. ಜೀವ ಕರ್ತೃ ದ್ರವ್ಯ, ಅಜೀವ ತತ್ವವಾದ ಧರ್ಮ, ಅಧರ್ಮ, ಆಕಾಶ, ಕಾಲ, ಪುದ್ಗಲ ಇವು ಕಾರಣ ದ್ರವ್ಯಗಳು. ಪುಣ್ಯಪಾಪಗಳು ಪುದ್ಗಲದಲ್ಲಿ ಸೇರಿದೆ. ಜೀವರ ಕರ್ಮಾಧೀನವಾಗಿ ಪುದ್ಗಲ ಪರಮಾಣುಗಳು, ಪುಣ್ಯರೂಪವಾಗಿಯೂ, ಪಾಪರೂಪವಾಗಿಯೂ ಪರಿಣಮಿಸಿ ಜೀವರೊಡನೆ ಸೇರಿಕೊಳ್ಳುತ್ತವೆ. ಇವುಗಳಿಗೆ ಕರ್ಮಾಣುಗಳೆಂದು ಹೆಸರು. ಈ ಕರ್ಮಾಣುಗಳು ಜೀವನೊಡನೆ ಸೇರಿ ಬೆರೆಯುವುದಕ್ಕೆ ಪ್ರದೇಶಬಂಧವೆಂದು ಹೆಸರು.

ಜೀವರಿಗೆ ಔದರಿಕ, ವೈಕ್ರಿಯಿಕ, ಆಹಾರಕ, ತೈಜಸ ಮತ್ತು ಕಾರ್ಮಣ ಎಂಬ ಐದು ಬಗೆಯ ಬಂಧಗಳನ್ನು ಹೇಳಲಾಗಿದೆ. ಈ ಕರ್ಮ ಸಂಬಂಧವೆಂಬ ಬಂಧವು ಪ್ರಕೃತಿ, ಸ್ಥಿತಿ, ಅನುಭಾಗ, ಪ್ರದೇಶ ಎಂದು ನಾಲ್ಕು ಬಗೆಯಾಗಿ ಹೇಳಲಾಗಿದೆ. ಹೀಗೆ ಜೀವನು ಕರ್ಮ ಪರಮಾಣುಗಳಿಂದ ಆವೃತನಾಗುವುದು ನೀರಕ್ಷೀರ ನ್ಯಾಯದಂತೆ ಎಂಬುದು ಈ ದರ್ಶನದ ನೆಲೆ.

ಹೀಗೆ ಆಕ್ರಮಿಸುವ ಕರ್ಮಪರಮಾಣುವಿನ ಶಕ್ತಿಯನ್ನು ತಪೋಬಲದಿಂದ ಅಡಗಿಸಬಹುದು. ಇದಕ್ಕೆ ಔಪಶಮಿಕ ಪರಿಣಾಮ ಎಂಬ ಪರಿಭಾಷೆ ಇದೆ. ಆತ್ಮ ಪ್ರಭೆಯೆಂಬ ಜ್ಞಾನಕ್ಕೆ ಪುದ್ಗಲಾಣುಗಳ ಸಮೂಹದ ಆವರಣವಿದೆ. ಮತಿ, ಶ್ರುತ, ಅವಧಿ, ಮನಃಪರ್ಯಾಯ ಮತ್ತು ಕೇವಲ ಎಂಬ ಐದು ಪ್ರಕಾರದಿಂದ ಸಂಯಕ್ ಜ್ಞಾನ ಉಂಟಾದರೆ ಸರ್ವಸಂದೇಹಗಳ ನಿವೃತ್ತಿ ಆಗುವುದು; ಕರ್ಮ ಪರಿಹಾರವಾಗುವುದು. ಸಂಯಕ್ ದರ್ಶನ, ಸಂಯಕ್ ಜ್ಞಾನ ಮತ್ತು ಸಂಯಕ್ಚಾರಿತ್ರಗಳಿಂದ ಜೀವನು ಕೇವಲಿಯಾಗುವನು. ಆಗ ಆತ್ಯಂತಿಕ ಕರ್ಮಬಂಧದಿಂದ ಬಿಡುಗಡೆಯನ್ನು ಹೊಂದುತ್ತಾನೆ. ಈ ರೀತಿಯಾಗಿ ಜೈನದರ್ಶನದಲ್ಲಿಯೂ ಕರ್ಮಬಂಧ ಮತ್ತು ತನ್ನಿವಾರಣಗಳು ವಿವರಿಸಲ್ಪಟ್ಟಿವೆ.

ಯೋಗದರ್ಶನ ಮತ್ತು ಕರ್ಮ

ಪಾತಂಜಲ ಯೋಗದರ್ಶನಕ್ಕನುಸಾರ ಜೀವರುಗಳಿಗೆ ಕ್ಲೇಶ, ಕರ್ಮ, ವಿಪಾಕ ಮತ್ತು ಆಶಯಗಳೆಂಬ ದೋಷಗಳುಂಟು. ಕ್ಲೇಶವೆಂದರೆ ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ ಮತ್ತು ಅಭಿನಿವೇಶಗಳು. ಸುಖದುಃಖಗಳಿಗೆ ಕಾರಣವಾದ ಪುಣ್ಯಪಾಪವೇ ಕರ್ಮವೆನಿಸುವುದು. ಕರ್ಮಫಲವೇ ವಿಪಾಕವೆಂದೂ, ಪುಣ್ಯಪಾಪಗಳಿಗೆ ಕಾರಣವಾದ ಸಂಸ್ಕಾರ ಆಶಯವೆಂದೂ ಹೇಳಲಾಗಿದೆ. ಹೀಗೆ ಜೀವಾತ್ಮರುಗಳಿಗೆ ಸಂಸಾರ ಮತ್ತು ಮೋಕ್ಷಗಳು ಅವರವರ ಕರ್ಮಾಧೀನವೆನ್ನಲಾಗಿದೆ. ಫಲ, ಸಂಗ ಮತ್ತು ಕರ್ತೃತ್ವಗಳನ್ನು ತ್ಯಾಗಮಾಡಿ ಭಗವಂತನ ಕೇವಲ ಪ್ರೀತಿಗಾಗಿಯೇ ಕರ್ಮಾನುಷ್ಠಾನಮಾಡಿ, ಭಕ್ತಿಯೋಗದಿಂದ ಈಶ್ವರನನ್ನು ವಶೀಕರಿಸಿ ಅವನ ಸಾಕ್ಷಾತ್ಕಾರ ಪಡೆದು, ಅವನ ಕೃಪೆಯಿಂದ ಜೀವಸಾಕ್ಷಾತ್ಕಾರವನ್ನು ಹೊಂದಿ ಈಶ್ವರ ಸಾಮ್ಯವೆಂಬ ಕೈವಲ್ಯವನ್ನು ಪಡೆಯಬೇಕೆಂಬುದು ಈ ದರ್ಶನದ ಗುರಿ. ಆ ಬಗೆಯ ಸಿದ್ಧಿಯೊದಗಲು ಕರ್ಮಪಾಶಗಳು ಕಳೆಯುವುವು.

ಪೂರ್ವಮೀಮಾಂಸಾ ದರ್ಶನವೂ ಕರ್ಮವೂ

ಈ ದರ್ಶನ ವೇದ ನಿತ್ಯತ್ವವನ್ನು ಒಪ್ಪುವುದು. ಅದಕ್ಕಾಗಿ ಇವರು ಜಗತ್ತಿಗೆ ಸೃಷ್ಟಿಪ್ರಳಯಗಳನ್ನು ಒಪ್ಪುವುದಿಲ್ಲ. ಜಗದನಾದಿ ವಾದಿಗಳಾದ ಇವರು ಕರ್ಮಕ್ಕೆ ಪ್ರಾಧಾನ್ಯ ಕೊಡುತ್ತಾರೆ. ಗೃಹಸ್ಥಾಶ್ರಮದಲ್ಲಿಯೇ ಯಾಗಾದಿಕರ್ಮಗಳೊಡನೆ ಜ್ಞಾನವನ್ನೂ ಸಂಪಾದಿಸಿ ಮೋಕ್ಷಪಡೆಯಬೇಕೆಂಬುದು ಇವರ ಮತ. ಮನುಷ್ಯನು ಈ ಜನ್ಮದಲ್ಲಿ ಹೊಂದುವ ಸುಖದುಃಖಗಳೆಲ್ಲಾ ಪೂರ್ವಜನ್ಮದ ಪುಣ್ಯಪಾಪ ಕರ್ಮಗಳೇ ಕಾರಣವೆನ್ನಲಾಗಿದೆ. ಇವುಗಳು ಕಾಮ್ಯಕರ್ಮಗಳ ಫಲವೆಂದು ಇವರು ಹೇಳುತ್ತಾರೆ. ನಿತ್ಯನೈಮಿತ್ತಿಕ ಕರ್ಮಗಳಿಂದ ಪಾಪಕ್ಷಯವಾಗುವುದೆಂದು ಹೇಳಲಾಗಿದೆ. ನೈಮಿತ್ತಿಕ ಕರ್ಮವು ತೊಂದರೆಯೊದಗಿಸಿದ ಪಾಪದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪರಿಹಾರಕ್ಕಾದರೆ ನಿತ್ಯಕರ್ಮವೆಂಬುದು ಫಲಾಪೇಕ್ಷೆಯಿಲ್ಲದೆ ಇದ್ದು, ಹಿಂದಿನ ಕಾಲದಲ್ಲಿ ಮಾಡಿದ ಪಾಪಗಳ ಕ್ಷಯಕ್ಕಾಗಿ ಮಾಡಬೇಕೆಂದು ಹೇಳುತ್ತಾರೆ. ಇವರಲ್ಲೇ ಕೆಲವರು ನಿಯೋಗ ವಾದವನ್ನು ಮಂಡಿಸುತ್ತಾರೆ.

ದೇಹಾತಿರಿಕ್ತವಾದ ಆತ್ಮಜ್ಞಾನವನ್ನು ಮಾತ್ರ ಹೊಂದಿ ವೇದಗಳಲ್ಲಿ ಹೇಳಲಾದ ಸ್ವರ್ಗಾದಿ ಪುರುಷಾರ್ಥಗಳನ್ನು ಪಡೆಯುವುದೇ ಪುರುಷಾರ್ಥವೆಂಬ ಭಾವನೆ ಇವರಲ್ಲಿ ಕೆಲವರಲ್ಲಿ ದೃಢವಾಗಿತ್ತು. ಹೀಗಾಗಿ ಕರ್ಮಕ್ಕೇ ಪ್ರಾಧಾನ್ಯ ದೊರೆಯುವಂತಾಗಿ ಹೋಯಿತು. ಕಾಮ್ಯಕರ್ಮಗಳನ್ನು ಮಾಡದೆ ನಿತ್ಯನೈಮಿತ್ತಿಕ ಕರ್ಮಾನುಷ್ಠಾನದಿಂದ ಮತ್ತು ಈ ಜನ್ಮದಲ್ಲಿ ಸುಖದುಃಖಾದಿಗಳ ಅನುಭವದಿಂದಲೂ ಪ್ರಾಚೀನ ಕರ್ಮವನ್ನು ನಾಶಪಡಿಸಿದರೆ ಆಗ ಶರೀರೇಂದ್ರಿಯ ಸಂಬಂಧ ತಪ್ಪುವುದೆಂದೂ ಕರ್ಮವೆಂಬ ಕಾರಣ ಇಲ್ಲದೆ ಇರುವುದರಿಂದ ಜನ್ಮ ನಿಂತುಹೋಗಿ ಆತ್ಮನು ಸ್ವಸ್ವರೂಪಾವಾಪ್ತಿ ಹೊಂದುವನೆಂದೂ ಹೇಳಲಾಗಿದೆ. ಇವರಲ್ಲಿ ಮೋಕ್ಷಸಾಧನೆಯ ವಿಚಾರದಲ್ಲಿ ಮತಭೇದವೂ ಇದೆ. ಅದಕ್ಕನುಸಾರವಾಗಿ ಜ್ಞಾನ ಕರ್ಮಗಳ ಸಮುಚ್ಚಯ ಮೋಕ್ಷಕ್ಕೆ ಸಾಧನವೆಂದು ಕೆಲವರೆನ್ನುವರು. ಅಂತೂ ಈ ದರ್ಶನವು ಕರ್ಮದ ಪ್ರಭಾವವನ್ನು ಒಪ್ಪಿ ಅದನ್ನು ಆಳಿಸಲು ಉಪಾಯ ಹೇಳುವುದೆಂದು ಸಂಗ್ರಹಿಸಬಹುದು.

ಶೈವ ದರ್ಶನವೂ ಕರ್ಮವೂ

ಪತಿ, ಪಶು ಮತ್ತು ಪಾಶವೆಂದು ಈ ದರ್ಶನ ಮೂರು ವಿಷಯಗಳನ್ನು ಹೇಳುವುದು. ಪಶುವೇ ಪುರುಷನು. ಇವನಿಗೆ ಜ್ಞಾತೃತ್ವ, ಕರ್ತೃತ್ವ, ಭೋಕ್ತೃತ್ವಗಳುಂಟು. ಈ ಪುರುಷನು ಪರಮಶಿವನಿಗೆ ಸಮನಾಗುವ ಯೋಗ್ಯತೆ ಹೊಂದಿದ್ದಾನೆ. ಆದರೆ ಪಾಶಕ್ಕೆ ಒಳಗಾಗಿದ್ದಾನೆ. ಪಾಶಗಳು ಐದು ಬಗೆ – ಮಲ, ಕರ್ಮ, ಮಾಯೆ, ಮಹಾಮಾಯೆ ಮತ್ತು ತಿರೋಧಶಕ್ತಿ ಎಂದು. ಇದರಲ್ಲಿ ಒಂದಾದ ಕರ್ಮವೆಂಬುದು ಪುಣ್ಯಪಾಪಗಳು. ಈಶ್ವರಾರಾಧನೆಯಿಂದಲೂ ದೀಕ್ಷಾದಿ ವಿಧಿಯಿಂದಲೂ, ಅತ್ಯಂತವಾಗಿ ಪಕ್ವಮತಿಗಳಾದವರು ಮೋಕ್ಷಕ್ಕೆ ಹೋಗುವರು. ಕೇವಲ ಜ್ಞಾನ ಮೋಕ್ಷಸಾಧಕವಲ್ಲ. ದೀಕ್ಷಾದಿ ವಿಧಿಗಳಿಂದ ಉಂಟಾದ ಪರಮೇಶ್ವರನ ಅನುಗ್ರಹ ಮೋಕ್ಷಕ್ಕೆ ಕಾರಣ. ಹೀಗೆ ಜ್ಞಾನಕರ್ಮ ಸಮುಚ್ಚಯದಿಂದ ಮೋಕ್ಷವನ್ನು ಈ ದರ್ಶನವು ಹೇಳುವುದು.

ಉಪಸಂಹಾರ

ಹೀಗೆ ಕರ್ಮಸಿದ್ಧಾಂತ ಭಾರತ ಭೂಮಿಯ ಅನೇಕ ದರ್ಶನಗಳಲ್ಲಿ ಪುರಸ್ಕರಿಸಲ್ಪಟ್ಟಿದೆ. ಈ ಕರ್ಮ ಸಿದ್ಧಾಂತವು ನಿರಾಶಾದಾಯಕವಲ್ಲ. 'ಇದು ನನ್ನ ಕರ್ಮ' ಎಂಬ ಅಸಹಾಯ ಸ್ಥಿತಿಯನ್ನು ಇದು ಉಪದೇಶಿಸದು. ಆದರ ಬದಲು ಇದು ನಮ್ಮ ಅಭ್ಯುದಯದ ಆಶಾಕಿರಣವೆನ್ನಬಹುದು. ನಾವು ಯಾವುದೋ ಅಜ್ಞಾತವಾದ ವಿಧಿಯ ಸ್ವೇಚ್ಛಾವರ್ತನೆ ಎಂಬ ಕರಾಳದಂಷ್ಟ್ರೆಯಲ್ಲಿ ಸಿಕ್ಕಿಕೊಂಡಿಲ್ಲ. ನೈತಿಕ ಪ್ರಪಂಚ ಸ್ವೇಚ್ಛಾ ಪ್ರವೃತ್ತವಲ್ಲವೆಂದು ದೊಡ್ಡ ಸಮಾಧಾನವಾಗುತ್ತದೆ. ಹಾಗಿದ್ದಿದ್ದರೆ ನಮ್ಮ ಪ್ರಯತ್ನಗಳೆಲ್ಲಾ ವ್ಯರ್ಥವೇ ಆಗುತ್ತಿದ್ದವು. ಆದರೆ ಕರ್ಮ ಸಿದ್ಧಾಂತ ನಾವು ಸುಧಾರಿಸಲು ಕಾಲಾತೀತವಾಗಿಲ್ಲವೆಂಬುದನ್ನು ಸಿದ್ಧಾಂತಪಡಿಸುತ್ತದೆ. ನಮ್ಮ ಭವಿಷ್ಯದ ನಿರ್ಮಾಪಕರು ನಾವೇ ಎಂಬುದನ್ನು ತಿಳಿಸುತ್ತದೆ. ಭಗವಂತನಾದರೂ ತನಗೆ ತೋರಿದಂತೆ ಫಲಪ್ರದಾನ ಮಾಡನು. ನಮ್ಮ ಶುಭಾಶುಭ ಕರ್ಮಗಳಿಗನುಗುಣವಾಗಿಯೇ ಫಲಪ್ರದಾನ ಮಾಡುವ ನಿಷ್ಕರ್ಷೆ ಹೊಂದಿದವನಾಗಿ 'ಕರ್ಮಾಧ್ಯಕ್ಷ' ಎನಿಸುವನು. ಅಂಥ ಪರಮಪವಿತ್ರನಲ್ಲಿ ಶರಣಾಗಿ ಈ ಕರ್ಮ ಶೃಂಖಲೆಯನ್ನು ಕಿತ್ತೊಗೆದು ಮುಕ್ತರಾಗಲು ಸಾಧ್ಯವೆಂಬುದನ್ನು ಇದರಿಂದ ಅರಿಯಬಹುದು. ಹೀಗೆ ಕರ್ಮ ಸಿದ್ಧಾಂತವು ಮಾನವರ ಉದ್ಧಾರದ ಮಾರ್ಗವನ್ನು ತೋರಿ ಅಭ್ಯುದಯ ನಿಶ್ರೇಯಸ್ಸುಗಳಿಗೆ ಕಾರಣವಾಗಿದೆ.

ಜಯತಿ ನಿಗಮಚೂಡಾ ದೇಶಿಕೇಂದ್ರೋ ದಯಾಳುಃ

ಜಯತಿ ಸುಮತಿಸೇವ್ಯಾ ಶೋಭನಾ ತಸ್ಯ ಸೂಕ್ತಿಃ ।

ಜಯತಿ ಶುಭಗುಣಂ ತಂ ಶೀಲಯನ್ ಸೂರಿಸಂಘೋ

ಜಯತಿ ವಸುಮತೀ ಸಾ ತಸ್ಯ ಸಂಚಾರಧನ್ಯಾ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸವಿಶೇಷಾದ್ವೈತ–ಜೀವನ

ವೇದವಿದ್ಯಾ ವಿಪಶ್ಚಿದ್ವಶಂವದಃ, ಮಹರ್ಷಿರ್ಹಾರೀತಃ
ವೇದರತ್ನಂ ಮಹಾಮಹೋಪಾಧ್ಯಾಯಃ
ಡಾ॥ ಎ.ಎಸ್. ವೇಂಕಟನಾಥಾಚಾರ್ಯಃ
ಶ್ರೀಕಾರ್ಯಕರ್ತಾ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠಾಸ್ಥಾನಃ
ಮೈಸೂರು

ನಿರ್ವಿಶೇಷ–ವಿಶೇಷಾಭ್ಯಾಂ ಜೀವನಂ ದ್ವಿವಿಧಂ ಮತಮ್ । ತತ್ತ್ವಾಕ್ರಾನ್ತಪ್ರಭಾಭಾಸ್ಯಂ ತತ್ರ ತತ್ಸಂಪ್ರತಿಷ್ಠಿತಮ್ ॥

"ಪರಂ ಸೂಕ್ಷ್ಮಂ ಸ್ಥೂಲಂ ಚೇತಿ ತ್ರಿವಿಧಂ ಬ್ರಹ್ಮಣೋ ವಪುಃ" ಎಂದು ಬ್ರಹ್ಮ ತತ್ತ್ವವು ಮೂರು ರೀತಿ ಸೃಷ್ಟಿಯಲ್ಲಿ ವಿಭಕ್ತವಾಗಿದೆ. ಇದೇ ಚಿತ್, ಅಚಿತ್, ಈಶ್ವರ. ಇದರಲ್ಲಿ ಪರ ಈಶ್ವರ, ಚಿತ್, ಸೂಕ್ಷ್ಮ ಜೀವ, ಅಚಿತ್ ಸ್ಥೂಲ ಪ್ರಕೃತಿ. ಈ ತತ್ತ್ವದ ನಿರ್ವಿಶೇಷ, ಸವಿಶೇಷ ಮತ್ತು ವಿಶೇಷ ಸ್ತರಗಳೇ ನಿರ್ವಿಶೇಷಾದ್ವೈತ, ಸವಿಶೇಷಾದ್ವೈತ ಮತ್ತು ದ್ವೈತವಾಗಿ ಅನುಭವ ಸಿದ್ಧವಾಗಿದೆ. ಇದನ್ನು ಆಳವಡಿಸಿಕೊಂಡಿರುವ ಜೀವಗತಿ ನಿರೂಪಕವಾದ ಜೀವನವು ಆಧ್ಯಾತ್ಮಿಕ, ಆಧಿ ದೈವಿಕ ಮತ್ತು ಆಧಿಭೌತಿಕವೆಂಬ ಮೂರು ಕ್ಷೇತ್ರಗಳಿಂದ ಓತಪ್ರೋತವಾಗಿದೆ. ಇವೇ ಯೋಗಭೋಗಗಳೆಂದು ಯೋಗಿಗಳ ಅನುಭವ.

ಈ ಆತ್ಮ = ಬ್ರಹ್ಮ = ಈಶ್ವರ ತತ್ತ್ವವೇ – ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾ ಎಂದು ಐದು ಪ್ರಕಾರಗಳಿಂದ ಜೀವನದಲ್ಲಿ ಬೆಳಗುತ್ತಿದೆ. ಅಂದರೆ – ಪರ ಮತ್ತು ವ್ಯೂಹ ಆಧ್ಯಾತ್ಮಿಕ, ವಿಭವ ಮತ್ತು ಅಂತರ್ಯಾಮಿ ಆಧಿ ದೈವಿಕ, ಅರ್ಚಾ ಆಧಿಭೌತಿಕ.

ತತ್ತ್ವ – ಯೋಗ – ಮಯ ಜೀವನದಲ್ಲಿ ಈ ತತ್ತ್ವವೇ ಅಸಂಪ್ರಜ್ಞಾತ ಮತ್ತು ಸಂಪ್ರಜ್ಞಾತ ಭೂಮಿಕೆಯಾಗಿದೆ. ಇದು ತತ್ತ್ವದ ದೃಷ್ಟಿಯಿಂದ ಅದ್ವೈತವಾಗಿಯೂ ವ್ಯಕ್ತಿಯ ದೃಷ್ಟಿಯಿಂದ ದ್ವೈತವಾಗಿಯೂ ಮತ್ತು ತತ್ತ್ವವ್ಯಕ್ತಿಗಳ ಸಮನ್ವಯ ದೃಷ್ಟಿಯಿಂದ ಸವಿಶೇಷಾದ್ವೈತವಾಗಿಯೂ ಸ್ವತಃ ಜೀವನದಲ್ಲಿ ಪ್ರಕಾಶಮಾನವಾಗಿದೆ.

ಆದ್ದರಿಂದಲೇ ತತ್ತ್ವದರ್ಶಿಗಳು– "ಯಸ್ಯಾನುಭವಪರ್ಯಂತಾ ಬುದ್ಧಿಸ್ತತ್ತ್ವೇ ಪ್ರತಿಷ್ಠಿತಾ" ಎಂದು ಈ ತತ್ತ್ವವು ಜೀವನ ಅವಿನಾಭೂತವೂ ಅನುಭವ ವಿಷಯವೂ ಆಗಿರುವುದೆಂದು ತಿಳಿಸುತ್ತಾರೆ.

ಸೃಷ್ಟಿ–ಸ್ಥಿತಿ–ಲಯಗಳ ಪೈಕಿ–ಸೃಷ್ಟಿ ದ್ವೈತ, ಸ್ಥಿತಿ ಸವಿಶೇಷಾದ್ವೈತ, ಲಯ ನಿರ್ವಿಶೇಷಾದ್ವೈತವಾಗಿದೆ. ಈ ಹಿನ್ನಲೆಯಲ್ಲಿ ತತ್ತ್ವ ವ್ಯಕ್ತಿಗಳ ಸಮನ್ವಯವು ಆತ್ಮಸಿದ್ಧವಾಗಿ, ಸ್ವಭಾವಸಿದ್ಧವಾಗಿ, ನಿತ್ಯಸಿದ್ಧವಾಗಿ, ನಿಸರ್ಗಸಿದ್ಧವಾಗಿ, ಜೀವನದಲ್ಲಿರುವುದರಿಂದ ಸವಿಶೇಷಾದ್ವೈತವೇ ಅಮೂಲಾಗ್ರ ಮತ್ತು ಪರಿಪೂರ್ಣ ಅನುಭವ ವೇದಿಕೆಯಾಗಿದೆ. ಆಗಲೇ

ಪೂರ್ಣಮದ: ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ । ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಎಂದು ತತ್ತ್ವದ ದಿವ್ಯಾನುಭವವು ತ್ರಿಕಾಲಾಬಾಧಿತವಾಗಿರುತ್ತದೆ. ಕಾರಣ ಅದ್ವೈತವು ದ್ವೈತಸಾಪೇಕ್ಷ, ದ್ವೈತವು ಅದ್ವೈತಸಾಪೇಕ್ಷ, ಸವಿಶೇಷಾದ್ವೈತವು ಉಭಯ ನಿರಪೇಕ್ಷವಾಗಿರುತ್ತದೆ. ಸ್ಥಿತಿ ಸತ್ಯೆಯು ಋತಸತ್ಯಗಳನ್ನೊಳಗೊಂಡಿರುತ್ತದೆ.

ತತ್ತ್ವದ ಅರ್ಚಾಸ್ವರೂಪದ ಅನುಭವವು ಪರಸ್ವರೂಪದವರೆಗೂ ವ್ಯಾಪ್ತವಾಗಿರುವುದರಿಂದ ಪರಮಾತ್ಮನ ಪರತ್ವ ಸೌಲಭ್ಯಗಳು ಜೀವನದಲ್ಲಿ ಅನುಭವದ ಮೂಲಕ ಆಸ್ವಾದಿತವಾಗಿರುತ್ತವೆ. ಇವುಗಳ ಸಮನ್ವಯವು ಸಮಕಾಲದಲ್ಲಿಯೇ ಆಗುವುದು. ಈ ಅನುಭವವು ಅದ್ವೈತ ದ್ವೈತಗಳಲ್ಲಿ ಕ್ರಮಶ: ಪರತ್ವ ಸೌಲಭ್ಯ ಮಾತ್ರ ದರ್ಶನವಾಗುವುದರಿಂದ ಇಲ್ಲ. ಆದರೆ ಅಲ್ಲಿ ಸ್ಥಿತಿ ಕಾಲದಲ್ಲಿ ಉಪಾಸ್ಯ ಉಪಾಸಕ ಭಾವವಿರುವುದರಿಂದ ಸವಿಶೇಷದ ಅನುಭವವು ಮಾತ್ರ ಸಿದ್ಧವಾಗುತ್ತದೆ.

ಈ ಸವಿಶೇಷಾದ್ವೈತ ತತ್ತ್ವವನ್ನು ಸರ್ವತಂತ್ರ ಸ್ವತಂತ್ರರಾದ ಶ್ರೀಮನ್ನಿಗಮಾಂತ ಮಹಾದೇಶಿಕರು –

"ಚಿದಚಿತ್ಪ್ರಕಾರಂ ಬ್ರಹ್ಮ ಏಕಮೇವ ತತ್ತ್ವಮ್ । ತತ್ರ ಪ್ರಕಾರ ಪ್ರಕಾರಿಣೋ: ಪ್ರಕಾರಾಣಾಂ ಚ ಮಿಥಃ ಭೇದೇಽಪಿ ವಿಶಿಷ್ಟೈಕ್ಯಾದೇಕತ್ವವ್ಯವಹಾರ:" ಎಂದು ಜೀವನದಲ್ಲಿ ಸವಿಯುವುದರಿಂದ ವಿಶಿಷ್ಟಾದ್ವೈತವೆಂದು ಪ್ರತಿಪಾದಿಸಿರುತ್ತಾರೆ.

ಇದಕ್ಕೆ ಪ್ರಮಾಣವು – ಶ್ರೀ ಭಗವದ್ರಾಮಾನುಜರ –

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

"ನಾಮರೂಪವಿಭಾಗಾನರ್ಹ ಸೂಕ್ಷ್ಮ ಚಿದಚಿದ್ವಿಶಿಷ್ಟಂ ಬ್ರಹ್ಮ ಕಾರಣಮ್. ನಾಮರೂಪ ವಿಭಾಗಾರ್ಹಸ್ಥೂಲ ಚಿದಚಿದ್ವಿಶಿಷ್ಟಂ ಬ್ರಹ್ಮ ಕಾರ್ಯಮ್" ಎಂಬ ನಿರ್ವಿಶೇಷ–ಸವಿಶೇಷ ಶ್ರೀಸೂಕ್ತಿಯೇ ಆಗಿದೆ. ಈ ದೃಷ್ಟಿಯಿಂದ ವಿಶ್ವವೇ ಚಿದಚಿದೀಶ್ವರಮಯವಾಗಿದೆ. ವಿಶ್ವದಲ್ಲಿ ಚಿದಚಿದ್ವೈಶಿಷ್ಟ್ಯವು ಪ್ರಕಾಶಮಾನವಾಗಿರುವುದರಿಂದ ಇದರ ನಿಯಾಮಕನು ಈಶ್ವರನಾಗಿರುತ್ತಾನೆ. ಅಂತೆಯೇ ಜೀವನದಲ್ಲಿಯೂ ಚಿದಚಿತ್ಪ್ರಕಾರಕ ಈಶ್ವರನು ನಿಯಾಮಕನಾಗಿರುತ್ತಾನೆ. ಆದ್ದರಿಂದಲೇ ಅಂದರೆ ಏಕಪಾದ್ವಿಭೂತಿಯಲ್ಲಿ ಈಶ್ವರ ಜೀವಗಳಿಗೆ – ಅಂಶಾಂಶಿಭಾವವು, ಪ್ರಕಾರಪ್ರಕಾರಿಭಾವವು, ಶೇಷಶೇಷಿಭಾವವೂ ಮತ್ತು ನಿಯಾಮ್ಯನಿಯಾಮಕಭಾವವು ಸ್ವತಃಸಿದ್ಧವಾಗಿದೆ. ಈ ತತ್ತ್ವದ ವ್ಯಾಪ್ತಿಯನ್ನು ಜೀವನದ ಅನುಭವದಲ್ಲಿ ಅಳವಡಿಸಿರುವುದರಿಂದ –

ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ ಮತ್ತು ಯೋಗ ಎಂದು ದಿನವನ್ನು ಐದು ವಿಧವಾಗಿ ವಿಭಜಿಸಿ ಕೈಂಕರ್ಯವನ್ನು ತತ್ತ್ವದರ್ಶಿಗಳು ಅಮಲುಗೊಳಿಸಿರುತ್ತಾರೆ. ಪರತತ್ತ್ವದ ಶಕ್ತಿಯನ್ನು ಮತ್ತು ಧರ್ಮವನ್ನು ಲೋಕದ ಅಭಿಮುಖವಾಗಿ ಪ್ರಕಾಶಗೊಳಿಸಲು ಅಭಿಗಮನವನ್ನು, ಅನಂತರ ಅದರ ಧರ್ಮದಿಂದ ಹವಿಸ್ಸಿಗಾಗಿ ಧಾನ್ಯವನ್ನು ಸಂಗ್ರಹಿಸಲು ಉಪಾದಾನವನ್ನು, ಅದನ್ನು ಹವಿಸ್ಸಾಗಿ ಸಿದ್ಧಪಡಿಸಿ ಭಗವಂತನಿಗೆ ಅರ್ಪಿಸಲು ಇಜ್ಯೆಯನ್ನು, ಅದರ ಭೂಮಿಕೆಯನ್ನು ಜೀವನದಲ್ಲಿ ಅಳವಡಿಸಲು ಸ್ವಾಧ್ಯಾಯವನ್ನು ಮತ್ತು ಎಲ್ಲವನ್ನು ತನ್ನಲ್ಲಿಯೇ ಅಂತರ್ಮುಖದಲ್ಲಿ – "ಕೂರ್ಮೋಜ್ಞಾನೀವ ಸರ್ವಶಃ" ಎಂದು ಲಯಗೊಳಿಸಲು ಯೋಗವನ್ನು ನಿರೂಪಿಸಿರುತ್ತಾರೆ –

ಸ್ವೋದ್ಬುದ್ಧ ಕುಂಡಲೀ ಬೋಧ ಬ್ರಾಹ್ಮ್ಯೋತ್ಥಾತ್ಮಾಭಿತೋಗತಿಮ್ ।
ಗಮನಾದಭಿತೋ ಯೋನಿಂ ಸ್ವಾತ್ಮಾಭಿಗಮನಂ ಸ್ಮೃತಮ್॥

ಸ್ವಾತ್ಮ ಶಕ್ತಿಸಮೇಧಾರ್ಥಂ ಸ್ವಸಂಭಾರಗ್ರಹಾದ್ಭವಮ್ । ಜ್ಞಾನಭಿಕ್ಷಾಗ್ರಣಾದೇತದುಪಾದಾನಮಿತಿಸ್ಥಿತಮ್ ॥
ಅಂತರ್ಯಾಗ ಪ್ರಬೋಧಾಯ ಬಾಹ್ಯ ಯಾಗೋಪಪತ್ತಯೇ । ಭಿಕ್ಷಾಗ್ರಹಗತಿರ್ವೇದ್ಯಾ ಸ್ವೋಪಾದಾನ ವಿಶೇಷಿತಾ ॥

೧. ಪರ – ಪರವ್ಯೂಹ	ಸೂಕ್ಷ್ಮವಿಭು, ಅಂತರ್ಯಾಮಿ	ಸ್ಥೂಲ, ಅರ್ಚಾ
೨. ಆಧ್ಯಾತ್ಮಿಕ = ನಿರ್ವಿಶೇಷ	ಆದಿದೈವಿಕ=ಸವಿಶೇಷಃ	ಆದಿಭೌತಿಕ=ದೃಶ್ಯತ
೩. ಸುವಃ	ಭುವಃ	ಭೂಃ
೪. ಡಾ	ಅಂತರಿಕ್ಷಂ	ಪೃಥಿವೀ

ಇದರಿಂದ ಅಂತರ್ಮುಖತಾ, ಅವ್ಯಕ್ತಾವಸ್ಥಾ = ಗುಣಾತೀತವಸ್ಥಾಃ ಬೀಜಂ = ನಿರ್ವಿಶೇಷಃ, ವೃಷಃ = ಸವಿಶೇಷಃ = ವ್ಯಕ್ತಾವಸಾಧಿ = ಗುಣಾವಸ್ಥಾ–ಬಹಿರ್ಮುಖತಾ ಇವು ನಮ್ಮ ಜೀವಗತಿಯ ಅನುಭವಗಳು.

ತತ್ಸಂಸ್ಕೃತಹವಿರ್ದಿತ್ಸಾ ಪಾಕಯಜ್ಞವಿವಕ್ಷಿತಾ । ಬಾಹ್ಯಾನ್ತರ್ಯಾಗಭೂಮ್ಯಾತ್ತಾ ಸೇಜ್ಯಾ ಪರಸಮರ್ಪಿತಾ ॥

ತ್ರಿವೇದಿಸ್ವತ್ವಸಂಭೂತ್ಯೈ ಸ್ವಾಧ್ಯಾಯೋ ಮುನಿಲಕ್ಷಿತಃ । ಸಮಷ್ಟಿ ದೇವತಾಭೂತಿ ಪ್ರಬೋಧನ ಪದೋದಿತಃ ॥

ಸರ್ವಸ್ಯಾನ್ತರ್ಮುಖಸ್ಥಿತ್ಯಾ ಸಮಷ್ಟಿ–ವ್ಯಷ್ಟಿಯೋಜಕಃ । ಯೋಗ ಆತ್ಮ ಪದಾರೂಢಃ ಪಂಚಭೂಮ್ಯನುಭಾವುಕಃ ॥

ಇತ್ಥಂ ಪಂಚಮಕಾಲೇಷು ಸಾತ್ಮ ಬೋಧಾನುಭಾವನಾತ್ । ಪಂಚಕಾಲಾನ್ವಿತೋಜೀವೋ ಜೀವತ್ಯೇವ ನ ಸಂಶಯಃ ॥

ಎಂದು ಜೀವನದಲ್ಲಿ ತತ್ತ್ವದರ್ಶಿಗಳ ಅನುಭವದ ನಿಲವು.

ಅಂತೆಯೇ – ಸಮಾಶ್ರಯಣ, ಮುದ್ರಾಧಾರಣ, ಚಕ್ರಾಂಕನ ಮತ್ತು ಶರಣಾಗತಿ, ಭರನ್ಯಾಸ ಮತ್ತು ಪ್ರಪತ್ತಿಗಳನ್ನು ತತ್ತ್ವಮಯ ಜೀವನಾವಿನಾಭೂತವಾಗಿ ನಿರೂಪಿಸುತ್ತಾರೆ, ಪರಮಾರ್ಥದರ್ಶಿಗಳು. ಇವುಗಳ ಪೈಕಿ ಪರಮಪುರುಷಸ್ವರೂಪನಾದ ಸದ್ಗುರುವನ್ನು ತ್ರಿಕರಣಗಳಿಂದ ಆಕ್ರಮಿಸಿ ಅವನ ಕೃಪೆಯಿಂದ ಆಂತರನುಭೂತಿಯ ಆನಂದವನ್ನು ಸವಿದು – ಬುದ್ಧಿ, ಮನಸ್ತತ್ತ್ವಗಳ ಸಮತ್ವದಿಂದ ಊರ್ಧ್ವಗತಿಯುಳ್ಳವನಾಗಿ ಸೃಷ್ಟಿಮೂಲ–ದೃಷ್ಟಿಯುಳ್ಳವನಾಗಿದ್ದು ಜ್ಞಾನದೀಕ್ಷಿತನಾಗುವುದೇ ಸಮಾಶ್ರಯಣ ದೀಕ್ಷಾಸಂಸ್ಕಾರ. ಅನಂತರ ಅಂತರಂಗಜ್ಞಾನದೀಕ್ಷೆಯಾದ ಶರಣಾಗತಿಯು – "ಶರಣಂ ಗೃಹರಕ್ಷಿತ್ರೋಃ" ಎಂದು ಜೀವನದಲ್ಲಿ ಶುಚಿಯಾದ ಗೃಹವನ್ನು ಅಂದರೆ ನಿತ್ಯಶುದ್ಧವಾದ ರಕ್ಷಕವಾದ ಭಗವತ್ಪಾದಾರವಿಂದಗಳ ಸಾನ್ನಿಧ್ಯವನ್ನು ಪಡೆದು ಅಲ್ಲಿ ನಮ್ಮ ಸಮಸ್ತ ಭಾರಗಳನ್ನು ಅರ್ಪಿಸಿ – "ಈಶ್ವರ ಪ್ರಣಿಧಾನಾದ್ವಾ" ಎಂದು ಪ್ರಣಿಹಿತಮನಸ್ಕನಾಗಿ ತದೇಕಚಿತ್ತನಾಗಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

"ತತ್ಪಥತದಂಜನ ತಾಸಮಾಪತ್ತಿಃ" ಸಮಾಪನ್ನನಾಗಿ – "ತದಾ ದ್ರಷ್ಟು ಸ್ವರೂಪೇಽವಸ್ಥಾನಮ್" ಎಂದು ಸ್ವರೂಪ ಪ್ರತಿಷ್ಠಿತವಾಗಿ ಸ್ವಸ್ಥವಾಗಿ ಪರಮಾತ್ಮನ ಅನುಭವ ರಸಾಸ್ವಾದನೆಯನ್ನು ಮಾಡುತ್ತಾನೆ.

ಈ ಶರಣಾಗತಿಯು ಆಚಾರ್ಯನಿಷ್ಠಾ, ಉಕ್ತಿನಿಷ್ಠಾ, ಸ್ವನಿಷ್ಠಾ ಎಂದು ಮೂರು ಪ್ರಕಾರಗಳಾಗಿದೆ. ಇಲ್ಲಿ ಮೊದಲನೆಯದು ಸಾಕ್ಷಾತ್ಕೃತ ಪರಮಪುರುಷ ಸ್ವರೂಪನಾಗಿರುವ ಆಚಾರ್ಯನು ಚೇತನೋದ್ಧಾರಕ್ಕಾಗಿ ಭಗವಂತನಲ್ಲಿ ಸ್ವಾನುಭವದಿಂದ ಪ್ರಾರ್ಥಿಸಿ ಅವನನ್ನು ಆ ಪರಮಪುರುಷನ ಅಡಿದಾವರೆಗಳಲ್ಲಿ ಅರ್ಪಿಸುತ್ತಾನೆ. ಎರಡನೆಯದಾದ ಉಕ್ತಿನಿಷ್ಠೆಯು ತತ್ತ್ವದರ್ಶಿಗಳ ಅನುಭವಿಗಳ ಪರಂಪರೆಯಲ್ಲಿ ಅವರ ಅಂತಸ್ಸತ್ತ್ವವನ್ನು ಆಸ್ವಾದಿಸುತ್ತಾ ಅವರು ಕಂಡ ಮಾರ್ಗದ ಮೂಲಕ ಚೇತನನಿಗೆ ಅವನ ಸಾನ್ನಿಧ್ಯದ ಅನುಭವವನ್ನುಂಟುಮಾಡುತ್ತದೆ. ಸ್ವನಿಷ್ಠೆಯು ತನ್ನ ತಪಸ್ಸು ಮತ್ತು ಯೋಗದ ಸಾಮರ್ಥ್ಯದಿಂದ ತಾನೇ ನೇರವಾಗಿ ತನ್ನತನವನ್ನು ಅವನಲ್ಲಿ ಲೀನಗೊಳಿಸಲು ಅನುಪಮ ಸತ್ಸಾಧನವಾಗಿದೆ. ಈ ಪ್ರಪಂಚದಲ್ಲಿ ಮರ್ಕಟಕಿಶೋರನ್ಯಾಯ, ಮಾರ್ಜಾರಕಿಶೋರನ್ಯಾಯ ಮತ್ತು ಮತ್ಸ್ಯಕಿಶೋರನ್ಯಾಯಗಳು ಕ್ರಮಶಃ ಜೀವನದಲ್ಲಿ ಪ್ರಕಾಶಿತವಾಗುತ್ತದೆ. ಇವುಗಳ ಪೈಕಿ ಮೊದಲನೆಯದು ಭಗವಂತನಲ್ಲಿ ಚೇತನನು ದೃಢ ಮತ್ತು ಅಚಲ ನಿಷ್ಠೆಯಿಂದ ತನ್ನ ಸ್ವತ್ವವನ್ನು ಅರ್ಪಿಸಿ ಅವನನ್ನು ತ್ರಿಕಾಲಾಬಾಧಿತವಾಗಿ ಸಡಲಿಸದೆ ಅಪ್ಪಿಕೊಳ್ಳುವವಿಧಾನವನ್ನು ಸೂಚಿಸುತ್ತದೆ. ಎರಡನೆಯದಾದ ಮಾರ್ಜಾರಕಿಶೋರನ್ಯಾಯವು ಚೇತನಪರಿಪಕ್ವತೆಯಿಂದಲೋ ತನ್ನ ಅಪಾರ ಕೃಪಾಕಟಾಕ್ಷದಿಂದಲೋ ತನಗೆ ತಾನೇ ಬೇಕಾದ್ದನ್ನು ಹಿಡಿದುಕೊಂಡು ಉದ್ಧರಿಸುವ ಕ್ರಮವನ್ನು ಪ್ರಕಾಶಗೊಳಿಸುತ್ತದೆ. ಮೂರನೆಯದು ಚೇತನ ಸ್ಮರಣಮಾತ್ರದಿಂದಲೇ ಅವನ ಬಳಿಗೆ ಭಗವಂತನ ಆಗಮನವನ್ನು ನಿರೂಪಿಸುತ್ತದೆ. ಈ ಪ್ರಕಾರ ನಿಷ್ಠೆ, ಕೃಪೆ, ಸ್ಮರಣೆಗಳಿಂದ ಚೇತನನ ಗತಿ ವಿಧಾನಗಳು ಜೀವನದಲ್ಲಿ ಹಾಸುಹೊಕ್ಕಾಗಿವೆ. ಈ ತತ್ತ್ವವು –

ನಾಯಮಾತ್ಮಾ ಪ್ರವಚನೇನ ಲಭ್ಯಃ ನ ಮೇಧಯಾ ನ ಬಹುಧಾ ಶ್ರುತೇನ ।
ಯಮೇವೈಷ ವೃಣುತೇ ತೇನ ಲಭ್ಯಃ ತಸ್ಯೈವ ವಿವೃಣುತೇ ತನೂಂ ಸ್ವಾಮ್ ॥

ಎಂದು ಅವನ ಪರಮ ಕೃಪೆಯ ಹಿನ್ನೆಲೆಯಲ್ಲಿ ಜೀವನದ ಅವಿಭಾಜ್ಯ ಮತ್ತು ಅಪೃಥಕ್ಸಿದ್ಧ ವೇದಿಕೆಯಾಗಿದೆ. ಅಂತೆಯೇ –

ಇಹ ಚೇದವೇದೀದಥ ಸತ್ಯಮಸ್ತಿ ನಚೇದಿಹಾವೇದೀನ್ಮಹತೀ ವಿನಷ್ಟಿಃ ।
ಭೂತೇಷು ಭೂತೇಷು ವಿಚಿತ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥

ಎಂದು ಜೀವನದಲ್ಲಿ ಇದರ ಸ್ವಾರಸ್ಯಾಸ್ವಾದನೆಗಳನ್ನು ಸ್ಪಷ್ಟವಾಗಿ ಸಾಕ್ಷಾತ್ಕೃತ ಧರ್ಮಸ್ವರೂಪರಾದ ಋಷಿಗಳು ಅಳವಡಿಸಿರುವುದು ಸಹಜವಾಗಿದೆ. ಆದ್ದರಿಂದ – ಜೀವನವೇ ಚಿದಚಿದೀಶ್ವರ ತತ್ತ್ವಮಯವಾಗಿ ವ್ಯಕ್ತವಾಗಿರುವುದರಿಂದ ಇದರ ಶ್ವಾಸೋಚ್ಛ್ವಾಸವೇ ಸವಿಶೇಷಾದ್ವೈತ = ವಿಶಿಷ್ಟಾದ್ವೈತ ತತ್ತ್ವವಾಗಿದೆ.

ಜ್ಞಾನಿಗಳು –

ಪ್ರಣವೋ ಧನುಃ ಶರೋಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ । ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥

ಎಂದು – ಯೋಗ–ಭೋಗ–ಭೂಮಿಕೆಗಳ ಮೂಲಕ ಇದನ್ನು ಜೀವನದಲ್ಲಿ ಆಸ್ವಾದಿಸುತ್ತಾ ಗತಾಗತಿಗಳನ್ನು ನಿರೂಪಿಸುವುದರಿಂದ ಈ ತತ್ತ್ವದ ವಿಕಾಸವೇ ಜೀವನವಾಗಿದೆ.

ಈ ಪ್ರಕಾರ ತತ್ತ್ವಮಯ ಜೀವನದಲ್ಲಿ –

"ಆತ್ಮಕ್ರೀಡ: ಆತ್ಮರತಿ: ಕ್ರಿಯಾವಾನ್ ಏಷ ಬ್ರಹ್ಮವಿದಾಂ ವರಿಷ್ಠ:"

ಎಂದು ಆದರ ಸವಿಯನ್ನು ಸವಿದು ಜೀವನ ತತ್ತ್ವಗಳಿಗೆ ಅಪೃಥಕ್ಸಿದ್ಧಿಯನ್ನು ವಿಶದಪಡಿಸುತ್ತಾರೆ. ಈ ರೀತಿ – ಸವಿಶೇಷಾದ್ವೈತ ತತ್ತ್ವವೇ ಜೀವನದ ಅಡಿಪಾಯವಾಗಿರುತ್ತದೆ. ಇದನ್ನೇ ತತ್ತ್ವದರ್ಶಿಗಳು, ಜ್ಞಾನಿಗಳು, ಅನುಭವಿಗಳು –

ವಿಶಿಷ್ಟಂ ಪರಮದ್ವೈತ ಓತಪ್ರೋತಂ ವಿವಕ್ಷಿತಮ್ । ಜೀವನೇ ಪರಮಾರ್ಥೇಽಸ್ಮಿನ್ ತತ್ತ್ವತ್ರಯ ಮುದಾಸ್ಥಿತಮ್ ॥೧॥

ಎಂದು ಸಾರುತ್ತಾರೆ. ಇವುಗಳ ಸಮನ್ವಯವು ಆಗಮಗಳಲ್ಲಿಯೂ ರಕ್ಷಾಪಂಚಕದಲ್ಲಿಯೂ ವಿವೃತವಾಗಿದೆ. ಈ ಹಿನ್ನೆಲೆಯಲ್ಲಿ ತತ್ತ್ವದರ್ಶಿಗಳ ಅನುಭವ ಸೂಕ್ತಿಗಳನ್ನು ಸ್ಮರಿಸೋಣ –

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಜ್ಞಾನೀಚ ಪರಮೈಕಾನ್ತೀ ತದಾಯತ್ತಾತ್ಮ ಜೀವನ: । ತಚ್ಚಿತ್ತಸ್ತದ್ಗತ ಪ್ರಾಣ: ಸ್ವಾವಿನಾಭೂತಿಮಾನ್ ಭವೇತ್ ॥೨॥

ತತ್ತತ್ತ್ವಾನ್ವಿತೋ ಜೀವ: ತದಾಯತ್ತಸ್ಸನಾತನ: । ತದ್ಗತಂ ಜೀವನಂ ನಿತ್ಯಂ ಪರಮಾರ್ಥೇನ ಭಾಸತೇ ॥೩॥

ಶಿಷ್ಟಾದ್ವೈತ ಸಂತ್ರಾತಂ ಜೀವನಂ ತ್ರಿಕ್ರಮಾನ್ವಿತಮ್ । ವಾಮನಾ ತ್ರಿಕ್ರಮಂ ಯಾವತ್ ಭೂತಾಸಧ್ಯಾತ್ಮ ಲಕ್ಷಿತಮ್ ॥೪॥

ಚಿದಚಿತ್ಪರಸಂಧಾರ್ಯಂ ಆರ್ಷಂ ಜೀವನಮುನ್ನತಮ್ । ತತ್ತ್ವ ಜೀವನಯೋರ್ದಿವ್ಯಾಮಿನೋ ಭಕ್ತಿ: ಪ್ರಪಂಚಿತಾ ॥೫॥

ಅವಿನಾಭಾವಿನೀಭೂಮಿ: ತತ್ತ್ವ – ಜೀವನ ಸಂಶ್ರಿತಾ । ವಿಭಾತಿ ಪರಮಾ ಮುದ್ರಾ ತ್ರಿಪುಟೀಲಕ್ಷಣಾಶ್ರಿತಾ ॥೬॥

ತ್ರಿಪುಟೀ ಭಾವ ವಿಕ್ರಾಂತಾ ಭೂಮಿಕಾ ತತ್ತ್ವಭಾವಿತಾ । ಜೀವನೇ ಸ್ವಾನುಭೂತ್ಯೈವ ಪರಮಾರ್ಥಪ್ರಪಂಚಿತಾ ॥೭॥

ಅದ್ವೈತಂ ಪರಮಂ ತತ್ತ್ವಂ ಪರಮಾರ್ಥಂ ಸನಾತನಮ್ । ವಿಶಿಷ್ಟ ಮವಿಶಿಷ್ಟಂತತ್ ಜೀವ ಜೀವನಶಿಕ್ಷಿತಮ್ ॥೮॥

ಜೀವನಿಷ್ಠಂ ಪರಂ ರೂಪಂ ಜೀವನಂ ತದ್ಗತಂ ವಿಭುಮ್ । ಜೀವಜೀವನ ವಿಶ್ರಾಂತಂ ವಿಶಿಷ್ಟಂ ಭಾತಿ ಶಾಶ್ವತಮ್॥೯॥

ತಥಾಚ ತತ್ತ್ವ ಸಾಮ್ರಾಜ್ಯಂ ಜೀವನೇ ಪಂಚಧಾಸ್ಥಿತಮ್ । ಭೂತೇಂದ್ರಿಯ ಪ್ರಧಾನಾತ್ಮ ಪರವ್ಯಾಪ್ಯಂ ಸಮನ್ವಿತಮ್ ॥೧೦॥

ಪರಂಜ್ಞಾನಂ ಸ್ವಭಾಸ್ಯಂ ಸ್ಯಾತ್ ವಿಜ್ಞಾನಂ ಸೂಕ್ಷ್ಮಮೀರಿತಮ್ ।
ಜ್ಞಾನವಿಜ್ಞಾನ ಯುಕ್ತಾರ್ಥಂ ಸ್ಥೂಲಭೂತಾರ್ಥಲಕ್ಷಿತಮ್ ॥೧೧॥

ಇದಮಾತ್ಮ ಪ್ರತಿಷ್ಠಸ್ವಂ ವಿಶಿಷ್ಟಸ್ವಾದ್ವಯಂ ಸ್ವಜಮ್ । ಜೀವನ ವ್ಯಾಪ್ತಿ ಯೋಗಾಢ್ಯಂ ವಿಶಿಷ್ಟಂ ಶಿಷ್ಟಶಾಸಿತಮ್ ॥೧೨॥

ವಿಶಿಷ್ಟಂ ಪರಮಂ ತತ್ತ್ವಂ ಶಿಷ್ಟ ಯೋಗಾಂಚಿತಂ ಚಿರಮ್ ।
ಜೀವನಂ ಭದ್ರ ಭೂತ್ಯಾರ್ಯಂ ಭಾಸತೇ ಸ್ವಂ ಸನಾತನಮ್ ॥೧೩॥

ನಿರಂಜನಪದಂ ಸತ್ಯಂ ಋತಾನೃತ ವಿಭಾಸಕಮ್ । ಸತ್ಯಾನೃತ ಪ್ರಕಾರೋತ್ಥಂ ಜೀವನಂ ತತ್ತ್ವಶಾಸಕಮ್ ॥೧೪॥

ಚಿದಚಿತ್ಪರ ಯೋಗಾರ್ಥಮಾತ್ಮ ತತ್ತ್ವ ಪ್ರಯೋಜಕಮ್ । ಜೀವನಂ ಪ್ರಮಯಾऽऽದೀಪ್ತಂ ತತ್ತ್ವಭಾಸಾ ವಿಭಾಸತೇ ॥೧೫॥

ಇತಿ ವೇದವಿದ್ಯಾ ವಿಪಶ್ಚಿದ್ವಶಂವದಃ, ಮಹರ್ಷಿಹಾರೀತಃ
ವೇದರತ್ನಂ ಮಹಾಮಹೋಪಾಧ್ಯಾಯಃ
ಡಾ॥ ಆತ್ಮಕೂರ್ ಎಸ್ ವೇಂಕಟನಾಥಾಚಾರ್ಯಃ
ಶ್ರೀಕಾರ್ಯಕರ್ತಾ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠಾಸ್ಥಾನಃ
ಮೈಸೂರು

भरतस्येव ममापि प्रशमितविश्वापवाद्दुर्जाता।
शेषेव शिरसि नित्यं विहरतु रघुवीरपादुके भवती॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು ಇಣುಕು ನೋಟ

ಶ್ರೀಮಾನ್ ಉ. ವೇ ಆರ್. ಎ. ಶ್ರೀನಿವಾಸನ್
(ಶ್ರೀಮದಭಿನವ ರಾಮಾನುಜ ಪರಕಾಲ ಸ್ವಾಮಿಗಳ ಪೂರ್ವಾಶ್ರಮ ಜ್ಯೇಷ್ಠ ಪುತ್ರರು)
ಬೆಂಗಳೂರು

ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ ಪೂರ್ವಾಶ್ರಮದ ನಾಮಧೇಯ ಶ್ರೀ ಅನಂತಾಚಾರ್ಯರು. ಅವರು ನಡೆದು ಬಂದ ಹಾದಿ ತುಂಬ ಕ್ಲಿಷ್ಟ. ಏಕೆಂದರೆ ಅವರ ಮೂರನೆಯ ವಯಸ್ಸಿನಲ್ಲಿ ಪಿತೃ ವಿಯೋಗ. ಆದ್ದರಿಂದ ಅವರ ಬಾಲ್ಯ ಮತ್ತು ವಿದ್ಯಾಭ್ಯಾಸ ಅವರ ದೊಡ್ಡಪ್ಪನವರಾದ ಶ್ರೀ ಕೃಷ್ಣಮಾಚಾರ್ಯರ ಸಂಪರ್ಕದಲ್ಲಿ ನಡೆಯಿತು. ಶ್ರೀಮಾನ್ ಕೃಷ್ಣಮಾಚಾರ್ಯರು ಸ್ವತಃ ವೇದ ಮತ್ತು ಸಂಸ್ಕೃತದಲ್ಲಿ ನಿಷ್ಣಾತರು ಮತ್ತು ಭಾಗವತರು. ಇದರಿಂದ ಬಾಲ್ಯದಲ್ಲಿ ಅವರ ತರಬೇತಿಯಿಂದ ವೈದಿಕ ವಿದ್ಯೆಯ ಅಂಗವಾಗಿ ಸಂಸ್ಕೃತ ಸಾಹಿತ್ಯದ ಅಧ್ಯಯನ ಕಡೆಗೆ ಒಲವು ಸ್ವತಃ ಶ್ರೀ ಅನಂತಾಚಾರ್ಯರಲ್ಲಿ ಮೂಡಿತು. ಚಿಕ್ಕಬಳ್ಳಾಪುರದಲ್ಲಿ ಎಸ್.ಎಸ್.ಎಲ್.ಸಿ ಯನ್ನು ಮುಗಿಸಿ ಮುಂದೆ ಓದುವುದಕ್ಕೆ ಬಡತನದ ಬೇಗೆಯಿಂದ ಮೈಸೂರಿಗೆ ಬಂದರು. ಶ್ರೀ ಅನಂತಾಚಾರ್ಯರ ದೊಡ್ಡಪ್ಪನವರು ಪೂರ್ಣ ಆಶೀರ್ವಾದ ಮಾಡಿ "ನೀನು ವೇದ ಮತ್ತು ಸಂಸ್ಕೃತವನ್ನು ಅಧ್ಯಯನ ಮಾಡು, ಅಭಿವೃದ್ಧಿಗೆ ಖಂಡಿತ ಬರುತ್ತೀಯ, ನನ್ನ ಮಗ ಬಾಲಕೃಷ್ಣನು ಮತ್ತು ಇಡೀ ವೈಷ್ಣವ ಸಮುದಾಯವೇ ನಿನಗೆ ನಮಸ್ಕಾರ ಮಾಡುವ ಪರಿಸ್ಥಿತಿ ಬರುತ್ತದೆ" ಎಂದು. ಆಶೀರ್ವಾದ ಫಲಕಾರಿ ಆಗಿದ್ದು, ೩೫-೪೦ ವರ್ಷಗಳ ನಂತರ ಅವರು ಶ್ರೀಪರಕಾಲ ಮಠದ ಆಸ್ಥಾನಾಧಿಪತಿಯಾದಾಗ, ಎಷ್ಟು ವಿಚಿತ್ರ! ಪೂರ್ಣ ಆಶೀರ್ವಾದದ ಮಹಿಮೆಯು ಎಷ್ಟು ಫಲಕಾರಿ. ಆಶೀರ್ವಾದ ಮಾಡುವವರು ಹೃತ್ಪೂರ್ವಕವಾಗಿ, ಒಳ್ಳೆಯ ಮನಸ್ಸಿನಿಂದ ಭಗವಂತನನ್ನು ನೆನೆದು ಮಾಡಿದರೆ ತಕ್ಷಣ ಫಲ ಸಿಗದಿರಬಹುದು, ಅಂತೂ ಅವರ ಮಾತು ವೃಥಾ ಆಗುವುದಿಲ್ಲವೆಂದು ಎಣಿಸುತ್ತದೆ.

ಅವರು ಶ್ರೀಮಠದಲ್ಲಿ ಆಗಿನ ಪೀಠಾಧಿಪತಿಗಳಾಗಿದ್ದ ಶ್ರೀಮದಭಿನವ ರಂಗನಾಥ ಸ್ವಾಮಿಗಳ ಆಶ್ರಯದಲ್ಲಿ ಮಠದ ಕೈಂಕರ್ಯವನ್ನೂ ಮಾಡುತ್ತಾ ಶ್ರೀ ಮಹಾರಾಜ ಪಾಠಶಾಲೆಯಲ್ಲಿ ಸಾಹಿತ್ಯ, ವೇದಾಂತ ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಾ ಜೊತೆ ಜೊತೆಯಲ್ಲಿ ವೇದ ವಿದ್ಯೆಯನ್ನು ಮತ್ತು ಪುರೋಹಿತ ವೃತ್ತಿಯನ್ನು ಅಭ್ಯಸಿಸಿ ಮುಂದೆ ಸಾರ್ವಜನಿಕ ಸೇವೆಯಾಗಿ ಮುಂಜಿ, ಮದುವೆಗಳನ್ನು ಮಾಡುವ ತಂತ್ರ ಮತ್ತು ಮಂತ್ರಗಳನ್ನು ಅಭ್ಯಸಿಸಿದರು. ಇದರಿಂದ ಶ್ರೀವೈಷ್ಣವ ಸಮುದಾಯವು ಇವರನ್ನು ಗುರುತಿಸುವ ರೀತಿಯಲ್ಲಿ ಆದರು. ಇವರು ಸ್ವತಃ ಕಷ್ಟ ಸಹಿಷ್ಣುಗಳು, ಧೈರ್ಯ, ಸ್ಥೈರ್ಯ, ಮುನ್ನುಗ್ಗುವ ಸ್ವಭಾವ, ಇತರರ ಕಷ್ಟಕ್ಕೆ ತನ್ನಿಂದಾದ ಸಹಾಯ ಮಾಡುವವರು. ಇತರರಿಗೆ ಆತ್ಮಸ್ಥೈರ್ಯ ಮನೋಬಲವನ್ನು ತುಂಬಿ, ಅವರ ದುಃಖವನ್ನು ನಿವಾರಿಸುವವರು ಆಗಿದ್ದರು.

ತದನಂತರ ಸಂಸ್ಕೃತ ಅಧ್ಯಾಪಕ ವೃತ್ತಿಯನ್ನು ಚಿಂತಾಮಣಿ ಹೈಸ್ಕೂಲಿನಲ್ಲಿ ಪ್ರಾರಂಭಿಸಿ ಬಹಳ ಬೇಗ ಒಳ್ಳೆಯ ಹೆಸರನ್ನು ವಿದ್ಯಾರ್ಥಿ ವೃಂದದಲ್ಲೂ, ಅಧ್ಯಾಪಕ ವರ್ಗದಲ್ಲಿಯೂ ಗಳಿಸಿದರು. ಇದಕ್ಕೆ ಕಾರಣ ಅವರ ನಿಸ್ಪೃಹತೆ, ಪಾಠ ಹೇಳುವ ಶೈಲಿ, ವಿದ್ಯಾರ್ಥಿಗಳನ್ನು ತಿದ್ದುವ ರೀತಿ, ಸರಾಗವಾಗಿ ಓದುವ ಪದ್ಯಗಳು ಅದನ್ನು ವಿದ್ಯಾರ್ಥಿಗಳಿಂದಲೇ ಮಾಡಿಸಿ, ಅರ್ಥ ನಿರೂಪಣೆಯ ಮಧ್ಯೆ ಹಾಸ್ಯದ ಪ್ರವೃತ್ತಿಗಳೇ ಕಾರಣ. ವಿದ್ಯಾರ್ಥಿಗಳ ಜೊತೆಯಲ್ಲಿ ಚೆಂಡಾಟ, ಬ್ಯಾಡ್ಮಿಂಟನ್ ಎಲ್ಲಾ ವಿಧವಾದ ಆಟಗಳಲ್ಲಿಯೂ ಮತ್ತು ನಾಟಕಗಳಲ್ಲಿಯೂ ಭಾಗವಹಿಸುತ್ತಿದ್ದರು. ಇದರಿಂದ ಇವರ ಪ್ರಸಿದ್ಧಿ ದಿನೇ ದಿನೇ ಹೆಚ್ಚುತ್ತಿತ್ತು.

ಸಾಯಂಕಾಲಗಳಲ್ಲಿ ಮನೆಯಲ್ಲಿ ಗೃಹಿಣಿಯರಿಗೂ, ವಿದ್ಯಾರ್ಥಿಗಳಿಗೂ ಸಂಸ್ಕೃತ ಪಾಠ ಮಾಡಿ ಅವರುಗಳನ್ನು ಸಂಸ್ಕೃತ ಪರೀಕ್ಷೆಗಳಿಗೆ ತಯಾರು ಮಾಡುತ್ತಿದ್ದರು. ಈ ರೀತಿಯಲ್ಲಿ ಸಂಸ್ಕೃತ ಪ್ರಚಾರ ಕಾರ್ಯ ಸಾಗುತ್ತಿತ್ತು. ಈ ಮಧ್ಯೇ ವೇದಗಳನ್ನು ಹೇಳಿಕೊಡಲಾರಂಭಿಸಿದರು. ಆಮೇಲೆ ಅಲ್ಲಿ ವೇದಪಾಠಶಾಲೆಯನ್ನು ಪ್ರಾರಂಭಿಸಿದರು. ಇವರಿಗೆ ಬಿಡುವಿಲ್ಲದ ರೀತಿಯಲ್ಲಿ ಸಂಸ್ಕೃತ ಶಿಕ್ಷಣ, ವೇದ ವಿದ್ಯೆ ಉಪದೇಶ ನಿರಂತರವಾಗಿ ಸಾಗುತ್ತಿತ್ತು. ಈ ಎಲ್ಲ ವಿದ್ಯೆಗಳಿಗೂ ಶ್ರೀಹಯಗ್ರೀವರೇ ಅಧಿದೇವತೆ. ಇದನ್ನು ಗಮನಿಸಿದರೆ, ಶ್ರೀ ಶ್ರೀಗಳವರು ಪೀಠಾಧಿಪತ್ಯಕ್ಕೆ ಹೋಗುವ ಮೊದಲೇ ಶ್ರೀ ಹಯಗ್ರೀವರ ಆರಾಧನೆ ವಿದ್ಯಾದಾನದ ರೂಪದಲ್ಲಿ ಸತತವಾಗಿ ಮಾಡಿ ತದನಂತರ ಪೀಠಾಧಿಪತಿಯಾಗಿ ಶ್ರೀ ಲಕ್ಷ್ಮೀಹಯಗ್ರೀವರ ಕೈಂಕರ್ಯವನ್ನು ಮುಂದುವರೆಸಿದರು ಎಂದರೆ ಅತಿಶಯೋಕ್ತಿ ಆಗಲಾರದು ಎಂದು ನನ್ನ ಭಾವನೆ.

ಶ್ರೀ ಶ್ರೀಗಳವರಿಗೆ ಶ್ರೀಮದ್ರಾಮಾಯಣ ಪಾರಾಯಣದಲ್ಲಿ ಬಹಳ ಉತ್ಸುಕತೆ. ಹಾಗಾಗಿ ಯುಗಾದಿ ಮತ್ತು ನವರಾತ್ರಿಗಳಲ್ಲಿ ಸುಂದರಕಾಂಡ ಮತ್ತು ಸಮಗ್ರ ರಾಮಾಯಣ ಪಾರಾಯಣ ಮಾಡಿ ಪಟ್ಟಾಭಿಷೇಕ ಮಾಡುವುದು ಒಂದು ಪರಿಪಾಠ. ಇದರಿಂದ ಶ್ರೀ ಶ್ರೀಗಳವರಿಗೆ ನಿತ್ಯ ದೇವರ ಕೆಲಸದಲ್ಲಿಯೂ, ಸಂಸ್ಕೃತ ಪಾಠ ಬೋಧಿಸುವುದರಲ್ಲಿಯೂ ಇಡೀ ದಿವಸವೇ ಕಳೆದುಹೋಗುತ್ತಿತ್ತು. ಒಂದು ಸಲ ಅವರ ಸನಿಹಕ್ಕೆ ಬಂದು ಒಡನಾಡಿದವರೇ ತಿರುಗಿ ಮತ್ತೆ ಯಾವಾಗ ಅವರನ್ನು ಭೇಟಿ ಮಾಡುತ್ತೇವೆಯೋ ಅಂದು ಅನಿಸುತ್ತಿತ್ತು. ಈ ರೀತಿ ಅವರ ಶಿಷ್ಯ ವಾತ್ಸಲ್ಯ, ಕಲಿಸುವ ಕಳಕಳಿ ಎಂತಹವರನ್ನಾದರೂ ಮೂಕರನ್ನಾಗಿಸುತ್ತಿತ್ತು. ಬಡ ವಿದ್ಯಾರ್ಥಿಗಳಿಗೆ ಮನೆಯಲ್ಲಿ ವಾರಾನ್ನ ವ್ಯವಸ್ಥೆಯನ್ನು ಮಾಡಿದ್ದರು. ಇದರಿಂದ ಬಹಳ ಜನ ಬಡ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಿದ್ಯಾರ್ಥಿಗಳಿಗೆ ಸಹಾಯವಾಗುತ್ತಿತ್ತು. ಮುಂದೆ ಅವರು ಹಾಸನ, ವಿಜಯಪುರಗಳಲ್ಲಿಯೂ ಅಧ್ಯಾಪಕ ವೃತ್ತಿ ಮುಂದುವರಿಸಿ ಅಲ್ಲಿಯೂ ವೇದಪಾಠಶಾಲೆಗಳನ್ನು ತೆರೆದು ಸಂಸ್ಕೃತ ಮತ್ತು ವೇದಗಳ ಪುರೋಭಿವೃದ್ಧಿಗೆ ಬಹಳ ಶ್ರಮಿಸಿದರು. ಶ್ರೀ ಪರಕಾಲ ಪೀಠಾಧಿಪತಿಯಾದ ಆಗಿನ ಶ್ರೀ ಶ್ರೀ ಶ್ರೀನಿವಾಸ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ ಆರೋಗ್ಯ ಕ್ಷೀಣಿಸುತ್ತಿರುವುದರಿಂದ ವಿಜಯಪುರದಲ್ಲಿ ಇರುವಾಗ ಶ್ರೀಮಾನ್ ಮಹಾರಾಜರವರಿಂದಲೂ ಶ್ರೀ ಮಠದಿಂದಲೂ ಇವರನ್ನು ಪೀಠಾಧಿಪತಿಯಾಗಿ ಮಾಡಲು ಕರೆ ಬಂದಿತು.

ಮನೆಯಲ್ಲಿ ಎಲ್ಲರೂ ಹೋಗಲು ಅನುಮತಿ ಕೊಡದಿರಲು, ಆಗ ಅವರು "ನಾನು ನನ್ನ ಚಿಕ್ಕ ವಯಸ್ಸಿನಲ್ಲಿ ಶ್ರೀಮಠದ ಉಪಕಾರವನ್ನು ಪಡೆದಿರುವುದು ಅಷ್ಟಿಷ್ಟಲ್ಲ. ಈ ಪ್ರವೃದ್ಧಮಾನಕ್ಕೆ ಬಂದಿರುವುದಕ್ಕೆ ಶ್ರೀಪರಕಾಲ ಮಠ ಮತ್ತು ಶ್ರೀ ಹಯಗ್ರೀವನೇ ಕಾರಣ. ಅಂತಹದರಲ್ಲಿ ಈಗ ನನ್ನ ಸೇವೆಯನ್ನು ಆ ಸಂಸ್ಥೆಯು ಅಪೇಕ್ಷಿಸುತ್ತಿದೆ. ಈಗ ನಾನು ಉಪೇಕ್ಷಿಸಿದರೆ ನಾನು ಕೃತಘ್ನನಾಗುತ್ತೇನೆ ಮತ್ತು ನಾನು ಈ ಪೀಠಾಧಿಕಾರಕ್ಕೆ ಏರಲು ನನ್ನ ಕನಸಿನಲ್ಲಿಯೂ ಊಹಿಸಲು ಅಸಾಧ್ಯ" ಎಂದು ಪರಿಪರಿಯಾಗಿ ಹೇಳಲಾಗಿ ನಮ್ಮ ಕುಟುಂಬದವರೆಲ್ಲರ ಒಪ್ಪಿಗೆಯ ಮೇರೆಗೆ ಶ್ರೀಮಾನ್ ಅನಂತಾಚಾರ್ಯರು ಶ್ರೀಮಠದ ಉತ್ತರಾಧಿಕಾರಿಯಾಗಲು ಉದ್ಯುಕ್ತರಾಗಿ ಮೈಸೂರಿಗೆ ಮಠದ ವಾಹನದಲ್ಲಿ ಪ್ರಯಾಣಿಸಿದರು.

ವಿದ್ವಜ್ಜನರ, ಶ್ರೀಮನ್ಮಹಾರಾಜರ ಮತ್ತು ಪರಕಾಲ ಮಠದ ಶಿಷ್ಯರ ಸಮ್ಮುಖದಲ್ಲಿ ೩ನೇ ಜೂನ್ ೧೯೭೧ ರಂದು ಪಟ್ಟಾಭಿಷಿಕ್ತರಾಗಿ ಶ್ರೀ ಶ್ರೀ ಪರಕಾಲ ಮಠದ ೩೫ನೇಯ ಯತಿವರ್ಯರಾದರು. ಅವರ ಕಾಲದಲ್ಲಿ ನಿತ್ಯ ಕೈಂಕರ್ಯ ಯೋಜನೆ, ಮುಳಬಾಗಿಲಿನಲ್ಲಿ ಪಾಲಿಟೆಕ್ನಿಕ್, ಸೋಮನಹಳ್ಳಿಯಲ್ಲಿ ಬಾಲಕಿಯರ ಪಾಠಶಾಲೆ, ಬೆಂಗಳೂರಿನಲ್ಲಿ ಕಲ್ಯಾಣಮಂಟಪ, ಚಿಂತಾಮಣಿಯಲ್ಲಿ ಬ್ರಹ್ಮಚೈತನ್ಯ ಮಂದಿರದ ಹಾಸ್ಟೆಲ್, ಮೈಸೂರಿನಲ್ಲಿ ಶ್ರೀರಾಮ ಮಂದಿರಕ್ಕೆ, ಇನ್ನೂ ಅನೇಕ ಸಂಘ ಸಂಸ್ಥೆಗಳಿಗೆ ಉದಾರ ಧನ ಸಹಾಯದಿಂದ ಪ್ರೋತ್ಸಾಹಿಸಿದರು.

ಶ್ರೀಮಠದ ಪೀಠವನ್ನು ಸ್ವೀಕರಿಸಿದ ಮೇಲೆಯೂ ಸಹ ಅಲ್ಲಿಯ ಶಿಷ್ಯರಿಗೆ ಮತ್ತು ಅವರ ಮಕ್ಕಳಿಗೆ ಓದಲು ಪ್ರೋತ್ಸಾಹಿಸಿ, ಅವರೇ ಸ್ವತಃ ಸಂಸ್ಕೃತ, ವೇದ ಪಾಠಗಳನ್ನು ಹೇಳಿಕೊಟ್ಟು ಇಂದು ಅವರು ಸಮಾಜಕ್ಕೆ ಉಪಯೋಗವಾಗುವ ರೀತಿಯಲ್ಲಿ ಮಾಡಿರುತ್ತಾರೆ. ಅವರು ಕರ್ನಾಟಕ, ಮದ್ರಾಸು, ಹೈದರಾಬಾದ್, ಗುಜರಾತ್ ಇಡೀ ದಕ್ಷಿಣ ಭಾರತವನ್ನು ಸಂಚರಿಸಿ ಎಲ್ಲಾ ಶಿಷ್ಯ ವೃಂದದವರಿಗೂ ಸಮಾಶ್ರಯಣ, ಚಕ್ರಾಂಕನ, ಶ್ರೀವೈಷ್ಣವ ದೀಕ್ಷೆಯನ್ನು ಕೊಟ್ಟು, ಶ್ರೀಲಕ್ಷ್ಮೀ ಹಯಗ್ರೀವರ ಡೋಲೋತ್ಸವಗಳಿಂದ ಪುನೀತರನ್ನಾಗಿಸಿ ಧರ್ಮ ಸಂದೇಶಗಳನ್ನು ಸಾರಿ ಒಳ್ಳೆಯ ಪ್ರಜೆಗಳಾಗಿ ಬಾಳಲು ಬಹಳ ಶ್ರಮಿಸಿದ್ದಾರೆ ಎಂದರೆ ತಪ್ಪಾಗಲಾರದು. ಅವರು ಇತರ ಧರ್ಮದವರನ್ನೂ ಹಾಗು ಸಂಪ್ರದಾಯಗಳನ್ನೂ ಸಹ ಸರಿಯಾದ ರೀತಿಯಲ್ಲಿ ಗೌರವಿಸುತ್ತಿದರು. ಯಾರಲ್ಲಿ ಯೋಗ್ಯತೆ ಇದೆಯೋ ಅವರಿಗೆ ಪ್ರೋತ್ಸಾಹ ನೀಡುತ್ತಿದ್ದರು ಮತ್ತು ಯಾರಿಗೂ ಸೋಗು ಹಾಕುತ್ತಿರಲಿಲ್ಲ. ಹೀಗಾಗಿ ಅವರ ವ್ಯಕ್ತಿತ್ವ ಬಹುಮುಖವಾಗಿತ್ತು.

ಅವರ ಧೈರ್ಯ, ಶ್ರದ್ಧಾ ಭಕ್ತಿ, ಕಷ್ಟ ಸಹಿಷ್ಣುತೆ, ಉತ್ಸಾಹ, ಬಂಧು/ಶಿಷ್ಯ ವಾತ್ಸಲ್ಯ, ಭಗವಂತನಲ್ಲಿ ಅಪಾರ ಪ್ರೇಮ, ಸ್ನೇಹ ಜೀವನ, ಮುನ್ನುಗ್ಗುವುದು, ಸಮಯ ಪರಿಪಾಲನೆ, ಸಂಸ್ಕೃತ ಅಭಿಮಾನ, ಸಂಪ್ರದಾಯ ಶುದ್ಧ ಜೀವನ, ಕೈಂಕರ್ಯ, ಪಂಡಿತರೂ, ಪಾಮರರೂ ಮತ್ತು ಇತರ ವರ್ಗಕ್ಕೆ ಸೇರಿದ ಅಧಿಕಾರಿಗಳನ್ನು ಗೌರವಿಸುವುದು ಮುಂತಾದ ಗುಣಗಳಿಂದ ಆವಿರ್ಭೂತರಾದವರೇ ಶ್ರೀ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು ಎಂದರೆ ಅತಿಶಯೋಕ್ತಿಯಲ್ಲ. ಇವರಲ್ಲಿಯ ಕೆಲವು ಗುಣಗಳಾದರೂ ನಮಗೆ ಭಗವಂತನು ಕರುಣಿಸಲಿ ನಮ್ಮ ಬಾಳನ್ನು ಉಜ್ಜೀವನಗೊಳಿಸಲಿ ಎಂದು ಶ್ರೀ ಲಕ್ಷ್ಮೀ ಹಯಗ್ರೀವರನ್ನೂ, ರಾಮಾನುಜ, ದೇಶಿಕ, ಎಲ್ಲ ಆಳ್ವಾರುಗಳನ್ನು ಮತ್ತು ಶ್ರೀಮದಭಿನವ ರಾಮಾನುಜ ಪರಕಾಲ ಸ್ವಾಮಿಗಳನ್ನು ಪ್ರಾರ್ಥಿಸಿ ಕೃತಾರ್ಥರಾಗೋಣ.

ಶ್ರೀಮದಭಿನವ ರಾಮಾನುಜ ಪರಕಾಲ ಸ್ವಾಮಿಗಳು ಸ್ವಲ್ಪ ಕಾಲ ಅಸ್ವಸ್ಥರಾಗಿದ್ದರು. ಅವರು ತಮ್ಮ ೮೧ನೆಯ ವಯಸ್ಸಿನಲ್ಲಿ, ಜುಲೈ ೨೩, ೧೯೯೨ ರಲ್ಲಿ ಪರಂಧಾಮಗೈದರು. ಕೂಡಲೇ ಆರಮನೆಯ ಅಧಿಕಾರ ವರ್ಗಕ್ಕೂ ಮತ್ತು ಇತರ ಇಲಾಖಾ ಅಧಿಕಾರಿಗಳಿಗೂ ಈ ವಿಚಾರವನ್ನು ತಿಳಿಸಲಾಯಿತು. ಅದೇ ದಿನ ರಾತ್ರಿ ೧೦ ಘಂಟೆ ಸಮಯದಲ್ಲಿ ಆರಮನೆಯ ಗೌರವ ಸಮೇತ ಉತ್ಸವವಾದ ಮೇಲೆ ಮಠದ ಆವರಣದಲ್ಲಿ ಬೃಂದಾವನಸ್ಥರಾದರು.

ತನಿಯನ್

ನೂತ್ನ ಶ್ರೀರಂಗನಾಥಾಂಘ್ರಿಮಪದಕಲಿಜಿಲ್ಲಬ್ಧ ಚಕ್ರಾಂಕನ ಶ್ರೀಃ
ತ್ರಯ್ಯಂತ ದ್ವಂದ್ವ ತತ್ತ್ವಂ ತದನಘ ಚರಣಂ ನ್ಯಸ್ತ ಭಾರಂ ಯತೀಂದ್ರಾತ್ ।
ಪ್ರತ್ಯಗ್ರ ಶ್ರೀನಿವಾಸಾತ್ ಸಮಧಿಗತ ತುರೀಯಾಶ್ರಮಂ ಸಂಶ್ರಯಾಮಃ
ನವ್ಯಂ ರಾಮಾನುಜಾಖ್ಯಂ ಕಲಿಮಥನ ಗುರುಂ ಬ್ರಹ್ಮತಂತ್ರ ಸ್ವತಂತ್ರಂ ॥
ಲಕ್ಷ್ಮೀ ಹಯಾಸ್ಯ ಪಾದೂವರಿವಸ್ಯೈ ಕಾಂತಮಾನಸಃ ಸತತಂ ।
ಜಯತು ಶ್ರೀಮದಭಿನವ ರಾಮಾನುಜ ಯೋಗೀಂದ್ರ ಪರಕಾಲಃ ॥
ಶ್ರೀಮತೇ ಲಕ್ಷ್ಮೀ ಹಯಗ್ರೀವ ದಿವ್ಯ ಪಾದುಕಾ ಸೇವಕ
ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕಾಯ ನಮಃ ।

ಆರ್. ಎ. ಶ್ರೀನಿವಾಸನ್, ಬೆಂಗಳೂರು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನನ್ನ ತಂದೆಯವರು ಮತ್ತು ಆಚಾರ್ಯರು

ಶ್ರೀಮಾನ್ ಉ. ವೇ ಆರ್. ಎ. ಶ್ರೀಭಾಷ್ಯಂ
(ಶ್ರೀಮದಭಿನವ ರಾಮಾನುಜ ಪರಕಾಲ ಸ್ವಾಮಿಗಳ ಪೂರ್ವಾಶ್ರಮ ಪುತ್ರರು)
ಬೆಂಗಳೂರು

ನಮ್ಮ ಭಾರತ ದೇಶದಲ್ಲಿ ಸನಾತನವಾದುದು ಧರ್ಮ ಮತ್ತು ಅಧ್ಯಾತ್ಮಿಕತೆ. ಇವೆರಡೂ ನಮ್ಮಗಳ ಜೀವನದಲ್ಲಿ ಹಾಸುಹೊಕ್ಕಾಗಿದೆ. ಧರ್ಮದ ಅವನತಿಯುಂಟಾದಾಗ, ಅನೇಕ ಮಹನೀಯರು, ಸಂತರು, ಅವತಾರ ಪುರುಷರು ಹುಟ್ಟಿ ಧರ್ಮವನ್ನು ನೆಲೆಗೊಳಿಸಿದ್ದಾರೆ. ಈ ದಿಸೆಯಲ್ಲಿ ಅವತಾರತ್ರಯ ಆಚಾರ್ಯ ಪುರುಷರಲ್ಲಿ ಶ್ರೀ ಶ್ರೀ ರಾಮಾನುಜರ ಹೆಸರು ಚಿರಪರಿಚಿತ. ಇವರು ಏಕನಿಷ್ಠೆಯಿಂದ ಭಗವಂತನನ್ನು ಆಶ್ರಯಿಸಿ, ಆತನ ಸೇವೆಗಾಗಿಯೇ ಇಡೀ ಜೀವನವನ್ನು ಮುಡುಪಾಗಿಟ್ಟು ಅಸಂಖ್ಯಾತ ಜನರನ್ನು ಭಕ್ತಿ, ಪ್ರಪತ್ತಿಯ ಮಾರ್ಗಕ್ಕೆ ಹಚ್ಚಿದ ಮಹಾನುಭವರು. ಶ್ರೀ ರಾಮಾನುಜರ ಈ ಮತ "ವಿಶಿಷ್ಟಾದ್ವೈತ ಮತ" ಎಂದು ಪ್ರಸಿದ್ಧವಾಯಿತು. ಈ ಪರಂಪರೆಯಲ್ಲಿ ಶ್ರೀ ವೇದಾಂತ ದೇಶಿಕರು ಅಥವಾ ವೆಂಕಟನಾಥರೆಂಬುವರು ವಿದ್ಯೆಗೆ, ವಿವೇಕಕ್ಕೆ, ವಿರಕ್ತಿಗೆ ಅನೇಕ ಗುಣಗಳಿಗೆ, ದಯಾದಾಕ್ಷಿಣ್ಯಕ್ಕೆ, ಆದರ್ಶ ಪ್ರಾಯರಾದ ಮಹನೀಯರು. ವಿದ್ಯಾ ಪ್ರಧಾನ ದೇವರಾದ ಶ್ರೀ ಲಕ್ಷ್ಮೀಹಯಗ್ರೀವರ ದಿವ್ಯಕಟಾಕ್ಷಕ್ಕೆ ಪಾತ್ರರಾದ ಭಾಗವತೋತ್ತಮರು. ಶ್ರೀ ವೇದಾಂತ ದೇಶಿಕರಿಗೆ ಅನೇಕ ಶಿಷ್ಯರಿದ್ದರು. ಅವರಲ್ಲಿ ಒಬ್ಬ ಅರ್ಹ ಶಿಷ್ಯರಿಗೆ ಸನ್ಯಾಸ ದೀಕ್ಷೆ ಕೊಟ್ಟು ಬ್ರಹ್ಮತಂತ್ರ ಸ್ವತಂತ್ರಸ್ವಾಮಿ ಎಂಬ ಅಭಿದಾನ ನೀಡಿದರು. ಇನ್ನು ಮುಂದೆ ವಿಶಿಷ್ಟಾದ್ವೈತ ಮತವನ್ನು ಪ್ರಚಾರಗೊಳಿಸಬೇಕೆಂದು ಅಪ್ಪಣೆ ಮಾಡಿದರು. ಮುಂದೆ ಈ ಆಚಾರ್ಯ ಪರಂಪರೆ ವಿಶಿಷ್ಟಾದ್ವೈತ ಮತವನ್ನು ಉಜ್ಜೀವನಗೊಳಿಸುತ್ತಾ ಮುಂದುವರೆಯಿತು. ಈ ಮಠ ಪರಂಪರೆಯ 33ನೇ ಯತಿವರ್ಯರಾಗಿ ಶ್ರೀ ಶ್ರೀ ಶ್ರೀ ಅಭಿನವ ರಂಗನಾಥ ಸ್ವಾಮಿಗಳು ವಿದ್ವತ್ತಿಗೆ, ಭಕ್ತಿ, ವೈರಾಗ್ಯಗಳಿಗೆ, ತಪಸ್ಸಿಗೆ ತುಂಬಾ ಆದರ್ಶಪ್ರಾಯರೆಂಬ ಕೀರ್ತಿ ಭಾಜನರಾಗಿದ್ದರು. ಅನೇಕ ಗ್ರಂಥಗಳನ್ನು ರಚಿಸಿ ವಿಶಿಷ್ಟಾದ್ವೈತ ಮತವನ್ನು ತುಂಬಾ ಮುನ್ನಡೆಸುವಲ್ಲಿ ಸಫಲರಾದರು. ಅವರ ಕಾಲಾನಂತರ ಈ ಪರಕಾಲ ಮಠದ 35ನೇ ಯತಿವರ್ಯರಾಗಿ ಅದಕ್ಕೆ ಅಧಿಪತಿಗಳಾಗಿ ಬಿಜಯ ಮಾಡಿದವರು ಶ್ರೀ ಶ್ರೀ ಶ್ರೀ ಅಭಿನವ ರಾಮಾನುಜ ಸ್ವಾಮಿಗಳು.

ಶ್ರೀ ಶ್ರೀ ಅಭಿನವ ರಾಮಾನುಜರ ಪೂರ್ವಾಶ್ರಮದ ನಾಮಧೇಯ "ಶ್ರೀ ಅನಂತಾಚಾರ್" ಎಂದು. ಇವರ ಅವತಾರ 14.09.1911ರಂದು ಚಿಕ್ಕಬಳ್ಳಾಪುರದ ಪಿಂಗಳ ನಾಮ ಸಂವತ್ಸರ ಭಾದ್ರಪದ ಮಾಸ, ಶುಕ್ಲ ಪಕ್ಷ, ಏಕಾದಶಿ, ಗುರುವಾರ ಬ್ರಾಹ್ಮೀ ಕಾಲದಲ್ಲಿ ಆಯಿತು. ಮಾತಾಪಿತೃಗಳು ತಿರುಮಲೆ ರಂಗಾಚಾರ್ ಮತ್ತು ಶ್ರೀಮತಿ ಸೀನಮ್ಮ. ಇವರಿಗೆ ಮೂರನೇ ವರ್ಷದಲ್ಲಿ ಪಿತೃ ವಿಯೋಗ, ತಾಯಿಯವರ ಲಾಲನೆ, ಪಾಲನೆ ಮತ್ತು ದೊಡ್ಡಪ್ಪನವರಾದ ತಿರುಮಲೆ ಕೃಷ್ಣಮಾಚಾರ್ ಎಂಬುವರ ಪರಿವೀಕ್ಷಣೆಯಲ್ಲಿ ಬಾಲ್ಯವು ಕಳೆಯಿತು.

ವಿದ್ಯಾದದಾತಿ ವಿನಯಂ, ವಿನಯಾತ್ ಯಾತಿ ಪಾತ್ರತಾಮ್
ಪಾತ್ರತ್ವಾತ್ ಧನಮಾಪ್ನೋತಿ, ಧನಾತ್ ಧರ್ಮಂತತಃ ಸುಖಂ॥

ವಿದ್ಯೆ ವಿನಯವನ್ನು ವಿನಯವು ಅರ್ಹತೆಯನ್ನು ಅರ್ಹತೆಯಿಂದ ಉದ್ಯೋಗವು, ಅದರಿಂದ ಧನ ಸಂಪಾದನೆಯು, ನಂತರ ಧರ್ಮಾಚರಣೆ, ಸುಖ ಎಂಬುದನ್ನು ಮನಗಂಡು ವಿದ್ಯಾರ್ಜನೆಗೆ ಮುಂದಾದರು.

ಪ್ರೌಢಶಾಲೆಯ ವಿದ್ಯಾಭ್ಯಾಸದ ನಂತರ ಅವರು ದೊಡ್ಡಪ್ಪನವರ ಆದೇಶದಂತೆ ಸಂಸ್ಕೃತ ಭಾಷೆಯ ಅಭ್ಯಾಸಕ್ಕೆ ಮೈಸೂರಿನಲ್ಲಿ ಮಹಾರಾಜ ಸಂಸ್ಕೃತ ಪಾಠಶಾಲೆಗೆ ಸೇರಿದರು. ಮೈಸೂರು ಮಹಾರಾಜರ ಗುರುಪೀಠವಾದ ಶ್ರೀಪರಕಾಲ ಮಠದಲ್ಲಿ ಊಟ, ವಸತಿಗಳಿಗೆ ಅನುಕೂಲ ಮಾಡಿಕೊಂಡರು. ಆಗಿನ ಶ್ರೀ ಶ್ರೀ ಶ್ರೀ ಅಭಿನವ ರಂಗನಾಥ ಸ್ವಾಮಿಗಳ ಅನುಗ್ರಹದಿಂದ ಪಂಚ ಸಂಸ್ಕಾರಗಳನ್ನು ಹೊಂದಿದರು. ಶ್ರೀ ಮಠದಲ್ಲಿ (ಚಿಕ್ಕಸನ್ನಿಧಿ) ಲಕ್ಷ್ಮೀಹಯಗ್ರೀವ ದೇವರ ಆರಾಧನೆ ಮಾಡಿಕೊಂಡಿದ್ದರು. ಸಂಸ್ಕೃತ ಪಾಠಶಾಲೆಯಲ್ಲಿ ವೇದಾಂತ, ಸಾಹಿತ್ಯ ವಿದ್ವತ್ ಪರೀಕ್ಷೆಗಳಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದರು. ನಂತರ ಶ್ರೀ ರಂಗನಾಥ ಸ್ವಾಮಿಗಳಿಂದ ಶ್ರೀಭಾಷ್ಯ ಮತ್ತು ಇತರ ವೇದಾಂತ ಗ್ರಂಥಗಳ ಕಾಲಕ್ಷೇಪವಾಯಿತು.

ಚಕ್ರವರ್ತಿ ವಂಶದ ಶ್ರೀವತ್ಸ ಗೋತ್ರದಲ್ಲಿ ಜನಿಸಿದ ಕಮಲಮ್ಮ ಎಂಬುವರನ್ನು ವಿವಾಹವಾಗಿ, ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಆಚಾರ್ಯರಿಗೆ ಒಂದು ಹೆಣ್ಣು ಎರಡು ಗಂಡು ಸಂತಾನವಾಯಿತು. ಸಂಸಾರದ ನಿರ್ವಹಣೆಗೆ ಉದ್ಯೋಗವನ್ನು ಆರಸಬೇಕಾಗಿ ಬಂತು. ಶ್ರೀ ಮಠದಿಂದ ಹೊರಬಂದು ಚಿಂತಾಮಣಿ ಎಂಬ ಊರಿನಲ್ಲಿ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಸಂಸ್ಕೃತದ ಅಧ್ಯಾಪಕರಾಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು. ಅವರು ಶಾಲೆಯಲ್ಲಿ ಅಲ್ಲದೆ ಹೊರಗೂ ಸಹ ತಮ್ಮ ಉಪಾಧ್ಯಾಯ ವೃತ್ತಿಗೆ ಸಮಯವನ್ನು ಸಮುಚಿತವಾಗಿ ಉಪಯೋಗಿಸಿದರು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅನಂತಾಚಾರ್ಯರು ಸುಶ್ರಾವ್ಯ ಕಂಠದಿಂದ ಸಂಸ್ಕೃತದ ಶ್ಲೋಕವನ್ನು ರಂಜಿಸುವಂತೆ ಹೇಳುತ್ತಿದ್ದರು. ಮಕ್ಕಳಿಗೆ ಉತ್ಸಾಹ ಮತ್ತು ಆಸಕ್ತಿಯನ್ನು ಹೆಚ್ಚು ಮಾಡುವ ಕಲೆಯಲ್ಲಿ ನಿಷ್ಣಾತರು. ಮಕ್ಕಳಿಗೆ ಭಾಷೆ ಮನದಟ್ಟು ಮಾಡಿಸುವ ಕಲೆ ಪಂಡಿತರಿಗೆ ಚೆನ್ನಾಗಿ ತಿಳಿದಿತ್ತು. ಮಕ್ಕಳಿಗೆ ಸುಲಭ ರೀತಿಯಿಂದ ಸಂಸ್ಕೃತ ಭಾಷೆಯನ್ನು ಕಲಿಸುವ ರೀತಿ ಅವರದಾಗಿತ್ತು. ಸಂಸ್ಕೃತ ಭಾಷೆ ಎಂದರೆ ಕಬ್ಬಿಣದ ಕಡಲೆ ಅನ್ನುವ ಭಾವನೆಯನ್ನು ಮಕ್ಕಳ ಮನಸ್ಸಿನಿಂದ ದೂರಮಾಡಿ ಸಂಸ್ಕೃತ ಭಾಷೆಯ ಲಾಲಿತ್ಯ ಮನಸ್ಸಿಗೆ, ಬುದ್ಧಿಗೆ ಆಹ್ಲಾದವನ್ನು ಉಂಟು ಮಾಡುವುದೆಂದು ಕಲಿಯುವ ಮಕ್ಕಳಿಗೆ ಮನದಟ್ಟು ಮಾಡಿಸಿದರು. ಹಾಗಾಗಿ ಒಬ್ಬರು, ಇಬ್ಬರು ಇದ್ದ ಕಡೆ ಅನೇಕ ಮಕ್ಕಳು, ವಿದ್ಯಾರ್ಥಿಗಳು ಕೂಡ ಸಂಸ್ಕೃತ ಭಾಷೆಯನ್ನು ಕಲಿಯಲು ಸ್ವಯಂ ಪ್ರೇರಿತರಾಗಿ ಬಂದರು. ಕೆಲವು ಬ್ರಾಹ್ಮಣ ವಿದ್ಯಾರ್ಥಿಗಳು ವೇದವನ್ನು ಕಲಿಯುವ ಉತ್ಸಾಹ ತೋರಿದರು. ಶ್ರೀಯುತರು ಸಂಜೆಯಲ್ಲಿ ಅಥವಾ ವಿರಾಮದ ವೇಳೆಯಲ್ಲಿ ವೇದ ಪಾಠವನ್ನು ಹೇಳಿಕೊಡುತ್ತಿದ್ದರು. ಆಚಾರ್ಯವರರಿಗೆ ಬರಿ ಸಂಸ್ಕೃತ ಭಾಷೆಯನ್ನೇ ಮಾತ್ರ ಅಭ್ಯಾಸ ಮಾಡಬೇಕೆಂದಿರಲಿಲ್ಲ. ವಿದ್ಯಾರ್ಥಿಗಳು ಎಲ್ಲವನ್ನೂ ಕಲಿಯಬೇಕೆಂಬುದು ಅವರ ಆಶಯವಾಗಿತ್ತು.

ಅವರು ಕಲಿಸುತ್ತಿದ್ದ ಶಾಲೆಯಲ್ಲಿ ಯಾವ ವಿದ್ಯಾರ್ಥಿಯೇ ಆಗಲಿ, ಯಾವುದೇ ವಿಷಯದಲ್ಲಿ ಹಿಂದೆ ಇದ್ದರೆ, ಅಂತಹ ವಿಷಯಗಳನ್ನು ಭೋದನೆ ಮಾಡುವ ಅಧ್ಯಾಪಕರನ್ನು ಸಂಪರ್ಕಿಸಿ, ವಿನಯಪೂರ್ವಕವಾದ ಅರಿಕೆಯಿಂದ ಮತ್ತೊಮ್ಮೆ ಆ ವಿಷಯಗಳನ್ನು ಬೋಧಿಸುವಂತೆ ಮಾಡುತ್ತಿದ್ದರು. ಅವರಿಗೆ ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಇದ್ದ ಕಳಕಳಿ ನೋಡಿ ಕೆಲವರಿಗೆ ವಿಸ್ಮಯವಾಗುತ್ತಿತ್ತು. ಈ ನಡುವೆ ಸಂಸ್ಕೃತ ಭಾಷೆಯನ್ನು ಕಲಿಯಲು ಬರುತ್ತಿದ್ದ ವಿದ್ಯಾರ್ಥಿಗಳು ಮತ್ತು ಹಿರಿಯರ ಅಪೇಕ್ಷೆಯಂತೆ ಸಂಸ್ಕೃತ ಪಾಠಶಾಲೆಯನ್ನು ತೆರೆಯುವ ಸಂಕಲ್ಪ ಮಾಡಿದರು.

ನಚೋರ ಹಾರ್ಯಂ ನಚರಾಜಹಾರ್ಚ್ಯಂ ನಭ್ರಾತೃ ಭೋಜ್ಯಂ ನಚಭಾರಕಾರಿ
ವ್ಯಯೆಕೃತೆ ವರ್ಧತ ಏವನಿತ್ಯಂ ವಿದ್ಯಾಧನಂ ಸರ್ವಧನಃ ಪ್ರಧಾನಂ

ರಾಜನಿಂದಾಗಲಿ, ಕಳ್ಳನಿಂದಾಗಲಿ ಅಪಹರಿಸಲು ಆಗದ್ದು ಸಹೋದರರಿಂದ ಭುಂಜಿಸುವುದಕ್ಕಾಗಲಿ, ಭಾರವಾಗಲಿ ಆಗುವುದಿಲ್ಲ. ವಿದ್ಯೆ ದಾನ ಮಾಡಿದಷ್ಟೂ ಹೆಚ್ಚಾಗುವುದೇ ವಿನಹ ಕಡಿಮೆಯಾಗದು ಅಂತಹ ವಿದ್ಯೆಯೆಂಬ ಧನವು ಎಲ್ಲದಕ್ಕಿಂತ ಶ್ರೇಷ್ಟವಾದದ್ದು ಎಂಬ ಈ ಶ್ಲೋಕದ ತಾತ್ಪರ್ಯವನ್ನು ತಮ್ಮ ಜೀವನದಲ್ಲಿ ಅನಂತಾಚಾರ್ಯರು ಹೆಚ್ಚಿನ ರೀತಿಯಲ್ಲಿ ಅನುಷ್ಟಾನಕ್ಕೆ ತಂದರು. ಚಿಂತಾಮಣಿಯಲ್ಲಿ ಒಂದು ಹೊಸ ಶಾಲೆಯ ಅದು ಸಂಸ್ಕೃತ ಪಾಠಶಾಲೆಯ ಉದಯವಾಯಿತು.

ಈ ದೇವ ಭಾಷೆಯ ಪ್ರಚಾರ ಕಾರ್ಯದಲ್ಲಿ ಹಣವನ್ನು ಸಂಪಾದಿಸಬೇಕೆಂದಾಗಲಿ ಅಥವಾ ಇನ್ನಾವುದೇ ಸ್ವಾರ್ಥ ಸಾಧನೆಯ ಭಾವನೆಯಾಗಲಿ ಇರಲಿಲ್ಲ. ದೇವರು ತನಗೆ ಕೊಟ್ಟ ವಿದ್ಯೆಯನ್ನು ಇತರರಿಗೆ ಹಂಚಿ ಅವರ ಆನಂದ ಅನುಭವವನ್ನು ಪಡೆಯಬೇಕೆಂಬ ಸದುದ್ದೇಶ ಮಾತ್ರವಿತ್ತು. ನಿವೃತ್ತರಾಗುವವರೆಗೂ ಹಾಗೆಯೇ ನಡೆದುಕೊಂಡರು.

ಲಿಂಗಭೇದವಿಲ್ಲದೆ ಯಾರು ಸಂಸ್ಕೃತ ಭಾಷೆಯನ್ನು ಕಲಿಯಬೇಕೆಂದು ಬರುತ್ತಾರೋ ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದರು. ಅವರಿಗೆ ಕಲಿಯಲು ಬೇಕಾದ ಸಹಾಯ ಸಾಮಾಗ್ರಿಗಳನ್ನು ಒದಗಿಸುತ್ತಿದ್ದರು. ಮನುಷ್ಯ ಜೀವಿಯು ಮೊದಲು ವಿದ್ಯಾರ್ಜನೆ ಮಾಡಬೇಕು. ಅದಕ್ಕೆ ಬೇಕಾದ ಅನುಕೂಲತೆಗಳನ್ನು ಇಲ್ಲದವರಿಗೆ ಇರುವವರು ಮಾಡಿಕೊಡಬೇಕೆಂಬುದು ಇವರ ಆಶಯವಾಗಿತ್ತು. ಆದರೆ ಈ ವಿಷಯದಲ್ಲಿ ಬೇರೆಯವರನ್ನು ಬಲವಂತ ಪಡಿಸುತ್ತಿರಲಿಲ್ಲ. ತಮಗೆ ಬರುತ್ತಿದ್ದ ಆದಾಯ ಕಡಿಮೆಯಾದರೂ ಬಡ ವಿದ್ಯಾರ್ಥಿಗಳನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ತಪ್ಪು ಮಾಡಿದಲ್ಲಿ ದಂಡಿಸಿ ಸರಿದಾರಿಗೆ ತರುತ್ತಿದ್ದರು. ಕೆಲವು ಪಾಲಕರ ಅಸಹಾಯ ಪರಿಸ್ಥಿತಿ ತಿಳಿದು ಇತರರ ಸಹಾಯ ಅಂತಹ ವಿದ್ಯಾರ್ಥಿಗಳಿಗೆ ಒದಗುವಂತೆ ಮಾಡುತ್ತಿದ್ದರು. ಯಾವುದೇ ಭೇದಭಾವ ತೋರಿಸುತ್ತಿರಲಿಲ್ಲ. ಈ ರೀತಿ 12 ವರ್ಷಗಳ ಕಾಲ ಚಿಂತಾಮಣಿಯಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ತಪ್ಪು ದಾರಿಯಲ್ಲಿ ಹೋಗುವ ಎಷ್ಟೋ ವಿದ್ಯಾರ್ಥಿಗಳನ್ನು ದಂಡಿಸಿ ತಿಳಿಹೇಳಿ ಅವರನ್ನು ಸತ್ಪಥದಲ್ಲಿ ನಡೆಸಿದರು. ಈಗಲೂ ಸಹ ಸರಿದಾರಿಗೆ ತಂದು ತಮ್ಮ ಜೀವನವನ್ನು ಉದ್ಧಾರ ಮಾಡಿದ ಶ್ರೀ ಆಚಾರ್ಯರನ್ನು ಕೃತಾಜ್ಞತಾಪೂರ್ವಕವಾಗಿ ನೆನೆಯುವವರು ಅನೇಕರಿದ್ದಾರೆ.

1958ನೇ ಇಸವಿಯಲ್ಲಿ ಹಾಸನದ ಮುನಿಸಿಪಲ್ ಪ್ರೌಢಶಾಲೆಗೆ ಅಧ್ಯಾಪಕರಾಗಿ ವರ್ಗವಾಗಿ ಬಂದರು. ಇಲ್ಲಿಯೂ ಸಹ ತಮ್ಮ ಪ್ರಿಯ ಭಾಷೆಯನ್ನು ಕಲಿಸಲು ಮುಂದಾದರು. ಮೊದಲು ಶ್ರೀ ಸೀತಾರಾಮಾಂಜನೇಯ ದೇವಸ್ಥಾನದಲ್ಲಿ ಮಕ್ಕಳಿಗೆ ಪಾಠ ಹೇಳಲು ಪ್ರಾರಂಭಿಸಿದರು. ಇವರ ಜೊತೆಗೆ ಅದೇ ಶಾಲೆಯಲ್ಲಿ ಕನ್ನಡ ಅಧ್ಯಾಪಕರು ಕರ್ನಾಟಕದ ಹೆಸರಾಂತ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಹೋದರರಾದ ಶ್ರೀಯುತ ನರಸಿಂಹಚಾರ್ಯರು ಹಾಗೂ ಸರ್ಕಾರಿ ಪ್ರೌಢಶಾಲೆಯಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದ ಶ್ರೀನಿವಾಸ ದೇಶಿಕಾಚಾರ್ ಎಂಬುವರು ತಮ್ಮ ಸಹಾಯ ಹಸ್ತವನ್ನು ನೀಡಿದರು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇದರಿಂದಾಗಿ ಹೆಚ್ಚು ಹೆಚ್ಚು ಮಕ್ಕಳು ಸಂಸ್ಕೃತ ಭಾಷೆಯನ್ನು ಕಲಿಯುವಂತೆ ಆಯಿತು. ಮೊದ ಮೊದಲು ಸರಳ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವಂತೆ ಮಾಡಿದ ಮಕ್ಕಳಲ್ಲಿ ಹೆಚ್ಚು ಆತ್ಮವಿಶ್ವಾಸ ಉಂಟು ಮಾಡಿ ನಂತರ ಸ್ವಲ್ಪ ಕ್ಲಿಷ್ಟಕರ ಪರೀಕ್ಷೆಗಳನ್ನು ಮಾಡಿಸಿ ದೇವ ಭಾಷೆಯ ಸೊಗಡನ್ನು ಪಸರಿಸಿದರು. ಈ ರೀತಿ ತಮ್ಮ ಅಮೂಲ್ಯ ಜೀವನದ 8 ವರ್ಷಗಳನ್ನು ಹಾಸನದಲ್ಲಿ ಕಳೆದರು. ಅನಂತಾಚಾರ್ಯರು ವಿಜಯಪುರ (ದೇವನಹಳ್ಳಿಯ ಸಮೀಪ) ಪ್ರೌಢಶಾಲೆಗೆ ಅಧ್ಯಾಪಕರಾಗಿ ವರ್ಗವಾಗಿ ಬಂದರು. ಇಲ್ಲಿ ತಮ್ಮ ಸಹೋದ್ಯೋಗಿಗಳನ್ನು ಉತ್ತೇಜಿಸಿ ದೇವ ಭಾಷೆಯನ್ನು ಕಲಿಸಲು ಮುಂದಾದರು. ಸಂಸ್ಕೃತ ಭಾಷೆ ಮೃತ ಭಾಷೆ ಎಂಬ ಅಪವಾದವನ್ನು ಹೊಡೆದುಹಾಕಲು ಜನಪ್ರಿಯ ಭಾಷೆಯನ್ನಾಗಿ ಮಾಡಲು ಬಹಳವೇ ಪ್ರಯತ್ನಪಟ್ಟರು.

ಈ ತರುಣದಲ್ಲೇ ಮೈಸೂರಿನ ಶ್ರೀಪರಕಾಲ ಮಠದ ಗುರುಪೀಠದಿಂದ ಆಚಾರ್ಯ ಸ್ಥಾನಕ್ಕೆ ಆಹ್ವಾನ ಬಂದಿತು. ಒಂದು ಕಾಲದಲ್ಲಿ ತಮ್ಮ ವಿದ್ಯಾರ್ಜನೆಗೆ, ವಸತಿಗೆ ತಕ್ಕ ಅನುಕೂಲ ಮಾಡಿಕೊಟ್ಟಿದ್ದ ಗುರುಪೀಠಕ್ಕೆ ಸೇವೆಯನ್ನು ಸಲ್ಲಿಸಬೇಕೆಂಬ ಇಚ್ಛೆಯಿಂದ ತಮ್ಮ ಸಮ್ಮತಿಯನ್ನು ಮನೆಯವರ ಒಮ್ಮತದೊಂದಿಗೆ ತಿಳಿಯಪಡಿಸಿದರು.

ಆಲೋಡ್ಯ ಸರ್ವಶಾಸ್ತ್ರಾಣಿ, ವಿಚಾರ್ಯಚಪುನಃ ಪುನಃ
ಇದಮೇಕಂ ಸುನಿಷ್ಪನ್ನಂ ಧ್ಯೇಯೋನಾರಾಯಣೋ ಹರಿ:

ಈ ಮೇಲೆ ತಿಳಿಸಿದ ಶ್ಲೋಕದ ಅಂತರಾರ್ಥಿವನ್ನು ಆಚಾರ್ಯರು ಚೆನ್ನಾಗಿ ಅರಿತು, ತಮ್ಮ ಕುಟುಂಬದವರಿಗೂ ಇದನ್ನು ವಿಶದಪಡಿಸಿ ಮುಂದಿನ ಆಚಾರ್ಯ ಸ್ಥಾನದ ಕೈಂಕರ್ಯವನ್ನು ಮಾಡಲು ಮುಂದಾದರು.

ದಿನಾಂಕ 03.06.1970 ಶ್ರೀ ಶ್ರೀ ಶ್ರೀ ಅಭಿನವ ಶ್ರೀನಿವಾಸ ಪರಕಾಲ ಮಹಾದೇಶಿಕ ಸ್ವಾಮಿಗಳು ಆಚಾರ್ಯರಿಗೆ ಸನ್ಯಾಸ ದೀಕ್ಷೆಯನ್ನು ಅನುಗ್ರಹಿಸಿದರು ಮತ್ತು "ಶ್ರೀ ಶ್ರೀ ಶ್ರೀ ಅಭಿನವ ರಾಮಾನುಜ ಪರಕಾಲ ಮಹಾದೇಶಿಕರು" ಎಂಬ ನೂತನ ನಾಮಧೇಯವನ್ನು ಅನುಗ್ರಹಿಸಿದರು. ಅನಾರೋಗ್ಯದ ನಿಮಿತ್ತ ಹಿರಿಯ ಶ್ರೀಗಳು ಪರಮಪದಿಸಿದ ಮೇಲೆ ನೂತನ ಶ್ರೀಗಳು ಮಠದ ಆಡಳಿತವನ್ನು ಕೈಗೆತ್ತಿಕೊಂಡರು.

ಆಚಾರ್ಯವರ್ಯರು ತಾವು ಶ್ರೀಮಠದಲ್ಲಿ ಕೈಂಕರ್ಯ ಮಾಡುತ್ತಿದ್ದ ಕಾಲದಲ್ಲಿ ಮತ್ತು ಶ್ರೀ ಮಠದಲ್ಲಿ ನಡೆಯುವ ಸಾಂಸ್ಕೃತಿಕ ಮತ್ತು ಪರಂಪರಾಗತವಾಗಿ ಮಾಡಬೇಕಾದ ಎಲ್ಲಾ ಕಾರ್ಯಕ್ರಮಗಳನ್ನು ಚಾಚು ತಪ್ಪದೆ ಮತ್ತು ಯಾವುದೇ ಲೋಪವಿಲ್ಲದೆ ನಡೆಸಿಕೊಂಡು ಬರುತ್ತಿದ್ದರು. ಅವರು ಶ್ರೀ ಮಠದ ವಿದ್ಯಾರ್ಥಿಯಾಗಿದ್ದಾಗ ಪಡೆದ ಹಿಂದಿನ ಅನುಭವದ ಜ್ಞಾನ ಈಗ ಅವರ ನೆರವಿಗೆ ಬಂದಿತು.

ಶ್ರೀ ಮಠದಲ್ಲಿ ಸಂಪ್ರದಾಯ ಬದ್ಧವಾಗಿ ನಡೆಯಬೇಕಾಗಿದ್ದ ಯಾವುದೇ ಕಾರ್ಯಕ್ರಮಗಳನ್ನು ಬಿಡದೆ ನಡೆಸಿಕೊಂಡು ಬಂದರು. ಬಡ ವಿದ್ಯಾರ್ಥಿಗಳಿಗೆ, ಪಡಿತರ ವ್ಯವಸ್ಥೆಯನ್ನು ಸಕ್ರಮಗೊಳಿಸಿದರು. ಮಠದ ವಿದ್ಯಾರ್ಥಿಗಳಿಗೆ ವೇದ ಪಾಠವನ್ನು ಹೇಳಿಕೊಡುವ ವ್ಯವಸ್ಥೆಯನ್ನು ಮಾಡಿದರು. ದೇಹದ ಆರೋಗ್ಯಕ್ಕೆ ಯೋಗ ಸಾಧನೆಯು ಬಹು ಉಪಯೋಗವೆಂದು ತಿಳಿದು, ನುರಿತ ಯೋಗಾಚಾರ್ಯರರನ್ನು ಗೊತ್ತು ಮಾಡಿದರು. ಹೊರ ಸಂಚಾರ ಹೊರಟು ಅಲ್ಲಲ್ಲಿ ಮತ ಪ್ರಚಾರಕ್ಕಾಗಿ ವಿದ್ವತ್ ಸಭೆಗಳನ್ನು ಮಾಡಿ ವಿದ್ವಾಂಸರ ಯೋಗ್ಯತೆಗೆ ತಕ್ಕಂತೆ ಅವರನ್ನು ಸತ್ಕರಿಸಿದರು: ಅನೇಕ ದಿವ್ಯ ದೇಶಗಳಲ್ಲಿ ಮಂಗಳ ಶಾಸನಗಳನ್ನು ಮಾಡಿಬಂದರು. ಶ್ರೀಮಠದಲ್ಲಿಯೂ ಸಹ ಅನೇಕ ವಿದ್ಯಾರ್ಥಿಗಳಿಗೆ ತಾವೇ ಸ್ವತಃ ಮುಂದೆ ನಿಂತು ಪಾಠಗಳನ್ನು ಮಾಡಿ, ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಿದರು. ನಂತರ ಅನೇಕ ಕಡೆಗಳಲ್ಲಿ ಶ್ರೀಲಕ್ಷ್ಮೀಹಯಗ್ರೀವರನ್ನು ಬಿಜಯ ಮಾಡಿಸಿ ಅಲ್ಲಲ್ಲಿ ಧರ್ಮ ಪ್ರಚಾರ ಮಾಡುತ್ತಾ ಭಕ್ತಿ ಪ್ರಪಕ್ತಿಗಳ ಶ್ರೇಷ್ಟತೆಯನ್ನು ತಿಳಿಸುತ್ತ ಮತ್ತು ಅದರ ಆಚರಣೆಯಲ್ಲಿ ಯಾವ ಕೊರತೆಯೂ ಬಾರದಂತೆ ನಡೆಯಬೇಕೆಂದು ತಿಳಿಸುತ್ತಿದ್ದರು. ಉದಾಹರಣೆಗಳಿಂದ ಸುಲಭವಾಗಿ ತಿಳಿಯುವಂತೆ ಮನದಟ್ಟು ಮಾಡಿಸುತ್ತಿದ್ದರು. ಅರ್ಹರಾದವರಿಗೆ ಪಂಚ ಸಂಸ್ಕಾರಗಳನ್ನು ಅನುಗ್ರಹಿಸುತ್ತ ಶರಣಾಗತಿಯ ತತ್ವಗಳನ್ನು ಬೋಧಿಸಿ ಸಂಸಾರದಲ್ಲಿದ್ದುಕೊಂಡೆ ಅಧ್ಯಾತ್ಮ ಮಾರ್ಗದಲ್ಲಿ ಮುನ್ನಡೆದು ಜೀವನ ಸಾರ್ಥಕ್ಯ ಪಡೆಯಬಹುದೆಂದು ತಿಳಿಸುತ್ತಿದ್ದರು.

ಈ ರೀತಿ ತಮ್ಮ ಕೈಂಕರ್ಯವನ್ನು ವ್ಯವಸ್ಥಿತ ರೀತಿಯಲ್ಲಿ 20 ವರ್ಷಗಳ ಕಾಲ ನೆರವೇರಿಸಿ ವೃದ್ಧಾಪ್ಯದ ದೆಸೆಯಿಂದ ನಂತರ ಸಂಚಾರವನ್ನು ನಿಲ್ಲಿಸಿದರು. ಉಳಿದ ದಿವಸಗಳಲ್ಲಿ ಶ್ರೀ ಮಠದ ನಿತ್ಯ ವೈಯಕ್ತಿಕ ಕರ್ತವ್ಯಗಳನ್ನು ಮಾತ್ರ ನೆರವೇರಿಸುತ್ತಿದ್ದರು. ಶ್ರೀಮಠಕ್ಕೆ ಬಂದು ಅವರನ್ನು ಕಾಣುತ್ತಿದ್ದ ಶಿಷ್ಯರಿಗೆ ಸೂಕ್ತ ಸಲಹೆಗಳನ್ನು ನೀಡುತ್ತಿದ್ದರು.

ಆಚಾರ್ಯವರ್ಯರು 23.07.1992ರಂದು `ಆ ಪರ ವಾಸುದೇವನ ಪಾದಾರವಿಂದಗಳಲ್ಲಿ ತಮ್ಮ ಅವತಾರವನ್ನು ಪರಿಸಮಾಪ್ತಿಗೊಳಿಸಿದರು. ಇಂತಹ ಪರಮಾಚಾರ್ಯರ ಶಿಷ್ಯರಾಗಿ ಅವರ ಅನುಗ್ರಹ ಪಡೆದ ನಾವೇ ಧನ್ಯರು. ಪರಮ ಯತಿವರ್ಯರ ಅಡಿದಾವರೆಗಳಿಗೆ ನಮ್ಮ ಅನಂತ ಪ್ರಣಾಮಗಳು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ ನಿಗಮಾಂತಮಹಾದೇಶಿಕರ ವ್ಯಕ್ತಿತ್ವ

ವ್ಯಾಕರಣ ಸಾಹಿತ್ಯ ವಿದ್ವಾ ಪಂಡಿತರಾಜ ಎ. ಟಿ. ಶ್ರೀನಿವಾಸಯ್ಯಂಗಾರ್, ಬೆಂಗಳೂರು.

ಭಾರತದಲ್ಲಿ ಅನೇಕ ಯತಿಶ್ರೇಷ್ಠರು ಇದ್ದರೂ "ಯತಿರಾಜ" ಎಂಬ ಪದವು ಭಗವದ್ರಾಮಾನುಜಾಚಾರ್ಯರನ್ನು ಮಾತ್ರವೇ ಸೂಚಿಸುವಂತೆ, ಆಚಾರ್ಯ ಎಂಬ ಅರ್ಥವುಳ್ಳದ್ದಾದರೂ 'ದೇಶಿಕ' ಎಂಬ ಪದವೂ ಬೇರಾವ ಆಚಾರ್ಯರನ್ನೂ ಸೂಚಿಸದೇ ನಿಗಮಾಂತಮಹಾದೇಶಿಕರನ್ನೇ ನಿರ್ದೇಶಿಸುವ ವಿಶೇಷವನ್ನು ಗಮನಿಸಿದರೆ ಶ್ರೀ ದೇಶಿಕರವರ ಮಹತ್ವವು ತಾನೇ ತೋರುತ್ತದೆ. ಶ್ರೀರಾಮಾನುಜಾಚಾರ್ಯರ ಅನಂತರ ಅಸಾಧಾರಣವಾದ ಆಚಾರ್ಯಪೀಠವನ್ನಲಂಕರಿಸಿದ ಮಹಾ ವ್ಯಕ್ತಿಗಳು ಶ್ರೀ ನಿಗಮಾಂತಮಹಾದೇಶಿಕರು. ಶ್ರೀರಾಮಾನುಜಾಚಾರ್ಯರು ಸಂಸ್ಥಾಪಿಸಿದ ವಿಶಿಷ್ಟಾದ್ವೈತ ಸಿದ್ಧಾಂತದ ಹಿರಿಮೆಯನ್ನು ಹಲವಾರು ಅಬಾಧಿತ ಪ್ರಮಾಣಗಳಿಂದಲೂ, ಉಚಿತಯುಕ್ತಿಗಳಿಂದಲೂ ಎತ್ತಿತೋರಿ ಆ ಸಿದ್ಧಾಂತವು ಜಗತ್ತಿನಲ್ಲಿ ಅಪ್ರಕಂಪ್ಯವಾಗಿ, ಸರ್ವವ್ಯಾಪಿಯಾಗಿ ಸದಾ ರಾರಾಜಿಸುವಂತೆ ಮಾಡಿದ ಮಹಾ ಪುರುಷರು ಶ್ರೀ ದೇಶಿಕರು. ಇತರ ದರ್ಶನಗಳಲ್ಲಿ ಸಿದ್ಧಾಂತಗಳಲ್ಲಿ ಕಾಣದ ವಿಶೇಷತೆಯನ್ನೂ, ಗುಣಾತಿಶಯವನ್ನೂ, ಹಿರಿಮೆಯನ್ನೂ ಶ್ರೀರಾಮಾನುಜ ದರ್ಶನದಲ್ಲಿ ನಾವಿಂದು ಕಾಣುತ್ತಿರುವುದು ಶ್ರೀ ನಿಗಮಾಂತಮಹಾದೇಶಿಕರ ಅದ್ಭುತ ಕೃತಿಗಳ ನೆರವಿನಿಂದ. ಇತರ ದರ್ಶನಗಳಿಂದ, ಅನ್ಯಸಿದ್ಧಾಂತಗಳಿಂದ, ಪರರ ವಾದಗ್ರಂಥಗಳಿಂದ ಯಾವ ರೀತಿಯ ಆಘಾತವನ್ನೂ ಪಡೆಯದೆ ಸುಭದ್ರವಾಗಿ, ಸರ್ವಾಂಗಸುಂದರವಾಗಿ ಶ್ರೀ ರಾಮಾನುಜ ಸಿದ್ಧಾಂತವು ನೆಲೆಸಿರುವುದು ದೇಶಿಕರು ತೊಡಿಸಿರುವ ಸರ್ವೋತ್ತಮ ಗ್ರಂಥರೂಪವಾದ ರಕ್ಷಾಕವಚಗಳಿಂದ. ರಾಮಾನುಜ ಸಿದ್ಧಾಂತದ ತತ್ತ್ವವನ್ನು ಸರಿಯಾಗಿ ತಿಳಿಯಲು ಅದರ ಮಹತ್ತ್ವವನ್ನರಿಯಲು ಶ್ರೀ ದೇಶಿಕರ ಕೃತಿಗಳೇ ಗತಿ. ಶ್ರೀ ರಾಮಾನುಜರ ದರ್ಶನಕ್ಕೆ ಶ್ರೀ ದೇಶಿಕರಿಂದ ಆಗಿರುವ ಸೇವೆ, ಉಪಕಾರ, ಪೋಷಣೆ ಅನುಪಮವಾದುದು. ಶ್ರೀ ರಾಮಾನುಜರ ಸೂಕ್ತಿಗಳ ನೈಜಭಾವವನ್ನು ಸರಿಯಾಗಿ ಅರ್ಥಮಾಡಿಕೊಂಡು ಅದನ್ನು ಸಂಪೂರ್ಣವಾಗಿ ಅನುಭವಿಸಿದವರೆಂದರೆ ದೇಶಿಕರೆ. ಆದ್ದರಿಂದ ಶ್ರೀ ರಾಮಾನುಜ ಸಿದ್ಧಾಂತವನ್ನು ಒಪ್ಪುವವರೆಲ್ಲರಿಗೂ, ಶ್ರೀ ರಾಮಾನುಜಾಚಾರ್ಯರ ಶಿಷ್ಯವರ್ಗಕ್ಕೆ ಸೇರಿದವರೆಲ್ಲರಿಗೂ ಶ್ರೀ ನಿಗಮಾಂತ ಮಹಾದೇಶಿಕರವರು ವಂದ್ಯರಾಗಿ ಆಚಾರ್ಯರಾಗಿರುವುದು ಉಚಿತವೂ, ನ್ಯಾಯವೂ ಆಗಿದೆ.

ಸರ್ವತೋಮುಖವಾದ ಪಾಂಡಿತ್ಯ, ನಿಸರ್ಗಸಿದ್ಧವಾದ ಪ್ರತಿಭೆ, ನಿಷ್ಪಟ್ಟವಾದ ಜ್ಞಾನ, ಗಹನವಿಷಯಗಳನ್ನೂ ವಿಶ್ಲೇಷಿಸಿ ಸರಳವಾಗಿ ಮನಮುಟ್ಟುವ ರೀತಿಯಲ್ಲಿ ಬೋಧಿಸುವ ವಾಕ್ಯವಿನ್ಯಾಸಕೌಶಲ, ಮುನಿವಾಕ್ಯಗಳಿಗೆ ಪ್ರಮಾಣವಚನಗಳಿಗೆ ಮೇಲಾಗಿ ತೋರುವ ಪರಸ್ಪರ ವಿರೋಧಗಳಾವುವೂ ಇಲ್ಲದ ರೀತಿಯಲ್ಲಿ ಆಶಯಗಳನ್ನು ವಿಶದಪಡಿಸಿ ಸಮನ್ವಯಮಾಡುವ ಅಪೂರ್ವ ಜಾಣ್ಮೆ ಮುಂತಾದ ವಿಶೇಷಾಂಶಗಳು ಶ್ರೀ ದೇಶಿಕರ ಮಹತ್ವವನ್ನು ತೋರಿಸುತ್ತವೆ.

ನಿಗಮಾಂತಮಹಾದೇಶಿಕರ ಅಗಾಧ ಪಾಂಡಿತ್ಯವನ್ನೂ, ಅಪ್ರತಿಮ ಪ್ರತಿಭೆಯನ್ನೂ ಕಂಡು ಮುಗ್ಧರಾಗದವರಿಲ್ಲ. ಮಾನವಸಾಮಾನ್ಯರಲ್ಲಿ ಕಾಣಲಾರದ ಜ್ಞಾನಪ್ರಕರ್ಷವನ್ನೂ, ಗುಣಾತಿಶಯವನ್ನೂ ಗಮನಿಸಿದ ಅನೇಕ ಮಾನ್ಯ ಪಂಡಿತರೇ ದೇಶಿಕರನ್ನು ದೈವೀಶಕ್ತಿಯೆಂದೂ, ಸಿದ್ಧಾಂತರಕ್ಷಣೆಗಾಗಿ, ಜನರ ಕಲ್ಯಾಣಕ್ಕಾಗಿ ಅವತರಿಸಿದ ಮಹಾಪುರುಷನೆಂದೂ ದೇಶಿಕರ ಕಾಲದಲ್ಲೇ ಭಾವಿಸಿದರು.

ವಿತ್ರಾಸಿನೀ ವಿಬುಧವೈರಿವರೂಥಿನೀನಾಂ ಪದ್ಮಾಸನೇನ ಪರಿಚಾರವಿಧೌ ಪ್ರಯುಕ್ತಾ |
ಉತ್ಪ್ರೇಕ್ಷ್ಯತೇ ಬುಧಜನೈರುಪತ್ತಿ ಭೂಮ್ನಾ ಘಂಟಾ ಹರೇಃ ಸಮಜನಿಷ್ಟ ಯದಾತ್ಮನೇತಿ ||

ಪರಮಾತ್ಮನ ಆರಾಧನೆಯ ವೇಳೆಯಲ್ಲಿ ದೇವಶತ್ರುಗಳು ಬಾಧೆಯಿಲ್ಲದಿರಲು ಬ್ರಹ್ಮದೇವನು ದಿವ್ಯಘಂಟೆಯೊಂದನ್ನು ಸ್ಥಾಪಿಸಿದನು. ಆ ಘಂಟೆಯೇ ಪರವಾದಿಗಳನ್ನು ನಿರಸನವಮಾಡಲು ನಿಗಮಾಂತದೇಶಿಕರ ರೂಪದಲ್ಲಿ ಅವತರಿಸಿದೆ ಎಂದು ವಿದ್ವಜ್ಜನರು, ವಿಮರ್ಶನಚತುರರು ಅನೇಕ ಕಾರಣಗಳಿಂದ ಭಾವಿಸುತ್ತಿರುವರೆಂಬುದಾಗಿ ಸಂಕಲ್ಪ ಸೂರ್ಯೋದಯ ನಾಟಕದಲ್ಲಿ ಶ್ರೀ ದೇಶಿಕರೇ ಸೂಚಿಸಿರುವಂತೆ ತಿರುಪತಿ ದೇವಾಲಯದಲ್ಲಿ ಶ್ರೀನಿವಾಸದೇವರ ಸನ್ನಿಧಿಯಲ್ಲಿದ್ದ ಘಂಟೆಯೇ ದೇಶಿಕರಾಗಿ ಅವತಾರ ಮಾಡಿರುವುದಾಗಿ ಆಪ್ತರು ನಂಬಿದರು. ದೇಶಿಕರ ಅವತಾರ ಸಮಯದಿಂದ ಆ ಘಂಟೆಯು ದೇವಾಲಯದಲ್ಲಿ ಮಾಯವಾದುದು, ಮತ್ತು ಅರ್ಚಕರಿಗೂ, ಮುಖ್ಯಾಧಿಕಾರಿಗಳಿಗೂ ಘಂಟೆಯು ಭಗವಂತನ ಸಂಕಲ್ಪದಂತೆ ದೇಶಿಕರ ರೂಪದಲ್ಲಿ ಶ್ರೀ ಅನಂತಸೂರಿ ಕುಮಾರರಾಗಿ ಅವತರಿಸಿರುವುದಾಗಿ ಸ್ವಪ್ನ ಬಿದ್ದುದೂ ಆಪ್ತರ ಊಹೆಯನ್ನೂ, ನಂಬಿಕೆಯನ್ನೂ ಊರ್ಜಿತಮಾಡಿದವು. ಇಂದಿಗೂ ಶ್ರೀನಿವಾಸದೇವಾಲಯದಲ್ಲಿ ಇತರ ದೇವಾಲಯ ಗಳೆಲ್ಲೆಡೆಯಲ್ಲಿಯೂ ಇರುವಂತೆ ಭಗವದಾರಾಧನೆಯಲ್ಲಿ ಅಗತ್ಯವಾದ ಘಂಟೆಯು ಇಲ್ಲದಿರುವುದನ್ನು ನಾವು ಗಮನಿಸಬಹುದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಎಲ್ಲರ ಗುಣದೋಷಗಳನ್ನು ಸೂಕ್ಷ್ಮವಾಗಿ ವಿಚಾರಮಾಡುವ, ಸಕಲ ಶಾಸ್ತ್ರಗಳಲ್ಲೂ ಆಳವಾದ ಪಾಂಡಿತ್ಯವುಳ್ಳ, ಕವಿ ಪುಂಗವರೆಂದು ಪ್ರಸಿದ್ಧರಾದ ವೇಂಕಟಾಧ್ವರೀ ಎಂಬ ಮಹಾಶಯರು ನಿಗಮಾಂತಮಹಾದೇಶಿಕರ ವ್ಯಕ್ತಿತ್ವವನ್ನು ಆಳವಾಗಿ ವಿಮರ್ಶೆಮಾಡಿ ಆಡಿರುವ ಮಾತನ್ನು ಗಮನಿಸಿದರಂತೂ ದೇಶಿಕರು ಎಂತಹ ಅಸಾಧಾರಣ, ಅಪ್ರತಿಮ ಮಹಾವ್ಯಕ್ತಿ ಎಂದು ಸ್ಪಷ್ಟವಾಗುವುದು. ಅವರು ಹೇಳುವುದು ಹೀಗಿದೆ.

ನಾನಾಮ್ನಾಯಪರಿಶ್ರಮಂ ಕಲಯತಾಂ ನಾಸ್ತ್ಯೇವ ಶಾಸ್ತ್ರೇಷುಧೀಃ ಸತ್ಯೋರಪ್ಯುಭಯೋರ್ನ ಚಾಪಿ ಸುಲಭಾ ಸಾ ಹಿ ಕ್ಷಿ ತೌ ಸಾಹಿತೀ |
ಆಪ್ಯೇತಾಸು ಸತೀಷು ನೈವ ವಿನಯೋನಾಚಾರಭಕ್ತಿಕ್ಷಮಾ ಚಾತುರ್ಯಂ: ಸ ಚ ಸಾಚ ಸಾಚ ಸಚ ತಾಶ್ಚಾಲಂಬ್ಯ ಖೇಲನ್ತ್ಯಮುಂ ||

ತನ್ನ ಶಾಖೆಯ ಒಂದು ವೇದವನ್ನು ಅಧ್ಯಯನಮಾಡಿರುವುದರ ಜೊತೆಗೆ ಇತರ ಶಾಖೆಯ ವೇದಭಾಗವನ್ನ ತಿಳಿದಿರುವುದು ಹೆಚ್ಚುಗಾರಿಕೆ. ನಾಲ್ಕು ವೇದಗಳಲ್ಲಿಯೂ ಪರಿಶ್ರಮಪಾಂಡಿತ್ಯಗಳನ್ನು ಗಳಿಸಿರುವುದು ಆಶ್ಚರ್ಯಕರ. ಸಮಗ್ರವಾಗಿ ವೇದಗಳನ್ನು ಅಧ್ಯಯನಮಾಡಿ ಪರಿಶ್ರಮವನ್ನು ಗಳಿಸಿದವರಿಗೆ ವ್ಯಾಕರಣ, ಮೀಮಾಂಸ, ತರ್ಕ ಮುಂತಾದ ಶಾಸ್ತ್ರಗಳಲ್ಲೂ ಪರಿಶ್ರಮ ಇರುವುದು ಅಸಂಭವ. ಆ ಶಾಸ್ತ್ರಗಳ ಪರಿಚಯಗಂಧವೂ ಇರದು. ಶಾಸ್ತ್ರಗಳಲ್ಲೂ ಪರಿಶ್ರಮವಿದ್ದವರಿಗೆ ವೇದಗಳ ಪರಿಚಯವೇ ಇರದು, ಎಂದಮೇಲೆ ಪರಿಶ್ರಮ ಎಲ್ಲಿಯದು ? ವೇದಗಳಲ್ಲೂ ಪರಿಶ್ರಮ, ಶಾಸ್ತ್ರಗಳಲ್ಲೂ ನಿಶ್ಚಿತವಾದ ಪ್ರಜ್ಞೆ, ನಿಷ್ಕಪಟವಾದ ಪಾಂಡಿತ್ಯ ಎರಡೂ ಕೂಡಿರುವುದು ಬೆಳಕು ಕತ್ತಲೆಕಲೆತಂತೆ. ಸುಕೃತ ವಿಶೇಷದಿಂದ ಒಬ್ಬ ವ್ಯಕ್ತಿಯಲ್ಲಿ ಇವೆರಡೂ ಕೂಡಿದರೂ ಹೃದಯಂಗಮವಾಗಿ ವಿಷಯಗಳನ್ನು ಚಿತ್ರಿಸುವ, ಇತರರ ಹೃದಯವು ಕುಣಿಯುವ ಹಾಗೆ ಉದಾತ್ತ ಭಾವನೆಗಳನ್ನು ಪ್ರತಿಪಾದಿಸುವ, ಸುಂದರವಾಗಿ ಕಲ್ಪನೆಮಾಡುವ, ರಸಮಯವಾದ ಭಾವಪೂರ್ಣವಾದ ಅಲಂಕಾರ ಶೋಭಿತವಾದ ಮಧುರ ಕಾವ್ಯವನ್ನು ರಚಿಸುವ ಅಪೂರ್ವ ಶಕ್ತಿಯಾಗಲಿ, ಅಸಾಧಾರಣ ಪ್ರತಿಭೆಯಾಗಲಿ ಸರ್ವಥಾ ಇರದು. ಇವು ಮೂರು ಕೂಡಿದರೂ ವಿನಯಗುಣವಿರುವುದು ಮೊದಲ ಕೊಂಬಿನಂತೆ. ಆಚಾರಾನುಷ್ಠಾನಗಳೂ ಗಗನಕುಸುಮದಂತೆ. ಹಿರಿಯರಲ್ಲಿ, ದೈವದಲ್ಲಿ ಭಕ್ತಿ ಇರದು. ತಾಳ್ಮೆ ಸುಳಿಯದು. ಲೌಕಿಕ ವ್ಯವಹಾರಚಾತುರ್ಯವಂತೂ ಹತ್ತಿರ ಬಾರದು. ಆದರೆ ಶ್ರೀ ದೇಶಿಕರಲ್ಲಿ ಸಕಲ ವೇದಗಳ ಪರಿಶ್ರಮ, ಎಲ್ಲ ಶಾಸ್ತ್ರಗಳಲ್ಲೂ ಅಗಾಧವಾದ ಪಾಂಡಿತ್ಯ, ಕಾವ್ಯನಿರ್ಮಿತಿಯಲ್ಲಿ ಅನುಪಮ ಕೌಶಲ, ಇವಿಷ್ಟಿದ್ದೂ ಸ್ವಲ್ಪವೂ ಜಂಭವಿಲ್ಲದ ಸರಳಮನೋಭಾವ, ವಿನಯ, ಸದಾಚಾರ, ಭಕ್ತಿ, ತಾಳ್ಮೆ ಮುಂತಾದ ಆತ್ಮಗುಣಗಳೂ ಲೋಕ ವ್ಯವಹಾರ ಚಾತುರ್ಯವೂ ಮನೆಮಾಡಿಕೊಂಡು ನೆಲೆಸಿದ್ದವು. ಜ್ಞಾನ ಭಕ್ತಿವೈರಾಗ್ಯಗಳಿಗೆ ವಿಹಾರಸ್ಥಾನವಾಗಿದ್ದರು ಶ್ರೀದೇಶಿಕರು. ಸಕಲ ವಿದ್ಯಾಧಿದೇವತೆಯಾದ ಸರಸ್ವತಿಗೆ ಅಂತಃಪುರಸ್ಥಾನವಾಗಿತ್ತು ದೇಶಿಕರ ಹೃದಯ. ಜ್ಞಾನವಷ್ಟೆ ಆತ್ಮಗುಣವೂ ಹಿರಿದಾಗಿತ್ತು.

ಪರಿಣತ ಬುದ್ಧಿಯ ಹಿರಿಯರಿಗೆ ಬೋಧಿಸುವ ವೇದಾಂತ ವಿಚಾರಗಳನ್ನು ತೀರ ಸಣ್ಣವಯಸ್ಸಿನಲ್ಲೇ ಶ್ರದ್ಧೆಯಿಂದ ಗಮನಿಸುವ ಶ್ರೀ ವೇದಾಂತದೇಶಿಕರ ಸಂಸ್ಕಾರವನ್ನೂ, ಅಪೂರ್ವ ಪ್ರತಿಭೆಯನ್ನೂ ಕಂಡು ಸಂತೋಷವಿಸ್ಮಯಗಳನ್ನು ತಾಳಿದ ನಡಾದೂರ್ ವರದಾಚಾರ್ಯರೆಂಬ ಗುರುವರ್ಯರು :

ಪ್ರತಿಷ್ಠಾಪಿತವೇದಾಂತಃ ಪ್ರತಿಕ್ಷಿಪ್ತಬಹಿರ್ಮತಃ
ಭೂಯಾಸ್ತ್ವಗುಣ್ಯಮಾನ್ಯಸ್ತ್ವಂ ಭೂರಿ ಕಲ್ಯಾಣಭಾಜನಂ ||

ವೇದಬಾಹ್ಯಮತಗಳನ್ನೂ ಕುದೃಷ್ಟಿಗಳ ಅಪಸಿದ್ಧಾಂತವನ್ನೂ ದೂರಮಾಡಿ ಯಥಾರ್ಥವಾದ ಭಗವದ್ರಾಮಾನುಜರು ಸಾಕ್ಷಾತ್ಕರಿಸಿದ ಉಪನಿಷತ್ಸಿದ್ಧಾಂತವನ್ನೂ ಸ್ಥಾಪಿಸಿ ಜ್ಞಾನಿಗಳಿಗೆ ಮಾನ್ಯವಾಗಿ ಅನಂತ ಕಲ್ಯಾಣಗಳಿಗೆ ಪಾತ್ರನಾಗಿ ಬಾಳು ಎಂದು ತುಂಬು ಹೃದಯದಿಂದ ಆಶೀರ್ವದಿಸಿದರು. ಅವರ ಆಶೀರ್ವಾದಬಲದಿಂದಲೂ ನಿಸರ್ಗಸಿದ್ಧವಾದ ಶಕ್ತಿಯಿಂದಲೂ ದೇಶಿಕರು ಕೇವಲ ಇಪ್ಪತ್ತುವರ್ಷ ಪ್ರಾಯದಲ್ಲಿರುವಾಗಲೇ "ವಿಂಶತ್ಯಬ್ದೆ ವಿಶ್ರುತ ನಾನಾವಿಧ ವಿದ್ಯಃ" ಎಂದು ಅವರೇ ಹೇಳಿಕೊಂಡಿರುವಂತೆ ಸಕಲ ವಿದ್ಯೆಗಳಲ್ಲೂ ಪ್ರಾವೀಣ್ಯವನ್ನು ಪಡೆದಿದ್ದರು. ಗ್ರಂಥನಿರ್ಮಾಣಮಾಡುವ ಯೋಗ್ಯತೆಯನ್ನೂ ಗಳಿಸಿಕೊಂಡರು.

ದೇಶಿಕರ ವೇದಾಂತಜ್ಞಾನ ಮಿತಿಯಿಲ್ಲದ್ದು. ಇವರು ರಚಿಸಿರುವ ನ್ಯಾಯಪರಿಶುದ್ಧಿ, ನ್ಯಾಯಸಿದ್ಧಾಂಜನ, ತತ್ತ್ವ ಮುಕ್ತಾಕಲಾಪ, ಶತದೂಷಣೀ ಮುಂತಾದ ಅಪೂರ್ವ ಗ್ರಂಥಗಳು ದೇಶಿಕರಿಗೆ ಸಕಲ ದರ್ಶನಗಳನ್ನೂ ಚೆನ್ನಾಗಿ ವಿಮರ್ಶಿಸಿದ್ದರಿಂದ ದೊರೆತಿರುವ ಸಾರ ನಿಷ್ಕರ್ಷ ಜ್ಞಾನವನ್ನು ವ್ಯಕ್ತಪಡಿಸುತ್ತವೆ. ಅಭಿನಿವೇಶವಿಲ್ಲದೆ ಪ್ರಮಾಣಶರಣರಾಗಿ ಒಂದೊಂದು ವಿಷಯವನ್ನೂ ಒರೆಹಚ್ಚಿ ಪರೀಕ್ಷಿಸಿ ನಿರ್ಣಯಮಾಡುವ ಕೌಶಲ ದೇಶಿಕರಲ್ಲಿ ಅಸಾಧಾರಣವಾದುದು. ತತ್ತ್ವನಿರ್ಣಯವನ್ನು ಮಾಡಲು ಬಳಸುವ ಯುಕ್ತಗಳಂತೂ ಯಾವ ತಾರ್ಕಿಕ ಶಿರೋಮಣಿಗಳನ್ನೂ ಬೆಪ್ಪು ಮಾಡುತ್ತವೆ. ಶತದೂಷಣೀ ಗ್ರಂಥದಲ್ಲಿ ದೇಶಿಕರು ಇತರ ದರ್ಶನಗಳಲ್ಲಿ ತೋರಿರುವ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನ್ಯಾಯಸಂಮತವಾದ ಆಕ್ಷೇಪಗಳಿಗೆ ಪ್ರಾಮಾಣಿಕ ಸಂಮತವಾದ ಸಮಾಧಾನವನ್ನು ಸರಿಯಾಗಿ ಇಂದಿನವರೆಗೆ ಯಾರೂ ಕಂಡುಹಿಡಿಯಲಾಗಿಲ್ಲವೆಂಬುದು ದೇಶಿಕರ ಅಸಾಧಾರಣ ಪ್ರಜ್ಞೆಗೆ ನಿದರ್ಶನವಾಗಿದೆ. ವ್ಯಾಖ್ಯೆಯನ್ನು ಮಾಡುವುದರಲ್ಲಿಯೂ ಪದಗಳ ನಿಗೂಢಾಭಿಪ್ರಾಯಗಳನ್ನು ಯಥಾವತ್ತಾಗಿ ವಿಶದಪಡಿಸುವುದರಲ್ಲಿಯೂ ಇವರು ಮಾದರಿಯಾಗಿರುವರೆಂಬುದಕ್ಕೆ ಗೀತಾಭಾಷ್ಯದ ವ್ಯಾಖ್ಯಾನವಾದ ತಾತ್ಪರ್ಯಚಂದ್ರಿಕೆ ಎಂಬ ಗ್ರಂಥವೊಂದೇ ಸಾಕು. ಇವರು ಗಹನ ವಿಷಯಗಳನ್ನೂ, ಪಂಡಿತರು ತಿಳಿಯಲು ಕಷ್ಟಸಾಧ್ಯವಾದ ವಿಚಾರಗಳನ್ನೂ ಭವ್ಯವಾದ ವಾಕ್ಯಗಳಲ್ಲಿ ಸುಂದರಮಧುರ ಶಬ್ದಗಳಲ್ಲಿ ಸರಳವಾಗಿ, ಸ್ಪಷ್ಟವಾಗಿ ಪ್ರತಿಪಾದಿಸುವ ಅಪೂರ್ವ ಸಾಮರ್ಥ್ಯವನ್ನು ತಮ್ಮ ಕೃತಿಗಳಲ್ಲಿ ತೋರಿರುವರು. ಇವರು ರಚಿಸಿರುವ ಶಾಸ್ತ್ರಗ್ರಂಥಗಳೂ ಸಹ ಕಾವ್ಯಗಳಂತೆಯೇ ಓದಲು ಹಿತವಾಗಿಯೂ ಪ್ರಿಯವಾಗಿಯೂ ಇರುತ್ತವೆ. ಇತರ ಸಿದ್ಧಾಂತಗಳಲ್ಲಿ ಅನೇಕ ಪಂಡಿತರೂ ಸಹ ಗಮನಿಸದ ಸೂಕ್ಷ್ಮ ನ್ಯೂನತೆಗಳನ್ನೂ, ದೋಷಗಳನ್ನೂ ಗ್ರಹಿಸಿ ಅವನ್ನು ಪಾಮರರೂ ಸಹ ಸ್ಪಷ್ಟವಾಗಿ ತಿಳಿಯುವಂತೆ ಪರಮತಭಂಗ ಮುಂತಾದ ಕೃತಿಗಳಲ್ಲಿ ನಿರೂಪಿಸಿರುವರು. ಶ್ರೀ ರಾಮಾನುಜರ ದರ್ಶನದಲ್ಲಿರುವ ವೈಶಿಷ್ಟ್ಯವನ್ನೂ, ಅದರ ಮಹತ್ತ್ವವನ್ನೂ ಸರಿಯಾಗಿ ತಿಳಿಯಬೇಕೆನ್ನುವವರು ಶ್ರೀ ದೇಶಿಕರ ಕೃತಿಗಳನ್ನು ಶರಣುಹೋಗಬೇಕು. ಅಮಿತವಾಗಿರುವ ಶಾಸ್ತ್ರಗ್ರಂಥಗಳನ್ನು ಸಮಗ್ರವಾಗಿ ಅಧ್ಯಯನಮಾಡಿ ಅವುಗಳಲ್ಲಿ ಅಡಕವಾಗಿರುವ ತತ್ತ್ವವೇನು ? ಅವುಗಳ ಸಾರವೇನೆಂಬುದನ್ನು ಗ್ರಹಿಸುವುದು ಎಲ್ಲರಿಗೂ ಅವಶ್ಯಕವೆಂಬುದನ್ನು ಗಮನಿಸಿ ದೇಶಿಕರವರು ಸಾರತಮ ವಿಷಯಗಳನ್ನು ಕಡೆದ ಬೆಣ್ಣೆಯಂತೆ ಎತ್ತಿ ತೋರಿರುವ ಹಾಗೆ ಬೇರಾವಗ್ರಂಥಕಾರರೂ ತೋರಿಲ್ಲ. ಕಲಿಕಾಲದಲ್ಲಿ ಅಶಕ್ತರೂ ಮಿತಮತಿಗಳೂ ಆದ ಸಜ್ಜನರಿಗೆ ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆಯಲು ಏಕೈಕ ಸಾಧನವಾಗಿರುವ ಶರಣಾಗತಿಯನ್ನು ಭಗವದ್ರಾಮಾನುಜರು ಅನುಷ್ಠಾನದಿಂದ, ಉಪದೇಶಮಾತ್ರದಿಂದ ತೋರಿಸಲು ಎಲ್ಲರಿಗೂ ವಿಶದವಾಗಿ ತಿಳಿಸುವ ಘನ ಉದ್ದೇಶದಿಂದಲೂ, ಶರಣಾಗತಿಯ ನಿಜವಾದ ಹಿರಿಮೆಯನ್ನರಿತು ಅದನ್ನು ಎಲ್ಲರೂ ಅನುಷ್ಠಿಸಿ ಮಹಾ ಲಾಭವನ್ನು ಪಡೆಯಲೆಂಬ ಸದುದ್ದೇಶದಿಂದಲೂ ಅದರ ಅನುಷ್ಠಾನಕ್ರಮಗಳೊಂದಿಗೆ ಪ್ರಮಾಣಬದ್ಧವಾಗಿ ರಹಸ್ಯತ್ರಯಸಾರವೆಂಬ ವಿಸ್ತಾರವಾದ ಗ್ರಂಥವನ್ನು ರಚಿಸಿ ಮಹೋಪಕಾರಮಾಡಿರುತ್ತಾರೆ. ಶರಣಾಗತಿ ಸಾಧನದ ವಿಚಾರವಾಗಿ ಇಷ್ಟು ವಿಪುಲವಾದ ಸರಳವಾದ ಅನೇಕ ಪ್ರಮಾಣ ವಚನಗಳನ್ನೊಳಗೊಂಡ ಹೃದಯಂಗಮವಾದ ಬೇರೊಂದು ಗ್ರಂಥ ಭಾರತೀಯ (ಸಂಸ್ಕೃತ) ಸಾಹಿತ್ಯದಲ್ಲೇ ಇಲ್ಲ. ಇದಲ್ಲದೆ ಇನ್ನೂ ಅನೇಕ ರಹಸ್ಯಗ್ರಂಥಗಳನ್ನೂ ರಚಿಸಿರುವರು. ಭಗವದ್ರಾಮಾನುಜಾಚಾರ್ಯರ ಸಿದ್ಧಾಂತದ ಸಂಪೂರ್ಣ ಪರಿಚಯವನ್ನು ನಿಷ್ಕೃಷ್ಟವಾಗಿ ತಿಳಿಯಲು ನಿಗಮಾಂತಮಹಾದೇಶಿಕರ ಗ್ರಂಥಗಳ ಅಧ್ಯಯನ ಮಾತ್ರವೇ ಸಾಕು. ದೇಶಿಕರವರ ಜ್ಞಾನ ಸರ್ವತೋಮುಖ ಎಂಬುದಕ್ಕೆ ಸಂಸ್ಕೃತ ಸಾಹಿತ್ಯ ಕ್ಷೇತ್ರದ ಎಲ್ಲ ಶಾಖೆಗಳಲ್ಲಿಯೂ ಅವರು ರಚಿಸಿರುವ ಗ್ರಂಥಗಳೇ ಸಾಕ್ಷಿಯಾಗಿವೆ. ಎಲ್ಲ ವಿದ್ಯೆಗಳಲ್ಲೂ ಕಲೆಗಳಲ್ಲೂ ಪರಿಚಯಮಾತ್ರವಲ್ಲ ಅಪಾರವಾದ ಪರಿಶ್ರಮ ಇವರಿಗಿತ್ತು. ದೇಶಿಕರಿಗೆ ಎಲ್ಲ ಶಾಸ್ತ್ರಗಳಲ್ಲಿಯೂ ಅಗಾಧ ಪಾಂಡಿತ್ಯ ಮತ್ತು ನಿಷ್ಕೃಷ್ಟ ಜ್ಞಾನ ಇತ್ತೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

ನಿಗಮಾಂತ ಮಹಾದೇಶಿಕರ ವೇದಾಂತಜ್ಞಾನದ ಉತ್ಕರ್ಷವನ್ನು ಕಂಡು ಸುಪ್ರೀತನಾಗಿ ಸರ್ವಜ್ಞನಾದ ಪರಮಪುರುಷನೇ ಇವರಿಗೆ ವೇದಾಂತಾಚಾರ್ಯ ಎಂಬ ಬಿರುದನ್ನು ದಯಪಾಲಿಸಿದನೆಂದ ಮೇಲೆ ಹೇಳುವುದೇನಿದೆ. "ಶ್ರೀರಂಗರಾಜದಿವ್ಯಾಜ್ಞಾಲಬ್ಧ ವೇದಾಂತಾಚಾರ್ಯಪದಃ" ಶ್ರೀರಂಗನಾಥನ ದಿವ್ಯಶಾಸನದಿಂದ ವೇದಾಂತಾಚಾರ್ಯ ಎಂಬ ಹೆಸರನ್ನು ಪಡೆದ ಭಾಗ್ಯಶಾಲಿ ನಾನು ಎಂದು ಸಂಕಲ್ಪ ಸೂರ್ಯೋದಯ ನಾಟಕದಲ್ಲೂ,

ಸ್ವಸ್ತಿ ಶ್ರೀರಂಗಭರ್ತುಃ ಕಿಮಪಿ ದಧದಹಂ ಶಾಸನಂ ತತ್ಪ್ರಸತ್ತೈ
ಸತ್ತೈ ಕಾಲಂಬಿ ಭಾಷ್ಯಂ ಯತಿಪತಿಕಥಿತಂ ಶಶ್ವದಧ್ಯಾಪ್ಯ ಯುಕ್ತಾ |
ವಿಶ್ವಸ್ಮಿನ್ನಾ ಮರೂಪಾಣ್ಯನುವಿಹಿತವತಾ ತೇನ ದೇವೇನ ದತ್ತಾಂ
ವೇದಾಂತಾಚಾರ್ಯಸಂಜ್ಞಾ ಮವಹಿತ ಬಹುವಿತ್ಸಾರ್ಥಮನ್ವರ್ಥಯಾಮಿ

ಲೋಕದಲ್ಲಿ ಎಲ್ಲ ವಸ್ತುಗಳಿಗೂ ನಾಮರೂಪಗಳನ್ನು ಏರ್ಪಡಿಸಿದ ಲೋಕಸ್ವಾಮಿಯಾದ ರಂಗನಾಥನು "ವೇದಾಂತಾಚಾರ್ಯ ಎಂಬ ಹೆಸರನ್ನಿತ್ತಿರುವನು ಎನಗೆ. ಆ ಸ್ವಾಮಿಯ ಆದೇಶದಂತೆ ಯೋಗ್ಯಶಿಷ್ಯರಿಗೆ ಸತ್ವವನ್ನವಲಂಬಿಸಿ ನಿಂತಿರುವ ಶ್ರೀ ರಾಮಾನುಜಭಾಷ್ಯವನ್ನು ಬೋಧಿಸುತ್ತಿರುವ ನಾನು ಆ ದೇವನನುಗ್ರಹಿಸಿರುವ ಹೆಸರನ್ನು ಸಾರ್ಥಕಪಡಿಸಿ ಆತನನ್ನು ಸಂತೋಷಪಡಿಸುವೆನು ಎಂದು ಅಧಿಕರಣಸಾರಾವಳಿಯ ಆರಂಭದಲ್ಲೂ ದೇಶಿಕರೇ ಈ ವಿಷಯವನ್ನು ಸೂಚಿಸಿರುವರು.

ದೇಶಿಕರ ಜ್ಞಾನಾತಿರೇಕವನ್ನು ಕಂಡು ಬೆರಗಾಗಿ, ಇವರನ್ನು ಕೊಂಡಾಡದವರಿಲ್ಲ. ದೇಶಿಕರ ಸಂಪ್ರದಾಯಕ್ಕೆ ಸೇರಿದವರು ಹಾಗಿರಲಿ, ಇತರ ಸಂಪ್ರದಾಯಕ್ಕೆ ಸೇರಿದವರೂ, ಇತರ ಮತದವರೂ ಸಹ, ಮುಕ್ತಕಂಠದಿಂದ ಹೊಗಳಿರುವರು ಇವರನ್ನೂ ಇವರ ಜ್ಞಾನವನ್ನೂ,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ದೇಶಿಕರ ಶತದೂಷಣೀ ಎಂಬ ಗ್ರಂಥರತ್ನಕ್ಕೆ ವಿಸ್ತಾರವಾದ ವ್ಯಾಖ್ಯೆಯನ್ನು ಬರೆದಿರುವ ತೆಂಗಲೈ ಸಂಪ್ರದಾಯಕ್ಕೆ ಸೇರಿದ ದೊಡ್ಡಯ್ಯಾಚಾರ್ಯರೆಂಬ ವಿದ್ವದ್ವರೇಣ್ಯರು ದೇಶಿಕರ ಜ್ಞಾನಕ್ಕೆ ಬೆರಗಾಗಿ

ತುರಗವದನತೇಜೋಬ್ಯಂಹಿತಾಶ್ಚರ್ಯಶಕ್ತಿಃ ಕವಿಕಥಕಮೃಗೇಂದ್ರಃ ಸರ್ವತಂತ್ರಸ್ವತಂತ್ರಃ |
ಜಯತಿ ಗುರುರಬಾಧಾಂ ವೇದಚೂಡಾರ್ಯಸಂಜ್ಞಾಮನಿತರಜನಲಭ್ಯಾಂ ಲಂಭಿತೋ ರಂಗಭರ್ತ್ರಾ ||

ಹಯಗ್ರೀವ ರೂಪಿಯಾದ ಲಕ್ಷ್ಮೀಪತಿಯ ತೇಜಸ್ಸಿನಿಂದ ಅದ್ಭುತ ಹಾಗೂ ಅತಿಶಯಿತ ಜ್ಞಾನಸಂಪತ್ತನ್ನು ಪಡೆದು ಕವಿಸಿಂಹವಾಗಿ ವಾದಿಕೇಸರಿಯಾಗಿ ಸಕಲಶಾಸ್ತ್ರ ಮತ್ತು ಕಲೆಗಳಲ್ಲಿ ಪ್ರಭುತ್ವವನ್ನು ಗಳಿಸಿರುವ ; ಬೇರಾರೂ ಪಡೆಯಲಾಗದ "ವೇದಾಂತಾಚಾರ್ಯ" ಎಂಬ ಅನ್ವರ್ಥವಾದ ಬಿರುದನ್ನು ಶ್ರೀರಂಗನಾಥನಿಂದಲೇ ಸಂಪಾದಿಸಿರುವ ಶ್ರೀ ದೇಶಿಕರವರು ಸದಾ ಪಂಡಿತಲೋಕದಲ್ಲಿ ಮೇಲಾಗಿ ಸರ್ವಮಾನ್ಯರಾಗಿ ಬೆಳೆಗುತ್ತಿರುವರು ಎಂದು ಕೊಂಡಾಡಿರುವರು. ನಾಲ್ಕು ವೇದಗಳಿಗೂ ಭಾಷ್ಯವನ್ನು ರಚಿಸಿ ವೇದಭಾಷ್ಯಕಾರರೆಂದು ಪ್ರಸಿದ್ಧರಾಗಿರುವ ವಿದ್ಯಾರಣ್ಯರೆಂಬ ಪಂಡಿತೋತ್ತಮರು ಅಕ್ಷೋಭ್ಯಮುನಿಗಳಕೂಡ ವೇದಾಂತ ವಿಚಾರದಲ್ಲಿ ವಾದವೇರ್ಪಟ್ಟಾಗ ಇಬ್ಬರ ವಾದವನ್ನೂ ಗಮನಿಸಿ ನಿಷ್ಪಕ್ಷಪಾತವಾಗಿ ಪ್ರಮಾಣಸಮ್ಮತವಾದ ತೀರ್ಪನ್ನು ಕೊಡಲು ಅರ್ಹರು, ನಿಷ್ಪಟ್ಟ ಜ್ಞಾನವುಳ್ಳ ಮೇಧಾವಿ ದೇಶಿಕರೇ ಎಂದು ನಿರ್ಧರಿಸಿ ದೇಶಿಕರನ್ನೇ ತೀರ್ಪುಗಾರರಾಗಿರುವಂತೆ ಪ್ರಾರ್ಥಿಸಿ ಒಪ್ಪಿಸಿದರು. ತಮ್ಮ ತಮ್ಮ ವಾದಗಳನ್ನು ಲಿಖಿತಮೂಲಕ ಬರೆದು ಇಬ್ಬರು ವಾದಿಪ್ರತಿವಾದಿಗಳೂ ತೀರ್ಪಿಗಾಗಿ ದೇಶಿಕರಿಗೆ ಕಳುಹಿಸಿಕೊಟ್ಟರು. ದೇಶಿಕರು ಕೊಟ್ಟ ತೀರ್ಪನ್ನು ಇಬ್ಬರು ಪಂಡಿತೋತ್ತಮರೂ ಒಪ್ಪಿದರು ಮತ್ತು ಮೆಚ್ಚಿದರು. ಅನೇಕ ಸಿದ್ಧಾಂತಗಳನ್ನು ಸಂಗ್ರಹಿಸಿ ಸರ್ವದರ್ಶನ ಸಂಗ್ರಹವನ್ನು ರಚಿಸಿರುವ ಮಾಧವಾಚಾರ್ಯರು ರಾಮಾನುಜ ಸಿದ್ಧಾಂತದ ಪ್ರಸಂಗ ಬಂದಾಗ ಪ್ರಮಾಣವಾಗಿ ಆಧಾರವಾಗಿ ಶ್ರೀ ದೇಶಿಕರ ಕೃತಿಯಿಂದಲೇ ಅನೇಕ ಶ್ಲೋಕಗಳನ್ನು ಉಲ್ಲೇಖಿಸಿರುವರು. ಹೀಗೆ ದೇಶಿಕರು ತಮ್ಮ ಜೀವಿತ ಕಾಲದಲ್ಲೆ ಸಮಕಾಲಿಕವಾದ ಇತರ ಪಂಥದ ಪಂಡಿತರಲ್ಲಿಯೂ ಅಗ್ರಸ್ಥಾನವನ್ನು ಪಡೆದಿದ್ದರು.

ಭಗವದ್ರಾಮಾನುಜರ ಸಿದ್ಧಾಂತದಲ್ಲಿ ಮಾತ್ರವಲ್ಲದೆ ಎಲ್ಲ ಶಾಸ್ತ್ರಗಳಲ್ಲೂ ಸಿದ್ಧಹಸ್ತರಾಗಿ ಪ್ರಭುತ್ವವನ್ನು ಪಡೆದಿದ್ದು "ಸರ್ವತಂತ್ರಸ್ವತಂತ್ರ" ಎಂದು ಪಂಡಿತಸಮಾಜದಲ್ಲಿ ಪ್ರಸಿದ್ಧರಾಗಿದ್ದರು. ತರ್ಕಶಾಸ್ತ್ರದಲ್ಲಿ ಅದ್ವಿತೀಯಪಂಡಿತರಾಗಿ ತಾರ್ಕಿಕಸಿಂಹ ಎಂದೆನಿಸಿಕೊಂಡ ಇವರು ಅತ್ಯದ್ಭುತ ಕವಿತಾಶಕ್ತಿಯುಳ್ಳವರಾಗಿದ್ದು ಕವಿಕೇಸರೀ ಎಂದೂ ವಿಖ್ಯಾತರಾಗಿದ್ದುದು ಮಹತ್ವದ ಸಂಗತಿ. ತರ್ಕಶಾಸ್ತ್ರಾಭ್ಯಾಸದಿಂದ ಮತಿಯು ಕರ್ಕಶವಾಗಿ ಕಾವ್ಯಸೃಷ್ಟಿಗೆ ಬೇಕಾಗಿರುವ ಮತೀಯ ಕೋಮಲತೆಯನ್ನೂ, ಅಗತ್ಯವಾಗಿರುವ ವಿಲಕ್ಷಣ ಪ್ರತಿಭೆಯನ್ನೂ ಮುಚ್ಚಿಬಿಡುವುದು. "ನಮಃ ಪ್ರಾಮಾಣ್ಯವಾದಾಯ ಮತ್ಕವಿತ್ವಾಪಹಾರಿಣೆ" ನನ್ನ ಕವಿತಾಶಕ್ತಿಯೆಲ್ಲವನ್ನೂ ನುಂಗಿರುವ ಪ್ರಾಮಾಣ್ಯವಾದ ಗ್ರಂಥಕ್ಕೆ ಸಮಸ್ಕಾರ ಎಂದು ತರ್ಕಶಾಸ್ತ್ರದ "ಪ್ರಾಮಾಣವಾದ" ಎಂಬ ಗ್ರಂಥವನ್ನು ಚೆನ್ನಾಗಿ ಅಧ್ಯಯನಮಾಡಿ ತನ್ನಲ್ಲಿ ಮೂಡಿಬಂದಿದ್ದ ಕವಿತಾಶಕ್ತಿಯನ್ನು ಕಳೆದುಕೊಂಡ ಮಹಾಕವಿಯೊಬ್ಬನ ವಿಷಾದಗರ್ಭವಾದ ವಾಣಿಯು ಕವಿತಾಶಕ್ತಿಗೂ ತರ್ಕನಿಶಿತಬುದ್ಧಿಗೂ ಸಮಾವೇಶ ಅಸಂಭವವೆಂಬುದನ್ನು ಸೂಚಿಸುತ್ತದೆ. ಆದರೆ "ಕಾವ್ಯೇಷು ಕೋಮಲಧಿಯೋ ವಯಮೇವ ನಾನ್ಯೇ ತರ್ಕೇಷು ಕರ್ಕಶಧಿಯೋ ವಯಮೇವ ನಾನ್ಯೇ" ಕಾವ್ಯಗಳ ವಿಷಯದಲ್ಲಿ ನಮ್ಮ ಮತಿಯೇ ಅತ್ಯಂತ ಕೋಮಲವಾಗಿರುವುದು. ತರ್ಕಶಾಸ್ತ್ರದ ವಿಷಯ ಬಂದಾಗ ನಮ್ಮ ಬುದ್ಧಿಯೇ ಅತ್ಯಂತ ಹರಿತ ಮತ್ತು ಕಠಿಣವಾಗಿರುವುದು ಎಂದು ಅವರೇ ಸೂಚಿಸಿರುವಂತೆ ದೇಶಿಕರಲ್ಲಿ ಅವರೆಡೂ ಮೈತ್ರಿಯಿಂದ ಮಿಳಿತವಾಗಿದ್ದವು.

ಕವಿಲೋಕದಲ್ಲೂ ಉತ್ತಮಸ್ಥಾನವನ್ನು ಗಳಿಸಿರುವ ದೇಶಿಕರು ಕಾಳಿದಾಸ, ಭಾರವಿ, ಭವಭೂತಿ ಮುಂತಾದ ಮಹಾಕವಿಗಳ ಸಾಲಿನಲ್ಲಿ ಸೇರುವವರಾಗಿದ್ದು ಅಲಂಕಾರಿಕ ಮೂರ್ಧನ್ಯನಾದ ಆನಂದವರ್ಧನಾಚಾರ್ಯನು "ದ್ವಿತ್ರಾಃ ಪಂಚಷಾ ವಾ ಮಹಾಕವಯ ಇತಿ ಗಣ್ಯನ್ತೆ" ಸಂಸ್ಕೃತ ಸಾಹಿತ್ಯದಲ್ಲಿ ನೂರಾರು ಕವಿಗಳಿದ್ದರೂ ಮಹಾಕವಿ ಎನ್ನಿಸಿಕೊಳ್ಳುವವರು ಇಬ್ಬರು, ಮೂವರು ಹೆಚ್ಚೆಂದರೆ ಐದಾರು ಜನರು ಮಾತ್ರ ಎಂದು ಹೇಳಿರುವ ಇಬ್ಬರು ಮೂವರಲ್ಲಿ ಸೇರಲು ಯೋಗ್ಯವಾದ ಅರ್ಹತೆಯನ್ನು ಪಡೆದ ಮಹಾಕವಿಗಳಾಗಿದ್ದಾರೆ. ಉತ್ತಮ ಕವಿಯ ಲಕ್ಷಣವೇನೆಂಬುದನ್ನು ಚೆನ್ನಾಗಿ ಅರಿತಿರುವವರು ದೇಶಿಕರು.

ಸ ಕವಿಃ ಕಥ್ಯತೇ ಸ್ರಷ್ಟಾ ರಮತೇ ಯತ್ರ ಭಾರತೀ |
ರಸಭಾವಗುಣೇಭೂತೈರಲಂಕಾರೈರ್ಗುಣೋದಯೈಃ ||

ಶೃಂಗಾರಾದಿ ರಸಗಳಿಂದಲೂ, ಆಯಾಯಾ ರಸಕ್ಕೆ ಅನುಗುಣವಾದ ವಿಭಾವಾದಿ ಭಾವಗಳಿಂದಲೂ ಅನುಪ್ರಾಸ ಉಪಮಾ ಮುಂತಾದ ಅಲಂಕಾರಗಳಿಂದಲೂ ಮಾಧುರ್ಯಾದಿ ಗುಣಗಳಿಂದಲೂ ಶೋಭಿಸುವ ವಾಣಿಯು ಯಾವನ ನಾಲಿಗೆಯಲ್ಲಿ ವಿಹರಿಸುವುದೋ ಯಾವನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇತರರ ಕಲ್ಪನೆಗಳನ್ನು ಹರಣಮಾಡದೆ ತನ್ನ ಅಸಾಧಾರಣ ಪ್ರತಿಭೆಯಿಂದಲೇ ಸಹೃದಯರು ಮೆಚ್ಚುವ ಆನಂದಿಸುವ ಅಪೂರ್ವ ಮತ್ತು ಮಧುರ ಕಲ್ಪನೆಗಳನ್ನು ಮಾಡಬಲ್ಲನೋ ಅಂತಹವನೇ ಕವಿಯೆನಿಸಿಕೊಳ್ಳಲರ್ಹನು ಎಂದು ಅವರೇ ಹೇಳುವ ಲಕ್ಷಣಗಳೆಲ್ಲವೂ ದೇಶಿಕರಲ್ಲಿ ಪೂರ್ಣವಾಗಿ ಇರುವುದನ್ನು ಅವರ ಕೃತಿಗಳನ್ನು ನಿಷ್ಪಕ್ಷಪಾತಮನೋಭಾವದಿಂದ ಅಧ್ಯಯನಮಾಡುವವರೆಲ್ಲರೂ ಕಾಣಬಹುದು. ಕಾವ್ಯವಿಮರ್ಶನಾಚತುರನಾದ ಪ್ರತಿಯೊಬ್ಬ ಸಹೃದಯನೂ ಅವರನ್ನು ಕಾಳಿದಾಸನಿಗೆ ಎರಡನೆಯವರನ್ನಾಗಿಯೂ ಇತರ ಕವಿಗಳಿಗೆ ಮೊದಲಿಗರನ್ನಾಗಿಯೂ ಭಾವಿಸದೆ ಇರನು. ದೇಶಿಕರು ರಚಿಸಿರುವ ಯಾದವಾಭ್ಯುದಯ ಮಹಾಕಾವ್ಯಕ್ಕೆ ಸುಂದರವಾದ ವ್ಯಾಖ್ಯಾನವನ್ನು ಬರೆದಿರುವ ಅಪ್ಪಯ್ಯದೀಕ್ಷಿತರೆಂಬ ಸಕಲಶಾಸ್ತ್ರವಿಶಾರದರಾದ ಪಂಡಿತೋತ್ತಮರು ಕಾವ್ಯದ ಶ್ಲೋಕಗಳಲ್ಲಿ ಕಂಡುಬರುವ ಪದಗಳ ಲಾಲಿತ್ಯಕ್ಕೂ ಅರ್ಥಪುಷ್ಟಿಗೂ ಬೆರಗಾಗಿ :

ಇತ್ಥಂ ವಿಚಿಂತ್ಯಾಃ ಸರ್ವತ್ರ ಭಾವಾಃ ಸಂತಿ ಪದೇ ಪದೇ |
ಕವಿತಾರ್ಕಿಕಸಿಂಹಸ್ಯ ಕಾವ್ಯೇಷು ಲಲಿತೇಷ್ವಪಿ ||

ಕವಿತಾರ್ಕಿಕಸಿಂಹರೆಂದು ಪ್ರಸಿದ್ಧರಾದ ಶ್ರೀದೇಶಿಕರ ಕಾವ್ಯಗಳು ಅತ್ಯಂತ ಲಲಿತವಾಗಿದ್ದರೂ ಪ್ರತಿ ಶ್ಲೋಕದಲ್ಲಿಯೂ, ಪ್ರತಿ ಪದದಲ್ಲಿಯೂ ತುಂಬಿವೆ ಭಾವಗಳು. ಪ್ರತಿ ಪದ್ಯದಲ್ಲಿಯೂ ಭಾವಾರ್ಥಗಳೆಲ್ಲವನ್ನೂ ನಾನೇ ವಿಶದಪಡಿಸುವುದೆಂದರೆ ನನ್ನ ವ್ಯಾಖ್ಯಾನಗ್ರಂಥ ಅತಿವಿಸ್ತಾರವಾಗುವುದು. ನಾನು ಈ ಒಂದು ಪದ್ಯದಲ್ಲಿ ತೋರಿರುವ ರೀತಿಯಲ್ಲಿ ಸಹೃದಯರು ಪ್ರತಿಪದ್ಯದಲ್ಲಿಯೂ ತಾವೇ ಗಮನಿಸಿ ಭಾವಾರ್ಥಗಳನ್ನು ಅನುಭವಿಸಬೇಕು ಎಂದು ತಿಳಿಸಿರುವರು. ಕಾವ್ಯಗಳಲ್ಲಿ ರಸಭಾವಕ್ಕೆ ಅನುಗುಣವಾಗಿ ಬಳಸಬೇಕಾದ ರೀತಿಗಳನ್ನು ಗೌಡೀ, ವೈದರ್ಭೀ, ಪಾಂಚಾಲೀ ಎಂದು ಗಣನೆಮಾಡಿರುವರು ಕಾವ್ಯಲಕ್ಷಣ ಶಾಸ್ತ್ರಕಾರರು. ದೇಶಿಕರು ಈ ವಿಧವಾದ ರೀತಿಗಳಲ್ಲೂ ಸಿದ್ಧಹಸ್ತರಾಗಿದ್ದರು.

ಗೌಡವೈದರ್ಭಪಾಂಚಾಲಮಾಲಾಕಾರಾಂ ಸರಸ್ವತೀಂ |
ಯಸ್ಯ ನಿತ್ಯಂ ಪ್ರಶಂಸಂತಿ ಸಂತಃ ಸೌರಭವೇ ದಿನಃ ||

ವಾಕ್ಯವಿನ್ಯಾಸಗಳ ಮರ್ಮವನ್ನರಿತ, ಸರಸ್ವತಿಯ ಸೊಬಗನ್ನು ತಿಳಿದ ರೀತಿಗಳ ಸ್ವರೂಪವನ್ನು ಬಲ್ಲ ಭಾವುಕರು ದೇಶಿಕರ ಗೌಡ, ವೈದರ್ಭ, ಪಾಂಚಾಲ ರೂಪವಾದ ರೀತಿಗಳಿಂದ ವಿರಾಜಿಸುವ ವಾಣಿಯನ್ನು ಮನಃಪೂರ್ವಕವಾಗಿ ಕೊಂಡಾಡುತ್ತಿದ್ದರು. ಕವಿಸಾರ್ವಭೌಮ ಕಾಳಿದಾಸನ ರಘುವಂಶ ಮಹಾ ಕಾವ್ಯವನ್ನು ಹೋಲುವ ಯಾದವಾಭ್ಯುದಯ ಮಹಾಕಾವ್ಯವನ್ನು ರಚಿಸಿರುವ ದೇಶಿಕರು ವಿಶ್ವಸಾಹಿತ್ಯದಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಮೇಘಸಂದೇಶ ಕಾವ್ಯವನ್ನೊಪ್ಪುವ ಹಂಸಸಂದೇಶವೆಂಬ ಉತ್ತಮವಾದ ಸಂದೇಶಕಾವ್ಯವನ್ನೂ ರಚಿಸಿರುವರು. ಸರ್ವವಿಧದಲ್ಲೂ ಹಂಸಸಂದೇಶವೂ ಮೇಘ ಸಂದೇಶಕ್ಕೆ ಸಾಟಿಯಾಗಿರುವುದು ಮಾತ್ರವಲ್ಲ ಅನೇಕ ಕಡೆ ಉತ್ತಮ ಭಾವನೆಗಳಿಂದಲೂ, ಸುಂದರ ಪದವಿನ್ಯಾಸಗಳಿಂದಲೂ ಮೇಘಸಂದೇಶವನ್ನು ಮೀರುತ್ತದೆ ಎಂದು ಅನೇಕ ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಉಪನಿಷತ್ಪ್ರಸಿದ್ಧವಾದ, ಶಾಸ್ತ್ರಗಳಲ್ಲಿ ವಿಮರ್ಶೆಮಾಡಲ್ಪಡುವ ಗಹನ ತತ್ತ್ವಗಳನ್ನೂ, ಉತ್ತಮ ಸಿದ್ಧಾಂತಗಳನ್ನೂ ಭಗವದ್ರಾಮಾನುಜರು ತೋರಿಕೊಟ್ಟ ದರ್ಶನವನ್ನೂ ಎಲ್ಲರ ಕಣ್ಣಿಗೆ ಕಟ್ಟುವಂತೆ ಮನದಲ್ಲಿ ನೆಲಸುವಂತೆ ಸಂಕಲ್ಪಸೂರ್ಯೋದಯ ಎಂಬ ನಾಟಕರೂಪದಲ್ಲಿ ಚಿತ್ರಿಸಿ ಉತ್ತಮ ನಾಟಕಕಾರರೂ ಆಗಿರುವರು ದೇಶಿಕರು. ಆದಿ ಶಂಕರಾಚಾರ್ಯರಂತೆ ಭಗವಂತನ ನಾನಾ ರೂಪಗಳನ್ನೂ, ಅವತಾರಗಳನ್ನೂ ವರ್ಣಿಸುವ ಭಕ್ತಿಪೂರ್ಣವಾದ ಮತ್ತು ಹೃದಯಂಗಮವಾದ ಅನೇಕ ಸ್ತೋತ್ರಗಳನ್ನೂ ರಚಿಸಿ ತುಂಬ ಉಪಕಾರ ಮಾಡಿರುತ್ತಾರೆ. ಭಕ್ತವೃಂದಕ್ಕೆ ಅರ್ಥಜ್ಞಾನವಿಲ್ಲದಿದ್ದರೂ ಕೇವಲ ಪಠನಮಾತ್ರದಿಂದಲೂ ಆನಂದವನ್ನೂ ಭಗವದ್ಭಕ್ತಿಯನ್ನೂ ಉಂಟುಮಾಡುವುದು ಮಾತ್ರವಲ್ಲ, ಮಹತ್ತಾದ ಫಲವನ್ನೂ ನೀಡುವ ಅಪೂರ್ವ ಶಕ್ತಿಯನ್ನೊಳಗೊಂಡಿವೆ ಈ ಸ್ತೋತ್ರಗಳು. ಸರಳವಾಗಿರುವುದರ ಜೊತೆಗೆ ಉಪನಿಷದರ್ಥಗಳನ್ನೊಳಗೊಂಡಿರುವ ಈ ಸ್ತೋತ್ರಗಳು ಪಂಡಿತರಿಗೂ ಅಧ್ಯಯನ ಮಾಡಲೂ ಸದಾ ಅನುಸಂಧಾನಮಾಡಲೂ ಯೋಗ್ಯವಾಗಿವೆ. ದೇಶಿಕರು ರಚಿಸಿರುವ ಸ್ತೋತ್ರಗಳನ್ನು ಮಾತ್ರವೇ ಸಂಪೂರ್ಣವಾಗಿ ಅರಿತವರೂ ಸಹ ವೇದಾಂತ ಸಿದ್ಧಾಂತದ, ರಾಮಾನುಜ ಸಂಪ್ರದಾಯದ ಪರಿಚಯವನ್ನು ಸುಲಭವಾಗಿ ಮಾಡಿಕೊಳ್ಳಬಹುದು, ಮುನಿವಚನಗಳ ತಾತ್ಪರ್ಯವನ್ನರಿಯಬಹುದು.

ವೇದಾಂತಗ್ರಂಥಗಳನ್ನು ರಚಿಸುವುದಾಗಲಿ, ಕಾವ್ಯಗಳನ್ನು ಸೃಷ್ಟಿಸುವುದಾಗಲಿ ದೇಶಿಕರಿಗೆ ಆಟವಿದ್ದಂತೆ ಅನಾಯಾಸವಾಗಿ ಅತ್ಯಲ್ಪಕಾಲದಲ್ಲಿ ಯಾವ ಕೃತಿಯನ್ನು ಬೇಕಾದರೂ ಸೃಷ್ಟಿಸಬಲ್ಲವರಾಗಿದ್ದರು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕವಿಸಿಂಹ ಎಂದು ಸುಪ್ರಸಿದ್ಧವಾಗಿದ್ದ ಇವರ ಹೆಸರನ್ನು ಸಹಿಸದ ಕೆಲವರು, 'ಒಂದೇ ರಾತ್ರಿಯಲ್ಲಿ ಸಾವಿರಾರು ಶ್ಲೋಕಗಳನ್ನು ರಚಿಸಲು ಸಮರ್ಥರಾದವರು ಮಾತ್ರ ಆ ಹೆಸರಿಗೆ ಅರ್ಹರು' ಎಂದು ಶ್ರೀರಂಗನಾಥನ ಮಂದಿರದಲ್ಲಿ ಒಮ್ಮೆ ಕೋಲಾಹಲವೆಬ್ಬಿಸಿದರು. ಅದೇ ದಿನ ರಾತ್ರಿ ಸಾವಿರ ಪದ್ಯಗಳನ್ನು ರಚಿಸಿದರೆ ಮಾತ್ರ ಕವಿಸಿಂಹ ಎಂಬ ಹೆಸರನ್ನು ಉಳಿಸಿಕೊಳ್ಳಬಹುದಲ್ಲದೇ ಅಸಮರ್ಥರಾದರೆ ರಚಿಸುವವರಿಗೆ ಆ ಹೆಸರನ್ನು ಬಿಟ್ಟುಕೊಡಬೇಕು ಎಂದು ಒತ್ತಾಯಮಾಡಿದರು. ಆಗ ಪಿಳ್ಳೆಲೋಕಾಚಾರ್ಯರ ಸಹೋದರರಾದ ಅಳಹಿಯಮಣವಾಳಪ್ಪೆರುಮಾಳ್ ನಾಯನಾರ್ ಎಂಬುವರು 'ಕವಿಸಿಂಹ' ಎಂಬ ಹೆಸರನ್ನು ತಾವು ಪಡೆಯಬೇಕೆಂಬ ಚಾಪಲ್ಯದಿಂದ ಸಾವಿರ ಪದ್ಯಗಳನ್ನು ತಾವು ರಚಿಸುವುದಾಗಿ ಹೇಳಿ ಶ್ರೀರಂಗನಾಥನ ಪಾದಕಮಲಗಳನ್ನು ಸ್ತೋತ್ರಕ್ಕೆ ವಿಷಯವಾಗಿ ಆರಿಸಿಕೊಂಡರು. ಇಂತಹ ಕ್ಷುದ್ರವಾದಿಗಳ ಮಾತಿಗೆಲ್ಲ ಬೆಲೆಕೊಡುವ ಇಚ್ಛೆಯಿಲ್ಲದಿದ್ದರೂ, ಬಿರುದು ಬಾವಲಿಗಳಲ್ಲಿ ಚಾಪಲ್ಯವಿಲ್ಲದಿದ್ದರೂ ದೇಶಿಕರು ತನ್ನ ಮೂಲಕ ಸ್ತೋತ್ರಮಾಡಿಸಿಕೊಳ್ಳುವ ಸದುದ್ದೇಶದಿಂದ ಪರಮಾತ್ಮನ ಲೀಲೆಯೇ ಇದಾಗಿರಬೇಕು ; ಈ ನೆಪದಲ್ಲಿ ಪರಮಾತ್ಮನನ್ನು ಬಾಯಿತುಂಬ ಸ್ತುತಿಸುವ, ಮನಸ್ಪೂರ್ತಿಯಾಗಿ ಹಾಡುವ ಮತ್ತು ವರ್ಣಿಸುವ ಸದಾವಕಾಶವೊದಗಿದುದು ಒಂದು ಭಾಗ್ಯವೆಂದೇ ಭಾವಿಸಿ ಶ್ರೀರಂಗನಾಥನ ಪಾದಗಳ ಸೇವೆಯನ್ನು ಅನವರತಮಾಡುತ್ತಿರುವ, ವಾಲ್ಮೀಕಿ ಮಹಾ ಮುನಿಯಂತಹ ಜ್ಞಾನಿಗಳು ಕೊಂಡಾಡಿರುವ ಭರತನಂತಹ ಮಹನೀಯರು ಅನನ್ಯ ಭಕ್ತಿಯಿಂದ ಆರಾಧಿಸಿದ, ಪಾದುಕೆಗಳನ್ನು ಸಾವಿರ ಪದ್ಯಗಳಲ್ಲಿ ಕೊಂಡಾಡುವ, ಹೊಣೆಯನ್ನು ಹೊತ್ತರು. ಇಬ್ಬರೂ ಮಾರನೆಯದಿನ ಬೆಳಿಗ್ಗೆ ಶ್ರೀರಂಗನಾಥನ ಸನ್ನಿಧಾನದಲ್ಲಿ ಪಂಡಿತೋತ್ತಮರ ಸಮಿತಿಯಲ್ಲಿ ರಾತ್ರಿ ಬರೆದ ತಮ್ಮ ತಮ್ಮ ಕೃತಿಗಳನ್ನು ಪಠಿಸುವ ವ್ಯವಸ್ಥೆಯಾಯಿತು. ರಾತ್ರಿ ಕಳೆದು ಮಾರನೆಯದಿನ ಕೃತಿಗಳ ಪಠನ ಸಂದರ್ಭವು ಒದಗಿದಾಗ ಅಳಹಿಯ ಮಣವಾಳಪೆರುಮಾಳ್‌ನಾಯನಾರ್ರ 'ಪದಕಮಲ ಸಹಸ್ರ'ವು ಮುನ್ನೂರು ಶ್ಲೋಕಗಳಲ್ಲಿ ಪರ್ಯವಸಾನವಾಯಿತು. ದೇಶಿಕರು ರಚಿಸಿದ್ದ "ಪಾದುಕಾಸಹಸ್ರ" ಎಂಬ ತಮ್ಮ ಕೃತಿಯನ್ನು ಸಮಗ್ರವಾಗಿ ವಾಚನಮಾಡಿದರು. ನೆರೆದಿದ್ದ ಪಂಡಿತರೆಲ್ಲರೂ, ವಿಮರ್ಶಕರೆಲ್ಲರೂ ಒಮ್ಮತದಿಂದ ಪಾದುಕಾಸಹಸ್ರದ ಹಿರಿಮೆಯನ್ನು ಕೊಂಡಾಡಿ ಅಷ್ಟು ಅಲ್ಪಕಾಲದಲ್ಲಿ ಅಂತಹ ಉತ್ತಮಕೃತಿಯನ್ನು ರಚಿಸಿದ ವೇದಾಂತದೇಶಿಕರು ಕವಿಸಂಹ ಮಾತ್ರವಲ್ಲ ಕವಿಚಕ್ರವರ್ತೀ ಎನ್ನಿಸಿಕೊಳ್ಳಲು ಅರ್ಹರು ಎಂದು ತೀರ್ಮಾನಿಸಿದರು. ದೇಶಿಕರ ಉತ್ಕರ್ಷದಲ್ಲಿ ಸಹನೆಯಿಲ್ಲದ ಮಾತ್ಸರ್ಯಪೀಡಿತ ಪಂಡಿತರೂ ಸಹ ವಿಧಿಯಿಲ್ಲದೆ ದೇಶಿಕರ ಕವಿತಾಮಹತ್ವವನ್ನೂ, ಪ್ರತಿಭಾತಿಶಯವನ್ನೂ ಒಪ್ಪಬೇಕಾಯಿತು. ಅವಸರದಲ್ಲಿ ನಿರ್ಮಿತವಾಗಿದ್ದರೂ ಈ ಪಾದುಕಾಸಹಸ್ರವು ಉದಾತ್ತಭಾವಗಳನ್ನೂ ಉತ್ತಮತತ್ತ್ವಗಳನ್ನೂ, ಒಳಗೊಂಡು ಎಲ್ಲರೂ ಅಧ್ಯಯನಮಾಡಲು ಅರ್ಹವಾದ, ಸದಾ ಅನುಸಂಧಾನಮಾಡಲು ಯೋಗ್ಯವಾದ ಉತ್ತಮ ಪವಿತ್ರ ಗ್ರಂಥವಾಗಿದೆ. ಸ್ತೋತ್ರಗಳ ಗುಂಪಿಗೆ ಸೇರಿರುವುದಾದರೂ ಕಾವ್ಯಗುಣಗಳಿಂದ ತುಂಬಿ ಸುಂದರ ಕಾವ್ಯವೆನಿಸಿಕೊಳ್ಳುವಷ್ಟು ಮುದ್ದಾಗಿದೆ. ದೇಶಿಕರಿಗಿದ್ದ ಈ ಅಶುಕವಿತಾಸಾಮರ್ಥ್ಯವನ್ನೂ, ಕಲ್ಪನಾಕೌಶಲವನ್ನೂ ಈ ಕೃತಿಯು ಸ್ಪಷ್ಟಪಡಿಸುತ್ತದೆ. ಕೇವಲ ಒಂದೇ ವಿಷಯದ ಮೇಲೆ ಸಾವಿರಾರು ಪದ್ಯಗಳನ್ನು ರಚಿಸುವುದು ತುಂಬ ಸಾಹಸವೇ ಸರಿ. ಒಂದೇ ವಿಷಯವನ್ನು ಇಷ್ಟು ವಿಸ್ತಾರವಾಗಿ ಅನೇಕ ಪ್ರಕಾರವಾಗಿ ಬೇರಾವ ಕವಿಯೂ ವರ್ಣಿಸಿಲ್ಲ. ಭಗವಂತನ ಪಾದುಕೆಗಳ ವೈಭವವನ್ನು ತಿಳಿಯಲು ಏಕೈಕ ಕೃತಿ ದೇಶಿಕರ ಪಾದುಕಾಸಹಸ್ರ. ಒಂದು ರಾತ್ರಿಯಲ್ಲಲ್ಲ ಅನೇಕ ರಾತ್ರಿಗಳಲ್ಲಿಯೂ ಸಹ ಇಂತಹ ಕೃತಿಯನ್ನು ಬೇರೊಬ್ಬ ನಿರ್ಮಿಸಲಾರ.

ಇಂತಹ ಅದ್ಭುತ ಸಾಮರ್ಥ್ಯವಿದ್ದರೂ ಗರ್ವದ ವಾಸನೆಯೂ ಸಹ ಇರಲಿಲ್ಲ ದೇಶಿಕರಲ್ಲಿ. ಒಪ್ಪಿಕೊಂಡಂತೆ ಸಾವಿರ ಪದ್ಯಗಳನ್ನು ರಚಿಸಲಾಗದೆ, ಕುಸಿಂಹವೆಂಬ ಹೆಸರನ್ನು ಪಡೆಯಬೇಕೆಂಬ ಆಸೆಯನ್ನು ಈಡೇರಿಸಿಕೊಳ್ಳಲಾರದ ಪ್ರತಿಸ್ಪರ್ಧಿಯನ್ನು ಅವಹೇಳನ ಮಾಡುತ್ತಿರುವುದನ್ನೂ ತಮ್ಮನ್ನೇ ಎಲ್ಲರೂ ಹೊಗಳುತ್ತಿರುವುದನ್ನು ಸಹಿಸದೇ ದೇಶಿಕರು,

ಸೂತೇ ಸೂಕರಯುವತಿಃ ಸುತಶತಮತ್ಯಂತ ದುರ್ಭಗಂ ಝುಡಿತಿ |
ಕರಿಣೇ ಚಿರಾಯ ಸೂತೇ ಸಕಲ ಮಹೀಪಾಲಲಾಲಿತಂ ಕಲಭಂ ||

ಹೆಣ್ಣು ಹಂದಿಯು ಬೇಗ ಬೇಗ ದೌರ್ಭಾಗ್ಯದ ನೂರಾರು ಮರಿಗಳನ್ನು ಹಾಕುವುದು. ಹೆಣ್ಣಾನೆಯಾದರೋ ನಿಧಾನವಾಗಿಯಾದರೂ, ಒಂದೇ ಆದರೂ ವಿಶ್ವದ ಎಲ್ಲ ರಾಜಮಹಾರಾಜರೂ ಲಾಲಿಸುವ ಮರಿಯನ್ನೀಯುವುದು. ಸಂಖ್ಯೆಯಲ್ಲಿ ಕಮ್ಮಿಯಾಗಿದ್ದರೂ ಯೋಗ್ಯತೆಯಲ್ಲಿ ತಮ್ಮ ಪದ್ಯಗಳಿಗಿಂತ ತಮ್ಮ ಪ್ರತಿ ಸ್ಪರ್ಧಿಸುವ ಪದ್ಯಗಳು ಮೇಲಾಗಿವೆ. ಎಂದು ತಮ್ಮ ನೈಚ್ಯಾನುಸಂಧಾನವನ್ನು ವ್ಯಕ್ತಗೊಳಿಸಿದ್ದಾರೆ. ಪ್ರತಿಸ್ಪರ್ಧಿಗಳು ಪರಾಜಯವನ್ನು ಹೊಂದಿರುವ ವೇಳೆಯಲ್ಲಿ ಮತ್ತಷ್ಟು ತನ್ನ ಹೆಚ್ಚುಗಾರಿಕೆಯನ್ನು ಎದುರಾಳಿಗಳ ಕೀಳುತನವನ್ನೂ ಎತ್ತಿತೋರುವ ಪ್ರಯತ್ನ ಮಾಡುವುದು ಸಾಮಾನ್ಯವಾಗಿ ವಾಡಿಕೆ. ದೇಶಿಕರ ಸ್ವಭಾವ ಮಾತ್ರ ಇದಕ್ಕೆ ತೀರ ವಿರುದ್ಧವಾಗಿತ್ತು. ಇತರರನ್ನಾಗಲಿ ಇತರರ ಕೃತಿಯನ್ನಾಗಲಿ ಅಲ್ಲಗೆಳೆಯುವುದು ಅವರಿಗೆ ಎಂದೂ ಹಿಡಿಸದು. ಸತ್ಯಾನ್ವೇಷಣೆಯ ದೃಷ್ಟಿಯಿಂದ ತತ್ತ್ವಬೋಧನೆಯ ಉದ್ದೇಶದಿಂದ ಇತರರ ಕೃತಿಗಳಲ್ಲಿರುವ ಲೋಪದೋಷಗಳನ್ನು ನಿಷ್ಪಕ್ಷಪಾತವಾಗಿ, ನಿರ್ದಾಕ್ಷಿಣ್ಯವಾಗಿ ಹೇಳಿರುವರಾದರೂ ಆ ಕೃತಿಗಳನ್ನಾಗಲಿ, ಆ ಕೃತಿಗಳ ಕರ್ತೃವನ್ನಾಗಲೀ, ಅವಹೇಳನ ಮಾಡುವ ಉದ್ದೇಶ ಲವಲೇಶವೂ ದೇಶಿಕರಿಗಿರಲಿಲ್ಲ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಖ್ಯಾತಿಗಾಗಿಯಾಗಲಿ ಧನಸಂಪಾದನೆಗಾಗಿಯಾಗಲಿ ಸನ್ಮಾನ ಪುರಸ್ಕಾರಗಳನ್ನು ಪಡೆಯುವುದಕ್ಕಾಗಲಿ ಇವರು ಯಾವ ಕಾರ್ಯದಲ್ಲಿಯೂ ತೊಡಗಿದವರಲ್ಲ.

ಯಃ ಖ್ಯಾತಿ ಲಾಭಪೂಜಾಸು ವಿಮುಖೋ ವೈಷ್ಣವೇ ಜನೇ

ಖ್ಯಾತಿಲಾಭಪುರಸ್ಕಾರಗಳಲ್ಲಿ ಪರಾಙ್ಮುಖರಾಗಿದ್ದವರೆಂಬುದನ್ನು ದೇಶಿಕರ ಸತ್ಪುತ್ರರು ಪ್ರತಿಪಾದಿಸಿರುವರು. ಪುರಸ್ಕಾರ ಮನ್ನಣೆಯಲ್ಲಿ ಇವರು ಉದಾಸೀನರೆಂಬುದಕ್ಕೆ ನಡೆದ ಘಟನೆಯೊಂದು ನಿದರ್ಶನವಾಗಿದೆ. ಶ್ರೀರಂಗದಲ್ಲಿ ಒಮ್ಮೆ ಜಗದ್ವಿಖ್ಯಾತರಾದ, ಅದ್ವೈತಮತಾನುಯಾಯಿಗಳಾದ ಪಂಡಿತೋತ್ತಮರಿಗೂ ದೇಶಿಕರಿಗೂ ಸಿದ್ಧಾಂತ ವಿಷಯದಲ್ಲಿ ವಿಪುಲ ಚರ್ಚೆ ನಡೆಯಿತು ಪ್ರತಿಭಾವಂತರಾದ ದೇಶಿಕರಾಗ ಅನೇಕ ಪ್ರಮಾಣವಚನಗಳಿಂದಲೂ, ಯುಕ್ತಯುಕ್ತಿಗಳಿಂದಲೂ ಎದುರಾಳಿಯ ವಾದವನ್ನು ನಿರಾಕರಿಸಿ ತಮ್ಮ ಸಿದ್ಧಾಂತವನ್ನು ಸಮರ್ಥಿಸಿದರು. ತಾವು ಗಮನಿಸದಿದ್ದ ಅನೇಕ ಪ್ರಮಾಣಗಳನ್ನೂ, ತಮಗೆ ತೋರದಿದ್ದ ವಿವಿಧ ಯುಕ್ತಿಗಳನ್ನೂ ತಮ್ಮ ಅಸಾಧಾರಣ ಪ್ರತಿಭೆಯಿಂದ ಮುಂದಿಡುತ್ತಿರುವ ದೇಶಿಕರ ಜ್ಞಾನಾತಿಶಯವನ್ನೂ ಅಳವಾದ ಪಾಂಡಿತ್ಯವನ್ನೂ ಮೆಚ್ಚಿಕೊಳ್ಳುವುದರ ಜೊತೆಗೆ ದೇಶಿಕರು ಪ್ರತಿಪಾದಿಸಿದ ಸಿದ್ಧಾಂತಾರ್ಥವನ್ನು ಬೇರೆ ಮಾರ್ಗವಿಲ್ಲದೆ ಒಪ್ಪಿಕೊಳ್ಳಲೇಬೇಕಾಯಿತು ಆ ಪಂಡಿತವರ್ಯರು. ಜಗತ್ತಿನ ಎಲ್ಲ ಪ್ರಾಂತ್ಯಗಳನ್ನೂ ಸಂಚಾರಮಾಡಿ ಪಂಡಿತರೆಲ್ಲರನ್ನೂ ಚಕಿತಗೊಳಿಸಿ, ವಿಜಯವನ್ನು ಗಳಿಸಿ ಪ್ರಖ್ಯಾತರಾಗಿದ್ದು ತಾವು ಎಲ್ಲೂ ಪರಾಜಯವನ್ನೇ ಕಂಡರಿಯದವರಾಗಿದ್ದೂ ಈಗ ಇಂತಹ ಪರಾಭವಕ್ಕೆ ಪಾತ್ರರಾಗಬೇಕಾಗಿ ಬಂದುದಕ್ಕೆ ಮನಸ್ಸಿನಲ್ಲಿ ವ್ಯಥೆಪಟ್ಟರೂ, ನಾಚಿಕೆಪಟ್ಟರೂ ದೇಶಿಕರ ವಿಲಕ್ಷಣ ಪ್ರತಿಭೆಯನ್ನೂ ಅನುಪಮ ಪಾಂಡಿತ್ಯವನ್ನೂ ಗಮನಿಸಿ ದೇಶಿಕರು ಸಾಮಾನ್ಯ ವ್ಯಕ್ತಿಯಾಗಿರದೇ ಅಸಾಮಾನ್ಯ ಪುರುಷರಾಗಿರುವುದರಿಂದ ಅವರಿಂದ ತಮಗೆ ಆದ ಪರಾಜಯವು ದಾಶರಥಿರಾಮನಿಂದ ಪರಶುರಾಮನಿಗೆ ಸಂಭವಿಸಿದ ಪರಾಭವದಂತೆಯೇ-ಎಂದು ಸಮಾಧಾನ

ನ ಚೇಯಂ ಮಮ ಕಾಕುತ್ಸ್ಥ ವ್ರೀಡಾ ಭವಿತುಮರ್ಹತಿ | ತ್ವಯಾ ತ್ರೈಲೋಕ್ಯನಾಥೇನ ಯದಹಂ ವಿಮುಖೀಕೃತಃ ||

ರಾಮ ನಿನ್ನಿಂದ ನನಗೀಗ ಪರಾಜಯವು ಸಂಭವಿಸಿದುದಕ್ಕಾಗಿ ನಾನೇನು ನಾಚಿಕೆಪಡುವ ಅಗತ್ಯವೇನೂ ಇಲ್ಲ. ನೀನು ಮೂರು ಲೋಕದ ಒಡೆಯ. ನಿನಗೆ ಯಾರು ಸಾಟಿಯಾಗಬಲ್ಲರು ? ನಿನ್ನ ಕೂಡ ಸ್ಪರ್ಧಿಸಿದ ಯಾವನು ವಿಜಯಿಯಾದಾನು ? ಎಂದು ಪರಶುರಾಮ ಹೇಳಿದಂತೆ ಆ ಪಂಡಿತರೂ ಸಹ ನನ್ನ ಜನ್ಮದಲ್ಲಿ ಇದುವರೆಗೆ ಯಾರಿಂದಲೂ ನನಗೆ ಪರಾಜಯವು ಉಂಟಾಗಿರಲಿಲ್ಲ. ಮಹಾ ಮೇಧಾವಿಗಳೂ, ಅಪಾರ ಜ್ಞಾನಸಂಪತ್ತುಳ್ಳವರೂ ಆದ ನಿಮ್ಮಿಂದ ಮಾತ್ರವೇ ನನಗೆ ಅಪರಿಚಿತವಾಗಿದ್ದ ಪರಾಜಯದ ಪರಿಚಯ ಆಗುವಂತಾಯಿತು. ನಿಮ್ಮಿಂದ ನನಗಾದ ಪರಾಭವಕ್ಕಾಗಿ ನನಗೇನೂ ನಾಚಿಕೆಯಿಲ್ಲ. ನೀವು ಅಸಾಧಾರಣ ಮಹಾಪುರುಷರು. ನಿಮ್ಮ ದರ್ಶನವಾದುದು ನನ್ನ ಭಾಗ್ಯದಿಂದ ಎಂದು ವಿಜ್ಞಾಪಿಸಿಕೊಂಡರು. ಆ ಪಂಡಿತರ ವಿಷಯದಲ್ಲೇನೂ ದೇಶಿಕರಿಗೆ ಕೀಳುಭಾವನೆಯಿರಲಿಲ್ಲ. ಅವರು ಪ್ರತಿಭಾವಂತ ಪಂಡಿತರೆನ್ನುವುದರಲ್ಲಿ ದೇಶಿಕರ ಆಕ್ಷೇಪಣೆಯೇನೂ ಇರಲಿಲ್ಲ. ಅವರ ಪಾಂಡಿತ್ಯದ ಬಗ್ಗೆ ಗೌರವವಿತ್ತು. ಅವರು ಹಿಡಿದ ಸಿದ್ಧಾಂತವೇ ತಪ್ಪಾದ ಕಾರಣ ಅವರ ವಾದ ನಿಲ್ಲದೇ ಹೋಯಿತು. ಎಷ್ಟೇ ಮೇಧಾವಿಯಾಗಿದ್ದರೂ ತಪ್ಪು ದಾರಿಯನ್ನು ಹಿಡಿದು ತನ್ನಷ್ಟು ಮತ್ತು ತನಗಿಂತ ಹೆಚ್ಚು ಮೇಧಾವಿಯ ಮುಂದೆ ಹೇಗೆ ತನ್ನ ಪಕ್ಷವನ್ನು ಸಮರ್ಥಿಸಲು ಸಾಧ್ಯ ? ಆದ್ದರಿಂದ ಆ ಪಂಡಿತರು ಹಿಡಿದ ಪಕ್ಷದ ದೋಷವೇ ಅವರ ಪರಾಜಯಕ್ಕೆ ಕಾರಣ ಅಲ್ಲದೆ ಆ ಪಂಡಿತರ ಪಾಂಡಿತ್ಯದ ಅಥವಾ ಬುದ್ಧಿಶಕ್ತಿಯ ನ್ಯೂನತೆಯಲ್ಲ ಎಂದು ಭಾವಿಸಿ ಅವರನ್ನು ಮರ್ಯಾದೆಯಿಂದಲೇ ಕಂಡರು. ಶ್ರೀರಂಗನಾಥನ ದರ್ಶನಕ್ಕಾಗಿ ಆ ಪಂಡಿತರನ್ನು ತಮ್ಮ ಕೂಡ ದೇವಾಲಯಕ್ಕೆ ಕರೆದೊಯ್ದರು. ತಮ್ಮ ಗೌರವಘನತೆಗಳನ್ನು ಗಮನಿಸಿ ತೀರ್ಥಪ್ರಸಾದ ಮುಂತಾದ ಪುರಸ್ಕಾರಗಳಲ್ಲಿ ನಿಮಗೆ ನಾನು ಎರಡನೆಯವನಾಗಿರುವಂತೆ ನೋಡಿಕೊಳ್ಳಬೇಕು ಎಂದು ದೇಶಿಕರಿಗೆ ಸೂಚಿಸಿದರು. ಗೌರವಕಾಂಕ್ಷೆಯುಳ್ಳ ಆ ಪಂಡಿತರು ಶ್ರೀರಂಗನಾಥನ ದೇವಾಲಯದಲ್ಲಿ ನಿಗಮಾಂತ ದೇಶಿಕರಿಗೆ ತೀರ್ಥಪ್ರಸಾದ ವಿನಿಯೋಗಗಳಲ್ಲಿ ಪ್ರಥಮ ಪುರಸ್ಕಾರ ಪದ್ಧತಿ ಇತ್ತು. ಅವರಿಗಾದ ಕೂಡಲೆ ತಮಗೆ ಎರಡನೆಯ ಪುರಸ್ಕಾರ ದೊರೆಯುವಂತಾಗಬೇಕೆಂಬ ಚಪಲ ಆ ಪಂಡಿತರಿಗೆ ಪಾಪ ತೀರ್ಥ ಪ್ರಸಾದ ಬಂದ ಸಮಯದಲ್ಲಿ ಚತುರ ದೇಶಿಕರು ತಾವು ಮೊದಲು ಸ್ವೀಕರಿಸದೆ ದೇವಾಲಯದಲ್ಲಿ ನೆರದಿದ್ದವರೆಲ್ಲರಿಗೂ ಸೇವಕ ವರ್ಗಕ್ಕೂ ತೀರ್ಥವನ್ನು ಕೊಡಿಸಿ ಬಳಿಕ ತಾವು ತೆಗೆದುಕೊಂಡು ತಮಗೆ ಎರಡನೆಯದಾಗಿ ಆ ಪಂಡಿತರಿಗೆ ಕೊಡಿಸಿದರು. ಹೀಗೆ ಮಾಡುವುದರಲ್ಲಿ ಆ ಪಂಡಿತರಿಗೆ ಅವಮಾನಮಾಡಬೇಕೆಂಬ ಉದ್ದೇಶವಲ್ಲ ದೇಶಿಕರಿಗಿದ್ದದ್ದು. ಶಾಸ್ತ್ರದ ಪಾಂಡಿತ್ಯಕ್ಕನುಗುಣವಾದ ಅನುಷ್ಠಾನ ಇರಬೇಕು. ಅಹಂಕಾರ ಮಮಕಾರಗಳನ್ನು ತ್ಯಜಿಸಬೇಕೆಂದು ಪಠಿಸಿದ ಮಾತ್ರದಿಂದ, ಜಪಮಾಡಿ ಫಲವೇನು ? ವಾಸ್ತವವಾಗಿ ಅವನ್ನೂ ತ್ಯಜಿಸಿರಬೇಕು. ಅಹಂಕಾರದ ಭಾವನೆಗೆ ಎಳ್ಳಷ್ಟೂ ಹೃದಯದಲ್ಲಿ ಎಡೆಯಿರಬಾರದು, ಎಂಬ ಬೋಧೆಯನ್ನು ತಾವು ಗೌರವ ತ್ಯಜಿಸುವುದರ ಮೂಲಕ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕವಿಸಿಂಹ ಎಂದು ಸುಪ್ರಸಿದ್ಧವಾಗಿದ್ದ ಇವರ ಹೆಸರನ್ನು ಸಹಿಸದ ಕೆಲವರು, 'ಒಂದೇ ರಾತ್ರಿಯಲ್ಲಿ ಸಾವಿರಾರು ಶ್ಲೋಕಗಳನ್ನು ರಚಿಸಲು ಸಮರ್ಥರಾದವರು ಮಾತ್ರ ಆ ಹೆಸರಿಗೆ ಅರ್ಹರು' ಎಂದು ಶ್ರೀರಂಗನಾಥನ ಮಂದಿರದಲ್ಲಿ ಒಮ್ಮೆ ಕೋಲಾಹಲವೆಬ್ಬಿಸಿದರು. ಅದೇ ದಿನ ರಾತ್ರಿ ಸಾವಿರ ಪದ್ಯಗಳನ್ನು ರಚಿಸಿದರೆ ಮಾತ್ರ ಕವಿಸಿಂಹ ಎಂಬ ಹೆಸರನ್ನು ಉಳಿಸಿಕೊಳ್ಳಬಹುದಲ್ಲದೇ ಅಸಮರ್ಥರಾದರೆ ರಚಿಸುವವರಿಗೆ ಆ ಹೆಸರನ್ನು ಬಿಟ್ಟುಕೊಡಬೇಕು ಎಂದು ಒತ್ತಾಯಮಾಡಿದರು. ಆಗ ಪಿಳ್ಳೆಲೋಕಾಚಾರ್ಯರ ಸಹೋದರರಾದ ಅಳಹಿಯಮಣವಾಳಪ್ಪೆರುಮಾಳ್ ನಾಯನಾರ್ ಎಂಬುವರು 'ಕವಿಸಿಂಹ' ಎಂಬ ಹೆಸರನ್ನು ತಾವು ಪಡೆಯಬೇಕೆಂಬ ಚಾಪಲ್ಯದಿಂದ ಸಾವಿರ ಪದ್ಯಗಳನ್ನು ತಾವು ರಚಿಸುವುದಾಗಿ ಹೇಳಿ ಶ್ರೀರಂಗನಾಥನ ಪಾದಕಮಲಗಳನ್ನು ಸ್ತೋತ್ರಕ್ಕೆ ವಿಷಯವಾಗಿ ಅರಿಸಿಕೊಂಡರು. ಇಂತಹ ಕ್ಷುದ್ರವಾದಿಗಳ ಮಾತಿಗೆಲ್ಲ ಬೆಲೆಕೊಡುವ ಇಚ್ಛೆಯಿಲ್ಲದಿದ್ದರೂ, ಬಿರುದು ಬಾವಲಿಗಳಲ್ಲಿ ಚಾಪಲ್ಯವಿಲ್ಲದಿದ್ದರೂ ದೇಶಿಕರು ತನ್ನ ಮೂಲಕ ಸ್ತೋತ್ರಮಾಡಿಸಿಕೊಳ್ಳುವ ಸದುದ್ದೇಶದಿಂದ ಪರಮಾತ್ಮನ ಲೀಲೆಯೇ ಇದಾಗಿರಬೇಕು ; ಈ ನೆಪದಲ್ಲಿ ಪರಮಾತ್ಮನನ್ನು ಬಾಯಿತುಂಬ ಸ್ತುತಿಸುವ, ಮನಸ್ಪೂರ್ತಿಯಾಗಿ ಹಾಡುವ ಮತ್ತು ವರ್ಣಿಸುವ ಸದಾವಕಾಶವೊದಗಿದುದು ಒಂದು ಭಾಗ್ಯವೆಂದೇ ಭಾವಿಸಿ ಶ್ರೀರಂಗನಾಥನ ಪಾದಗಳ ಸೇವೆಯನ್ನು ಅನವರತಮಾಡುತ್ತಿರುವ, ವಾಲ್ಮೀಕಿ ಮಹಾ ಮುನಿಯಂತಹ ಜ್ಞಾನಿಗಳು ಕೊಂಡಾಡಿರುವ ಭರತನಂತಹ ಮಹನೀಯರು ಅನನ್ಯ ಭಕ್ತಿಯಿಂದ ಆರಾಧಿಸಿದ, ಪಾದುಕೆಗಳನ್ನು ಸಾವಿರ ಪದ್ಯಗಳಲ್ಲಿ ಕೊಂಡಾಡುವ, ಹೊಣೆಯನ್ನು ಹೊತ್ತರು. ಇಬ್ಬರೂ ಮಾರನೆಯದಿನ ಬೆಳಿಗ್ಗೆ ಶ್ರೀರಂಗನಾಥನ ಸನ್ನಿಧಾನದಲ್ಲಿ ಪಂಡಿತೋತ್ತಮರ ಸಮಿತಿಯಲ್ಲಿ ರಾತ್ರಿ ಬರೆದ ತಮ್ಮ ತಮ್ಮ ಕೃತಿಗಳನ್ನು ಪಠಿಸುವ ವ್ಯವಸ್ಥೆಯಾಯಿತು. ರಾತ್ರಿ ಕಳೆದು ಮಾರನೆಯದಿನ ಕೃತಿಗಳ ಪಠನ ಸಂದರ್ಭವು ಒದಗಿದಾಗ ಅಳಹಿಯ ಮಣವಾಳಪೆರುಮಾಳ್‌ನಾಯನಾರ್ರ 'ಪದಕಮಲ ಸಹಸ್ರ'ವು ಮುನ್ನೂರು ಶ್ಲೋಕಗಳಲ್ಲಿ ಪರ್ಯವಸಾನವಾಯಿತು. ದೇಶಿಕರು ರಚಿಸಿದ್ದ "ಪಾದುಕಾಸಹಸ್ರ" ಎಂಬ ತಮ್ಮ ಕೃತಿಯನ್ನು ಸಮಗ್ರವಾಗಿ ವಾಚನಮಾಡಿದರು. ನೆರೆದಿದ್ದ ಪಂಡಿತರೆಲ್ಲರೂ, ವಿಮರ್ಶಕರೆಲ್ಲರೂ ಒಮ್ಮತದಿಂದ ಪಾದುಕಾಸಹಸ್ರದ ಹಿರಿಮೆಯನ್ನು ಕೊಂಡಾಡಿ ಅಷ್ಟು ಅಲ್ಪಕಾಲದಲ್ಲಿ ಅಂತಹ ಉತ್ತಮಕೃತಿಯನ್ನು ರಚಿಸಿದ ವೇದಾಂತದೇಶಿಕರು ಕವಿಸಂಹ ಮಾತ್ರವಲ್ಲ ಕವಿಚಕ್ರವರ್ತೀ ಎನ್ನಿಸಿಕೊಳ್ಳಲು ಅರ್ಹರು ಎಂದು ತೀರ್ಮಾನಿಸಿದರು. ದೇಶಿಕರ ಉತ್ಕರ್ಷದಲ್ಲಿ ಸಹನೆಯಿಲ್ಲದ ಮಾತ್ಸರ್ಯಪೀಡಿತ ಪಂಡಿತರೂ ಸಹ ವಿಧಿಯಿಲ್ಲದೆ ದೇಶಿಕರ ಕವಿತಾಮಹತ್ವವನ್ನೂ, ಪ್ರತಿಭಾತಿಶಯವನ್ನೂ ಒಪ್ಪಬೇಕಾಯಿತು. ಅವಸರದಲ್ಲಿ ನಿರ್ಮಿತವಾಗಿದ್ದರೂ ಈ ಪಾದುಕಾಸಹಸ್ರವು ಉದಾತ್ತಭಾವಗಳನ್ನೂ ಉತ್ತಮತತ್ತ್ವಗಳನ್ನೂ, ಒಳಗೊಂಡು ಎಲ್ಲರೂ ಅಧ್ಯಯನಮಾಡಲು ಅರ್ಹವಾದ, ಸದಾ ಅನುಸಂಧಾನಮಾಡಲು ಯೋಗ್ಯವಾದ ಉತ್ತಮ ಪವಿತ್ರ ಗ್ರಂಥವಾಗಿದೆ. ಸ್ತೋತ್ರಗಳ ಗುಂಪಿಗೆ ಸೇರಿರುವುದಾದರೂ ಕಾವ್ಯಗುಣಗಳಿಂದ ತುಂಬಿ ಸುಂದರ ಕಾವ್ಯವೆನಿಸಿಕೊಳ್ಳುವಷ್ಟು ಮುದ್ದಾಗಿದೆ. ದೇಶಿಕರಿಗಿದ್ದ ಈ ಅಶುಕವಿತಾಸಾಮರ್ಥ್ಯವನ್ನೂ, ಕಲ್ಪನಾಕೌಶಲವನ್ನೂ ಈ ಕೃತಿಯು ಸ್ಪಷ್ಟಪಡಿಸುತ್ತದೆ. ಕೇವಲ ಒಂದೇ ವಿಷಯದ ಮೇಲೆ ಸಾವಿರಾರು ಪದ್ಯಗಳನ್ನು ರಚಿಸುವುದು ತುಂಬ ಸಾಹಸವೇ ಸರಿ. ಒಂದೇ ವಿಷಯವನ್ನು ಇಷ್ಟು ವಿಸ್ತಾರವಾಗಿ ಅನೇಕ ಪ್ರಕಾರವಾಗಿ ಬೇರಾವ ಕವಿಯೂ ವರ್ಣಿಸಿಲ್ಲ. ಭಗವಂತನ ಪಾದುಕೆಗಳ ವೈಭವವನ್ನು ತಿಳಿಯಲು ಏಕೈಕ ಕೃತಿ ದೇಶಿಕರ ಪಾದುಕಾಸಹಸ್ರ. ಒಂದು ರಾತ್ರಿಯಲ್ಲಲ್ಲ ಅನೇಕ ರಾತ್ರಿಗಳಲ್ಲಿಯೂ ಸಹ ಇಂತಹ ಕೃತಿಯನ್ನು ಬೇರೊಬ್ಬ ನಿರ್ಮಿಸಲಾರ.

ಇಂತಹ ಅದ್ಭುತ ಸಾಮರ್ಥ್ಯವಿದ್ದರೂ ಗರ್ವದ ವಾಸನೆಯೂ ಸಹ ಇರಲಿಲ್ಲ ದೇಶಿಕರಲ್ಲಿ. ಒಪ್ಪಿಕೊಂಡಂತೆ ಸಾವಿರ ಪದ್ಯಗಳನ್ನು ರಚಿಸಲಾಗದೆ, ಕುಸಿಂಹವೆಂಬ ಹೆಸರನ್ನು ಪಡೆಯಬೇಕೆಂಬ ಆಸೆಯನ್ನು ಈಡೇರಿಸಿಕೊಳ್ಳಲಾರದ ಪ್ರತಿಸ್ಪರ್ಧಿಯನ್ನು ಅವಹೇಳನ ಮಾಡುತ್ತಿರುವುದನ್ನೂ ತಮ್ಮನ್ನೇ ಎಲ್ಲರೂ ಹೊಗಳುತ್ತಿರುವುದನ್ನು ಸಹಿಸದೇ ದೇಶಿಕರು,

ಸೂತೇ ಸೂಕರಯುವತಿಃ ಸುತಶತಮತ್ಯಂತ ದುರ್ಭಗಂ ಝುಡಿತಿ |
ಕರಿಣೇ ಚಿರಾಯ ಸೂತೇ ಸಕಲ ಮಹೀಪಾಲಲಾಲಿತಂ ಕಲಭಂ ||

ಹೆಣ್ಣು ಹಂದಿಯು ಬೇಗ ಬೇಗ ದೌರ್ಭಾಗ್ಯದ ನೂರಾರು ಮರಿಗಳನ್ನು ಹಾಕುವುದು. ಹೆಣ್ಣಾನೆಯಾದರೋ ನಿಧಾನವಾಗಿಯಾದರೂ, ಒಂದೇ ಆದರೂ ವಿಶ್ವದ ಎಲ್ಲ ರಾಜಮಹಾರಾಜರೂ ಲಾಲಿಸುವ ಮರಿಯನ್ನೀಯುವುದು. ಸಂಖ್ಯೆಯಲ್ಲಿ ಕಮ್ಮಿಯಾಗಿದ್ದರೂ ಯೋಗ್ಯತೆಯಲ್ಲಿ ತಮ್ಮ ಪದ್ಯಗಳಿಗಿಂತ ತಮ್ಮ ಪ್ರತಿ ಸ್ಪರ್ಧಿಸುವ ಪದ್ಯಗಳು ಮೇಲಾಗಿವೆ. ಎಂದು ತಮ್ಮ ನೈಚ್ಯಾನುಸಂಧಾನವನ್ನು ವ್ಯಕ್ತಗೊಳಿಸಿದ್ದಾರೆ. ಪ್ರತಿಸ್ಪರ್ಧಿಗಳು ಪರಾಜಯವನ್ನು ಹೊಂದಿರುವ ವೇಳೆಯಲ್ಲಿ ಮತ್ತಷ್ಟು ತನ್ನ ಹೆಚ್ಚುಗಾರಿಕೆಯನ್ನು ಎದುರಾಳಿಗಳ ಕೀಳುತನವನ್ನೂ ಎತ್ತಿತೋರುವ ಪ್ರಯತ್ನ ಮಾಡುವುದು ಸಾಮಾನ್ಯವಾಗಿ ವಾಡಿಕೆ. ದೇಶಿಕರ ಸ್ವಭಾವ ಮಾತ್ರ ಇದಕ್ಕೆ ತೀರ ವಿರುದ್ಧವಾಗಿತ್ತು. ಇತರರನ್ನಾಗಲಿ ಇತರರ ಕೃತಿಯನ್ನಾಗಲಿ ಅಲ್ಲಗೆಳೆಯುವುದು ಅವರಿಗೆ ಎಂದೂ ಹಿಡಿಸದು. ಸತ್ಯಾನ್ವೇಷಣೆಯ ದೃಷ್ಟಿಯಿಂದ ತತ್ತ್ವಬೋಧನೆಯ ಉದ್ದೇಶದಿಂದ ಇತರರ ಕೃತಿಗಳಲ್ಲಿರುವ ಲೋಪದೋಷಗಳನ್ನು ನಿಷ್ಪಕ್ಷಪಾತವಾಗಿ, ನಿರ್ದಾಕ್ಷಿಣ್ಯವಾಗಿ ಹೇಳಿರುವರಾದರೂ ಆ ಕೃತಿಗಳನ್ನಾಗಲಿ, ಆ ಕೃತಿಗಳ ಕರ್ತೃವನ್ನಾಗಲೀ, ಅವಹೇಳನ ಮಾಡುವ ಉದ್ದೇಶ ಲವಲೇಶವೂ ದೇಶಿಕರಿಗಿರಲಿಲ್ಲ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಖ್ಯಾತಿಗಾಗಿಯಾಗಲಿ ಧನಸಂಪಾದನೆಗಾಗಿಯಾಗಲಿ ಸನ್ಮಾನ ಪುರಸ್ಕಾರಗಳನ್ನು ಪಡೆಯುವುದಕ್ಕಾಗಲಿ ಇವರು ಯಾವ ಕಾರ್ಯದಲ್ಲಿಯೂ ತೊಡಗಿದವರಲ್ಲ.

ಯಃ ಖ್ಯಾತಿ ಲಾಭಪೂಜಾಸು ವಿಮುಖೋ ವೈಷ್ಣವೇ ಜನೇ

ಖ್ಯಾತಿಲಾಭಪುರಸ್ಕಾರಗಳಲ್ಲಿ ಪರಾಙ್ಮುಖರಾಗಿದ್ದವರೆಂಬುದನ್ನು ದೇಶಿಕರ ಸತ್ಪುತ್ರರು ಪ್ರತಿಪಾದಿಸಿರುವರು. ಪುರಸ್ಕಾರ ಮನ್ನಣೆಯಲ್ಲಿ ಇವರು ಉದಾಸೀನರೆಂಬುದಕ್ಕೆ ನಡೆದ ಘಟನೆಯೊಂದು ನಿದರ್ಶನವಾಗಿದೆ. ಶ್ರೀರಂಗದಲ್ಲಿ ಒಮ್ಮೆ ಜಗದ್ವಿಖ್ಯಾತರಾದ, ಅದ್ವೈತಮತಾನುಯಾಯಿಗಳಾದ ಪಂಡಿತೋತ್ತಮರಿಗೂ ದೇಶಿಕರಿಗೂ ಸಿದ್ಧಾಂತ ವಿಷಯದಲ್ಲಿ ವಿಪುಲ ಚರ್ಚೆ ನಡೆಯಿತು ಪ್ರತಿಭಾವಂತರಾದ ದೇಶಿಕರಾಗ ಅನೇಕ ಪ್ರಮಾಣವಚನಗಳಿಂದಲೂ, ಯುಕ್ತಯುಕ್ತಿಗಳಿಂದಲೂ ಎದುರಾಳಿಯ ವಾದವನ್ನು ನಿರಾಕರಿಸಿ ತಮ್ಮ ಸಿದ್ಧಾಂತವನ್ನು ಸಮರ್ಥಿಸಿದರು. ತಾವು ಗಮನಿಸದಿದ್ದ ಅನೇಕ ಪ್ರಮಾಣಗಳನ್ನೂ, ತಮಗೆ ತೋರದಿದ್ದ ವಿವಿಧ ಯುಕ್ತಿಗಳನ್ನೂ ತಮ್ಮ ಅಸಾಧಾರಣ ಪ್ರತಿಭೆಯಿಂದ ಮುಂದಿಡುತ್ತಿರುವ ದೇಶಿಕರ ಜ್ಞಾನಾತಿಶಯವನ್ನೂ ಆಳವಾದ ಪಾಂಡಿತ್ಯವನ್ನೂ ಮೆಚ್ಚಿಕೊಳ್ಳುವುದರ ಜೊತೆಗೆ ದೇಶಿಕರು ಪ್ರತಿಪಾದಿಸಿದ ಸಿದ್ಧಾಂತಾರ್ಥವನ್ನು ಬೇರೆ ಮಾರ್ಗವಿಲ್ಲದೆ ಒಪ್ಪಿಕೊಳ್ಳಲೇಬೇಕಾಯಿತು ಆ ಪಂಡಿತವರ್ಯರು. ಜಗತ್ತಿನ ಎಲ್ಲ ಪ್ರಾಂತ್ಯಗಳನ್ನೂ ಸಂಚಾರಮಾಡಿ ಪಂಡಿತರೆಲ್ಲರನ್ನೂ ಚಕಿತಗೊಳಿಸಿ, ವಿಜಯವನ್ನು ಗಳಿಸಿ ಪ್ರಖ್ಯಾತರಾಗಿದ್ದು ತಾವು ಎಲ್ಲೂ ಪರಾಜಯವನ್ನೇ ಕಂಡರಿಯದವರಾಗಿದ್ದೂ ಈಗ ಇಂತಹ ಪರಾಭವಕ್ಕೆ ಪಾತ್ರರಾಗಬೇಕಾಗಿ ಬಂದುದಕ್ಕೆ ಮನಸ್ಸಿನಲ್ಲಿ ವ್ಯಥೆಪಟ್ಟರೂ, ನಾಚಿಕೆಪಟ್ಟರೂ ದೇಶಿಕರ ವಿಲಕ್ಷಣ ಪ್ರತಿಭೆಯನ್ನೂ ಅನುಪಮ ಪಾಂಡಿತ್ಯವನ್ನೂ ಗಮನಿಸಿ ದೇಶಿಕರು ಸಾಮಾನ್ಯ ವ್ಯಕ್ತಿಯಾಗಿರದೇ ಅಸಾಮಾನ್ಯ ಪುರುಷರಾಗಿರುವುದರಿಂದ ಅವರಿಂದ ತಮಗೆ ಆದ ಪರಾಜಯವು ದಾಶರಥಿರಾಮನಿಂದ ಪರಶುರಾಮನಿಗೆ ಸಂಭವಿಸಿದ ಪರಾಭವದಂತೆಯೇ-ಎಂದು ಸಮಾಧಾನ

ನ ಚೇಯಂ ಮಮ ಕಾಕುತ್ಸ್ಥ ವ್ರೀಡಾ ಭವಿತುಮರ್ಹತಿ | ತ್ವಯಾ ತ್ರೈಲೋಕ್ಯನಾಥೇನ ಯದಹಂ ವಿಮುಖೀಕೃತಃ ||

ರಾಮ ನಿನ್ನಿಂದ ನನಗೀಗ ಪರಾಜಯವು ಸಂಭವಿಸಿದುದಕ್ಕಾಗಿ ನಾನೇನು ನಾಚಿಕೆಪಡುವ ಅಗತ್ಯವೇನೂ ಇಲ್ಲ. ನೀನು ಮೂರು ಲೋಕದ ಒಡೆಯ. ನಿನಗೆ ಯಾರು ಸಾಟಿಯಾಗಬಲ್ಲರು ? ನಿನ್ನ ಕೂಡ ಸ್ಪರ್ಧಿಸಿದ ಯಾವನು ವಿಜಯಿಯಾದಾನು ? ಎಂದು ಪರಶುರಾಮ ಹೇಳಿದಂತೆ ಆ ಪಂಡಿತರೂ ಸಹ ನನ್ನ ಜನ್ಮದಲ್ಲಿ ಇದುವರೆಗೆ ಯಾರಿಂದಲೂ ನನಗೆ ಪರಾಜಯವು ಉಂಟಾಗಿರಲಿಲ್ಲ. ಮಹಾ ಮೇಧಾವಿಗಳೂ, ಅಪಾರ ಜ್ಞಾನಸಂಪತ್ತುಳ್ಳವರೂ ಆದ ನಿಮ್ಮಿಂದ ಮಾತ್ರವೇ ನನಗೆ ಅಪರಿಚಿತವಾಗಿದ್ದ ಪರಾಜಯದ ಪರಿಚಯ ಆಗುವಂತಾಯಿತು. ನಿಮ್ಮಿಂದ ನನಗಾದ ಪರಾಭವಕ್ಕಾಗಿ ನನಗೇನೂ ನಾಚಿಕೆಯಿಲ್ಲ. ನೀವು ಅಸಾಧಾರಣ ಮಹಾಪುರುಷರು. ನಿಮ್ಮ ದರ್ಶನವಾದುದು ನನ್ನ ಭಾಗ್ಯದಿಂದ ಎಂದು ವಿಜ್ಞಾಪಿಸಿಕೊಂಡರು. ಆ ಪಂಡಿತರ ವಿಷಯದಲ್ಲೇನೂ ದೇಶಿಕರಿಗೆ ಕೀಳುಭಾವನೆಯಿರಲಿಲ್ಲ. ಅವರು ಪ್ರತಿಭಾವಂತ ಪಂಡಿತರೆನ್ನುವುದರಲ್ಲಿ ದೇಶಿಕರ ಆಕ್ಷೇಪಣೆಯೇನೂ ಇರಲಿಲ್ಲ. ಅವರ ಪಾಂಡಿತ್ಯದ ಬಗ್ಗೆ ಗೌರವವಿತ್ತು. ಅವರು ಹಿಡಿದ ಸಿದ್ಧಾಂತವೇ ತಪ್ಪಾದ ಕಾರಣ ಅವರ ವಾದ ನಿಲ್ಲದೇ ಹೋಯಿತು. ಎಷ್ಟೇ ಮೇಧಾವಿಯಾಗಿದ್ದರೂ ತಪ್ಪು ದಾರಿಯನ್ನು ಹಿಡಿದು ತನ್ನಷ್ಟು ಮತ್ತು ತನಗಿಂತ ಹೆಚ್ಚು ಮೇಧಾವಿಯ ಮುಂದೆ ಹೇಗೆ ತನ್ನ ಪಕ್ಷವನ್ನು ಸಮರ್ಥಿಸಲು ಸಾಧ್ಯ ? ಆದ್ದರಿಂದ ಆ ಪಂಡಿತರು ಹಿಡಿದ ಪಕ್ಷದ ದೋಷವೇ ಅವರ ಪರಾಜಯಕ್ಕೆ ಕಾರಣ ಅಲ್ಲದೆ ಆ ಪಂಡಿತರ ಪಾಂಡಿತ್ಯದ ಅಥವಾ ಬುದ್ಧಿಶಕ್ತಿಯ ನ್ಯೂನತೆಯಲ್ಲ ಎಂದು ಭಾವಿಸಿ ಅವರನ್ನು ಮರ್ಯಾದೆಯಿಂದಲೇ ಕಂಡರು. ಶ್ರೀರಂಗನಾಥನ ದರ್ಶನಕ್ಕಾಗಿ ಆ ಪಂಡಿತರನ್ನು ತಮ್ಮ ಕೂಡ ದೇವಾಲಯಕ್ಕೆ ಕರೆದೊಯ್ದರು. ತಮ್ಮ ಗೌರವಘನತೆಗಳನ್ನು ಗಮನಿಸಿ ತೀರ್ಥಪ್ರಸಾದ ಮುಂತಾದ ಪುರಸ್ಕಾರಗಳಲ್ಲಿ ನಿಮಗೆ ನಾನು ಎರಡನೆಯವನಾಗಿರುವಂತೆ ನೋಡಿಕೊಳ್ಳಬೇಕು ಎಂದು ದೇಶಿಕರಿಗೆ ಸೂಚಿಸಿದರು. ಗೌರವಕಾಂಕ್ಷೆಯುಳ್ಳ ಆ ಪಂಡಿತರು ಶ್ರೀರಂಗನಾಥನ ದೇವಾಲಯದಲ್ಲಿ ನಿಗಮಾಂತ ದೇಶಿಕರಿಗೆ ತೀರ್ಥಪ್ರಸಾದ ವಿನಿಯೋಗಗಳಲ್ಲಿ ಪ್ರಥಮ ಪುರಸ್ಕಾರ ಪದ್ಧತಿ ಇತ್ತು. ಅವರಿಗಾದ ಕೂಡಲೆ ತಮಗೆ ಎರಡನೆಯ ಪುರಸ್ಕಾರ ದೊರೆಯುವಂತಾಗಬೇಕೆಂಬ ಚಪಲ ಆ ಪಂಡಿತರಿಗೆ ಪಾಪ ತೀರ್ಥ ಪ್ರಸಾದ ಬಂದ ಸಮಯದಲ್ಲಿ ಚತುರ ದೇಶಿಕರು ತಾವು ಮೊದಲು ಸ್ವೀಕರಿಸದೆ ದೇವಾಲಯದಲ್ಲಿ ನೆರದಿದ್ದವರೆಲ್ಲರಿಗೂ ಸೇವಕ ವರ್ಗಕ್ಕೂ ತೀರ್ಥವನ್ನು ಕೊಡಿಸಿ ಬಳಿಕ ತಾವು ತೆಗೆದುಕೊಂಡು ತಮಗೆ ಎರಡನೆಯದಾಗಿ ಆ ಪಂಡಿತರಿಗೆ ಕೊಡಿಸಿದರು. ಹೀಗೆ ಮಾಡುವುದರಲ್ಲಿ ಆ ಪಂಡಿತರಿಗೆ ಅವಮಾನಮಾಡಬೇಕೆಂಬ ಉದ್ದೇಶವಲ್ಲ ದೇಶಿಕರಿಗಿದ್ದದ್ದು. ಶಾಸ್ತ್ರದ ಪಾಂಡಿತ್ಯಕ್ಕನುಗುಣವಾದ ಅನುಷ್ಠಾನ ಇರಬೇಕು. ಅಹಂಕಾರ ಮಮಕಾರಗಳನ್ನು ತ್ಯಜಿಸಬೇಕೆಂದು ಪಠಿಸಿದ ಮಾತ್ರದಿಂದ, ಜಪಮಾಡಿ ಫಲವೇನು ? ವಾಸ್ತವವಾಗಿ ಅವನ್ನೂ ತ್ಯಜಿಸಿರಬೇಕು. ಅಹಂಕಾರದ ಭಾವನೆಗೆ ಎಳ್ಳಷ್ಟೂ ಹೃದಯದಲ್ಲಿ ಎಡೆಯಿರಬಾರದು, ಎಂಬ ಬೋಧೆಯನ್ನು ತಾವು ಗೌರವ ತ್ಯಜಿಸುವುದರ ಮೂಲಕ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆ ಪಂಡಿತರಿಗೆ ತೋರಿಸಿ ಕೊಡಬೇಕೆಂಬುದೇ ದೇಶಿಕರ ಆಶಯವಾಗಿತ್ತು. ದೇಶಿಕರ ಭಾವವನ್ನರಿತ ಆ ಪಂಡಿತರು ವಾದದಲ್ಲಿ ಒದಗಿದ ಪರಾಜಯಕ್ಕಾಗಿ ನಾಚಿಕೆ ಪಡೆದಿದ್ದರೂ ತುಂಬು ಜ್ಞಾನವನ್ನು ವೈರಾಗ್ಯ ಮತ್ತು ಅನುಷ್ಠಾನಗಳಿಗೆ ಸಾಧನವನ್ನಾಗಿ ಬಳಸಿಕೊಂಡರಲ್ಲದ ಖ್ಯಾತಿಗಾಗಿ, ಭೋಗಕ್ಕಾಗಿ, ಧನಕ್ಕಾಗಿ ಅಲ್ಲ. ಅವರು ಬಯಸಿದ್ದರೆ, ಒಪ್ಪಿದ್ದರೆ ಬೇಕುಬೇಕಾದ ಭೋಗಗಳನ್ನು ಅನುಭವಿಸುತ್ತಾ ಮೆರೆಯಬಹುದಿತ್ತು. ರಾಜಮಹಾರಾಜರ ವಿಶೇಷ ಆಶ್ರಯವಿದ್ದ ಆ ಕಾಲದಲ್ಲಿ ದೇಶಿಕರಂತಹ ವಿದ್ವನ್ಮಣಿಗಳಿಗೆ ಪುರಸ್ಕಾರ ಸನ್ಮಾನಗಳು ವಿಶೇಷರೀತಿಯಲ್ಲಿ ದೊರೆಯುತ್ತಿದ್ದವು. ಆದರೂ ಯಾವ ಬಗೆಯ ಆಶೆ, ಆಕಾಂಕ್ಷೆಗಳಿಗೂ ಅವಕಾಶಕೊಡದೆ ಉಂಛವೃತ್ತಿಯಿಂದ ಶರೀರ ಯಾತ್ರೆಯನ್ನು ನಡೆಸುತ್ತ ತೃಪ್ತರಾಗಿದ್ದರು. ವಿಜಯನಗರದ ಮಹಾರಾಜರ ಆಸ್ಥಾನದಲ್ಲಿ ಮಂತ್ರಿ ಪದವಿಯಲ್ಲಿದ್ದು ಸುಖವಾಗಿದ್ದ ವಿದ್ಯಾರಣ್ಯರು, ತಮ್ಮ ಸಹಾಧ್ಯಾಯಿಗಳಾಗಿದ್ದು ಚಿರಪರಿಚಿತರಾಗಿದ್ದ ದೇಶಿಕರ ಪಾಂಡಿತ್ಯವನ್ನು ತಿಳಿದವರಾಗಿದ್ದರಿಂದ ಅಂತಹ ಪಂಡಿತರು ಉಂಛವೃತ್ತಿಯಿಂದ ಕಾಲಕ್ಷೇಪ ಮಾಡುತ್ತಿರುವುದನ್ನು ಸಹಿಸದೆ ರಾಜಾಸ್ಥಾನದಲ್ಲಿ ಗೌರವಸ್ಥಾನವೊಂದನ್ನು ಕೊಡಿಸಿ ಸೌಕರ್ಯವನ್ನು ಕಲ್ಪಿಸುವ ಸದುದ್ದೇಶದಿಂದ ದೇಶಿಕರ ವಿಚಾರವನ್ನು ರಾಜನಿಗೆ ನಿವೇದಿಸಿದರು. ಮಹಾರಾಜನು ಸಂತೋಷಪಟ್ಟು ಆದರದ ಆಮಂತ್ರಣವನ್ನಿತ್ತನು ದೇಶಿಕರಿಗೆ. ಅನಿರೀಕ್ಷಿತವಾಗಿ ತಮ್ಮನ್ನು ವಿಜಯನಗರ ಸಂಸ್ಥಾನಕ್ಕೆ ಕರೆದೊಯ್ಯಲು ಬಂದಿರುವ ರಾಜಮರ್ಯಾದೆಗಳನ್ನೂ, ಆಮಂತ್ರಣ ಪತ್ರವನ್ನೂ ಗಮನಿಸಿದ ವೈರಾಗ್ಯನಿಧಿ ದೇಶಿಕರು ಭಗವಂತನ ಸೇವೆಯ ಸುಖವನ್ನು ಬಿಟ್ಟು ಬೇರಾದ ಭೋಗಕ್ಕೂ ಆಸೆಪಡದೆ ತಮಗೆ ಬದಲು ವೈರಾಗ್ಯಪಂಚಕವೆಂಬ ಪದ್ಯಮಾಲೆಯನ್ನು ಕಳುಹಿಸಿದರು.

ಸಿಲಂ ಕಿಮನಲಂ ಭವೇದನಲ ಮೌದರಂ ಬಾಧಿತುಂ | ಪಯಃ ಪ್ರಸೃತಿ ಪೂರಕಂ ಕಿಮುನ ಧಾರಕಂ ಸಾರಸಂ ||

ಉರಿಯುವ ಜಠರಾಗ್ನಿಯನ್ನು ತೃಪ್ತಿಪಡಿಸಲು ತಾನಾಗಿ ದೊರೆಯುವ ಧಾನ್ಯಕಣಗಳು ಸಾಲವೆ ? ಅದೂ ದೊರೆಯದಿದ್ದರೆ ಎಲ್ಲೆಡೆಯಲ್ಲೂ ಸುಲಭವಾಗಿ ದೊರೆಯುವ ಒಂದು ಬೊಗಸೆ ನೀರು ಆ ಅಗ್ನಿಯನ್ನು ಶಮನಮಾಡಿ ಶರೀರವು ಉಳಿಯಲು ಸಹಾಯಮಾಡದೆ ? ಈ ಅಲ್ಪ ಹೊಟ್ಟೆಯನ್ನು ಹೊರೆದುಕೊಳ್ಳಲು ಭಗವಂತನ ಸೇವೆಗೇ ಸಾಲದಿರುವ ಈ ಅಮೂಲ್ಯ ಕಾಲವನ್ನು ಇತರರ ಸೇವೆಗಾಗಿ ವಿನಿಯೋಗಿಸಿ ಮುಖ್ಯವಾದ ಕರ್ತವ್ಯವನ್ನೇ ಬಿಡುವುದು ಆಗದ ಕೆಲಸ.

ನಾಸ್ತಿ ಪಿತ್ರಾರ್ಜಿತಂ ಕಿಂಚಿನ್ನ ಮಯಾ ಕಿಂಚಿದಾರ್ಜಿತಂ | ಅಸ್ತಿ ಮೇ ಹಸ್ತಿ ಶೈಲಾಗ್ರೇ ವಸ್ತು ಪೈತಾಮಹಂ ಧನಂ ||

ತಂದೆ ಸಂಪಾದಿಸಿದ ಆಸ್ತಿ ಸ್ವಲ್ಪವೂ ನನಗಿಲ್ಲ. ನಾನೂ ಆಸ್ತಿಯನ್ನೂ ಆರ್ಜನೆ ಮಾಡಲಿಲ್ಲ. ಇಷ್ಟಾದರೂ ನಾನೇನೂ ಬಡವನಲ್ಲ. ಕಾರಣ ನನ್ನ ತಾತ ಸಂಪಾದಿಸಿ ಇಟ್ಟಿರುವ ಶಾಶ್ವತ ಸಂಪತ್ತು ಹಸ್ತಿ ಶೈಲಶಿಖರದಲ್ಲಿದೆ. ಪರಮಾತ್ಮನೇ ಆ ಶಾಶ್ವತ ಸಂಪತ್ತು. ಈ ಸಂಪತ್ತಿರುವಾಗ ನನಗೇತರ ಕೊರತೆ. ಒಂದು ವೇಳೆ ಹಣವೇ ಅಗತ್ಯವಾದರೆ ಕುಚೇಲನಿಗೆ ಕುಬೇರ ಸಂಪತ್ತನ್ನು ಕರುಣಿಸಿದ ದೇವನು ಕೇಳಿಕೊಂಡರೆ ನಮಗೆ ಕೊಡಲಾರನೆ? ಶಾಶ್ವತ ವಸ್ತುವೆಂದು ಸರ್ವಸಮ್ಮತವಾದ ಆತ್ಮದ ಬೆಳವಣಿಗೆಗೆ, ನಿತ್ಯವಾದ ಸುಖಸಂತೋಷಗಳಿಗೆ ಪ್ರಯತ್ನಿಸುವುದು ವಿವೇಕಿಯ ಕರ್ತವ್ಯ. ಹಾಗಲ್ಲದೆ ನಶ್ವರವೆಂದು ಎಲ್ಲರಿಗೂ ತಿಳಿದಿರುವ ಕ್ಷುದ್ರ ಶರೀರದ ರಕ್ಷಣೆಗೆ, ಬೆಳವಣಿಗೆ, ಅತ್ಯಲ್ಪವಾದ ಸುಖಕ್ಕೆ ಶ್ರಮಿಸುವುದು ಯುಕ್ತವಲ್ಲ. ಪಶುಪಕ್ಷಿ ಮುಂತಾದ ಕ್ಷುದ್ರ ಜಂತುಗಳೂ ಸಹ ಶಾರೀರಿಕ ಭೋಗಗಳಿಗೆ ಗಮನ ಕೊಡುವುದನ್ನೂ, ಅದಕ್ಕಾಗಿ ಪ್ರಯತ್ನ ಮಾಡುವುದನ್ನೂ ಕಂಡಿರುವೆವು. ಇದನ್ನೇ ಜ್ಞಾನಿಯೂ ಮಾಡುವುದಾದರೆ ಇವನ ಜ್ಞಾನ ವ್ಯರ್ಥವೇ ಸರಿ. ವೇದಾದಿ ಶಾಸ್ತ್ರಗಳ ಪರಿಚಯವು ದಂಡ. ಆದ್ದರಿಂದ ಶಾಶ್ವತವಾದ ಲಾಭವನ್ನೂ, ಅಧಿಕ ಸುಖವನ್ನೂ, ಅಮಿತ ಆನಂದವನ್ನೂ ಗಳಿಸಿಕೊಳ್ಳಲು ನಿರಂತರ ಶ್ರಮಿಸುವುದೂ, ಸಾಧನೆ ಮಾಡುವುದೂ ಜ್ಞಾನಿಗೆ ಮುಖ್ಯ. ಆ ಶಾಶ್ವತಸುಖ, ಅಮಿತ ಆನಂದ, ಐಹಿಕ ವಿಷಯ ಭೋಗಗಳ ತ್ಯಾಗದಿಂದ ಲಭ್ಯವಾಗುವುದಲ್ಲದೆ ಭೋಗಗಳಿಂದಲ್ಲ ಎಂದು ತಿಳಿದೂ ಪುನಃ ಪುನಃ ಭೋಗದಲ್ಲೇ ಆಸಕ್ತಿವಹಿಸುವುದು ಎಷ್ಟು ತಿಳಿಗೇಡಿತನ. ಮುಂತಾದ ವಿಚಾರಗಳಿಂದ, ವಿವೇಕದಿಂದ ದೇಶಿಕರ ಮನಸ್ಸು ಕ್ಷುದ್ರ ಭೋಗದಕಡೆ ಹರಿಯದಂತಿತ್ತು ಅಳಿಯದ ಸಂಪತ್ತೆನಿಸಿಕೊಂಡ ಪರಮಾತ್ಮನೆಂಬ ವಸ್ತುವನ್ನು ಪಡೆಯುವ ಆಕಾಂಕ್ಷೆ ಪ್ರಬಲವಾಗಿತ್ತು ಅವರಿಗೆ. ಅದಕ್ಕಾಗಿ ತ್ಯಾಗಮಯ ಜೀವನವನ್ನು ನಡೆಸುತ್ತಿದ್ದರು.

ಇವರು ಆಶ್ರಮದಲ್ಲಿ ಗೃಹಸ್ಥರೆಂದು ಪರಿಗಣಿತರಾಗಿದ್ದರೂ ಉತ್ತಮ ಮನೋಭಾವದಿಂದ ತ್ಯಾಗಭಾವನೆಯಿಂದ ಕಾಮ್ಯವಿಷಯಗಳಲ್ಲಿ ಅನಾಸಕ್ತತೆಯಿಂದ ಉತ್ತಮ ಸನ್ಯಾಸಿಗಳಾಗಿದ್ದರು. ಕಾವಿಯನ್ನುಟ್ಟು ದಂಡವನ್ನು ಹಿಡಿದು ಪ್ರಸಿದ್ಧ ಸನ್ಯಾಸಿಗಳೆನಿಸಿಕೊಂಡವರೂ ಸಹ ಇವರ ವೈರಾಗ್ಯ ಮನೋಭಾವವನ್ನು ಕಂಡು ನಾಚಿಕೊಳ್ಳುವ ಸ್ಥಿತಿಯಲ್ಲಿದ್ದರು.

ಬಿಕ್ಷೇತೀ ಶಿಷ್ಯಜನರಕ್ಷಣದಕ್ಷಿಣೇತಿ ಶಾಠೀತಿ ಶಾಶ್ವತ ಮಘೋಪಧಿಕಲ್ಪನೇತಿ |
ಗ್ರಂಥೋಪಸಂಗ್ರಹಣಮೂಲ್ಯಮಿತಿ ಬ್ರುವಾಣಃ ಸನ್ಯಾಸಿನೋಪಿ ದಧತೇ ಮಹಿತೀಂ ಧನಾಯಾಂ ||

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಭಿಕ್ಷೆಗೆ ಹಣ, ಆಶ್ರಯಿಸಿರುವ ಶಿಷ್ಯರನ್ನು ಪಾಲನೆಮಾಡಲು ದಕ್ಷಿಣೆ, ಕಾವಿಬಟ್ಟೆಗಾಗಿ ದ್ರವ್ಯ, ದೃಢವಾದ ಭದ್ರವಾದ ಮಠದ ಕಟ್ಟಡವನ್ನು ಕಟ್ಟಲು ನಿಧಿ, ಅಪೂರ್ವವಾದ ಪುಸ್ತಕಗಳನ್ನು ಕೊಂಡು ಪುಸ್ತಕಾಲಯವನ್ನು ಏರ್ಪಡಿಸಲು ಮೌಲ್ಯ ಎಂದು ಸನ್ಯಾಸಿಗಳೂ ಸಹ ಧನ ಸಂಗ್ರಹಣ ಮಾಡುತ್ತಿರುವರಲ್ಲಾ ಎಂದು ದೇಶಿಕರು ವ್ಯಥೆಪಟ್ಟಿದ್ದಾರೆ.

ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವ ಮಾನಶುಃ |

ತ್ಯಾಗಳಿಂದಲೇ ಮೋಕ್ಷಪ್ರಾಪ್ತಿ ಎಂದು ಹೇಳುವ ಉಪನಿಷತ್ತನ್ನು ನಂಬಿ ನಡೆದುಕೊಳ್ಳುತ್ತಿದ್ದವರು ಇವರು.

ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಃ ಸನ್ಯಾಸಯೋಗಾಃ ಯತಯಃ ಶುದ್ಧಸತ್ವಾಃ |
ತೇ ಬ್ರಹ್ಮಲೋಕೇ ತು ಪರಾಂತಕಾಲೇ ಪಠಾಮೃತಾತ್ ಪರಿಮುಚ್ಯಂತಿ ಸರ್ವೇ ||

ಎಂದು ಉಪನಿಷತ್ತು ಬೋಧಿಸುವ ರೀತಿಯಲ್ಲಿ ವೇದಾಂತ ಜ್ಞಾನದಿಂದ ತತ್ವ ನಿರ್ಧಾರಮಾಡಿಕೊಂಡು ಕಾಮ್ಯಫಲಗಳಲ್ಲಿ ವಿರಕ್ತರಾದ ಪರಿಪಕ್ವ ಹೃದಯದ, ಪರಮ ಸಾತ್ವಿಕತೆಯಿಂದಲೂ, ಸ್ಫಟಿಕ ಶುದ್ಧರಾಗಿ ಜ್ಞಾನಾನುಷ್ಠಾನ ವೈರಾಗ್ಯಗಳಿಂದಲೂ, ಸನ್ಯಾಸಿಗಳಿಂದಲೂ, ಸನ್ಯಾಸಿಗಳೂ ಅಚ್ಚರಿಗೊಳ್ಳುವಂತೆ ಪ್ರಾಕೃತ ವಿಷಯಗಳಲ್ಲಿ ನಿಸ್ಪೃಹರಾಗಿಯೂ ಪವಿತ್ರ ಜೀವನವನ್ನು ನಡೆಸಿದರು.

ಯತಿಪ್ರವರ ಭಾರತೀ ರಸಭರೇಣ ನೀತಂ ವಯಃ | ಪ್ರಫುಲ್ಲ ಫಲಿತಂ ಶಿರಃ |

ಯತಿಶ್ರೇಷ್ಠರಾದ ಭಗವದ್ರಾಮಾನುಜರ ದಿವ್ಯಸೂಕ್ತಿಗಳ ಸವಿಯನ್ನು ಸವಿಯುವುದರಲ್ಲಿಯೇ ಯೌವನವನ್ನು ಸಾರ್ಥಕಪಡಿಸಿಕೊಂಡ ಬಗ್ಗೆ ಅವರೇ ಹೆಮ್ಮೆಪಟ್ಟುಕೊಂಡಿರುವರು. ಶ್ರೀರಾಮಾನುಜರ ದಿವ್ಯಸಂದೇಶವನ್ನೂ, ಸೂಕ್ತಿಯ ಹಿರಿಮೆಯನ್ನೂ ಸಿದ್ಧಾಂತವನ್ನೂ ಇತರರಿಗೆ ಭೋಧಿಸುವುದರಲ್ಲಿ ದೇಶಿಕರ ತಲೆ ನರೆಯಿತು.

ಭಗವದ್ರಾಮಾನುಜಾಚಾರ್ಯರಲ್ಲಿಯೂ, ಅವರ ದಿವ್ಯಸೂಕ್ತಿಗಳಲ್ಲಿಯೂ, ದೇಶಿಕರಿಗೆ ಅಮಿತ ಗೌರವ, ಅಪಾರ ಆಸಕ್ತಿ ಮತ್ತು ಎಲ್ಲೆ ಮೀರಿದ ಪ್ರೀತಿ ಇತ್ತು.

ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ

ಪರಮಾತ್ಮನಲ್ಲಿರುವ ಭಕ್ತಿಗೌರವಗಳನ್ನೇ ಗುರುವಿನಲ್ಲಿಯೂ ತೋರಬೇಕು ಎಂದು ಉಪನಿಷದ್ವಾಣಿಯು ಬೋಧಿಸಿ ದೇಶಿಕರಾದರು.

ಆಚಾರ್ಯಾದಿ ಹ ದೇವತಾಂ ಸಮಧಿಕಾಮನ್ಯಾಂ ನ ಮನ್ಯಾಮಹೇ

ಆಚಾರ್ಯನಿಗಿಂತಲೂ ಮೇಲಾದ ದೈವವಿಲ್ಲ. ಭಗವದ್ರಾಮಾನುಜರೇ ನನಗೆ ಪರಮದೈವ. ಸರ್ವರಕ್ಷಕನಾಗಿ ಅಗೋಚರನಾಗಿರುವ ಆ ಭಗವಂತನಿಗಿಂತಲೂ ಪ್ರತ್ಯಕ್ಷವಾಗಿ ನಮಗೆ ಕಾಣಿಸುತ್ತಿರುವ ನೇರವಾಗಿ ಆತ್ಮರಕ್ಷಣೆ ಕೊಡುತ್ತಿರುವ, ದಿವ್ಯ ಜ್ಞಾನೋಪದೇಶದಿಂದ ಮಹೋಪಕಾರ ಮಾಡುತ್ತಿರುವ, ಶಾಶ್ವತ ಸುಖ ಪ್ರಾಪ್ತಿಗೆ ಉತ್ತಮ ಹಾಗೂ ಸುಲಭವಾದ ನೇರವಾದ ಹಾದಿಯನ್ನು ತೋರುತ್ತಿರುವ, ಶ್ರೀ ರಾಮಾನುಜರೇ ಮೇಲಾದ ವಸ್ತು ಎಂದು ಭಾವಿಸಿದ್ದರು. ಜಗದ್ಗುರು ಎನಿಸಿಕೊಂಡ ಆ ಪರಮಾತ್ಮನೇ ಸೌಲಭ್ಯದಿಂದ ರಾಮಾನುಜರ ರೂಪದಲ್ಲಿರುವುದಾಗಿ ದೇಶಿಕರ ದೃಢನಂಬಿಕೆ. ಆಚಾರ್ಯರಲ್ಲಿ ತಮಗಿರುವ ಭಕ್ತಿಯ ಪ್ರಕಾರಗಳನ್ನು ಯತಿರಾಜಸಪ್ತತಿಯಲ್ಲಿ ತೋಡಿಕೊಂಡಿದ್ದಾರೆ. ಶ್ರೀ ರಾಮಾನುಜರ ಸೂಕ್ತಿಯನ್ನನುಭವಿಸುವುದರಲ್ಲಿ ತಮಗುಂಟಾದ ಅಮಿತವಾದ ಆನಂದವನ್ನು

ನಿವಿಷ್ಟಂ ಯತಿಸಾರ್ವಭೌಮವಚಸಾಮಾವೃತ್ತಿಭಿರ್ಮೋವನಂ |

ಎಂಬ ಮಾತಿನಲ್ಲಿ ಸ್ಪಷ್ಟಪಡಿಸಿದ್ದಾರೆ.

ಜ್ಞಾನ, ವೈರಾಗ್ಯ, ಭಕ್ತಿ ಮೂರಕ್ಕೂ ತ್ರಿವೇಣೀ ಸಂಗಮದಂತಿದ್ದರು ಶ್ರೀ ದೇಶಿಕರು. ವಿನಯ ತಾಳ್ಮೆಗಳು ದೇಶಿಕರಲ್ಲಿ ಆಶ್ರಯ ಪಡೆದಿದ್ದವು. ಸಕಲ ವಿದ್ಯಾವಿಶಾರದರಾಗಿ, ಸಕಲ ಕಲಾ ನಿಪುಣರಾಗಿ, ಸಂಚರಿಸುವ ವಿಶ್ವಕೋಶವಾಗಿದ್ದರು. ವೇದಾಂತಿಗಳಲ್ಲಿ ಪರಮವೇದಾಂತಿಗಳೂ, ದಾರ್ಶನಿಕರಲ್ಲಿ ಉತ್ತಮ ದಾರ್ಶನಿಕರೂ, ತಾರ್ಕಿಕರಲ್ಲಿ ಅಸಮಾನ್ಯ ತಾರ್ಕಿಕರೂ ಕವಿಗಳಲ್ಲಿ ನಿಪುಣ ಕವಿವರ್ಯರೂ, ಜ್ಞಾನಿಗಳಲ್ಲಿ ಮಹಾ ಜ್ಞಾನಿಗಳೂ, ಕರ್ಮಠರಲ್ಲಿ ವೀರಕರ್ಮಠರೂ, ವಿರಕ್ತರಲ್ಲಿ ಪರಮ ವಿರಕ್ತರೂ, ಭಕ್ತರಲ್ಲಿ ಅನುಪಮ ಭಕ್ತಾಗ್ರೇಸರರೂ, ಶಾಂತರಲ್ಲಿ ಪರಮಶಾಂತರೂ, ವಿಮರ್ಶಕರಲ್ಲಿ ಆದರ್ಶ ವಿಮರ್ಶಕರೂ, ಲೇಖಕರಲ್ಲಿ ಪ್ರಥಮವರ್ಗ ಲೇಖಕರೂ,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಾದಿಗಳಲ್ಲಿ ಶ್ರೇಷ್ಠವಾದಿಯೂ, ವಿನೀತರಲ್ಲಿ ಅತ್ಯಂತ ವಿನೀತರೂ ಆಗಿ ಎಲ್ಲ ವಿಧದಲ್ಲೂ ಎಲ್ಲರಗಿಂತ ಮೇಲಾಗಿರುವ ಮಹಾ ವ್ಯಕ್ತಿಯೆಸಿಕೊಂಡಿರುವ ಶ್ರೀ ದೇಶಿಕರ ವ್ಯಕ್ತಿತ್ವವನ್ನು ಪರಿಮಿತ ಶಬ್ದಗಳಿಂದ ವರ್ಣಿಸುವ ಪ್ರಯತ್ನ ಮಾಡುವುದು ಸಾಹಸವೇ ಸರಿ.

ಸಿದ್ಧಂ ಸತ್ಸಂಪ್ರದಾಯೇ ಸ್ಥಿರಧಿಯಮನಘಂ ಶ್ರೋತ್ರಿಯಂ ಬ್ರಹ್ಮನಿಷ್ಠಂ |
ಸತ್ವಸ್ಥಂ ಸತ್ಯವಾಚಂ ಸಮಯನಿಯತಯಾ ಸಾಧುವೃತ್ತ್ಯಾ ಸಮೇತಂ ||
ಡಂಭಾಸೂಯಾದಿ ಮುಕ್ತಂ ಜಿತವಿಷಯಗಣಂ ದೀರ್ಘಬಂಧುಂ ದಯಾಳುಂ |
ಸ್ಪಾಲಿತ್ಯೇ ಶಾಸಿತಾರಂ ಸ್ವಪರಹಿತಪರಂ ದೇಶಿಕಂ ಭೂಷ್ಣುರೀಪ್ಸೇತ್

ಆಳ್ವಾರುಗಳು, ನಾಥಮುನಿ, ಯಾಮುನಾರ್ಯರು ಭಗವದ್ರಾಮಾನುಜರು ಮುಂತಾದ ಮಹನೀಯರ ಮೂಲಕವಾಗಿ ಬಂದಿರುವ ಉತ್ತಮ ಸಂಪ್ರದಾಯದಲ್ಲಿ ಸ್ಥಿರಭಾವವುಳ್ಳವರಾಗಿಯೂ, ಇತರರ ಕುಯಕ್ತಿಗಳಿಗೆ ಕಲಕದೆ ತಿಳಿಯಾಗಿ ಸ್ಥಿರವಾಗಿಯೇ ನಿಲ್ಲುವ ಮನಸ್ಸುಳ್ಳವರಾಗಿಯೂ, ಯಾವ ಬಗೆಯ ದೋಷಕ್ಕೂ ತಮ್ಮಲ್ಲಿ ಆಶ್ರಯಕೊಡದವರಾಗಿಯೂ, ವೇದಾಂತಗಳನ್ನು ಚೆನ್ನಾಗಿ ತಿಳಿದಿರುವವರಾಗಿಯೂ, ಶ್ರೀಪತಿಯಲ್ಲಿ ಗಾಢಭಕ್ತಿ ಯುಳ್ಳವರಾಗಿಯೂ, ತಲೆಯೆತ್ತಿ ನಿಂತಿರುವ ಸತ್ತ್ವಗುಣವುಳ್ಳವರಾಗಿಯೂ, ಕಪಟ ಮೋಸವಿಲ್ಲದೆ ಸತ್ಯವನ್ನೇ ಸದಾ ನುಡಿಯುವವರಾಗಿಯೂ, ಆಯಾಯ ಕಾಲಕ್ಕೆ ಅನುಗುಣವಾಗಿ ಧರ್ಮಮರ್ಮವನ್ನರಿತ ಮಹಾ ಪುರುಷರು ನಿರ್ದೇಶಿಸಿರುವ ಅನುಷ್ಠಾನಗಳನ್ನು ಬಿಡದೆ ನಡೆಸುವವರಾಗಿಯೂ, ಅನ್ಯರನ್ನು ಮೆಚ್ಚಿಸುವ ಆಡಂಬರ ರಹಿತರಾಗಿ ವಿದ್ಯಾನ್ವೇಷಣದಿಂದ ದೂರವಾಗಿ ಶುದ್ಧರಾಗಿರುವವರಾಗಿಯೂ, ಇಂದ್ರಿಯಗಳನ್ನು ನಿಗ್ರಹಿಸಿದವರಾಗಿಯೂ, ಇಹದಲ್ಲಿ ಒಳ್ಳೆಯ ದಾರಿಯನ್ನು ತೋರುವುದರ ಜೊತೆಗೆ ಪರದಲ್ಲಿ ಉತ್ತಮಗಿಂತ ದೊರೆಯಲು ಅನುಕೂಲವಾದ ದಾರಿತೋರಿ ಉಪಕಾರಮಾಡುವ ಕರುಣೆಯುಳ್ಳವರಾಗಿಯೂ, ಶಿಷ್ಯರು ತಪ್ಪಿ ನಡೆದ ವೇಳೆಯಲ್ಲಿ ನಿರ್ದಾಕ್ಷಿಣ್ಯವಾಗಿ ಖಂಡಿಸಿ ತಿದ್ದುವವರಾಗಿಯೂ, ತನಗೂ ತನ್ನ ಹಾಗೆ ಇತರರಿಗೂ ಹಿತವನ್ನೇ ತೋರುವವರಾಗಿಯೂ, ಇರುವವರೇ ಸದಾಚಾರ್ಯರು. ಅಭ್ಯುದಯವನ್ನು ನಿಶ್ರೇಯಸ್ಸನ್ನು ಬಯಸುವ ಪ್ರತಿಯೊಬ್ಬನೂ ಅಂತಹ ಆಚಾರ್ಯರನ್ನೇ ಪಡೆಯಬೇಕು - ಎಂದು ತಾವೇ ನ್ಯಾಸವಿಂಶತಿಯಲ್ಲಿ ಬೋಧಿಸಿರುವ ಸದಾಚಾರ್ಯ ಲಕ್ಷಣಗಳೆಲ್ಲವನ್ನೂ ಪರಿಪೂರ್ಣವಾಗಿ ತುಂಬಿಕೊಂಡಿರುವ ಕಲ್ಯಾಣಗುಣಾಕರರಾದ ನಿಗಮಾಂತ ಮಹಾದೇಶಿಕರು ಇಡೀ ಮಾನವವರ್ಗಕ್ಕೆ ಆಚಾರ್ಯರಾಗಿರಲು ಅರ್ಹರು. ಇವರ ಉದಾತ್ತವಾದ ಉಪದೇಶಗಳು ಮಾನವಕುಲದ ಉದ್ಧಾರಕ್ಕೆ ಸಾಧಕಗಳಾಗಿವೆ. ಇವರ ದಿವ್ಯ ಸಂದೇಶಗಳನ್ನು ಅನುಸರಿಸುವವರೆಲ್ಲರೂ ಸುಸಂಸ್ಕೃತರಾಗಿ ಭಗವಂತನ ಪೂರ್ಣ ಅನುಗ್ರಹಕ್ಕೆ ಪಾತ್ರರಾಗುವುದರಲ್ಲಿ ಸಂಶಯ ಲೇಶವೂ ಇಲ್ಲ. ಮಾನವ ವೃಂದವನ್ನು ಉದ್ಧರಿಸುವ ಉದ್ದೇಶದಿಂದಲೇ ಮಾನವ ಸಾಮಾನ್ಯಕ್ಕೂ ಸುಲಭವಾದ ಯೋಗ್ಯವಾದ ಶರಣಾಗತಿ ಎಂಬ ಉತ್ತಮ ಸಾಧನವನ್ನು ಪ್ರಕಾಶಪಡಿಸಿರುತ್ತಾರೆ. ಅವರು ತೋರಿದ ಮಾರ್ಗವನ್ನನುಸರಿಸಿ ಮಾನವಕುಲ ಉದ್ಧಾರವಾಗುವುದಾದರೆ ದೇಶಿಕರ ಉದ್ದೇಶ ಸಫಲವಾಗುವುದು. ಇಂತಹ ಮಹನೀಯರು, ಉದಾರಿಗಳು, ಉಪಕಾರಿಗಳು ಅತಿಶಯವಾದ ಆಚಾರ್ಯಪೀಠವನ್ನಲಂಕರಿಸಿ ಶ್ರೀ ವೈಷ್ಣವಸಂಪ್ರದಾಯಸ್ಥರಿಗೆಲ್ಲ ವಂದ್ಯರಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರ್ಶ ಆಚಾರ್ಯರಾಗಿ ಇವರು ಉದ್ಧಾರಮಾಡಿದ ಶಿಷ್ಯರ ಸಂಖ್ಯೆ ಅಮಿತ. ಇಂದು ಪ್ರತ್ಯಕ್ಷವಾಗಿ ಅವರಿಲ್ಲದಿದ್ದರೂ ಅವರ ದಿವ್ಯ ಉಪದೇಶಗಳು ಅಮರವಾಗಿ ನಿಂತಿವೆ. ಅವರ ಪ್ರತಿನಿಧಿಯಾಗಿ ಅರ್ಚಾಮೂರ್ತಿ ನೆಲಸಿದೆ. ಇವುಗಳಿಂದ ಇಂದಿಗೂ ಎಂದಿಗೂ ಎಲ್ಲರೂ ಅಭ್ಯುದಯವನ್ನು ಪಡೆಯುವ ಸದವಕಾಶ ಇದ್ದೇ ಇದೆ. ದೇಶಿಕರು ಮಾಡಿರುವ ಉಪಕಾರವು ಚಿರಸ್ಥಾಯಿಯಾಗಿದೆ. ಅದನ್ನಾರೂ ಎಂದೂ ಮರೆಯುವಂತಿಲ್ಲ. ಅವರ ಉಪಕಾರಕ್ಕೆ ಪ್ರತಿಯಾಗಿ ಯಾರೇನು ಮಾಡಲೂ ಸಾಧ್ಯವಿಲ್ಲ.

ರಾಮಾನುಜದಯಾಪಾತ್ರಂ ಜ್ಞಾನವೈರಾಗ್ಯಭೂಷಣಂ | ಶ್ರೀಮದ್ವೇಂಕಟನಾಥಾರ್ಯಂ ವಂದೇ ವೇದಾಂತದೇಶಿಕಂ ||

ಶ್ರೀ ರಾಮಾನುಜರ ದಯೆಗೆ ಪಾತ್ರರಾದ ಜ್ಞಾನ ವೈರಾಗ್ಯಗಳಿಂದ ಶೋಭಿಸುವ ವೇದಾಂತಾಚಾರ್ಯರೆಂದು ಪ್ರಸಿದ್ಧರಾದ ಶ್ರೀ ವೇಂಕಟನಾಥರನ್ನು ಅನನ್ಯ ಭಾವದಿಂದ ನಮಿಸುವೆನು ಎಂದು ಭಕ್ತಿ ಪ್ರಣಾಮ ಸಮರ್ಪಣೆ ಮಾಡುವುದೇ ನಮ್ಮಿಂದಾಗಬಹುದಾದದ್ದು. ಇಂತಹ ಸದಾಚಾರ್ಯರನ್ನು ಆಚಾರ್ಯರನ್ನಾಗಿ ಪಡೆದಿರುವ ನಮ್ಮ ಸಮಾಜ ಧನ್ಯ.

ಕವಿತಾರ್ಕಿಕಸಿಂಹಾಯ ಕಲ್ಯಾಣ ಗುಣಶಾಲಿನೇ |
ಶ್ರೀಮತೇ ವೇಂಕಟೇಶಾಯ ವೇದಾಂತ ಗುರವೇ ನಮಃ ||

ಓಂ ಓಂ ಓಂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ ರಾಮಾನುಜರು ಭೇದವಾದಿಯೇ

ವಿದ್ವಾ ಕೊತ್ತಮಂಗಲಂ ವರದಾಚಾರ್, ಓರಿಯಂಟಲ್ ರೀಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು.

ದಾರ್ಶನಿಕರನ್ನು ಭೇದವಾದಿ, ಅಭೇದವಾದಿ, ಭೇದಾಭೇದವಾದಿ ಎಂದು ಮೂರು ವಿಧವಾಗಿ ವಿಂಗಡಿಸುವರು. ಯಾವ ದಾರ್ಶನಿಕರೇ ಆದರೂ ಇವರಲ್ಲಿ ಒಬ್ಬರಾಗಿಯೇ ಆಗಿರಬೇಕು. ಶ್ರೀ ಭಗವದ್ರಾಮಾನುಜರು ಇವರಲ್ಲಿ ಯಾವ ವರ್ಗಕ್ಕೆ ಸೇರಿದವರೆಂದು ಪ್ರಶ್ನಿಸಿದರೆ, ಅವರು ಭೇದವಾದಿಯೇ ಎಂಬ ಉತ್ತರವೇ ಸಹಜವಾಗಿ ಬರುವುದು. ಅವರು ಶ್ರೀಭಾಷ್ಯಾದಿಗಳಲ್ಲಿ ನಿರ್ವಿಶೇಷಾಭೇದವಾದವನ್ನೂ ಭೇದಾಭೇದವಾದವನ್ನೂ ಅನೇಕ ಕಡೆಗಳಲ್ಲಿ ಖಂಡಿಸಿರುವುದರಿಂದ ಅರ್ಥಾತ್ ಅವರು ಭೇದವಾದಿಯೇ ಆಗಬೇಕಾಗಿದೆ.

ಹಾಗಾದರೆ ಇವರ ದರ್ಶನವನ್ನು ವಿಶಿಷ್ಟಾದ್ವೈತ ದರ್ಶನ ಎಂದು ಕರೆಯಲು ಕಾರಣವೇನು? ಎಂದು ಕೇಳಿದರೆ -ಉಪನಿಷತ್ತುಗಳಲ್ಲಿ ಬರುವ ಭೇದವಾಕ್ಯಗಳನ್ನು ಕೈಬಿಟ್ಟು ಅಭೇದ ವಾಕ್ಯಗಳನ್ನು ಮಾತ್ರವೇ ಪ್ರಮಾಣವಾಗಿ ಅಂಗೀಕರಿಸಿ, ನಿರ್ವಿಶೇಷಾದ್ವೈತ ದರ್ಶನ ಹೊರಟಾಗ ಉಪನಿಷತ್ತಿನ ಹೆಚ್ಚಿನ ಭಾಗವಾದ ಭೇದವಾಕ್ಯಗಳು ಅಪ್ರಮಾಣವಾಗಬೇಕಾಗುತ್ತದೆ. ಅದಕ್ಕಾಗಿ ಭೇದವನ್ನು ಮಾತ್ರವೇ ಒಪ್ಪಿದರೇ ಅಭೇದವಾಕ್ಯಗಳನ್ನು ಅಪ್ರಮಾಣವೆಂದು ಒಪ್ಪಬೇಕಾಗುತ್ತದೆ. ಈ ಧರ್ಮ ಸಂಕಟ ಪರಿಹಾರಕ್ಕಾಗಿಯೇ ವಿಶಿಷ್ಟಾದ್ವೈತ ಹೊರಟಿರುವುದು. ಅಂದರೇ ಜೀವಬ್ರಹ್ಮರಿಗೆ ಭೇದವೇ ಇದ್ದರೂ ಸಹ ಅಭೇದ ವಾಕ್ಯಗಳನ್ನು ನಿರ್ವಹಿಸಲಿಕ್ಕಾಗಿಯೇ ಈ ವಾದವನ್ನು ಶ್ರೀ ರಾಮಾನುಜರು ಪ್ರತಿಪಾದಿಸಿದರು. ಆದ್ದರಿಂದ ಜೀವರಿಗೂ ಬ್ರಹ್ಮಕ್ಕೂ ಭೇದವೇ ಇದ್ದರೂ ಜಾತಿಗುಣಾದಿಗಳನ್ನೇ ಅಚೇತನವಸ್ತುಗಳು ಮತ್ತು ಚೇತನರು ಸಹ ಪೃಥಕ್ ಪ್ರತಿಪತ್ತಿಸ್ಥಿತ್ಯನರ್ಹವಾದ ಸಂಬಂಧವುಳ್ಳವುಗಳಾದ್ದರಿಂದ ಶರೀರ ಮತ್ತು ಶರೀರಿಯನ್ನು ಒಟ್ಟು ಸೇರಿಸಿ ಒಂದೇ ಎಂದು ವ್ಯವಹರಿಸುವುದು ಸಮಂಜಸವೇ ಆಗುತ್ತದೆ. ಆದ್ದರಿಂದ ಶ್ರೀ ರಾಮಾನುಜರು ಭೇದವಾದಿಯೇ ಎಂದು ಹೇಳಬೇಕಾಗಿದೆ.

ಹಾಗಾದರೆ ಆನಂದ ತೀರ್ಥರು ಹೇಳಿದ ದ್ವೈತಮತಕ್ಕಿಂತ ಇದರ ವೈಶಿಷ್ಟ್ಯವೇನು ? ಎಂದು ಕೇಳಿದರೆ-ಅವರು ಜೀವ ಬ್ರಹ್ಮರಿಗೆ ಶರೀರ ಶರೀರಿಭಾವವನ್ನು ಅಂದರೆ ಅಪೃಥಕ್ ಸಿದ್ಧಿ ಎಂಬ ವಿಭಾಗಾನರ್ಹಸಂಬಂಧವನ್ನು ಒಪ್ಪುವುದಿಲ್ಲ. ಅಭೇದ ವಾಕ್ಯಗಳನ್ನು ಸಾದೃಶ್ಯಾದಿ ಮೂಕವಾಗಿ ಗೌಣವೆಂದೇ ನಿರ್ವಹಿಸುವರು ಮತ್ತು ಬ್ರಹ್ಮನಲ್ಲಿರುವ ಗುಣಗಳಿಗೂ ಬ್ರಹ್ಮನಿಗೂ ಅತ್ಯಂತಾಭೇದವನ್ನು ಹೇಳಿರುವರು. ಇದೇ ಈ ಎರಡು ಮತಕ್ಕೂ ಇರುವ ಅಂತರ ಎಂದು ಹೇಳುವರು. ಹೀಗೆ ರಾಮಾನುಜರು ಶರೀರಶರೀರಿ ಭಾವವನ್ನು ಒಪ್ಪಿದರೂ ಶರೀರ ಮತ್ತು ಶರೀರಿಗೆ ಭೇದವೇ? ಅಭೇದವೇ? ಭೇದಾಭೇದವೇ? ಎಂದರೆ ಜಾತಿಗುಣಗಳಿಗೆ ತದಾಶ್ರಯಕ್ಕೆ ಭೇದವಿರುವಂತೆ ಭೇದವೆಂದೇ ಹೇಳಬೇಕು. ಆದ್ದರಿಂದ ಯಾವರೀತಿ ನೋಡಿದರೂ ಶ್ರೀ ರಾಮಾನುಜರು ಭೇದವಾದಿಗಳ ಗುಂಪಿಗೇನೇ ಸೇರುವರು. ಇದೇ ಅನೇಕರ ವಾದವಾಗಿದೆ.

ಇದರಿಂದ ಏನೋ ಒಂದು ರೀತಿಯಲ್ಲಿ ಅಭೇದವಾಕ್ಯಗಳ ನಿರ್ವಾಹಕ್ಕಾಗಿಯೇ "ವಿಶಿಷ್ಟಾದ್ವೈತ" ಎಂಬ ಒಂದು ವಾದ ಹೊರಟಿರುವುದೇ ಹೊರತು ವಿಷಯ ದೃಷ್ಟಿಯಿಂದ ಭೇದವಾದವೇ ಶ್ರೀರಾಮಾನುಜಸಮ್ಮತವೆಂದು ಹೇಳಬೇಕಾಗುತ್ತದೆ. ಇದರ ಮೇಲೆ ಸುಸೂಕ್ಷ್ಮವಾಗಿ ಪರಿಶೀಲಿಸಬೇಕಾದ ವಿಷಯಗಳು ತುಂಬಾ ಇರುತ್ತವೆ.

ಇದು ಇರಲಿ. ಭೇದ-ಅಭೇದ-ಭೇದಾಭೇದ ಈ ಮೂರಕ್ಕೂ ಪರ್ಯಾಯವಾಗಿ ದ್ವೈತ-ಅದ್ವೈತ-ದ್ವೈತಾ ದ್ವೈತ ಎಂಬ ಪದಗಳನ್ನು ದಾರ್ಶನಿಕರು ಉಪಯೋಗಿಸುತ್ತಾರೆ. ಈ ಪದಗಳ ಮೇಲೆ ಪ್ರಶ್ನಿಸಿದರೆ ಶ್ರೀರಾಮಾನುಜರು ದ್ವೈತಿಯೆ? ಅದ್ವೈತಿಯೇ? ದ್ವೈತಾದ್ವೈತಿಯೆ? ಎಂದು ಪ್ರಶ್ನಿಸಿದರೆ ಏನು ಉತ್ತರ. "ಅವರು ದ್ವೈತಿಯೇ" ಎಂದೇ ಹೇಳಬೇಕಾಗುತ್ತದೆ. ಆದರೇ ಹೀಗೆ ಪ್ರಶ್ನಿಸಿದಾಗ ಮಾತ್ರ ಅವರನ್ನು ದ್ವೈತಿಗಳೆಂದು ಹೇಳುವುದಕ್ಕೆ ಮನಸ್ಸು ಹಿಂಜರಿಯುತ್ತದೆ. ಅವರು ದ್ವೈತಿಯೂ ಅಲ್ಲ, ಅದ್ವೈತಿಯೂ ಅಲ್ಲ, ದ್ವೈತಾ ದ್ವೈತಿಯೂ ಅಲ್ಲ, ಅವರು ವಿಶಿಷ್ಟಾದ್ವೈತಿಯೇ!... ಎಂದು ಹೇಳುವುದೇ ಸಮಂಜಸವಾಗಿ ಕಾಣುತ್ತದೆ. ಹಾಗಾದರೇ ಅವರು ಭೇದವಾದಿಯೇ? ಅಭೇದವಾದಿಯೇ? ಭೇದಾಭೇದವಾದಿಯೇ? ಎಂದು ಪ್ರಶ್ನಿಸಿದಾಗಲೂ ಅವರು ಸಜಾತೀಯ ವಿಜಾತೀಯ ಸ್ವಗತ ವಸ್ತುಗಳಿಗೆ ಭೇದವಾದಿಯೂ ಮತ್ತು ವಿಶಿಷ್ಟಾಭೇದವಾದಿಯೂ ಆಗಿದ್ದಾರೆ- ಎಂದು ಉತ್ತರಿಸುವುದೇ ಸಮಂಜಸವಲ್ಲವೇ? ಇದನ್ನು ಬಿಟ್ಟು "ಅವರು ಭೇದವಾದಿಯೇ" ಎಂದು ಹೇಳಿದರೆ ಸಮಂಜಸವಾಗುವುದೆ?

ಏನೋ ಅಭೇದವಾಕ್ಯಗಳನ್ನು ನಿರ್ವಹಿಸಲಿಕ್ಕಾಗಿ ಮಾತ್ರವೇ ವಿಶಿಷ್ಟಾದ್ವೈತ ಹೊರಟದೇ ಎಂದರೇ ಇದನ್ನು ಪ್ರತ್ಯೇಕ ಸಿದ್ಧಾಂತವನ್ನಾಗಿ ಒಪ್ಪುವುದಕ್ಕೇನೇ ಅವಕಾಶವಿಲ್ಲ. ವಿಷಯ ದೃಷ್ಟಿಯಿಂದ ಇವರನ್ನು ದ್ವೈತಿಗಳೆಂದೇ ಒಪ್ಪಬೇಕಾಗುವುದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀರಾಮಾನುಜರ ವಾಕ್ಯಗಳನ್ನು ನೋಡಿ-

"ಏವಂಸತ್ಯಭೇದೋವಾ, ಭೇದೋವಾ, ದ್ವ್ಯಾತ್ಮೈಕತಾವಾ, ವೇದಾಂತ ವೇದ್ಯಃ ? ಕೋಽಯಮರ್ಥಃ ಸಮರ್ಥಿತೋ ಭವತಿ? ಸರ್ವಸ್ಯವೇದವೇದ್ಯತ್ವಾತ್ ಸರ್ವಂ ಸಮರ್ಥಿತಂ"

-ವೇದಾರ್ಥ ಸಂಗ್ರಹ.

ಈ ವಾಕ್ಯಗಳನ್ನು ನೋಡಿದರೆ ಶ್ರೀರಾಮಾನುಜರ ಆಶಯ ಹೀಗೆ ತೋರುತ್ತದೆ. ಭೇದಮಾತ್ರವನ್ನೇ ಆಗಲಿ, ಅಭೇದ ಮಾತ್ರವನ್ನೇ ಆಗಲಿ ಒಪ್ಪಿದರೇ ಉಪನಿಷತ್ತಿನ ಎಲ್ಲಾ ವಾಕ್ಯಗಳಿಗೂ ಪ್ರಾಮಾಣ್ಯವನ್ನು ನಿರ್ವಹಿಸುವುದು ಕ್ಲಿಷ್ಟವಾಗುವುದು. ಅದಕ್ಕಾಗಿ ಭೇದಾಭೇದವನ್ನು ಒಪ್ಪೋಣವೆಂದರೇ, ಅದು ಪರಸ್ಪರ ವಿರುದ್ಧ. ಆದ್ದರಿಂದ ಕೇವಲ ಈ ಮೂರುವಾದಕ್ಕಿಂತಲೂ ವಿಲಕ್ಷಣವಾದ ಒಂದು ವಾದವೇ ಎಲ್ಲಾ ದೋಷಗಳಿಗೂ ಪರಿಹಾರವನ್ನು ನೀಡಬಲ್ಲದ್ದಾಗಿದೆ. ಅದೇ ವಿಶಿಷ್ಟಾದ್ವೈತ, ಎನ್ನುವುದು ರಾಮಾನುಜರ ಆಶಯವಾಗಿದೆ. ಆದ್ದರಿಂದ ರಾಮಾನುಜರನ್ನು ಕೇವಲ ಭೇದವಾದಿಗಳ ಗುಂಪಿಗೆ ಸೇರಿಸದೇ- ಈ ಮೂರು ವಾದಕ್ಕಿಂತಲೂ ವಿಲಕ್ಷಣವಾಗಿ ಮೂರನ್ನೂ ಸಮನ್ವಯಗೊಳಿಸುವಂತಹ ವಿಶಿಷ್ಟಾದ್ವೈತ-ಒಂದು ವಿಲಕ್ಷಣವಾದ ವಾದವೇ ಆಗಿರುವುದು. ಇದರಲ್ಲಿ ವಿಶಿಷ್ಟ+ಅದ್ವೈತ ಎಂಬ ಪದವನ್ನು ನೋಡಿದಾಗ ಒಳಕಡೆ ದ್ವೈತಕಾಣುವ, ಅಭೇದವೇ ಅದ್ವೈತವೇ ಎತ್ತಿಕಾಣುವ ವಾದವೇ ವಿಶಿಷ್ಟಾದ್ವೈತ ಎಂದು ಹೇಳಬೇಕಾಗುತ್ತದೆ. ಈ ವಿಲಕ್ಷಣವಾದವನ್ನು ಯಥಾವತ್ತಾಗಿ ತಿಳಿಯಬೇಕಾದರೆ ಜೀವ ಬ್ರಹ್ಮರಿಬ್ಬರನ್ನೂ ಶರೀರಶರೀರಿಯಾಗಿ ನೋಡಿದಾಗ ಮಾತ್ರವೇ ಸಾಧ್ಯ. ಏಕೆಂದರೆ ವಿಶಿಷ್ಟಾದ್ವೈತ ಒಂದು ದರ್ಶನ, ನೋಟ, ಅನುಭವ. ಅಂದರೆ "ನಾನು=ಅಹಂ", ಎಂಬ ಅನುಭವವು ಶರೀರವನ್ನು ದಾಟಿ ಜೀವನನ್ನು ಮುಟ್ಟುವಂತೆ, ಅದನ್ನೂ ದಾಟಿ ಪರಮಾತ್ಮನನ್ನು ಮುಟ್ಟುವ ಅನುಭವವನ್ನು ಪಡೆದರೆ ಮಾತ್ರ "ವಿಶಿಷ್ಟಾದ್ವೈತ" ಒಂದು ದರ್ಶನ-ಎಂದು ಅರ್ಥವಾಗುವುದು. ಆದ್ದರಿಂದ ರಾಮಾನುಜರು ಖಂಡಿತವಾಗಿಯೂ ನಿರ್ವಿಶೇಷಾದ್ವೈತಿ ಅಲ್ಲ = ಕೇವಲ ಭೇದವಾದಿ ಅಲ್ಲ. ಅವರು ವಿಶಿಷ್ಟಾದ್ವೈತಿ ಎಂದು ಉತ್ತರ ಕೊಡುವುದೇ ಸಮಂಜಸ. ಇದರ ಮೇಲೂ ಬರುವ ಆಕ್ಷೇಪ ಸಂಶಯಾದಿಗಳನ್ನು ಪ್ರತಿಪಾದಿಸಿ ಸಮಾಧಾನ ಹೇಳುವುದಾದರೇ ಅದೇ ಒಂದು ದೊಡ್ಡ ಗ್ರಂಥವಾಗಬಹುದು. ಒಟ್ಟಿನಲ್ಲಿ ಶ್ರೀರಾಮಾನುಜರು ಭೇದವಾದಿ ಎನ್ನುವುದನ್ನು ಮಾತ್ರ ನಾವು ಮರೆಯಲೇಬಾರದು.

ॐ ॐ ॐ

ಗುರು ಕಿಂಕರ ಕಿಂಕರ ಕಿಂ
ಕರ ಕಿಂಕರ ಕಿಂಕರ ದಾಸಜನಃ ।
ತುರಗಾನನ ದಿವ್ಯಕೃಪೈಕ ಬಲಃ
ಪ್ರಣಮನ್ನಮುಮಾಶಯಮರ್ಪಯತಿ ॥

ಜಯತಿ ನಾಮಚೂಡಾ ದೇಶಿಕೇಂದ್ರೋ ದಯಾಳುಃ
ಜಯತಿ ಸುಮತಿಸೇವ್ಯಾ ಶೋಭನಾ ತಸ್ಯ ಸೂಕ್ತಿಃ ।
ಜಯತಿ ಶುಭಗುಣಂ ತಂ ಶೀಲಯನ್ ಸೂರಿಸಂಘೋ
ಜಯತಿ ವಸುಮತೀ ಸಾ ತಸ್ಯ ಸಂಚಾರಧನ್ಯಾ ॥

ಮರುದ್ಭಿಃ ಪೀಡ್ಯಮಾನೋಪಿ ಸಂತ್ಯಕ್ತೋಪಿ ದಿವಾನಿಶಂ ।
ವಿಷಯಸ್ನೇಹರಹಿತೋ ರತ್ನದೀಪಃ ಪ್ರಕಾಶತೇ ॥

ಗಾಳಿಯ ಹೊಡೆತಕ್ಕೆ ಸಿಕ್ಕಿಯೂ, ಹಗಲು ರಾತ್ರಿ (ಸುರಕ್ಷಿತ ಸ್ಥಳದಲ್ಲಿ ಇಡಲ್ಪಡದೆ) ಬಿಸಾಡಲ್ಪಟ್ಟರೂ "ರತ್ನದೀಪ" ಎಣ್ಣೆಯ ಬಟ್ಟಲಿಲ್ಲದೆಯೇ ಪ್ರಕಾಶಿಸುವುದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

|| ಶ್ರೀ ||

|| ಶ್ರೀ ವಿಜಯವಲ್ಲೀ ಸಮೇತ ಶ್ರೀ ಮಹಾಸುದರ್ಶನ ಪರಬ್ರಹ್ಮಣೇ ನಮಃ ||

|| ಶ್ರೀ ಮಹಾಲಕ್ಷ್ಮೀ ಸಮೇತ ಶ್ರೀ ಸುದರ್ಶನ ನಾರಸಿಂಹ ಪರಬ್ರಹ್ಮಣೇ ನಮಃ ||

|| ಶ್ರೀ ಅಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ ||

|| ಶ್ರೀಮತೇ ಶ್ರೀ ಲಕ್ಷ್ಮೀನಂದನ ತಾತಯಾರ್ಯ ಮಹಾದೇಶಿಕಾಯ ನಮಃ ||

|| ಶ್ರೀಮತೇ ಶ್ರೀ ರಂಗಪ್ರಿಯಮಹಾದೇಶಿಕಾಯ ನಮಃ ||

|| ಶ್ರೀಮತೇ ಶ್ರೀ ಶ್ರೀನಿವಾಸ ತಾತಯಾರ್ಯ ಮಹಾದೇಶಿಕಾಯ ನಮಃ ||

|| ಅಸ್ಮತ್ ಸರ್ವಗುರುಭ್ಯೋ ನಮಃ ||

ಶ್ರೀ ಮಹಾಸುದರ್ಶನ ಹೋಮ

ಕೋಟಿ ಕನ್ಯಾದಾನಂ || ಶ್ರೀ|| ವಾಸುದೇವ ತಾತಾಚಾರ್ಯ

ಸ್ಫುರಸ್ಸಹಸ್ರಾರಶಿಖಾತಿ ತೀವ್ರಂ ಸುದರ್ಶನಂ ಭಾಸ್ಕರ ಕೋಟಿತುಲ್ಯಂ |
ಸುರದ್ವಿಷಾಂ ಪ್ರಾಣವಿನಾಶ ವಿಷ್ಣೋಶ್ಚಕ್ರಂ ಸದಾಹಂ ಶರಣಂ ಪ್ರಪದ್ಯೇ ||
ವಿಷ್ಣೋರ್ಮುಖೋತ್ಥಾನಿಲ ಪೂರಿತಸ್ಯಯಸ್ಯ ಧ್ವನಿ ರ್ದಾನವ ದರ್ಪಹಂತಾ |
ತಂಪಾಂಚಜನ್ಯಂ ಶಶಿಕೋಟಿ ಶುಭ್ರಂ ಶಂಖಂ ಸದಾಹಂ ಶರಣಂ ಪ್ರಪದ್ಯೇ ||
ಹಿರಣ್ಮಯೀಂ ಮೇರು ಸಮಾನಸಾರಾಂ ಕೌಮೋದಕೀಂ ದೈತ್ಯ ಕುಲೈಕಹಂತ್ರೀಂ |
ವೈಕುಂಠ ವಾಮಾಗ್ರಕರಾಭಿಮೃಷ್ಟಾಂ ಗದಾಂ ಸದಾಹಂಶರಣಂ ಪ್ರಪದ್ಯೇ ||
ರಕ್ಷೋಸುರಾಣಾಂ ಕಠಿನೋಗ್ರಕಂಠಚ್ಛೇದಕ್ಷರ ಚ್ಛೋಣಿತ ದಿಗ್ಧಧಾರಂ |
ತನ್ನಂದಕಂ ನಾಮಹರೇಃ ಪ್ರದೀಪ್ತಂ ಖಡ್ಗಂ ಸದಾಹಂ ಶರಣಂ ಪ್ರಪದ್ಯೇ ||
ಯಜ್ಯಾನಿನಾದ ಶ್ರವಣಾತ್ ಸುರಾಣಾಂ ಚೇತಾಂಸಿ ನಿರ್ಮುಕ್ತ ಭಯಾನಿಸದ್ಯಃ |
ಭವಂತಿ ದೈತ್ಯಾಕಶನಿಬಾಣವರ್ಷೆ ಶಾರ್ಙ್ಗಂ ಸದಾಹಂ ಶರಣಂ ಪ್ರಪದ್ಯೇ ||

ನಾರಸಿಂಹಂ ಚತುರ್ಬಾಹುಂ ಚತುಶ್ಚಕ್ರಧರಂಪರಂ |
ಸಮಾಸೀನಂ ಸ್ಥಿತಮಪಿಭಯಸ್ತ್ರಾಯತಾಂ ತತ್ವಮೇಕಂ ||
ಪಶ್ಚಾತ್ಪೂರ್ವತ್ರಭಾಗೇ ಸ್ಫುಟ ನರಹರಿ ತಾಮಾನುಷಂಜಾನುಷಾದ್ಯಃ |
ಚಕ್ರಾಧೀಶೋಭಿನಾದನ್ ಪ್ರದಿಶತು ಸದೃಶೀಮುತ್ತಮ ಶ್ಲೋಕತಾಂವಃ ||

ಶಂಖಂ ಚಕ್ರಂ ಚ ಚಾಪಂ ಪರಶುಮಸಿಮಿಷುಂಶೂಲ ಪಾಶಾಂಕುಶಾಗ್ನಿಂ |
ಬಿಭ್ರಾಣಂ ಖಡ್ಗ ಖೇಟಂ ಹಲಮುಸಲಗದಾಕುಂತ ಮತ್ಯುಗ್ರದಂಷ್ಟ್ರಂ ||
ಜ್ವಾಲಾಕೇಶಂ ತ್ರಿನೇತ್ರಂ ಕನಕಮಯಲಸದ್ಗಾತ್ರಮತ್ಯುಗ್ರರೂಪಂ |
ವಂದೇಷಟ್ಕೋಣ ಸಂಸ್ಥಂ ಸಕಲರಿಪುಜನ ಪ್ರಾಣ ಸಂಹಾರಚಕ್ರಂ ||
ಸುದರ್ಶನ ಮಹಾಜ್ವಾಲ ಕೋಟಿ ಸೂರ್ಯ ಸಮಪ್ರಭ |
ಅಜ್ಞಾನಾಂಧಸ್ಯಮೇ ದೇವವಿಷ್ಣೋರ್ಮಾರ್ಗಂ ಪ್ರದರ್ಶಯ ||
ಪ್ರತಿಭಟಶ್ರೇಣಿಭೀಷಣ ವರಗುಣ ಸ್ತೋಮ ಭೂಷಣ |
ಜನಿಭಯ ಸ್ಥಾನಕಾರಣ ಜಗದವಸ್ಥಾನ ಕಾರಣ ||
ನಿಖಿತ ದುಷ್ಕರ್ಮ ಕರ್ಶನ ನಿಗಮ ಸದ್ಧರ್ಮದರ್ಶನ |
ಜಯ ಜಯ ಶ್ರೀ ಸುದರ್ಶನ, ಜಯ ಜಯ ಶ್ರೀ ಸುದರ್ಶನ ||

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಭವ್ಯ ಪ್ರಾಚೀನ ಯತಿ ಪರಂಪರೆಯಲ್ಲಿ ಶ್ರೀ ಪರಕಾಲ ಮಠವು ವೈಭವೋಪೇತವಾಗಿ ವಿದ್ವತ್ ಜನಭರಿತವಾಗಿ, ಸತ್ಯ, ನ್ಯಾಯ, ನಿಷ್ಠೆ, ಧರ್ಮಾದಿಗಳಿಂದ ಪ್ರಕಾಶಿಸುತ್ತಾ ಬಂದಿದೆ. ರಾಜಮಹಾರಾಜರೆಲ್ಲರು ಶ್ರೀ ಮಠದ ಭಕ್ತರಾಗಿದ್ದು ಭಗವಂತನ ಮತ್ತು ಯತಿವರ್ಯರ ಸೇವೆಗಳಲ್ಲಿ ನಿರತರಾಗಿದ್ದರು. ಶ್ರೀಮನ್ನಿಗಮಾಂತ ಮಹಾದೇಶಿಕರಿಂದ ಆರಾಧಿಸಲ್ಪಟ್ಟು, ಈಗ ಮೈಸೂರಿನಲ್ಲಿ ಶ್ರೀಮಠದಲ್ಲಿ ಆರಾಧಿಸಲಾಗುತ್ತಿದೆ. ಈ ಭಗವಂತನೆ ಲಕ್ಷ್ಮೀಹಯಗ್ರೀವಸ್ವಾಮಿಯಾಗಿದ್ದು, ಶ್ರೀಮಠದ ಆರಾಧ್ಯ ದೇವನಾಗಿ ದರ್ಶನ ಕೊಡುತ್ತಿದ್ದಾನೆ. ಯತಿವರ್ಯರುಗಳೇ ಆರಾಧಿಸುತ್ತಿದ್ದು, ಯತಿವರ್ಯರಾದ ಶ್ರೀ|| ಶ್ರೀ ಅಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕನ್ ಮಹಾ ಸ್ವಾಮಿಗಳವರೂ ಆರಾಧಿಸುತ್ತಿದ್ದು ಈಗ ಈ ಖರನಾಮ ಸಂವತ್ಸರದಲ್ಲಿ ಶ್ರೀಗಳವರ ಶತಮಾನ ತಿರುನಕ್ಷತ್ರ ಮಹೋತ್ಸವವನ್ನು ಆಚರಿಸಲಾಗುವುದು. ಈ ಸುಸಂದರ್ಭದಲ್ಲಿ ಶ್ರೀ ಮಹಾಸುದರ್ಶನನ ಮಹಿಮೆ ಮತ್ತು ಹೋಮದ ಬಗ್ಗೆ ಕಿರು ಲೇಖನವನ್ನು ರಚಿಸಿ ಶ್ರೀ|| ಶ್ರೀ|| ಯತಿಸಾರ್ವಭೌಮರ ದಿವ್ಯ ಸನ್ನಿಧಿಯಲ್ಲಿ ಸಮರ್ಪಿಸುತ್ತಿದ್ದೇನೆ.

ಭಗವಂತನಾದ ಶ್ರೀಮನ್ನಾರಾಯಣನ ದಿವ್ಯಾಸ್ತ್ರವಾದ ಶ್ರೀಮಹಾ ಸುದರ್ಶನ ಮಹಿಮೆಯು ಮತ್ತು ಶ್ರೀ ಸುದರ್ಶನ ಮತ್ತು ಶ್ರೀ ಸುದರ್ಶನ ನಾರಸಿಂಹ ಅವತಾರವು ಮತ್ತು ಶ್ರೀ ಮಹಾಸುದರ್ಶನ ಹೋಮದ ವಿವರಣೆಯು.

ಶ್ರೀ ಮಹಾವಿಷ್ಣುವಿನ ಶ್ರೀ ಹಸ್ತವನ್ನು ಶ್ರೀ ಸುದರ್ಶನ ಚಕ್ರವು ಅಲಂಕರಿಸಿ ಅಭಯ ಹಸ್ತ ನೀಡುತ್ತಿದ್ದು, ಇದರಿಂದಲೇ ಭಗವಂತನಿಗೆ ಚಕ್ರೀ, ಚಕ್ರಪಾಣೇ ಎಂಬ ನಾಮಾಂಕಿತನಾಗಿ ಭೂಷಣನಾಗಿ ಸಕಲ ಚರಾಚರಾದಿಗಳನ್ನು ರಕ್ಷಿಸುತ್ತಿದ್ದಾನೆ.

ವಿಷ್ಣುಪುರಾಣದಲ್ಲಿ ಉಕ್ತವಾಗಿರುವಂತೆ ಸಕಲ ಚೇತನಾಚೇತನ ತತ್ವಗಳನ್ನು ತನ್ನ ದಿವ್ಯರೂಪದಲ್ಲಿ ಆಯುಧಗಳನ್ನಾಗಿ ಶೋಭಿಸಿಕ್ಕೊಂಡು ಸಕಲ ಕಾಲಗಳಲ್ಲಿಯೂ ಕೂಡಿ ರಕ್ಷಿಸುತ್ತಿದ್ದಾನೆ.

ಅನನ್ಯಾಶ್ಚಿಂತಯಂ ತೋಮಾಂ ಯೇಜನಾಃ ಪರ್ಯುಪಾಸತೇ |
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ||
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ |
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ||

ಎಂಬ ಗೀತಾಚಾರ್ಯನ ಅಭಯದಂತೆ ತಪ್ಪದೇ ಧಾವಿಸಿ ರಕ್ಷಿಸುವುದೇ ಪರಮ ಗುರಿಯು.

ಅಹಿರ್ಬುಧ್ನಿಯ ಸಂಹಿತೆಯಲ್ಲಿ ಶ್ರೀ ಸುದರ್ಶನನನ್ನು ಭಗವಂತನ ರೂಪವೆಂದೂ ಬಹಳವಾಗಿ ಸ್ತುತಿಸಲ್ಪಟ್ಟಿದೆ. ಶ್ರೀ ಚಕ್ರನ ಮಹಿಮೆ ಅಪಾರವಾಗಿದ್ದು ರಕ್ಷಾ ಅಸ್ತ್ರವಾಗಿ ಶೋಭಿಸುತ್ತಿದೆ.

ಶ್ರೀ ಸುದರ್ಶನನ ತೇಜಸ್ಸು ಅಗ್ನಿಗಿಂತಲೂ ಮಿಗಿಲಾಗಿದ್ದು, ಅಷ್ಟಭುಜ, ಷೋಡಶ ಬಾಹುಗಳು ಉಳ್ಳವನಾಗಿದ್ದು ಅಲಂಕರಿಸಿದ್ದಾನೆ. ಶಂಖ, ಚಕ್ರ, ಧನುಸ್ಸು, ಪರಶು, ಕತ್ತಿ, ಬಾಣ, ತ್ರಿಶೂಲ, ಪಾಶ, ಅಂಕುಶ, ಅಗ್ನಿ, ಖೇಡ, ಹಲ, ಮುಸಲ, ಗದೆ, ಕುಂತ, ಇಂಥಹಾ ದಿವ್ಯಾಯುಧ ಧಾರಣಾಗಿ ಅತಿಭಯಂಕರವಾದ ದುಷ್ಟ, ಜ್ವಾಲಾಮಯವಾದ ಕೇಶಪಾಶಾದಿಗಳು, ತ್ರಿನೇತ್ರ ಉಳ್ಳವನಾಗಿ ಸುವರ್ಣದಂತೆ ಪ್ರಕಾಶಮಾನವಾಗಿ ವಿರಾಜಿಸುತ್ತಿದ್ದಾನೆ. ಐಹಿಕ, ಆಮುರ್ಷಿಕ, ಫಲಸಿದ್ಧಿಗಾಗಿ ಆಚಾರ್ಯವರ್ಯರುಗಳು ಶ್ರೀ ಮಹಾಸುದರ್ಶನನ್ನು ಭಗವಂತನಲ್ಲಿ ಆತ್ಮ ಸಮರ್ಪಣೆ ಮಾಡಿಕ್ಕೊಂಡು ಪರಿಪರಿಯಾಗಿ ಸ್ತುತಿಸಿದ್ದಾರೆ. ಈ ಮಹಾಮಹಿಮನ ಮಡದಿಯೇ ವಿಜಯವಲ್ಲೀ ಮಹಾದೇವಿಯು.

ಚಕ್ರಾಕಾರನಾಗಿ, ದಿವ್ಯಾಯುಧಗಳಿಗೆ ಅಧಿಪತಿಯಾಗಿರುವುದರಿಂದ ಚಕ್ರರಾಜನಾಗಿ ವಿಜೃಂಭಿಸಿದ್ದಾನೆ. ಸರ್ವ ಕೇಂದ್ರಗಳೂ ಚಕ್ರಗಳಾಗಿದ್ದರೂ ಅತ್ಯುನ್ನತ ಸ್ಥಾನದಲ್ಲಿರುವುದರಿಂದ, ಸಹಸ್ರಾರು ಚಕ್ರಗಳಾಗಿ, ಸಾವಿರ ಅಲಗುಗಳಿಂದ ಕೂಡಿರುವುದರಿಂದ ಸಹಸ್ರಾರವೆಂಬುದಾಗಿ ವಿಜೃಂಭಿಸಿದ್ದಾನೆ. ಈ ಸಹಸ್ರಾರ ಅಲಗುಗಳು ಸಾವಿರಾರು ಅಸ್ತ್ರಗಳೂ ಸೇರಿ ಅಂತರ್ಗತವಾಗಿವೆ.

ಶ್ರೀಮದ್ಭಾಗವತದಲ್ಲಿ ಉಕ್ತವಾಗಿರುವಂತೆ ಒಳ್ಳೆಯ ನಾಭಿಉಳ್ಳವ ನಾಗಿರುವುದರಿಂದ ಸುನಾಭವೆಂಬುದಾಗಿ ಸ್ತುತಿಸಿರುತ್ತೆ. ಯುದ್ಧ ಸಮಯಗಳಲ್ಲಿ ಮಹಾಶೂರನಾಗಿ ಸಾವಿರಾರು ಸೂರ್ಯರಿಗಿಂತಲೂ ಪ್ರಸಿದ್ಧನಾಗಿ ಸೌಮ್ಯ ದರ್ಶನ ಕೊಡುವುದರಿಂದ, ಸುದರ್ಶನ, ಕಾಲಚಕ್ರನು, ಜಗಚ್ಚಕ್ರನಾಗಿ ನಿಯಾಮಕನೂ, ಆಗಿದ್ದು "ಸುದರ್ಶನ ಮಹಾಜ್ವಾಲ ಕೋಟಿ ಸೂರ್ಯ ಸಮಪ್ರಭ" ಎಂಬಂತೆ ಪ್ರಜ್ವಲನಾಗಿ,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾವ ರೀತಿಯಲ್ಲಿಯೂ ಸೋಲಿಲ್ಲದೆ "ಅಪರಾಜಿತ" ಎಂಬುವನಾಗಿ ಭಗವದಂಶ ಭೂತನಾಗಿ ಬಹು ಪರಾಕ್ರಮಿಯಾಗಿದ್ದು ಅಮೋಘ ಮಹಿಮೆ ಉಳ್ಳವನಾಗಿದ್ದಾನೆ.

ಅಂಬರೀಶ ಮಹಾರಾಜನು, ಮಹಾಸತ್ಯ ಪರಾಕ್ರಮಿ, ಧರ್ಮಾತ್ಮನು, ನ್ಯಾಯನಿಷ್ಠನಾಗಿದ್ದು ಪ್ರಜಾಪಾಲಕನಾಗಿದ್ದನು. ಒಮ್ಮೆ ದೂರ್ವಾಸ ಮಹಾಮುನಿಗಳು, ದುಡುಕಿನಿಂದ ಕ್ರೋಧ ಮತ್ಸರದಿಂದ ಅಕೃತ ಮಾಂತ್ರಿಕ ಮಾಟ ಪೂರ್ವಕವಾಗಿ ತನ್ನ ಪ್ರಭಾವವನ್ನು ಪ್ರಯೋಗಿಸಿದಾಗ, ಶ್ರೀ ಸುದರ್ಶನನು ಮಹಾಕೋಪ ಉಳ್ಳವನಾಗಿರುವುದನ್ನು ತಿಳಿದು, ದೂರ್ವಾಸರು ಯಾವ ದೇವತೆಗಳ ಬಳಿಗೆ ರಕ್ಷಣೆಗಾಗಿ ಮೊರೆ ಹೊಕ್ಕರೂ ಬಿಡದೇ ಸಂಹರಿಸಬೇಕೆಂದು ನಿರ್ಧರಿಸಿದಾಗ, ದೂರ್ವಾಸರು ಬಹಳ ಹೆದರಿ ಭಯಗೊಂಡು ತಾನು ಎಸಗಿದ ಮಹಾಪರಾಧವನ್ನು ಸರ್ವಥಾ ಕ್ಷಮಿಸಬೇಕೆಂದು ಪರಿ ಪರಿಯಾಗಿ ಅಂಬರೀಶ ಮಹಾರಾಜನಲ್ಲಿ ಹೊಕ್ಕಾಗ ಆತನನ್ನು ಕ್ಷಮಿಸಿ ರಕ್ಷಿಸಿದನು.

ಪೌಂಡ್ರಿಕ ವಾಸುದೇವನು ಪರವಾಸುದೇವನಾದ ಶ್ರೀ ಕೃಷ್ಣನನ್ನೇ ಹೆದರಿಸಿ ದರ್ಪ ತೋರಿಸಿದಾಗ ಶ್ರೀ ಸುದರ್ಶನನು ಆತನನ್ನು ಭಸ್ಮ ಮಾಡಿದಲ್ಲದೆ ಆತನನ್ನು ಕಾಪಾಡಲು ರಕ್ಷಣೆಗೆ ಬಂದ ಕಾಶೀರಾಜನನ್ನು ಭಸ್ಮ ಮಾಡಿದನು. ಮತ್ತು ಕಾಶೀನಗರಿಯನ್ನು ಸಹಾ ನಾಶಗೊಳಿಸಿ ಧ್ವಂಸಮಾಡಿದನು.

ಇಂದ್ರಾದಿ ಸರ್ವ ದೇವತೆಗಳಿಗೂ ಮುಖ್ಯಸ್ಥನಾದ ಕಾಲನೇಮಿಯು ಬಹು ಅಹಂಕಾರ, ಗರ್ವ, ಮದ ಮಾತ್ಸರ್ಯಗಳಿಂದ ಕೂಡಿ ಅಧರ್ಮಗಳಿಂದ ಕೂಡಿದ್ದು ಉಪಟಳ ಸಹಿಸುವುದಕ್ಕೆ ಅಸಾಧ್ಯವಾಗಿದ್ದು ಆತನನ್ನು ನಿರ್ನಾಮ ಮಾಡಿದನು.

ಶಿಶುಪಾಲನು ಬಹಳ ಅಧರ್ಮಿಯಾಗಿ ಶ್ರೀಕೃಷ್ಣನನ್ನೇ ಅವಾಚ್ಯಾದಿಗಳಿಂದ ದೂಷಣೆ ಮಾಡಿ ತನ್ನ ಅಹಂಕಾರ ನೆತ್ತಿಗೇರಿ ಅನೇಕಾನೇಕ ತಪ್ಪುಗಳನ್ನೆಸಗಿದರೂ ಶಾಂತನಾಗಿದ್ದು ಮಿತಿ ಮೀರಿದ ವರ್ತನೆಯಿಂದ ಕೂಡಿದವನಾದ್ದರಿಂದ ಕೂಡಲೇ ಶಿರಚ್ಛಿದ್ರಮಾಡಿ ನಾಶಗೊಳಿಸಿದನು.

ಆಪತ್ಕಾಲದಲ್ಲಿ, ನೀರಿನಲ್ಲಿದ್ದ ಮೊಸಳೆಯು ಗಜೇಂದ್ರನ ಕಾಲು ಹಿಡಿದು ತೊಂದರೆ ಪಡಿಸುತ್ತಿದ್ದ ಸಂದರ್ಭದಲ್ಲಿ ನೇರವಾಗಿ ಧಾವಿಸಿ ಮೊಸಳೆಯನ್ನು ತನ್ನ ಚಕ್ರಾಸ್ತ್ರದಿಂದ ವಧಿಸಿ ಗಜೇಂದ್ರನನ್ನು ರಕ್ಷಿಸಿದನು.

ಶ್ರೀ ಸುದರ್ಶನನು ತನ್ನ ಪರಾಕ್ರಮವನ್ನು ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಅಪ್ರತಿಹತ ಆಜಯ್ಯನಾಗಿ ಅಮೋಘ ಪರಾಕ್ರಮದಿಂದ ಅಪ್ರತಿ ದ್ವಂದ್ವನಾಗಿ ಅಸ್ತ್ರರಾಜನೆಂಬುದಾಗಿ, ಅಹಿಬುಧ್ನಿಯ ಸಂಹಿತೆ, ಪುರಾಣ ಇತಿಹಾಸಾದಿಗಳಲ್ಲಿಯೂ ಪ್ರಮಾಣೀಕೃತವಾಗಿದೆ. ಅಲ್ಲದೆ ವೈಷ್ಣವಾಚಾರ್ಯರುಗಳು, ಶಂಕರತ್ಪಾದರು, ಮಧ್ವಾಚಾರ್ಯರು, ಶ್ರೀ ನಿಗಮಾಂತದೇಶಿಕರೂ ಶ್ರೀ ಕೂರನಾರಾಯಣ ಮಹಾಮುನಿಗಳೂ ಪರಿಪರಿಯಾಗಿ ಸ್ತುತಿಸಿ ಕೊಂಡಾಡಿದ್ದಾರೆ. ಶ್ರೀ ಮಹಾಸುದರ್ಶನನ ಬಗ್ಗೆ ಅಷ್ಟೋತ್ತರ, ಸಹಸ್ರನಾಮ, ಷೋಡಶ ನಾಮಾವಳೀ, ಸುದರ್ಶನ ಪ್ರಪತ್ತಿ, ಸುದರ್ಶನ ಶತಕಂ, ಷೋಡಶಾಯುಧ ಸ್ತೋತ್ರ, ಕಾರ್ತವೀರ್ಯಾರ್ಜುನ ಗಾಯತ್ರೀ ಮತ್ತು ಸ್ತೋತ್ರ, ಶ್ರೀ ಸುದರ್ಶನ ಕವಚ, ಸುದರ್ಶನ ಮಂಗಳ, ಶ್ರೀ ಸುದರ್ಶನ ನಾರಸಿಂಹ ಸಹಸ್ರಾವಳಿ. ಗದ್ಯ, ಮಂತ್ರ, ದ್ರಾವಿಡ ದಿವ್ಯಪ್ರಬಂಧಾದಿಗಳು ಪರಿಪರಿಯಾಗಿ ಸ್ತುತಿಸುತ್ತಿವೆ.

ಸೂರ್ಯವಂಶಕ್ಕೆ ಸೇರಿ ಹೈಹಯಕುಲದಲ್ಲಿ ಕೃತವೀರ್ಯಮಹಾರಾಜಾ ಮತ್ತು ಶಲಧರಾದೇವಿರವರ ಪುತ್ರನಾಗಿ ಅವತರಿಸಿದವನೇ ಕಾರ್ತವೀರ್ಯಾರ್ಜುನನು. ಮನುಷ್ಯಾವತಾರದಲ್ಲಿ ಜನಿಸಿದ ಈತನು ಸಹಸ್ರಬಾಹು ವಿರಾಜಿತ ರೂಪದಲ್ಲಿ ಪೂಜಿಸಲ್ಪಡುತ್ತಾನೆ. ("ಕಾರ್ತವೀರ್ಯಾಯ ವಿದ್ಮಹೇ ಸಹಸ್ರಾರಾಯ ಧೀಮಹೀ ತನ್ನೋ ಅರ್ಜುನಃ ಪ್ರಚೋದಯಾತ್") ದೈವಾಂಶಭೂತನಾದ್ದರಿಂದ ಈತನ ಈ ಮಂತ್ರವು ಗಾಯತ್ರೀ ಮಂತ್ರಕ್ಕೆ ಸಮಾನವಾದುದು. ದತ್ತಾತ್ರೇಯ ದೇವರನ್ನು ಆಚಾರ್ಯರನ್ನಾಗಿ ಪ್ರಾರ್ಥಿಸಿ ಅವರಿಂದ ಸರ್ವಸಿದ್ಧಿಪ್ರದವಾದ ಧರ್ಮೈಕಚಿತ್ತವನ್ನು ವರವನ್ನಾಗಿ ಪಡೆದ ಮಹಾವೀರನಾದನು. ನರ್ಮದಾ ನದೀ ತೀರದಲ್ಲಿದ್ದ ಮಾಹಿಷ್ಮತೀ ನಗರವು ಈತನ ರಾಜಧಾನಿ. ಸಮಸ್ತ ದೇವತೆಗಳನ್ನು ಯುದ್ಧದಲ್ಲಿ ಪರಾಜಿತಗೊಳಿಸಿದ್ದ ವೀರಾಧಿವೀರ ರಾವಣೇಶ್ವರನು ಈತನನ್ನು ಕೆಣಕಿ ಪರಾಜಿತನಾಗಿ ಸೆರೆಮನೆ ಸೇರಿ ಕಾಡಿ ಬೇಡಿ ಕ್ಷಮೆ ಕೋರಿ ಪುಲಸ್ತ್ಯ ಮಹರ್ಷಿಗಳ ಕೃಪೆಯಿಂದ ಬಿಡುಗಡೆಯಾದನು. ಈತನ ರಾಜ್ಯದಲ್ಲಿ ಪ್ರಜೆಗಳಿಗೆ ಕಾಯಾ, ವಾಚಾ, ಮನಸಾ, ಪಾಪವನ್ನು ಮಾಡಲು ಅವಕಾಶವಿರದೇ, ನೆಮ್ಮದಿ, ಸುಖ ಸಂತೋಷಾದಿಗಳಿಂದ ಕೂಡಿ ಸುಭಿಕ್ಷವಾಗಿದ್ದಿತು. ಅಂಥಹುಗಳು ಏನಾದರೂ ಸಂಭವಿಸಿದಲ್ಲಿ ಕೂಡಲೇ ಸಹಸ್ರಬಾಹುವಾದ ಸಹಸ್ರಾರಮೂರ್ತಿ ಪ್ರತ್ಯಕ್ಷಗೊಂಡು ಓಡಿಸುತ್ತಿತ್ತು. ಇಂಥಹ ಅತ್ಯದ್ಭುತ ಮಹಾಶಕ್ತಿಯುಳ್ಳವನೇ ಕಾರ್ತವೀರ್ಯಾರ್ಜುನ, ಮಹಾಮಹಿಮನು. ನಾನಾವಿಧ ಪುರುಷಾರ್ಥಗಳನ್ನು, ಕಳೆದುಹೋದ ದ್ರವ್ಯವು ಪುನಃ ದೊರಕುವಂತೆ ಮಾಡಿ ಎಂಥಹಾ ಕಷ್ಟಕಾರ್ಪಣ್ಯದಲ್ಲಿ ಈ ಮಹಾಮಹಿಮನನ್ನು ನೆನೆಸಿದರೇ ತಕ್ಷಣ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸತ್ಪಲ ಉಂಟಾಗಿ ಇಷ್ಟಾರ್ಥಸಿದ್ಧಿಯಾಗುವುದು. "ಆದಿಷ್ಟಹೃತವಿತ್ತಾಯನಷ್ಟ ದ್ರವ್ಯ ಪ್ರದಾಯಿನೇ" ಎಂಬುದು ಪ್ರಮಾಣಾಂತರ್ಗತ ವಾದುದು. ಇದು ಪರಮ ಸತ್ಯ ಪ್ರಕಾಶವಾದುವುಗಳು. ಶ್ರೀ ಕಾರ್ತವೀರ್ಯಾರ್ಜುನನು ಶ್ರೀ ಸುದರ್ಶನ ಅವತಾರ ಪುರುಷನೆಂದೇ ಮಹಾಮಹಿಮೆಯುಳ್ಳವನಾಗಿ ಪ್ರಸಿದ್ಧಿಯಾಗಿರುವನು.

ಭಗವಂತನ ಹಸ್ತದಲ್ಲಿರುವುದು, ಅಧ್ಯಾತ್ಮಿಕ ಸತ್ಯ ಪ್ರಕಾರವಾಗಿರುವುಗಳು ದಿವ್ಯಾಯುಧಗಳು. ಅವುಗಳನ್ನು ಅಳುತ್ತಿರುವುದು ತತ್ವಗಳು. ಮನಸ್ತತ್ವವೇ ನಾರಾಯಣ ಶ್ರೀಚಕ್ರ, ಜ್ಞಾನವೇ ಅವನ ಖಡ್ಗ, ಮಹತ್ತತ್ವವೇ ಆತನ ಗದೆ, ಇದೇ ತಾತ್ವಿಕ ರಹಸ್ಯಗಳು, ಅಡಕವಾಗಿ ಸರ್ವಸಿದ್ಧಿ ಪ್ರದಾಯಕವಾಗಿರುವುದು.

ಮಹಾಭಾರತದಲ್ಲಿ ಅತಿಥಿಯಾಗಿ ಬಂದಿದ್ದ ಅಶ್ವತ್ಥಾಮನು ಶ್ರೀಕೃಷ್ಣನನ್ನು, ಅವನ ಕೈಯ್ಯಲ್ಲಿದ್ದ ಶ್ರೀ ಸುದರ್ಶನ ಚಕ್ರವನ್ನು ತನಗೆ ಕೊಡುವಂತೆ ಕೇಳಿದ. ಕಾರಣ ಯುದ್ಧದಲ್ಲಿ ನಿನ್ನ ಮೇಲೆಯೇ ಅಚಕ್ರಾಸ್ತವನ್ನು ಪ್ರಯೋಗ ಮಾಡುವೆನು ಎಂಬುದಾಗಿ ವರವನ್ನು ಬೇಡಿದನು. ಶ್ರೀಕೃಷ್ಣನು ಆತನ ಅಪೇಕ್ಷೆಯಂತೆ, ಸಮ್ಮತಿಸಿ ತೆಗೆದುಕೊಳ್ಳುವಂತೆ ತಿಳಿಸಿದ. ಕೂಡಲೇ ಅಶ್ವತ್ಥಾಮನು ಸ್ವೀಕರಿಸಿ ಬಹಳವಾಗಿ ಎಷ್ಟೆಷ್ಟು ಪ್ರಯತ್ನಪಟ್ಟರೂ, ಸಾಹಸದಿಂದ ಬಲವಂತವಾಗಿ ಎತ್ತಲು ಹೋಗಿ ಮೂರ್ಛೆ ಬಿದ್ದು ಜ್ಞಾನಾ ಜ್ಞಾನವೇ ಇಲ್ಲದವನಾಗಿ ಬಿದ್ದುಬಿಟ್ಟನು. ಕೂಡಲೇ ಶ್ರೀಕೃಷ್ಣನೇ ಧಾವಿಸಿ ಚಿಕಿತ್ಸೆ, ಉಪಚಾರ ಮಾಡಿ, ಜ್ಞಾನವಿರಿಸಿ ಚೈತನ್ಯ ಬರುವಂತೆ ಮಾಡಿದನು. ಇದೇ ಶ್ರೀಕೃಷ್ಣನ ಚಕ್ರವೆಂಬುದೇ ಮನಸ್ತತ್ವವು.

ಶ್ರೀಮದ್ರಾಮಾಯಣದ ಉತ್ತರಕಾಂಡ (7ನೇ ಸರ್ಗ) ದಲ್ಲಿ ಮಾಲಿ ಎಂಬ ರಾಕ್ಷಸನ ತಲೆಯನ್ನು ಚಕ್ರಾಸ್ತ್ರವು ಕತ್ತರಿಸಿದ ಕಥೆ ಒಂದು ನಿರೂಪಣೆಯು. ಯುದ್ಧದ ಒಂದು ಸಂದರ್ಭದಲ್ಲಿ ಮಾಲಿಯು ಗರುಡನನ್ನು ಗದೆಯಿಂದ ಸದೆ ಬಡಿದು ಸೋಲಿಸಿದ. ಗರುಡನಿಗೆ ನೋವಾಯಿತು. ತನ್ನ ವಾಹನನೂ, ತನ್ನ ಪರಿಪಾಲಕರಲ್ಲೊಬ್ಬನೂ, ತನಗೆ ಸಹಾಯಕನಾಗಿ ವಾಹನನಾಗಿ ನೋವಾಗಿದ್ದುದನ್ನೂ ಕಂಡು ಮರುಗಿ ಕೂಡಲೇ ಹಿಮ್ಮೆಟ್ಟುವಂತಾಗಿ ಆ ಅವಸ್ಥೆಯಲ್ಲಿಯೇ ಮಾಲಿಯ ಮೇಲೆ ಚಕ್ರಾಸ್ತ್ರ ಪ್ರಯೋಗ ಮಾಡಿ ಶಿರಸ್ಸನ್ನು ಕತ್ತರಿಸಿ ಸಂಹರಿಸಿದನು. ದುರುದ್ದೇಶಪೂರ್ವಕವಾಗಿ ಗರುಡನನ್ನು ವಧಿಸಲೆಂದೇ ಗದಾಸ್ತ್ರ ಮಾಡಿದ.

ಅಭಿಮನ್ಯುವಿನ ಸಾವಿಗೆ ಕಾರಣನಾದ ಜಯದ್ರಥನನ್ನು ಸೂರ್ಯಾಸ್ತಮ ದೊಳಗಾಗಿ ಕೊಂದು ಬಿಡುವುದಾಗಿಯೂ ಇಲ್ಲದಿದ್ದರೆ ಅಗ್ನಿಪ್ರವೇಶ ಮಾಡುವುದಾಗಿ ಅರ್ಜುನನು ಶಪಥ ಮಾಡಿ, ಆ ವ್ಯಕ್ತಿಯನ್ನು ಕಾಣದೇ ಪರಿತಪಿಸುತ್ತಿದ್ದಾಗ, ಶ್ರೀಕೃಷ್ಣನು ಕೂಡಲೇ ಧಾವಿಸಿ ಸೂರ್ಯನನ್ನು ತನ್ನ ಶ್ರೀ ಸುದರ್ಶನ ಚಕ್ರಾಯುಧದಿಂದ ಮರೆಸಿ ಕತ್ತಲೇ ಮಾಡಿದಾಗ ಅವಿತುಕೊಂಡಿದ್ದ ಜಯದ್ರಥನು ಹೊರಗೆ ಬಂದು ಅರ್ಜುನನ ದೃಷ್ಟಿಗೆ ಬಿದ್ದಾಗ ಮರೆಯಾದ ಸೂರ್ಯನನ್ನು ಮತ್ತೆ ಚಕ್ರಾಯುಧದ ಮರೆಯಿಂದ ತೆರೆದು ನೋಡಿದಾಗ ಸೂರ್ಯಾಸ್ತಮಯ ವಾಗದಿದ್ದುದರಿಂದ ಕೂಡಲೇ ಅರ್ಜುನನು ಜಯದ್ರಥನನ್ನು ಕೊಂದು ಹಾಕಿದನು. ಅರ್ಜುನನ ಪ್ರತಿಜ್ಞೆ ಸಫಲವಾಗಿ ಚಕ್ರಾಯುಧವು ಸನ್ಮಂಗಳ ಉಂಟು ಮಾಡಲೆಂದು ಭಗವಂತನಾದ ಶ್ರೀಕೃಷ್ಣನಲ್ಲಿ ಪ್ರಾರ್ಥಿಸಿ ತನ್ನ ಸಂಕಷ್ಟಕ್ಕೆ ನೆರವಾದುದಕ್ಕೆ ಕೃತಜ್ಞನಾದನು. ಅರ್ಜುನನು ಶ್ರೀಕೃಷ್ಣನಲ್ಲಿಟ್ಟಿದ್ದ ಅಪರಿಮಿತವಾದ ಭಕ್ತಿಯು ತಿಳಿಯುವಂಥಾದುದು.

ಶ್ರೀ ಮಹಾವಿಷ್ಣುವಿನ ಶ್ರೀ ಹಸ್ತದಲ್ಲಿರುವುದೇ ಶ್ರೀ ಸುದರ್ಶನ ಚಕ್ರವು. ದುರ್ಗಾದೇವಿಯ ಹಸ್ತದಲ್ಲಿ ಚಕ್ರವಿದೆ. ಪರಮೇಶ್ವರನು ಶ್ರೀ ಮಹಾವಿಷ್ಣುವಿಗೆ ಶ್ರೀ ಚಕ್ರವನ್ನು ನೀಡಿದನು. ಉಗ್ರ ದೈತ್ಯರ ಸಂಹಾರಕ್ಕಾಗಿ ಈಶ್ವರನಿಗೂ, ದುರ್ಗಾದೇವಿಗೂ ಕೊಡಲ್ಪಟ್ಟಿತು. ಅದಕ್ಕಾಗಿಯೇ ಪರಮೇಶ್ವರನಿಂದ ಮತ್ತೆ ಹಿಂದಕ್ಕೆ ಶ್ರೀ ಮಹಾವಿಷ್ಣುವಿಗೆ ಕೊಡಲ್ಪಟ್ಟಿತು. ಆದ್ದರಿಂದ ಈಶ್ವರನಿಗೆ ಚಕ್ರದಾನಮೂರ್ತಿ ಎಂಬುದಾಗಿಯೂ, ದುರ್ಗಿಗೆ ಶೂಲೀ ಎಂಬುದಾಗಿಯೂ ಕರೆಯುವಂತಾಯ್ತು. ಅದಕ್ಕೇ ಶ್ರೀಮನ್ನಾರಾಯಣನನ್ನು ಚಕ್ರೀ, ಚಕ್ರಪಾಣೆ ಎಂಬಂತೆ ಸ್ತುತಿಸತೊಡಗಿದರು. ಶ್ರೀಮನ್ನಾರಾಯಣನು, ದಶಾವತಾರಗಳಲ್ಲಿ, ಕೃಷ್ಣಾವತಾರದಲ್ಲಿ ಶ್ರೀಕೃಷ್ಣನಿಗೆ ವಿಶೇಷಯುಕ್ತವಾಗಿ ಪ್ರಾಪ್ತವಾಗಿರುವ ದಿವ್ಯಾಯುಧವೇ, ಶ್ರೀಸುದರ್ಶನ ಚಕ್ರವಾಗಿ ಶ್ರೀಕೃಷ್ಣನನ್ನು ನೆನೆದ ಸ್ಮರಣ ಮಾತ್ರದಿಂದಲೇ ಜನ್ಮ ಪಾವನವಾಗಿ ಸಕಲಾಭೀಷ್ಟವನ್ನು ಹೊಂದಬಹುದಾಗಿದೆ.

ಶ್ರೀಮದ್ರಾಮಾಯಣದಲ್ಲಿ ರಾಮ, ಪರಶುರಾಮರ ಯುದ್ಧದಲ್ಲಿ ಪರಶುರಾಮನಿಂದ ಶ್ರೀರಾಮನು ಪಡೆದ ವೈಷ್ಣವ ಧನುಸ್ಸನ್ನು ಅಲ್ಲಿಗೆ ಯುದ್ಧವನ್ನು ನೋಡಲು ಬಂದಿದ್ದ ವರುಣನ ಕೈ ಸೇರಿ ಅವನಿಂದ ಅಗಸ್ತ್ಯ ಮಹರ್ಷಿಗೆ ಕೊಡಲ್ಪಟ್ಟು, ನಂತರದ ಕಾಲಗಳಲ್ಲಿ, ತನ್ನ ಆಶ್ರಮಕ್ಕೆ ಬಂದ ಶ್ರೀರಾಮನಿಗೆ ಅಗಸ್ತ್ಯ ಋಷಿಯಿಂದ ಕೊಡಲ್ಪಟ್ಟು, ಶ್ರೀರಾಮನೂ ಸಹಾ ಧನುಷ್ಪಾಣಿ, ಕೋದಂಡ ಮತ್ತು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಚಕ್ರಪಾಣಿಯಾಗಿದ್ದಾನೆ. ಶ್ರೀರಾಮನ ಚಕ್ರಪಾಣಿಯು ಅಗೋಚರರಾಗಿದ್ದು ಉಪಾಸಕರಿಗೆ ಮಾತ್ರಾ ಗೋಚರವು. ಇಂಥಹಾ ಮಹಾಮಹಿಮನಾದ ಶ್ರೀಸುದರ್ಶನನು ಎಲ್ಲರನ್ನೂ ಕಾಪಾಡಲಿ.

ಶ್ರೀ ಚಕ್ರವೆಂಬ ಈ ಸುದರ್ಶನ ಚಕ್ರೋಪಾಸನೆ ಎಂಬುದು ಒಂದು ರಹಸ್ಯ ವಿದ್ಯೆ. ಅದರ ತತ್ವಗಳನ್ನು ಆಚಾರ್ಯಮುಖೇನ ಉಪದೇಶದ ಮೂಲಕ ಮಾತ್ರ ತಿಳಿಯಲು ಸಾಧ್ಯವಾದರೂ ಆಚಾರ್ಯರ ಅಪ್ಪಣೆಗಳಿಗೆ ಬದ್ಧನಾಗಿ ನಿಯಮಾನುಸಾರ ಉಪಾಸನೆಯ ಪ್ರಕಾರಗಳು ಸತ್ಫಲೋದೇಶಕ್ಕಾಗಿ ಅನುಗುಣವಾಗಿ ಅಕ್ರಮಗಳಿಗೆ ಅವಕಾಶವಾಗದೆ ಬಹು ಜಾಗರೂಕನಾಗಿರಬೇಕು. ಕೃತ್ರಿಮ, ಮೋಹನ, ಸ್ಥಂಭನಾದಿ ವಾಮಾಚಾರಾದಿಗಳಿಗಾಗಿ ಭಗವತ್ಪ್ರೀತಿಗಾಗಿ ಎಂಬ ಉದ್ದೇಶ ನೆಪವಾಗಿ ಅನ್ಯತ್ರವಾಗಿ ಪ್ರಯೋಗಿಸಿದ್ದಲ್ಲಿ ಆಗಬಹುದಾದ ಪರಿಣಾಮ ಘೋರಯುಕ್ತವಾಗಿ ಪ್ರತಿಕೂಲ ಫಲ ಉಂಟಾಗಿ ಬಹಳವಾಗಿಯೇ ನಿರ್ನಾಮವಾಗಿ ತೊಂದರೆ ಗೀಡಾಗುವರು. ಆದ್ದರಿಂದ ಈ ವಿಷಯಗಳಲ್ಲಿ ಬಹು ಎಚ್ಚರವಾಗಿರಬೇಕು. ಅಕೃತ್ರಿಮಗಳಿಗೆ ಅಹಿಂಸಾಮಾರ್ಗಗಳಲ್ಲಿ ತೊಡಗಬಾರದು. ಭಗವಂತನ ಆರಾಧನೆ ಮಾತ್ರ ಸೀಮಿತವಾಗಿರಬೇಕು.

ಹೋಮಾದಿಗಳ ಆಚರಣೆಗಳಲ್ಲಿಯೂ ಸಹಾ ಬಹಳವಾಗಿ ಕಟ್ಟುನಿಟ್ಟಾಗಿ, ನಿಯಮ ಬದ್ಧವಾಗಿ ಫಲಾಪೇಕ್ಷೆಯ ಗುರಿ ಎಂಬುದಾಗಿ ತಿಳಿಯದೇ ಭಗವತ್ಪ್ರೀತಿಗಾಗಿ ಎಂಬ ಸದುದ್ದೇಶವಾಗಿದ್ದು "ಮಾಫಲೇಷುಕದಾಚನ" ಎಂಬಂತೆ ಶುದ್ಧ ಮನಸ್ಕನಾಗಿ ಆಚರಿಸಿದ್ದಲ್ಲಿ ಖಂಡಿತವಾಗಿಯೂ ಉದ್ದೇಶ ಫಲಕ್ಕಿಂತಲೂ ಅತ್ಯುತ್ತಮ ಫಲ ದೋರಕುವುದು ಮತ್ತು ಶ್ರೇಯಃಪದವಾಗುವುದು.

ಈ ಸುದರ್ಶನ ಹೋಮಕ್ಕೆ ಸಂಬಂಧ ಪಟ್ಟಂತೆ ಅನೇಕರು ತಮ್ಮ ಸ್ವಂತ ವಿವೇಚನೆಗಳಂತೆ ನಾನಾ ರೀತಿಯಲ್ಲಿ ಆಚರಿಸುವುದನ್ನೂ ತಿಳಿಯಬಹುದಾಗಿದೆ. ಮುಖ್ಯವಾಗಿ ದೇವಾಲಯಗಳಲ್ಲಿ, ಚರಬಿಂಬ, ಸ್ಥಿರಬಿಂಬಗಳು ಪ್ರತಿಷ್ಠೆಯಾಗುವಾಗ, ಉತ್ತರ ಅಥವಾ ಈಶಾನ್ಯ ಭಾಗದಲ್ಲಿ ಹೋಮಾದಿಗಳಿಗಾಗಿಯೇ ಯಾಗಶಾಲೆ ಎಂಬುದಾಗಿ ಕೊಠಡಿ ನಿರ್ಮಿಸಿ ಪ್ರತಿಷ್ಠಿಸುವುದಾಗಿದೆ. ಇದಕ್ಕೆ ಯಾಗಶಾಲೆ ಎಂಬುದಾಗಿ ಹೇಳಲಾಗಿದೆ. ಇಲ್ಲಿ ದೇವಾಲಯಕ್ಕೆ ಸಂಬಂಧಪಟ್ಟಂತೆ, ಬ್ರಹ್ಮೋತ್ಸವ, ಪವಿತ್ರೋತ್ಸವ ಹಾಗೂ ಸುದರ್ಶನ ಹೋಮಕ್ಕಾಗಿಯೇ ಆಕಾರ ಮತ್ತು ಆಕೃತಿಗಳ ರೂಪವಾಗಿ ಹೋಮಕುಂಡಗಳನ್ನು ನಿರ್ಮಿಸಿ ಆಚರಿಸುವಂತಾದವುಗಳು. ಆಗಮ ರೀತ್ಯಾ ಅನುಸರಿಸುವಂತಾದ ಕಾರ್ಯಗಳಲ್ಲಿ ಶ್ರೀ ಸುದರ್ಶನನೇ ಪ್ರಧಾನನು. ವಾಸುದೇವ ಪುಣ್ಯಾಹ, ಸಂಪ್ರೋಕ್ಷಣೆ, ಮುಂತಾದವುಗಳಲ್ಲಿ ಸುದರ್ಶನನ ಉಪಾಸನೆಯೇ ಮುಖ್ಯವಾಗಿರುತ್ತೆ. ಇವೆಲ್ಲವೂ ದೇವಾಲಯಕ್ಕೆ ಸಂಬಂಧಪಟ್ಟಂತೆ ಆಚರಿಸಬೇಕಾದ ಸುದರ್ಶನ ಹೋಮ ಇತ್ಯಾದಿಗಳು. ಇಲ್ಲಿ ಆಗಮ ದೀಕ್ಷೆ ಹೊಂದಿರುವವರು ಮಾತ್ರಾ ಪ್ರವೇಶವು. ಅವರುಗಳೂ ಸಹಾ ಶುದ್ಧರಾಗಿ, ನಿತ್ಯ ಕರ್ಮಾನುಷ್ಠಾನವುಳ್ಳವರಾಗಿ ಆಚರಿಸಬೇಕಾದ ನಿಯಮವು. ಆಗಮ ಪ್ರಮಾಣದಂತೆ ಯರೀತ್ಯಾ ಅನುಸರಿಸಬೇಕಾದ ಸುದರ್ಶನ ಹೋಮವು.

ಅಲ್ಲದೇ ಗೃಹಗಳಲ್ಲಿ ಶ್ರೀ ಮಹಾಸುದರ್ಶನ ಹೋಮವನ್ನು ಆಚರಿಸುವಂಥಹುದು ಮತ್ತೊಂದು ವಿಶೇಷ ಯುಕ್ತವಾಗಿದೆ. ತಾತ್ಕಾಲಿಕವಾಗಿ ಕುಂಭಗಳಲ್ಲಿ ಆವಾಹಿಸಿ, ವೇದ ಮಂತ್ರ, ಜಪಾದಿಗಳ ಮೂಲಕ ವಿಧಿ ವಿನ್ಯಾಸಗಳೊಡನೆ ಋತ್ವಿಜರ ಮೂಲಕ ಆಚರಣೆಯು ಭಗವತ್ಪ್ರೀತಿಗಾಗಿ ಯಜಮಾನನ ಹಾಗೂ ಕುಟುಂಬ ಪರಿವಾರಗಳು ಕ್ಷೇಮ ಸ್ಥೈರ್ಯ, ಆಯುರಾರೋಗ್ಯಾದಿಗಳಿಗಾಗಿ, ಗೋಚಾರದಲ್ಲಿನ ತಾಪತ್ರಯ ನಿವಾರಣೆಗಾಗಿ ಭಗವಂತನಲ್ಲಿ ಆಚರಿಸುವ ಶ್ರೀ ಸುದರ್ಶನ ಹೋಮ ಪ್ರಕ್ರಿಯೆಯು, ಗೃಹಗಳಲ್ಲಿ ಆಚರಣೆಯ ವಿಷಯಗಳಲ್ಲಿ ಗಮನಿಸಬೇಕಾದ ಕೆಲವು ರೀತಿ ನೀತಿ ನಿಯಮಗಳಿವೆ. ಗೃಹ ಯಜಮಾನನು ಆಚರಿಸಬೇಕಾದ, ಆಚಾರ್ಯರನ್ನೂ ಪ್ರಾರ್ಥಿಸಿ ಅವರ ಮೂಲಕ ಆಚರಿಸಬೇಕು. ಆಚಾರ್ಯನು, ನಿಷ್ಣಾವಂತನಾಗಿದ್ದು, ಶಾಸ್ತ್ರಾದಿ ಮಂತ್ರ, ಜಪ ಹೊಂದಿ, ಸಿದ್ಧಿ ಹೊಂದಿ ಪ್ರಯೋಗ ಪರಿಣಿತನಾಗಿ ಉಕ್ತ ವಿಧಿ ವಿನ್ಯಾಸಗಳೊಡನೆ ಆಚರಿಸುವಂತಾಗಬೇಕು. ಯಜಮಾನನಿಂದ ಸಂಕಲ್ಪಪೂರ್ವಕವಾಗಿ ತಾನು ಅವರ ಪರವಾಗಿ ಅಧಿಕಾರ ಹೊಂದಬೇಕಾದುದಾಗಿದೆ. ಋತ್ವಿಜರೂ ಸಹಾ ನಿಷ್ಣಾವಂತರಾಗಿ ಮಂತ್ರಾದಿಗಳನ್ನು ಸ್ಫುಟವಾಗಿ ಉಚ್ಚರಿಸುವಂತಾಗಿ, ಗೃಹ ಯಜಮಾನನಿಗೆ ಮತ್ತು ಅವನ ಕುಟುಂಬಕ್ಕೆ ಶ್ರೇಯಃಪ್ರದರಾಗಿ ಅನುಗ್ರಹಿಸುವಂತಹವರಾಗಿರಬೇಕು. "ಮಂತ್ರಂ ಯತ್ನೇನ ಗೋಪಯೇತ್" ಎಂಬಂತೆ ಮಂತ್ರಗಳೆಲ್ಲವೂ ರಹಸ್ಯಗಳಾಗಿದ್ದು ಗೃಹದ ಮಟ್ಟಿಗೆ ಕೇಳುವಂತಾಗಿದ್ದು ಹೊರಗಡೆ ಧ್ವನಿ ಯಂತ್ರಾದಿಗಳ ಮೂಲಕ ಕೇಳಿಸುವಂಥಾದವುಗಳು ಶಾಸ್ತ್ರ ನಿಷೇಧವು. ಮೊದಲು ಶುದ್ಧಿ ಪುಣ್ಯಾಹಗಳಿಂದ, ವಾಸ್ತುಮಂತ್ರಾದಿಗಳಿಂದ ಆವರಣವನ್ನು ಶುದ್ಧಿಗೊಳಿಸಬೇಕು. ವ್ರೀಹಿ, ತಂಡುಲಮಧ್ಯೇ, ಎರಡು ಕುಂಭಗಳನ್ನು ಸ್ಥಾಪಿಸುವ ಮೂಲಕ, ಮೊದಲನೆಯ ಕಲಶದಲ್ಲಿ ಶ್ರೀ ಲಕ್ಷ್ಮೀನಾರಾಯಣ ಮತ್ತು ಮಹಾಲಕ್ಷ್ಮೀ ಮತ್ತು ಎರಡನೆಯ ಕಲಶಗಳಲ್ಲಿ ಶ್ರೀ ಮಹಾಸುದರ್ಶನ ಮತ್ತು ಸುದರ್ಶನ ನಾರಸಿಂಹನನ್ನು ಆವಾಹಿಸಬೇಕು. ಕೂರ್ಚಗಳಲ್ಲಿ, ಚತುರ್ವ್ಯೂಹ ಗಳವರಾದ ಶ್ರೀ ಭಗವತ್ ದಿವ್ಯಪರಿಪಾಲಕರಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧರವರನ್ನು ಮತ್ತು ಕೂರ್ಚಗಳಲ್ಲಿ ಹಾಗೆಯೇ ಕೇಶವಾದಿ ದ್ವಾದಶ ನಾಮಾಂಕಿತ ಶ್ರೀ ಭಗವದ್ವಿವ್ಯ ಪರಿವಾರರನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆವಾಹಿಸಬೇಕು. ಕುಂಭದ ಉತ್ತರ ಈಶಾನ್ಯ ಭಾಗದಲ್ಲಿ ತಂಡುಲಮಧ್ಯೆ ಶ್ರೀ ಚಕ್ರೋಪಾಸನೆಯ ಅಂಗವಾಗಿ ಶ್ರೀ ಚಕ್ರವನ್ನು ಚಿತ್ರಿಸಿ, ಶ್ರೀ ಪುರುಷಸೂಕ್ತ ಪ್ರಕಾರವಾಗಿ ಷೋಡಶೋಪಚಾರಗಳಿಂದ ಆವಾಹಿಸಿ, ಆರಾಧಿಸಬೇಕು. ತತ್ಪತ್ ದೇವತೆಗಳ, ಆವಾಹನೆ, ಮಂತ್ರಾದಿಗಳು ಉಕ್ತವಾಗಿ ಸೀಮಿತವಾಗಿದ್ದು, ಆಚಾರ್ಯ ಸ್ಥಾನದಲ್ಲಿರುವವರು ಆವಾಹಿಸಿ ದಿಗ್ಬಂಧನ ವಗೈರೇ ಆಚರಿಸುವರು. ನಿಯಮದ ಪ್ರಕಾರ ಮಾತುಕತೆಗಳಲ್ಲಿ ಕೂರದೆ ನೇರ ಹೋಮಾದಿ ಕಾರ್ಯಗಳಲ್ಲಿ ತೊಡಗಬೇಕು ಮತ್ತು ನಿಯಮವೂ ಹೌದು.

ವೇದಮಂತ್ರ ಪಾರಾಯಣಗಳು ಮತ್ತು ಜಪಗಳು ಶ್ರೀ ಮಹಾಸುದರ್ಶನ ಹೋಮದ ಅಂಗವಾಗಿ ಅತ್ಯವಶ್ಯಕವು. ಎರಡು ದಿವಸಗಳ ಆರಾಧನಾ ಕಾರ್ಯಕ್ರಮವನ್ನಿಟ್ಟು, ಮೊದಲನೆಯ ದಿವಸ, ಅಚ್ಛಿದ್ರ, ಅಶ್ವಮೇಧ ಪಾರಾಯಣವು, ಮಾರನೆಯ ದಿವಸ ಅರುಣ, ಕಾಠಕ, ಉಪನಿಷತ್, ಪಾರಾಯಣವು ಮತ್ತು ಉಪದೇಶ ಹೊಂದಿರುವ ಋತ್ವಿಕರಲ್ಲಿ ವಿಷ್ಣುಪಿಸಿ, ದ್ವಾದಶಾಕ್ಷರೀ, ಅಷ್ಟಾಕ್ಷರಿ, ಷಡಕ್ಷರಿ, ನೃಸಿಂಹಾಕ್ಷರಿ, ಹಯಗ್ರೀವಾಕ್ಷರೀ, ಸುದರ್ಶನಾಕ್ಷರಿ ಮತ್ತು ಮಹಾಲಕ್ಷ್ಮೀ ಜಪಗಳು ಅತ್ಯವಶ್ಯಕವಾಗಿ ಯಜಮಾನನ ಇಷ್ಟಾರ್ಥಗಳಿಗೆ ಪುಣ್ಯಪ್ರದವಾಗುವಂಥಾಗುವುವು. ಜಪ ಆಚರಿಸಿದವರು ಯಜಮಾನನ ಮತ್ತು ಕುಟುಂಬದ ಶ್ರೇಯಸ್ಸಿಗಾಗಿ ಹೋಮಾಂತ್ಯ ಭಾಗದಲ್ಲಿ ಶುಭಕ್ಷೀರ ತರ್ಪಣವನ್ನೂ ನೀಡುವರು. ವೇದ ಪಾರಾಯಣ ಮತ್ತು ಜಪಗಳು ಅತ್ಯವಶ್ಯವುಗಳು.

ಹೋಮಾದಿಗಳಿಗಾಗಿ, ವೈಷ್ಣವೀಕರಣ ಪೂರ್ವಕವಾಗಿ, ವೈಷ್ಣವಾಗ್ನಿಯಲ್ಲಿ ಚರುಕರ್ಮ ಪ್ರಯೋಗದಂತೆ ವಿಧಿ ವಿನ್ಯಾಸ ಪೂರ್ವಕವಾಗಿ, ಚರು, ದ್ರವ್ಯ, ಸಮಿತ್ತುಗಳ ಮೂಲಕ ಹೋಮಾದಿಗಳನ್ನು ಆಚರಿಸಿ ಪೂರ್ಣಾಹುತಿಯೊಂದಿಗೆ ಗೃಹಗಳಲ್ಲಿ ಆಚರಿಸತಕ್ಕ ಶ್ರೀಮಹಾಸುದರ್ಶನಹೋಮಪ್ರಕ್ರಿಯೆಯು ಭಗತ್ಪ್ರೀತಿಯುಕ್ತವಾದುದು. ಸತ್ಫಲ ನೀಡುವಂತಾಗುವುವು. ಗೃಹಗಳಲ್ಲಿ ಮಂಗಳಪ್ರದವಾಗಿ ದುಷ್ಟಾರಿಷ್ಟ ಪರಿಹಾರವಾಗಿ ಕ್ಷೇಮಾದಿಗಳು ಉಂಟಾಗಿ ಉತ್ತೊರೋತ್ತಾರಾಭಿವೃದ್ಧಿಗಳಾಗುವುವು. ಇವು ನಿಶ್ಚಯವು.

ಪರಮಭಾಗವತೋತ್ತಮರು, ವೇದಾಧ್ಯಯನ ಸಂಪನ್ನರು ಶಾಸ್ತ್ರ ವಿಚಕ್ಷಣರು, ಪೂರ್ಣ ವಿದ್ಯಾವಂತರು ಹಾಗೂ ಆಚಾರ್ಯ ಶ್ರೇಷ್ಠವರ್ಯರೊಬ್ಬರು ತಮ್ಮ ಕಾಲಕ್ಷೇಪದ ಸಂದರ್ಭದಲ್ಲಿ ಶ್ರೀ ಮಹಾಸುದರ್ಶನ ಮತ್ತು ಶ್ರೀ ಸುದರ್ಶನ ನಾರಸಿಂಹನ ಬಗ್ಗೆ ಪುರಾಣಾಂತರ್ಗತ ವಿವರಣೆ ನೀಡಿದರು. ಈ ವಿವರಣೆಯ ಅಂಶಗಳನ್ನು ಈ ಮೂಲಕ ತಿಳಿಯಪಡಿಸಲಿಚ್ಛಿಸುತ್ತೇನೆ ಮತ್ತು ವಾಸ್ತವಾಂಶವೆಂಬುದಾಗಿ ಹೌದು ಎಂದು ತಿಳಿಯುತ್ತೇನೆ. ದುಷ್ಟಶಿಕ್ಷಣ,ಶಿಷ್ಟ ಪರಿಪಾಲನೆಯ ಧ್ಯೇಯವು ಭಗವಂತನ ನಾನಾವತಾರವಾದುವುಗಳು.

"ಚಕ್ರಂ, ಕುಂತಂ, ಕೃಪಾಣಂ, ಪರಶು ಹುತ ವಹೌ, ಅಂಕುಶಂ ದಂಡಶಕ್ತಿಃ"

ಎಂಬಂತೆ ಶ್ರೀ ಸುದರ್ಶನನ ಬಲ ಭಾಗದ ಒಂದೊಂದು ಕೈಯ್ಯಲ್ಲಿ, ಚಕ್ರ, ಈಟಿ, ಶಕ್ತಿ, ಕೊಡಲಿ, ಅಗ್ನಿ, ಅಂಕುಶ, ಕೋಲು, ವೇಲಾಯುಧ ಎಂಬ ಎಂಟು ಆಯುಧಗಳು ಧಾರಣೆಯಾಗಿರುವುವು.

"ಶಂಖಿಂ, ಕೋದಂಡ ಪಾಶೌ, ಹಲ, ಮುಸಲ, ಗದಾ, ವಜ್ರ, ಶೂಲಾಂಶ, ಹೇತೀನ್"

ಹೀಗೆಯೇ ಶ್ರೀಸುದರ್ಶನನ ಎಡಭಾಗದಲ್ಲಿ ಒಂದೊಂದು ಕೈಯಲ್ಲೂ,

ಶಂಖ, ಬಿಲ್ಲು, ಹಗ್ಗ, ನೇಗಿಲು, ಒನಕೆ, ಗದೆ, ವಜ್ರಾಯುಧ, ಶೂಲ ಎಂಬ ಎಂಟು ಆಯುಧಗಳನ್ನಾಧರಿಸಿ ಅತುಲ ಬಲ ಪರಾಕ್ರಮವುಳ್ಳ ಶ್ರೀಸುದರ್ಶನನು ಧರ್ಮಸಂಸ್ಥಾಪನಾರ್ಥವಾಗಿ ದುಷ್ಟ, ನಿಗ್ರಹ ಶಿಷ್ಟ, ರಕ್ಷಣೆಗಾಗಿ ವಿಜೃಂಭಿಸುತ್ತಿರುವನು.

ಹೀಗಿರುವಲ್ಲಿ ಶ್ರೀನಾರಸಿಂಹನು ಚತುಶ್ಚಕ್ರಧಾರಿಯಾಗಿ ದುಷ್ಟನಿಗ್ರಹ ಶಿಷ್ಟ, ರಕ್ಷಣೆಗಾಗಿ ಶ್ರೀ ಸುದರ್ಶನ ಹಿಂಭಾಗದಲ್ಲಿ ಅಗೋಚರನಾಗಿ, ಲಕ್ಷ್ಮೀರಹಿತನಾಗಿ ಯೋಗಪೀಠದಲ್ಲಿ ಆಸೀನನಾಗಿರುವುದು ಭಗವನ್ನಿಯಾಮಕವು ಮತ್ತು ಧರ್ಮ ಸಂರಕ್ಷಣಾರ್ಥವಾಗಿ ಬಹಳ ಸೂಕ್ಷ್ಮವಾದುದು. ಶ್ರೀ ಸುದರ್ಶನನೇ ಷೋಡಶಾಯುಧಗಳನ್ನು ಧರಿಸಿ ಬಹು ಧರ್ಮ ಪರಾಕ್ರಮಿಯಾಗಿದ್ದು ಶ್ರೀ ನಾರಸಿಂಹನು, ಅಭಯ ಹಸ್ತ, ಶಂಖ, ಮಹಾಲಕ್ಷ್ಮಿಯ ಆಲಿಂಗನಾಹಸ್ತ ಬಿಟ್ಟು, ಚತುರ್ಬಾಹುಗಳಲ್ಲೂ "ಚತುಶ್ಚಕ್ರಂ ನಮಸ್ಯಾಮಿ" ಎಂಬಂತೆ ಇರುವಿಕೆಯನ್ನು ಅತ್ಯವಶ್ಯಕವಾಗಿ ತಿಳಿಯಬೇಕಾದುದು ಗೂಢ ವಿಷಯವು, ಭಗವದ್ವಿಷಯವು. ಭಗವಂತನ ಲೀಲೆಯು ಇಂಥಹಾ ಭಗದ್ವಿಷಯ ತಿಳಿಯಬೇಕಾದರೆ ಆಚಾರ್ಯರಲ್ಲಿ ಪ್ರಾರ್ಥಿಸಿ ಕಾಲಕ್ಷೇಪಾದಿಗಳ ಮೂಲಕ ತಿಳಿಯಬೇಕು. ರಹಸ್ಯ ವಿಷಯಗಳು ಗುರು ಮುಖೇನ ತಿಳಿಯುವಂಥಾದವುಗಳು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವೈಕುಂಠದಲ್ಲಿ ಶ್ರೀ ಮಹಾವಿಷ್ಣುವಿನ ಆಪ್ತದ್ವಾರಪಾಲಕರಾಗಿದ್ದ ಜಯ, ವಿಜಯರು, ಶಾಪಗ್ರಸ್ತರಾಗಿ, ಹಿರಣ್ಯಾಕ್ಷ, ಹಿರಣ್ಯಕಶಿಪು, ಎಂಬ ಸಹೋದರರಾಗಿ ಮಹಾವೀರ ರಾಕ್ಷಸರಾಗಿ, ಶ್ರೀ ವಿಷ್ಣುವನ್ನೇ ವೈರಿಯಂತೆ ಅವತರಿಸಿ ಅಧರ್ಮ ಕೃತ್ಯಗಳಲ್ಲಿ ತೊಡಗಿ ಅವರುಗಳ ಉಪಟಳ ಹೇಳತೀರದಾಗಿ ಪ್ರಜೆಗಳೆಲ್ಲರೂ ಬಹಳ ಹಿಂಸೆಗೆ ಗುರಿಯಾದರು. ಭಗವಂತನು ವರಾಹರೂಪ ತಾಳಿ ಹಿರಣ್ಯಾಕ್ಷನೆಂಬ ರಾಕ್ಷಸನನ್ನು ಸಂಹರಿಸಿದನು. ತನ್ನ ಸಹೋದರನನ್ನು ಸಂಹರಿಸುವುದನ್ನು ಕಂಡು ಶ್ರೀ ಮಹಾವಿಷ್ಣುವನ್ನೇ ಕೊಲ್ಲುವಂತೆ ಈಶ್ವರನನ್ನು ಕುರಿತು ತಪಸ್ಸನ್ನಾಚರಿಸಿ ವರ ಪಡೆದು ದುರ್ಮಾರ್ಗಿಯಾಗಿ ತನ್ನ ಮಗನಿಗೇ ನಾನಾ ವಿಧವಾದ ಉಪಟಳ ಕೊಟ್ಟು ತನ್ನ ಮಗನಾದ ಪ್ರಹ್ಲಾದನನ್ನೇ ಗದೆ ತೆಗೆದುಕೊಂಡು ವಧಿಸತೊಡಗಿದಾಗ ನರಸಿಂಹಾವತಾರ ತಾಳಿ ಹಿರಣ್ಯಕಶಿಪುವನ್ನು ವಧಿಸಿ ಧರ್ಮ ಸಂಸ್ಥಾಪನೆಗೆ ಕಾರಣನಾದನು. ಇವಿಷ್ಟೂ ಭಗವಂತನ ವಿರೋಧಿಗಳಾಗಿ ಅಧರ್ಮಿಗಳಾಗಿ ಲೋಕ ಕಂಟಕರಾಗಿದ್ದ ಹಿರಣ್ಯಾಕ್ಷ, ಹಿರಣ್ಯಕಶಿಪುರವರು ಸಂಹಾರವಾದುದನ್ನು ತಿಳಿಯಬಹುದಾಗಿದೆ.

ಹೀಗಿರುವಲ್ಲಿ ಹೀಗೆಯೇ ಲೋಕ ಕಂಟಕನಾಗಿ ಅಧರ್ಮಿಯಾಗಿ ಮೆರೆದಾಡುತ್ತಾ, ಹಿರಣ್ಯಾಕ್ಷ, ಹಿರಣ್ಯಕಶಿಪುವಿನ, ತೀರ ಸಂಬಂಧಿಕನಾದ ಹಿರಣ್ಯಧ್ವಜ ಎಂಬ ರಾಕ್ಷಸನು ತನ್ನ ಸಂಬಂಧಿಗಳಿಗಾದ ವಧೆಯಿಂದ ಬಹಳವಾಗಿ ಸಂಕಟಪಟ್ಟು, ಮರುಗಿ ನಮ್ಮ ವಂಶಜರಿಗೆ ಈ ರೀತಿಯಾಯ್ತಲ್ಲಾ ಎಂಬುದಾಗಿ, ತೀವ್ರವಾದ ತಪಸ್ಸನ್ನಾಚರಿಸಿ ವಿಷ್ಣುಕುಲವನ್ನೇ ನಾಶಪಡಿಸುವಂತೆ ದುರಾಲೋಚನೆ ಮಾಡಿ, ಸಾಕ್ಷಾತ್ ಪರಮೇಶ್ವರನನ್ನೇ ನೇರವಾಗಿ ಕುರಿತು ನಿರಾಹಾರಾದಿಗಳಿಂದ, ಕಾಲಂಗುಷ್ಠ ಬೆರಳ ಮೇಲೇ ಒಂದೇ ಕಾಲಿನಲ್ಲಿ ನಿಂತು ತೀವ್ರವಾದ ತಪಸ್ಸನ್ನಾಚರಿಸಿದ. ಹಲವು ವರ್ಷಗಳಾದ ಮೇಲೆ ವಿಧಿಯಿಲ್ಲದೆ ಪರಮೇಶ್ವರನಿಂದ ತನ್ನ ಇಚ್ಛೆಯಂತೆ ವರವನ್ನು ಪಡೆದು ವಿಷ್ಣುವನ್ನು ನಾನಾ ಕಡೆಗಳಲ್ಲೆಲ್ಲಾ ಹುಡುಕಿ ಕಡೆಯಲ್ಲಿ ಷೋಡಶಾಯುಧ ಧರಿಸಿ ಇಷ್ಟೊಂದು ಪ್ರಜ್ವಲನಾಗಿರಬೇಕಾದರೆ, ತನ್ನ ತಪಸ್ಸಿಗೆ ಈ ರೀತಿಯಾಗಿ ಅವತರಿಸಿರಬಹುದೆಂದು ತಿಳಿದವನಾಗಿ ನೇರವಾಗಿ ಬಂದು ಎದಿರು ನಿಂತು ಘರ್ಜಿಸುತ್ತಾ ತನ್ನ ಸಮೀಪ ಸಂಬಂಧಿಗಳಾದ ಹಿರಣ್ಯಕಶಿಪು, ಹಿರಣ್ಯಾಕ್ಷರಿಂದ ನಿನ್ನ ಸಂಹಾರ ಆಗದೇ ಇರುವುದನ್ನು ಈಗ ಸಂಹಾರ ಮಾಡಿ ತೋರಿಸುತ್ತೇನೆ, ಸರಿಯಾದ ಉಗ್ರ ತಪಸ್ಸನ್ನಾಚರಿಸಿ ವರ ಪಡೆದು ಬಂದಿದ್ದೇನೆ. ಈಗ ನನ್ನ ಪರಾಕ್ರಮವನ್ನು ತೋರಿಸುತ್ತೇನೆ ನೋಡು. ಈಗ ನೀನು ಹೇಗೆ ತಪ್ಪಿಸಿಕೊಳ್ಳುತ್ತೀಯೇ ಎಂಬುದಾಗಿ ಹೇಳುತ್ತಿರಲು, ಶ್ರೀ ಸುದರ್ಶನನು ಈ ಸಂದರ್ಭದಲ್ಲಿ ಏನೂ ತೋಚದೇ ತಕ್ಷಣದಲ್ಲಿಯೇ ಶ್ರೀ ನಾರಸಿಂಹನನ್ನು ಧ್ಯಾನಿಸಿ ಪ್ರಾರ್ಥಿಸಿದನಂತೆ. ಕೂಡಲೇ ಶ್ರೀ ನಾರಸಿಂಹನು, ಶ್ರೀ ಸುದರ್ಶನದ ಅಪೇಕ್ಷೆಯಂತೆ ನೆರವಾಗಲು ತನ್ನ ಮಡದಿಯಾದ ಶ್ರೀ ಮಹಾಲಕ್ಷ್ಮಿಯನ್ನೂ ಬಿಟ್ಟು, ಶಂಖವನ್ನೂ ತೆಗೆದುಕೊಳ್ಳದೇ ನಾಲ್ಕು ಕೈಗಳಲ್ಲೂ ಚಕ್ರವನ್ನು ಧರಿಸಿ ಪ್ರತ್ಯಕ್ಷನಾಗಿ, ಅಗೋಚರನಾಗಿ ಶ್ರೀ ಸುದರ್ಶನನಿಗೆ ಮಾತ್ರಾ ಗೊತ್ತಾಗುವಂತೆ ಬಂದು ನಿಂತು, ಈ ಸಂದರ್ಭದಲ್ಲಿ ನಾನು ನಿನ್ನ ಹಿಂಭಾಗದಲ್ಲಿಯೇ ಯೋಗಾಸನದಲ್ಲಿ ಚತುಶ್ಚಕ್ರಗಳನ್ನೂ ಧರಿಸಿ ಕುಳಿತುಕೊಂಡಿದ್ದೇನೆ. ರಾಕ್ಷಸನಾದ ಹಿರಣ್ಯಧ್ವಜನಿಗೆ, ನಿನ್ನ ಇಷ್ಟದಂತೆ, ಮುಂದುವರೆಯಬಹುದು ಆದರೇ ಮಾತ್ರಾ ನೀನು ನ್ಯಾಯ ನಿಯಮದ ಪ್ರಕಾರ ನನ್ನನ್ನು ಪ್ರದಕ್ಷಿಣವಾಗಿ ಬಂದು, ಮುಂದೆ ನಿಂತು ನಿನ್ನ ಪರಾಕ್ರಮವನ್ನು, ತೋರ್ಪಡಿಸು ಎಂಬುದಾಗಿ ತಿಳಿಸಿದ ಕೂಡಲೇ, ಪ್ರದಕ್ಷಿಣವಾಗಿ ಬರಲು ಸುದರ್ಶನನು ಸೂಚಿಸಿದಾಗ ಅದರಂತೆ ಹಿರಣ್ಯಧ್ವಜನು ಬಂದಾಗ ಶ್ರೀ ನಾರಸಿಂಹನು ತಕ್ಷಣದಲ್ಲಿಯೇ ತನ್ನ ಒಂದು ಚಕ್ರದಿಂದಲೇ ಸಂಹರಿಸಿ ವಧೆಗೈದನು. ಇದೇ ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನೆಯಾದ ಭಗವಂತನ ಲೀಲೆಯು. ಆದ್ದರಿಂದ ಶ್ರೀ ಸುದರ್ಶನನ ಹಿಂಭಾಗದಲ್ಲಿ ಯೋಗಾರೂಢನಾಗಿ ಚತುಶ್ಚಕ್ರಗಳಿಂದ ಕೂಡಿ ಆಸೀನನಾದ ಭಗವಂತನು ಸುದರ್ಶನ ನಾರಸಿಂಹನಾದುದನ್ನು ನಾವು ದರ್ಶನ ಪಡೆಯಬಹುದಾಗಿದೆ.

ಷೋಡಶಧಾರಿಯಾಗಿ ವಿವಿಧವಾದ ಹದಿನಾರು ಆಯುಧಗಳಿಂದ ಕೂಡಿ ಮಹಾಮಹಿಮನಾಗಿ ಲೋಕ ರಕ್ಷಣೆಯಾಗಿರುವ ಭಗವಂತನಾದ ನೀನು ಮೊದಲು ದರ್ಶನ ಕೊಡು ನಂತರ ಹಿಂಭಾಗದಲ್ಲಿ ನನ್ನನ್ನು ದರ್ಶನ ಪಡೆದು ಉತ್ತಮವಾದ ಭಗವದ್ದರ್ಶನ ಎಲ್ಲರೂ ಪಡೆಯಲಿ. ಇಷ್ಟಾರ್ಥಗಳೆಲ್ಲಾ ಕೈಗೂಡಲಿ. ಎಂಬುದಾಗಿ ಶ್ರೀ ಸುದರ್ಶನನ ಹಿಂಭಾಗದಲ್ಲಿದ್ದು ಎಲ್ಲರೂ ಭಗವದ್ದರ್ಶನ ಪಡೆಯಬಹುದಾಗಿರುವುದು.

ನಾರಸಿಂಹಂ ಚತುರ್ಬಾಹುಂ ಚತುಶ್ಚಕ್ರಧರಂಪರಂ |
ಸಮಾಸೀನಂ ಸ್ಥಿತಮಪಿಭಯಸ್ಯಾಯತಾಂ ತತ್ವಮೇಕಂ ||
ಪಶ್ಚಾತ್ಪೂರ್ವತ್ರಭಾಗೇ ಸ್ಫುಟ ನರಹರಿ ತಾಮಾನುಷಂಜಾನುಷಾದ್ಯಃ |
ಚಕ್ರಾಧೀಶೋಭಿನಾದನ್ ಪ್ರದಿಶತು ಸದೃಶೀಮುತ್ತಮ ಶ್ಲೋಕತಾಂವಃ ||

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇಂಥಹಾ ಪರಮಪವಿತ್ರ ಸನ್ನಿವೇಶದಲ್ಲಿ ಶ್ರೀ ಸುದರ್ಶನನಾರಸಿಂಹ ಭಗವಂತನು ನಮ್ಮಗಳ ಕಷ್ಟನಷ್ಟ ತೊಂದರೆಗಳನ್ನೂ ಪಾರುಮಾಡಿ ಕಾಪಾಡಲಿ. ಇದಕ್ಕಾಗಿ ಭಗವಂತನನ್ನು ಆಶ್ರಯಿಸೋಣ. ಭಗವಂತನು ಹಿರಣ್ಯಕಶಿಪುವನ್ನು ಸಂಹರಿಸಲು ನರಸಿಂಹಾವತಾರ ತಾಳಿ ವಧಿಸಿರುವುದನ್ನು ತಿಳಿದು ಚತುಶ್ಚಕ್ರಧಾರಿಯಾದ ನರಸಿಂಹರೂಪವನ್ನು ನೋಡಿದೊಡನೆಯೇ ಹೆದರಿ ಪಲಾಯನ ಮಾಡಿ ಓಡಿ ಹೋಗಬಹುದೆಂಬುದಾಗಿ ಭಾವಿಸಿ ಅಗೋಚರನಾಗಿ ಶ್ರೀಸುದರ್ಶನನಿಗೆ ಮಾತ್ರಾ ಕಾಣುವಂತಿದ್ದು, ಹಿಂಭಾಗದಲ್ಲಿ ಚತುಶ್ಚಕ್ರಗಳಿಂದ ಕೂಡಿ ಯೋಗಪೀಠದಲ್ಲಿ ಆಸೀನನಾಗಿ ತನ್ನನ್ನು ಪ್ರದಕ್ಷಿಣ ಬರುವಂತೆ ಸೂಚಿಸಿದ್ದು ಭಗವಂತನ ಅವತಾರವಾದ ಭಗವದ್ವಿಷಯವು ಶ್ರೀ ಸುದರ್ಶನ ನಾರಸಿಂಹಾವತಾರ ವಿಷಯವು. ನಂತರ ಶ್ರೀಮದ್ರಾಮಾಯಣದ ವಾಲಿವಧಾ ಪ್ರಸಂಗದಂತೆ ಇದನ್ನು ಉಪಮಾನವಾಗಿ ತಿಳಿಯಬಹುದಾಗಿದೆ. ಶ್ರೀಮದ್ರಾಮಾಯಣದ ಕಥಾ ಪ್ರಸಂಗದಲ್ಲಿ ಉಕ್ತವಾಗಿದ್ದು, ವಾಲಿಯು ಅನೈತಿಕವಾದ ಅಧರ್ಮಯುಕ್ತ ಉಪಟಳಗಳಿಂದ ಕೂಡಿ ಹಿಂಸಿಸುತ್ತಿದ್ದುದರ ಮೇಲೇ ಶ್ರೀ ಸುಗ್ರೀವನ ಪ್ರಾರ್ಥನೆಯಂತೆ ಅಭಯ ನೀಡಿ ಮರೆಯಿಂದ ವಾಲಿವಧೆಯು ಸಹಾ ದುಷ್ಟ ನಿಗ್ರಹಣಾರ್ಥವಾಗಿ ನಡೆದಿರುವುದೂ ಭಗವದ್ವಿಷಯವಾಗಿ ತಿಳಿಯಬಹುದಾಗಿದೆ. ಅದರಂತೆಯೇ ದುಷ್ಟ ಹಿರಣ್ಯಧ್ವಜ ಸಂಹಾರವೂ ಸಹಾ ಎಂಬುದಾಗಿದೆಂಬುದು ಭಗವದ್ವಿಷಯವು.

ಶ್ರೀ ವೈಷ್ಣವತ್ವ ಹೊಂದಲು ಭಗವಂತನ ದಿವ್ಯಾಯುಧಗಳಾದ ಶ್ರೀ ಸುದರ್ಶನಪಾಂಚಜನ್ಯಗಳ ವಿಷಯವು.

ಶ್ರೀ ಸುದರ್ಶನ ಮತ್ತು ಶ್ರೀ ಪಾಂಚಜನ್ಯನ ಅನುಗ್ರಹವಿಲ್ಲದೇ ವೈಷ್ಣವತ್ವವನ್ನು ಹೊಂದಲು ಅವಕಾಶವಿಲ್ಲ. ಭಗವದ್ರಾಮಾನುಜರು ಈ ಪ್ರಕ್ರಿಯೆಯಲ್ಲಿ ಸಮಾಶ್ರಯಣ (ಪಂಚಸಂಸ್ಕಾರ) ಎಂಬುದಾಗಿ ಅನುಷ್ಠಿತಗೊಳಿಸಿರುವರು. ಈ ಅನುಷ್ಠಾನವಿಲ್ಲದೇ ಯಾವ ಒಂದು ಕಾರ್ಯಗಳಿಗೂ ಅರ್ಹರಾಗುವುದಿಲ್ಲ. ಉಪನಯನ ಸಂಸ್ಕಾರವಾದ ಮೇಲೆ ಬ್ರಾಹ್ಮಣನಾಗಿ ಗಾಯತ್ರ್ಯಾದಿ ಜಪಾದಿಗಳನ್ನು ಅನುಷ್ಠಿತರಾಗಬಹುದಷ್ಟೆ. ಅಲ್ಲದೇ ದೇವತಾ ಪೂಜಿತಾದಿಗಳಲ್ಲಿ ವೈದಿಕ ಹವ್ಯ ಕವ್ಯ ಕಾರ್ಯಾದಿಗಳಲ್ಲಿ ಅನ್ವಯಿಸಲು ಅರ್ಹರಾಗಿರುವುದಿಲ್ಲ. "ತಾಪ, ಪುಂಡ್ರ, ನಾಮ, ಮಂತ್ರ, ಯಾಗಾಖ್ಯೈಃ ಪಂಚಭಿಃ ಸಂಸ್ಕಾರೈಃ ಉಚ್ಯತೇ" ಎಂಬುದೇ ಸೂತ್ರಪ್ರಮಾಣವು. ಈ ಐದು ಸಂಸ್ಕಾರಗಳು ಆಗಲೇಬೇಕು. ಯತಿವರ್ಯರುಗಳು ಅಥವಾ ಆಚಾರ್ಯವರ್ಯರುಗಳು, ಆಚರಿಸುವ ಅರ್ಹತೆ ಅಧಿಕಾರವುಳ್ಳವರು. ಭಗವದ್ರಾಮಾನುಜರಿಂದ ಅಂಗೀಕರಿಸಲ್ಪಟ್ಟ ಹಲವರು ಮಾತ್ರಾ ಆಚಾರ್ಯಪುರುಷರೆನಿಸಿ ಅಧಿಕಾರಸ್ಥರಾಗಿರುವರು. ಇಂಥಹಾ ಆಚಾರ್ಯ ಪುರುಷ ಸಂತತಿಯವರು, ಸ್ಥಾನಕ್ಕೆ ತಕ್ಕಂತೆ, ವೈದಿಕ ಪ್ರಕ್ರಿಯೆಗಳಲ್ಲಿರಬೇಕು. ಔಪಾಸನಾಗ್ನಿವುಳ್ಳವನಾಗಿ ನಿತ್ಯಕರ್ಮಾನುಷ್ಠಾನ ನಿರತನಾಗಿ, ಅಧ್ಯಯನ, ಸಂಪನ್ನನು, ಶಾಸ್ತ್ರಾರ್ಥ ಕಾಲಕ್ಷೇಪಾದಿ ಅನುಸಂಧಾನ ವುಳ್ಳವನಾಗಿದ್ದು ವೈದಿಕ ಕಾರ್ಯಾದಿಗಳ ನಿರತನೂ ಆಗಿದ್ದರೆ ಅಂಥಹಾ ಆಚಾರ್ಯ ಪುರುಷಸ್ಥಾನಕ್ಕೆ ಅರ್ಹತೆಯುಳ್ಳವರಂಥಾಗುವರು. ಇವರು ಪಂಚಸಂಸ್ಕಾರ (ಸಮಾಶ್ರಯಣ)ವಲ್ಲದೇ ಭರಸಮರ್ಪಣ (ಶರಣಾಗತಿ) (ಪ್ರಪತ್ತಿ) ಶಾಸ್ತ್ರವನ್ನೂ ಅನುಷ್ಠಿಸಬಹುದು. ಭಗವದ್ರಾಮಾನುಜರು ಅನುಗ್ರಹಿಸಿರುವ ಕೆಲವರು ಮಾತ್ರಾ ಈ ಪಟ್ಟಾಧಿಕಾರಿಗಳೆಂದು ಅನುಗ್ರಹ ನೀಡಿರುವರು. ಅವರುಗಳು ಮಾತ್ರಾ ಅನುಷ್ಠಿಸಬಹುದು. ಅಲ್ಲದೇ ಮತ್ಯಾರಿಗೂ ಅವಕಾಶವಿಲ್ಲಾ. ಕೂಡದು. ಹಾಗೇನಾದರೂ ಅತಿಕ್ರಮವಾಗಿ ಆಚರಿಸಿದಲ್ಲಿ ಶ್ರೀ ಭಗವದ್ರಾಮಾನುಜರ ದಿವ್ಯಾಜ್ಞೆಗೆ ದ್ರೋಹವಾದುದಾಗಿ "ಅನ್ಯಥಾ ಪತಿತೋ ಭವೇತ್" ಎಂಬುದಾಗಿ ಪಾಪಾದಿಗಳಿಗೆ ಗುರಿಯಾಗುವರು ಹಾಗೂ ಆಚರಿಸಿರುವುದು ಪತಿತವಾಗುವುದು.

ಪಂಚಸಂಸ್ಕಾರದಲ್ಲಿ ಭಗವಂತ ದಿವ್ಯಾಯುಧಗಳಾದ ಶ್ರೀ ಸುದರ್ಶನ, ಶ್ರೀ ಪಾಂಚಜನ್ಯವೇ ಮೊದಲನೆಯ ಸಂಸ್ಕಾರವಾದ ತಾಪ ಸಂಸ್ಕಾರದಲ್ಲಿ ಮಹತ್ವ ಪಡೆದಿದೆ. ಪ್ರಾಚೀನವಾಗಿ, ಆಚಾರ್ಯ ಪುರುಷ ಸಂತತಿಯವರಲ್ಲಿ ಪ್ರತಿಷ್ಠಿತವಾಗಿದ್ದು ಅವುಗಳನ್ನು ವೈದಿಕ ಪ್ರಕ್ರಿಯೆಯಂತೆ ಹೋಮಾದಿಗಳಾದ ಮೇಲೇ, ಆಚಾರ್ಯರು, ಹೋಮಾಗ್ನಿಯಲ್ಲಿ ಸುದರ್ಶನ ಪಾಂಚಜನ್ಯ ಮುದ್ರಾಂಕಿತಗಳನ್ನು ಸ್ವಲ್ಪ ಕಾಯಿಸಿ ಶಿಷ್ಯರಿಗೆ ಬಲಭುಜದಲ್ಲಿ "ಶ್ರೀ ಸುದರ್ಶನಾಯ ಹೇತಿರಾಜಾಯ ನಮಃ" ಎಂಬುದಾಗಿ ಹೇಳಿ, ಶಿಷ್ಯರಿಂದಲೂ ಹೇಳಿಸಿ, ಮುದ್ರಾಂಕಿತ ಆಚರಿಸಿ, ಎಡಭುಜದ ಮೇಲೆ "ಶ್ರೀ ಪಾಂಚಜನ್ಯಾಯ ಶಂಖಾಧಿಪತಯೇ ನಮಃ" ಎಂಬುದಾಗಿ ಹೇಳಿ, ಶಿಷ್ಯರಿಂದಲೂ ಹೇಳಿಸಿ, ಮುದ್ರಾಂಕಿತ ಆಚರಿಸುವರು. ಮಂತ್ರೋಪದೇಶಗಳು, ಆಚಾರ ವ್ಯವಹಾರಗಳು, ಭಗವದಾರಾಧನಾ ಕ್ರಮ, ಶ್ರೀವೈಷ್ಣವ ಕರ್ತವ್ಯಕ್ಕೆ ಸಂಬಂಧಪಟ್ಟಂತೆ, ಪುಂಡ್ರಧಾರಣೆ, ಇತ್ಯಾದಿ ಅಮೂಲ್ಯ ಅನುಷ್ಠಾನಕ್ರಮಗಳನ್ನು ಉಪದೇಶಿಸುವರು. ಅಲ್ಲದೇ ಮೂಲಮಂತ್ರ ಇತರ ಉಪಯುಕ್ತ ಮಹಾಮಂತ್ರಗಳನ್ನೂ ಉಪದೇಶಿಸುವರು. ಆಚಾರ್ಯರು, ವೈಷ್ಣವ ದೀಕ್ಷೆಯುಳ್ಳವರಾಗಿದ್ದು - ಇದರಿಂದಾಗಿ ಆಚರಿಸಿಕೊಳ್ಳುವ ಶಿಷ್ಯರು ಪವಿತ್ರರಾಗಿ, ಶುದ್ಧರಾಗಿ, ವೈಷ್ಣವತ್ವ ಹೊಂದಿ "ರಾಮಾನುಜದಾಸಃ " ಎಂಬುದಾಗಿ ನಾಮಾಂಕಿತಗೊಳ್ಳುವರು. ಈ ಸಂಸ್ಕಾರಗಳೂ ಸ್ತ್ರೀಗಳಿಗೂ ಅತ್ಯವಶ್ಯಕವಾಗಿ ಆಚಾರ್ಯರಿಂದ ಹೊಂದಿದ್ದು ವೈದೀಕ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಾರ್ಯಗಳಲ್ಲಿ ಅರ್ಹರಾಗುವರು. ಭಗವಂತನ ದಿವ್ಯಾಯುಧಗಳಾದ ಶ್ರೀ ಸುದರ್ಶನ, ಶ್ರೀ ಪಾಂಚಜನ್ಯರ ಮಹಿಮೆಯು.

ಆಗಮದೀಕ್ಷಾ ಕಾಲದಲ್ಲಿ ದೀಕ್ಷೆಯ ಅಂಗವಾಗಿ ಆಚರಿಸುವರು. ಇವರು ಆಗಮದೀಕ್ಷಾಚಾರ್ಯರಾಗಿರುವರು. ಅಲ್ಲದೇ ಇತರರಿಗೆ ಯಾರಿಗೂ ಆಚರಿಸುವುದಿಲ್ಲಾ. ಆಗಮದೀಕ್ಷಾ ನಿಯಮಗಳಿಗನುಸಾರವಾಗಿ ಪಂಚಸಂಸ್ಕಾರ ಉಪದೇಶ ರಹಸ್ಯ ಮಂತ್ರೋಪದೇಶಗಳಾದಿಗಳನ್ನು ಆಚರಿಸಿದಲ್ಲಿ ಅಂಥವರು ಮಾತ್ರಾ, ಪಾಂಚರಾತ್ರ, ವೈಖಾನಸ ಆಗಮಗಳ ಅಧಿಕಾರಸ್ಥರಾಗುವರು. ಅವರುಗಳೂ ಸಹಾ ಆಹಾರಾದಿ ನಿಯಮಗಳನ್ನು ಉಲ್ಲಂಘಿಸಿ ವ್ಯತಿರುಕ್ತವಾದ ಕಾರ್ಯಾದಿಗಳಲ್ಲಿ ಅನ್ವಯಿಸುವುದಾದರೇ ಆಚಾರ್ಯರಿಂದ ಮತ್ತೇ ಪ್ರಾಯಶ್ಚಿತ್ತಾದಿಗಳನ್ನು ಆಚರಿಸಿ ಶುದ್ಧರಾಗಬೇಕೆಂಬುದು ನಿಯಮವು. ವೈಖಾನಸ ಆಗಮ ಪ್ರಕಾರವಾಗಿ ಸಮಾಶ್ರಯಣ ಸುದರ್ಶನ ಪಾಂಚಜನ್ಯ ಮುದ್ರಾಧಾರಣೆ ಇಲ್ಲವೆಂದು ತಿಳಿದಿರುತ್ತೆ. ಅವರಿಗೆ ಮಾತೃಗರ್ಭದಲ್ಲಿಯೇ ಆಚರಿಸುವುದಾಗಿ ತಿಳಿದು ಬರುತ್ತೆ. ಸಮಂಜಸ ಉತ್ತರ ಸಿಗುವುದಿಲ್ಲ.

ಪರಂಜ್ಯೋತಿ, ಪರಂಧಾಮ, ಪರಮಾತ್ಮ, ಮಹಾಪುರುಷನಾದ, ಸರ್ವಲೋಕ ರಕ್ಷಕನಾದ ಭಗವಂತನ ದಿವ್ಯ ಅನುಗ್ರಹ ಮಹತ್ತರವಾದುದು. ಅವನ ಉಪಾಸನೆಯೇ ಸುಲಭ ಸಾಧನೆಯಾಗಿ ಎಸಗಿರುವ ಪಾಪಾದಿಗಳನ್ನು ಶಮನಗೊಳಿಸಿ ರಕ್ಷಿಸಬಲ್ಲುದು. ಈ ಉಪಾಸನೆಯ ಅಂಗವಾಗಿ, ಪಾರಾಯಣ, ಜಪ ಮತ್ತು ಹೋಮಗಳ ಮುಖೇನ ಕರ್ಮಗಳೆಲ್ಲವೂ ಭಕ್ತಿಮಾರ್ಗಗಳಿಂದ ಆಚರಿಸುವ ಕಲ್ಪವು ಸುಲಭ ಸಾಧನೆ ದಾರಿಯಾಗಿದ್ದು ಭಗವತೃಪ್ತಿಯಾಗುವಂಥಹುಗಳು.

ಇಂಥಹ ಸನ್ಮಾರ್ಗದ ಕಲ್ಪವೇ ಶ್ರೀ ಸುದರ್ಶನ ಹೋಮವೆಂಬುದು, ಉಪಾಸನಾ ಮೂಲಕ ಭಗವತ್ಪ್ರಿತಿಗಾಗಿಯೂ ಆಚರಿಸತಕ್ಕ ಯಜಮಾನನ ಹಾಗೂ ಈತನ ಕುಟುಂಬದ ಆಯುರಾರೋಗ್ಯಾಭಿವೃದ್ಧಿಗಳಾಗಿ ಶ್ರೇಯಃಪ್ರದವಾಗುವುವು. ಸುಖ, ಶಾಂತಿ, ನೆಮ್ಮದಿ ಅಡಚಣೆಗಳ ನಿವಾರಣೆ, ಸ್ಥೈರ್ಯ ಧೈರ್ಯವುಂಟಾಗಿ ಕ್ಷೇಮಕರಗಳುಂಟಾಗುವುವು. ಯಜಮಾನನು ಶ್ರದ್ಧಾ ಭಕ್ತಿಯೊಡನೆ ಆಚರಿಸಬೇಕಾಗಿರುವುವು. ನಿಷ್ಠಾನುಕ್ರಮವಾಗಿ ಯುಕ್ತವಾಗಿರುವಂಥಹುದು ಈ ಭಗವದಾರಾಧನೆಯ ಕಲ್ಪವು.

ಈ ಮಹಾಸುದರ್ಶನ ಹೋಮವೆಂಬುದಾಗಿದ್ದು ನಿಷ್ಠಾವಂತನಾಗಿ ಆಚರಿಸಬೇಕು. ಎರಡು ದಿವಸಗಳ ಕಾರ್ಯಕ್ರಮವಾಗಿದ್ದು ಅದೇ ರೀತಿಯಲ್ಲಿ ರೂಪಿಸಿಕೊಂಡು ಆಚಾರ್ಯ ಪುರೋಹಿತರ ಹಾಗೂ ನುರಿತ ವಿದ್ವತ್‌ವರ್ಯ ಋತ್ವಿಜರ ಮೂಲಕ ಆಚರಿಸಬೇಕಾಗಿರುವುದು. ಮೊಟ್ಟ ಮೊದಲು ಗೃಹದ ಶುದ್ಧಿಗಾಗಿ ಹಾಗೂ ಕಲಶವಸ್ತ್ರಗಳ ಶುದ್ಧಿಗಾಗಿ ಶುದ್ಧಿ ಪುಣ್ಯಾಹವಾಚನವನ್ನು ಆಚರಿಸಿ ಪುಣ್ಯಾಹತೀರ್ಥದಿಂದ ಪ್ರೋಕ್ಷಿಸಿ ಶುದ್ಧಿಗೊಳಿಸಿ ಕಲಶಸ್ಥಾಪನ ಪೂಜಾದಿಗಳಿಗೆ ಆರಂಭಿಸಬೇಕು.

ವ್ರೀಹಿ, ತಿಲ, ತಂಡುಲಗಳನ್ನು ಹರಡಿ ಉಲ್ಲೇಖಿಗಳಾದ ಮೇಲೆ ಶ್ರೀ ಸುದರ್ಶನ ಮತ್ತು ಶ್ರೀ ಸುದರ್ಶನ ನಾರಸಿಂಹರಿಗೆ ಬಂದು ಕಲಶವನ್ನು ಮತ್ತು ಶ್ರೀಲಕ್ಷ್ಮೀನಾರಾಯಣನಿಗಾಗಿ ಮತ್ತೊಂದು ಕಲಶವನ್ನಿಟ್ಟು, ನಾಲ್ಕು ಕಡೆಗಳಲ್ಲೂ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರನ್ನೂ ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರರವರುಗಳನ್ನು ಸ್ಥಾಪನೆಗಾಗಿರಿಸಬೇಕು. ಉತ್ತರ ಭಾಗದಲ್ಲಿ ತಂಡುಲಮಧ್ಯಭಾಗದಲ್ಲಿ ಶ್ರೀ ಚಕ್ರ ಮತ್ತು ಭಗವಂತನ ದಿವ್ಯಾಯುಧಗಳಾದ ಪಂಚಮಹಾಯುಧಗಳನ್ನು ಸ್ಥಾಪಿಸಬೇಕು.

ಕಲ್ಪೋಕ್ತದಂತೆ, ಪುರುಷಸೂಕ್ತ ಪ್ರಕಾರವಾಗಿ ಷೋಡಶೋಪಚಾರಾದಿಯಾಗಿ ಧ್ಯಾನಾದ್ಯಾವಾಹನಾದಿಪೂರ್ವಕ ಆರಾಧಿಸಿ ಮಂತ್ರ ಜಪಗಳಿಗಾಗಿ ಋತ್ವಿಜರಲ್ಲಿ ಪ್ರಾರ್ಥಿಸಿ, ಅಚ್ಛಿದ್ರ, ಅಶ್ವಮೇಧ, ಪಾರಾಯಣ, ಅಷ್ಟಾಕ್ಷರೀ, ಸುದರ್ಶನಾದಿ ಜಪಗಳಿಗೆ, ಉಪದೇಶವಾಗಿರತಕ್ಕ ವಿಪ್ರರಲ್ಲಿ ಪ್ರಾರ್ಥಿಸಬೇಕು ಅಚ್ಛಿದ್ರ, ಅಶ್ವಮೇಧಪಾರಾಯಣ, ಬಹಳ ಉಪಯುಕ್ತವಾದುವುಗಳು ಮತ್ತು ಅಶ್ವಮೇಧ ಯಜ್ಞದ ಫಲವನ್ನೇ ನೀಡುವುವು. ಪಾರಾಯಣವಾದ ಮೇಲೇ, ನಿವೇದನ, ಮಹಾಮಂಗಳಾರತಿ ವೇದ ಶಾತ್ತುಮೊರೈ ತೀರ್ಥಪ್ರಸಾದ ವಿನಿಯೋಗಗಳೊಂದಿಗೆ ಅಂದಿನ ಕಾರ್ಯಕ್ರಮವು ಪೂರ್ಣಗೊಳ್ಳುವುವು.

ಮಾರನೆಯ ದಿವಸ, ನಿತ್ಯಾರಾಧನೆಯ ಮೂಲಕ ಉಪಚಾರಾದಿಗಳನ್ನು ಸಮರ್ಪಿಸಿ ಋತ್ವಿಜರಲ್ಲಿ, ಅರುಣ, ಕಾಠಕ, ಉಪನಿಷತ್, ಅಷ್ಟಾಕ್ಷರಾದಿ ಮಂತ್ರ ಜಪಗಳಿಗಾಗಿ ಪ್ರಾರ್ಥಿಸಿ ಪಾರಾಯಣವನ್ನು ಆರಂಭಿಸಬೇಕು. ಪಾರಾಯಣಾದಿಗಳಾದ ಮೇಲೇ ಹೋಮಾಂಗವಾಗಿ ಸ್ಥಂಡಿಲೋಲ್ಲಾಸನಾದಿ ಪೂರ್ವಕ, ಸಂಕಲ್ಪ, ಪವಿತ್ರಾದಿಗಳನ್ನು ಸಮರ್ಪಿಸಿ ದಿಗ್ಬಂಧನ ಮಾಡಬೇಕು.

ಮೂಲ ಮಂತ್ರಾದಿ ಜಪಗಳು ಕಲಶಗಳಲ್ಲಿ ಸ್ಥಾಪಿತರಾಗಿರುವ ಭಗವಂತನಿಗೆ ತೃಪ್ತಿ ಕೊಡುವಂಥಹುಗಳು. ಅರುಣಕಾಠಕ, ಉಪನಿಷತ್ ಮುಂತಾದ ವೇದಮಂತ್ರಗಳ ಪಾರಾಯಣವು ಆಚರಿಸುವ ಹೋಮಗಳಿಗೆ ಸಾಧಕಗಳಾಗಿ ಅತ್ಯುತ್ತಮ ಫಲ ಕೊಡುವುವು. ಶ್ರೀಸುದರ್ಶನ,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ಶ್ರೀ ಸುದರ್ಶನ ನಾರಸಿಂಹಾದಿ ಮಂತ್ರಗಳು ಈ ಸುದರ್ಶನಯಾಗದಲ್ಲಿ ಅನ್ವರ್ಥವಾಗಿ ಭಗವಂತನ ಧ್ಯಾನಕ್ಕೆ, ಉಪಾಸನೆಗಳಿಗೂ ಕಾರಣವಾಗಿ ನೆಮ್ಮದಿ ತರುವಂಥಹವುಗಳು.

ಹೋಮದ ಅಂಗವಾಗಿ ಉಕ್ತವಾಗಿರುವ ಭಗವಂತನ ಪ್ರೀತ್ಯರ್ಥವಾಗಿ, ಚರು, ಸಮಿತ್ತು-ಸುದರ್ಶನ ಬಳ್ಳಿ, ಬಿಳೀ ಸಾಸುವೆ, ಪಂಚಫಲ ದ್ರವ್ಯಾದಿಗಳಿಂದ ಋತ್ವಿಜರ ಮೂಲಕ ಹೋಮಗಳನ್ನು ಆಚರಿಸಬೇಕಾಗಿರುವುದರಿಂದ ಬ್ರಹ್ಮನ ಸ್ಥಾನದಲ್ಲಿರುವವರನ್ನು ಬಿಟ್ಟು, ಕಡೆಯ ಪಕ್ಷ ೯ ಜನ ಋತ್ವಿಕರಲ್ಲಿ ಪ್ರಾರ್ಥಿಸಿ ಏರ್ಪಡಿಸಬೇಕು. ಒಂದೊಂದು ಹೋಮವೂ ಸಹಾ ೧೦೮ ಸಲ ಆಗಬೇಕಾಗಿರುವುದರಿಂದ ಋತ್ವಿಜರ ಸಂಖ್ಯೆ ಅವಶ್ಯಕವು. ೧೨ ಸಲ ಹೋಮ ಆಚರಿಸಿದಲ್ಲಿ ೧೦೮ ಹೋಮಗಳಾಗಿ ಫಲಪ್ರದವಾಗುವುವು. ಹೋಮದ ಸಾದ್ಗುಣ್ಯಾರ್ಥವಾಗಿ ಪೂರ್ಣಾಹುತಿಯಾಗಬೇಕಾಗಿರುವುದು ಹೋಮಭಾಗವು ಪೂರ್ಣ ಗೊಳ್ಳುವುವು. ಪರಿಷೇಚನ, ಬ್ರಹ್ಮೋದ್ವಾಸನ, ಮಹಾಹವಿರ್ನಿವೇದನ ಮಹಾಮಂಗಳಾರತಿ ವೇದ ಶಾತ್ತುಮೊರೈ ಆಗಿ, ಸುದರ್ಶನಾಷ್ಟಕ, ಪ್ರದಕ್ಷಿಣೆಯಾದ ನಂತರ ಫಲಪೂಚೆ ಆಶೀರ್ವಾದ. ಋತ್ವಿಜರಿಗೆ ಫಲತಾಂಬೂಲ ಸಂಭಾವನೆಗಳ ವಿತರಣೆ, ತದೀಯಾರಾಧನೆಯೊಂದಿಗೆ ಶ್ರೀಮಹಾಸುದರ್ಶನ ಹೋಮ ಪ್ರಕ್ರಿಯೆಯು ಮುಕ್ತಾಯಗೊಳ್ಳುವುವು.

ಮಹಾಸುದರ್ಶನ ಹೋಮ ಪ್ರಕ್ರಿಯೆಯು, ವೇದ ಪಾರಾಯಣ, ಮಹಾಮಂತ್ರ ಜಪಗಳ ಪೂರ್ವಕ ಆಚರಣೆಯಿಂದಾಗಿ ಸರ್ವ ಆಸ್ತಿಕರಿಗೂ ಸುಖ, ಶಾಂತಿ, ನೆಮ್ಮದಿಯಾಗಿ ಕ್ಷೇಮಾದಿಗಳಿಂದ ಸಹಬಾಳ್ವೆಯಾಗಿ ಬಾಳಲೆಂದು ಪರಮಾತ್ಮ, ಪರಂಜ್ಯೋತಿಷ ಪರಮಸ್ವರೂಪನಾದ ಶ್ರೀ ಲಕ್ಷ್ಮೀಹಯಗ್ರೀವನು ಸಮಸ್ತ ಸನ್ಮಂಗಳವನ್ನುಂಟು ಮಾಡಲೆಂದು ಪ್ರಾರ್ಥಿಸುತ್ತೇನೆ.

ನಿತ್ಯೋತ್ಸವ ಸ್ಸದಾ ತೇಷಾಂ ನಿತ್ಯಶ್ರೀ ರ್ನಿತ್ಯಮಂಗಳಂ |
ಯೇಷಾಂ ಹೃದಿಸ್ಥೋ ಭಗವಾನ್ಮಂಗಳಾಯತನಂ ಹರಿಃ

ಸಜ್ಜನ ವಿಧೇಯ
ಕೋಟಿ ಕನ್ಯಾದಾನಂ ||ಶ್ರೀ|| ವಾಸುದೇವ ತಾತಾಚಾರ್ಯ

ಓಂ ಓಂ ಓಂ

ವಿಚಿತ್ರಾದೇಹಸಂಪತ್ತಿಃ ಈಶ್ವರಾಯ ನಿವೇದಿತುಂ ।
ಪೂರ್ವಮೇವ ಕೃತಾ ಬ್ರಹ್ಮನ್ ಹಸ್ತಪಾದಾದಿಸಂಯುತಾ ॥

ವಿಚಿತ್ರವಾದ ಈ ದೇಹಸಂಪತ್ತನ್ನು ಹಸ್ತ, ಪ್ರಾಣ, ಮನಸ್ಸು ಮೊದಲಾದವುಗಳಿಂದ ಕೂಡಿಸಿಕೊಟ್ಟಿರುವುದು ಈಶ್ವರನಿಗೆ ಅರ್ಪಿಸುವುದಕ್ಕಾಗಿ.

ತತ್ತ್ವಂ ಯತ್ಪ್ರಣವೇ ಧನಂಜಯ ರಥೇsಪ್ಯಗ್ರೇ ದರೀದೃಷ್ಯತೇ
ತಚ್ಚಿತ್ತೋ ಭುವಿ ವೇಂಕಟೇಶ್ವರ ಕವಿರ್ಭಕ್ತೋsನುಕಂಪ್ಯಸ್ಸತಾಂ ।
ತತ್ತಾದೃಗ್ಗುರುದೃಷ್ಟಿಪಾತಮಹಿಮಗ್ರಸ್ತೈಃ ಕಲನಸಾ ಯೇನ ಸಾ
ಗೀತಾ ವಿಷ್ಣುಪದೀ ಯತೀಶ್ವರವಚಸ್ತೀರ್ಥೈರವಾಗಾಹ್ಯತ ॥

– ತಾತ್ಪರ್ಯಚಂದ್ರಿಕಾ

ಅಜ್ಞಾನಾದಥವಾಜ್ಞಾನಾದಪರಾಧೇಷು ಸತ್ಸ್ವಪಿ ।
ಪ್ರಾಯಶ್ಚಿತ್ತಂ ಕ್ಷಮಸ್ವೇತಿ ಪ್ರಾರ್ಥನೈಕೈವ ಕೇವಲಂ ॥

– ಪಾಂಚರಾತ್ರರಕ್ಷಾ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಃ

ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಪರಕಾಲ ಮಹಾದೇಶಿಕಾಯ ನಮಃ
ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಪರಕಾಲ ಮಹಾದೇಶಿಕಾಯ ನಮಃ
ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲ ಮಹಾದೇಶಿಕಾಯ ನಮಃ
ಶ್ರೀಮತೇ ನಿಗಮಾಂತ ಮಹಾದೇಶಿಕಾಯ ನಮಃ
ಶ್ರೀಮತೇ ಭಗವದ್ರಾಮಾನುಜಾಯ ನಮಃ
ಶ್ರೀಮತೇ ವಕುಳ ಭೂಷಣ ಮಹಾದೇಶಿಕಾಯ ನಮಃ
ಶ್ರೀ ಲಕ್ಷ್ಮೀ ಹಯಗ್ರೀವಾಯ ನಮಃ
ಶ್ರೀರಂಗನಾಯಿಕಾ ಸಮೇತ ಶ್ರೀರಂಗನಾಥ ಪರಬ್ರಹ್ಮಣೇ ನಮಃ

ಶ್ರೀ ಭಾಷ್ಯ ವೈಶಿಷ್ಟ್ಯ

ವಿದ್ವಾ ಅನಂತನರಸಿಂಹಾಚಾರ್

ನತ್ವಾ ಭಕ್ತ್ಯಾ ಪೂರ್ವಾಚಾರ್ಯಾನ್ ತೈ ರಾದಿಷ್ಟೇನವರ್ತ್ಮನಾ
ಬ್ರಹ್ಮಸೂತ್ರ ಪದಾಂ ತಸ್ಥಾ ವೇದಾಂತಾರ್ಥಃ ಪ್ರಕಾಶ್ಯತೆ

ಶ್ರೀವಿಶಿಷ್ಟಾದ್ವೈತ ಸಿದ್ಧಾಂತವಾದ ಶ್ರೀ ವೈಷ್ಣವ ಸಂಪ್ರದಾಯದಲ್ಲಿ ಶ್ರೀಭಗವದ್ರಾಮಾನುಜರಿಂದ ವಿರಚಿತವಾದ ಶ್ರೀ ಭಾಷ್ಯವು ಅಗ್ರಸ್ಥಾನವನ್ನು ಹೊಂದಿದೆ. ಶ್ರೀಭಾಷ್ಯವು ಬಾದರಾಯಣ ಎಂಬ ಹೆಸರಿನಿಂದ ಕರೆಯಲ್ಪಡುವ ಶ್ರೀ ವೇದವ್ಯಾಸರಿಂದ ರಚಿತವಾದ ಬ್ರಹ್ಮಸೂತ್ರದ ವ್ಯಾಖ್ಯಾನ ಪ್ರಸ್ಥಾನತ್ರಯ ಎಂದು ಹೇಳಲ್ಪಡುವ ಉಪನಿಷತ್, ಶ್ರೀ ಭಗವದ್ಗೀತೆ, ಬ್ರಹ್ಮಸೂತ್ರ ಎಂಬ ಮೂರು ಶ್ರೀ ಸೂಕ್ತಿಗಳಲ್ಲಿ ಬ್ರಹ್ಮಸೂತ್ರವು ಮುಖ್ಯವಾದುದು.

ಬ್ರಹ್ಮಸೂತ್ರಕ್ಕೆ ಶಾರೀರಿಕ ಮೀಮಾಂಸ ಎಂಬ ಹೆಸರು ಇದೆ. ವೇದಗಳ ಅಗರಗಳನ್ನು ನಿರ್ಣಯ ಮಾಡುವ ಶಾಸ್ತ್ರಕ್ಕೆ ಮೀಮಾಂಸ ಶಾಸ್ತ್ರ ಎಂದು ಹೆಸರು. ಈ ಮೀಮಾಂಸಾ ಶಾಸ್ತ್ರದಲ್ಲಿ ಇಪ್ಪತ್ತು ಅಧ್ಯಾಯಗಳು ಇರುತ್ತದೆ. ಮೊದಲಾಗಿರುವ ಹನ್ನೆರಡು ಅಧ್ಯಾಯಗಳಿಗೆ ಕರ್ಮಕಾಂಡ ಎಂಬ ಹೆಸರು. ಈ ಹನ್ನೆರಡು ಅಧ್ಯಾಯಗಳಲ್ಲಿ ಇರುವ ಸೂತ್ರಗಳನ್ನು ರಚಿಸಿದವರು ಶ್ರೀ ವ್ಯಾಸರ ಶಿಷ್ಯರಾದ ಜೈಮಿನಿ ಮಹರ್ಷಿ. ಇದಕ್ಕೆ ಪೂರ್ವ ಮೀಮಾಂಸಾ ಶಾಸ್ತ್ರ ಮತ್ತು ಕರ್ಮಕಾಂಡ ಎಂಬ ಹೆಸರುಗಳು ಇವೆ. ಮೇಲೆ ಇರುವ ನಾಲ್ಕು ಅಧ್ಯಾಯಗಳಿಗೆ ಸಂಕರ್ಷಕಾಂಡ ಅಥವಾ ದೇವತಾಕಾಂಡ ಎಂಬ ಹೆಸರು. ಕಡೆಯ ನಾಲ್ಕು ಅಧ್ಯಾಯಗಳಿಗೆ ಬ್ರಹ್ಮಕಾಂಡ ಎಂಬ ಹೆಸರು. ಸಂಕರ್ಷಕಾಂಡದಲ್ಲಿರುವ ಸೂತ್ರಗಳನ್ನು ರಚಿಸಿದವರು ಜೈಮಿನಿ ಎಂದು ಶ್ರೀಭಗವದ್ರಾಮಾನುಜರು ಶ್ರೀ ಭಾಷ್ಯದಲ್ಲಿ ತಿಳಿಸಿದ್ದಾರೆ. ಶ್ರೀಪರಾಶರಭಟ್ಟರು ತಾವು ರಚಿಸಿದ ತತ್ವರತ್ನಾಕರ ಎಂಬ ಗ್ರಂಥದಲ್ಲಿ ವ್ಯಾಸರ ಶಿಷ್ಯರಾದ ಕಾಶಕೃತ್ಸ್ನ ಎಂಬ ಋಷಿ ಸಂಕರ್ಷಕಾಂಡಕ್ಕೆ ಸೂತ್ರಗಳನ್ನು ರಚಿಸಿದರೆಂದು ಹೇಳಿದ್ದಾರೆ. ಶ್ರೀ ವೇದಾಂತ ದೇಶಿಕರು ತಾವು ರಚಿಸಿದ ಅಧಿಕರಣ ಸಾರಾವಳಿ ಎಂಬ ಗ್ರಂಥದಲ್ಲಿ ಇದನ್ನು ವಿಚಾರಮಾಡಿ ಜೈಮಿನಿ ಮಹರ್ಷಿಯು ಈ ಸಂಕರ್ಷ ಕಾಂಡಕ್ಕೆ ಸೂತ್ರಗಳನ್ನು ಬರೆದಿರಬಹುದು, ಈ ಸೂತ್ರಗಳಿಗೆ ಕಾಶಕೃತ್ಸ್ನ ಮಹರ್ಷಿಯು ವೃತ್ತಿ ಬೆರೆದಿರಬಹುದು ಅಥವಾ ಕೌಶಿಕೃತ್ಸ್ನ ಮಹರ್ಷಿಯು ಸೂತ್ರಗಳನ್ನು ರಚಿಸಿರಬಹುದು, ಜೈಮಿನಿ ಮಹರ್ಷಿಯು ಈ ಸೂತ್ರಗಳಿಗೆ ವೃತ್ತಿಯನ್ನು ಬರೆದಿರಬಹುದು ಎಂದು ಹೇಳಿದ್ದಾರೆ. ವೃತ್ತಿ ಗ್ರಂಥವೆಂದರೆ ಸೂತ್ರಗಳಿಗೆ ವಿಸ್ತಾರವಾದ ಅರ್ಥಗಳನ್ನು ತಿಳಿಸುವ ಶ್ರೀ ಸೂಕ್ತಿ.

ಕರ್ಮಕಾಂಡದಲ್ಲಿ ಜೈಮಿನಿ ಮಹರ್ಷಿಯು ಭಗವಂತನಾದ ಶ್ರೀ ಮನ್ನಾರಾಯಣನ ಪೂಜಾ ರೂಪವಾದ ಯಜ್ಞ ಯಾಗಾದಿಗಳಾದ ಕರ್ಮಗಳನ್ನು ವಿಚಾರ ಮಾಡಿದ್ದಾರೆ. ಸಂಕರ್ಷಕಾಂಡದಲ್ಲಿ ಯಾಗಗಳಲ್ಲಿ ಹೇಳಿರುವ ಇಂದ್ರಾದಿ ದೇವತೆಗಳ ಸ್ವರೂಪವನ್ನು ಹೇಳಿದೆ.

ಕಡೆಯ ಭಾಗವಾದ ಬ್ರಹ್ಮಕಾಂಡಕ್ಕೆ ಸೂತ್ರಗಳನ್ನು ರಚಿಸಿದವರು ಕೃಷ್ಣದ್ವೈಪಾಯನ ಎಂದು ಹೆಸರು ಇರುವ ಶ್ರೀ ಬಾದರಾಯಣ ಮಹರ್ಷಿ. ಬ್ರಹ್ಮಸೂತ್ರವು ನಾಲ್ಕು ಅಧ್ಯಾಯಗಳೊಂದು ಇರುವ ಶಾರೀರಿಕ ಮೀಮಾಂಸಾಶಾಸ್ತ್ರ. ಮೇಲೆ ಹೇಳಿದ ಪ್ರಕಾರ ಮೀಮಾಂಸಾ ಶಾಸ್ತ್ರವು ಇಪ್ಪತ್ತು ಅಧ್ಯಾಯಗಳನ್ನು ಹೊಂದಿದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಬ್ರಹ್ಮಸೂತ್ರಗಳಲ್ಲಿ ನಾಲ್ಕು ಅಧ್ಯಾಯಗಳು, ಹದಿನಾರು ಪಾದಗಳು. ನೂರಾಐವತ್ತಾರು ಅಧಿಕರಣಗಳು, ಐನೂರಾನಲವತ್ತೈದು ಸೂತ್ರಗಳು ಇವೆ.

ಮೊದಲನೆಯ ಅಧ್ಯಾಯಕ್ಕೆ ಸಮನ್ವಯಾಧ್ಯಾಯ ಎಂದು ಹೆಸರು. ಕಾರಣಂತುಧ್ಯೇಯಃ ಎಂದು ಅಥರ್ವ ಶಿಖೋಪನಿಷತ್ ಹೇಳಿತು. ಇದರ ಅರ್ಥ ಏನೆಂದರೆ ಪ್ರಪಂಚಕ್ಕೆ ಉಪಾದಾನ ಕಾರಣ ಮತ್ತು ನಿಮಿತ್ತ ಕಾರಣವಾದ ಶ್ರೀಮನ್ನಾರಾಯಣನನ್ನು ಧ್ಯಾನ ಮಾಡಬೇಕೆಂದು, ಅವರ ಚರಣಾರವಿಂದಗಳಲ್ಲಿ ಭಕ್ತಿ ಮಾಡುವವರು ಅಥವಾ ಪ್ರಪತ್ತಿ ಮಾಡುವವರಿಗೆ ಅವನು ಮೋಕ್ಷವನ್ನು ಕೊಡುತ್ತಾನೆ. ಎಲ್ಲಾ ಉಪನಿಷತ್ ವಾಕ್ಯಗಳು ಶ್ರೀಮನ್ನಾರಾಯಣನೇ ಪ್ರಪಂಚಕ್ಕೆ ಉಪಾದಾನಕಾರಣ ಮತ್ತು ನಿಮಿತ್ತಕಾರಣ ಎಂದು ಹೇಳುತ್ತವೆ. ಉಪಾದಾನಕಾರಣವೆಂದರೆ ಮಣ್ಣು ಮಡಕೆಗೆ ಹೇಗೆ ಕಾರಣವೋ ಹಾಗೆ, ನಿಮಿತ್ತ ಕಾರಣವೆಂದರೆ ಕುಂಬಾರನು ಮಡಕೆಗೆ ಹೇಗೋ ಹಾಗೆ. ಕೆಲವು ಉಪನಿಷತ್ ವಾಕ್ಯಗಳನ್ನು ಕೆಳಗಡೆ ನೋಡಬಹುದು. ಆದರೆ ಪ್ರಪಂಚಕ್ಕೆ ಶ್ರೀಮನ್ನಾರಾಯಣನೇ ಉಪಾದಾನ ಕಾರಣ ಅವನೇ ನಿಮಿತ್ತ ಕಾರಣ.

ಛಾಂದೋಗ್ಯೋಪನಿಷತ್ತಿನಲ್ಲಿ ಸದೇವ ಸೌಮ್ಯ ಇದಂ ಅಗ್ರೇ ಆಸೀತ್ ಏಕಮೇವ ಅದ್ವಿತೀಯಂಬ್ರಹ್ಮ, ತದೈಕ್ಷತ ಬಹುಸ್ಯಾಂ ಪ್ರಜಾಯೇಯೇತಿ ತತ್ತೇಜೋಽಸೃಜತ ಎಂದು ಹೇಳಿದೆ. ಇಲ್ಲಿ ಸತ್ ಎಂದರೆ ಶ್ರೀಮನ್ನಾರಾಯಣ ಎಂದು ಅರ್ಥ.

ಮಹೋಪನಿಷತ್ತಿನಲ್ಲಿ ಏಕೋಹವೈ ನಾರಾಯಣ ಆಸೀತ್‌ನಬ್ರಹ್ಮಾನೇಶಾನಃ ನೇಮೇಪ್ಯಾವಾಪೃಥಿವೀ ಎಂದು ಹೇಳಿದೆ. ಈ ಉಪನಿಷತ್ ವಾಕ್ಯದಲ್ಲಿ ಸಾಕ್ಷಾತ್ತಾಗಿಯೇ ಶ್ರೀಮನ್ನಾರಾಯಣನೇ ಜಗತ್ಕಾರಣವೆಂದು ವ್ಯಕ್ತವಾಯಿತು.

ಆದ್ದರಿಂದ ಈ ಸಮನ್ವಯಾಧ್ಯಾಯದಲ್ಲಿ ಎಲ್ಲಾ ಉಪನಿಷತ್ತಿನಲ್ಲಿರುವ ಜಗತ್‌ಕಾರಣ ವಾಕ್ಯಗಳು ಶ್ರಯಃಪತಿಯಾದ ಶ್ರೀಮನ್ನಾರಾಯಣನನ್ನೇ ಹೇಳುತ್ತವೆ.

ಎರಡನೇ ಅಧ್ಯಾಯವಾದ ಅವಿರೋಧಾಧ್ಯಯವು ಶ್ರೀಮನ್ನಾರಾಯಣನು ಜಗತ್ಕಾರಣವಾಗಿರುವುದರಲ್ಲಿ ಯಾವ ವಿರೋಧವೂ ಇಲ್ಲಾ ಎಂದು ಹೇಳುತ್ತದೆ. ಈ ಅಧ್ಯಾಯದಲ್ಲಿ ಸೂತ್ರಕಾರರಾದ ಬಾದರಾಯಣರು ನಿರೀಶ್ವರಸಾಂಖ್ಯಮತ, ಸೇಶ್ವರ ಸಾಂಖ್ಯಮತ, ವೈಶೇಷಿಕಮತ, ಬೌದ್ಧಮತ, ಜೈನಮತ, ಪಾಶುಪತಮತ ಈ ಮತಗಳನ್ನು ಖಂಡಿಸಿ ಭಾಗವತ್‌ಶಾಸ್ತ್ರ ಎಂದು ಪ್ರಸಿದ್ಧವಾದ ಪಾಂಚರಾತ್ರಾಶಾಸ್ತ್ರಕ್ಕೆ ಪ್ರಾಮಾಣ್ಯವನ್ನು ಸ್ಥಾಪಿಸಿದ್ದಾರೆ.

ಮೂರನೆಯ ಅಧ್ಯಾಯವಾದ ಸಾಧನಾಧ್ಯಾಯದಲ್ಲಿ ಶ್ರೀವೈಕುಂಠದಲ್ಲಿ ದಿವ್ಯದಂಪತಿಗಳಾದ ಮಹಾಲಕ್ಷ್ಮಿ ಮತ್ತು ಶ್ರೀಮನ್ನಾರಾಯಣ ಇವರುಗಳನ್ನು ಹೊಂದಿ ಅವರುಗಳಿಗೆ ಕೈಂಕರ್ಯ ಮಾಡುವುದಕ್ಕೆ ಉಪಾಯವಾದ ಭಕ್ತಿಯೋಗದ ಸವಿವರಗಳನ್ನು ಹೇಳಲ್ಪಟ್ಟಿವೆ. ಭಕ್ತಿಯೋಗ ಎಂದರೆ ಬ್ರಹ್ಮವಿದ್ಯೆ, ಉಪನಿಷತ್ತುಗಳಲ್ಲಿ ಬ್ರಹ್ಮವಿದ್ಯೆಯನ್ನು ಮೂವತ್ತೆರಡು ಪ್ರಕಾರವಾಗಿ ಹೇಳಿದೆ. ನಾನಾ ಶಬ್ದಾದಿ ಭೇದಾತ್ ಎಂಬ ಸೂತ್ರದಲ್ಲಿ ಶ್ರೀಮನ್ನಾರಾಯಣನ ಚರಣಾರವಿಂದಗಳಲ್ಲಿ ಮಹಾಲಕ್ಷ್ಮೀ ಪುರುಷಕಾರ ಮೂಲಕಾ ನಾವು ಮಾಡುವ ಪ್ರಪತ್ತಿಯನ್ನು ಮೋಕ್ಷಕ್ಕೆ ಉಪಾಯ ಎಂದು ಸೂತ್ರಕಾರರು ತಿಳಿಸಿದ್ದಾರೆ.

ನಾಲ್ಕನೆಯ ಅಧ್ಯಾಯವಾದ ಫಲಾಧ್ಯಾಯದಲ್ಲಿ ಭಕ್ತಿಯೋಗ ನಿಷ್ಠನು, ಪ್ರಪತ್ತಿನಿಷ್ಠನು ಮೋಕ್ಷವನ್ನು ಹೊಂದಲಿ ಅಲ್ಲಿ ದಿವ್ಯ ದಂಪತಿಗಳಿಗೆ ಮಾಡುವ ಕೈಂಕರ್ಯ ಪ್ರಕಾರವನ್ನು ಹೇಳಿದೆ.

ಬ್ರಹ್ಮಸೂತ್ರದಲ್ಲಿ ಒಂದೊಂದು ಅಧ್ಯಾಯದಲ್ಲಿ ನಾಲ್ಕು ಪಾದಗಳಿವೆ. ಆದ್ದರಿಂದ ಹದಿನಾರು ಪಾದಗಳನ್ನು ಹೊಂದಿರುವುದು ಬ್ರಹ್ಮಸೂತ್ರ. ಈ ಬ್ರಹ್ಮಸೂತ್ರಗಳಿಗೆ ಅನೇಕ ಭಾಷ್ಯಗಳಿವೆ. ಅವುಗಳಲ್ಲಿ ಮುಖ್ಯವಾದುವು ಆದಿ ಶಂಕರಾಚಾರ್ಯರು ಅದ್ವೈತ ಸಿದ್ಧಾಂತ ಪರವಾಗಿ ರಚಿಸಿರುವ ಸೂತ್ರ ಭಾಷ್ಯ. ಶ್ರೀ ಮಧ್ವಾಚಾರ್ಯರು ದ್ವೈತ ಸಿದ್ಧಾಂತ ಪರವಾಗಿ ರಚಿಸಿರುವ ಸೂತ್ರ ಭಾಷ್ಯ. ಶ್ರೀಭಾಷ್ಯಕಾರರು ಎಂದು ಪ್ರಸಿದ್ಧ ಹೆಸರಿನಿಂದ ಕರೆಯಲ್ಪಡುವ ಶ್ರೀ ಭಾಗವದ್ರಾಮಾನುಜರು ವಿಶಿಷ್ಟಾದ್ವೈತ ಸಿದ್ಧಾಂತ ಪರವಾಗಿ ರಚಿಸಿರುವ ಶ್ರೀಭಾಷ್ಯ ಕಾಶ್ಮೀರದಲ್ಲಿ ಶ್ರೀ ಶಾರದಾಪೀಠದಲ್ಲಿರುವ ಸರಸ್ವತಿ ದೇವಿಯು ಶ್ರೀ ಭಗವದ್ರಾಮಾನುಜರ ಬ್ರಹ್ಮಸೂತ್ರ ಭಾಷ್ಯವನ್ನು ನೋಡಿ ಸಂತೋಷವನ್ನು ಪಡೆದು ಅದಕ್ಕೆ ಶ್ರೀಭಾಷ್ಯ ಎಂದು ನಾಮಕರಣ ಮಾಡಿದಳು ಎಂದು ಸಂಪ್ರದಾಯದಲ್ಲಿ ಪ್ರಸಿದ್ಧವಾಗಿದೆ. ಶ್ರೀ ಭಾಸ್ಕರಾಚಾರ್ಯರು ಭೇದಾ ಭೇದಮತವನ್ನು ಅವಲಂಬಿಸಿ ಬ್ರಹ್ಮಸೂತ್ರಕ್ಕೆ ಭಾಷ್ಯ ಬರೆದಿದ್ದಾರೆ. ಶ್ರೀ ಭಗವದ್ರಾಮಾನುಜರಿಗೆ ಅವರ ಚಿಕ್ಕ ವಯಸ್ಸಿನಲ್ಲಿ ಅವರ ಗುರುವಾಗಿದ್ದು ಅನಂತರ ವಿಶಿಷ್ಟಾದ್ವೈತ ಮತವನ್ನು ಅವಲಂಬಿಸಿದ ಶ್ರೀಯಾದವ ಪ್ರಕಾಶರು ಬ್ರಹ್ಮಸೂತ್ರಗಳಿಗೆ ಒಂದು ಭಾಷ್ಯವನ್ನು ಬರೆದಿದ್ದಾರೆ. ಈಗ ಇದು ಉಪಲಬ್ಧವಾಗಿಲ್ಲಾ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ ಭಾಷ್ಯಕ್ಕೆ ವ್ಯಾಖ್ಯಾನ ಮಾಡಿದ ಶ್ರುತಪ್ರಕಾಶಿಕಾಚಾರ್ಯರು ಎಂದು ಪ್ರಸಿದ್ಧರಾದ ಸುದರ್ಶನ ಭಟ್ಟರು ಒಂದೊಂದು ಅಧಿಕರಣದ ಕೊನೆಯಲ್ಲಿ ಪರೇತು ಎಂದು ಶಂಕರಾಭಾಷ್ಯವನ್ನು ಅನುವಾದ ಮಾಡಿ ಅದನ್ನು ಖಂಡಿಸಿದ್ದಾರೆ. ಅನ್ಯೇತು ಎಂದು ಭಾಸ್ಕರ ಭಾಷ್ಯವನ್ನು ಅನುವಾದ ಮಾಡಿ ಅದನ್ನು ಖಂಡಿಸಿದ್ದಾರೆ. ಅಪರೇತು ಎಂದು ಯಾದವಪ್ರಕಾಶ ಭಾಷ್ಯವನ್ನು ಅನುವಾದ ಮಾಡಿ ಅದನ್ನು ಖಂಡಿಸಿದ್ದಾರೆ..

ಭಗವದ್ರಾಮಾನುಜರು ಶ್ರೀ ಭಾಷ್ಯದ ಮೊದಲನೆಯ ಅಧಿಕರಣವಾದ ಜಿಜ್ಞಾಸಾಧಿಕರಣದ ಒಂದು ಭಾಗವಾದ ಲಘು ಪೂರ್ವಪಕ್ಷದಲ್ಲಿ ಅದ್ವೈತ ಮತದಲ್ಲಿ ಹೇಳಿರುವ ಬ್ರಹ್ಮವಿಚಾರ ಮಾಡುವುದಕ್ಕೆ ಮುಂಚೆ ಕರ್ಮವಿಚಾರ ಮಾಡಬೇಕಾದ ಅವಶ್ಯವಿಲ್ಲಾ, ಏಕೆಂದರೆ ಕರ್ಮವಿಚಾರವು ಭೇದ ಜ್ಞಾನವನ್ನು ಉಂಟಾಗುತ್ತೆ ಅಂದರೆ ಬ್ರಹ್ಮಶಬ್ದದಿಂದ ಹೇಳಲ್ಪಡುವ ಪರಮಾತ್ಮಾ ಶ್ರಿಯಃಪತಿಯಾದ ಶ್ರೀಮನ್ನಾರಾಯಣನು ಬೇರೆ ಜೀವಾತ್ಮನು ಬೇರೆ ಎಂಬ ಜ್ಞಾನವನ್ನು ಉಂಟುಮಾಡುತ್ತೆ ಇದು ಅದ್ವೈತಿಗಳ ಮೂಲ ಸಿದ್ಧಾಂತವಾದ ಐಕ್ಯಜ್ಞಾನ ಅಂದರೆ ಪರಮಾತ್ಮಾ ಜೀವಾತ್ಮಾ ಒಂದೇ ಬೇರೆ ಇಲ್ಲಾ ಎಂಬುವುದಕ್ಕೆ ವಿರೋಧವಾದದು ಎಂಬುದನ್ನು ಅನುವಾದ ಮಾಡಿ ಲಘು ಸಿದ್ಧಾಂತದಲ್ಲಿ ಅದನ್ನು ಬಹಳ ಪ್ರಮಾಣಗಳಿಂದ ಖಂಡಿಸಿ ಕರ್ಮವಿಚಾರವು ಬ್ರಹ್ಮ ವಿಚಾರವನ್ನು ಮಾಡುವುದಕ್ಕೆ ಮುಂಚೆ ಕರ್ಮ ವಿಚಾರವನ್ನು ಮಾಡುವುದು ಬಹಳ ಅವಶ್ಯವೆಂದು ತೀರ್ಮಾನ ಮಾಡಿದರು. ಆದ್ದರಿಂದ ಮೀಮಾಂಸಾ ಶಾಸ್ತ್ರವು ಇಪ್ಪತ್ತು ಅಧ್ಯಾಯಗಳಿಂದ ಇರುವುದರಿಂದ ಒಂದೇ ಶಾಸ್ತ್ರವೆಂದು ಸಮರ್ಥನೆ ಮಾಡಿದರು.

ಮಹಾಪೂರ್ವ ಪಕ್ಷದಲ್ಲಿ ಶ್ರೀ ಭಗವದ್ರಾಮಾನುಜರು ಆದಿಶಂಕರಾಚಾರ್ಯರಿಂದ ಸ್ಥಾಪಿತವಾದ ಅದ್ವೈತಮತ ಪ್ರಕ್ರಿಯೆಯನ್ನು ಅಶ್ಚರ್ಯವಾಗಿ ಅನುವಾದ ಮಾಡಿ ಮಹಾಸಿದ್ಧಾಂತದಲ್ಲಿ ಅದನ್ನು ಖಂಡಿಸಿದರು.

ಅದ್ವೈತಮತ ಪ್ರಕ್ರಿಯೆ ಏನೆಂದರೆ,

(1) ಬ್ರಹ್ಮ ಎಂದು ಹೇಳಲ್ಪಡುವ ಪರಮಾತ್ಮಾ ಒಂದೇ ನಿಜವಾದ ತತ್ವ

(2) ಬ್ರಹ್ಮಕ್ಕಿಂತ ಬೇರೆಯಾದ ಜೀವ, ಪ್ರಪಂಚ, ಬ್ರಹ್ಮದ ಗುಣಗಳು ಎಲ್ಲಾ ಸುಳ್ಳು. ಬ್ರಹ್ಮಕ್ಕೆ ಯಾವ ಗುಣವೂ ಇಲ್ಲಾ. ಅದು ನಿರ್ಗುಣ ಬ್ರಹ್ಮ.

(3) ಬ್ರಹ್ಮಕ್ಕೆ ಅವಿದ್ಯೆ ಎಂದು ಹೇಳಲ್ಪಡುವ ಅಜ್ಞಾನ ಉಂಟಾಗಿ ಆ ಬ್ರಹ್ಮವು ಜೀವಭಾವವನ್ನು ಮತ್ತು ಪ್ರಪಂಚ ಭಾವವನ್ನು ಹೊಂದುತ್ತದೆ.

(4) ಅನುಭೂತಿ, ಸಂವಿತ್ ಎಂದು ಹೇಳಲ್ಪಡುವ ಜ್ಞಾನವು ಬ್ರಹ್ಮವೇ. ಏಕೆಂದರೆ ಅದು ಜ್ಞಾನ ಸ್ವರೂಪ.

(5) ಬ್ರಹ್ಮಕ್ಕೆ ಸಜಾತೀಯ ಭೇದವಿಲ್ಲಾ, ವಿಜಾತೀಯ ಭೇದವಿಲ್ಲಾ ಸ್ವಗತ ಭೇದವಿಲ್ಲಾ, ಸಜಾತೀಯ ಭೇದ ಇಲ್ಲಾ ಅಂದರೆ ಜ್ಞಾನದಿಂದ ಇರುವ ಬ್ರಹ್ಮವೂ ಬೇರೆ ಇಲ್ಲಾ, ಜ್ಞಾನದಿಂದ ಇರುವ ಜೀವನೂ ಬೇರೆ ಇಲ್ಲಾ. ಇಬ್ಬರೂ ಒಂದೇ. ವಿಜಾತೀಯ ಭೇದ ಇಲ್ಲಾ ಅಂದರೆ ಬ್ರಹ್ಮ ಬೇರಿಲ್ಲಾ, ಜ್ಞಾನವೇ ಇಲ್ಲದ ಅಚೇತನವಾದ ಪ್ರಪಂಚವೂ ಬೇರೆ ಇಲ್ಲಾ. ಸ್ವಗತ ಭೇದ ಇಲ್ಲಾ ಅಂದರೆ ಬ್ರಹ್ಮಕ್ಕಿಂತಲೂ ಬೇರೆಯಾದ ಅದರ ಗುಣಗಳಿಲ್ಲಾ ಎಂದು ಅರ್ಥ ಅಥವಾ ನಿರ್ಗುಣ ಬ್ರಹ್ಮ ಎಂದು ಅರ್ಥ.

(6) ಛಾಂದೋಗ್ಯ ಉಪನಿಷತ್ತಿನಲ್ಲಿ ಆರನೇ ಅಧ್ಯಾಯವಾದ ಸಾದ್ವಿದ್ಯಾ ಶ್ವೇತ ಕೇತುವಿಗೆ ಉಪದೇಶ ಮಾಡುವಾಗ "ತತ್ವಮಸಿ" ಎಂದು ಹೇಳುತ್ತಾರೆ. ಅದ್ವೈತ ಸಿದ್ಧಾಂತ ಪ್ರಕಾರ ಇದರ ಅರ್ಥವೇನೆಂದರೆ ತ್ವಂ ಎಂದು ಹೇಳುವ ಶ್ವೇತಕೇತು ಎಂಬ ಜೀವನು ತತ್ ಎಂದು ಹೇಳಲ್ಪಡುವ ಪರಮಾತ್ಮಾ ಎಂದು ಹೇಳಲ್ಪಡುವ ಬ್ರಹ್ಮವಾಗಿ ಇರುತ್ತೀಯೆ ಎಂದು. ಇದರ ತಾತ್ಪರ್ಯವೇನೆಂದರೆ ಜೀವನೇ ಬ್ರಹ್ಮ. ಬ್ರಹ್ಮನೇ ಜೀವ ಎಂದು.

(7) ಅವಿದ್ಯೇ ಎಂದು ಹೇಳುವ ಅಜ್ಞಾನವು ಬ್ರಹ್ಮವನ್ನು ಆಶ್ರಯಿಸಿ ಬ್ರಹ್ಮವು ಜೀವಭಾವವನ್ನು ಹೊಂದಿ, ಪ್ರಪಂಚ ಭಾವವನ್ನು ಹೊಂದಿ ಸಂಸಾರದಲ್ಲಿ ಕಷ್ಟಪಡುವ ಕಾಲದಲ್ಲಿ ಆಚಾರ್ಯನು ಜೀವಭಾವವನ್ನು ಹೊಂದಿದ ಬ್ರಹ್ಮಕ್ಕೆ "ತತ್ವಮಸಿ ಎಂದು ಉಪದೇಶ ಮಾಡಿದಾಗ ಬ್ರಹ್ಮ ಅಜೀವ ಭಾವವನ್ನು ಬಿಟ್ಟು ಬ್ರಹ್ಮವಾಗಿಯೇ ಆಗುತ್ತಾನೆ.

ಶ್ರೀಭಗವದ್ರಾಮಾನುಜರು ಮೇಲೆ ಹೇಳಿದ ಎಂಟು ಅಂಶಗಳನ್ನು ಶ್ರೀ ಭಾಷ್ಯದಲ್ಲಿ ಖಂಡಿಸಿದ್ದಾರೆ.

1) ಭೋಕ್ತಾ ಭೋಗ್ಯಂ ಪ್ರೇರಿತಾರಂ ಚಮತ್ವಾ ಜೇಷ್ಯಃ ತತಃ ತೇನ ಅಮೃತತ್ವಂ ಏತಿ ಎಂಬ ಉಪನಿಷತ್ ವಾಕ್ಯವಿದೆ (ಶ್ವೇತಾಶ್ವತರೋಪನಿಷತ್) ಪ್ರೇರಿತಾ ಎಂದು ಹೇಳಲ್ಪಡುವ ಶ್ರೀಮನ್ನಾರಾಯಣನನ್ನು, ಭೋಕ್ತಾ ಎಂದು ಹೇಳಲ್ಪಡುವ ಜೀವಾತ್ಮ,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ಭೋಗ್ಯಂ ಎಂದು ಹೇಳಲ್ಪಡುವ ಅಚೇತನವಾದ ಈ ಪ್ರಪಂಚವನ್ನು ಯಾರು ತಿಳಿದುಕೊಂಡಿದ್ದಾರೋ ಮತ್ತು ಪ್ರಪಂಚ ಜೀವ ಇವು ಎರಡೂ ಪರಮಾತ್ಮನ ಶರೀರ ಎಂಬ ಜ್ಞಾನ ಯಾರಿಗೆ ಇದೆಯೋ ಅವನು ಮೋಕ್ಷವನ್ನು ಹೊಂದುತ್ತಾನೆ. ಈ ಉಪನಿಷತ್ ವಾಕ್ಯವನ್ನು ಶ್ರೀ ಭಗವದ್ರಾಮಾನುಜರು ಜಿಜ್ಞಾಸಾ ಅಧಿಕರಣದಲ್ಲಿ ಉದಾಹರಿಸಿದ್ದಾರೆ. ಆದ್ದರಿಂದ ಪರಮಾತ್ಮ ಮಾತ್ರ ಸತ್ಯ, ಮಿಕ್ಕಿದ್ದೆಲ್ಲವೂ ಸುಳ್ಳು ಎಂದು ಹೇಳುವುದು ಅಪ್ರಾಮಾಣಿಕವಾದುದು ಅಂದರೆ ಸರಿ ಇಲ್ಲಾ.

2) ಮೇಲೇ ಹೇಳಿದ ಪ್ರಕಾರ ಬ್ರಹ್ಮ, ಜೀವ, ಪ್ರಪಂಚ ಎಲ್ಲವೂ ಸತ್ಯ

3) ಬ್ರಹ್ಮವು ಯಾವಾಗಲೂ ಜ್ಞಾನ ಸ್ವರೂಪವಾಗಿರುವುದರಿಂದ ಅದಕ್ಕೆ ಅವಿದ್ಯೆ ಎಂಬ ಅಜ್ಞಾನ ಉಂಟಾಗುವುದಿಲ್ಲ.

4) ಶ್ರೀ ಭಗವದ್ರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಅನುಭೂತಿ, ಸಂವಿತ್ ಎಂಬ ಪದಗಳು ಬ್ರಹ್ಮ ಎಂದು ಹೇಳಲ್ಪಡುವ ಪರಮಾತ್ಮ ಸ್ವರೂಪವನ್ನು ಹೇಳುವುದಿಲ್ಲ ಅಂದರೆ ಅನುಭೂತಿಯೇ ಬ್ರಹ್ಮವಿಲ್ಲಾ, ಸಂವಿತ್ತೇ ಬ್ರಹ್ಮವಿಲ್ಲಾ. ಈ ಎರಡು ಪದಗಳು ಬ್ರಹ್ಮಕ್ಕೆ ಇರುವ ಧರ್ಮಭೂತ ಜ್ಞಾನವನ್ನು ಅಂದರೆ ಧರ್ಮಭೂತ ಜ್ಞಾನ ಎಂಬ ಕಲ್ಯಾಣ ಗುಣವನ್ನು ಹೇಳುತ್ತವೆ. ಬ್ರಹ್ಮಕ್ಕೆ ಇರುವ ಜ್ಞಾನ ಎರಡು ಪ್ರಕಾರ ಒಂದು ಧರ್ಮ ಜ್ಞಾನ ಇನ್ನೊಂದು ಧರ್ಮಭೂತ ಜ್ಞಾನ. ಧರ್ಮಜ್ಞಾನ ಅಂದರೆ ಬ್ರಹ್ಮಕ್ಕೆ ಉಂಟಾಗುವ "ನಾನು" ಎಂಬ ಜ್ಞಾನ ಶ್ರೀಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು

ಅಹಂ ಕೃತ್ಸ್ನಸ್ಯ ಜಗತಃ ಪ್ರಭಾವಪ್ರಥಯಸ್ತಥಾ

ಅಂದರೆ ನಾನು (ಶ್ರೀ ಕೃಷ್ಣ ಪರಮಾತ್ಮ ಪ್ರಪಂಚಕ್ಕೆಲ್ಲಾ ಅಪಾದಾನ ಕಾರಣ ಮತ್ತು ನಿಮಿತ್ತ ಕಾರಣ, ಅವನೇ ಶೇಷಿ (ಸ್ವಾಮಿ) ಅವನಲ್ಲಿಯೇ ಎಲ್ಲವೂ ಪ್ರಳಯಕಾಲದಲ್ಲಿ ಲಯವನ್ನು ಹೊಂದುತ್ತವೆ. ಧರ್ಮಭೂತ ಜ್ಞಾನವೆಂದರೆ ಒಂದು ವಸ್ತುವನ್ನು ತಿಳಿಯುವುದಕ್ಕೆ ಇದುವೆ ಜ್ಞಾನ. ಈ ಧರ್ಮಭೂತ ಜ್ಞಾನ ಪರಮಾತ್ಮನಿಗೂ, ಜೀವನಿಗೂ ಇರುವ ಒಂದು ಗುಣ. ಜೀವಾತ್ಮನಿಗೂ ಮೇಲೆ ಹೇಳಿದ ಧರ್ಮ ಜ್ಞಾನ ಮತ್ತು ಧರ್ಮ ಭೂತ ಜ್ಞಾನ ಎಂಬ ಎರಡು ಜ್ಞಾನಗಳೂ ಉಂಟು.

5) ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಚಿತ್, ಅಚಿತ್, ಈಶ್ವರ ಎಂಬ ತತ್ವಗಳು ಬೇರೆ ಬೇರೆ. ಚಿತ್ ಎಂಬುದು ಜ್ಞಾನ ಇರುವ ಜೀವಾತ್ಮ, ಅಚಿತ್ ಎಂಬುದು ಜ್ಞಾನ ಇಲ್ಲದಿರುವ ಅಚೇತನ ತತ್ವ, ಪ್ರಪಂಚ ಅಚೇತನ ತತ್ವ. ಈಶ್ವರ ತತ್ವ ಪರಮಾತ್ಮಾ ಎಂದು ಹೇಳಲ್ಪಡುವ ಶ್ರೀಮನ್ನಾರಾಯಣ. ಶ್ರೀಮನ್ನಾರಾಯಣನಿಗೆ ಅಸಂಖ್ಯೇಯವಾದ ಜೀವಾತ್ಮಾಗಳು ಮತ್ತು ಅಚೇತನ ತತ್ವಗಳು ಶರೀರಗಳು ಇವುಗಳಿಗೆ ಅವನೇ ಆತ್ಮಾ.

6) ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿರುವ ತತ್ವಮಸಿ ಎಂಬ ವಾಕ್ಯವು ಶ್ರೀ ಭಗವದ್ರಾಮಾನುಜ ಸಿದ್ಧಾಂತ ಪ್ರಕಾರ ಬ್ರಹ್ಮವೇ ಜೀವ ಮತ್ತು ಪ್ರಪಂಚ ಎಂದು ಹೇಳುವುದಿಲ್ಲ. ಭಗವದ್ರಾಮಾನುಜ ಜಿಜ್ಞಾಸಾಧಿಕರಣದಲ್ಲಿ ಈ ರೀತಿ ಹೇಳಿದ್ದಾರೆ.

"ತತ್ವಮಸ್ಯಾದಿ ವಾಕ್ಯೇಷಂ ಸಾಮಾನಾಧಿಕರಣ್ಯೇ ನ ನಿರ್ವಿಶೇಷ ವಸ್ತು ಐಕ್ಯಪರಂ. ತತ್ ತ್ವಂಪದಯೋಃ ಸವಿಶೇಷ ಬ್ರಹ್ಮಾಭಿಧಾಯಿತ್ವಾತ್, ತತ್ ಪದಂ ಸರ್ವಜ್ಞಂ ಸತ್ಯಸಂಕಲ್ಪಂ ಜಗತ್ಕಾರಣ. ಬ್ರಹ್ಮಪರಾಮೃಶತಿ ತದ್ಯೈಕ್ಷತ ಬಹುಸ್ಯಾಂ ಇತ್ಯರಿಷು ತಸ್ಯೈದ ಪ್ರಕೃತತ್ವಾತ್ ತತ್ ಸಾಮಾನಾಧಿಕರಣ್ಯಂ ತ್ವಂ ಪದಂ ಚ ಅಚಿದ್ವಿಶಿಷ್ಟಾ ಜೀವ ಶರೀರಕಂ ಬ್ರಹ್ಮಪ್ರತಿಪಾದಯತಿ ಪ್ರಕಾರದ್ವಯಾವಸ್ಥಿತ ಏಕ ವಸ್ತು ಪರತ್ವಾತ್ ಸಾಮಾನಾಧಿಕರಣ್ಯಸ್ಯ !!

ಇದರ ಅರ್ಥವೇನೆಂದರೆ ತತ್ವಮಸಿ ಎಂದು ಹೇಳುವ ವಾಕ್ಯಗಳಲ್ಲಿ ನಿರ್ವಿಶೇಷವಾದ ಅಂದರೆ ನಿರ್ಗುಣವಾದ ಬ್ರಹ್ಮವನ್ನು ಹೇಳಲಿಲ್ಲಾ ತತ್ ತ್ವಂ ಪದಗಳು ಸಗುಣವಾದ ಬ್ರಹ್ಮವನ್ನೇ ಹೇಳುತ್ತವೆ. ತತ್ ಎಂಬ ಪದವು ಸರ್ವಜ್ಞನಾಗಿರುವ, ಸತ್ಯಸಂಕಲ್ಪನಾಗಿರುವ ಪ್ರಪಂಚಕ್ಕೆ ಕಾರಣವಾದ ಬ್ರಹ್ಮವನ್ನೇ ಹೇಳುತ್ತದೆ. ತ್ವಂ ಪದವು ಶರೀರದೊಂದಿಗೆ ಇರುವ ಜೀವವನ್ನು ಶರೀರವಾಗಿ ಹೊಂದಿರುವ ಬ್ರಹ್ಮವನ್ನು ಹೇಳುತ್ತದೆ. ಆದ್ದರಿಂದ ತತ್ವಮಸಿ ಎಂಬ ವಾಕ್ಯವು ಜೀವ ಬ್ರಹ್ಮ ಐಕ್ಯವನ್ನು ಹೇಳುವುದಿಲ್ಲ. ಜೀವನಿಗೂ ಬ್ರಹ್ಮಕ್ಕೂ ಶರೀರಾತ್ಮ ಭಾವ ಸಂಬಂಧವೆ ಹೊರತು ಜೀವನು ಯಾವ ಕಾರಣದಿಂದಲೂ ಬ್ರಹ್ಮವಾಗಿ ಆಗುವುದಿಲ್ಲ.

7) ಅದ್ವೈತಿಗಳು ಹೇಳುವ ಅವಿದ್ಯಾವಾದವನ್ನು ಅಂದರೆ ಅವಿದ್ಯೆ ಎಂಬ ಅಜ್ಞಾನ ಬ್ರಹ್ಮವನ್ನು ಆಶ್ರಯಿಸಿ ಬ್ರಹ್ಮವು ಜೀವಭಾವವನ್ನು ಮತ್ತು ಪ್ರಪಂಚ ಭಾವವನ್ನು ಹೊಂದುತ್ತದೆ ಎಂಬ ವಾದವನ್ನು ಭಗವದ್ರಾಮಾನುಜರು ಸಪ್ತವಿಧ ಅನುಪಪತ್ತಿ ಎಂಬ ಪ್ರಕರಣದಲ್ಲಿ ಏಳು ವಿಧವಾಗಿ ಖಂಡಿಸಿದ್ದಾರೆ. ಅನುಪಪತ್ತಿ ಎಂದರೆ ನ್ಯಾಯವಿಲ್ಲಾ ಎಂಬ ಅರ್ಥ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಏಳು ಅನುಪಪತ್ತಿಗಳು ಯಾವುವೆಂದರೆ

I ಆಶ್ರಯಾನುಪತ್ತಿ :- ಬ್ರಹ್ಮ (ಶ್ರೀಮನ್ನಾರಾಯಣನು) ಜ್ಞಾನ ಸ್ವರೂಪನು ಜ್ಞಾನಸ್ವರೂಪವಾಗಿರುವ ಬ್ರಹ್ಮನನ್ನು ಅವಿದ್ಯೆ ಎಂಬ ಅಜ್ಞಾನ ಆಶ್ರಯಿಸಲಾರದು ಅಂದರೆ ಯಾವಾಗಲೂ ಜ್ಞಾನಸ್ವರೂಪದಲ್ಲಿರುವ ಬ್ರಹ್ಮಕ್ಕೆ ಯಾವ ಕಾರಣದಿಂದಲೂ ಅಜ್ಞಾನ ಉಂಟಾಗುವುದಿಲ್ಲ. ಆದ್ದರಿಂದ ಅಜ್ಞಾನ ಬ್ರಹ್ಮವನ್ನು ಆಶ್ರಯಿಸುವುದು ನ್ಯಾಯವಿಲ್ಲಾ.

II ತಿರೋಧ್ನ ಅನುಪಪತ್ತಿ :- ತಿರೋಧಾನ ಅಂದರೆ ಮರೆಯುವುದು. ಅವಿದ್ಯೆ ಎಂಬ ಅಜ್ಞಾನ ಬ್ರಹ್ಮವನ್ನು ಮರೆಯುವಂತೆ ಮಾಡಿದರೆ ಬ್ರಹ್ಮ ಸ್ವರೂಪವೇ ಇಲ್ಲದಂತೆ ಆಗುತ್ತದೆ ಅಂದರೆ ಬ್ರಹ್ಮವೇ ಇಲ್ಲದಂತೆ ಆಗುತ್ತದೆ. ಬ್ರಹ್ಮವು ನಿತ್ಯವಾದ ವಸ್ತು. ಅದಕ್ಕೆ ಉತ್ಪತ್ತಿ ವಿನಾಶಗಳೂ ಇಲ್ಲಾ. ಆದ್ದರಿಂದ ಅವಿದ್ಯೆ ಯಾವುದು ಬ್ರಹ್ಮವನ್ನು ಮರೆಯುವುದಂತೆ ಮಾಡುವುದಕ್ಕೆ ಆಗುವುದಿಲ್ಲ.

III ಸ್ವರೂಪ ಅನುಪಪತ್ತಿ :- ಅದ್ವೈತಿಗಳ ಪ್ರಕಾರ ಬ್ರಹ್ಮವೊಂದೇ ಸತ್ಯ. ಬ್ರಹ್ಮಕ್ಕಿಂತ ಬೇರೆ ಯಾವ ವಸ್ತುಗಳು ಸುಳ್ಳು. ಅವಿದ್ಯೆ ಎಂಬ ಅಜ್ಞಾನ ಬ್ರಹ್ಮಕ್ಕಿಂತ ಬೇರೆಯಾದುದರಿಂದ ಅದು ಸುಳ್ಳು. ಆದ್ದರಿಂದ ಅವಿದ್ಯೆ ಎಂಬ ವಸ್ತುವೇ ಇಲ್ಲಾ.

IV ಅನಿರ್ವಚನೀಯ ಅನುಪಪತ್ತಿ :- ಅನಿರ್ವಚನೀಯ ಎಂದರೆ ಸದಸದ್ವಿಲಕ್ಷಣ ಎಂಬುದು. ಸತ್ ಎಂದರೆ ಒಂದು ವಸ್ತು ಇರುತ್ತದೆ ಅಸತ್ ಎಂದರೆ ಒಂದು ವಸ್ತು ಅಲ್ಲಾ ಎಂಬ ಅರ್ಥ. ಸದಸದ್ವಿಲಕ್ಷಣ ಎಂದರೆ ಅವಿದ್ಯೆ ಎಂಬುದು ಇದೆ ಎಂದು ಹೇಳುವುದಕ್ಕಾಗುವುದಿಲ್ಲಾ. ಅವಿದ್ಯೆ ಇಲ್ಲಾ ಎಂದೂ ಹೇಳುವುದಕ್ಕಾಗುವುದಿಲ್ಲಾ. ಆದ್ದರಿಂದ ಅವಿದ್ಯೆ ಎಂಬುದು ಅನಿರ್ವಚನೀಯ.

V ಪ್ರಮಾಣಾನು ಪ್ರಪತ್ತಿ :- ನಮ್ಮ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಪ್ರತ್ಯಕ್ಷ, ಅನುಮಾನ, ಶಬ್ದ ಎಂಬ ಮೂರು ಪ್ರಮಾಣಗಳು. ಕಣ್ಣಿನಿಂದ ನೋಡುವುದು ಪ್ರತ್ಯಕ್ಷ ಪ್ರಮಾಣ. ಊಹಿಸುವುದು ಅನುಮಾನ ಪ್ರಮಾಣ. ಶಾಸ್ತ್ರದಿಂದ ಒಂದು ವಸ್ತುವನ್ನು ತಿಳಿಯುವುದು ಶಬ್ದ ಪ್ರಮಾಣ. ಬ್ರಹ್ಮಕ್ಕೆ ಅಜ್ಞಾನ ಉಂಟಾಗುವ ಅವಿದ್ಯೆಯನ್ನು ಯಾವ ಪ್ರಮಾಣದಿಂದಲೂ ನಿರೂಪಿಸಲು ಸಾಧ್ಯವಿಲ್ಲಾ.

VI ನಿವರ್ತಕಾನುಪಪತ್ತಿ :- ಬ್ರಹ್ಮಕ್ಕೆ ಉಂಟಾಗುವ ಅವಿದ್ಯೇ ಎಂಬ ಅಜ್ಞಾನವು ತತ್ವಮಸಿ ಎಂಬ ವಾಕ್ಯದಿಂದ ಉಂಟಾಗುವ ಜ್ಞಾನದಿಂದ ನಿವೃತ್ತಿ ಆಗುತ್ತದೆ ಎಂದು ಅದ್ವೈತಿಗಳು ಹೇಳುತ್ತಾರೆ. ಅವಿದ್ಯೆ ಎಂಬ ಒಂದು ವಸ್ತುವೇ ಇಲ್ಲದಿರುವುದರಿಂದ ಅದು ತತ್ವಮಸಿ ಎಂಬ ವಾಕ್ಯದಿಂದ ನಿವೃತ್ತಿ ಆಗುವುದಿಲ್ಲಾ.

VII ನಿವೃತ್ತಿ ಅನುಪಪತ್ತಿ :- ಅವಿದ್ಯೆ ಎಂಬ ಒಂದು ವಸ್ತು ಇದ್ದರೇ ಅದಕ್ಕೆ ನಿವೃತ್ತಿ ಎಂದು ಹೇಳಬಹುದು. ಅವಿದ್ಯೆ ಎಂಬ ಅಜ್ಞಾನ ಅದ್ವೈತಿಗಳ ಕೇವಲ ಕಲ್ಪನೆಯಾದ್ದರಿಂದ ಅದು ನಿವೃತ್ತಿ ಹೊಂದುತ್ತದೆ ಎಂಬ ಮಾತಿಗೆ ಅರ್ಥವಿಲ್ಲಾ

ಮೇಲೆ ಹೇಳಿದ ಪ್ರಕಾರ ಅವಿದ್ಯೆಯನ್ನು ಭಗವದ್ರಾಮಾನುಜರು ಶ್ರೀ ಭಾಷ್ಯದಲ್ಲಿ ಖಂಡಿಸಿದ್ದರಿಂದ ಶ್ರೀ ಭಾಷ್ಯಕ್ಕೆ ಒಂದು ವೈಶಿಷ್ಟ್ಯವು ಉಂಟಾಯಿತು.

ಬ್ರಹ್ಮವಾದ ಶ್ರೀಮನ್ನಾರಾಯಣನು ಸಕಲ ಕಲ್ಯಾಣ ಗುಣ ವಿಶಿಷ್ಟನು. ಆ ಭಗವಂತನು ಯಾವ ಗುಣವೂ ಇಲ್ಲದವನು ಅಂದರೆ ನಿರ್ಗುಣ ಎಂದು ಅದ್ವೈತಿಗಳು ಹೇಳುತ್ತಾರೆ. ಇದು ಎಲ್ಲಾ ಪ್ರಕಾರದಲ್ಲಿಯೂ ವಿರುದ್ಧವಾದುದು. ಭಗವದ್ರಾಮಾನುಜರು ಶ್ರೀ ಭಾಷ್ಯದಲ್ಲಿ ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ ಭಗವಂತನ ಅಸಂಖ್ಯೇಯವಾದ ಕಲ್ಯಾಣಗುಣಗಳನ್ನು ಪದೇ ಪದೇ ಮೇಲೆ ಹೇಳಿದ ಪ್ರಕಾರ ಶ್ರೀಭಾಷ್ಯಕ್ಕೆ ಅಸಾಧಾರಣವಾದ ವೈಶಿಷ್ಟ್ಯವಿದೆ.

ವಿದ್ವಾ ಅನಂತನರಸಿಂಹಾಚಾರ್
160, ದಕ್ಷಿಣ ಚಿತ್ರ ಬೀದಿ, ಶ್ರೀರಂಗಂ - 620 006
ಸರ್ವೇಷಾಂ ಸಮಸ್ತ ಸನ್ಮಂಗಳಾನಿ ಭವಂತು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಉದಕಶಾಂತಿಕರ್ಮಮೀಮಾಂಸಾ

ಲೇಖಕರು : ಮಹಾಮಹೋಪಾಧ್ಯಾಯ, ಪಂಡಿತರಾಜಃ ವಿದ್ಯಾವಾಚಸ್ಪತಿಃ, ಶಾಸ್ತ್ರ ರತ್ನಾಕರಃ, ವೇದರತ್ನಂ,
ವೇದವಿದ್ಯಾವಿಶಾರದಃ, ವೇದ ಭೂಷಣಃ, ಬೃಹಸ್ಪತಿ ರತ್ನಂ, ದೇಶಿಕದರ್ಶನ ಚೂಡಾಮಣಿ, ವೇದವಾರಿಧಿಃ
ಡಾ|| ಎ. ಅನಂತ ನರಸಿಂಹ ಚಾರ್, ಎಂ.ಎ., ಪಿ.ಎಚ್.ಡಿ
ಶ್ರೀಕಾರ್ಯಂ. ಶ್ರೀರಂಗಮ್ ಶ್ರೀಮದಾಂಡವನ್ ಪೌಂಡರೀಕ ಪುರಂ
ಆಶ್ರಮಮ್. ಶ್ರೀರಂಗಮ್ ತಿರುಚ್ಚಿ.

ಯಜ್ಞದೇಹಯಜುಶಾಖಾಕಲ್ಪಸೂತ್ರಪ್ರವರ್ತಕಃ
ಸಕಲಾಮ್ನಾಯ ವಿಜ್ಞೇಯಾತ್ ಆಪಸ್ತಂಭೋಮಹಾಮುನಿಃ ||
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯ ಮಚೀಕರತ್|
ವಿಪಶ್ಚಿತ್ ದಾಸ ತಾಂ ಮೇಧಾಮ್ ಆಪಸ್ತಂಬಃ ಸಮೇಮುನಿಃ ||
ಸಂತಃ ತತ್‌ಸೂತ್ರಗಂಭೀರವ್ಯಾಖ್ಯಾಪ್ರಖ್ಯಾತವೈಭವಾಃ |
ಕಪರ್ದಿಧೂರ್ತಸ್ವಾಮ್ಯಾಧ್ಯಾ ಜೇಜೀಯಂತಾಂ ವಿಮತ್ಸರಾಃ ||
ಋಕ್ ಯಜುಸ್ಸಾಮರೂಪಾಯ ಬ್ರಹ್ಮನಿಃಶ್ವಸಿತಾತ್ಮನೇ |
ಅನಾದ್ಯಂತಾಯ ನಿಗಮ ಪುರುಷಾಯ ನಮೋ ನಮಃ ||
ಶ್ರುತಿಃ ಸ್ಮೃತಿಶ್ಚಯಸ್ಯಾಜ್ಞೇ ಯಸ್ಯ ಯಜ್ಞಾಃ ಸಭಾಜನಂ |
ನಮಃ ಪರಸ್ಮೈ ಜಗತಾಂ ಪತ್ಯೇ ಶ್ರೀವತ್ಸವಕ್ಷಸೇ ||

ಉಂದೀ (ಕ್ಲೇದನೆ - ತೊಯಿಸುವುದು) ಎಂಬ ಧಾತುವಿಗೆ 'ಕುನ್' (ಉಣಾದಿಸೂತ್ರ -೨-೩೧) ಎಂಬ ಪ್ರತ್ಯಯವು ಸೇರಿ, ತೊಯಿಸುವ ಸ್ವಭಾವವುಳ್ಳ ನೀರಿಗೆ ಉದಕ ಎಂಬ ಹೆಸರು ಬಂದಿದೆ. ಪ್ರತಿಯೊಬ್ಬ ಚೇತನರಿಗೂ ಈ ಪ್ರಕೃತಿಯಲ್ಲಿ ಮೂರು ವಿಧವಾದ ದುಃಖಗಳು ಸಂಭವಿಸುತ್ತವೆ. ಅವೇ ಆಧಿಭೌತಿಕ, ಆಧಿದೈವಿಕ, ಮತ್ತು ಆಧ್ಯಾತ್ಮಿಕ ದುಃಖಗಳೆಂದು ಕರೆಯಲ್ಪಡುತ್ತವೆ. ಪೃಥ್ವಿ (ಭೂಮಿ), ಅಪ್ (ನೀರು), ತೇಜಸ್ (ಬೆಳಕು), ವಾಯು (ಗಾಳಿ) ಮತ್ತು ಆಕಾಶವೆಂಬ ಪಂಚ ಭೂತಗಳ ಪರಸ್ಪರ ಸಮ್ಮಿಶ್ರಣದಿಂದ ಈ ಪ್ರಕೃತಿ ಮಂಡಲವು ಮತ್ತು ಅದರಲ್ಲಿರುವ ಎಲ್ಲ ವಿಧವಾದ ಚೇತನರ ದೇಹಗಳೂ ಉತ್ಪತ್ತಿಯಾಗಿವೆ. ಈ ಭೂತಗಳ ಸಮ್ಮಿಶ್ರಣದಲ್ಲಿ ವಿರುಪೇರಾಗುವುದರಿಂದ ಚೇತನರಲ್ಲಿ ಮತ್ತು ಪ್ರಕೃತಿಯಲ್ಲಿ ನಾನಾತರಹದ ರೋಗಗಳು ಕಾಣಿಸಿಕೊಳ್ಳುತ್ತವೆ. ಇವುಗಳಿಂದ ಉಂಟಾಗುವ ದುಃಖಗಳನ್ನು ಆಧಿಭೌತಿಕ ದುಃಖ ಅಥವಾ ತಾಪಗಳೆಂದು ಕರೆಯುತ್ತಾರೆ. ಅಂತಯೇ ಪ್ರಪಂಚದಲ್ಲಿ ನಡೆಯುವ ಎಲ್ಲ ಕೆಲಸ ಕಾರ್ಯಗಳನ್ನು ಪರಮಾತ್ಮನು ಕೆಲ ಕೆಲ ದೇವತೆಗಳ ಅಧಿಪತ್ಯಕ್ಕೆ ವಹಿಸಿದ್ದಾನೆ. ಉದಾಹರಣೆಗೆ ಪ್ರಪಂಚದಲ್ಲಿ ಬೆಳಕನ್ನು ಕೊಡುವುದು ಸೂರ್ಯನ ಕಾರ್ಯ. ಅಂತೆಯೇ ಕಾಲದಲ್ಲಿ ಮಳೆಯನ್ನು ಸುರಿಸುವುದು ಇಂದ್ರ ಮತ್ತು ವರುಣನಿಗೂ, ಚೇತನರಿಗೆ ಐಶ್ವರ್ಯವನ್ನು ಕೊಡುವುದನ್ನು ಅಗ್ನಿ ಮತ್ತು ಕುಬೇರನಿಗೂ ಎಲ್ಲ ಚೇತನರೂ ಉಸಿರಾಡಲು ಬೇಕಾದ ಗಾಳಿಯನ್ನು ಕೊಡುವುದನ್ನು ವಾಯುವಿಗೂ ಅವರವರು ಅವರವರ ದೇಹದಲ್ಲಿ, ಅವರವರ ಪೂರ್ವಾರ್ಜಿತವಾದ ಪುಣ್ಯಪಾಪ ಕೆಲಸಗಳಿಗೆ ಅನುಗುಣವಾಗಿ ಪ್ರಕೃತ ದೇಹದಲ್ಲಿ ಸುಖ ದುಃಖಗಳೆಲ್ಲಾ ಅನುಭವಿಸಿದ ನಂತರ, ಅವರು ದೇಹವನ್ನು ಬಿಟ್ಟು, ಬೇರೊಂದು ದೇಹ (ಅಥವಾ ಜನ್ಮ)ವನ್ನು ಪಡೆಯುವಂತೆ ಮಾಡುವ ಅಧಿಕಾರವನ್ನು ಯಮಧರ್ಮನಿಗೂ ಇದೇ ಮುಂತಾದ ಕೆಲಕೆಲ ಕಾರ್ಯಗಳನ್ನು ಕೆಲಕೆಲ ದೇವತೆಗಳಿಗೆ ಪರಮಾತ್ಮನು ಮಾಡಲು ನಿಯಮಿಸಿದ್ದಾನೆ. ದೇವತೆಗಳು ಆಯಾಕಾಲದಲ್ಲಿ ಚೇತನರಿಗೆ ಹಿತವಾಗುವಂತೆ ಅವರಿಗೆ ಬೇಕಾದ ಮಳೆ, ಗಾಳಿ, ಪೈರು, ದವಸ, ಧಾನ್ಯಗಳು ಮತ್ತು ಅನ್ನವೇ ಮುಂತಾದವುಗಳನ್ನು ಚೇತನರಿಗೆ ಕೊಟ್ಟು ರಕ್ಷಿಸುವ ದೇವತೆಗಳ ಕಾರ್ಯಕ್ಕೆ ಪ್ರತಿಯಾಗಿ, ಆಯಾಯಾ ದೇವತೆಗಳನ್ನು ಕೆಲಕೆಲ ನಿರ್ದಿಷ್ಟವಾದ ಕಾಲದಲ್ಲಿ ಅವರವರ ಯೋಗ್ಯತೆಗೆ ಅನುಸಾರವಾಗಿ ಯಜ್ಞಯಾಗಾದಿ ಕರ್ಮಾನುಷ್ಠಾನಾದಿಗಳಲ್ಲಿ ಪೂಜಿಸಬೇಕೆಂದು ಪರಮಾತ್ಮನು "ಶ್ರುತಿಸ್ಮೃತೀ ಮಮೈವಾಜ್ಞಾ" ಎಂದು ಅವನೇ ಹೇಳಿರುವಂತೆ ತನ್ನ ಆಜ್ಞಾರೂಪವಾದ ಶ್ರುತಿ ಸ್ಮೃತಿಗಳಲ್ಲಿ ಕಟ್ಟಳೆ ಇಟ್ಟಿದ್ದಾನೆ. ಅವನ ಕಟ್ಟಳೆಯನ್ನು ಪರಿಪಾಲನೆ ಮಾಡದ ಚೇತನರು ಅವನು ಹೇಳಿದಂತೆ ದೇವತೆಗಳನ್ನು ಪೂಜಿಸದ, ಅಧಿಕ ಸಂಖ್ಯೆಯಲ್ಲಿರುವ, ಸ್ಥಳಗಳಲ್ಲಿ ಅತಿಯಾಗಿ ಮಳೆಯಾಗುವಿಕೆ (ಅತಿವೃಷ್ಟಿ), ಮಳೆಯೇ ಆಗದಿರುವಿಕೆ (ಅನಾವೃಷ್ಟಿ) ಜ್ವಾಲಾಮುಖಿಗಳು ಉತ್ಪನ್ನವಾಗುವಿಕೆ, ಸುನಾಮಿಯಿಂದ ಕೆಲಭಾಗಗಳಲ್ಲಿ ಜಲ ಪ್ರಳಯವಾಗುವಿಕೆ, ಅಣು ಸ್ಥಾವರಗಳ ಸ್ಫೋಟವಾಗುವಿಕೆ, ಕೆಲ ರೋಗಾಣುಗಳ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಉತ್ಪನ್ನವಾಗುವಿಕೆ ಮುಂತಾದ ಕೆಲ ಪ್ರಕೃತಿ ವಿಕೋಪಗಳಿಂದ ಚೇತನರಿಗೆ ನಾನಾ ತರಹದ ದುಃಖಗಳು ಸಂಭವಿಸುತ್ತವೆ. ಈ ತರಹದ ದುಃಖಗಳು ದೇವತೆಗಳ ವಿಕೋಪದಿಂದ ಉಂಟಾಗುವುದರಿಂದ ಇವುಗಳನ್ನು ಆಧಿದೈವಿಕ ದುಃಖ ಅಥವಾ ಆಧಿಧೈವಿಕ ತಾಪಗಳೆಂದು ಕರೆಯುತ್ತಾರೆ.

ಪ್ರಕೃತಿಯಲ್ಲಿರುವ ಚೇತನರಿಗೆ ಅವರವರ ಪೂರ್ವಜನ್ಮದ ಕರ್ಮವಾಸನೆಗೆ ಅನುಗುಣವಾಗಿ ಅವರೊಡನೆಯೇ ಅಂಟಿಕೊಂಡು ಬಂದಿರುವ ಕಾಮ (ಆಸೆ), ಕ್ರೋಧ (ಕೋಪ), ಲೋಭ (ದುರಾಸೆ), ಮೋಹ (ಬಿಡಲಾಗದಿರುವ ಆಸೆ), ಮದ (ಕೊಬ್ಬು), ಮಾತ್ಸರ್ಯ (ಮತ್ತೊಬ್ಬರು ಅಭಿವೃದ್ಧಿಗೆ ಬಂದರೆ ಅದನ್ನು ಸಹಿಸಲಾಗದಿರುವ ಕೆಟ್ಟ ಗುಣವಾದ ಹೊಟ್ಟೆಕಿಚ್ಚು) ಮುಂತಾದವುಗಳಿಂದ ಸಂಭವಿಸುವ ಮಾನಸಿಕ ರೋಗಗಳು ಮತ್ತು ಅವುಗಳಿಂದ ಬರುವ ದುಃಖಗಳನ್ನು ಆಧ್ಯಾತ್ಮಿಕ ದುಃಖ ಅಥವಾ ಆಧ್ಯಾತ್ಮಿಕ ತಾಪವೆಂದು ಕರೆಯುತ್ತಾರೆ.

ಜನ್ಮವನ್ನು ಪಡೆದ ಚೇತನರೆಲ್ಲರಿಗೂ ಅವರ ಕರ್ಮಾನುಗುಣವಾಗಿ ಮರಣವು ಸಂಭವಿಸಿಯೇ ತೀರುತ್ತದೆ. ಅಂತಯೇ ಮರಣ ಹೊಂದಿದ ಚೇತನರೆಲ್ಲರಿಗೂ ಹುಟ್ಟು, ಅಥವಾ ಜನ್ಮವು ನಿಶ್ಚಯವಾಗಿ ಉಂಟಾಗುತ್ತದೆ. "ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ" (ಭ. ಗೀತಾ). ಆದುದರಿಂದ ಈ ಹುಟ್ಟುಸಾವಿನ ಚಕ್ರವು ಒಂದಾದ ನಂತರ ಒಂದು ಮತ್ತೆ ಮತ್ತೆ ಅನೂಸ್ಯೂತವಾಗಿ ಬರುವುದರಿಂದ ಈ ಹುಟ್ಟು ಸಾವಿನ ಸಾಲನ್ನು (ಸಮ್ಯಶ್ ಸರತಿ) "ಸಂಸಾರ" ಎಂದು ಕರೆಯುತ್ತಾರೆ.

ಈ ಸಂಸಾರದಲ್ಲಿ ಚೇತನರಿಗೆ ಬುರುವ ಮೇಲೆ ಹೇಳಿದ ಮೂರು ವಿಧವಾದ ತಾಪಗಳನ್ನು ಕೂಡಿಸಿ "ಸಂಸಾರ ತಾಪತ್ರಯ"ಗಳೆಂದು ಕರೆಯುತ್ತಾರೆ.

ಸಂಸಾರದ ಮೂರು ವಿಧವಾದ ತಾಪತ್ರಯಗಳನ್ನು ನಿವಾರಿಸಿಕೊಂಡು ಚೇತನರು ಸಂತೋಷವಾಗಿ ಬಾಳಬೇಕಾದುದೆ ಚೇತನರ ಗುರಿಯಾಗಿರುತ್ತದೆ. ಈ ತಾಪತ್ರಯಗಳ ನಿವಾರಣೆಗೋಸ್ಕರವಾಗಿ ಕೆಲ ಕೆಲ ದೇವತೆಗಳನ್ನು ಪ್ರಾರ್ಥನೆ ಮಾಡಬೇಕೆಂದು ಭಗವಂತನ ನಿಃಶ್ವಾಸರೂಪವಾದ ವೇದ ಮಂತ್ರಗಳು ನಮಗೆ ತಿಳಿಸಿ ಕೊಟ್ಟಿರುತ್ತವೆ.

ವೇದ ಮಂತ್ರಗಳನ್ನು ಯಾವೊಬ್ಬ ಚೇತನರೂ ರಚಿಸಲಿಲ್ಲ. ಪರಬ್ರಹ್ಮನು ಎಲ್ಲೆಡೆಯೂ ವ್ಯಾಪಿಸಿಕೊಂಡಿರುವುದರಿಂದ ಅವನಿಗೆ ಬ್ರಹ್ಮ ಎಂದು ಹೆಸರು. ವೇದಮಂತ್ರಗಳು ಪರಬ್ರಹ್ಮನಂತೆಯೇ ನಿತ್ಯವಾಗಿ, ಅಳಿವಿಲ್ಲದೇ, ಪ್ರಪಂಚದಲ್ಲಿ ಎಲ್ಲೆಡೆಯೂ ಹರಡಿ ಕೊಂಡಿರುವ ಸ್ವಭಾವವುಳ್ಳ, ದಿವ್ಯವಾದ ಶಬ್ದ ಸ್ವರೂಪದಲ್ಲಿರುವ ವಾಣಿ ಅಥವಾ ಮಾತುಗಳು. ಇವು ಎಲ್ಲೆಡೆಯಲ್ಲಿಯೂ ಹರಡಿರುವುದರಿಂದ ಇವುಗಳನ್ನು 'ಶಬ್ದಬ್ರಹ್ಮ' ಎಂದು ಕರೆಯುತ್ತಾರೆ. 'ಬೃಹತ್ವಾತ್ ಬೃಂಹಿತಶ್ಚಾಚ್ಚ ಬ್ರಹ್ಮ'

ತಪಸ್ಸಿನ ಸಮಾಧಿ ಸ್ಥಿತಿಯಲ್ಲಿರುವ ಮಹರ್ಷಿಗಳು, ಲೋಕ ಹಿತಕ್ಕೋಸ್ಕರ ಪರಮಾತ್ಮನ ನಿಃಶ್ವಾಸದಿಂದ ಹೊರಹೊಮ್ಮುವ ಕೆಲ ಕೆಲ ಫಲಗಳನ್ನು ಈಯುವ ವೇದಮಂತ್ರಗಳನ್ನು ತಾವು ಸಾಕ್ಷಾತ್ಕರಿಸಬೇಕೆಂದು ಪರಮಾತ್ಮನಲ್ಲಿ ಮೊರೆಯಿಟ್ಟಾಗ, ಶಬ್ದಬ್ರಹ್ಮ ಸ್ವರೂಪವಾದ ಮಂತ್ರಗಳನ್ನು ಅವರ ಯೋಗ ಸಮಾಧಿಯಲ್ಲಿ ಸಾಕ್ಷಾತ್ಕರಿಸಿದರು. ಈ ಮಂತ್ರಗಳು ಪುರುಷ ಪ್ರಣೀತವಲ್ಲದುದರಿಂದ ಇವುಗಳನ್ನು "ಅಪೌರುಷೇಯ" ಮಂತ್ರಗಳೆಂದೂ, ಇವುಗಳು ಜ್ಞಾನ ಬೊಧಕವಾದುದರಿಂದ (ವಿದ್-ಜ್ಞಾನೇ) ಎಂಬ ಧಾತುವಿನಿಂದ ಉತ್ಪನ್ನವಾದ ವೇದ ಶಬ್ದದಿಂದಲೂ, ಇವುಗಳು ಗುರುಶಿಷ್ಯ ಪರಂಪರೆಯಲ್ಲಿ ಕೇವಲ ಕಿವಿಯಿಂದ ಕಿವಿಗೆ ಕೇಳಿ ಪರಂಪರಾಗತವಾಗಿ ಬರುತ್ತಿರುವುದರಿಂದ ಇವುಗಳನ್ನು 'ಶ್ರುತಿ' ಎಂದೂ ಕರೆಯುತ್ತಾರೆ.

ವೇದದ ಕೆಲವು ಮಂತ್ರಗಳಲ್ಲಿ ವಿಶೇಷವಾಗಿ ಚೇತನರ ತಾಪತ್ರಯಗಳ ದುಃಖಗಳು ಶಾಂತವಾಗಬೇಕೆಂದು ಪ್ರಾರ್ಥಿಸುವುದರಿಂದ ಇವುಗಳನ್ನು ಶಾಂತಿ ಮಂತ್ರಗಳೆಂದು ಕರೆದಿರುತ್ತಾರೆ. ವಿಶೇಷವಾಗಿ ಶಿಷ್ಯನಾದವನು ತನ್ನ ಗುರುವಿನ ಸಮೀಪದಲ್ಲಿ ಕುಳಿತು ರಹಸ್ಯವಾದ, ಕರ್ಮಬಂಧದಿಂದ ತನ್ನನ್ನು ಮುಕ್ತಿಗೊಳಿಸುವ 'ಸಾ ವಿದ್ಯಾ ಯಾವಿಮುಕ್ತಯೇ' ವಿದ್ಯೆಗಳನ್ನು ತಿಳಿದುಕೊಳ್ಳುವ ಉಪನಿಷತ್ ಎಂಬ ವೇದ ಮಂತ್ರಗಳ ಆರಂಭ ಮತ್ತು ಕೊನೆಯಲ್ಲಿ ಗುರುಶಿಷ್ಯರಿಬ್ಬರೂ ಅವರ ಕಲಿಕೆಯಲ್ಲಿ ಸಂಸಾರದ ತಾಪತ್ರಯಗಳಿಂದ ಅವರಿಗೆ ಯಾವ ವಿಧವಾದ ವಿಘ್ನಗಳು ಸಂಭವಿಸದಿರಲೆಂದು ಪ್ರಾರ್ಥಿಸುವ ಆದಿ ಮತ್ತು ಅಂತ್ಯಗಳಲ್ಲಿ ಹೇಳಲ್ಪಡುವ ಶಾಂತಿ ಮಂತ್ರಿಗಳಲ್ಲಿ "ಓಂ ಶಾಂತಿಃ ಶಾಂತಿಃ ಶಾಂತಿಃ" ಎಂದು ಹೇಳಿ ಅವರವರ ಸಂಸಾರದ ಮೂರು ವಿಧವಾದ ತಾಪಗಳೂ ಶಾಂತವಾಗಿ ಅವರವರಿಗೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತಾರೆ.

ಈ ಶಾಂತಿ ಮಂತ್ರಗಳನ್ನು ಕೇವಲ ಪಠಿಸಿ ಪ್ರಾರ್ಥಿಸುವುದರಿಂದ ಚೇತನರ ತಾಪತ್ರಯಗಳಿಂದ ಬರುವ ದೋಷಗಳು ಸ್ವಲ್ಪಮಟ್ಟಿಗೆ ಶಮನವಾಗುತ್ತವೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕೆಲ ಶಾಂತಿ ಮಂತ್ರಗಳನ್ನು ಪಠಿಸಿ, ಪಠಿಸಿ, ಸಮಯದಲ್ಲಿ ಅವುಗಳ ಉಚ್ಚಾರಣೆಯಿಂದ ಉತ್ಪನ್ನವಾಗುವ ಶಬ್ದ ಸ್ಫುರಣಗಳಿಂದ ಕೂಡಿದ ಶಬ್ದದ ಅಲೆಗಳ ಶಕ್ತಿಯನ್ನು ತೀರ್ಥದ ಮಾಧ್ಯಮದಲ್ಲಿ ಶೇಖರಿಸಿ, ಆ ತೀರ್ಥದಿಂದ ಆಧಿ ವ್ಯಾಧಿಗಳಿಂದ ನರಳುತ್ತಿರುವ ಚೇತನರು ಅವುಗಳಿಂದ ಮುಕ್ತರಾಗಲು ಮತ್ತು ಕೆಲ ಚೇತನರು ವಿಶೇಷವಾದ ವಿದ್ಯಾಕಲಿಕೆಗೆ ಸಹಾಯವಾಗುವ ಗ್ರಹಣ ಧಾರಣ ಶಕ್ತಿ, ಬುದ್ಧಿಯ ಚುರುಕುತನ ಅಥವಾ ನೈಪುಣ್ಯ ಮುಂತಾದವುಗಳನ್ನು ಪಡೆದುಕೊಳ್ಳಲು ಆ ತೀರ್ಥವನ್ನು ಮೇಲೆ ಹೇಳಿದ ಫಲಗಳನ್ನು ಪಡೆಯಬೇಕಾದ ಚೇತನರಿಗೆ ಕೆಲ ಮಂತ್ರಗಳನ್ನು ಉಚ್ಚರಿಸುತ್ತಾ, ತೀರ್ಥದ ಶಬ್ದ ಶಕ್ತಿ ಅಧಿಕವಾಗುವಂತೆ ಮಾಡುತ್ತಾ ವೇದಾಧ್ಯಯನ ಸಂಪನ್ನರಿಂದ ಪ್ರೋಕ್ಷಿಸಿ ಮತ್ತೆ ಅದರಿಂದಲೇ ಅಭಿಷೇಕವನ್ನು ಮಾಡಿ ಅವರ ದೇಹವನ್ನು ತೊಯ್ಯುವಂತೆ ಮಾಡಿ ಆ ತೀರ್ಥವನ್ನು ಪ್ರಾಶನವನ್ನು ಮಾಡಿಸಿ, ಆಂತರಿಕವಾಗಿಯೂ ದೇಹದ ಇಂದ್ರಿಯಗಳೆಲ್ಲವೂ ತೊಯ್ಯುವಂತೆ ಮಾಡಿ ಅವರ ಇಷ್ಟಾರ್ಥಗಳು ನೆರವೇರುವಂತೆ ಮಾಡುತ್ತಾರೆ. ಈ ರೀತಿಯಾಗಿ ಚೇತನರ ಬಾಹ್ಯ ಮತ್ತು ಆಭ್ಯಂತರ ಸರ್ವೇಂದ್ರಿಯಗಳು ತೀರ್ಥದಿಂದ ತೊಯ್ಯುವಂತೆ ಮಾಡುವುದರೊಡನೆ ಈ ಮಂತ್ರಪೂತವಾದ ತೀರ್ಥವು ಚೇತನರ ತಾಪತ್ರಯಗಳನ್ನು ಕಳೆದುಹಾಕುತ್ತವೆ. ಈ ಮಂತ್ರಗಳನ್ನು ಕೇವಲ ಪಠಿಸುವುದರಿಂದ ವಿಶೇಷವಾದ ಫಲ ಲಭಿಸುವುದಿಲ್ಲ. ಈ ಮಂತ್ರ ಪಾರಾಯಣದಿಂದ ಶಕ್ತಿಯುತವಾದ ತೀರ್ಥದಿಂದ ಚೇತನರ ಹೊರಗೂ ಮತ್ತು ಒಳಗೂ ತೊಯ್ಯಿಸುವುದರಿಂದ ಅವರ ತಾಪತ್ರಯಗಳೂ ಶಾಂತವಾಗುವುದರಿಂದ ಈ ರೀತಿಯಾದ ಸಂಸ್ಕಾರ ಕರ್ಮಕ್ಕೆ ಉದಕ ಶಾಂತಿಯೆಂದು ಹೆಸರು. 'ಉದಿಕ್ಲೇದನೆ ಇತಿ ಧಾತೋಃ ಕ್ಲೇದನಾರ್ಥೆ ಉದಕ ಶಬ್ದ ಉತ್ಪನ್ನಃ ಉದಕೇನ ಪವಿತ್ರೀಕೃತ ತೀರ್ಥೇನ ಸಂಸ್ಕಾರಿಣ ಬಾಹ್ಯಾಭ್ಯಂತರ ಶರೀರ ಕ್ಲೇದನಂ ಯೇನ ಕರ್ಮಣಾ ಕ್ರಿಯತೇ ತಥಾ ತಾಪತ್ರಯಃ ಅಪಿಶಾಮ್ಯತಿ ತತ್ ಸಂಸ್ಕಾರ ಕರ್ಮ ಉದಕಶಾಂತಿ ಕರ್ಮ' ಇತಿ.

ಕರ್ಮವನ್ನು ಮಾಡುಲು ಬೇಕಾದ ಶ್ರದ್ಧಾಗುಣವು ಆಪ್‌ತತ್ತ್ವದ ಸ್ವರೂಪವಾಗಿರುತ್ತದೆ. ಶ್ರದ್ಧಾಗುಣವೇ ಮೊದಲು ಪ್ರಾರಂಭಿಸಿ, ವಿಶೇಷವಾಗಿ ಒಯ್ದು (ಎಲ್ಲ ಕರ್ಮಗಳನ್ನೂ ನಾವು ಅನುಭವಿಸಲು ಅನುಕೂಲವಾಗುವಂತೆ) ಸಂಚರಿಸುವಂತೆ ಮಾಡುತ್ತದೆ. ಯಜ್ಞವೂ ಆಪ್‌ತತ್ತ್ವದ ಪ್ರತೀಕವೇ ಆಗಿರುತ್ತದೆ. ಯಜ್ಞವನ್ನು ಆರಂಭಿಸಿ ಯಾಗವನ್ನು ಪೂರ್ಣವಾಗಿ ಆಶ್ರಯಿಸಿಕೊಂಡು ಯಜ್ಞವನ್ನು ಪೂರ್ಣಗೊಳಿಸುತ್ತವೆ. ತೀರ್ಥವೇ ವಜ್ರಾಯುಧದ ಸ್ವರೂಪವಾಗಿರುತ್ತದೆ. ವಜ್ರಾಯುಧದಂತಿರುವ ತೀರ್ಥವು ಶತ್ರುಗಳನ್ನು ಹೊಡೆದು, ಯಾರಿಂದಲೂ ತಮಗೆ ತೊಂದರೆ ಬಾರದಂತೆ ಮಾಡಿ ನಮ್ಮನ್ನು ಸುಖವಾಗಿ ಸಂಚರಿಸುವಂತೆ ಮಾಡುತ್ತದೆ. ತೀರ್ಥವೇ ರಾಕ್ಷಸರನ್ನು ಅಳಿಸುವ ಸ್ವರೂಪದಲ್ಲಿರುತ್ತದೆ. ರಾಕ್ಷಸರನ್ನು ಕೊಂದು ದೂರ ತಳ್ಳುತ್ತದೆ. ತೀರ್ಥವೇ ದೇವತೆಗಳಿಗೆ ಇರಲು ಶ್ರೇಷ್ಠವಾದ ಸ್ಥಾನವಾಗಿರುತ್ತದೆ. ಮರಣರಾಹಿತ್ಯವನ್ನು ಉಂಟುಮಾಡುವ ಅಮೃತಸ್ವರೂಪದಲ್ಲಿ ತೀರ್ಥವಿರುತ್ತದೆ. ಆದುದರಿಂದ ತೀರ್ಥದಿಂದ ಪರಿಪೂರ್ಣವಾದ ರಕ್ಷಣೆ ಸಿಗುವಂತೆ ಅಭಿಷೇಕ ಮಾಡುತ್ತಾರೆ. ತೀರ್ಥವು ಎಲ್ಲ ದೇವತಾಸ್ವರೂಪದಲ್ಲಿಯೂ ಇರುತ್ತದೆ. ದೇವತೆಗಳಿಂದ ಆರಂಭಿಸಿಯೇ ಸರಿಯಾದ ರೀತಿಯಲ್ಲಿ ಒಯ್ಯಲ್ಪಟ್ಟು ಕೆಲಸವು ನಡೆಯುವಂತೆ ಮಾಡುತ್ತದೆ. ತೀರ್ಥವೇ ಶಾಂತಸ್ವರೂಪವಾಗಿರುತ್ತದೆ. ಶಾಂತಸ್ವರೂಪದ ತೀರ್ಥದಿಂದಲೇ, ಸಂಸ್ಕರಿಸಲ್ಪಡುವ ವ್ಯಕ್ತಿಯಲ್ಲಿರುವ ಎಲ್ಲ ವಿಧವಾದ ದುಃಖವೂ ಶೋಕವೂ ಶಮನಗೊಳ್ಳುತ್ತದೆ - ಎಂದು ಬ್ರಾಹ್ಮಣ ವಾಕ್ಯಗಳು ತಿಳಿಸಿರುವುದರಿಂದ ಪವಿತ್ರನಾಗಿರುವ ಕರ್ತೃವಿನಿಂದ ಶಾಂತಿಯನ್ನುಂಟುಮಾಡುವ ಮಂತ್ರಪೂತವಾದ ತೀರ್ಥವು ಸಿದ್ಧಪಡಿಸಲ್ಪಡುತ್ತದೆ. ಈ ಮೇಲೆ ಹೇಳಿದ ವಿಷಯಗಳೆಲ್ಲವೂ ಈ ಕೆಳಕಂಡ ಮಂತ್ರಗಳಲ್ಲಿ ವಿವರಿಸಲ್ಪಟ್ಟಿದೆ:

"ಅಪಃ ಪ್ರಣಯತಿ | ಶ್ರದ್ಧಾ ವಾ ಆಪಃ | ಶ್ರದ್ಧಾಮೇವಾರಭ್ಯ ಪ್ರಣೀಯ ಪ್ರಚರತಿ | ಅಪಃ ಪ್ರಣಯತಿ | ಯಜ್ಞೋ ವಾ ಆಪಃ | ಯಜ್ಞಮೇವಾರಭ್ಯ ಪ್ರಣೀಯ ಪ್ರಚರತಿ | ಅಪಃ ಪ್ರಣಯತಿ | ವಜ್ರೋವಾ ಆಪಃ | ವಜ್ರಮೇವ ಭ್ರಾತೃವ್ಯೇಭ್ಯಃ ಪ್ರಹೃತ್ಯ ಪ್ರಣೀಯ ಪ್ರಚರತಿ | ಅಪಃ ಪ್ರಣಯತಿ | ಆಪೋ ವೈ ರಕ್ಷೋ ಘ್ನೀಃ | ರಕ್ಷಸಾಮಪರತ್ಯೈ | ಅಪಃ ಪ್ರಣಯತಿ | ಆಪೋ ವೈ ದೇವಾನಾಂ ಪ್ರಿಯಂ ಧಾಮ | ದೇವಾನಾಮೇವ ಪ್ರಿಯಂ ಧಾಮ ಪ್ರಣೀಯ ಪ್ರಚರತಿ | ಅಪಃ ಪ್ರಣಯತಿ | ಆಪೋ ವೈ ಸರ್ವಾ ದೇವತಾಃ | ದೇವತಾ ಏವಾರಭ್ಯ ಪ್ರಣೀಯ ಪ್ರಚರತಿ | ಅಪಃ ಪ್ರಣಯತಿ | ಆಪೋ ವೈ ಶಾನ್ತಾಃ ಶಾನ್ತಾಭಿರೇವಾಸ್ಯ ಶುಚಗ್ಂ ಶಮಯತಿ ||"

ಭಗವತ್ ಭೋದಾಯನ ಮಹರ್ಷಿಗಳು ತಮ್ಮ ಗೃಹ್ಯ ಸೂತ್ರದಲ್ಲಿ ಈ ಉದಕಶಾಂತಿ ಕರ್ಮವನ್ನು ಜನ್ಮನಕ್ಷತ್ರ ಅಥವಾ ಪುಣ್ಯನಕ್ಷತ್ರ ದಿನದಲ್ಲಿ, ವಿವಾಹ, ಚೌಲ, ಉಪನಯನ ಸಮಾವರ್ತನ, ಸೀಮಂತ, ಅಗ್ನ್ಯಾಧಾನವೇ ಮೊದಲಾದ ಮಂಗಳ ಕರ್ಮಗಳಲ್ಲಿಯೂ ಚಂದ್ರ, ಸೂರ್ಯಗ್ರಹಣ ಸಮಯದಲ್ಲಿಯೂ, ಗ್ರಹಗಳು ಸಂಚರಿಸಿ ಬೀಳುವಾಗಲೂ, ಎರಡು ಕಾಲುಗಳುಳ್ಳ ಮನುಷ್ಯರಿಗೆ, ನಾಲ್ಕು ಕಾಲುಗಳುಳ್ಳ ಹಸುವೇ ಮೊದಲಾದ ಪ್ರಾಣಿಗಳಿಗೆ ಭಯವು ಸಂಭವಿಸಿದಾಗ ಈ ಉದಕ ಶಾಂತಿಯನ್ನು ಆರಂಭಿಸಿ ಮಾಡಬೇಕು. ಮತ್ತೆ ಸರ್ವವಿಧವಾದ ಶುದ್ಧಿಗಾಗಿ ಶ್ರದ್ಧಾಮೇಧಾದಿ ಗುಣಗಳನ್ನು ಪಡೆಯುವ ಸಲುವಾಗಿಯೂ ಮತ್ತು ಮಂಗಳ ಕಾರ್ಯಗಳಲ್ಲಿ ಆದಿತ್ಯಾದಿ ನವಗ್ರಹಗಳಿಂದ ಶುಭಫಲಪ್ರಾಪ್ತಿಗಾಗಿಯೂ, ಈ ಉದಕಶಾಂತಿಮಂತ್ರಜಪ ಕರ್ಮವನ್ನು ಮಾಡಿಯೇ ತೀರಬೇಕೆಂದು ಸೂಚಿಸಿರುತ್ತಾರೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

'ತಸ್ಮಾತ್ ಪವಿತ್ರೇಣ ಶಾಂತ್ಯುದಕಂ ಕರೋತಿ, ಜನ್ಮನಕ್ಷತ್ರೇ ಪುಣ್ಯೇ ನಕ್ಷತ್ರೇ ವಿವಾಹಚಾಲೋಪನಯನ ಸಮಾವರ್ತನಸೀಮಂತ -ಅಗ್ನ್ಯಾಧೇಯಾನಿ ಮಂಗಲಕಾರ್ಯಾಣಿ ಗ್ರಹೋಪರಾಗೇ ಗ್ರಹೋತ್ಪಾತೇ ವಾ ದ್ವಿಪಾಚ್ಚತುಷ್ಪಾತ್ಸು ಭಯಂ ವಿಂದೇತ ಅಥ ಶಾಂತಿ ಮಾರಭೇತ'

ಬೋಧಾಯಯ ಗೃಹ್ಯ ಸೂತ್ರ (೧ ಪ್ರ-೧೪ ಅ -೧, ೨ ಸೂ). ಶೌನಕರೂ, ಉದಕಶಾಂತಿ ಮಂತ್ರಜಪವನ್ನು ಉಪನಯನಾದಿ ಮಂಗಳ ಕರ್ಮಗಳಲ್ಲಿ ಮಾಡಿಯೇ ತೀರಬೇಕೆಂದು ತಿಳಿಸಿರುತ್ತಾರೆ. ಆದರೆ, ಬೋಧಾಯನೋಕ್ತ ಉದಕ ಶಾಂತಿ ಮಂತ್ರಗಳಲ್ಲಿ ಕೇವಲ ಯಜುರ್ಮಂತ್ರಗಳನ್ನೂ, ಶೌನಕೋಕ್ತ ಉದಕ ಶಾಂತಿ ಮಂತ್ರಗಳಲ್ಲಿ ಕೇವಲ ಋಙ್ಮಂತ್ರಗಳನ್ನು ಜಪಿಸಬೇಕೆಂದು ವಿಧಿಸಿರುತ್ತಾರೆ. ಯಜುಶಾಖೆಯವರು ಬೋಧಾಯನೋಕ್ತವಾಗಿಯೂ, ಋಕ್ ಶಾಖೆಯವರು ಶೌನಕೋಕ್ತವಾಗಿಯೂ ಉದಕಶಾಂತಿ ಕರ್ಮವನ್ನು ಮಾಡುವುದು ಸೂಕ್ತವಾಗಿರುತ್ತದೆ.

ಸಂಸ್ಕೃತ ಭಾಷೆಯಲ್ಲಿ 'ಅಭಿತಃ' ಅಥವಾ 'ಅಭಿ' ಎಂಬ ಪದಕ್ಕೆ 'ಮುಂದುಗಡೆ' ಎಂಬರ್ಥ ಇರುತ್ತದೆ.

'ಮನನಾತ್ ತ್ರಾಯತೇ ಇತಿ ಮಂತ್ರಃ' ಎಂಬ ವ್ಯುತ್ಪತ್ತಿಯಿಂದ ಮಂತ್ರ ಶಬ್ದಕ್ಕೆ ಮನಃ ಪೂರ್ವಕವಾಗಿ ಪ್ರಾರ್ಥನೆ ಮಾಡುತ್ತಾ ಉಚ್ಚರಿಸ್ಪಡುವುದರಿಂದ ಇಷ್ಟಾರ್ಥಗಳನ್ನೂ ಪೂರೈಸಿ ರಕ್ಷಿಸುವ ಶಕ್ತಿಯುಳ್ಳ ಅಪೌರುಷೇಯವಾದ ಅಕ್ಷರ ಜೋಡಣೆ ಅಥವಾ ಅನುಪೂರ್ವಿ ಅಥವಾ ಶಬ್ದಸಮೂಹಗಳಿಗೆ ಮಂತ್ರ ಎಂದು ಹೆಸರು. ಒಂದು ಮಂತ್ರದ ಶಕ್ತಿಯನ್ನು ಬೇರೊಂದು ವಸ್ತು ಅಥವಾ ಮಾಧ್ಯಮದಲ್ಲಿ ಬರುವಂತೆ ಮಾಡಲು ಆ ವಸ್ತುವಿನ, ಮುಂಭಾಗದಲ್ಲಿ ಕುಳಿತು ಆ ವಸ್ತುವನ್ನು ನೇರವಾಗಿ ಕೈಯಿಂದಾಗಲಿ ಅಥವಾ ದರ್ಭೆಯ ಹುಲ್ಲಿನ ಸಹಾಯದಿಂದಾಗಲಿ ಸ್ಪರ್ಶ ಮಾಡಿಕೊಂಡು ಮಂತ್ರವನ್ನು ಉಚ್ಚಾರಣೆ ಮಾಡುವಿಕೆ ಅಥವಾ ಜಪಿಸುವಿಕೆಗೆ **'ಅಭಿಮಂತ್ರಣ'** ಎಂದು ಹೆಸರು. ಉದಕಶಾಂತಿ ಮಂತ್ರವನ್ನು ಪಾರಾಯಣ ಮಾಡುವಾಗ ಕುಂಭವೊಂದರಲ್ಲಿ, ಇಬ್ಬರು ಸುಮಂಗಲಿಯರಿಂದ ತರಲ್ಪಟ್ಟ ತೀರ್ಥವನ್ನಿಟ್ಟು ಅದೇ ಕಲಶದಲ್ಲಿ ಮಾವಿನ ಸೊಪ್ಪಿನ ಗೊಂಚಲೊಂದು, ಹದಿನಾರು ದರ್ಭೆಗಳಿಂದ ಬ್ರಹ್ಮಗ್ರಂಥಿಯಾಗಿ ಕಟ್ಟಲ್ಪಟ್ಟ ಕೂರ್ಚವೊಂದನ್ನು ಊರ್ಧ್ವಾಗ್ರವಾಗಿ ಕುಂಭದಲ್ಲಿಟ್ಟು, ಅದರ ಮೇಲೆ ತೆಂಗಿನಕಾಯೊಂದನ್ನು ಇಟ್ಟು ಕುಂಭದಲ್ಲಿ ತೀರ್ಥದ ಅಧಿದೇವತೆಯಾದ ವರುಣನನ್ನು ಸರ್ವದೇವತಾಧಿಪತಿಯಾದ ಮಹಾವಿಷ್ಣುವನ್ನು ಆವಾಹನೆ ಮಾಡಿ, ಆ ದೇವತೆಗಳಿಗೆ ಷೋಡಶೋಪಚಾರಗಳನ್ನು ಅರ್ಪಿಸಿ, ಉದಕಶಾಂತಿ ಮಂತ್ರಗಳನ್ನು ಜಪಿಸುವ ಬ್ರಾಹ್ಮಣರನ್ನು ಪ್ರಾಗಾದಿ ದಿಕ್ಕುಗಳಲ್ಲಿ ಕುಳ್ಳಿರಿಸಿ, ಅಲ್ಲಲ್ಲಿಯೇ ಅವರು ಕುಳಿತು ಜಪಿಸುವಂತೆ ಅವರನ್ನು ವರಿಸಿ ಅವರ ಕೈಗಳಲ್ಲಿ ನಾಲ್ಕು ಅಥವಾ ಎರಡು ದರ್ಭೆಗಳನ್ನು ಕೊಟ್ಟು, ಯಜಮಾನನೂ, ಅವರೊಡನೆ ತಾನೂ ದರ್ಭೆಯ ಗುಚ್ಛವೊಂದರಿಂದ ಕುಂಭವನ್ನು ಸ್ಪರ್ಶಿಸಿಕೊಂಡು, ಇತರ ಬ್ರಾಹ್ಮಣರೂ ಅವರವರ ಕೈಯಲ್ಲಿ ಕೊಟ್ಟಿರುವ ದರ್ಭೆಗಳಿಂದ ಕುಂಭವನ್ನು ಸ್ಪರ್ಶಿಸಿಕೊಂಡು ಉದಕ ಶಾಂತಿ ಮಂತ್ರಗಳನ್ನು ಜಪಿಸಬೆಕು. ಈ ರೀತಿ ಜಪಿಸುವಾಗ ಮಂತ್ರಗಳ, ಶಬ್ದಶಕ್ತಿಯು ಅವರು ಉಚ್ಚರಿಸುವ ಮಂತ್ರಗಳ, ಶಬ್ದಸ್ಫುರಣಗಳ ಮುಖಾಂತರ ಕುಂಭಕ್ಕೆ ತಗುಲಿ, ಅದರಲ್ಲಿರುವ ತೀರ್ಥದಲ್ಲಿ ಆ ಶಕ್ತಿಯು ಶೇಖರಿಸಲ್ಪಟ್ಟು, ಆ ತೀರ್ಥವು ಮಂತ್ರ ಶಕ್ತಿಯುತವಾಗುತ್ತದೆ. ಅಂತೆಯೇ, ಮಂತ್ರ ಜಪಿಸುವವರು, ಮಂತ್ರದ ಅರ್ಥವನ್ನು ಸರಿಯಾಗಿ ಅರಿತವರಾದರೆ ಆ ಮಂತ್ರಾರ್ಥವನ್ನು ಮಂತ್ರ ಜಪಿಸುವಲ್ಲಿ ಅನುಸಂಧಾನ ಮಾಡುತ್ತಾ, ಜಪಿಸುವುದರಿಂದಲೂ; ಮಂತ್ರಾರ್ಥವನ್ನು ಅರಿಯದಿರುವವರು

"ವೇದಾಕ್ಷರಾಣಿ ಯಾವಂತಿ ಪಠಿತಾನಿ ದ್ವಿಜಾತಿಭಿಃ |
ತಾವಂತಿ ಹರಿನಾಮಾನಿ ಕೀರ್ತಿತಾನಿ ನ ಸಂಶಯಃ ||",
"ವೇದೈಶ್ಚ ಸರ್ವೈಃ ಅಹ ಮೇವ ವೇದ್ಯ"|

ಎಂದು ಭಗವದ್ಗೀತೆಯಲ್ಲಿ ಕೃಷ್ಣನೇ ಹೇಳಿರುವಂತೆ ವೇದದ ಒಂದೊಂದು ಅಕ್ಷರವೂ ಪರಮಾತ್ಮನ ಗುಣಗಳನ್ನು ಪ್ರಕಾಶಿಸುವ, ಅಕ್ಷರ ಬ್ರಹ್ಮ ರೂಪದಲ್ಲಿದೆ. ಎಂದರಿತು, ಪರಬ್ರಹ್ಮನನ್ನು ಚಿಂತಿಸುತ್ತಾ, ದರ್ಭೆಯಿಂದ ಕುಂಭವನ್ನು ಸ್ಪರ್ಶಿಸಿಕೊಂಡು, ಮಂತ್ರಪಠನ ಮಾಡುವುದರಿಂದಲೂ, ಮಂತ್ರಗಳಲ್ಲಿ ಪ್ರಾರ್ಥಿಸಲ್ಪಟ್ಟಿರುವ, ಕಾಮನೆಗಳನ್ನು ಪೂರೈಸುವ ಪರಬ್ರಹ್ಮನ ಶಕ್ತಿಯು ಕುಂಭದಲ್ಲಿರುವ ತೀರ್ಥದಲ್ಲಿ ಕೂಡಿಕೊಳ್ಳುತ್ತದೆ. ಮಂತ್ರ ಪಠನದಿಂದ ಅಭಿಮಂತ್ರಿಸುವ ಮುನ್ನ ಕೇವಲ ನೀರು ಅಥವಾ ಜಲವು, ಮಂತ್ರದಿಂದ ಅಭಿಮಂತ್ರಿಸಿದ ನಂತರ ಅದರಿಂದ ಪ್ರೋಕ್ಷಿಸಲ್ಪಟ್ಟ, ಅಭಿಷೇಕ ಮಾಡಲ್ಪಟ್ಟ ಮತ್ತು ಪ್ರಾಶನ ಮಾಡಲ್ಪಟ್ಟ ಎಲ್ಲ ಚೇತನರನ್ನೂ ಅವರವರ ಆಧಿವ್ಯಾಧಿ ರೂಪದಲ್ಲಿರುವ ಪಾಪಗಳಿಂದ ದಾಟಿಸುವುದರಿಂದ, 'ತರತಿ' (ದಾಟಿಸುತ್ತದೆ) ಎಂಬ ಅರ್ಥದಲ್ಲಿ ತೀರ್ಥ ಎಂಬ ಹೆಸರನ್ನು ಪಡೆಯುತ್ತದೆ. ಈ ತೀರ್ಥವೇ ಅಭಿಷೇಕ ಮಾಡಲ್ಪಟ್ಟ ವ್ಯಕ್ತಿಯ ಬಾಹ್ಯೇಂದ್ರಿಯಗಳನ್ನೂ, ಪ್ರಾಶನ ಮಾಡಲ್ಪಟ್ಟ ವ್ಯಕ್ತಿಯ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ಅಂತರಿಂದ್ರಿಯಗಳನ್ನೂ ತೊಯ್ಯಿಸಿ(ಉದಕ್ಲೇದನೆ) ಅವರ ಸರ್ವ ವಿಧವಾದ ತಾಪಗಳನ್ನೂ ಶಮನಗೊಳಿಸುವುದರಿಂದ ಈ ಕ್ರಿಯೆಯನ್ನು ಉದಕ ಶಾಂತಿ ಕರ್ಮ ಎಂದು ಕರೆಯುತ್ತಾರೆ.

ಗರ್ಭಾಧಾನಾದಿ ಕೆಲವು ಸಂಸ್ಕಾರಗಳಲ್ಲಿ ಆಯಾಯ ಸಂಸ್ಕಾರಗಳ ಕರ್ಮ ಫಲವು ಯಾವ ಅಡಚಣೆಯೂ ಇಲ್ಲದೇ ಸಂಸ್ಕಾರಿಗೆ ದೊರಕಬೇಕೆಂದು ಆಯಾ ಸಂಸ್ಕಾರಗಳ ಆದಿಯಲ್ಲಿ ಈ ಉದಕಶಾಂತಿ ಕರ್ಮವನ್ನು ಮಾಡಿಯೇ ತೀರಬೇಕೆಂದು ಬೋಧಾಯನರು ಮತ್ತು ಶೌನಕರೂ ಹೇಳಿರುತ್ತಾರೆ. ಆಪಸ್ತಂಬಾದಿ ಕೆಲವು ಮಹರ್ಷಿಗಳು ಕಂಠೋಕ್ತವಾಗಿ ಈ ಕರ್ಮವನ್ನು ಮಾಡಬೇಕೆಂದು ಹೇಳದಿದ್ದರೂ, ಈ ಕರ್ಮದ ಮಹತ್ವವನ್ನು ಅರಿತಂತಹ ನಮ್ಮ ಹಿರಿಯರೆಲ್ಲರೂ ಭೋದಾಯನ ಅಥವಾ ಶೌನಕ ಸೂತ್ರಾನುಸಾರವಾಗಿ ತಮ್ಮ ಇತರ ಎಲ್ಲ ಕರ್ಮಗಳನ್ನು ಮಾಡದಿದ್ದರೂ, ತಮ್ಮ ತಮ್ಮ ಸೂತ್ರಕಾರರು ಈ ಉದಕ ಶಾಂತಿ ಕರ್ಮವನ್ನು ಮಾಡಬಾರದೆಂದು ಎಲ್ಲಿಯೂ ನಿಷೇಧಿಸಿಲ್ಲದಿರುವುದರಿಂದ ತಮ್ಮ ಸೂತ್ರಕಾರರು ಹೇಳದಿದ್ದರೂ ಭೋದಾಯನ ಅಥವಾ ಶೌನಕರು ಹೇಳಿರುವುದನ್ನೇ ಪ್ರಮಾಣವಾಗಿ ಸ್ವೀಕರಿಸಿ, ಅನಾದಿಕಾಲದಿಂದ ಪರಂಪರೆಯಾಗಿ ತ್ರಿಮತಸ್ಥ ಬ್ರಾಹ್ಮಣರೂ ಈ ಉದಕಶಾಂತಿ ಕರ್ಮಗಳನ್ನೂ ಸೂಕ್ತ ಕಾಲಗಳಲ್ಲಿ ಅನುಷ್ಠಿಸುತ್ತಾ ಬಂದಿರುತ್ತಾರೆ.

"ಅನುಕ್ತಮ್ ಅಪ್ರತಿಷಿದ್ಧಮ್ ಅನ್ಯತೋ ಗ್ರಾಹ್ಯಮ್"

ಈ ಉದಕಶಾಂತಿ ಕರ್ಮಗಳನ್ನು ಸಾಮಾನ್ಯವಾಗಿ ಕೆಲವು ಸಂಸ್ಕಾರ ಕರ್ಮಗಳ ಅಂಗರೂಪವಾಗಿ ಅನುಷ್ಠಿಸುವುದು ಮಾತ್ರವೇ ವಾಡಿಕೆಯಲ್ಲಿ ಕಂಡು ಬರುತ್ತದೆ. ಆದರೇ ಯಾವುದೇ ವಿಧವಾದ ಅಪರಿಹಾರ್ಯವಾದ ರೋಗ ಪೀಡೆ ಗ್ರಹಭಾದೆಗಳೂ ಅಭಿಚಾರಕ ಕ್ರಿಯೆಗಳ ಕಳ್ಳಕಾಕರ ಕಾಟ, ಅತಿ ವೃಷ್ಟಿ ಅನಾವೃಷ್ಟಿ ಮನುಷ್ಯರಿಗೆ ಮಾತ್ರವಲ್ಲದೇ ಹಸು, ಮೇಕೆ, ಆಡು ಮುಂತಾದ ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ಆಕಸ್ಮಿಕವಾಗಿ ಸಂಭವಿಸುವ ಉಪದ್ರವಗಳ ನಿವಾರಣೆಗೂ ಈ ಉದಕ ಶಾಂತಿ ಮಂತ್ರಜಪಕರ್ಮವನ್ನು ಮಾಡಿ, ಅದರಿಂದ ಅನಿಷ್ಟನಿವೃತ್ತಿ ದ್ವಾರ ಇಷ್ಟಪ್ರಾತಿಯನ್ನು ಪಡೆಯಬೇಕೆಂದು ಇಚ್ಛಿಸುವ ಎಲ್ಲ ವಸ್ತುಗಳಿಗೂ ಪ್ರೋಕ್ಷಣ ಮಾಡುವುದರಿಂದ ಜೀವಿಗಳೆಲ್ಲರೂ ಸುಖವಾಗಿ ಬಾಳಿ ಬದುಕಿ ದೇಶವು, ಸುಭಿಕ್ಷವಾಗಿರುತ್ತದೆ.

ಒಮ್ಮೆ ಪರಮಾತ್ಮನು ಜಲಾಭಿಮಾನಿ ದೇವತೆಗಳನ್ನು ಕುರಿತು, ಎಲ್ಲೆ ದೇತೆಗಳೇ ನಿರಂತರವಾಗಿ ಪ್ರವಹಿಸುವವರಾದ ನೀವು ಸಮಸ್ತ ಪೃಥಿವಿಯನ್ನು ಉಸಿರಾಡುವಂತೆ ಮಾಡಿರಿ. ಎಂದು ಸಂಕಲ್ಪ ಮಾಡಿದನು. (ಅಜ್ಞೆ ಮಾಡಿದನು). ಪ್ರಾಣಿಗಳ ನಿಶ್ವಾಸವಾದ ಗಾಳಿಯು ಅವುಗಳ ದೇಹದಲ್ಲಿರುವ ಕಶ್ಮಲಗಳನ್ನು ಹೊರ ಹೋಗುವಂತೆ ಮಳೆಯ ರೂಪದಲ್ಲಿ ಭೂಮಿಯ ಮೇಲೆ ಬಿದ್ದ ನೀರು ಮತ್ತು ಚೇತನರ ದೇಹದೊಳಗೆ ಪ್ರವೇಶಿಸಿದ ತೀರ್ಥವು ಭೂಮಿಯಿಂದ ಹೊರಬರುವ ಹಬೆಯ ಮುಖಾಂತರವೂ ಚೇತನರ ಬೆವರು ಮತ್ತು ಮೂತ್ರ ವಿಸರ್ಜನಾದಿ ಕ್ರಿಯೆಗಳಿಂದ ಅವುಗಳಲ್ಲಿ ಅಡಕವಾಗಿರುವ ಕಶ್ಮಲಗಳನ್ನು ಹೊರಹಾಕುತ್ತದೆ. ಇದೇ ತೀರ್ಥವು ಚೇತನಾಚೇತನರಿಂದ ಕೂಡಿದ ಸಮಸ್ತ ಪೃಥಿವಿಯನ್ನು ಉಸಿರಾಡುವಂತೆ ಮಾಡುವ ಉಚ್ಛ್ವಾಸ ನಿಃಶ್ವಾಸಗಳಿಗೆ ಸಮಾನವಾದುದು. ಈ ರೀತಿಯಾಗಿ ಉಚ್ಛ್ವಾಸ ನಿಃಶ್ವಾಸ ಕ್ರಿಯೆಗಳಿಂದ ಚೇತನರನ್ನು ರಕ್ಷಿಸುವುದರಿಂದ ಜಲ ಅಥವಾ ತೀರ್ಥಕ್ಕೆ ಉದಕ ಎಂದು ಹೆಸರು. ಈ ನಿಷ್ಪತ್ತಿಯನ್ನು ಕೆಳಕಂಡ ಮಂತ್ರದಿಂದ ಅರಿತುಕೊಳ್ಳಬಹುದು.

ಏಕೋ ದೇವೋ ಅಪ್ಯತಿಷ್ಠತ್ ಸ್ಯಂದಮಾನಾ ಯಥಾವಶಮ್ | ಉದಾನಿಷುರ್ಮಹೀರಿತಿ ತಸ್ಮಾದುದಕಮುಚ್ಯತೇ |

ಮಂತ್ರಪೂತವಾದ ಉದಕವು ಚೇತನಾಚೇತನರ ದೇಹದಲ್ಲಿರುವ ತಾಪವನ್ನು ಹೋಗಲಾಡಿಸಿ ಶಾಂತಿಯನ್ನು ಉಂಟುಮಾಡುವುದರಿಂದ ಈ ಕರ್ಮವನ್ನು ಉದಕಶಾಂತಿಕರ್ಮ ಎಂದು ಅನ್ವರ್ಥವಾಗಿ ಕರೆದಿರುತ್ತಾರೆ.

ಶಾರೀರಿಕವಾಗಿ ಅಥವಾ ಮಾನಸಿಕವಾಗಿ ಘಾಸಿ ಅಥವಾ ಕ್ಲೇಶ ಉಂಟಾಗುವಿಕೆಗೆ ರೋಗ ಎಂದು ಹೆಸರು ರುಜತಿ ರುಜೋ ಭಂಗೇ-ಘಞ್-ಪಾಣಿನಿ (3-316)

ರೋಗವು ಆಗಂತುಕ ಶಾರೀರ ಮಾನಸ ಮತ್ತು ಸ್ವಾಭಾವಿಕ ಎಂದು ನಾಲ್ಕು ವಿಧ

1 ಅಭಿಘಾತ ಅಥವಾ ಅಪಘಾತಗಳಿಂದ ಉಂಟಾಗುವ ವ್ಯಾಧಿಯು ಆಗಂತುಕ.
2 ವಾತ, ಪಿತ್ಥ, ಕಫ, ಶುಕ್ರ ಶೋಣಿತಾದಿಗಳ ವೈಶಮ್ಯದಿಂದ ಉಂಟಾಗುವ ವ್ಯಾಧಿಯು ಶಾರೀರ.
3 ಕೋಪ, ದುಃಖ, ಭಯ, ಈರ್ಷ್ಯೆ, ಹರ್ಷ, ಮಾತ್ಸರ್ಯ, ಕಾಮ, ಲೋಭ ಮುಂತಾದ ವ್ಯಾಧಿಗಳು ಮಾನಸ
4. ಹಸಿವು, ಬಾಯಾರಿಕೆ, ಮುಪ್ಪು, ನಿದ್ರೆ ಮೊದಲಾದ ವ್ಯಾಧಿಗಳು ಸ್ವಾಭಾವಿಕ.

ಇವುಗಳಲ್ಲಿ ಕೆಲವು ಜನ್ಮಾಂತರದಿಂದಲೂ, ಕೆಲವು ಕರ್ಮದಿಂದಲೂ ಕೆಲವು ಎರಡರಿಂದಲೂ ಉಂಟಾಗುವುವು ಈ ನಾಲ್ಕು ವಿಧವಾದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ರೋಗಗಳಿಗೆ ಭೇಷ ಎಂದು ಹೆಸರು. ಇವುಗಳನ್ನು ಜಯಿಸುವ ಅಥವಾ ನಿವಾರಣೆ ಮಾಡುವ ಸಾಧನ ಅಥವಾ ಕ್ರಿಯೆಗಳಿಗೆ ಭೇಷಜ ಎಂದು ಹೆಸರು. **ಭೇಷಂ ರೋಗಭಯಂ ಜಯತಿ ಇತಿ ಭೇಷಜಃ (ಜಿ. ಜಯೇ)**

ಒಂದು ಕಾಲದಲ್ಲಿ ಅಶ್ವಿನೀ ದೇವತೆಗಳು ತಮ್ಮ ಭೈಷಜ್ಯಾ ಶಕ್ತಿಯನ್ನು ಅಗ್ನಿ, ತೀರ್ಥ ಮತ್ತು ಬ್ರಾಹ್ಮಣರಿಗೆ ವಿಭಜಿಸಿಕೊಟ್ಟರು. ಆ ಶಕ್ತಿಯ ಮೂರನೆಯ ಒಂದು ಭಾಗ ಅಗ್ನಿಯಲ್ಲಿಯೂ, ಮೂರನೆಯ ಒಂದು ಭಾಗ ತೀರ್ಥದಲ್ಲಿಯೂ, ಮೂರನೆಯ ಒಂದು ಭಾಗ ಬ್ರಾಹ್ಮಣನಲ್ಲಿಯೂ ಇರುವಂತೆ ಮಾಡಿದರು.

"ತಯೋಃ ತ್ರೇಧಾ ಭೈಷಜ್ಯಂ ವಿನ್ಯದಧುಃ ಅಗ್ನೌತೃತೀಯ ಮಪ್ಸು, ತೃತೀಯಂ ಬ್ರಾಹ್ಮಣೇ ತೃತೀಯಂ ತಸ್ಮಾದುದ ಪಾತ್ರ ಮುಪನಿಧಾಯ ಬ್ರಾಹ್ಮಣಂ ದಕ್ಷಿಣತೋ ನಿಷಾದ್ಯ ಭೇಷಜಂ ಕುರ್ಯಾತ್ ಯಾವದೇವ ಭೇಷಜಂ ತೇನ ಕರೋತಿ ಸಮರ್ಧ್ಯಕ ಮಸ್ಯ ಕೃತಂ ಭವತಿ ||" (ತೈ.ಸಂ. 6-4-9.)

ಆದುದರಿಂದ ಭೈಷಜ್ಯಾ ಶಕ್ತಿ ಉಳ್ಳ ತೀರ್ಥ ಮತ್ತು ಬ್ರಾಹ್ಮಣರಿಂದ ಉದಕ ಶಾಂತಿ ಕರ್ಮವನ್ನು ಆಚರಿಸಿ ಚೇತನರು ಸರ್ವ ವಿಧವಾದ ಮೇಲೆ ಹೇಳಿದ ರೋಗಗಳಿಂದಲೂ ಮುಕ್ತರಾಗಬೇಕೆಂಬ ಹೆಬ್ಬಯಕೆಯಿಂದ ಬೋಧಾಯನರು ಮತ್ತು ಶೌನಕ ಮಹರ್ಷಿಗಳು ಸಮುಚಿತವಾದ ಕಾಲಗಳಲ್ಲಿ ಉದಕಶಾಂತಿ ಕರ್ಮವನ್ನು ಅನುಷ್ಠಿಸಬೇಕೆಂದು ವಿಧಿಸಿರುತ್ತಾರೆ. ಅದಕ್ಕನುಗುಣವಾಗಿ ನಮ್ಮ ಹಿರಿಯರು ಸಂಪ್ರದಾಯದಲ್ಲಿ ಉದಕ ಶಾಂತಿ ಕರ್ಮಾನುಷ್ಠಾನವನ್ನು ಪರಂಪರಾಗತವಾಗಿ ಉಳವಡಿಸಿಕೊಂಡು ಬಂದಿರುತ್ತಾರೆ.

"ಮಾನ (ವಿಚಾರೆ), + ಸನ್ (ಪಾಣಿನಿ ಸೂತ್ರ) (೩-೧-೬) |
ಅಹಃ (ಪಾ. ಸೂ) (೩-೩-೧೦೨)".

ಸಂಸ್ಕೃತ ಭಾಷೆಯಲ್ಲಿ 'ಮಾನ' ಎಂಬ ಧಾತುವು ವಿಚಾರ, ವಿಮರ್ಶೆ ಶೋಧನೆ ಅಥವಾ ಅನ್ವೇಷಣೆ ಎಂಬ ಅರ್ಥಗಳಲ್ಲಿ ಬಳಸಲ್ಪಡುತ್ತದೆ. ಈ ಪ್ರಬಂಧದಲ್ಲಿಯಾದರೋ ಉದಕ ಶಾಂತಿ ಕರ್ಮದ ವಿಚಾರಾತ್ಮಕವಾದ ವಿಮರ್ಶೆಯನ್ನು ಮಾಡುವುದರೊಡನೆ ಬೋಧಾಯನ ಸೂತ್ರದಲ್ಲಿ ಹೇಳಿರುವ ಮತ್ತು ಅವರು ಉದ್ಧರಿಸಿರುವ ಶ್ರುತಿ ಪ್ರಮಾಣ ವಾಕ್ಯಗಳ ಮಂತ್ರಾರ್ಥವನ್ನು ಶೋಧನೆ ಮಾಡಿ ಅದರ ಮಹತ್ವ ಮತ್ತು ರಹಸ್ಯಾರ್ಥವನ್ನು ಅನ್ವೇಷಣೆ ಮಾಡಿ ಅಥವಾ ಹುಡುಕಿ ಇಲ್ಲಿ ವಿವರಿಸಿರುವುದರಿಂದ ಈ ಪ್ರಬಂಧಕ್ಕೆ 'ಉದಕಶಾಂತಿ' ಕರ್ಮ ಮೀಮಾಂಸಾ ಎಂಬ ಶೀರ್ಷಿಕೆಯು ಅನ್ವರ್ಥವಾಗಿರುತ್ತದೆ.

ಅನೇನ ಪ್ರಿಯತಾಂ ಭಗವಾನ್ ವೇದಪುರುಷಃ
ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು
ಇತೀಶಮ್.

ಶ್ರೀ ಶ್ರೀ ಶ್ರೀ

Emotional submission

Sri Maha Parakala Swamy who adorned the peetam as the 21st pattam Acharya, consecrated 59 sannidhis to Swamy Deshika at various divya-deshams and other kshetrams. He even built a sannidhi of Swamy Deshika on the banks of Yamuna. He has proclaimed through his works – "The Lord with a horse face is none other than Swamy Deshika. The twin lotus feet of Swamy Deshika represent the instituitional head of Sri Brahmatantraswatantra Parakala Swamy matam and the Acharyas of the peetam are its loyal attendants". This Swamy attained paramapadam on the uththanam day of his 61st chaturmasya sankalpam on the banks of kaveri.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶರಣಾಗತಿ ವೈಭವಂ

ಶ್ರೀಮಾನ್ ಉ. ವೇ ಪಂಡಿತರತ್ನಂ ವಿದ್ವಾನ್, ಇ. ವಿ ವೀರರಾಘವನ್
ಶ್ರೀರಂಗಪಟ್ಟಣ

ವಾಗೀಶಾಖ್ಯಾಃ ಸುಮನಸಃ ಸರ್ವಾರ್ಥೋಪಚಕ್ರಮೇ । ಜ್ಞಾನಾನಂದಮಯಸ್ತ್ವಾತ್ಮಾ ವಂದೇ ಶ್ರೇತುರಗಾನನಂ ॥

ಪ್ರತಿ ಜೀವಾತ್ಮನೂ ಸಂಸಾರವೆಂಬ ಬಂಧನದಿಂದ ಬಿಡುಗಡೆ ಹೊಂದಬೇಕಾದರೆ ಪರಮಾತ್ಮನಲ್ಲಿ ಅಥವಾ ಆಚಾರ್ಯನಲ್ಲಿ ಶರಣಾಗತಿ ಪಡೆಯಬೇಕಾದದ್ದು ಅವಶ್ಯಕವಾಗಿದೆ. ಶರಣಾಗತಿವೇದ ಎಂದೇ ಪ್ರಸಿದ್ಧವಾದ ಶ್ರೀಮದ್ರಾಮಾಯಣದಲ್ಲಿ ಬಾಲಕಾಂಡದಿಂದ ಹಿಡಿದು ಯುದ್ಧಕಾಂಡದವರೆಗೆ ಅನೇಕ ಶರಣಾಗತಿ ಪ್ರಕರಣಗಳು ಕಂಡುಬರುತ್ತದೆ. ಮೋಕ್ಷವನ್ನು ಪಡೆಯಲು ಶರಣಾಗತಿ ಅಥವಾ ಪ್ರಪತ್ತಿಯೇ ಉಪಾಯವೆಂದು ಪ್ರಾರಂಭದ ಬಾಲಕಾಂಡದಲ್ಲಿ ದೇವತೆಗಳು "ರಾವಣರ ಹಿಂಸೆಯಲ್ಲಿ ನಮ್ಮಿಂದ ಈ ಲೋಕದಲ್ಲಿ ಬದುಕಲು ಸಾಧ್ಯವಿಲ್ಲ, ನಮ್ಮನ್ನು ಕಾಪಾಡು" ಎಂದು ಮೊರೆಹೊಕ್ಕಾಗ "ಶರಣಾಗತರ ಇಷ್ಟಾರ್ಥವನ್ನು ನೆರವೇರಿಸುವುದಕ್ಕಾಗಿ ಶ್ರೀರಾಮನಾಗಿ ಅವತರಿಸಿ ನಿಮ್ಮೆಲ್ಲರ ಆರ್ತಿ (ಕಷ್ಟವನ್ನು) ಪರಿಹರಿಸುತ್ತೇನೆ" ಎಂದು ಅಭಯಪ್ರದಾನ ಕೊಡುತ್ತಾನೆ. ಅಯೋಧ್ಯಾಕಾಂಡದಲ್ಲಿ ಭರತನು ರಾಮನ ಹತ್ತಿರ ಶರಣಾಗತಿ ಮಾಡಿದಾಗ ರಾಜ್ಯವನ್ನು ನೀನೇ ಪಡೆಯಬೇಕೆಂದು ಪ್ರಾರ್ಥಿಸಿದಾಗ 'ರಾಮೋದ್ವಿರ್ನಾಭಿಭಾಷತೆ' ಮತ್ತು 'ರಾಮಃ ಸತ್ಯಪರಾಕ್ರಮಃ' ಎಂಬ ವಾಕ್ಯಗಳಿಗನುಸಾರವಾಗಿ, ಯಾವ ಭಗವಂತನ ಪಾದದಿಂದ ಆಶ್ರಯಪಡೆದರೆ ಮೋಕ್ಷವು ಸಿಗುತ್ತದೆಯೋ, ಅಂತಹ ತನ್ನ ಪಾದುಕೆಯನ್ನೇ ಭರತನಿಗೆ ಕೊಟ್ಟಾಗ, ಆ ಪಾದುಕೆಯಿಂದಲೇ ನಂದಿಗ್ರಾಮದಲ್ಲಿ ಭರತನು ರಾಜ್ಯವನ್ನಾಳುತ್ತಾ ಶ್ರೀರಾಮಸ್ಮರಣೆ ಮಾಡುತ್ತಾ ಹದಿನಾಲ್ಕು ವರ್ಷಗಳನ್ನು ಕಳೆಯುತ್ತಾನೆ. ಹದಿನಾಲ್ಕು ವರ್ಷಗಳು ಕಳೆದಮೇಲೆ ರಾಮನೂ ಕೂಡ ಭರತನಿಗೆ ಅಯೋಧ್ಯೆಗೆ ಬಂದು ನಿನ್ನ ಮಾತನ್ನು ನೆರವೇರಿಸುತ್ತೇನೆಂದು ಭರವಸೆ ಕೊಡುತ್ತಾನೆ. "ಏಹಿ ಪಶ್ಯ ಶರೀರಾಣಿ ಮುನೀನಾಂ ಭಾವಿತಾತ್ಮನಾಂ" ಎಂದು ಅರಣ್ಯ ಕಾಂಡದಲ್ಲಿ ಋಷಿಶ್ರೇಷ್ಠರು ರಾಮನ ಹತ್ತಿರ ಶರಣಾಗತಿ ಹೊಂದಿದಾಗ, ರಾಕ್ಷಸರಿಂದ ಪೀಡಿತರಾದ ಋಷಿಗಳನ್ನು ನೋಡಿ ಶ್ರೀರಾಮನು 'ಹ್ರೀರೇಷಾಹಿ ಮಮಾತುಲಾ' ಎಂದು ನಿಮ್ಮನ್ನು ನೋಡಿ ನನಗೆ ನಾಚಿಕೆಯಾಗುತ್ತಿದೆಯೆಂದು ತಲೆಯನ್ನು ಬಗ್ಗಿಸಿ, ರಕ್ಷಣೆ ಕೊಡುತ್ತೇನೆಂದು ಅಭಯಪ್ರದಾನ ಮಾಡುತ್ತಾನೆ. ಕಿಷ್ಕಿಂಧಾಕಾಂಡದಲ್ಲಿ "ರೋಚತೇ ಯದಿ ಮೇ ಸಖ್ಯಂ" ಮತ್ತು "ಗೃಹ್ಯತಾಂ ಪಾಣಿನಾಂ ಪಾಣಿಃ" ಎಂದು ಸುಗ್ರೀವನು ರಾಮನ ಜೊತೆ ಸ್ನೇಹ ಮತ್ತು ಪಾಣಿಗ್ರಹಣ ಮಾಡಿ, ರಾಮನಲ್ಲಿ ಶರಣಾಗತಿ ಹೊಂದಿದಾಗ, ರಾಮನೂ ಕೂಡ ಕಪಿಯೆಂದು ಭಾವಿಸದೆ ಅಭಯಪ್ರದಾನ ಮಾಡುತ್ತಾನೆ.

ಸುಂದರಕಾಂಡದಲ್ಲಿ ಆಂಜನೇಯನು ಸೀತೆಯ ದರ್ಶನ ಮಾಡಿದಾಗ ರಾಮನಲ್ಲಿ ಶರಣಾಗತಿ ಮಾಡಿದ ಇಂದ್ರನ ಮಗನಾದ ಜಯಂತ ಕಾಕರೂಪದಲ್ಲಿ ಬಂದು ಸೀತೆಯಲ್ಲಿ ಮಹದಪಚಾರ ಮಾಡಿದಾಗ, ಜಗನ್ಮಾತೆಯಾದ ಸೀತೆಯು "ವಧಾರ್ಹಮಪಿ ಕಾಕುತ್ಸ್ಥ ಕೃಪಯಾ ಪರ್ಯಪಾಲಯತ್" ಎಂದು ವಧಾರ್ಹನಾಗಿದ್ದರೂ ಶರಣಾಗತ ರಕ್ಷಕರನ್ನು ಬಿಡಬಾರದೆಂದು ವ್ರತವನ್ನು ವಾಲ್ಮೀಕಿಯು ಸುಂದರವಾಗಿ ವರ್ಣಿಸಿದ್ದಾರೆ. ಹಾಗೆಯೇ ತ್ರಿಜಟಾಶರಣಾಗತಿಯೆಂದೇ ಪ್ರಸಿದ್ಧವಾದ ಸ್ವಪ್ನವೃತ್ತಾಂತವನ್ನು ಸೀತೆಗೆ ತಿಳಿಸಿದಾಗ ಸೀತೆಯೂ ಕೂಡ ರಾಕ್ಷಸಿಯರಿಗೆ ಅಭಯವನ್ನು ನೀಡುತ್ತಾಳೆ. ಯುದ್ಧಕಾಂಡದಲ್ಲಿ 'ವಿಭೀಷಣ ಶರಣಾಗತಿ' ಎಂದೇ ಪ್ರಸಿದ್ಧವಾದ ಶ್ರೀವೈಷ್ಣವ ಸಿದ್ಧಾಂತದ ಜೀವನಾಡಿಯೇ ಶರಣಾಗತಿಯಾಗಿರುವುದರಿಂದ, ರಾಮಾಯಣಕ್ಕೆ 'ಶರಣಾಗತಿಶಾಸ್ತ್ರ' ವೆಂದೇ ಪ್ರಸಿದ್ಧಿಯಿದೆ.

ವಿಭೀಷಣ ಶರಣಾಗತಿಯಲ್ಲಿ "ಆಜಗಾಮ ಮುಹೂರ್ತೇನ ಯತ್ರ ರಾಮಃ ಸಲಕ್ಷ್ಮಣಃ" ಎಂದು 'ಆಜಗಾಮ' ಎಂಬ ಪದವನ್ನು ವಾಲ್ಮೀಕಿಯು ಪ್ರಯೋಗಿಸಿರುವುದರಿಂದ 'ವೀಡುಮಿನ್ ಮುತ್ತವುಂ ವೀಡು ಶೆಯ್ದು' ಎಂಬ ನಮ್ಮಾಳ್ವಾರರ ತಿರುವಾಯ್ಮೊಳಿ ಪಾಶುರದಂತೆ 'ವೀಡು' ಶಬ್ದಕ್ಕೆ ಮೋಕ್ಷ ಎಂಬರ್ಥವಿರುವುದರಿಂದ, ಒಳ್ಳೆಯ ಮುಹೂರ್ತಕಾಲದಲ್ಲಿ ವಿಭೀಷಣನು ರಾಮನ ಶರಣಾಗತಿಯನ್ನು ಹೊಂದಿದ್ದಾನೆಂದು ನಮ್ಮ ಆಚಾರ್ಯರು ಅನೇಕ ಕಡೆ ತಿಳಿಸಿದ್ದಾರೆ. 'ಅಲ್ಲಿದೆ ನಮ್ಮ ಮನೆ, ಇಲ್ಲಿ ಬಂದೆ ಸುಮ್ಮನೆ' ಎಂದು ಜ್ಞಾನಿಗಳ ಮಾತಿನಂತೆ ವಿಭೀಷಣ ಲಕ್ಷ್ಮಣನ ಜೊತೆಯಲ್ಲಿದ್ದ ರಾಮನ ಸಮೀಪಕ್ಕೆ ಬಂದನು.

ಶ್ರೀಭಗವದ್ರಾಮಾನುಜರ ಶರಣಾಗತಿಯ ಮೆಟ್ಟಿಲನ್ನು ಹತ್ತಿ ಬಂದೆ ಎಂದು ಇಹ, ಪರ ಎರಡರಲ್ಲೂ ಅರ್ಥಸಿದ್ಧಿಯನ್ನು ಕೊಡುವ ಉಪಾಯ ಶರಣಾಗತಿಗೆ ಇದೆ. ವಿಭೀಷಣನು ಸತ್ವಗುಣ ಪ್ರತೀಕನಾದ್ದರಿಂದ, ನಿಶ್ಚಲವಾದ ನಂಬಿಕೆಯಿಂದ, ಗದೆಯನ್ನು ಕೈಯಲ್ಲಿ ಹಿಡಿದುಕೊಂಡು ಬರುತ್ತಿರುವುದರಿಂದ, ನಾನೂ ಕೂಡ ವಿಷ್ಣುವಿನ ಕೈಯಲ್ಲಿರುವ ಕೌಮೋದಕೀ ಎಂಬ ಗದೆಯ ಅಂಶವೋ ಎಂದು ವಾಲ್ಮೀಕಿಯು ತಿಳಿಸುತ್ತಿದ್ದಾರೋ ಎಂದು ನಮ್ಮ ಆಚಾರ್ಯವರೇಣ್ಯರು ತಿಳಿಸುತ್ತಾರೆ. ಪರಿಪಕ್ವವಾದ ದಾಸಭಾವದಿಂದ ರಾಜ್ಯ, ಕೋಶ, ಮಡದಿ, ಮಕ್ಕಳು ಎಲ್ಲವನ್ನೂ ತ್ಯಾಗ ಮಾಡಿ,

'ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ' ಮತ್ತು 'ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ ।
ನಿವೇದಯತ ಮಾಂ ಕ್ಷಿಪ್ರಮ್ ವಿಭೀಷಣಮುಪಸ್ಥಿತಂ ॥ ಎಂದು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪ್ರಪತ್ತಿಗೆ ಮುಖ್ಯವಾದ 'ಕ್ಷಿಪ್ರಂ' ಎಂಬ ಪದವನ್ನು ಪ್ರಯೋಗಿಸಿರುವುದರಿಂದ, ಆಚಾರ್ಯರ ಹತ್ತಿರ ಶರಣಾಗತಿ ಮಾಡಿದಾಗ, ಶಿಷ್ಯರಿಗೆ ಭಗವಂತನ ಹತ್ತಿರ ಪ್ರಾರ್ಥಿಸುವುದು ತಮ್ಮ ಧರ್ಮವೆಂದು ವಿಭೀಷಣನ ಶರಣಾಗತಿಯ ಮೂಲಕ ತಿಳಿದುಬರುತ್ತದೆ.

'ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ' ಎಂದು ಶರಣಾಗತಿಯ ಆರು ಅಂಗಗಳನ್ನು ವಿಭೀಷಣನು ಚೆನ್ನಾಗಿ ತಿಳಿದುಕೊಂಡಿದ್ದಾನೆ – ಆನುಕೂಲ್ಯಸಂಕಲ್ಪಃ, ಪ್ರಾತಿಕೂಲ್ಯವರ್ಜನಂ, ರಕ್ಷಿಷ್ಯತೀತಿ ವಿಶ್ವಾಸಃ, ಗೋಪ್ತೃತ್ವವರಣಂ, ಆತ್ಮ ನಿಕ್ಷೇಪ ಮತ್ತು ಕಾರ್ಪಣ್ಯ ಎಂದು ಭಗವಂತನಲ್ಲಿ ನೀನೇ ನನಗೆ ಗತಿ ಬೇರಾರೂ ಅಲ್ಲ ಎಂದು ಪ್ರಾರ್ಥಿಸಿದಾಗ, ರಾಮನೂ ಕೂಡ, "ಮಿತ್ರಭಾವೆನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ" ಎಂದು, 'ಯದಿ ವಾ ರಾವಣಂ ಸ್ವಯಂ' ಎಂದು ದುಷ್ಟನಾದ ರಾವಣನು ಬಂದರೂಕೂಡ ಸ್ವೀಕರಿಸುತ್ತೇನೆಂದು ಅಭಯಪ್ರದಾನ ಮಾಡಿದಾಗ, ವಿಭೀಷಣನು 'ರಾಘವಂ ಶರಣಂ ಗತಃ ಶರಣ್ಯಂ ಶರಣಂ ಗತಃ' ಎಂದು ಪ್ರತಿಮಾತನಾಡುತ್ತಾನೆ. ಸುಗ್ರೀವಾದಿಗಳ ಅಭಿಪ್ರಾಯವನ್ನು ಕೇಳಿ, ಶ್ರೀರಾಮನು ವಿಭೀಷಣನ ಬಗ್ಗೆ ಶರಣಾಗತರನ್ನು ರಕ್ಷಿಸಿಯೇ ತೀರುವುದಾಗಿ ಅಭಯಕೊಟ್ಟು ಹೀಗೆ ತಿಳಿಸುತ್ತಾನೆ –

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯಃ ದದಾಮಿ ಏತತ್ ವ್ರತಂ ಮಮ ॥

ಎಂದು ಸರ್ವಭೂತಗಳಿಗೂ ಅಭಯ ಪ್ರದಾನ ಮಾಡುವ ನಾನು ವಿಭೀಷಣನಿಗೆ ರಕ್ಷಣೆ ಕೊಡುವುದರಲ್ಲಿ ಯಾವ ಸಂಶಯವೂ ಬೇಡವೆಂದು, ಸತ್ಯವಂತ ಶ್ರೀರಾಮನು ವಿಭೀಷಣನಿಗೆ ರಕ್ಷಣೆಯನ್ನು ಕೊಡುತ್ತಾನೆ.

ನನ್ನ ಭಕ್ತರಾದವರು ಎಂದಿಗೂ ತಪ್ಪು ಮಾಡುವುದಿಲ್ಲ ಎಂದು ಭಗವಂತನಿಗೆ ನಂಬಿಕೆಯಿರುವುದರಿಂದ 'ಎನ್ನಡಿಯಾರ್ ಇದು ಶೆಯ್ಯಾರ್, ಶೆಯ್ದಾರೇಲ್ ನನ್ರು ಶೆಯ್ದಾರ್' ಎಂದು ಆಳ್ವಾರರ ಮಾತಿನಂತೆ ಒಳ್ಳೆಯದನ್ನೇ ಭಕ್ತರು ಮಾಡುತ್ತಾರೆ. ಭಗವಂತನು ಶರಣಾಗತರನ್ನು ರಕ್ಷಿಸುತ್ತಾನೆ, ಆದ್ದರಿಂದಲೇ ಭಗವಂತನಿಗೆ 'ಕರುಣಾಸಾಗರ' 'ಗುಣೇಷು ಸಾರ್ವಭೌಮೀ' ಎಂಬ ಅನೇಕ ಬಿರುದುಗಳಿವೆ. ದೇಶಿಕ ಸಂಪ್ರದಾಯರೀತ್ಯಾ ಶರಣಾಗತಿಗೆ ಮೋಕ್ಷಸಿದ್ಧ ಎಂಬುದು ಸತ್ಯ. ಆದರೆ ಶರಣಾಗತನಾದ ಮೇಲೆ ಪಾಪಕಾರ್ಯ ಮಾಡಿದರೆ 'ಇಹೈವ ಫಲಮಶ್ನುತೇ' ಎಂಬಂತೆ ಇಹಲೋಕದಲ್ಲಿ ಶಿಕ್ಷೆ ಅನುಭವಿಸುತ್ತಾ, 'ಕಾಣಾಭವಂತಿ, ಕಂಜಾ ಭವಂತಿ, ಅವಿಧೇಯ ಪುತ್ರಭಾರ್ಯಕಾಃ' ಎಂಬಂತೆ ಕಣ್ಣು ಕಾಣಿಸದೇ, ಕಿವಿ ಕೇಳಿಸದೇ, ಅವಿಧೇಯ ಹೆಂಡತಿ ಮಕ್ಕಳನ್ನೂ, ದುಃಖವನ್ನೂ ಅನುಭವಿಸುತ್ತಾ ಭಗವಂತನ ಮೋಕ್ಷವನ್ನು ಹೊಂದುತ್ತಾನೆ. ಶರಣಾಗತಿಗೆ ಯಾರು, ಯಾವಾಗ ಬೇಕಾದರೂ ಮಾಡಿಕೊಳ್ಳಬಹುದು, ಜಾತಿನಿಯಮವಿಲ್ಲ, ಮನದಲ್ಲಿ ಭಗವಂತನ ಬಗ್ಗೆ ಪ್ರೇಮವುಂಟಾದಾಗ ಭಗವಂತನೇ ಗತಿ ಎಂದು ಅನನ್ಯಭಾವವುಂಟಾದಾಗ, ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿ, ಆಚಾರ್ಯರ ಮೂಲಕವಾಗಿ ಶರಣಾಗತಿಯನ್ನು ಮಾಡಿಸಿಕೊಂಡು, ದೃಢವಾದ ವಿಶ್ವಾಸದಿಂದ 'ಪರಮಾತ್ಮನು ರಕ್ಷಿಸುತ್ತಾನೆ' ಎಂದು ಒಂದೇ ಬಾರಿ ಶರಣಾಗತಿ ಮಾಡಿದಾಗ ಆ ಶರಣಾಗತಿಯು ಫಲಿಸುತ್ತದೆ.

ಹೀಗೆ ಶ್ರೀಮದ್ರಾಮಾಯಣದಲ್ಲಿ ಅನೇಕ ಶರಣಾಗತಿ ಪ್ರಸಂಗಗಳು ಕಂಡು ಬಂದು, ಉತ್ತರ ಕಾಂಡದಲ್ಲಿಯೂ ಕೂಡ ಅಂತಿಮವಾಗಿ ಶ್ರೀರಾಮನು ವೈಕುಂಠಕ್ಕೆ ಹೊರಡುವ ಸಂದರ್ಭದಲ್ಲಿ ಅಯೋಧ್ಯೆಯಲ್ಲಿರುವ ಎಲ್ಲ ಚರಾಚರ ವಸ್ತುಗಳನ್ನೂಕೂಡ ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾನೆಂದು 'ಆನ್ರು ಚರಾಚರಂಗಳ್ಕೈ ವೈಕುಂಠತ್ತೇತ್ತಿ' ಎಂದು ಕುಲಶೇಖರಾಳ್ವಾರರು ತಮ್ಮ ಪೆರುಮಾಳ್ ತಿರುಮೊಳಿಯಲ್ಲಿ, ಹಾಗು ನಮ್ಮಾಳ್ವಾರರು 'ಕರ್ಪಾರ್ ಇರಾಮಪಿರಾನೈಯಲ್ಲಾಲ್ ಮಟ್ರುಂ ಕರ್ಪರೋ, ಪುರ್ಪಾ ಮುದಲಾ ಪುಲ್ಲೆರಿಂ ಪಾದಿಯೊನ್ರಿನ್ರಿಯೇ' ಎಂಬ ತಮ್ಮ ತಿರುವಾಯ್ಮೊಳಿಯಲ್ಲಿ ಶರಣಾಗತಿಯ ವೈಭವವನ್ನು ಕೊಂಡಾಡಲಾಗಿದೆ.

ಹಾಗೆಯೇ 'ಶರಣಾಗತರಕ್ಷಣ' ವೆಂಬ ಮಹಾಭಾರತದ ಗ್ರಂಥದಲ್ಲಿಯೂ ಕೂಡ ಅನೇಕ ಶರಣಾಗತಿ ಪ್ರಸಂಗಗಳು ಕಂಡುಬಂದು, 'ಶರಣಾಗತಿಗದ್ಯ' ಎಂಬ ಗ್ರಂಥದಲ್ಲಿ ಭಾಷ್ಯಕಾರರು ಜೀವಾತ್ಮರ ಉದ್ಧಾರಕ್ಕಾಗಿ ಭಗವನ್ನಾರಾಯಣಾನುರೂಪ.... ಶರಣಮಹಂ ಪ್ರಪದ್ಯೇ' ಎಂದು ಶರಣಾಗತಿಯನ್ನು ಮಾಡಿ ಶರಣಾಗತಿ ವೈಭವವನ್ನೇ ಲೋಕಕ್ಕೆ ಎತ್ತಿಹಿಡಿದಿದ್ದಾರೆ.

ಶುಭಂ

ಪಂಡಿತರತ್ನಂ ವಿದ್ವಾನ್, ಇ. ವಿ ವೀರರಾಘವನ್, ಶ್ರೀರಂಗಪಟ್ಟಣ

Magnum opus

Gudharthasangraha is one of the most detailed and magnificent commentaries to the Shrutaprakashika and Sribhashya, building the final impregnable wall around Srivishishtadvaita siddhantam established by Ramanuja. The work runs into 3500 pages in printed version. Its chapter on Jignasadhikaranam alone refers and quotes from more than 100 authors and 250 works.

यो यो यां यां तनुं भक्त्या श्रद्धयार्चितुमिच्छति। तस्य तस्याचलां श्रद्धां तामेव विदधाम्यहम्॥

Whoever, under whatever title, in whatever form follows any faith and worships me with earnest, constant faith and purpose, I recognise and support his faith and earnestness. GEETHA

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಹಾ ವಂಶಗಳು

ಶ್ರೀಮಾನ್ ಉ. ವೇ ಕಂದಾಡೈ ತೋಳಪ್ಪರ್ ವೆಂಬಾರ್ ಚಿಟ್ಟಂಪಲ್ಲಿ ಪ್ರೋ. ಗೋವಿಂದಾಚಾರ್ಯ
ಬೆಂಗಳೂರು

ಕೌಟುಂಬಿಕ ಧರ್ಮದಲ್ಲಿ ಸಂಸ್ಕಾರಗಳ ಆಧಾರಿತವಾದ ರೀತಿನೀತಿಗಳನ್ನು ಅನುಸರಿಸಿ ಜೀವಿಸುವ ಕುಟುಂಬ ಹಾಗು ಕಸುಬು ಅಥವಾ ಬುಡಕಟ್ಟು ಆಧಾರಿತವಾದ ಸಮುದಾಯವು ಸಮಾಜದಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿವೆ. ಇವುಗಳ ಏಳಿಗೆಗಾಗಿ ದುಡಿಯುವ ಹಾಗು ಸಮುದಾಯದ ಹಿತವನ್ನು ಕಾಪಾಡುವ ಗೃಹಪತಿಯೆಂದು ಕರೆಯಲ್ಪಡುವ ಯಜಮಾನನ ತ್ಯಾಗಶೀಲ ನಿಸ್ವಾರ್ಥಕ್ರಿಯೆಗಳು ಹಾಗು ಸಂಸ್ಕಾರಗಳು ಇಲ್ಲಿ ತುಂಬಾ ಮುಖ್ಯವಾದ ಗುಣಲಕ್ಷಣಗಳಾಗಿವೆ. ಸಮುದಾಯದ ಜನರನ್ನೆಲ್ಲಾ ಒಟ್ಟುಗೂಡಿಸುವುದೇ ಧಾರ್ಮಿಕ ವಿಧಿಗಳ ಉದ್ದೇಶ. ಉತ್ತಮ ಸಾಧನಗಳಾದ ಸ್ನೇಹ–ಸೌಹಾರ್ದತೆಗಳಿಂದ ಇವರನ್ನು ನೋಡಿಕೊಳ್ಳುವುದೇ ಮನೆತನದ ಹೊಣೆಯಾಗಿರುತ್ತದೆ. ಇದರಲ್ಲಿ ನಮಗೆ ಸಿಗುವ ಅತ್ಯುತ್ತಮ ನಿದರ್ಶನವೆಂದರೆ ಪ್ರಪನ್ನಜನಕೂಟಸ್ಥ ನಮ್ಮಾಳ್ವಾರರು. ಲೌಕಿಕ ಸಂಸಾರ ಮಂಡಲದಲ್ಲಿ ಮನೆತನದ ಆದರ್ಶ ತೋರುವ ಹತ್ತು ಮಹನೀಯರನ್ನು ಕೂರ್ಮ ಪುರಾಣ ಹೆಸರಿಸುವುದು. ಅಧ್ಯಾಪಕ, ತಂದೆ, ತಾತ, ಚಿಕ್ಕಪ್ಪ, ದೊಡ್ಡಪ್ಪ, ದೊಡ್ಡಣ್ಣ, ರಾಜ, ಮಾತುಲ, ಹೆಣ್ಣು ಕೊಟ್ಟ ಮಾವ ಮತ್ತು ತಾಯಿಯ ತಂದೆ. ಮುತ್ತಾತ, ತಾತ, ತಂದೆ, ಮಗ, ಮಗಳು, ಮೊಮ್ಮಗ, ಮೊಮ್ಮಗಳು – ಈ ಸಂತತಿಯ ಸರಪಣಿಯೇ ವಂಶ ಎಂದೆನಿಸಿಕೊಳ್ಳುವುದು. ಸದ್ವೃತ್ತಿಪರರೂ ಹಾಗು ಸದಾಚಾರವಂತರು ಇರುವ ಪೀಳಿಗೆ ಸದ್ವಂಶ ಎಂದೆನಿಸಿಕೊಳ್ಳುವುದು. ಉದಾ – ಬ್ರಾಹ್ಮಣನಲ್ಲಿರುವ ಸಂಸ್ಕಾರದಿಂದಲೇ ಸದ್ವೃತ್ತಿ ಪ್ರಾಪ್ತಿ. ರಾಮಾನುಜರ ಪಿತೃ–ಪಿತಾಮಹರೆಲ್ಲರಿಗೂ ಯಜ್ಞಯಾಗಗಳು ದಿನಚರಿಯಾಗಿತ್ತು. ಆದ್ದರಿಂದಲೇ 'ಸರ್ವಕ್ರತು' ಎಂದು ಬಿರುದಾಂಕಿತರಾದರು. ಇಂತಹ ಸತ್ಪುರುಷರ ಆಚರಣೆಗೆ 'ಸದಾಚಾರ' ಎಂದು ಹೆಸರು. 'ಸತ್' ಎಂಬ ಪದವು ಸಾಧುವಾಚಕ. "ತೇಷಾಂ ಆಚರಣಂ ಯತ್ತು ಸದಾಚಾರಸ್ಸ ಉಚ್ಯತೇ" (ವಿಷ್ಣು ಪುರಾಣ ೧–ತೃತೀಯಾಂಶ–೧೧–೩). 'ಮೇಲೆಯಾರ್ ಶೆಯ್ವನಗಳ್' ಎಂದು ಗೋದಾದೇವಿಯು ಆರ್ಥೈಸಿದ್ದಾಳೆ. ಇದು ಉದ್ಧಾರದ ಸನ್ಮಾರ್ಗವೇ ಆಗಿದೆ. ದೇವತಾರ್ಚಕ, ಧ್ಯಾನ ಜಪಗಳ ಅನುಷ್ಠಾನದಲ್ಲಿರುವವನು, ಸಚ್ಛಾಸ್ತ್ರಜಿಜ್ಞಾಸು ಸದ್ವಿದ್ಯಾಶೀಲನಾಗಿರುವವನೇ ಸದಾಚಾರ ಸಂಪನ್ನ. ಸದಾಚಾರ ಸದ್ವ್ಯವಹಾರ ಪ್ರಜಾಪಾಲನೆಯಲ್ಲಿ ನಿರತನಾದ ಕುರುವಂಶೀಯ ಯುಧಿಷ್ಠಿರನು ಕೀರ್ತಿಯಲ್ಲಿ ಪಾಂಡುವನ್ನೇ ಮೀರಿಸಿದ್ದ. ಶೌಚಾಚಾರ ಸದಾಚಾರ ವಂಶಜರು ಜನಾಕರ್ಷಣೆಗೆ ಅಂಕುಶವಿದ್ದಂತೆ. "ಅಂಕುಶಂ ಶೌಚಮಿತ್ಯಾಹುರರ್ಥಾನಾಮುಪಧಾರಣೇ" (ಮಹಾಭಾರತ ಆದಿಪರ್ವ ೧೪೦–೨೦).

ದೇವತಾಲಂಬಿಯು ಸದಾಚಾರದಿಂದಲೇ ಪರಮಭಾಗವತನೆಂದೆನಿಸಿಕೊಂಡು ಪೂಜ್ಯನಾಗುವನು, ಸಮಾಜದಲ್ಲಿ ಆರ್ಯನಾಗುವನು. ಆಳ್ವಾರರು ಭಾಗವತಪರ ವಂಶವನ್ನು ಎತ್ತಿ ಹಿಡಿದಿರುತ್ತಾರೆ. ಭಾಗವತ ಶೇಷತ್ವಕ್ಕೆ ಭಗವಂತನು ಖಂಡಿತ ಪ್ರಸನ್ನನಾಗುವನು ಎಂದು ತಿಳಿದ ಕಲಿಯನ್ "ನಾವು ವಂಶ ಪರಂಪರೆಯಾಗಿ ದಾಸರಾಗಿ, ನೀವು (ರಂಗನಾಥ) ನಮ್ಮ ವಂಶದ ದೈವವೆಂದು ಏಳು ತಲೆಮಾರುಗಳಿಂದಲೂ ನಿಮ್ಮ ಕೈಂಕರ್ಯ ಮಾಡುತ್ತಾ ಬಂದಿದ್ದೇವೆ. ಕೃಪೆಮಾಡಿ ಸ್ವಾಮೀ" ಎಂದು ಪ್ರಾರ್ಥಿಸುವರು. "ಎಂದೈ ತಂದೈ ತಮ್ಮಾನ್ ಎನ್ರು ಎಮರ್ ಏಳಿಳವುಂ ವಂದು ನಿನ್ರ ತೊಂಡರೋಕ್ಕೇ" (ಪೆರಿಯ ತಿರುಮೊಳಿ ೪–೯–೯). ಮಾರನ್ ಆಳ್ವಾರರು ಕೂಡ ಸ್ಪಷ್ಟಪಡಿಸುವರು – "ಇಡೀ ದಾಸ ಪರಂಪರೆಗೇ ನಾವು ದಾಸರು. ಭಗವತ್ಕೈಂಕರ್ಯ ಸಲ್ಲಿಸುವ ದಾಸರುಗಳೇ ನಮಗೆ ಸ್ವಾಮಿಗಳು. ಶ್ರೀವೈಷ್ಣವಕುಲದಲ್ಲಿ ಶೇಷತ್ವದ ಎಲ್ಲೆಯ ಕೊನೆಯಲ್ಲಿ ನಿಲ್ಲುವವನು ನಾನು. "ಅಡಿಯಾರ್ ಅಡಿಯಾರ್ ತಮ್ಮಡಿಯಾರ್ ತಮಕ್ಕಡಿಯಾರ್ ಅಡಿಯಾರ್ ತಮ್ಮಡಿಯಾರ್ ಅಡಿಯೋಂಗಳೇ" (ತಿರುವಾಯ್ಮೊಳಿ). ದಾಸ್ಯದಲ್ಲಿ ಏಳು ತಲೆಮೊರೆಗಳು ಎಂಬುದನ್ನು 'ಎಂದೈ' ಎಂಬ ಪದದಿಂದ ಆರ್ಥೈಸಿರುತ್ತಾರೆ. ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಬರುವುದೇ ಪರಂಪರೆ.

ಬ್ರಾಹ್ಮಣ್ಯ ಉದ್ಧಾರವಾಗಿರಬೇಕಾದರೆ ಯಾಗ, ಯಜ್ಞ, ವೇದಾಧ್ಯಯನ, ಅಧ್ಯಾಪನ ಮುಂತಾದ ಸದ್ವೃತ್ತಿಗಳೇ ಕಾರಣ ಹಾಗು ಭೂಷಣ. ಇವು ಶಾಸ್ತ್ರ ಸಮ್ಮತವಾಗಿಯೂ, ಸಾಂಪ್ರದಾಯಿಕವೂ ಆದ ಬ್ರಾಹ್ಮಣ ಧರ್ಮವೇ ಆಗಿದೆ. ಆದ್ದರಿಂದ ಪ್ರಧಾನವಾಗಿ ಇದೇ ಮಹಾ ವಂಶ. ಈ ಕುಟುಂಬದಲ್ಲಿ ಪರಬ್ರಹ್ಮನನ್ನು ಅರಿಯುವ ಬ್ರಹ್ಮಜ್ಞಾನಿ ಒಬ್ಬನಿದ್ದರೂ ಸಾಕು, ಅದು ಪವಿತ್ರವಾಗುವುದು. ಪಾಂಡವ–ಕೌರವರು ಇಬ್ಬರೂ ಒಂದೇ ವಂಶದವರು. ಧರ್ಮ ಮಾರ್ಗದಲ್ಲಿ ನಡೆದ ಪಾಂಡವರು ಸತ್ಕುಲಸಂಪನ್ನರಾದರು. ದ್ವೇಷ, ಅಸೂಯೆ, ದುರ್ಬುದ್ಧಿ ಇನ್ನೂ ತತ್ಸಂಬಂಧಿತ ಅಧರ್ಮ ಮಾರ್ಗದಿಂದ ಕೌರವರು ವಂಶ ಭ್ರಷ್ಟರಾದರು. "ಇದು ಸದ್ವಂಶವಲ್ಲ, ತಿಳಿಗೇಡಿತನದ ವಂಶ ಪರಂಪರೆ"ಎನ್ನುವರು ಕಲಿಯನ್. (ಪೆ. ತಿ ೨–೩–೬). ಆದ್ದರಿಂದ ಜ್ಞಾನ–ಬುದ್ಧಿ–ಪ್ರಜ್ಞಾಶೀಲರೂ, ವಿದ್ಯಾವಂತರಿರುವ ಕುಟುಂಬವು ಸತ್ಕುಲವಾಗುವುದು.

ಬ್ರಾಹ್ಮಣೋಸ್ಯ ಮುಖಮಾಸೀತ್ – ಎಂದು ಬ್ರಾಹ್ಮಣನ ಸೃಷ್ಟಿಯನ್ನು ಶ್ರುತಿಯು ಸ್ಪಷ್ಟಪಡಿಸುವುದು. ವಿರಾಟ್ ಪುರುಷನ ಮುಖದಿಂದ ಬ್ರಾಹ್ಮಣನ ಸೃಷ್ಟಿಯಾದಾಗಲೇ ಬ್ರಹ್ಮತೇಜಸ್ಸಿ ಎಂದಾಯಿತು. ಕಲ್ಯಾಣಕರವಾದ ಕ್ರಿಯೆಗಳಿಗೆ ಇದು ನಾಂದಿ. ಶ್ರೀ ಕೃಷ್ಣನು ಅರ್ಜುನನಿಗೆ ಹೇಳುವನು – "ಯಾರು ಲೋಕಕಲ್ಯಾಣಕರವಾದ ಸಕ್ರಿಯೆಗಳಲ್ಲಿ ತೊಡಗುವರೋ, ಅವರು ನನ್ನ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತೇಜೋಂಶದಿಂದಲೇ ಹುಟ್ಟಿದವರು ಎಂದು ತಿಳಿ" – "ಯದ್ಯದ್ವಿಭೂತಿ ಮತ್ಸತ್ತ್ವಂ ಶ್ರೀಮದೂರ್ಜಿತಮೇವವಾ ತತ್ತದ್ದೇವಾವಗಚ್ಛತ್ವಂ ಮಮ ತೇಜೋಂಶ ಸಂಭವಂ".

ಕಟ್ಟುಪಾಡುಗಳಿರುವವನಿಗೆ ನಿತ್ಯ ಜೀವನ ಹೇಗೆ ಎಂದರೆ, ಜೀವನ ನಿರ್ವಾಹಕ್ಕಾಗಿ ಪೌರೋಹಿತ್ಯಾದಿ ಯಜ್ಞಕರ್ಮಗಳಲ್ಲಿ ತೊಡಗಬಹುದು. ಪ್ರಾಚೀನ ಕಾಲದಲ್ಲಿ ಪುರೋಹಿತನಲ್ಲಿ ದೈವಶಕ್ತಿಯ ತುಣುಕು ಇದ್ದುದರಿಂದಲೇ ಜನರು ಆದರಿಸುತ್ತಿದ್ದರು, ಹೆದರುತ್ತಲೂ ಇದ್ದರು. ಮರುದ್ದೇವತೆಗಳಿಗೆ ಶಿಶುವಾಗಿ ದೊರೆತ ಭರಧ್ವಾಜ ಮಹರ್ಷಿಯಲ್ಲಿದ್ದ ಅಸಮಾನ ವಿದ್ಯಾಶಕ್ತಿಗಳನ್ನೂ ಗಾಯತ್ರೀ ಮಂತ್ರಸಿದ್ಧಿಯನ್ನೂ ಕಂಡ ರಾಜರು ಅವನನ್ನು ರಾಜಪುರೋಹಿತನನ್ನಾಗಿ ನೇಮಿಸಿಕೊಂಡರು. ಅನೇಕ ಕ್ಷತ್ರಿಯ ರಾಜವಂಶಗಳಿಗೆ ಭಾರ್ಗವರೆಂದು ಕರೆಯಲ್ಪಡುವ ಭೃಗು ವಂಶದವರೇ ಪುರೋಹಿತರು. ಇಕ್ಷ್ವಾಕುವಂಶದ ರಾಜರಿಗೆ ವಸಿಷ್ಠರೇ ಕುಲಪುರೋಹಿತರು. "ಇಂಥಾವರ ಸಹಕಾರ ಸಲಹೆಗಳಿಲ್ಲದೆ ಕೇವಲ ಪರಾಕ್ರಮ ಧೈರ್ಯಗಳಿಂದಾಗಲೀ, ಮಹಾವಂಶದಲ್ಲಿ ಹುಟ್ಟಿರುವುದರಿಂದಾಗಲೀ ರಾಜನಾದವನು ಯಶಸ್ವಿಯಾಗಲಾರ" ಎಂದು ಗಂಧರ್ವರಾಜನು ಅರ್ಜುನನಿಗೆ ಉಪದೇಶಿಸುವನು. (ಮಹಾ ಭಾರತ ಆದಿ ಪರ್ವ ೧೭೦–೮೦).

ಪ್ರಾಗ್ವಂಶ – ವಂಶ ವಿಸ್ತಾರಕ್ಕೆ ಹಿಂದೆ ಮತ್ತು ಮುಂದೆ ಆಧಾರಸ್ತಂಭದಂತಿರುವ ಭಗವಂತನೇ ವಂಶರೂಪವಾದ ಜಗತ್ತಿಗೆ ಕಾರಣನಾಗಿ ವಂಶವರ್ಧನನಾಗಿದ್ದಾನೆ. ಭಗವಂತನ ಆಶ್ರಯ ಹೊಂದಿದ್ದ ಜಲರಾಶಿಯೇ ಜಗತ್ಕಾರಣಭೂತವಾದ ವೀರ್ಯದಿಂದಲೇ ಸಮಸ್ತ ಚರಾಚರಾತ್ಮಕ ವಸ್ತುಗಳೂ ಹುಟ್ಟಿವೆ. ಪ್ರತಿ ಜೀವವೂ ಪರಮಾತ್ಮನ ಒಂದು ಅಂಶ ಎಂಬುದೇ ಭಗವದ್ವಂಶದ ತತ್ವ. ಸೃಷ್ಟಿಯ ಮೂಲಕ ಭಗವದ್ವಿಭೂತಿ ಹರಡಿತು. ಆರಂಭದಲ್ಲಿ ಎಲ್ಲೆಲ್ಲಿಯೂ ಸತ್ವಮಯ ಗುಣವೇ ಇದ್ದುದ್ದರಿಂದ ಒಂದೇ ವರ್ಣವಿತ್ತು. ಕಾಲಕ್ರಮದಲ್ಲಿ ಗುಣತ್ರಯದಲ್ಲಿ ಏರಿಳಿತಗಳಾಗಿ ಚಾತುರ್ವರ್ಣ ವ್ಯವಸ್ಥೆ ಉಂಟಾಯಿತು. ಚಾತುರ್ವರ್ಣದವರು ದೇವಾಂಶ ಸಂಭೂತರೇ ಆಗಿರುತ್ತಾರೆ.

ಭಗವಂತನ ನಾಭೀ ಕಮಲದಿಂದ ಚತುರ್ಮುಖ ಬ್ರಹ್ಮನ ಸೃಷ್ಟಿಯಾಗುವುದು. ಸೃಷ್ಟಿಕಾರ್ಯ ಮುಂದುವರೆಯಲು ಇವನೇ ಸ್ವಾಯಂಭುವಾಗಿಯೂ ಹಾಗೆಯೇ ಮುಂದುವರೆದು ನವಬ್ರಹ್ಮರೂ, ಪ್ರಜಾಪತಿಗಳೂ, ಮನುಗಳೂ ಮಾನಸಪುತ್ರರಾಗಿ ಜನಿಸುವರು. ಆದ್ದರಿಂದ ಭಗವದ್ವಂಶಗಳು ಅಸಾಧಾರಣವೂ, ಅಪ್ರಾಕೃತವೂ ಆದ ಸಂತತಿ ಆಗಿದೆ. ಹೀಗೆಯೇ ಕಶ್ಯಪ, ಅತ್ರಿ, ವಸಿಷ್ಠ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ಭಾರಧ್ವಾಜರೇ ಇಂದಿನ ವೈವಸ್ವತ ಮನ್ವಂತರದ ಸಪ್ತ ಋಷಿಗಳು. ಸೃಷ್ಟಿ ಕ್ರಮ ಒಂದೇ ರೀತಿ ಇರುವುದಿಲ್ಲ. ಬೇರೆ ಬೇರೆ ಮನ್ವಂತರಗಳಲ್ಲಿ ಬೇರೆ ಬೇರೆ ಸಪ್ತರ್ಷಿಗಳೂ, ಮನು–ಪ್ರಜಾಪತಿಗಳೂ, ಇಂದ್ರರೂ ಇರುವರು.

ಮುನಿಕುಮಾರರಾದ ಸನಕಾದಿಗಳು ನೈಷ್ಠಿಕ ಬ್ರಹ್ಮಚಾರಿಗಳು. ಗೃಹಸ್ತಾಶ್ರಮವನ್ನು ಕೈಗೊಳ್ಳದೇ ಇದ್ದುದ್ದರಿಂದ ವಂಶ ಬೆಳೆಯಲಿಲ್ಲ. ಮೈಥುನ ಧರ್ಮದಿಂದ ಸೃಷ್ಟಿಕಾರ್ಯವು ಮುಂದುವರೆಯಲು ಸ್ವಯಂಭುವು ತನ್ನ ಶರೀರದ ಅರ್ಧ ಭಾಗದಲ್ಲಿ ವ್ಯಾಪಿಸಿದ್ದ ಪ್ರಕೃತಿಶ್ರೀಯನ್ನೇ ಸುಂದರ ಸ್ತ್ರೀಯಾಗಿ ಸೃಷ್ಟಿಸುವನು – "ಸ್ತ್ರೀಯ ಚಕ್ರೇ ಸ್ವ ದೇಹಾರ್ಧಂ ಯಯಾ ಪುಂಸಾಂ ಮತಿರ್ಹತಾ" (ಭಾಗವತ–೬–೧೮–೩೦). ಪ್ರಥಮವಾಗಿ ಶತರೂಪಾದೇವಿ – ಇವಳ ಪುತ್ರಿಯರಲ್ಲಿ ಪ್ರಸೂತಿಯು ದಕ್ಷಪ್ರಜಾಪತಿಯ ಪತ್ನಿಯಾಗುವಳು. ಎಲ್ಲಾ ವಂಶಗಳಿಗೆ ಇವನು ಕಾರಣನಾಗಿದ್ದರಿಂದ ಇವನು ಆದಿರಾಜ, ಭೂಮೀಶ್ವರ, ಸಾಮ್ರಾಟ್ ಎಂದು ಕರೆಯಲ್ಪಟ್ಟ. ಅದಿತಿ, ದಿತಿ, ಕದ್ರು, ವಿನುತ ಮುಂತಾಗಿ ಹದಿಮೂರು ದಕ್ಷ ಪುತ್ರಿಯರು ಕಶ್ಯಪನ ಪತ್ನಿಯರಾದರು. ಇವರ ವಂಶ ಜಾಲಾಂಧ್ರದಿಂದ (MATRIX) ಹದಿನಾಲ್ಕು ಲೋಕಗಳಲ್ಲಿ ದೇವ ದಾನವ ತಿರ್ಯಕ್ಕುಗಳು ತುಂಬಿ ವ್ಯಾಪಿಸಿದುವು. ಆದ್ದರಿಂದ ಜಗತ್ತಿನಲ್ಲಿರುವರೆಲ್ಲರೂ ದಕ್ಷ ಕಶ್ಯಪರ ಸಂತತಿಗೆ ಸಂಬಂಧಪಟ್ಟವರೇ. ಇದೇ ಅತ್ಯಂತ ದೊಡ್ಡದಾದ ವಂಶ ವೃಕ್ಷ. ಮನುಜರಾದ ನಾವೆಲ್ಲರೂ ಮನುವಂಶೀಯರೇ. ದಾನವ ಕುಲ ಎಂದೆಂದಿಗೂ ಸ್ವಾಭಾವಿಕವಾಗಿ ಮಹಾವಂಶವಾಗಲಾರದು. ಆದರೆ ಎರಡು ನಿದರ್ಶನಗಳು ಇದರಿಂದ ಹೊರತಾಗಿ ಲೋಕಪೂಜಿತವಾಗಿವೆ.

೧. ಸುತಂ ಮಹಾಭಾಗವತಂ ಮಹಾಸುರಃ – ಅಸುರ ಯೋನಿಯಲ್ಲಿ ಭಕ್ತಾಗ್ರೇಸರ ಪ್ರಹ್ಲಾದನು ಜನಿಸಿದ. "ಪ್ರಹ್ಲಾದಾರ್ಥೇ ನೃಸಿಂಹಃ" ಎಂದು ಭಕ್ತನಿಗಾಗಿಯೇ ಭಗವಂತನು ಸಂಭವಿಸಿದ. ದಿವ್ಯ ಸಾನಿಧ್ಯದಿಂದಲೇ ಅಸುರನು ಮಹಾಸುರನಾದ, ಸುತನು ಮಹಾ ಭಾಗವತನಾದ. ಪಿತುವಿನ ಮೋಕ್ಷಕ್ಕಾಗಿ ಪ್ರಾರ್ಥಿಸಿದಾಗ "ಪ್ರಹ್ಲಾದ ಕಂದಾ, ನಿನ್ನ ಪಿತುವು ಪವಿತ್ರನಾಗಿದ್ದಾನೆ. ಇವನ ಹಿಂದಿನ ಇಪ್ಪತ್ತೊಂದು ತಲೆಮಾರಿನವರು ಪವಿತ್ರರಾಗಿರುತ್ತಾರೆ. ನಿನ್ನ ಭಕ್ತಿಯು ಅಂಥಾದ್ದು. ಎಲ್ಲ ಭಕ್ತರಿಗೂ ನೀನು ಆದರ್ಶವಾಗಿರುವೆ. ನಿನ್ನಂಥಾ ವಂಶೋದ್ಧಾರಕನನ್ನು ಪಡೆದ ನಿನ್ನ ಪಿತುವು ದಿವ್ಯಗತಿಯನ್ನೇ ಹೊಂದುವನು" ಎಂದು ಭಗವಂತನು ಅನುಗ್ರಹಿಸುವನು. ತಾತ್ವಿಕವಾಗಿ ಇದು ಪಿತೃಗಳನ್ನು ದೇವತಾ ಪದವಿಗೇರಿಸುವ ದೈವೀಕರಣ ಭಾವನೆಯಾಗಿದೆ ಹಾಗು ಉತ್ತಮವಾದ ಆಧ್ಯಾತ್ಮಿಕ ಪರಂಪರೆಯೂ ಆಗಿದೆ.

೨. ವಿರೋಚನಸುತ ಬಲಿರಾಜಾಯ ನಮಃ – ದಾನವ ವಂಶದಲ್ಲಿ ಜನಿಸಿದರೂ, ವದಾನ್ಯ ಗುಣಾಢ್ಯ ಎಂದು ಖ್ಯಾತಿ ಹೊಂದಿದ ಬಲಿಯನ್ನು ಜಗತ್ತೇ ಪೂಜಿಸುವುದು. ಇವನ ಯಶಸ್ಸಿನ ಗುಟ್ಟೇನು? ಭೃಗು ವಂಶೀಯರಾದ ಭಾರ್ಗವರೆಂಬ ಬ್ರಹ್ಮಜ್ಞಾನಿಗಳ ಕೈಂಕರ್ಯ ಮಾಡಿ, ತ್ರೈಲೋಕಾಧಿಪತ್ಯವೆಂಬ ಭಗವತ್ಪ್ರಸಾದವನ್ನೇ ಅನುಭವಿಸಿದ. ಇವನ ಸಂತತಿಯಲ್ಲಿ ಬರುವ ಬಾಣರು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪಲ್ಲವರ ಕಾಲಕ್ಕೆ ಉತ್ತರದ ಇಂದಿನ ರಾಜಾಸ್ಥಾನದ ನಾಥದ್ವಾರ ಕ್ಷೇತ್ರವಿರುವ ಬಾಣನದೀ ಪರಿಸರದಲ್ಲಿ ನೆಲೆಸಿ ಬಲಿಯ ಗುಣಾತಿಶಯಗಳನ್ನೇ ಹೊಗಳುತ್ತಾ ತಾವು ಬಲಿಯ ವಂಶಜರೆಂದು ಹೇಳಿಕೊಳ್ಳುತ್ತಿದ್ದರು.

ಗೋತ್ರ ಎಂದರೆ ವಂಶ ಎಂದೂ ಹೆಸರು. ಸಪ್ತರ್ಷಿಗಳ ವಂಶಗಳು ಗೋತ್ರ ಪ್ರವರದೊಂದಿಗೆ ಮುಂದುವರೆಯಿತು. ಈ ವಂಶದಲ್ಲಿ ಜನಿಸುವ ಋಷಿಗಳೆಲ್ಲರಿಗೂ ಗೋತ್ರವುಂಟು. ಗೋತ್ರ ಮತ್ತು ವಂಶ ಪ್ರವರ್ತಕ ಋಷಿ ಭೇದವನ್ನು ತೋರಿಸುವ ಋಷಿಗಳನ್ನು 'ಪ್ರವರ' ಎಂದು ಕರೆಯುವರು. ಏಕ ಋಷಿ, ತ್ರಯಾ ಋಷಿ, ಪಂಚ ಋಷಿ ಗೋತ್ರಗಳಿವೆ. ನಿರ್ದಿಷ್ಟವಾದ ಸೂತ್ರ ಹಾಗು ವೇದ ಶಾಖೆಯ ಹೆಸರೂ ಇರುವುವು. ಭಾರ್ಗವ ಋಷಿಯ ಪುತ್ರ ವಾಧೂಲ ಋಷಿ. ಪ್ರವರದಲ್ಲಿ ಕ್ಷಾತ್ರ ಧರ್ಮದಿಂದ ಬ್ರಾಹ್ಮಣ ಧರ್ಮಕ್ಕೆ ಬಂದ ವೀತಹವ್ಯ ಎಂಬ ಹೆಸರಿದೆ. ವಾಧೂಲ ಸ್ಮೃತಿ ಎಂಬ ಧರ್ಮ ಶಾಸ್ತ್ರವೂ ಇದೆ. ಆಂಗೀರಸ ಋಷಿ ಪುತ್ರನೇ ಶಠಮರ್ಷಣ ಋಷಿ, ಗೋತ್ರ ಪ್ರವರ್ತಕ.

ಆಶ್ರಮ ಧರ್ಮದಲ್ಲಿ ಪ್ರಥಮ ಆಶ್ರಮ ಅತ್ರಿಯಿಂದ ಆರಂಭವಾಯಿತು. ಇಲ್ಲಿಯ ಋಷಿಗಳೆಲ್ಲರೂ ಆತ್ರೇಯ ಗೋತ್ರಜರಾಗಿರುತ್ತಾರೆ. ಯಜ್ಞ ಮಾರ್ಗವನ್ನು ಕಂಡವರಲ್ಲಿ ವೈದಿಕ ಮತ ಧರ್ಮದ ಮೂಲ ಪುರುಷರೇ ಆಂಗೀರಸ. ವೇದವೇ ದ್ವಿಜರಿಗೆ ಸಮಸ್ತವೂ ಆಗಿದೆ ಎಂದೂ, ವೇದಾಧ್ಯಯನದಿಂದ ಬ್ರಹ್ಮಯಜ್ಞವನ್ನು ಖಡ್ಡಾಯಪಡಿಸಿ ವೇದ ಸಾಹಿತ್ಯವನ್ನು ಪ್ರಸಾರ ಮಾಡಿದ ಕೀರ್ತಿ ಭರಧ್ವಾಜ ಮಹರ್ಷಿಗೆ ಸಲ್ಲುವುದು. ಕಾಲ ಮಹಿಮೆಯಿಂದ ಲುಪ್ತವಾಗಿ ಹೋಗಿದ್ದ ವೇದ ರಾಶಿಯನ್ನು ಸಪ್ತ ಋಷಿಗಳು ತಮ್ಮ ತಮ್ಮ ತಪೋಬಲದಿಂದ ಪುನಃ ಕಂಡುಕೊಳ್ಳುವರು. ಭಗವಂತನ ಸೃಷ್ಟಿಮೂಲವನ್ನು ನಮಗೆ ಶಾಸ್ತ್ರಗಳ ಮೂಲಕ ತಿಳಿಸಿರುವರು. ವೇದೋದ್ಧರಣದಿಂದಲೇ ಸನಾತನ ಧರ್ಮದ ಏಳಿಗೆ. ಇದರ ಪ್ರಚಾರ ಕ್ರಿಯೆ ಮನುವಂಶೀಯರದು. ಊರಿನ ಎಲ್ಲರ ಹಿತಕ್ಕಾಗಿ ಮಾಡುವ ದೇವಯಜ್ಞ ವೈದಿಕ ಸಂಸ್ಕೃತಿಯಲ್ಲಿ ಮುಖ್ಯವಾದುದು. ಇದರೊಂದಿಗೆ ಪಾರಮಾರ್ಥಿಕವಾದ ಆಲಯಾರ್ಚನೆಯೂ ಮರೀಚಿ ಮಹರ್ಷಿಯಿಂದ ಪರಂಪರೆಯಾಗಿ ಬಂದಿರುತ್ತದೆ.

ಋಕ್ ಸಂಹಿತೆಯಲ್ಲಿ ಬಳಸಲಾದ 'ರಾಜನ್' ಎಂಬ ಪದದ ಆಧಾರದಿಂದ ರಾಜ ಪ್ರಭುತ್ವವೂ ಋಗಾರ್ಯರ ಕಾಲದ ಆಡಳಿತ ಪದ್ಧತಿಯಾಗಿತ್ತು ಎಂದು ತಿಳಿದು ಬರುತ್ತದೆ. ದಶರಾಜ, ಅನು, ತರ್ವಸು ಎಂಬ ರಾಜವಂಶಗಳಿದ್ದುವು. ರಾಜತ್ವವು ಅನುವಂಶೀಕವಾಗಿದ್ದು ಜ್ಯೇಷ್ಠ ಪುತ್ರನಿಗೇ ಹಕ್ಕು. ದೊರೆಯುವ ವಿಧಿ ಇಲ್ಲಿಂದಲೇ ಆರಂಭವಾಗಿರಬಹುದು. ಸಾಮಾಜಿಕ ಜೀವನದಲ್ಲಿ ಪಿತೃ ಪ್ರಧಾನವಾದ ಕುಟುಂಬಗಳೇ ಇದ್ದವು. (ಉಲ್ಲೇಖ – ವೈದಿಕ ಸಾಹಿತ್ಯ ಚರಿತ್ರೆ).

ವಂಶವೆಂದ ಮೇಲೆ ಹಕ್ಕು ಬಾಧ್ಯತೆಯ ಪರಂಪರೆ ಸರ್ವೇಸಾಮಾನ್ಯ. ಕ್ಷೇತ್ರದ ಉಗಮಕ್ಕೆ ಕಾರಣರಾದ ಭಟ್ಟರ (ಅರ್ಚಕ) ವಂಶಜರೇ ಕ್ಷೇತ್ರ ನಿರ್ಮಾಣ, ನಿರ್ವಹಣೆಯನ್ನು ಪರಂಪರೆಯಾಗಿ ನಡೆಸಿಕೊಂಡುಬಂದಿರುವ ನಿದರ್ಶನಗಳಲ್ಲಿ ಆಂಧ್ರ ಪ್ರದೇಶದ ಯಾದಗಿರಿ ಮುಂತಾದ ಹತ್ತು ನೃಸಿಂಹ ಕ್ಷೇತ್ರಗಳು ಸೇರಿವೆ. ಒಪ್ಪಂದದ ಪ್ರಕಾರ ಸ್ಮಾರ್ತ, ವೈಷ್ಣವ, ಮಾಧ್ವ, ಮಾರ್ವಾಡೀ ಬ್ರಾಹ್ಮಣ ವಂಶದ ಅರ್ಚಕರಿಗೆ ಸರದಿಯಂತೆ ಪೂಜಾ ಕಲಾಪಗಳನ್ನು ಮಾಡುವ ಹಕ್ಕು ಸೇರಿವೆ. (ಉಲ್ಲೇಖ – Narasimha cult in Andhrapradesh by MA Narasimhacharya).

ರಾಜಾಸ್ಥಾನದ ನಾಥದ್ವಾರ ಹಾಗು ಇತರ ಆರು ಕನ್ಹಯ್ಯ (ಕೃಷ್ಣ ಕ್ಷೇತ್ರಗಳು) ತಲಾ ಒಂದರಂತೆ ವಲ್ಲಭಾಚಾರ್ಯರ ಏಳು ಪುತ್ರರ ಸ್ವಾಮಿತ್ವ ಹಾಗು ಆಡಳಿತಕ್ಕೆ ಒಳಪಟ್ಟಿರುತ್ತದೆ. ಅರ್ಚಕ ಸಮುದಾಯದಲ್ಲಿ ಇವರ ವಂಶಜರು, ಮುಖಿಯಾ ಹಾಗು ಪಾನೇರಿ ವಂಶಜರು ಸೇರಿದ್ದಾರೆ. ನಿತ್ಯ ಕೈಂಕರ್ಯಕ್ಕಾಗಿ ಗೋಸ್ವಾಮಿ ವಂಶಜರಿದ್ದಾರೆ.

ತಿರುಮಲಾ ಪೆದ್ದಿಂಟಿ ಮನೆತನದವರು ಆಂಧ್ರದ ಅಂದು ಆಳುತ್ತಿದ್ದ ಪಶುಪತಿ, ಜಮೀನುದಾರ ವಂಶದ ರಾಜರ ಆಶ್ರಯವನ್ನು ಹೊಂದಿ ಮೊದಮೊದಲು ಪುರೋಹಿತರಾಗಿ ಅನಂತರ ಸಿಂಹಾಚಲ ಮುಂತಾದ ಪ್ರಧಾನ ಕ್ಷೇತ್ರಗಳಲ್ಲಿ ಅರ್ಚಕ ವರ್ಗದವರಾಗಿ ಸೇರಿ ಇಂದಿಗೂ ವಂಶಪರಂಪರೆಯಾಗಿ ಮುಂದುವರೆಸಿಕೊಂಡು ಬಂದಿರುವರು. ಕಾಲಕ್ರಮೇಣ ಇವರೊಂದಿಗೆ ಕಂದಾಡೈ, ತಿರುಮಲೈಯಾರ್, ಆದಿಮತ್ಸ್ಯಂ, ಗೋದಾವರ್ತಿ ವಂಶಜರು ಪರಿಚಾರಕರಾಗಿ ಸೇರಿದರು. ನಂಬಿಮಾರ ಅರ್ಚಕರು ತಿರುಪತಿ ವೈಷ್ಣವನಂಬಿಯುಲು ಎಂಬ ಹೆಸರಿನಿಂದ ಸಮಾರಾಧಕ ಬ್ರಾಹ್ಮಣ ವಂಶಜರೆಂದು ಇಲ್ಲಿ ಮುಂದುವರೆದರು. ಭಕ್ತಾಂಜನೇಯ ಕ್ಷೇತ್ರ ಮತ್ತು ಸಾತಾನಿ ವೈಷ್ಣವರು, ಒಂದು ನಾಣ್ಯದ ಎರಡು ಮುಖಗಳಿದ್ದಂತೆ. (ಉಲ್ಲೇಖ – The Simhachala Temple - ದೇವಸ್ಥಾನದ ಪ್ರಕಟಣೆ). ಆದರೆ ಈ ಜ್ಯೇಷ್ಠಪುತ್ರ ಹಕ್ಕು ಪರಂಪರೆ ತಿರುವಾಂಕೂರು ವಂಶದಲ್ಲಿ ಭಿನ್ನವಾಗಿದೆ. ರಾಜನ ಸೋದರಿಯ ಪುತ್ರ ಅಥವಾ ಪುತ್ರಿಗೆ ಸಿಂಹಾಸನದ ಹಕ್ಕು ಪರಂಪರೆಯಾಗಿ ಬಂದು, ಈಗಲೂ ಜಾರಿಯಲ್ಲಿದೆ. (Sri Padmanabha Temple – ಗೌರೀ ಲಕ್ಷ್ಮೀ ಬಾಯಿ).

ಪುರಾಣಗಳ ಕಾಲಕ್ಕೆ ಸ್ವಾಯಂಭುವಿನ ಪುತ್ರಿಯರಲ್ಲಿ ಭಗಂತನು ದೇವಹೂತಿಯಲ್ಲಿ ಕಪಿಲನಾಗಿಯೂ, ಆಕೂತಿಯಲ್ಲಿ ಯಜ್ಞಪುರುಷನಾಗಿಯೂ, ಅದಿತಿಯಲ್ಲಿ ವಾಮನನಾಗಿ, ಸಂಭೂತಿಯಲ್ಲಿ ಅಜಿತನಾಗಿ (ಕೂರ್ಮಾವತಾರ), ಅಂಬುಧಾರಳಲ್ಲಿ ವೃಷಭನಾಗಿ ಅವತರಿಸುವನು. ವೃಷಭಾವತಾರ ಉಪದೇಶಾವತಾರಗಳಲ್ಲಿ ಒಂದು. ಸಿದ್ಧರ ರೂಪದಲ್ಲಿ ಜ್ಞಾನೋಪದೇಶವನ್ನು ಯೋಗೇಶ್ವರನಾಗಿ ಯೋಗವಿಜ್ಞಾನವನ್ನು ಉಪದೇಶಿಸಿದ. ಇವು ಅವನ ಅಂಶ, ಕಲೆಗಳಿಂದ ಉಂಟಾದ್ದರಿಂದ ಅಂಶಾವತಾರಗಳೆಂದೂ, ಕಲಾವತಾರಗಳೆಂದೂ ಹೆಸರು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪುರಾಣಗಳ ಕಾಲ ಭಾರತ ಧಾರ್ಮಿಕ ಇತಿಹಾಸದಲ್ಲಿ ಒಂದು ತಿರುವು ಬಿಂದು. ಬ್ರಾಹ್ಮಣ ಧರ್ಮದ ಪ್ರಾಮುಖ್ಯತೆ, ನಾಸ್ತಿಕ ಪಂಥಗಳ ಇಳಿಮುಖ ಮುಂತಾದ ಸ್ಥಿತಿಗತಿಗಳಿಗೆ ವೈಷ್ಣವ ಧರ್ಮದ ಮೂಲಭೂತ ಅಂಶವಾದ ಶರಣಾಗತಿ ಮೋಕ್ಷ ಸಿದ್ಧಾಂತವೇ ಕಾರಣ. ಶ್ರೀಕೃಷ್ಣ ಲೀಲೆಗಳ ಕಥಾರಾಶಿಯೇ ಆಗಿರುವ ಭಾಗವತ ಮಹಾಪುರಾಣ ಇದಕ್ಕೆ ಒತ್ತು ಕೊಡುವುದು. ಹರಿವಂಶ ಪುರಾಣವು ಶ್ರೀಕೃಷ್ಣನ ವಂಶದ ಪೂರ್ವಕಥೆಯನ್ನು ನಿರೂಪಿಸುತ್ತದೆ. ಭಾಗವತ ಧರ್ಮವನ್ನು ಯೋಗವೆಂದು ಗೀತೆಯಲ್ಲಿ ಹೇಳಿದೆ. ಈ ಪುರಾಣವು ಮಹಾಭಾರತದ ಅನುಬಂಧವಾಗಿ (ಖಿಲ ಭಾಗವಾಗಿ) ಮೂಡಿ ಬಂತು.

ವ್ಯಾಸಂ ವಸಿಷ್ಠನಪ್ತಾರಂ ಶಕ್ತೇಃ ಪೌತ್ರಮಕಲ್ಮಷಂ ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಂ – ಈ ಮಹಾ ಶ್ಲೋಕ, ಇವರ ವಂಶ ಹಾಗು ಗೋತ್ರಗಳನ್ನೇ ಹೇಳುವುದು. ಪಾಂಡವರ ಪಿತಾಮಹ ವ್ಯಾಸರು ಪರಾಶರ–ಸತ್ಯವತಿಯರ ಸುಪುತ್ರರು. ವೇದಗಳ ವಿಭಾಗ, ವೇದೋದ್ಧರಣ, ಮಹಾಪುರಾಣಗಳ ಅಸ್ತಿತ್ವ ಹಾಗು ಪರಿಚಯ, ಭರತನ ವಂಶವನ್ನು ಉದ್ಧಾರ ಮಾಡಿದ ಕೀರ್ತಿ ವ್ಯಾಸರಿಗೆ ಸಲ್ಲುವುದು. ಇದು ಹೇಗೆ ಮಹಾವಂಶವೆಂದರೆ – "ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ".

ಪುರಾಣಗಳು – ೧) ಚತುರ್ದಶ ವಿದ್ಯೆಗಳಲ್ಲಿ ಒಂದು. ೨) ಸಂಸ್ಕೃತ ಸಾಹಿತ್ಯದ ಒಂದು ಭಾಗ. ೩) ವಂಶಾನುಚರಿತ್ರೆಗಳಲ್ಲಿ ಬರುವ ವ್ಯಕ್ತಿಗಳ ಐತಿಹಾಸಿಕ ಮೌಲ್ಯವನ್ನು ಸೂಚಿಸುವುವು. ಆದ್ದರಿಂದ ಇವುಗಳ ಶ್ರವಣ ಮತ್ತು ಪ್ರವಚನ ಬಹಳ ಪವಿತ್ರವಾದುದು. ಈ ಸದ್ವೃತ್ತಿಯಲ್ಲಿ ತೊಡಗಿರುವರ ಪೈಕಿ ಪರಕಾಲ ಮಠದ ಶ್ರೀ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳವರೂ ಒಬ್ಬರು. ಪೂರ್ವಾಶ್ರಮದಲ್ಲಿ ಇವರನ್ನು ಪುರಾಣಂ ನರಸಿಂಹಾಚಾರ್ಯ ಎಂದು ಕರೆಯುತ್ತಿದ್ದರು.

"ಬಾಹೂರಾಜನ್ಯಃ ಕೃತಃ" ಎಂದು ಶ್ರುತಿ ಹೇಳುವಂತೆ, ವಿರಾಟ್ ಪುರುಷನ ಬಾಹುಗಳಿಂದ ಕ್ಷತ್ರಿಯನು ಮತ್ತು ಇದರಿಂದ ಕ್ಷಾತ್ರ ಧರ್ಮದ ಸೃಷ್ಟಿಯೂ ಆಯಿತು. ರಾಜ್ಯವನ್ನು ಧರ್ಮದಿಂದ ಪಾಲಿಸಿ ಸುಭಿಕ್ಷ ಪರಿಸ್ಥಿತಿಯಲ್ಲಿರಿಸಲು ರಾಜನು ತನ್ನಲ್ಲಿರುವ ವೀರ್ಯ, ಶಕ್ತಿ, ತೇಜಸ್ಸುಗಳನ್ನು ಸದುಪಯೋಗಪಡಿಸಿಕೊಳ್ಳುವನು. ಅನರ್ಹನೂ, ಹೇಡಿಯೂ, ದುಷ್ಟನೂ ಆದವನನ್ನು ಕ್ಷತ್ರಬಂಧು ಎಂದು ಕರೆಯುವರು. ರಾಜರ ವಂಶಗಳಿಗೆ ಮೂಲವಾಗಿ ಸ್ವಯಂಭೂ ಬ್ರಹ್ಮನೇ ಆದಿ. ಸಪ್ತದ್ವೀಪಾತ್ಮಕವಾದ ಈ ಭೂಮಿಯು ವೈವಸ್ವತಮನು ಪ್ರಜಾಪತಿಯಿಂದ ಆರಂಭಗೊಂಡ ವಂಶದಲ್ಲಿ ಜನಿಸಿದ ಜಯಶಾಲಿಗಳಾದ ರಾಜರ ಆಳ್ವಿಕೆಗೆ ಒಳಪಟ್ಟಿತ್ತು.

ಚಾರಿತ್ರಿಕ ದೃಷ್ಟಿಯಿಂದ ಸೂರ್ಯ ಮತ್ತು ಚಂದ್ರ ವಂಶಗಳೇ ಮಹಾವಂಶಗಳಾಗಿ ಇಡೀ ಭರತ ಖಂಡವನ್ನೇ ವ್ಯಾಪಿಸಿತ್ತು. ಕ್ಷತ್ರಿಯ ಪರಂಪರೆಯು ವೈವಸ್ವತ ಮನುವಿನಿಂದ ಇಕ್ಷ್ವಾಕುವಿನ ಜನನದೊಂದಿಗೆ ಆರಂಭವಾಗುವುದು. ಇವನ ಹತ್ತು ಮಕ್ಕಳು ಭೂಮಂಡಲವನ್ನು ಹತ್ತು ಭಾಗಗಳನ್ನಾಗಿ ವಿಂಗಡಿಸಿಕೊಂಡು ಆಳತೊಡಗಿದರು. ಇವನ ಪಟ್ಟಾಭಿಶೇಕ ಸಂದರ್ಭದಲ್ಲಿ "ಪೃಥಿವಿಯಲ್ಲಿ ರಾಜವಂಶಗಳನ್ನು ಸ್ಥಾಪಿಸು" ಎಂದು ಸಲಹೆ ಕೊಡುವನು – "ಪೃಥಿವ್ಯಾಂ ರಾಜವಂಶಾನಾಂ ಕರ್ತಾಭವ" (ವಾಲ್ಮೀಕಿ ರಾಮಾಯಣ ಉತ್ತರ ಕಾಂಡ ೭೯–೭). ಇಕ್ಷ್ವಾಕುವಿನ ನೂರು ಪುತ್ರರಲ್ಲಿ ಚಿರಪರಿಚಿತ ಹಾಗು ತುಂಬಾ ಸಂಕ್ಷಿಪ್ತವಾದ ವಂಶಾವಳಿ ಇಂತಿದೆ – ಸತ್ಯವ್ರತ – ಸಗರ – ಭಗೀರಥ – ನಾಭಾಗ – ಅಂಬರೀಷ – ಋತುಪರ್ಣ – ಸೌದಾಸ – ದಿಲೀಪ – ಕಾಕುತ್ಸ್ಥ (ಹೋರಿಗಳ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದ ವೀರರಾದ್ದರಿಂದ ಈ ಹೆಸರು) – ರಘು – ಅಜ – ದಶರಥ – ಶ್ರೀರಾಮ. ಸಂತಾನ ರಹಿತ ವಂಶದಲ್ಲಿ ಬೇರೊಂದು ರಾಜವಂಶ ಸೇರಿದೆ ಎಂದು ತಿಳಿಯಬೇಕು. ಇವರೆಲ್ಲರೂ ಮಹಾ ತೇಜಸ್ವಿಗಳಾಗಿದ್ದರಿಂದ, ಸೂರ್ಯ ವಂಶೀಯರೆಂದೂ, ಶ್ರೀರಾಮನೂ ಸೇರಿ ರಘುವಂಶದ ರಾಜರೆಲ್ಲರೂ ರಾಘವರೆಂದೇ ಪ್ರಸಿದ್ಧಿ. ಇವೆಲ್ಲಾ ಏಕೆ ಮತ್ತು ಹೇಗೆ ಮಹಾವಂಶಗಳಾದವು ಎಂದರೆ – 'ರಘುವಂಶಸುಧಾಂಬುಧಿಚಂದ್ರ ರಾಮರಾಜರಾಜೇಶ್ವರ' – ಇಡೀ ವಂಶಾವಳಿಗೇ ಅನುರೂಪವಾದ ಆಚಾರ ವ್ಯವಹಾರಗಳಲ್ಲಿ ಅಂದರೆ ದಯೆ, ದಾಕ್ಷಿಣ್ಯ, ಶರಣಾಗತ ರಕ್ಷಣೆ, ಶಿಷ್ಟಾಚಾರ ಪರಿಪಾಲನೆ, ಆದರ್ಶ ಮುಂತಾದ ಧರ್ಮಗಳಲ್ಲಿ ಶ್ರೀರಾಮನು ವಿಶೇಷ ಆಸಕ್ತಿಯುಳ್ಳವನಾಗಿದ್ದರಿಂದಲೇ ಮಹಾವಂಶವಾಯಿತು – "ಇಕ್ಷ್ವಾಕೂನಾಂ ಕುಲೇ ಜಾತಃ" (ಬಾಲ ಕಾಂಡ ೨೧–೬). ಶ್ರೀರಾಮನ ನಂತರ ಕುಶನ ಸಂತಾನ ಬೆಳೆಯಿತು. ಸೂರ್ಯ ವಂಶದ ಕೊನೆಯ ರಾಜನೇ ಬೃಹದ್ಬಲ ಸುಮಿತ್ರ.

<u>ಮಹಾ ಬ್ರಾಹ್ಮಣ</u> – ವಸಿಷ್ಠ – ವಿಶ್ವಾಮಿತ್ರರ ಮಿಲನವೆಂದರೆ ಬ್ರಾಹ್ಮ – ಕ್ಷಾತ್ರ ತೇಜಸ್ಸುಗಳ ಮಿಲನವೆಂದರ್ಥ. ವಂಶವೃದ್ಧಿಯ ದೃಷ್ಟಿಯಿಂದ ಇದು ಮುಖ್ಯವಾದ ಘಟನೆ. ರಾಜನ ಹೆಸರೇ ವಂಶದ ಹೆಸರಾಗಿರುವ ನಿದರ್ಶನದಲ್ಲಿ ಕುಶಿಕ ವಂಶದ ಕೌಶಿಕನೂ ಒಬ್ಬ. ಇವನ ಮೊಮ್ಮಗ ಗಾದಿಯ ಪುತ್ರನೇ ವಿಶ್ವಾಮಿತ್ರ, ಹಠವಾದಿ ಕ್ಷತ್ರಿಯ ರಾಜ. ಕಾಮಧೇನು, ಶಬಲೆಯ ವಿಚಾರದಲ್ಲಿ ಸಂಪೂರ್ಣವಾಗಿ ಸೋತನು. ವಸಿಷ್ಠರಂತೆಯೇ ತಾನೂ ಬ್ರಹ್ಮರ್ಷಿಯಾಗಿ ಆವರಿಂದಲೇ ಬ್ರಹ್ಮರ್ಷಿಯೆಂದೆನಿಸಿಕೊಳ್ಳುವ ಉತ್ಕಟೇಚ್ಛೆ ಮನಸ್ಸಿನಲ್ಲಿ ತಳವೂರಿತು. ಸಾರ್ವಜನಿಕ ಮಹಾಯಜ್ಞವೊಂದರಲ್ಲಿ ವಸಿಷ್ಠರಲ್ಲಿದ್ದ ಬ್ರಹ್ಮತೇಜಸ್ಸಿಗೂ, ತಾಳ್ಮೆಗೂ ಮಾರುಹೋದ ವಿಶ್ವಾಮಿತ್ರನು ಹಠ, ಛಲ, ಕ್ರೋಧವನ್ನು ತ್ಯಜಿಸಿ ಸೌಮ್ಯನಾಗಿ ವಸಿಷ್ಠರಿಗೆ ದೀರ್ಘದಂಡ ಪ್ರಣಾಮಗಳನ್ನು ಸಲ್ಲಿಸುತ್ತಿರುವಾಗಲೇ 'ಏಳು ಬ್ರಹ್ಮರ್ಷಿ' ಎಂದು ವಸಿಷ್ಠರು ಘೋಷಿಸಿದಾಗ, ವಿಶ್ವಾಮಿತ್ರರ ಆನಂದಕ್ಕೆ ಪಾರವೇ ಇಲ್ಲ. ತನ್ನಲ್ಲಿದ್ದ ಕ್ಷಾತ್ರ ವಿದ್ಯೆಯನ್ನು ಶ್ರೀರಾಮನಿಗೆ ಧಾರೆಯೆರೆದು ನಿರಂತರ ಗಾಯತ್ರೀ ಮಂತ್ರೋಪಾಸಕರಾಗಿ 'ಮುಟ್ಟಿದ್ದೆಲ್ಲಾ ಚಿನ್ನ' ಎಂಬಂತೆ ಯಶಸ್ವಿಯಾದರು. ಇದರಿಂದಾಗಿ ಕ್ಷತ್ರಿಯ ರಾಜವಂಶೀಯರೆಲ್ಲರೂ ಪರಮಗತಿಯಾದ ಗಾಯತ್ರೀಮಂತ್ರವನ್ನು ಚೆನ್ನಾಗಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅನುಷ್ಠಾನವನ್ನು ಮಾಡಲಾರಂಭಿಸಿದರು (ಮ.ಭಾ. ಅನು.ಪರ್ವ ೧೫೦–೭೬). ಈ ಇಬ್ಬರ ಮಹರ್ಷಿಗಳ ಸಂಗಮ ವೈಶಿಷ್ಟ್ಯಪೂರ್ಣವಾಗಿದೆ –

೧. 'ತಪೋ ಬಲದ ಮುಂದೆ ಕ್ಷಾತ್ರಬಲವು ಕೆಳಮಟ್ಟದ್ದು'. ವಿಶ್ವಾಮಿತ್ರನೇ ಈ ರಹಸ್ಯವನ್ನು 'ದಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಂ' ಎಂದು ಬಹಿರಂಗವಾಗಿ ಘೋಷಿಸಿ ಸಾರ್ವತ್ರಿಕವಾಗಿ ಬ್ರಾಹ್ಮಣ್ಯವನ್ನು ಪಡೆದು ಮಹಾಬ್ರಾಹ್ಮಣನಾದ.

೨. ರಾಜರ್ಷಿಸ್ಥಾನದಿಂದ ಬ್ರಹ್ಮರ್ಷಿಸ್ಥಾನವನ್ನು ಪಡೆದ.

೩. ನಾಶಭಾವ ಬ್ರಾಹ್ಮಣನಲ್ಲಿರದು. ಕ್ಷಾತ್ರಬಲವು ಮಿತಿಮೀರಿ ಹಿಂಸಾಚಾರವಾಗುವುದನ್ನು ತಡೆಗಟ್ಟುವುದು ಬ್ರಾಹ್ಮತೇಜಸ್ಸಿನ ಕ್ರಿಯೆಯಾಗಿದೆ.

ಕಾಲಾನುಕಾಲಕ್ಕೆ ಬ್ರಾಹ್ಮಣ ಕ್ಷತ್ರಿಯರ ನಿಕಟ ಸಂಬಂಧವುಂಟಾಗಿ ವಿಶ್ವಾಮಿತ್ರನು ಬೇರೆ ಬೇರೆ ಗೋತ್ರದವರನ್ನು ತನ್ನ ಗೋತ್ರಕ್ಕೆ ಸೇರಿಸಿಕೊಂಡನು. ಇದರಿಂದ ಕೌಶಿಕ ವಿಶ್ವಾಮಿತ್ರ ಗೋತ್ರಜರ ಸಂಖ್ಯೆ ಅಪಾರವಾಯಿತು. ಈ ಸಂದರ್ಭದಲ್ಲೇ ವಿಶ್ವಾಮಿತ್ರನು ಘೋಷಿಸುವನು "ಕುಶಿಕ ವಂಶವು ಯಾವಾಗಲೂ ಧರ್ಮದ ಉತ್ಥಾನಕ್ಕಾಗಿಯೇ ಶ್ರಮಿಸಿರುವ ರಾಜರುಗಳಿಂದ ಕೂಡಿರುವ ಮಹಾವಂಶವಾಗಿದೆ. ಈ ವಂಶದ ರಾಜರು ಬ್ರಹ್ಮನಿಗೆ ಸಮಾನರಾಗಿರುತ್ತಾರೆ" – "ಕುಶಿಕಾನಾಮಯ ವಂಶೋ ಮಹಾನ್ ಶರ್ಮಪರಃ" (ಬಾಲ ಕಾಂಡ ೩೪–೨೦).

ದುಷ್ಟ ಕ್ಷತ್ರಿಯರ ನಾಶಕ್ಕಾಗಿ ಜಮದಗ್ನಿಯ ಸುಪುತ್ರನಾಗಿ ಅವತರಿಸಿದ ಪರುಶುರಾಮನು ಜನ್ಮತಃ ಬ್ರಾಹ್ಮಣ, ಆದರೆ ಕೊಡಲಿ ಹಿಡಿದು ಕ್ಷಾತ್ರ ಕ್ರಿಯೆಯಲ್ಲಿ ತೊಡಗಿದ. ಅಂದರೆ ದೈಹಿಕವಾಗಿ ಬ್ರಾಹ್ಮಣ, ವೃತ್ತಿಯಲ್ಲಿ ಕ್ಷತ್ರಿಯ. ಈ ಮಹಾವಂಶವನ್ನು ಭಾರ್ಗವ, ಹೈಹಯ ವಂಶಗಳೆಂದು ಹೇಳುವರು. ಗುರಿ ತಲುಪಿದ ಪರಶುರಾಮನು ತನ್ನಲ್ಲಿದ್ದ ಕ್ರೋಧವನ್ನೂ, ಕ್ಷಾತ್ರಬಲವನ್ನೂ ಶ್ರೀರಾಮನಲ್ಲಿ ತ್ಯಜಿಸಿ, ಸಹ್ಯಾದ್ರಿಯ ಮಹೇಂದ್ರಪರ್ವತಕ್ಕೆ ನಿರ್ಗಮಿಸಿದ. ಅಲ್ಲಲ್ಲಿ ಬದುಕುಳಿದ ಸ್ತ್ರೀಯರಿಂದ ಕ್ಷತ್ರಿಯ ವಂಶ ಮುಂದುವರೆಯಿತು. ವೇದರಾಶಿಯನ್ನೇ ಸಂಪೂರ್ಣವಾಗಿ ತಿಳಿದಿರುವ ಏಕೈಕ ಜ್ಞಾನಿ ಚಿರಂಜೀವಿ ಪರಶುರಾಮನೇ.

ಚಂದ್ರವಂಶ – ಈ ಪೀಳಿಗೆಯಲ್ಲಿ ಶ್ರೀಕೃಷ್ಣನೇ ಕೇಂದ್ರಬಿಂದು. ಅವತಾರದ ಹಿನ್ನೆಲೆಯಲ್ಲಿ ಅನೇಕ ರಾಜವಂಶಗಳಿವೆ. ಕುರುವಂಶದ ಪಾಂಡವ–ಕೌರವರ ಮಧ್ಯೇ ಧರ್ಮಾಧರ್ಮ ಜಂಜಾಟದಲ್ಲಿ ಲೀಲಾವಿಹಾರಿಯಾಗಿ ಸಂಭವಿಸುವನು. ಶ್ರೀಕೃಷ್ಣನು ನಾಯಕಮಣಿಯಂತೆ ಈ ವಂಶಗಳ ಹೆಸರುಗಳಲ್ಲಿರುತ್ತಾನೆ. ಯಯಾತಿಯ ಮಗ ಯದು, ಆದ್ದರಿಂದ ಯದುವಂಶ. ಕಾರ್ತವೀರ್ಯಾರ್ಜುನನ ಸಾವಿರ ಪುತ್ರರಲ್ಲಿ ಮಧುವೂ ಒಬ್ಬ. ಮುಂದೆ ಈ ಮಧು ವಂಶದಲ್ಲಿ ವೃಷ್ಣಿರಾಜ ಹುಟ್ಟುವನು. ಆದ್ದರಿಂದ ಕೃಷ್ಣನು ಮಾಧವ ಮತ್ತು ವೃಷ್ಣಿವೀರ. ವೃಷ್ಣಿಯ ಮಗ ಆಹುಕ. ಇವನ ಪುತ್ರ ವಸುದೇವ. ವಸುದೇವ–ದೇವಕಿಯರಲ್ಲಿ ಶ್ರೀಕೃಷ್ಣನೂ, ಇನ್ನೊಬ್ಬ ಪುತ್ರ ಉಗ್ರಸೇನನಿಗೆ ಕಂಸಾದಿ ಒಂಭತ್ತು ಮಕ್ಕಳು ಹುಟ್ಟಿದರು. ಭಾಗವತ ಪುರಾಣದ ದಶಮ ಸ್ಕಂಧದ ಅರವತ್ತನೆಯ ಅಧ್ಯಾಯದಲ್ಲಿರುವ ವಿವರಣೆಯ ಪ್ರಕಾರ ಉಗ್ರಸೇನನ ಕಾಲದಲ್ಲಿ ಗೋಕುಲದಲ್ಲಿ ನೂರೊಂದು ವಂಶಗಳೂ, ನಾಲ್ಕು ಕೋಟಿ ಕಾಲಕ್ಷೇಪ ಗುರುಗಳೂ, ಐದು ಲಕ್ಷ ಕುಟುಂಬಗಳೂ, ನೂರಹತ್ತು ಕೋಟಿ ಗೋಪಿಯರೂ ಮತ್ತು ಹತ್ತು ಸಾವಿರ ಕೋಟಿ ಯಾದವರಿದ್ದರು ! ಐಕಾಂತಿಕ ಧರ್ಮವೆಂದೇ ಪ್ರಸಿದ್ಧವಾದ ಭಾಗವತಧರ್ಮ ಅಥವಾ ಸಾತ್ವತ ಧರ್ಮದಲ್ಲಿ ಶ್ರೀಕೃಷ್ಣವಾಸುದೇವನೇ ಭಕ್ತಿಯ ವಸ್ತು. ಇದನ್ನು ಶ್ರೀಕೃಷ್ಣನೇ ಪ್ರಕಾಶಪಡಿಸಿದ್ದರಿಂದ ಭಾಗವತ ಧರ್ಮ ಪ್ರವರ್ತಕ, ಸಾಸ್ವತರ್ಷಭ ಎಂದು ಕರೆಯಲ್ಪಟ್ಟಿದ್ದಾನೆ. ಯಾದವ ವೃಷ್ಣಿ ವಂಶಗಳ ಉಲ್ಲೇಖ ತೈತ್ತಿರೀಯ ಸಂಹಿತೆ ಹಾಗು ಬ್ರಾಹ್ಮಣಗಳಲ್ಲಿದೆ. ಈ ಪೀಳಿಗೆಯ ಭಕ್ತ–ಭಾಗವತರನ್ನು ಸಾಸ್ವತ ಯೋಗಾಚಾರ್ಯರೆಂದು ಹೇಳಿದೆ. ಈ ರಾಜವಂಶಾವಳಿಯು ಮಹಾಭಾರತದ ಪಾತ್ರಗಳಿಗೂ ಹಾಗು ಘಟನಾವಳಿಗೂ ಮುಖ್ಯಕಾರಣವಾಗಿದೆ. ಶ್ರೀಕೃಷ್ಣನಿಗೆ ಒಟ್ಟು ಒಂದು ಲಕ್ಷದ ಎಂಭತ್ತು ಸಾವಿರ ಮಕ್ಕಳಿದ್ದರೆಂದು ಹರಿವಂಶ ವಿಷ್ಣುಪರ್ವದ ನೂರಮೂರನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಹೇಳಿದೆ ! ವಾಸುದೇವ ಕೃಷ್ಣ, ಇವನ ಮಗ ಪ್ರದ್ಯುಮ್ನ, ಇನ್ನೊಬ್ಬ ಸಾಂಬ, ಮೊಮ್ಮಗ ಅನಿರುದ್ಧ ಹಾಗು ಕೃಷ್ಣನ ಅಣ್ಣ ಬಲರಾಮ – ಇವರು ಪಂಚ ವೀರರು, ಮನುಷ್ಯ ವೀರರು ಮತ್ತು ಮನುಷ್ಯ ದೇವತೆಗಳೆಂದು ವಾಯು ಪುರಾಣದಲ್ಲಿ ಉಲ್ಲೇಖವಿದೆ. ಕೃಷ್ಣನ ಬಹು ಪತ್ನಿಯರು ಹಾಗು ಮಕ್ಕಳು ದರೋಡೇಕೋರರ ವಶವಾಗಿ ಜನ್ಮ ಮುಕ್ತಾಯವಾಯಿತೆಂದು ಭಾಗವತದ ಪುರಾಣದಲ್ಲಿ ಹೇಳಿದೆ. ಶ್ರೀಕೃಷ್ಣನ ನಂತರ, ವ್ರಜ ದೇಶವನ್ನು ಕಣ್ವಾ ಎಂಬ ಬ್ರಾಹ್ಮಣ ರಾಜವಂಶಜರೂ, ನಂತರ ನಂದ, ಗುಪ್ತ, ಮೌರ್ಯ ಮುಂತಾದ ಚಂದ್ರ ವಂಶಜರು ವಿವಿಧ ಭಾಗಗಳಲ್ಲಿ ಆಳಿದರು. ಬಾಹ್ಲಿಕ ವಂಶದವರೇ ಕೊನೆಯ ರಾಜರು. ಈ ಯುಗದಲ್ಲಿ ಮೈಸೂರು ಒಡೆಯರ ವಂಶವೇ ಚಂದ್ರ ವಂಶದ ಕೊನೆಯ ಘಟ್ಟ.

ಶ್ರೀಕೃಷ್ಣನ ಆದೇಶದಂತೆ ದ್ವಾರಕೆಯಿಂದ ವಿಜಯ, ಕೃಷ್ಣ, ಇನ್ನೂ ಮುಂತಾದ ಯಾದವ ರಾಜಕುಮಾರರ ದೊಡ್ಡ ತಂಡವೊಂದು ದಕ್ಷಿಣದಲ್ಲಿ ನೆಲೆಸಿತು. ಶ್ರೀರಂಗಪಟ್ಟಣದ ಶಾಸನವೊಂದರ ಪ್ರಕಾರ ವಿಜಯನೇ ಯದುರಾಯ, ಇವನೊಂದಿಗಿದ್ದ ಇತರ ಪರಾಕ್ರಮಿ ನಾಯಕರು 'ಒಡೆಯರು' ಎಂದು ಕರೆಯಲ್ಪಟ್ಟರು. ಈ ವಂಶದಲ್ಲಿ ಬರುವ ಚಾಮರಾಜ, ದೇವರಾಜ, ಕೃಷ್ಣರಾಜ ಎಂಬ ಹೆಸರುಗಳು ಅನೇಕ ಬಾರಿ ಆವರ್ತನಗೊಂಡಿರುವುದರಿಂದ ವಂಶಪರಂಪರೆ ಹಾಗು ಕಾಲನಿರ್ಣಯ ಕಷ್ಟಕರವಾದುದು. ರಾಜಕಾರ್ಯದ ಸಲುವಾಗಿ ಯದುರಾಯನು ಉತ್ತರ ಪ್ರಾಂತ್ಯಕ್ಕೆ ಹೋಗುವಾಗ ಮಾರ್ಗದಲ್ಲಿ ತಿರುಪತಿಯಲ್ಲಿ ಶ್ರೀ ಬ್ರಹ್ಮತಂತ್ರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸ್ವತಂತ್ರ ಪರಕಾಲ ಸ್ವಾಮಿಗಳು ಇದ್ದಾರೆಂದು ತಿಳಿದು, ಅವರ ಅನುಗ್ರಹವನ್ನು ಪಡೆದು, ಶ್ರೀಮಠವು ಗುರುಮನೆಯಾಗಬೇಕೆಂದು ಪ್ರಾರ್ಥಿಸಿದ. ಸ್ವಾಮಿಯ ಅನುಗ್ರಹದಿಂದ ಅರಮನೆಯ-ಗುರುಮನೆಯ ನಿಕಟ ಸಂಪರ್ಕ ಆರಂಭವಾಯಿತು. ಮುಂದಿನ ಒಡೆಯರುಗಳು ಶ್ರೀವೈಷ್ಣವ ಮತಧರ್ಮದ ರೀತಿ-ನೀತಿ ಸಿದ್ಧಾಂತಗಳನ್ನು ಪಾಲಿಸಿದರು. ಇವರ ಪೈಕಿ ಒಂಭತ್ತು ಮಹಾರಾಣಿಯರಿಗೆ ಪ್ರಪತ್ತಿಯೋಗ ಉಂಟಾಯಿತು. ಯದುಗಿರಿಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಅವಕಾಶವಾಯಿತು. ರಾಮಾನುಜ ಸಂಪ್ರದಾಯವನ್ನು ಪ್ರವರ್ತಿಸುವ ಸಲುವಾಗಿ ಸೂಕ್ತ ಪ್ರವರ್ತನಾಕಾರ್ಯಗಳನ್ನು ಹಮ್ಮಿಕೊಳ್ಳಲಾಯಿತು. ಟಿಪ್ಪು ಸುಲ್ತಾನನ ನಿಧನದಿಂದ ಅರಸರ ಆಳ್ವಿಕೆಯಲ್ಲಿ ಚಾರಿತ್ರಿಕ ಬದಲಾವಣೆಗಳು ಮೂಡಿ ಬಂದವು –

೧. ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾಯಿಸಲಾಯಿತು.

೨. ದಸರಾ ಮಹೋತ್ಸವದ ಪುನರಾರಂಭ.

೩ ಈ ವಂಶದಲ್ಲಿ ಬರುವ ಚಿಕ್ಕದೇವರಾಜ ಒಡೆಯರೂ, ಮುಮ್ಮಡಿ ಹಾಗು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಅನುಪಮ ಭಕ್ತಿ, ಆಸ್ತಿಕ್ಯ, ಕೈಗಾರಿಕೆ ಹಾಗು ಸಾಮಾಜಿಕ ರಂಗಗಳಲ್ಲಿ ಅಭಿವೃದ್ಧಿ ಕಾರ್ಯಗಳು ಇನ್ನೂ ಇತರ ಅದ್ಭುತ ಕೊಡುಗೆಗಳು ಉಲ್ಲೇಖಾರ್ಹ.

೪. ಮೈಸೂರು ಅರಸರಿಗೆ ಮಕ್ಕಳಾಗದಿರಲಿ ಎಂಬ ಆಲಮೇಲು ಪತಿವ್ರತೆಯ ಶಾಪವನ್ನು ಒಡೆಯರು ತಮ್ಮಲ್ಲಿದ್ದ ಅನುಪಮ ದೈವ ಭಕ್ತಿ ಹಾಗು ಆಚಾರ್ಯ ನಿಷ್ಠೆಯಿಂದ ಹೋಗಲಾಡಿಸಿಕೊಂಡಿರುತ್ತಾರೆ.

ಈ ಕಲಿಯುಗದಲ್ಲಿ ಮಹಾ ವಂಶಗಳ ಉದಯ ಹಾಗು ಉದ್ಧಾರಕ್ಕೆ ಭಗವಂತನ ಕಾರುಣ್ಯ ಪ್ರವಾಹವೇ ಕಾರಣ. ಇದಕ್ಕಾಗಿ ಭಗವಂತನ ಮಹಾ ಸಂಕಲ್ಪದ ನಿದರ್ಶನಗಳನ್ನು ನೋಡೋಣ.

೧. ಶ್ರೀಕೃಷ್ಣನ ಪುತ್ರಿಯರಲ್ಲಿ ಒಬ್ಬಳಾದ ಪಾಂಡೇಯಳು, ದಕ್ಷಿಣ ಭಾರತದ ಇಂದಿನ ಮಧುರೈಯಲ್ಲಿ ನೆಲೆಸಿ ರಾಜ್ಯಭಾರ ಮಾಡಿದಳು. ಈ ವಿಷಯವನ್ನು ತಿಳಿದ ಅಗಸ್ತ್ಯ ಋಷಿಯು ಹಿಂಬಾಲಿಸಿದ, ದ್ರಾವಿಡಭಾಷಾ ಪ್ರವರ್ತಕನಾದ. ಕೃಷ್ಣಾವತಾರ ಮುಗಿದು, ವಲ್ಲಭಿ, ವರ್ಮ ವಂಶಜರಾದ ಮಲೆಯಧ್ವಜ, ವೃಷ್ಣಿವೀರ, ಇಂದ್ರದ್ಯುಮ್ನ, ಪ್ರವೀರರಾಜ, ಅಸಂಖ್ಯಾತ ಸಂಗೀತ ಕಲೆಗಾರರೂ, ಬ್ರಾಹ್ಮಣ ಕುಟುಂಬಗಳೂ ಹಿಂಬಾಲಿಸಿದುವು. ಪಾಂಡೇಯಳಿಂದ ಪಾಂಡ್ಯ ರಾಜ್ಯವೂ, ವಂಶವೂ ಉದಯಿಸಿತು. ಹಲವಾರು ದಶಕಗಳ ನಂತರ ವೇಣುಧಾರಿ ವಂಶಜರಾದ (ವೇಯರ್ ಕುಲಂ) ಮುಕುಂದಾಚಾರ್ಯರ ಪುತ್ರ. ವಿಷ್ಣುಚಿತ್ತರು (ಭಟ್ಟರ್), ಶ್ರೀಮಾರವಲ್ಲಭನ ಆಸ್ಥಾನದಲ್ಲಿ ವಂದಿಮಾಗಧರ ವೃತ್ತಿಯಲ್ಲಿ ತೊಡಗಿದ್ದರು. "ಈ ವಂಶಜರಾದ ಭಟ್ಟರ ಪುತ್ರೀ ಗೋದೆಯಾದ ನಾನು ಘೋಷಿಸುತ್ತಿದ್ದೇನೇ, ಬಿಡದೆ ತಿರುಪ್ಪಾವೈ ಪಾಶುರಗಳನ್ನು ಪಠಿಸಿ, ಫಲಾನುಭವವನ್ನು ಸವಿಯಿರಿ" ಎಂದು ಆಂಡಾಳ್ ಮಾತೆ ಸದ್ವಂಶವನ್ನು ಉಲ್ಲೇಖಿಸಿದ್ದಾಳೆ. ವಿಲ್ಲಿಸ್ವಾಮಿ ಎಂಬ ಇದೇ ವಂಶಜರೊಬ್ಬರು ಶ್ರೀವಿಲ್ಲಿಪುತ್ತೂರು ಕ್ಷೇತ್ರದಲ್ಲಿ ಮಡೈಪ್ಪಳ್ಳಿ (ಪಾಕಶಾಲೆ) ಕೈಂಕರ್ಯ ಮಾಡುತ್ತಿದ್ದರು. ಆಂದು ಆಳುತ್ತಿದ್ದ ರಾಣಿ ಮಲ್ಲಿಯು, ಪ್ರತಿದಿನವೂ ದೇವರ ಸೇವೆಗಾಗಿ ಬರುತ್ತಿದ್ದುದ್ದನ್ನು ಕಂಡು, ಇವರು ರಚಿಸಿದ ಕಾವ್ಯ ಒಂದರಲ್ಲಿ 'ಮಲ್ಲಿವಳನಾಡು' ಎಂದು ಉಲ್ಲೇಖಿಸಿದ್ದಾರೆ.

೨. ತಾನು ಮಾಡಿದ ಕೃತ್ಯಕ್ಕೆ ತುಂಬಾ ಗೋಳಾಡಿದ ಜರಾ ಬೇಡನನ್ನು ಕಂಡ ಕೃಷ್ಣನು ಅವನನ್ನು ಸಂತೈಸುವನು – "ದುಃಖಿಸಬೇಡ ಇದೆಲ್ಲ ವಿಧಿ ನಿಯಮ. ನಿನ್ನ ಮುಂದಿನ ಪೀಳಿಗೆಯವರ ಬಳಿ ನಾನು ಸಖಿನಾಗಿಯೂ ಸಂಬಂಧಿಯಾಗಿಯೂ ಇರುವೆನು. ನನ್ನ ಕಿರೀಟದ ನೀಲ ಮಣಿಯೊಂದನ್ನು ನಿನಗೆ ಬಹುಕರಿಸುತ್ತಿದ್ದೇನೆ". ಕಾಲಾನುಕಾಲಕ್ಕೆ (ಹನ್ನೆರಡನೆಯ ಶತಮಾನದ ಸುಮಾರಿಗೆ) ಪುರುಷೋತ್ತಮ ಪುರೀಯ ಕ್ಷೇತ್ರ ಆಸ್ತಿತ್ವಕ್ಕೆ ಬರುವುದು. ಶ್ರೀಕೃಷ್ಣನು ಜಗನ್ನಾಥನಾಗಿ ಶಬರರೆಂಬ ಆದಿವಾಸಿಗಳ (ಜರಾ ಬೇಡನ ಮುಂದಿನ ವಂಶದವರು) ಹಾಗು ಗಜಪತಿರಾಜವಂಶಜರಿಗೆ ಕುಲದೈವವಾಗುವನು. ಈ ಶಬರ ವಂಶಜರೇ ಇಂದಿಗೂ ಆಲಯ ನಿರ್ವಹಣೆ, ದಾರು ಮೂರ್ತಿಗಳನ್ನು ಸಿದ್ಧಪಡಿಸುವುದು, ದೈನಂದಿನ ಪೂಜಾ ಸಾಮಗ್ರಿಗಳ ಪೂರೈಕೆ ಇನ್ನೂ ತತ್ಸಂಬಂಧಿತ ವಿಚಾರದಲ್ಲಿ ಹಕ್ಕುದಾರರಾಗಿರುತ್ತಾರೆ. ಗುಡಿಯ ನಿತ್ಯ ಕೈಂಕರ್ಯಪರರನ್ನು ದಯಿತರೆಂದು ಕರೆಯುವರು. ವರ್ಷದಲ್ಲಿ ಹದಿನೈದು ದಿನಗಳವರೆಗೆ ಜಗನ್ನಾಥನು ಶಬರ-ದಯಿತರ ವಶದಲ್ಲಿರುವನು. ಪರಂಪರೆಯಾಗಿ ಬಂದ ರೀತಿಯಲ್ಲಿ ಆರಾಧಿಸುವರು. ಇವರಿಗೆ ನಿವೇದನೆಯಾದ ನಂತರವೇ ಜಗನ್ನಾಥನಿಗೆ 'ತಳಿಗೈ' ನಿವೇದನ ಆಗುವುದು. ಹನ್ನೆರಡು ವರ್ಷಗಳಿಗೊಮ್ಮೆ ಈ ದಾರು ಮೂರ್ತಿಯನ್ನು ವಿಸರ್ಜಿಸಿ ಜಗನ್ನಾಥನ ಜ್ಞಾತಿಗಳೆಂದೆನಿಸಿಕೊಂಡ ಶಬರರು, ಜಗನ್ನಾಥನಿಗೆ ಶ್ರಾದ್ಧವಿಧಿಯನ್ನು ಆಚರಿಸುವರು. 'ನವ ಕಳೇವರ' ಎಂಬ ಹೊಸ ಮೂರ್ತಿಯನ್ನು 'ಪರಿವರ್ತನ' ಸಮಾರಂಭದಲ್ಲಿ ಸ್ಥಾಪಿಸುವರು. ಕಳಿಂಗ, ಕರ್ನಾಟಕದ ಗಂಗರಸರು ಹಾಗೂ ಗಜಪತಿ ವಂಶಜರೊಂದಿಗೆ ರಕ್ತಸಂಬಂಧ ಬೆಳೆಸಿದ ನೇಪಾಲದ ರಾಣಾ ಹಾಗು ಠಾಕೂರ್ ವಂಶಜರು, ಪುರೀ ಕ್ಷೇತ್ರಕ್ಕೆ ಬಂದರೆ ಅವರಿಗೂ ಆರಾಧನೆ ಮಾಡುವ ಹಕ್ಕಿದೆ.

೩. ಭಗವಾನ್ ಪರಶುರಾಮ – ದುಷ್ಟ ಕ್ಷತ್ರಿಯ ಕುಲವನ್ನೇ ಧ್ವಂಸ ಮಾಡಿ, ಇದರ ಪಾಪ ಪರಿಹಾರಕ್ಕಾಗಿ ಪರಶುರಾಮನು ಮಹಾ ಯಾಗವೊಂದನ್ನು ಮಾಡಿ ಭೂಮಂಡಲವನ್ನೇ ದಾನ ಮಾಡಿದ. ದಾನ ಕೊಟ್ಟ ಭೂಮಿಯಲ್ಲಿ ನೆಲೆಸುವುದು ಸರಿಯಲ್ಲವೆಂದು ತಿಳಿದು ಈ ಕೆಳ ಕಂಡ ಯೋಜನೆಗಳನ್ನು ಹಮ್ಮಿಕೊಂಡ.

೧. ತಪಶ್ಚರ್ಯೆಯಿಂದ ನಿರ್ಗಮಿಸಿ ಉತ್ತಮ ಕ್ಷತ್ರಿಯ ಹಾಗು ಬ್ರಾಹ್ಮಣ ವಂಶಗಳನ್ನು ಉದ್ಧಾರ ಮಾಡಲು ಸಂಕಲ್ಪಿಸಿದ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

೨. ತನ್ನ ತಪಶ್ಶಕ್ತಿಯಿಂದ ಕೊಡಲಿಯನ್ನು ಸಮುದ್ರಕ್ಕೆಸೆದು ಗೀರಿದಾಗ ಹೊಸ ಭೂಮಿ ಸೃಷ್ಟಿಯಾಯಿತು. ಇಂದಿನ ಭೌಗೋಳಿಕ ಲಕ್ಷಣಗಳ ಪ್ರಕಾರ, ಉತ್ತರದ ರತ್ನಗಿರಿಯಿಂದ ದಕ್ಷಿಣದ ಕೊಂಕಣದವರೆಗೆ, ಇವೆರಡರ ಮಧ್ಯೆ ಇರುವ ಈಗಿನ ಕೇರಳ ರಾಜ್ಯ – ಇಷ್ಟೂ ಸೇರಿ ಪರಶುರಾಮ ಕ್ಷೇತ್ರವಾಯಿತು. ಈ ದಿವ್ಯ ಪ್ರದೇಶ ಎಂದೆಂದಿಗೂ ಕ್ಷಾಮರಹಿತವಾಗಿರಬೇಕೆಂಬುದೇ ಸಂಕಲ್ಪವಾಗಿತ್ತು. ಸಹ್ಯಾದ್ರಿಯ ಹಿರಣ್ಯಕೇಶೀ ಪಂಗಡದ ಹಾಗು ರತ್ನಗಿರಿ ಪ್ರದೇಶದ ಬ್ರಾಹ್ಮಣ ವಂಶದವರನ್ನು ಗುರುತಿಸಿ ಸಂಘಟಿಸಿದ.

೪. 'ಕೇರಳ ಮಹಾತ್ಮೆ' ಎಂಬ ಕೃತಿಯ ಪ್ರಕಾರ ಪರಶುರಾಮನು ಅಹಿಂ ಚಕ್ರಂ ಎಂಬ ಅಗ್ರಹಾರದಿಂದ ೧೫೦೦೦ ಸಾವಿರ ಬ್ರಾಹ್ಮಣರನ್ನು ಕರೆತಂದು, ತಾಳೀಪರಂ ಎಂಬ ಇನ್ನೊಂದು ಅಗ್ರಹಾರದಲ್ಲಿ ನೆಲೆಗೊಳಿಸಿದ. ಇವರುಗಳ ಪೈಕಿ, ನಂಬೂದ್ರಿ ಹಾಗು ಭಟ್ಟಾದ್ರಿಗಳಿದ್ದರು. ಕಾಲಕ್ರಮೇಣ ಈ ನಂಬೂದ್ರಿಗಳೇ ಅನಂತಶಯನ ಕ್ಷೇತ್ರದಲ್ಲಿ ತಂತ್ರಿಗಳಾದರು. ಹೊರ ಪ್ರಾಂತ್ಯದವರು ಅಕ್ಕರದೇಸಿ ತುಳು ಬ್ರಾಹ್ಮಣ ವಂಶಜರೆಂದೂ, ಸ್ಥಳೀಯ ನಂಬೂದ್ರಿ–ಭಟ್ಟಾದ್ರಿಗಳೂ ಇಕ್ಕರದೇಸೀ ಬ್ರಾಹ್ಮಣರೆಂದು ಕರೆಯಲ್ಪಟ್ಟರು. ಪ್ರಧಾನ ಅರ್ಚಕವರ್ಗದವರು ತುಳುದೇಶದ ನಂಬಿಗಳು. ಇವರ ಸಹಾಯಕರಾಗಿ ಇಪ್ಪತ್ತುನಾಲ್ಕು ಶಾಂತಿಗಳೂ, ಇಪ್ಪತ್ತುನಾಲ್ಕು ಪೋಟ್ಟಿಗಳೂ ಇರುವರು. ವೇದಪಾರಾಯಣ, ಪುರಾಣಪ್ರವಚನಕ್ಕಾಗಿ ತೇಜ ಬ್ರಾಹ್ಮಣ ವಂಶಜರೂ, ಸಂಗೀತ, ವಾದ್ಯ ಸಂಗೀತ ಹಾಗು ಹರಿಕಥಾ ಕಾಲಕ್ಷೇಪಕ್ಕಾಗಿ ನಾದಬ್ರಹ್ಮ ಭಾಗವತರೂ ಇರುವರು.

೫. ನಿತ್ಯಾರಾಧನಕ್ಕಾಗಿ 'ಕೈವಟ' ಎಂಬ ಚಿನ್ನದ ಬಟ್ಟಲೊಂದನ್ನು ಕೊಟ್ಟನು, ಆಗಮಕ್ಕಾಗಿ ಅನುಷ್ಠಾನ ಗ್ರಂಥವೊಂದನ್ನು ಸೃಷ್ಟಿಸಿದ. ಇದೇ ಪರಶುರಾಮ ಸಂಪ್ರದಾಯ ಪದ್ಧತಿ.

ಸ್ಥಳ ಪುರಾಣದ ಪ್ರಕಾರ, ತುಳು ನಾಡಿನ ದಿವಾಕರಮುನಿ ಹಾಗು ನಂಬೂದ್ರಿ ವಂಶದ ವಿಲ್ವಮಂಗಳ ಎಂಬ ಭಕ್ತರಿಬ್ಬರಿಗೂ, ಭಗವಂತನೂ ಏಕಕಾಲದಲ್ಲಿ ಅನಂತಪದ್ಮನಾಭನಾಗಿ ಸಂಭವಿಸಿ ಅನುಗ್ರಹಿಸಿದ. ಇಂದು ದಿವಾಕರಮುನಿ ವಂಶಜವರೇ ಅರ್ಚಕವರ್ಗದಲ್ಲಿದ್ದಾರೆ. ವಿಲ್ವಮಂಗಳನ ವಂಶಜರು 'ಪುಷ್ಪಾಂಜಲೀ ಸಾಮಿಯಾರ್' ಎಂದು ಕರೆಯಲ್ಪಟ್ಟು ಮಠಾಧಿಪತಿಗಳಾಗಿಯೂ ಹಾಗು ಆರಾಧನೆಯ ಉಸ್ತುವಾರಿದಾರರಾಗಿಯೂ ಕೈಂಕರ್ಯ ಮಾಡುತ್ತಾರೆ. ಚೇರ ವಂಶಜರಿಗೆ ಚಂದ್ರ ವಂಶದ ಕ್ಷತ್ರಿಯ ರಾಜರೇ ಮೂಲ ಪುರುಷರು. ನರ್ಮದಾ ನದೀ ಪ್ರಾಂತ್ಯದಲ್ಲಿ ಆಳುತ್ತಿದ್ದ ಭಾನು ವಿಕ್ರಮನನ್ನು ತಂದು ರಾಜ್ಯದೀಕ್ಷೆಯನ್ನು ಕೊಟ್ಟವನೇ ಪರಶುರಾಮ. ದ್ವಾರಕೆಯಿಂದ ಯಾದವರ ದೊಡ್ಡ ಪಂಗಡವೊಂದು ಬಂದು ನೆಲೆಸಿತು. ಅನಂತಪದ್ಮನಾಭನನ್ನು 'ಯಾದವೇಂದ್ರಕುಲದೈವ' ಎಂದು ಕರೆಯುವುದುಂಟು. ಒಂದನೆಯ ಚೇರ ವಂಶರಾಜರ ಆಳ್ವಿಕೆ ಕೊನೆಗೊಂಡು, ಎಂಟನೆಯ ಶತಮಾನದ ಸುಮಾರಿಗೆ ಎರಡನೆಯ ಚೇರ ವಂಶವು ತಿರುವಾಂಕೂರು ಕುಲಶೇಖರನ ಮನೆತನವಾಗಿ ಮೂಡಿಬಂತು. ಈ ಕಿರೀಟಪತಿಗಳು ಅನಂತಪದ್ಮನಾಭನ ಪರಮಭಕ್ತರು ತಾವೆಂದೂ, ಇಡೀ ರಾಜ್ಯಾಡಳಿತ ಹಾಗು ರಾಜ್ಯದ ಸರ್ವಸ್ವವೂ ಪದ್ಮನಾಭನೇ ಎಂದೂ ತಾವೆಲ್ಲ ಪದ್ಮನಾಭದಾಸರೆಂದೂ ಪಟ್ಟದ ಕತ್ತಿಯನ್ನು ದೇವರ ಮುಂದಿಟ್ಟು ದೀರ್ಘದಂಡಪ್ರಣಾಮಗಳನ್ನು ಮಾಡಿ ದೇವರೇ ಕತ್ತಿಯನ್ನು ಸಿಂಹಾಸನದ ಅಧಿಕಾರವನ್ನೂ ಕೊಟ್ಟಂತೆ ಘೋಶಿಸುವರು. ಬ್ರಿಟೀಷರು ಈ ಘಟನೆಗಳನ್ನು –

೧. Deity is the constitutional head of the state.
೨. Emotional submission of rulers.
೩. In majestic slavery.

ಎಂದೆಲ್ಲಾ ಘೋಷಿಸಿ, ಆಶ್ಚರ್ಯ ಪಟ್ಟಿದ್ದಾರೆ. ಇವರ ಹೆಸರುಗಳಲ್ಲಿ ವಂಶ, ಮನೆತನದ ಹೆಸರು, ಹುಟ್ಟಿದ ನಕ್ಷತ್ರ ಹಾಗು ಮಾರ್ತಾಂಡ, ಕೇರಳ, ರಾಜ, ರಾಮ ಹಾಗು ರವಿ ಎಂಬ ಐದು ಹೆಸರುಗಳಲ್ಲಿ ಒಂದನ್ನಿಡುವುದು ಪರಂಪರೆಯಾಗಿ ಬಂದಿರುತ್ತದೆ. ಉದಾಹರಣೆ – ಖ್ಯಾತ ಸಂಗೀತ ಕಲಾವಿದ ವಂಚಿಪಾಲ ವಂಚಿಮಂಡಲೇಂದ್ರ ಕಿರೀಟಪತಿ ರಾಜಬಹದ್ದೂರ್ ಪದ್ಮನಾಭದಾಸ ಸ್ವಾತಿ ತಿರುನಾಳ್ ರಾಮವರ್ಮ ಕುಲಶೇಖರ ಮಹಾರಾಜ. ಖ್ಯಾತ ಕುಂಚಕಲೆಗಾರ ರವಿವರ್ಮ, ಹುಟ್ಟಿನಲ್ಲಿ ಬ್ರಾಹ್ಮಣ. ಇವನ ಪಿತು ನೀಲಕಂಠನ್ ಭಟ್ಟಾದ್ರಿಪಾದ, ತಾಯಿ ರಾಜವಂಶದ ಉಮಾಂಬಾ ಬಾಯಿ. ಹನ್ನೆರಡು ಆಳ್ವಾರರುಗಳಲ್ಲಿ ಒಬ್ಬರಾದ ಕುಲಶೇಖರ ಆಳ್ವಾರರು 'ರಾಮರ್ ತಿರುವಡಿಕ್ಕಳ್' ಎಂದೇ ಪ್ರಸಿದ್ಧರಾಗಿದ್ದರು.

೪. ಕಲೌ ವೇಂಕಟನಾಯಕ – ಬೇಟೆಗಾರ, ಆದಿವಾಸಿ, ಕಾಡುಜನರ ವಂಶ ಹೇಗೆ ಮಹಾವಂಶವೆಂದರೆ 'ತಿರುಮೂಲರ್' ಎಂದು ಪ್ರಾಚೀನ ತಮಿಳು ವ್ಯಾಕರಣ ಕೃತಿ ತೊಲ್ಕಾಪ್ಪಿಯಂ ತಿಳಿಸುವುದು. ಇಂದಿನ ಸಪ್ತಗಿರಿ ಸಾಲು ಸಂಗಂ ಕಾಲದಲ್ಲಿ ಪುಳ್ಳಿಎಂಬ ಪ್ರಾಂತ್ಯದಲ್ಲಿತ್ತು. ಭಗವಂತನು ವೈಕುಂಠದಿಂದ ಶ್ರೀನಿವಾಸಮೂರ್ತಿಯಾಗಿ ಇಲ್ಲಿ ಗುಡಿಗುಂಡಾರಗಳಿಲ್ಲದೆ, ಶತಮಾನಗಳವರೆಗೂ ಒಂಟಿಯಾಗಿದ್ದ. ಈ ಪ್ರಾಂತ್ಯದ ರಾಜನಾಗಿದ್ದ ಪುಳ್ಳಿ ದೊರೆಯು ಮೂರ್ತಿಯನ್ನು ಗುರುತಿಸಿ 'ಮೂಲರ್' ಎಂದು ಕರೆದು ಭಕ್ತಸಮೂಹವನ್ನೇ ಕರೆತಂದು ತಮಗೆ ತೋಚಿದಂತೆ ಮುಗ್ಧಭಕ್ತಿಯೊಂದಿಗೆ ಆರಾಧಿಸುತ್ತಿದ್ದ. ಹಳದಿ ವಸ್ತ್ರವನ್ನು ಸಮರ್ಪಿಸಿ ತಾವೂ ಉಟ್ಟು ಕಾಡುಪುಷ್ಪ, ಸೊಪ್ಪು, ನಾರು, ಬೇರುಗಳಿಂದ ಅರ್ಚಿಸಿ ಅನ್ನಕ್ಕೆ ಹುಣಸೆಹಣ್ಣನ್ನು ಕಲೆಸಿ (ಪಚ್ಚೆಪುಳ್ಳಿ)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಿವೇದಿಸುತ್ತಿದ್ದರು. ಶತಮಾನಗಳ ಕಾಲ ತಿರುಮೂಲರ್ ಮೂರ್ತಿಯು ಈ ಸಮುದಾಯದ ಕುಲದೈವವಾಗಿ ಇವರ ಸೇವೆಯನ್ನು ಸ್ವೀಕರಿಸುತ್ತಿದ್ದುದರಿಂದ ಇವರದೂ ದೊಡ್ಡವಂಶವೆಂದೇ ಪರಿಗಣಿಸಲ್ಪಟ್ಟಿತು. ಭೌಗೋಳಿಕ ಸಾಮಾಜಿಕ ಬದಲಾವಣೆಗಳಿಂದ ಈ ಸಮುದಾಯ ಚದುರಿತು. ಬೇರೆ ವಂಶ ಬುಡಕಟ್ಟಿನವರೊಂದಿಗೆ ಸಂಬಂಧ ಬೆಳೆಸಿದರು. ಮೊದಲಿಗೆ ಕಾಡವರ್ ಜೊತೆ ಮೈತ್ರಿ. ಕಾಡವರ್ ಎಂದರೆ ಕಾಡನ್ನು ಕಡಿದು ಊರಾಗಿ ಮಾರ್ಪಡಿಸುವವರು. ಕ್ರಮೇಣ ಇವರೇ ಪಲ್ಲವರೆಂದೆನಿಸಿಕೊಂಡರು. ಆತ್ತ ತಿರುಮೂಲರ್ ಸುತ್ತಲೂ ಹುತ್ತ ಬೆಳೆದು ಅಗೋಚರವಾಯಿತು. ಗೋಪೀನಾಥ ದೀಕ್ಷಿತ, ಶ್ರೀನಿವಾಸ ದೀಕ್ಷಿತ ಹಾಗು ರಂಗದಾಸ ಎಂಬ ಭಕ್ತರಿಗೆ ಮೂರ್ತಿ ಗೋಚರಿಸಿತು. ತಕ್ಷಣವೇ ಆರಾಧನೆಯೂ ಆರಂಭವಾಯಿತು. ತೊಂಡಮಾನನ ಕಾಲಕ್ಕೆ ಗುಡಿಯೊಂದು ಪ್ರದೇಶ ಸೇರಿ ತೊಂಡಮಂಡಲವಾಯಿತು. ಪಲ್ಲವರ ಮೈತ್ರಿಯನ್ನು ಆಶ್ರಯಿಸಿದ ತೊಂಡೈಮನ್ನನ್ ಈ ಪ್ರದೇಶವನ್ನು ವಂಶಸಂಕೇತವನ್ನಾಗಿ ಮಾಡಿಕೊಂಡ. ಇಲ್ಲಿಯ ದಟ್ಟವಾದ ಆರಣ್ಯದಲ್ಲಿ ಶ್ರೀನಿವಾಸನು ಓಡಾಡಿದ್ದಾನೆಂದು ಪ್ರತೀತಿ. ಕಾಲಕ್ರಮೇಣ ಇದನ್ನು ನಾರಾಯಣವನವೆಂದು ಗುರುತಿಸಲಾಯಿತು. ಒಂಭತ್ತನೆಯ ಶತಮಾನದ ಸುಮಾರಿಗೆ ಕಾಡವರ್ ಪೆರುಂದೇವಿ ಪಲ್ಲವರಾಣಿ ಸಾಮವ್ವೈ ಚರಿತ್ರಾರ್ಹ ಕೈಂಕರ್ಯಗಳನ್ನು ಮಾಡಿರುತ್ತಾರೆ. ೧) ವಸ್ತ್ರಾಭರಣಗಳೊಂದಿಗೆ ಬೆಳ್ಳಿ ಶ್ರೀನಿವಾಸನ ಸಮರ್ಪಣೆ, ೨) ವೆಚ್ಚಗಳನ್ನು ಸರಿತೂಗಿಸಲು ಚಿನ್ನ-ಬೆಳ್ಳಿಗಳ ಸಮರ್ಪಣೆ, ೩) ಬಹು ಮುಖ್ಯವಾಗಿ ಇಂದು ಜರುಗುವ ಬ್ರಹ್ಮೋತ್ಸವವನ್ನು ಅಂದು ಪ್ರಥಮಬಾರಿಗೆ ಆರಂಭಿಸಿದಳು. ಈ ವಿಷಯಗಳು ಆಲಯ ಶಾಸನಗಳಲ್ಲಿ ಉಕ್ತವಾಗಿವೆ. ಇಂದಿನ ಅರ್ಚಕ ವರ್ಗದಲ್ಲಿ, ಅ) ದೀಕ್ಷಿತ ವಂಶದವರೂ, ಆ) ಸ್ಥಳೀಯ ಪೆದ್ದಿಂಟಿ ಮನೆತನದವರು, ಇ) ತಿರುಪತಿ ವೈಷ್ಣವರೆಂದು ಕರೆಯಲ್ಪಡುವ ನಂಬಿಮಾರರು (ನಂಬಿಯುಲು), ಈ) ಪೆರಿಯಪೆರುಮಾಳ್ ರಂಗನಾಥಸ್ವಾಮಿ ಆಗಮನದಿಂದ ಪಾಂಚರಾತ್ರ ಆಗಮಿಕರೂ ಸೇರಿರುತ್ತಾರೆ. ಇಲ್ಲಿಯ ಸ್ಥಾನತ್ತಾರರು ಶುಕಮುನಿವಂಶಜರೆಂದು ಆಲಯ ಶಾಸನವೊಂದು ತಿಳಿಸುವುದು.

೫. ದಯಾನಿಧಿಯಾದ ಶ್ರೀನಿವಾಸನು ಆಡಿದ ಲೀಲೆಯಿಂದ ಒಂದು ಮಹಾ ವಂಶವೇ ಉದಯಿಸಿತು – ತಾತಾಚಾರ್ಯ ವಂಶ. ಶಠಮರ್ಷಣ ಗೋತ್ರಜರು, ಕೃತಯುಗದ ಆಂಗೀರಸ ಮಹರ್ಷಿಯಿಂದ ಕಲಿಯುಗದಲ್ಲಿ ಪೆರಿಯ ತಿರುಮಲೈ ನಂಬಿಯವರಿಗೆ ವ್ಯಾಪಿಸಿದ್ದಾರೆ. ತೀರ್ಥ ಕೈಂಕರ್ಯದಲ್ಲಿ ತೊಡಗಿದ್ದ ನಂಬಿಯವರನ್ನು ಕಂಡ ಶ್ರೀನಿವಾಸನು ಬೇಡರ ಬಾಲಕನ ವೇಷದಲ್ಲಿ ಹಿಂಬಾಲಿಸಿ, "ತಾತಾ ಕುಡಿಯಲು ನೀರು ಕೊಡಿ" ಎಂದು ಕೇಳಿದ. ಭಗವಂತನು ಭಕ್ತಾಗ್ರೇಸರರೊಬ್ಬರನ್ನು ಪಿತುವಾಗಿ ಭಾವಿಸಿಕೊಂಡ ಈ ಲೀಲಾ ಘಟನೆಯಿಂದಲೇ ತಾತಾಚಾರ್ಯ ವಂಶ ಆರಂಭಗೊಂಡಿತು.

ನಂಬಿಯವರ ಪೌತ್ರರ ಪೌತ್ರರೇ ತಿರುಮಲೈ ಶ್ರೀನಿವಾಸಾಚಾರ್ಯ, ದೇಶಿಕರ ಪ್ರಮುಖ ಶಿಷ್ಯರಲ್ಲಿ ಒಬ್ಬರು. ಇವರ ಪೌತ್ರರ ಪೌತ್ರರು ಶ್ರೀನಿವಾಸ ದೇಶಿಕ. ಇವರಿಂದ ಇನ್ನೆರಡು ಸಂತತಿ ದಾಟಿದನಂತರ ಕಪಿಲ, ಕಣಾದ, ಜೈನ, ಶೈವ ಮುಂತಾದ ಪಂಚಮತಗಳನ್ನು ಜಯಿಸಿದ ಪಂಚಮತಭಂಜನಂ ತಾತದೇಶಿಕರು, ಇವರಿಗೆ ಸಂತಾನವಿಲ್ಲದ ಕಾರಣ, ಕುಂಭಕೋಣದಲ್ಲಿದ್ದ ಇವರ ಸೋದರರ ಪುತ್ರ ಕುಮಾರ ತಾತಾಚಾರ್ಯರನ್ನು 'ದತ್ತು' ಸ್ವೀಕಾರ ಮಾಡಿ ವಂಶವನ್ನು ಮುಂದುವರೆಸಿದರು. ಇದು ಹೇಗೆ ಮಹಾವಂಶವೆಂದು ವರ್ಣಿಸಲು ಪುಟಗಳು ಸಾಲವು –

೧. ಪ್ರಾಚೀನಕಾಲದಿಂದ ಇಲ್ಲಿಯವರೆಗೆ ಓತಪ್ರೋತವಾಗಿ ನಡೆದುಬಂದಿರುವ ಆಜಾನೇಯ ವಂಶ. ಇಡೀ ವೈಷ್ಣವ ಜನಾಂಗಕ್ಕೆ ಈ ವಂಶಜರ ಋಣವು ವಿಶೇಷವಾಗಿದೆ.

೨. ರಾಮಾನುಜರ ನಂತರ ಶ್ರೀವೈಷ್ಣವ ಸತ್ಸಂಪ್ರದಾಯ ಅನೂಚಾನವಾಗಿ ಮುಂದುವರೆಯಲು ಹಾಗು ವೈದಿಕ ಮಾರ್ಗವನ್ನು ರಕ್ಷಿಸಲು ಶ್ರಮಿಸಿರುವರು.

೩. ಶ್ರೀವೈಷ್ಣವ ಸಿದ್ಧಾಂತದ ಬಗ್ಗೆ ಮಹಾ ವಿಶ್ವಾಸವನ್ನು ಮೂಡಿಸಿ ಸಂಪ್ರದಾಯ ವೃದ್ಧಿಗೆ ನೆರವಾದ ಮಹನೀಯರ ವಂಶವಿದು. ಪಾಂಡಿತ್ಯ, ಸದಾಚಾರ ನಿಷ್ಠೆಗಳಲ್ಲಿ ಉತ್ಕೃಷ್ಟರಾದ ಯೋಗಿಗಳ ಕುಲವಿದು. ಈ ವಂಶಜರನ್ನು 'ಅಯ್ಯಾ' ಎಂದು ಸಂಬೋಧಿಸುವರು.

೪. ಇವರಿನ ಹೆಸರ ಹಿಂದೆ 'ಕೋಟಿಕನ್ಯಾದಾನಂ' ಎಂಬ ಬಿರುದಿದೆ. ಇದು ತಾತದೇಶಿಕರ ದಿನಚರಿಯಾಗಿತ್ತು. ಒಬ್ಬ ಋಷಿಯು ೫೦ ಕನ್ಯೆಯರನ್ನು ಆಂಗಿರಸ ಪುತ್ರ ತ್ರಸದಸ್ಯುವಿಗೆ ದಾನಮಾಡಿದ ಎಂದು ಋಗ್ವೇದದಲ್ಲಿ ಹೇಳಿದೆ ೮-೯-೩೭.

೫. ಶಿಶುವಾಗಿದ್ದಾಗ ತಾಯಾರ್ ವಿಭವರೂಪದಲ್ಲಿ ಬಂದು ಅನುಗ್ರಹಿಸಿದ್ದರಿಂದ ಇವರು 'ಲಕ್ಷ್ಮೀಕುಮಾರರು' ಎಂದೂ ಬಿರುದಾಂಕಿತರಾದರು.

೬. ಸತ್ಸಂಗ – ನಲ್ಲಾನ್, ಕಂದಾಡೈ, ಕಿಡಾಂಬಿ, ಅಮ್ಮಾಳ್ ವಂಶಜರೊಂದಿಗೆ ಸ್ನೇಹ-ಸೌಹಾರ್ದತೆ, ಆಧ್ಯಾತ್ಮಿಕವಿಚಾರ ವಿನಿಮಯ ಮುಂತಾದ ಹವ್ಯಾಸ.

೭. ಸಾಮಾಜಿಕಸೇವೆ – ರಸ್ತೆ, ಕೆರೆ, ಕೊಳ ನಿರ್ಮಾಣ ಆರ್ಥಿಕರಂಗದಲ್ಲಿ ಅಭಿವೃದ್ಧಿ, ಸಣ್ಣ ಪುಟ್ಟ ಮೊಖದ್ದಮೆಗಳನ್ನು ಪರಿಶೀಲಿಸಿ ತೀರ್ಪು ಕೊಡುವುದು, ಕ್ಷೇತ್ರಾಭಿವೃದ್ಧಿ, ಕಂಚೀ ವರದನ ದೇವಸ್ಥಾನದಲ್ಲಿ ಶ್ರೇಕಾರ್ಯದುರಂಧರರಾಗಿ ಸೇವೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

(Manager General of the Pagoda of Devarajaswamy Temple) ಇತ್ಯಾದಿ. ಶಾತ್ತುಮುರೈ ಸಂದರ್ಭದಲ್ಲಿ ಮುದಲ್ಮರ್ಯಾದೆ ಇವರಿಗೆ ಪರಂಪರೆಯಾಗಿ ಬಂದಿರುತ್ತದೆ. ಬಹು ದೊಡ್ಡ ಅಗ್ರಹಾರಗಳಾಗಿರುವ ಏಟ್ಟೂರ್ ಹಾಗು ನಾವಲ್ಪಾಕ್ಕಂ 'ತಾತಾಚಾರ್ಯ ಬೀಡು' ಎಂದೇ ಪ್ರಸಿದ್ಧಿ. ಕುಂಭಕೋಣದಲ್ಲಿ ಪಾಟ್ರಾಚಾರ್ಯ, ಶ್ರೀರಂಗದಲ್ಲಿ ಮುದಲ್ ಮಾಳಿಗೈ ತಾತಾಚಾರ್ಯ, ನಂಬಾಕಂ, ಶಂಖಿಪುರಂ, ತಿರುಪತಿಗಳಲ್ಲಿ ತೋಳಪ್ಪಾಚಾರ್ಯರೆಂದು ವ್ಯಾಪಿಸಿರುತ್ತಾರೆ. ಇಂದಿಗೂ ಇವರೇ ತೀರ್ಥ ಕೈಂಕರ್ಯದಲ್ಲಿ ತೊಡಗಿದ್ದಾರೆ. ಕರ್ನಾಟಕದ ಹೊಸಪೇಟೆ, ಸುರಪರ, ರಾಯದುರ್ಗ, ತಲಕಾಡು, ಶ್ರೀರಂಗರಾಜಪುರಗಳಲ್ಲಿಯೂ ವ್ಯಾಪಿಸಿರುತ್ತಾರೆ. ಗೃಹಸ್ಥರಾಗಿಯೂ, ಆಚಾರ್ಯ ಪುರುಷರಾಗಿಯೂ, ಯತಿಗಳಾಗಿಯೂ ಮಠಾಶ್ರಮಗಳಲ್ಲಿ ರಾರಾಜಿಸಿತ್ತಿದ್ದಾರೆ. ಉದಾಹರಣೆ ೧) ಅಮ್ಮಣ್ಣಿ ರಾಮಾನುಜಾಚಾರ್ಯರ ಪೌತ್ರ ಚತಿರ್ವೇದ ಶತಕ್ರತು ಅಯ್ಯಾ ದೇವನಾಥಾಚಾರ್ಯ ತಾತಾಚಾರ್ಯ ಮಹಾದೇಶಿಕ. ೨) ನಾಲ್ವಡೀ ಕೃಷ್ಣರಾಜ ಒಡೆಯರಿಂದ ಸನ್ಮಾನಿತರಾದ ವೇದಾಂತ ವಿದ್ವನ್ಮಣಿ, ವೇದಾಂತ ಸಾರಜ್ಞ, ಬೆಂಗಳೂರು ಜಯನಗರ ಸ್ವಾಮಿಗಳೆಂದೇ ಖ್ಯಾತಿ ಹೊಂದಿದ ತಲಕಾಡಿನ ಶ್ರೀ ಕೃಷ್ಣತಾತಾಚಾರ್ಯ. ಈ ಮಹಾನರೇ ಈ ಲೇಖಕನ ಕಾಲಕ್ಷೇಪ ಗುರುಗಳು.

ಈ ಮಹಾ ವಂಶದ ಜೊತೆಯಲ್ಲೇ 'ಶೊಟ್ಟೈ' ಎಂಬ ಕುಲವು ಹುಟ್ಟಿತು. ನಾಥಮುನಿಗಳ ಹಿಂದಿನ ಪೀಳಿಗೆಯಲ್ಲಿ ಪುಂಡರೀಕಾಕ್ಷ ಎಂಬ ಭಕ್ತರು ಮುದಲಾಳ್ವಾರರ ಕಾಲದವರು. ಇವರ ಬಳಿ ಭಗವಂತನು ಮಹಾ ಬೆಳಕಿನ ರೂಪದಲ್ಲಿ ಬಂದು 'ನೀವು ಯೋಗಿಗಳಲ್ಲಿ ಶ್ರೇಷ್ಠರಾದ್ದರಿಂದ ಚೊಟ್ಟೈ ಎಂಬ ದ್ರಾವಿಡನಾಮವನ್ನು ನಿಮಗೆ ಕೊಟ್ಟಿರುತ್ತೇನೆ' ಎಂದು ಹೇಳಿ ನವನೀತ ಕೃಷ್ಣಮೂರ್ತಿಯೊಂದನ್ನು ಅನುಗ್ರಹಿಸಿದ. ಶೊಟ್ಟೈಕುಲಥ್ತರ್ ಎಂದು ದೇವಗಾನ ಪದ್ಧತಿಯನ್ನು ಅನುಸರಿಸುವ ಕುಲವೊಂದು ನಾಥಮುನಿಗಳಿಂದ ಆರಂಭಗೊಂಡು ಚೊಟ್ಟೈ ವಂಶವೆಂದು ಮುಂದುವರೆಯಿತು.

೬. ಶ್ರೀವೈಷ್ಣವ ಮತಧರ್ಮವು ಉತ್ಕೃಷ್ಟವೂ ಹಾಗು ಸಮಾಧಾನಕರವಾದುದು ಎಂದು ಸಂಕಲ್ಪಿಸಿ ಆವಲಂಬಿಸಿದವರ ಪೈಕಿ ಭಗವದ್ರಾಮಾನುಜರೂ ಒಬ್ಬರು. ಮಹಾವಿಷ್ಣುವಿನಿಂದ ಪ್ರವೃತ್ತವಾದ ಯಾವ ಮೋಕ್ಷಧರ್ಮವೊಂದಿದೆಯೋ ಅದನ್ನು ವೈಷ್ಣವ ಧರ್ಮಾಚರಣೆಯಿಂದಲೇ ಸಾಧಿಸಬೇಕು ಎಂದು ದೃಢೀಕರಿಸಿಕೊಂಡರು. ಭಗವತ್ ಸಂಕಲ್ಪದಿಂದಲೇ ಇವರು ಭವಿಷ್ಯಾಚಾರ್ಯರಾಗಿ ಅವತರಿಸಿದರು. ಭಗವಾನ್ ಕೇಶವನ ಹಾರಿತಮುನಿಯನ್ನು ಕುರಿತು "ಜಗತ್ ಕಲ್ಯಾಣಕ್ಕಾಗಿ ನನ್ನ ಅಂಶದಿಂದಲೇ ಮುಂದೆ ಅವತರಿಸುವೆನು" ಎಂದು ಹೇಳುವನು. ಮಾರನ್ ಆಳ್ವಾರರು ಹಿಂದೆಯೇ ಈ ವಿಷಯವನ್ನು 'ಕಲಿಯುಂ ಕೆಡುಂ ಕಂಡುಕೊಳ್ಮಿನ್' ಎಂದು ಸೂಚಿಸಿರುತ್ತಾರೆ.

ಹಾರಿತಕುಲತಿಲಕ ಸರ್ವಕ್ರತು ಆಸೂರಿ ಕೇಶವ ಸೋಮಯಾಜೀ ದೀಕ್ಷಿತರ ಸುಪುತ್ರರೇ ಆದಿಶೇಶನ ಅಂಶಜರಾದ ರಾಮಾನುಜರು. ಇವರ ಪೂರ್ವಜರೆಲ್ಲರೂ ಸೋಮಯಾಗದಿಂದ ಸೋಮಯಾಜಿಗಳೆಂದು ಪ್ರಸಿದ್ಧರಾಗಿದ್ದರು. ಯಜ್ಞ ಯಾಗಾದಿ ಧಾರ್ಮಿಕ ಕ್ರಿಯೆಗಳಿಂದ ಯಜ್ಞೇಶ್ವರನಾದ ಮಹಾವಿಷ್ಣುವನ್ನು ತೃಪ್ತಿಪಡಿಸಿ ಒಲವು ಪಡೆಯುವುದೇ ಈ ವಂಶಜರ ಮುಖ್ಯ ಗುರಿಯಾಗಿತ್ತು. ರಾಮಾನುಜರ ಅವತಾರವನ್ನು 'ಧೀರ್ಲಬ್ಧಾ' ಎಂದು ಕರೆಯುವರು. ಅಂದರೆ ಧರ್ಮ ಜ್ಞಾನ ಮಾರ್ಗಗಳು ಉದಯಿಸಿದುವೆಂದು ಅರ್ಥ. ಭಗವಂತನಲ್ಲಿ ಶರಣಾಗುವುದೇ ಮಾನವನಿಗೆ ಅತ್ಯಂತ ಶ್ರೇಯಸ್ಕರವಾದುದು ಎಂಬ ನೀತಿಯೊಂದಿಗೆ ಸಿದ್ಧಾಂತ ಪ್ರಚಾರವನ್ನು ಆರಂಭಿಸಿದರು. ಆಚಾರ್ಯ ಯಾಮುನರ ಅಭೀಷ್ಟಗಳನ್ನು ಸಫಲವಾಗಿ ನೆರವೇರಿಸಿ ಶ್ರೀಭಾಷ್ಯಕಾರರಾದರು. ವಿರಕ್ತಿ ವೈರಾಗ್ಯಗಳಿಂದಲೇ ದಾಂಪತ್ಯ ಜೀವನವನ್ನು ತ್ಯಜಿಸಿ ಯತಿರಾಜರಾದರು. ಮತಧರ್ಮದ ಏಳಿಗೆಗಾಗಿ ಶಾಶ್ವತ ವ್ಯವಸ್ಥೆಯೊಂದನ್ನು ಯೋಜಿಸಿದರು. ಈಡೀ ಶ್ರೀವೈಷ್ಣವ ಪ್ರಪಂಚವನ್ನು ೭೪ ಆಚಾರ್ಯ ಪೀಠಗಳನ್ನಾಗಿ ವಿಂಗಡಿಸಿ, ಒಂದೊಂದಕ್ಕೂ ಸಿಂಹಾಸನಾಧಿಪತಿಗಳೆಂಬ ಹೆಸರಿನ ಆಚಾರ್ಯಶೀಲರಾದ ಗೃಹಸ್ಥರನ್ನು ಅಧಿಪತಿಗಳಾಗಿ ನೇಮಿಸಿದರು. ಇದು ಮತಧರ್ಮದ ವಂಶ ಪರಂಪರೆಯೆಂದರೆ ತಪ್ಪಾಗಲಾರದು. ಅಂದರೆ ವ್ಯಕ್ತಿಗಳ ದಾಂಪತ್ಯಜೀವನದಿಂದುಂಟಾದ ವಂಶವಲ್ಲ. ಸಿಂಹಾಸನ ಎಂದರೆ ಉಭಯವೇದಗಳಿಗೆ ಕೊಟ್ಟ ಸ್ಥಾನ. ಇವರ ಪೈಕಿ ಮೊದಲನೆಯ ನಾಲ್ಕು ಸಿಂಹಾಸನಾಧಿಪತಿಗಳು ಶ್ರೀಭಾಷ್ಯವನ್ನು ವೈದಿಕ ಸಂಪ್ರದಾಯದ ನೆಲೆಯಲ್ಲೇ ಬೋಧಿಸಿ ಪ್ರಚಾರ ಮಾಡಬೇಕು. ಮಿಕ್ಕ ಸಿಂಹಾಸನಾಧಿಪತಿಗಳು ವಿಶಿಷ್ಟಾದ್ವೈತ ಸಿದ್ಧಾಂತವನ್ನು ದಿವ್ಯ ಪ್ರಬಂಧದ ಆಧಾರಿತವಾಗಿ ಪ್ರಸಾರ ಮಾಡಬೇಕೆಂದೂ, ಹಾಗು ಪಂಚಸಂಸ್ಕಾರ ವಿಧಿ ಹಾಗು ಮಂತ್ರಾರ್ಥ ಪರಂಪರೆ ಯಶಸ್ವಿಯಾಗಿ ಮುಂದುವರೆಯಬೇಕೆಂಬುದೇ ರಾಮಾನುಜರ ಸಂಕಲ್ಪವಾಗಿತ್ತು. ಆಚಾರ್ಯ ಶಿಷ್ಯ ಪರಂಪರೆ ಮಠಾಶ್ರಮಗಳಲ್ಲಿ ಹರಡಿತು. ವಯಕ್ತಿಕವಾಗಿ ವಂಶಗಳ ಜಾಲಾಂಧ್ರವೇ ಎಲ್ಲೆಲ್ಲಿಯೂ ಕಂಡುಬಂದಿತು.

ಆಸೂರಿ ವಂಶಾಬ್ಧಿ ಕೌಸ್ತುಭಾಯ ನಮಃ – ಆಸೂರಿ ಮನೆತನದಲ್ಲಿ ಹಾರೀತಗೋತ್ರದಲ್ಲಿ ಜನಿಸಿದವರೇ ನೃಸಿಂಹೋಪಾಸಕ ಆತ್ಮಕೂರು ರಂಗಾಚಾರ್ಯ, ಅರ್ಥಾತ್ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳು. ಇವರ ತುರೀಯಾಶ್ರಮ ಜೀವನದಲ್ಲಿ ಏಕೋದೇವೋಕೇಶವ ಎಂಬ ತತ್ವದಂತೆ ಪರಮೈಕಾಂತಿಗಳಾಗಿದ್ದರು. ಹಾರಿತ ಸ್ಮೃತಿ ಹೇಳುವುದು "ಯಾವುದರಿಂದ ಭಗವಂತನು ಸುಪ್ರೀತನಾಗುವನು?" ಎಂಬ ಪ್ರಶ್ನೆಗೆ ಮಾರ್ಕಂಡೇಯನು ನೃಸಿಂಹೋಪಾಸನೆಯನ್ನು ಉದಾಹರಿಸುವನು – 'ಯೇನ ಸಂತುಷ್ಯತೇ ದೇವೋ ನಾರಸಿಂಹ ಸನಾತನಃ'. ಶಿಷ್ಯರು ಹಾರಿತಮುನಿಯನ್ನು ಪುನಃಪುನಃ ನಮಸ್ಕರಿಸಿ ಧರ್ಮ ಶಾಸ್ತ್ರಗಳನ್ನು ತಿಳಿಯಲು ಇಚ್ಛೆಪಟ್ಟರು ಎಂದು ಮಾರ್ಕಂಡೇಯ ಋಷಿಯು ಸ್ಪಷ್ಟಪಡಿಸುವರು. 'ಹಾರಿತಸ್ಸಮಹಾತ್ಮನಃ ಹಾರಿತಂ ಧರ್ಮಸರ್ವಜ್ಞಂ ಪ್ರತಿಪತ್ಯಾಬ್ರುವನ್ ಸರ್ವೇ ಮುನಯೋಃ ಧರ್ಮಕಾಂಕ್ಷಿಣಃ'. ಧರ್ಮಾಧಿಕಾರಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಸ್ತೂರಿ ರಂಗಾಚಾರ್ಯರಲ್ಲಿ ಗರಿಷ್ಟವಾದ ಆಚಾರ್ಯನಿಷ್ಠೆಯನ್ನು ಇಟ್ಟಿದ್ದರು. ಅದೆಷ್ಟೇ ಕಷ್ಟವಿರಲಿ ಆರಾಧನಾನುಷ್ಠಾನಗಳು ನಿಲ್ಲುತ್ತಿರಲಿಲ್ಲ. 'ತೇವುಮಟ್ರರಿಯೇನ್' ಎಂಬಂತೆ ಶ್ರೀಲಕ್ಷ್ಮೀಹಯಗ್ರೀವನನ್ನು ಬಿಟ್ಟು ಬೇರೆ ದೈವವನ್ನು ಕಾಣೇ ಎಂಬುದೇ ಆಚಾರ್ಯರ ಶ್ರದ್ಧಾಭಕ್ತಿಯಾಗಿತ್ತು. ಎಲ್ಲರಿಗೂ ಇವರು ಅಚ್ಚುಮೆಚ್ಚಿನ ಸ್ವಾಮಿಗಳಾಗಿದ್ದರು. ಇವರ ಕಾಲದಲ್ಲಿ ಮಠದಲ್ಲಿ ಶಸ್ತ್ರುಪಾಲನೆ ಚೆನ್ನಾಗಿಯೇ ಇತ್ತು.

೭. ವರದರಾಜನ ಕೃಪೆಯಿಂದುಂಟಾದ ಗೃಹಸ್ಥಾಚಾರ್ಯರ ಬುಡಕಟ್ಟಿಗೆ ಸೇರಿದ ವಂಶ – ನಲ್ಲಾನ್ ಚಕ್ರವರ್ತಿ ವಂಶ. 'ಊರುಕ್ಕು ಪೊಲ್ಲಾನ್ ನಮಕ್ಕು ನಲ್ಲಾನ್' ಎಂಬ ನುಡಿಕಟ್ಟು ತುಂಬಾ ಚಿರಪರಿಚಿತವಾದ್ದು. ಶ್ರೀವತ್ಸ ಮುನಿಸಂತತಿಯಲ್ಲಿ ಶ್ರೀಮುಷ್ಣಂ ವರಾಹದೇವರ ಉಪಾಸಕ, ಆಚಾರ್ಯ ಪುರುಷ ವಾತ್ಸ್ಯವರದಾಹ್ವಯ ಅಥವಾ ಶ್ರೀಮುಷ್ಣಂ ವರದಾಚಾರ್ಯ ಈ ವಂಶದ ಮೂಲಪುರುಷರು, ರಾಮಾನುಜರಿಗೂ ಹಿಂದಿನವರು. ಶೈವ–ವೈಷ್ಣವ ಗೊಂದಲದಲ್ಲಿ ದಿವ್ಯಪ್ರಬಂಧದ ಆಧಾರದಿಂದ ಶ್ರೀನಿವಾಸನು ವಿಷ್ಣುವೇ ಎಂದು ವಾದ ಮಾಡಿ ಸಮರ್ಥಿಸಿದವರಲ್ಲಿ ಇವರು ಮೊದಲಿಗರು. 'ವೈಷ್ಣವಾನಾಂ ಚಕ್ರವರ್ತಿ' ಎಂದು ಬಿರುದಾಂಕಿತರಾದರು. 'ನಲ್ಲಾನ್ ಇತಿ ಮೇಘೋಯಂ ವನಮಧ್ಯೇ ಪ್ರವರ್ಷತಿ' ಎಂದು ರಾಮಾನುಜರು ಇವರನ್ನು ಶ್ಲಾಘಿಸಿದ್ದಾರೆ. ಆದ್ದರಿಂದ ಈ ವಂಶವು ತಿರುಮಲೈ ನಲ್ಲಾನ್ ಚಕ್ರವರ್ತಿ ಎಂದಾಯಿತು. ೭ಳ ಸಿಂಹಾಸನಾಧಿಪತಿಗಳಲ್ಲಿ ಇವರೂ ಒಬ್ಬರು. ವಾತ್ಸ್ಯ ಎಂಬ ಪದ ಶ್ರೀವತ್ಸ ಗೋತ್ರವನ್ನು ಸೂಚಿಸುವುದು. ಇವರ ಪುತ್ರ ಶ್ರೀನಿವಾಸ ಚಕ್ರವರ್ತಿ. ಪೌತ್ರರು ವರದಾಚಾರ್ಯರು. ಇವರ ದಿಗ್ವಿಜಯ ಯಾತ್ರೆಯಲ್ಲಿ ಇಂದಿನ ಲಕ್ಷ್ಮೀಪುರಂ ಕ್ಷೇತ್ರವು (ಕುಪ್ಪಂ ಬಳಿ) ಗುರುತಿಸಲ್ಪಟ್ಟಿತು. ಕಾಲಕ್ರಮೇಣ ಈ ಪ್ರಾಂತ್ಯದ ಮೂಲ ಆಚಾರ್ಯರಾದ ಶ್ರೀರಂಗರಾಮಾನುಜ ಮಹಾದೇಶಿಕರಿಂದ (ಕೇತಾಂಡಪಟ್ಟಿ ಸ್ವಾಮಿ) ಚಕ್ರವರ್ತಿ ವಂಶವು ಮುಂದುವರೆಯಿತು. ಇವರ ಶಿಷ್ಯರುಗಳ ಪೈಕಿ ಡೆಂಕಣಿಕೋಟ್ಟೈ ಸ್ವಾಮಿಗಳಾಗಿದ್ದ ವರದರಾಮಾನುಜ ಮಹಾದೇಶಿಕರು (ಅಭಿನವ ರಂಗನಾಥ ಪರಕಾಲ ಸ್ವಾಮಿಗಳ ಆಚಾರ್ಯರು), ವೇದಾಂತರಾಮಾನುಜ ಸ್ವಾಮಿ ಹಾಗು ಕೋಯಿಯಾಳಂ ಸ್ವಾಮಿಗಳೂ ಚಕ್ರವರ್ತಿ ವಂಶಕ್ಕೆ ಸೇರಿದವರಾಗಿದ್ದಾರೆ. ಇದೇ ವಂಶದ ತಿರುಮಲೈ ನಲ್ಲಾನ್ ಶ್ರೀನಿವಾಸಾಚಾರ್ಯರು ಸ್ವಾಮಿ ದೇಶಿಕರ ಪ್ರಮುಖ ಶಿಷ್ಯರಲ್ಲಿ ಒಬ್ಬರು. ಪ್ರಕೃತಂ ಅಹೋಬಿಲಮಠಾಧಿಪತಿಗಳಾದ ವಿಲ್ಲಿವಳಂ ನಾರಾಯಣ ಯತೀಂದ್ರ ಮಹಾದೇಶಿಕರೂ, ಉತ್ತಮೂರು ವೀರರಾಘವಾಚಾರ್ಯ ಸ್ವಾಮಿಗಳೂ, ಪೆರುಕ್ಕರಣೈ ಚಕ್ರವರ್ತಿ ಆಚಾರ್ಯ ಸ್ವಾಮಿಗಳು ಇನ್ನೂ ಅಸಂಖ್ಯಾರ ಸ್ವಯಂ ಆಚಾರ್ಯಪುರುಷರು ಈ ವಂಶದಲ್ಲಿ ರಾರಾಜಿಸುತ್ತಿರುವವರೇ. ಈ ವಂಶದಲ್ಲೇ ಭಿನ್ನವಾಗಿ ಇನ್ನೆರಡು ಬೇರೇ ಶಾಖೆಗಳಾಗಿ ಮುಂದುವರೆದ ಮನೆತನ – ಮಾಡಭೂಷೀ ಹಾಗು ನಡಾದೂರ್. ಬ್ರಹ್ಮಸೂತ್ರಗಳ ವ್ಯಾಖ್ಯಾನ ವಿಚಾರದಲ್ಲಿ ಟಂಕ, ಭಾರುಚಿ, ದ್ರಮಿಡ ಮುಂತಾದ ಹೆಸರುಗಳಿವೆ. ದ್ರಮಿಡ ಎನ್ನುವುದು ನೈಧ್ರುವ ಮಾಡಭೂಷಿಯಾಳ್ವಾನ್ ಎಂದು ಗುರುತಿಸಲಾಗಿದೆ. ಕಾಂಚೀಪುರದ ಬಳಿ ಇರುವ ತಿರುಪ್ಪುಟ್ಕುಳಿಯ ದೂಷಿ ಮಾಮಂಡೂರ್ ಬಾಲಶಕ್ತಿ ಭಾರಧ್ವಾಜ ಗೋತ್ರದವರ ಪಂಗಡವೊಂದು ಉದಯಿಸಿತು. ಇದೇ ಮಾಡಭೂಷೀ ವಂಶದ ಉಗಮ. ಇಂದು ಲಕ್ಷ್ಮೀಪುರದ ಕ್ಷೇತ್ರದ ನಿರ್ವಹಣೆ ಹಾಗು ಸರ್ವಾಂಗಿಣ ಅಭಿವೃದ್ಧಿಯಲ್ಲಿ ತೊಡಗಿರುವವರು ಈ ವಂಶದವರೇ. ಕಾಲಕ್ರಮೇಣ ಬಾಲಶಕ್ತಿಯೆಂಬ ಪದ ಬಾಲಧನ್ವೀ ಎಂದೂ, ತಮಿಳಿನಲ್ಲಿ ಇಳಯವಿಲ್ಲೀ ಎಂದೂ ಕುಂಭಕೋಣದ ಸಮೀಪ ಕರ್ಕಿ ಎಂಬ ಸಣ್ಣ ಗ್ರಾಮದಲ್ಲಿ ಉದಯಿಸಿದುವು. ಕೋಮಾಂಡೂರ್ ಎಂಬ ಪಂಗಡ ಇದರಲ್ಲಿ ಸೇರಿತು. ಕೋಮಾಂಡೂರ್ ಇಳಯವಿಲ್ಲಿ ಅಥವಾ ಬಾಲಧನ್ವೀ ವಂಶವೆಂದು ಮುಂದುವರೆಯಿತು. ಕೋಮಾಂಡೂರ್ ಆಚ್ಚಾನ್ ೭ಳ ಸಿಂಹಾಸನಾಧಿಪತಿಗಳಲ್ಲಿ ಒಬ್ಬರು. ಇವರು ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳಲ್ಲಿ ಕಾಲಕ್ಷೇಪ ಮಾಡಿರುತ್ತಾರೆ. ದೇವನಾರ್ವಿಳಾಹಂ ಆಳಗಿಯಸಿಂಗರ್ ಸ್ವಾಮಿ, ಜಗ್ಗು ವಕುಳಭೂಷಣರು ಇದೇ ವಂಶದವರು. ಊರಿನ ಹೆಸರೇ ವಂಶದ ಹೆಸರಾಗಿರುವ ನಿದರ್ಶನಗಳಲ್ಲಿ ವಂಗಿಪುರವೂ ಒಂದು (ತಿರುವಳ್ಳೂರ್ ಸಮೀಪ). ಅಹೋಬಿಲಮಠ ಪರಂಪರೆಯಲ್ಲಿ ೭ ಸ್ವಾಮಿಗಳು ಈ ವಂಶದವರಾಗಿದ್ದಾರೆ. ಕಾಂಚೀಯ ತೂಪ್ಪುಲಿನಲ್ಲಿರುವ ಪರಕಾಲಮಠದ ಕಟ್ಟದವು ವಂಗೀಪುರದ ಜಟಾಬ್ರಹ್ಮಚ್ಚಾರಿಯಾದ ಆರಾವಮುದಾಚಾರ್ಯರ ಕೊಡುಗೆ. ಮೇಲುಕೋಟೆಯಲ್ಲಿ ವಂಗೀಪುರದ ಮಠವೊಂದಿತ್ತು. ಪುನರ್ವಸು ಉತ್ಸವವು ಇದರ ಕೈಂಕರ್ಯ. ಭಾಷ್ಯಕಾರರ ಸನ್ನಿಧಿಯಲ್ಲಿರುವ ಆರಾಧಕರು ಈ ವಂಶದವರೇ.

ನಡಾದೂರ್ ಎಂಬುದೂ ಊರಿನ ಹೆಸರೇ. ಮೂಲಪುರುಷ ನಡಾದೂರಾಳ್ವಾನ್ ವರದ ವಿಷ್ಣ್ವಾಚಾರ್ಯರೇ ಶ್ರೀಭಾಷ್ಯಕ್ಕೆ ಸಿಂಹಾಸನಾಧಿಪತಿ. ಇವರ ಪುತ್ರ ದೇವರಾಜಾಚಾರ್ಯ. ಇವರ ಪುತ್ರರೇ ನಡಾದೂರ್ ಆಳ್ವಾನ್ ಅಥವಾ ವಾತ್ಸ್ಯ ವರದಾಚಾರ್ಯ. ಕಾಂಚೀ ವರದನ ಸನ್ನಿಧಿಯ ಹಿಂಬಾಗದಲ್ಲಿರುವ ಕಚ್ಚಿವಾಯ್ತಾನ್ ಮಂಟಪದಲ್ಲಿ ಕಾಲಕ್ಷೇಪ ಮಾಡುತ್ತಿದ್ದರು. ತಾಯಿಯು ಶಿಶುವನ್ನು ಪೋಷಿಸುವಂತೆ ಇವರು ದೇವಮೂರ್ತಿಗಳನ್ನು ನೋಡಿಕೊಳ್ಳುತ್ತಿದ್ದುದರಿಂದ ಅಮ್ಮಾಳ್ ಎಂದು ಹೆಸರು. ವಿಷಿಷ್ಟವಾದ ಇಷ್ಟದೈವದ ಕಲ್ಪನೆಯನ್ನೇ ಇದು ಸೂಚಿಸುವುದು. ಅಹೋಬಿಲಮಠ ಪರಂಪರೆಯಲ್ಲಿ ಹಲವಾರು ಯತಿವರ್ಯರು ಸೇರಿ ಅನೇಕ ಮಹನೀಯರೂ ಈ ವಂಶದವರೇ ಆಗಿರುತ್ತಾರೆ. ಇವರ ಪೌತ್ರರೇ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳಲ್ಲಿ ಶಿಷ್ಯವೃತ್ತಿಯನ್ನು ಪಾಲಿಸಿದ ಶ್ರೇಷ್ಟಕಾಶತಂ ಅಮ್ಮಾಳ್. ಇವರ ಶಿಷ್ಯರೇ ಕಿಡಾಂಬಿ ಶ್ರೀನಿವಾಸಾಚಾರ್ಯರು (ಅಹೋಬಿಲಮಠದ ಸ್ಥಾಪನಾಚಾರ್ಯರು – ಆದಿವಣ್ ಶಠಕೋಪ ಮಹಾದೇಶಿಕರು). ವಾತ್ಸ್ಯ ಅನಂತಾಚಾರ್ಯರಿಂದ ನಡಾದೂರ್ ವಂಶ ಮುಂದುವರೆಯಿತು. ಇಡೀ ದೇಶದಲ್ಲಿಯೇ ಏಕೈಕ ಸಂಸ್ಕೃತ ದಿನಪತ್ರಿಕೆಯನ್ನು ಹೊರಡಿಸಿದ ಕೀರ್ತಿ ಮೈಸೂರಿನ ಕಳಲೇ ನಡಾದೂರ್ ವಂಶಜರಾದ ಶ್ರೀವರದರಾಜ ಐಯ್ಯಂಗಾರರಿಗೆ ಸಲ್ಲುವುದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಿಡಾಂಬಿ ಹಾಗು ಮುಡುಂಬೈ ಊರುಗಳು ಕಂಚಿಯ ಸಮೀಪದಲ್ಲಿವೆ. ಶ್ರೀಭಾಷ್ಯ ಸಿಂಹಾಸನಾಧಿಪತಿಗಳಲ್ಲಿ ಒಬ್ಬರಾದ ಕಿಡಾಂಬಿ ಆಚ್ಚಾನರ ಪ್ರಪೌತ್ರ ಕಿಡಾಂಬಿ ಅಪ್ಪುಳ್ಳಾರ್ ಆತ್ರೇಯ ರಾಮಾನುಜರು, ಸ್ವಾಮಿ ದೇಶಿಕರ ಮಾತುಲರು. ಸೂರಿ ಮನೆತನದ ಸೋಮಯಾಜೀ ಬುಡಕಟ್ಟಿಗೆ ಸೇರಿದ 'ಯಜ್ವ'ರ ವಂಶ ದೇಶಿಕರದು. ಇವರ ಪಿತು ಅನಂತಸೂರಿ ಸೋಮಯಾಜೀ. ಭಕ್ತಿ, ಜ್ಞಾನಾರ್ಜನೆ, ಅಹಂಕಾರ ವಿಸರ್ಜನೆ, ಲೌಕಿಕ ಆಸಕ್ತಿಗಳಿಂದ ದೂರವಿರುವುದು, ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ಗುರುಹಿರಿಯರಲ್ಲಿ ವಿಧೇಯತೆ – ಇವೆಲ್ಲಾ ದೇಶಿಕರಿಗೆ ವಂಶಪಾರಂಪರ್ಯವಾಗಿ ಬಂದಿರುವ ಸದ್ಗುಣಗಳು.

ಮೇಲುಕೋಟೆಯಲ್ಲಿ ಕಿಡಾಂಬಿ ಹಾಗು ಮುಡುಂಬೈ ವಂಶಜರು ವ್ಯಾಪಿಸಿರುವರು. ಮುಡುಂಬೈ ನಂಬಿಯವರ ಸಂತತಿಯಲ್ಲಿ ಬರುವವರೇ, ಶ್ರೀ ಕೃಷ್ಣಪಾದರು ಅಥವಾ ವಡಕ್ಕು ತಿರುವೀದಿ ಪಿಳ್ಳೈ. ಪಿಳ್ಳೈಲೋಕಾಚಾರ್ಯ, ಅಳಹಿಯ ಮನವಾಳ ಪೆರುಮಾಳ್ ನಯನಾರ್, ದೇಶಿಕರ ಸಮಕಾಲೀನರು.

ಅಣ್ಣಾದೂರ್ ಗ್ರಾಮದ ಮಾಧವಾಚಾರ್ಯ 'ಈಯುಣ್ಣಿ' ವಂಶದ ಮೂಲಪುರುಷರು. ಈ ಪದಕ್ಕೆ ಇಂದಿನ ಪರಿಸ್ಥಿತಿಯಲ್ಲಿ 'ದಾಸೋಹ' ಎಂಬ ಅರ್ಥವಿದೆ. ಭಕ್ತರನ್ನು ಕೈಬೀಸಿ ಕರೆದು ಅನ್ನದಾನ ಮಾಡುವ ಸಕ್ರಿಯೆಯೇ ಇದಾಗಿದೆ. ಪರಕಾಲ ಮಠದ ಶಿಷ್ಯರಲ್ಲಿ ವರದತ್ರಯರಲ್ಲಿ ಒಬ್ಬರಾದ ಆಸ್ಥಾನ ವಿದ್ವಾನ್ ಧರ್ಮಾಧಿಕಾರಿ ವರದಾಚಾರ್ಯರು ಈ ವಂಶಜರೇ.

ದೇಶಿಕರ ಜ್ಞಾನಪುತ್ರರಾಗಿದ್ದ ಕೌಂಡಿನ್ಯ ಗೋತ್ರದ ಪೇರರುಳಾಳ್ಕೈಯ್ಯನ್ – ಪ್ರಥಮ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು. ಪರಕಾಲ ಮಠ, ಅಹೋಬಿಲ ಮಠ ಹಾಗು ವಾನಮಾಮಲೈ ಮಠಗಳು ಅಸ್ತಿತ್ವಕ್ಕೆ ಬರಲು ಇವರು ಕಾರಣರಾಗಿದ್ದಾರೆ. ಬಹುಶಃ ಇವರಿಗಿದ್ದಷ್ಟು ಶಿಷ್ಯ ಸಂಪತ್ತು ಬೇರಾವ ಯತಿಗಳಿಗೂ ಇಲ್ಲವೆಂದರೆ ತಪ್ಪಾಗಲಾರದು. ದೇಶಿಕರಲ್ಲಿ ಇಟ್ಟಿದ್ದ ಇವರ ಆಚಾರ್ಯನಿಷ್ಠೆಗೆ ಸಮನಾದುದು ಬೇರೊಂದಿಲ್ಲ. ಇವರ ವ್ಯಕ್ತಿತ್ವ ಅನುಷ್ಠಾನಗಳು ಇತರ ಮತಧರ್ಮಗಳನ್ನೂ ಆಕರ್ಷಿಸಿದುವು.

ಈ ಮಹಾ ಗೋತ್ರದಲ್ಲಿ ಜನಿಸಿದ ಮತ್ತೊಬ್ಬ ಮಹನೀಯರು ವಡುಗ ನಂಬಿ ಅಥವಾ ಆಂಧ್ರಪೂರ್ಣರು. ರಾಮಾನುಜರನ್ನು ದೈವವೆಂದೇ ಪೂಜಿಸುತ್ತಿದ್ದರು. ಕರ್ನಾಟಕದ ಸಾಲಿಗ್ರಾಮ ಕ್ಷೇತ್ರದ ರಾಮಾನುಜ ಮಂಟಪದಲ್ಲಿರುವ ತೀರ್ಥಕೊಳದ ಸ್ವಾಮಿತ್ವ ಹಾಗು ಆರಾಧನ ಕೈಂಕರ್ಯ ಈ ವಂಶದವರಿಗೆ ಪರಂಪರೆಯಾಗಿ ಬಂದಿರುತ್ತದೆ. ಇದೇ ಗೋತ್ರದ ಈಚ್ಚಂಬಾಡಿ ಕುಲದ ಕವಿರತ್ನ, ವೇದಸಾರಜ್ಞ ಹರಿಹರಪುರಂ ಗೋಪಾಲಾಚಾರ್ಯರೇ ಶ್ರೀಮತ್ ಮೈಸೂರು ಆಂಡವನ್. ಇವರ ಸೋದರರು ಶ್ರೀನಿವಾಸಾಚಾರ್ಯರು ಸೋಸಲೆ ವಾದ್ಯಾರ್ ಎಂದೇ ಪ್ರಸಿದ್ಧವಾಗಿದ್ದರು. ಈಚ್ಚಂಬಾಡಿ ಆಚ್ಚಾನ್ ಸಿಂಹಾಸನಾಧಿಪತಿಗಳಲ್ಲಿ ಒಬ್ಬರು. ಈ ಕುಲದ ಅನೇಕರು ಇಂದು ಉಪಾಧ್ಯಾಯವೃತ್ತಿಯಲ್ಲಿ ತೊಡಗಿದ್ದಾರೆ.

ಅಭಿನವ ರಾಮಾನುಜ ಸ್ವಾಮಿಗಳು ಶಠಮರ್ಷಣ ಗೋತ್ರದ ತಿರುಮಲೈ ವಂಶದವರು. "ನಮ್ಮ ಆಸ್ಥಾನಕ್ಕೇ ಏಕೆ ನಮ್ಮಪ್ಪನಾದ ಹಯಗ್ರೀವನು ಬಂದು ನೆಲೆಸಿದ?" ಎಂದು ಒಮ್ಮೆ ಪ್ರಶ್ನಿಸಿದರು. ಅದ್ಭುತ ಉತ್ತರ ಅವರಿಂದಲೇ ಬಂದಿತು – "ಪ್ರಥಮಾಚಾರ್ಯ ಬ್ರಹ್ಮತಂತ್ರ ಸ್ವಾಮಿಗಳು ಸಮರ್ಪಣಭಾವದಿಂದ ಶ್ರೀವೈಷ್ಣವಕುಲಾಚಾರ್ಯರಾದ ದೇಶಿಕರನ್ನು ದೈವಕ್ಕಿಂತ ಮಿಗಿಲಾದವರೆಂದು ಸಂಕಲ್ಪಿಸಿ ಅವರ ಪಾದದ್ವಯದಲ್ಲಿ ಸರ್ವಸ್ವವನ್ನೂ ಸಮರ್ಪಿಸಿದರು. ಮುದಲಾಳ್ವಾರರನ್ನು ತಾನಾಗಿಯೇ ಕಂಡ ತ್ರಿವಿಕ್ರಮನಂತೆ ಹಯಾಸ್ಯನು ಇವರೊಂದಿಗೆ ಆಸ್ಥಾನದಲ್ಲಿ ನೆಲೆಸಲು ಸಂಕಲ್ಪಿಸಿದ. ಸದಾಚಾರನಿಷ್ಠರ ಸಮುದಾಯ, ಸದ್ವಂಶೀಯರು, ಚತುಶ್ಶಾಸ್ತ್ರಜ್ಞರು, ಕಾಲಕ್ಷೇಪ–ಉಪನ್ಯಾಸ ನಿಪುಣರು, ಉಭಯವೇದಾಂತ ಪಂಡಿತರು, ಕವಿಗಳು, ಉತ್ತಮ ಕೈಂಕರ್ಯ ಪರಿವಾರ, ಏಕೋದೇವೋಪಾಸಕ ಜ್ಞಾನಿಗಳು ಇಲ್ಲಿರುವರು ಎಂದು ತಿಳಿದ ಹಯಾಸ್ಯನು ಬೇರೆಲ್ಲೂ ಹೋಗಲಿಲ್ಲ" ಎಂದು ಹೇಳಿದಾಗ ಎಲ್ಲರೂ ವಿಸ್ಮಿತರಾದರು. ತಿರುಮಲೈ ಶ್ರೀನಿವಾಸಾಚಾರ್ಯರಿಂದ ಬಂದ "ಕವಿಕಥಕ–ಕಂಠೀರವ–ಚರಣನಳಿನಯುಗಳ–ವಿನ್ಯಸ್ತಸಮಸ್ತಾತ್ಮಭರ" ಎಂಬ ಬಿರುದು ಇಲ್ಲಿ ಗಮನಾರ್ಹ. ಅಷ್ಟಾಂಗಯೋಗವಿಜ್ಞಾನ ಮಂದಿರದ ಆಚಾರ್ಯರೂ, ಉಭಯವೇದಾಂತ ಪ್ರವರ್ತಕರೂ ಆದ ಶ್ರೀಮತ್ ಶ್ರೀ ರಂಗಪ್ರಿಯ ಮಹಾ ದೇಶಿಕರೂ ಪೂರ್ವಾಶ್ರಮದಲ್ಲಿ ಶಠಮರ್ಷಣ ಗೋತ್ರದ ತಿರುಮಲೈ ವಂಶಜರು.

ಕಂದಾಡೈ – ಅ) ಗಂಧವಸ್ತ್ರದ ಹೊದಿಕೆಯಿದ್ದ ಬುಟ್ಟಿಯೊಂದರಲ್ಲಿ ಬಂದ ಪೆರಿಯಕೋಯಿಲ್ ಪ್ರಸಾದವನ್ನು ರಾಮಾನುಜರು ದಾಶರಥಿಗೆ ಕೊಟ್ಟರು. ಬಹಳ ವರ್ಷಗಳಾದರೂ ಪುತ್ರಸಂತಾನವಿಲ್ಲದಿದ್ದ ದಾಶರಥಿಗೆ ಈ 'ಗಂಧ–ಆಡೈ (ಕಾಲಕ್ರಮದಲ್ಲಿ ಕಂದಾಡೈ)' ಯೋಗದಿಂದ ಸಂತಾನಪ್ರಾಪ್ತವಾಯಿತು. ಆ) ಇದು ಆಂಧ್ರಪ್ರದೇಶದ ಒಂದು ಸಣ್ಣ ಗ್ರಾಮ. ಇಲ್ಲಿಯ ವಾಧೂಲನಾಥ ಎಂದು ಕರೆಯಲ್ಪಡುವ ಆನಂದದೀಕ್ಷಿತರೇ ಮೂಲಪುರುಷರು. ಕಾಲಕ್ರಮೇಣ ರಾಮಾನುಜರ ಸೋದರಿ ಭೂಮಾದೇವಿಯರನ್ನು ಲಗ್ನವಾದರು. ಇವರ ಪುತ್ರರೇ ದಾಶರಥಿ. ಇವರನ್ನು ರಾಮಾನುಜರು ಶ್ರೀರಂಗಕ್ಷೇತ್ರದ ಶ್ರೀಕಾರ್ಯದುರಂಧರರನ್ನಾಗಿ ನೇಮಿಸಿದರು. ಹತ್ತು ವಿವಿಧ ಭಾಗಗಳ ಪರಿಜನರ ತಂಡಗಳು ಇವರ ನಿಯಂತ್ರಣೆ ಹಾಗು ಆಧಿಪತ್ಯಕ್ಕೆ ಒಳಪಟ್ಟಿದ್ದರಿಂದ "ಮುದಲಿ, ಸೇನಾಪತಿ" ಎಂದೂ ಉಚ್ಚಸ್ಥರ ಆಧಿಕಾರದಿಂದ ಆಂಡಾನ್ ಎಂದೂ ಕರೆಯಲ್ಪಟ್ಟರು. ಆದ್ದರಿಂದ ಮುದಲಿಯಾಂಡಾನ್ ಎಂದು ಹೆಸರಾಯಿತು. ಆಚಾರ್ಯಪುರುಷಾಗ್ರೇಸರರಾಗಿ ಕೋಯಿಲಿನ ಸಂಪೂರ್ಣ ಪಾರುಪತ್ಯ ಇವರದಾಗಿತ್ತು. ಇವರ ಪುತ್ರರೇ ಕಂದಾಡೈ ಆಂಡಾನ್. ಆಲಯಾಡಳಿತವು ಎರಡು ಶತಮಾನಗಳ ಕಾಲ ಚೆನ್ನಾಗಿಯೇ ನಡೆಯಿತು. ಈ ಪರಂಪರೆಯಲ್ಲಿ ಬಂದವರು – ಅ) ಕಂದಾಡೈ ಎಂಬಾರ್ ವಾಧೂಲ ದೇಶಿಕ, ಸ್ವಾಮಿ ದೇಶಿಕರ ೧೨ ಪ್ರಮುಖ ಶಿಷ್ಯರಲ್ಲೊಬ್ಬರು. ಇನ್ನೊಬ್ಬ ಶಿಷ್ಯ ತೀರ್ಥಪಿಳ್ಳೈ – ಕಂದಾಡೈ ಲಕ್ಷ್ಮಣಾಚಾರ್ಯರ ಪುತ್ರ. ಆ) ಕಂದಾಡೈ ತೋಳಪ್ಪರ್

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವೆಂಕಟನಾಥ, ಧರ್ಮ ಶಾಸ್ತ್ರಜ್ಞರು. ಇವರಿಂದ ತೋಳಪ್ಪರ್ ಸಂಪ್ರದಾಯವು ಉದಯಿಸಿತು. ದುರದೃಷ್ಟವಶಾತ್ ಮ್ಲೇಚ್ಛರ ಹಾವಳಿಯಿಂದ ಕೋಯಿಲಿನ ಆಡಳಿತ ಚೂರಾಯಿತು. ಮೂವತ್ತು ವರ್ಷಗಳ ಕಾಲ ಕೋಯಿಲ್ ಮುಚ್ಚಲ್ಪಟ್ಟಿತು. ಮನವಾಳಮಾಮುನಿಗಳ ಕಾಲಕ್ಕೆ ಇವರ ಶಿಷ್ಯರಲ್ಲಿ ಒಬ್ಬರಾದ ವೆಂಕಟನಾರಾಯಣಗುರು ಅಥವಾ ಅಣ್ಣಾವಿಲಪ್ಪನ್ ಎಂಬುವರನ್ನು ಕಂದಾಡೈ ಕೋಯಿಲ್ ಅಣ್ಣನ್ ಎಂದು ಕರೆದು ಆಲಯಾಡಳಿತವನ್ನು ಅವರಿಗೆ ವಹಿಸಿಕೊಡಲಾಯಿತು. ಇದೇ ವಂಶದವರು ಇಂದಿಗೂ ಆಲಯ ಕೈಂಕರ್ಯವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಕಂದಾಡೈ ವಂಶಜರಿಗೆ ಬೆಟ್ಟದ ನೃಸಿಂಹದೇವರೇ ಕುಲದೈವ. ಮಹಾಚಾರ್ಯ ದೊಡ್ಡಯ್ಯಾಚಾರ್ಯರ ಕುಲದೈವ ಘಟಿಕಾಚಲದ ಯೋಗಾನೃಸಿಂಹಸ್ವಾಮಿ. ಈ ಲೇಖಕನ ಕುಲದೈವವೂ ಕರಿಗಿರಿಯ ಯೋಗ-ಭೋಗ ಲಕ್ಷ್ಮೀ-ನೃಸಿಂಹಸ್ವಾಮಿ. ಪರಕಾಲ ಆಸ್ಥಾನದ ರೀವಾ ಸ್ವಾಮಿಯೆಂದು ಕರೆಯಲ್ಪಡುವ ಶ್ರೀಮದ್ರಂಗನಾಥಬ್ರಹ್ಮತಂತ್ರಸ್ವತಂತ್ರಪರಕಾಲಸ್ವಾಮಿ ಹಾಗು ಅಭಿನವ ಶ್ರೀನಿವಾಸಬ್ರಹ್ಮತಂತ್ರಸ್ವತಂತ್ರಪರಕಾಲಸ್ವಾಮಿಗಳು ಇದೇ ವಂಶಜರು ಹಾಗು ಗೋತ್ರಜರು. ಅಭಿನವ ವಸಿಷ್ಠರೆಂದು ಬಿರುದಾಂಕಿತರಾದ ಪರವಾಕೋಟ್ಟೈ ಸ್ವಾಮಿಗಳಾದ ಶ್ರೀರಂಗಂ ಪೌಂಡರೀಕಪುರಂ ಶ್ರೀಗೋಪಾಲದೇಶಿಕ ಮಹಾದೇಶಿಕರು, ಈ ಸದ್ವಂಶೀಯರೇ. ತುಂಬಾ ಕಟ್ಟುನಿಟ್ಟಾದ ಆಚಾರ ವ್ಯವಹಾರಗಳನ್ನು ನಡೆಸಿಕೊಂಡು ಬಂದು ಆಶ್ರಮವನ್ನು ಶಿಸ್ತಿನಸಿಪಾಯಿಯಂತೆ ಮಾಡಿದ್ದಾರೆ. ಪಾದಚಾರಿ ಸಂಚಾರ ಪದ್ಧತಿ ಇವರದು. ವೇದಪ್ರಗತಿಗಾಗಿ ಸಂಸ್ಕೃತ ಪಾಠಶಾಲೆಯೊಂದನ್ನು ಸ್ಥಾಪಿಸಿರುವರು.

ಕೌಶಿಕ ಗೋತ್ರಜರಲ್ಲಿ ಸ್ವಚ್ಛಂದಂ ಮನೆತನದವರ ಪೈಕಿ ಇಂದಿನ ಪರಕಾಲಸ್ವಾಮಿಗಳಾದ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳೂ ಒಬ್ಬರು. ಪೂರ್ವಾಶ್ರಮದಲ್ಲಿ ಅ) ಎಲ್ಲಾ ಮಠದ ಶಿಷ್ಯರುಗಳಿಗೆ ಇವರು ಸನ್ಯಾಸಿ ಮಾಮ, ಆ) ಇವರ ಮನೆಯ ಸುತ್ತಮುತ್ತಲಿನವರೆಗೆ ಇವರು ಜೋಯಿಸರು. ಇ) ಬಂಧುಬಳಗದವರಿಗೆ ದೊಚ್ಚು ಅಣ್ಣ, ಶಿತ್ಯ, ಮಾಮ ಎಂದೇ ಚಿರಪರಿಚಿತರಾಗಿರುತ್ತಾರೆ. ದಿನಚರಿಯು ಪ್ರಾತಃಕಾಲದ ದೀರ್ಘಧ್ಯಾನ ತಪಸ್ಸಿನೊಂದಿಗೆ ಆರಂಭವಾಗುವುದು. ಮೂರ್ತರೂಪ ಧ್ಯಾನದಲ್ಲಿ ಭಗವಂತನ ಪ್ರತಿಯೊಂದು ಅವಯವಗಳನ್ನೂ ದಿವ್ಯಾಯುಧಗಳನ್ನೂ ಮೌನವಾಗಿ ಧ್ಯಾನ ಮಾಡಿ, ಭಗವಂತನಲ್ಲಿ ತದ್ಭಾವವನ್ನು ಹೊಂದುವ ಮಹಾಮುನಿಗಳಾಗಿರುತ್ತಾರೆ. ಇವರಲ್ಲಿರುವ ಸಿದ್ಧಿ ಶಕ್ತಿಗಳನ್ನು ಕಂಡ ತಿರುಕ್ಕುಡಂದೈ ಆಂಡವನ್ (ಕಣ್ಣನ್ ಸ್ವಾಮಿಗಳು) ಹಠಾತ್ತನೆ ಇವರ ಪೂರ್ವಾಶ್ರಮ ಗೃಹಕ್ಕೆ ಬಂದು ಪ್ರಾಚೀನವಾದ ಮತ್ಸ್ಯ ಸಾಲಿಗ್ರಾಮವನ್ನು ತೆಗೆದುಕೊಂಡು "ನಮ್ಮ ಆಶ್ರಮದ ಶ್ರೀಮಂತಿಕೆಗಾಗಿ ಒಯ್ಯುತ್ತಿದ್ದೇನೆ" ಎಂದು ಹೇಳಿದರು.

ಹಾಸನ ಜಿಲ್ಲೆಯ ಹುಲಿಕಲ್, ಹುಲುಗುಂಡಿ, ಕಣಿಯಾರ್, ಬಯಲಹಳ್ಳಿ, ಮಗ್ಗೆ, ರಾಮನಾಥಪುರ, ಮಾದೀಹಳ್ಳಿ, ಗದ್ವಳ್ಳಿ, ಸಾಲಗ್ರಾಮ ಮುಂತಾದ ಊರುಗಳನ್ನೊಳಗೊಂಡ ಪಶ್ಚಿಮದೇಶ ಎಂದರೆ ಅನುಪಮ ಭಕ್ತಿ, ಶ್ರದ್ಧೆ, ನಿಷ್ಠೆ, ಸಹಕಾರ, ಸೌಹಾರ್ದತೆಗಳ ಸಂಕೇತ ಎಂದರ್ಥ. ವಾಮನ ಮಹರ್ಷಿಗಳ ಪಾದಾರ್ಪಣೆಯಿಂದ ಪವಿತ್ರವಾದ ದಿವ್ಯಸ್ಥಳಾದರ್ಶಗಳಿವು. ರಾಮಾನುಜರ ಕುಲಕ್ಕೆ ಸೇರಿದವರು ಸೋಮಾಶಿಯಾಂಡಾನ್, ಸೋಮಯಾಜೀ ಮನೆತನದವರು. ರಾಮಮಿಶ್ರರು ಈ ಪರಂಪರೆಯನ್ನೂ, ರಾಮಾನುಜ ಸಿದ್ಧಾಂತವನ್ನೂ ಪ್ರಚುರಪಡಿಸಿದರು. ಮೇಘನಾಥಸೂರಿ, ಗೋವಿಂದ ಭಗವಾನ್ ಮುಂತಾದ ಮಹನೀಯರು ಇಲ್ಲಿ ಶ್ರಮಿಸಿರುತ್ತಾರೆ. ಆನ್ವಯಕ್ಕಾಗಿ ಈ ವಂಶದವರು ಇಂದು ಎಲ್ಲಾ ಮಠಾಶ್ರಮಗಳಲ್ಲಿ ವ್ಯಾಪಿಸಿರುವರು. ಪಿಳ್ಳೈ ಲೋಕಾಚಾರ್ಯರ ಮೂಲಕ ಹರಿದುಬಂದ ಪರಂಪರೆಗಳು, ಮನವಾಳ ಮಾಮುನಿಗಳ ಮೂಲಕ ಮುಂದುವರೆದು, ಯತಿರಾಜಮಠ, ವಾನಮಾಮಲೈ ಮಠ, ಶ್ರೀರಂಗಜೀಯರ್ ಮಠ, ತಿರುಪತಿ ಜೀಯಂಗಾರರ ಮಠ ಮತ್ತಿತರ ಆಶ್ರಮಗಳು ಶ್ರೀವೈಷ್ಣವ ಮತಧರ್ಮದಲ್ಲಿ ರಾರಾಜಿಸುತ್ತಿವೆ. ಈ ಪರಂಪರೆಯಲ್ಲಿ ಆಯೀ ಮತ್ತು ಶೋಳೀ ವಂಶಗಳು, ಮಂಡಯಂ ಸಮುದಾಯದಲ್ಲಿ ಆಜಿ ಮತ್ತು ಕನ್ನಿ ವಂಶಗಳು ವ್ಯಾಪಿಸಿವೆ. ಶೋಳೀಯರು ಮೂಲವಾಗಿ ಆಳ್ವಾರ್ ತಿರುನಗರಿಯಿಂದ ಬಂದ ಪರಶ್ಮಿಖಿಗಳು. ಐವತ್ತಿಬ್ಬರ್ ಎಂಬ ಮೇಲುಕೋಟೆಯ ಆಲಯ ಕೈಂಕರ್ಯಪರರಲ್ಲಿ ಈ ಪಂಗಡವು ಸೇರಿದೆ. ಕೀಳ್ ನಾಟ್ಟಾರ್ ಅಂಬುದು ಪ್ರಾಂತ್ಯಾಧಾರಿತವಾದ ಒಂದು ದೊಡ್ಡ ಬುಡಕಟ್ಟು.

ಇಂದು ಕೌಟುಂಬಿಕ ವ್ಯವಸ್ಥೆ ತೀರ ಬದಲಾಗಿದೆ. ಮಿಶ್ರಜಾತಿ ವ್ಯವಸ್ಥೆಯಲ್ಲಿ ಕರ್ಮಾನುಷ್ಠಾನ ಬೇರೆಯಾಗಿರುವುದು. ಅಹಿತಕರ ಆಚಾರ ಹಾಗು ಕೆಳಮಟ್ಟದ ವೃತ್ತಿಯಿಂದ ಕುಟುಂಬ ಗೌರವಕ್ಕೆ ಧಕ್ಕೆ ಬರುವುದು. ವಿದ್ಯಾಭ್ಯಾಸದ ನೆವದಲ್ಲಿ ಚಿಕ್ಕಂದಿನಿಂದಲೇ ದುರಾಚಾರಗಳು ಜೀವನದಲ್ಲಿ ಪ್ರವೇಶಿಸುತ್ತವೆ. ಕಲಿಪ್ರಭಾವದಿಂದ ಬ್ರಾಹ್ಮಣ್ಯದ ಗುಣಮಟ್ಟ ಇಳಿಮುಖವಾಗಿದೆ. ಕೇವಲ ಉಪನಯನ ಸಂಸ್ಕಾರದಿಂದಲೇ ಬ್ರಾಹ್ಮಣ್ಯದ ಗುರುತು ಸಿಗುವುದು. ವೇದಾಧ್ಯಯನ, ಅಧ್ಯಾಪನಗಳು ಆನುಶಂಗಿಕವಾಗಿವೆ. ಶಿಷ್ಟಾಚಾರ ಪರಿಪಾಲನೆ ಇಲ್ಲದಿದ್ದರೆ ನೈತಿಕ ತಳಹದಿ ಕುಸಿದಂತೆಯೇ. ಆದು ಹೇಗೇ ಇರಲಿ, ತಾಳ್ಮೆ ಮತ್ತು ವಿವೇಕವೇ ಬ್ರಾಹ್ಮಣನ ಸಂಪತ್ತು ಎಂಬ ನೀತಿಯಿಂದಲೇ ಸದ್ವಂಶೀಯ ಮಹನೀಯರಿಂದಲೇ ಸತ್ಸಂಪ್ರದಾಯವು ಮುಂದುವರೆಯುತ್ತಿರುವುದು.

ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕಾಯ ನಮಃ
ಶ್ರೀಮದಭಿನವ ಶ್ರೀನಿವಾಸ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕಾಯ ನಮಃ
ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕಾಯ ನಮಃ
ಶ್ರೀಲಕ್ಷ್ಮೀಹಯಗ್ರೀವ ದಿವ್ಯಪಾದುಕಾಸೇವಕ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕಾಯ ನಮಃ

ಗೋವಿಂದಾಚಾರ್ಯ ರಾಮಾನುಜ ದಾಸ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವೇದಾರ್ಥಸಂಗ್ರಹದಲ್ಲಿ ತತ್ತ್ವಮಸಿ ವಾಕ್ಯಾರ್ಥವಿಚಾರ

ಶ್ರೀಮಾನ್ ಉ. ವೇ ಸ್ವಚ್ಛಂದಂ ಏ. ನರಸಿಂಹನ್
ಬೆಂಗಳೂರು

ವೇದಾರ್ಥಸಂಗ್ರಹವು ಭಗವದ್ರಾಮಾನುಜರ ಪ್ರಥಮ ಗ್ರಂಥ ಹಾಗೂ ಅತ್ಯಂತ ಪ್ರಮುಖವಾದ ಗ್ರಂಥ. ಇದು ಸಕಲ ವೇದಗಳ ಸಾರವಾದ ಅರ್ಥಗಳನ್ನು ಪ್ರತಿಪಾದಿಸುವ ಗ್ರಂಥ, ಆದ್ದರಿಂದ ಇದನ್ನು ವೇದಾಂತಾರ್ಥಸಂಗ್ರಹ ಎನ್ನದೆ ವೇದಾರ್ಥಸಂಗ್ರಹ ಎಂದು ಕರೆದಿರುವುದು ಬಹಳ ಅನ್ವರ್ಥವಾಗಿರುವುದು. ಈ ಗ್ರಂಥದಲ್ಲಿ ಭಗವದ್ರಾಮಾನುಜರು ತತ್ತ್ವಮಸಿ ವಾಕ್ಯಾರ್ಥವನ್ನು ಬಹಳ ವ್ಯಾಪಕವಾಗಿ ಪ್ರತಿಪಾದಿಸಿದ್ದಾರೆ.

ಈ ಗ್ರಂಥಕ್ಕೆ ಶ್ರೀ ಸುದರ್ಶನಸೂರಿಗಳು 'ತತ್ವದೀಪಿಕೆ' ಎಂಬ ಅದ್ಭುತವಾದ ವ್ಯಾಖ್ಯಾನವನ್ನು ಅನುಗ್ರಹಿಸಿದ್ದಾರೆ. ಶ್ರೀ ಸುದರ್ಶನಸೂರಿಗಳು ಭಗವದ್ರಾಮಾನುಜರ ಹೃದಯವನ್ನು ಚೆನ್ನಾಗಿ ಅರಿತು ಅನುಗ್ರಹಿಸಿರುವ ಈ ವ್ಯಾಖ್ಯಾನದಲ್ಲಿ ಅವರ ಅಭಿಪ್ರಾಯಗಳನ್ನು ವಿಸ್ತಾರವಾಗಿ ಸ್ಪಷ್ಟಪಡಿಸಿದ್ದಾರೆ. ಈ ಲೇಖನದಲ್ಲಿ ವೇದಾರ್ಥಸಂಗ್ರಹದಿಂದಲೂ ಮತ್ತು ತತ್ತ್ವದೀಪಿಕೆಯಿಂದಲೂ 'ತತ್ತ್ವಮಸಿ' ವಾಕ್ಯಾರ್ಥಕ್ಕೆ ಸಂಬಂಧಿಸಿದ ವಿಚಾರಗಳನ್ನು ಸಂಗ್ರಹಿಸಲು ಪ್ರಯತ್ನಿಸಲಾಗಿದೆ.

ಭಗವದ್ರಾಮಾನುಜರು ವೇದಾರ್ಥಸಂಗ್ರಹದ ಆರಂಭದಲ್ಲಿ ಸಕಲ ವೇದಾಂತವಾಕ್ಯಗಳ ತಾತ್ಪರ್ಯವನ್ನು ಒಂದು ಮಹಾವಾಕ್ಯದಲ್ಲಿ ಹೀಗೆ ಸಂಗ್ರಹಿಸುತ್ತಾರೆ: 'ಈ ಜೀವಾತ್ಮನು ಅನಾದಿಯಾದ ಅವಿದ್ಯೆಯಿಂದ ಸೇರಿಸಿದ ಪುಣ್ಯಪಾಪ ರೂಪವಾದ ಕರ್ಮಪ್ರವಾಹದ ಕಾರಣದಿಂದ ಬಂದ ಬ್ರಹ್ಮನೇ ಮೊದಲಾದ ದೇವ, ಮನುಷ್ಯ, ತಿರ್ಯಕ್ ಮತ್ತು ಸ್ಥಾವರಾತ್ಮಕವಾದ ನಾಲ್ಕು ವಿಧವಾದ ದೇಹಗಳ ಪ್ರವೇಶದಿಂದ ಉಂಟಾದ ಆಯಾ ದೇಹಗಳಲ್ಲಿನ ಆತ್ಮಾಭಿಮಾನದಿಂದ ಉಂಟಾದ, ತಪ್ಪಿಸಲಾಗದ ಸಂಸಾರದ ಭಯವನ್ನು ನಾಶಮಾಡಲು ದೇಹಕ್ಕಿಂತ ಬೇರೆಯಾದ ಆತ್ಮನ ಸ್ವರೂಪ, ಸ್ವಭಾವ, ಇವನಿಗೆ ಅಂತರ್ಯಾಮಿಯಾದ ಪರಮಾತ್ಮನ ಸ್ವರೂಪ, ಸ್ವಭಾವ, ಅವನ ಉಪಾಸನೆ, ಅದರ ಫಲವಾದ ತನ್ನ ಆತ್ಮಸ್ವರೂಪದ ಆವಿರ್ಭಾವದಿಂದ ಕೂಡಿದ ಅಳವಿಲ್ಲದ ಆನಂದವಾದ ಬ್ರಹ್ಮಾನುಭವವನ್ನು ತಿಳಿಸಿಕೊಡಲು ಹೊರಟಿರುವುದೇ ಎಲ್ಲ ವೇದಾಂತವಾಕ್ಯಗಳ ಸಮೂಹವು' ಎಂಬುದಾಗಿ.

ಈ ಮಹಾವಾಕ್ಯದ ತಾತ್ಪರ್ಯವನ್ನು ನಂತರ ಪ್ರಮಾಣಸಹಿತವಾಗಿ ನಿರೂಪಿಸುವಾಗ ಅನೇಕ ಶ್ರುತಿ ಮತ್ತು ಸ್ಮೃತಿಗಳ ವಾಕ್ಯಗಳನ್ನು ಉದಾಹರಿಸುತ್ತಾರೆ. ಈ ಉದಾಹರಣೆಗಳಲ್ಲಿ ಮೊಟ್ಟಮೊದಲಿನ ವಾಕ್ಯವೇ 'ತತ್ತ್ವಮಸಿ' ಎಂಬುದು. ಛಾಂದೋಗ್ಯೋಪನಿಷತ್ತಿನ ಸದ್ವಿದ್ಯಾಪ್ರಕರಣದಲ್ಲಿ ಉದ್ದಾಲಕರು ಶ್ವೇತಕೇತುವಿಗೆ ಮಾಡುವ ಉಪದೇಶದ ಉಪಕ್ರಮದಲ್ಲಿ 'ಉತ ತಮಾದೇಶಂ..ಯೇನ ಅಶ್ರುತಂ ಶ್ರುತಂ ಭವತಿ...' ಹಾಗೂ 'ಸದೇವ ಸೋಮ್ಯೇದಮಗ್ರ ಆಸೀತ್...ತದೈಕ್ಷತ ಬಹುಸ್ಯಾಂ ಪ್ರಜಾಯೇಯ' ಎಂಬ ಏಕವಿಜ್ಞಾನದಿಂದ ಸರ್ವವಿಜ್ಞಾನದ ಮತ್ತು ಸಂಕಲ್ಪ ಪೂರ್ವಕ ಸೃಷ್ಟಿ ವಾಕ್ಯಗಳೂ, ಪ್ರಕರಣದ ಮಧ್ಯದಲ್ಲಿ 'ಸನ್ಮೂಲಾ: ಸೋಮ್ಯೇಮಾ: ಸರ್ವಾ: ಪ್ರಜಾ: ಸದಾಯತನಾ: ಸತ್ಪ್ರತಿಷ್ಠಾ:' ಎಂಬ ವಾಕ್ಯವೂ ಮತ್ತು ಸದ್ವಿದ್ಯಾ ಪ್ರಕರಣದ ಉಪಸಂಹಾರದಲ್ಲಿ 'ಐತದಾತ್ಮ್ಯಮಿದಮ್ ಸರ್ವಮ್ ತತ್ಸತ್ಯಮ್ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ' ಎಂಬುದಾಗಿ ಈ ವಾಕ್ಯವು ಬರುತ್ತದೆ. ಸದ್ವಿದ್ಯಾ ಪ್ರಕರಣದ ಉಪಸಂಹಾರದಲ್ಲಿ ಬರುವ ಈ 'ತತ್ತ್ವಮಸಿ' ವಾಕ್ಯವು ವೇದಾರ್ಥಸಂಗ್ರಹದಲ್ಲಿ ಉಪಕ್ರಮದಲ್ಲಿಯೇ ಉದಾಹರಿಸಲ್ಪಟ್ಟಿರುವುದರಿಂದ ಈ ಗ್ರಂಥಕ್ಕೆ ಇದೇ ಮುಖ್ಯವಾದ ವಿಷಯವೆಂಬುದೂ ಸೂಚಿಸಲ್ಪಟ್ಟಿದೆ. ಈ ವಾಕ್ಯವನ್ನು ಪ್ರಥಮವಾಗಿ ಉದಾಹರಿಸಿರುವುದರಿಂದ ಇದು ಆರುವಿಧದ ತಾತ್ಪರ್ಯಲಿಂಗಗಳಿಗೆ ಅನುಗುಣವಾಗಿದೆ ಎಂಬುದು ತಿಳಿಯುತ್ತದೆ. ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತೆ, ಫಲ, ಪ್ರಶಂಸಾವಾಕ್ಯಗಳು ಇವುಗಳೆಲ್ಲವನ್ನೂ ಉಪಪತ್ತಿಗಳೊಡನೆ (ಸಕಾರಣವಾಗಿ) ನಿರೂಪಿಸುವುದೇ ತಾತ್ಪರ್ಯನಿರ್ಣಯಮಾಡುವ ಲಿಂಗಗಳು. ಆಪಾತತ: ಜೀವ-ಬ್ರಹ್ಮರ ಐಕ್ಯವನ್ನು ಹೇಳುವಂತಿರುವ ಈ ವಾಕ್ಯವನ್ನು ಇತರ ದರ್ಶನಗಳಲ್ಲಿ ಪ್ರಧಾನವಾಗಿ ತೆಗೆದುಕೊಂಡಿರುವುದರಿಂದ ಭಗವದ್ರಾಮಾನುಜರೂ ಸಹ ಈ ವಾಕ್ಯಕ್ಕೆ ವಿಸ್ತಾರವಾಗಿ ಶ್ರುತಿಗನುಗುಣವಾಗಿ ವ್ಯಾಖ್ಯಾನಮಾಡಿದ್ದಾರೆ.

ಭಗವದ್ರಾಮಾನುಜರು ತತ್ತ್ವಮಸಿ ವ್ಯಾಖ್ಯಾನದಲ್ಲಿ ಪ್ರತಿಪಾದಿಸಿರುವ ಕೆಲವು ಮುಖ್ಯವಾದ ವಿಷಯಗಳೆಂದರೆ:

- ತತ್ತ್ವಮಸಿ ವಾಕ್ಯವು ನಿರ್ವಿಶೇಷಪರವಲ್ಲ
- ತತ್ತ್ವಮಸಿ ವಾಕ್ಯವು ಚೇತನಾಚೇತನಗಳ ಬ್ರಹ್ಮಾತ್ಮಕತ್ವವನ್ನು ಪ್ರತಿಪಾದಿಸುತ್ತದೆ
- ತತ್ತ್ವಮಸಿ ವಾಕ್ಯದಲ್ಲಿ ಬ್ರಹ್ಮಾತ್ಮಕತ್ವವು ಶರೀರಾತ್ಮಭಾವದಿಂದ ಹೇಳಿದೆಯೇ ಹೊರತು ಸ್ವರೂಪೈಕ್ಯದಿಂದಲ್ಲ
- ತತ್ತ್ವಮಸಿ ವಾಕ್ಯದಲ್ಲಿ ಹೇಳಿರುವ ಸಾಮಾನಾಧಿಕರಣ್ಯವು ಶಬ್ದಗಳ ಬ್ರಹ್ಮಪರ್ಯಂತತ್ವವನ್ನು ತಿಳಿಸುತ್ತದೆ
- ತತ್ತ್ವಮಸಿ ವಾಕ್ಯದಲ್ಲಿ ಹೇಳಿರುವ ಸಾಮಾನಾಧಿಕರಣ್ಯಕ್ಕೆ ಮುಖ್ಯವೃತ್ತಿಯನ್ನೇ ಹೇಳಬೇಕು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

- **ತತ್ತ್ವಮಸಿ ವಾಕ್ಯಾರ್ಥದಲ್ಲಿ ಪರಪಕ್ಷದವರು ಹೇಳುವ ಸಾಮಾನಾಧಿಕರಣ್ಯವು ಸರಿಯಲ್ಲ**
- **ತತ್ತ್ವಮಸಿ ವಾಕ್ಯವು ಚಿದಚಿದಾತ್ಮಕವಾದ ಪ್ರಪಂಚವು ಬ್ರಹ್ಮದ ಪ್ರಕಾರವೆಂಬುದನ್ನೇ ತಿಳಿಸುತ್ತದೆ**

ಈಗ ಮೇಲಿನ ವಿಷಯಗಳನ್ನು ಹೇಗೆ ಭಗವದ್ರಾಮಾನುಜರು ಪ್ರಮಾಣಸಹಿತವಾಗಿ ನಿರೂಪಿಸುತ್ತಾರೆ ಎಂಬುದನ್ನು ನೋಡೋಣ.

೧. ತತ್ತ್ವಮಸಿ ವಾಕ್ಯವು ನಿರ್ವಿಶೇಷಪರವಲ್ಲ

ತತ್ತ್ವಮಸಿ ವಾಕ್ಯವನ್ನು ನಿರ್ವಿಶೇಷಪರವಾಗಿ ಹೇಳುವುದರಲ್ಲಿನ ಅನೇಕ ದೋಷಗಳನ್ನು ಮೊದಲು ತಿಳಿಸುತ್ತಾರೆ. ಮೊದಲು 'ತತ್' ಶಬ್ದದಿಂದ ತಿಳಿಯುವ ಗುಣಗಳಿಗೆ ಬಾಧೆಯನ್ನು ಹೇಳುತ್ತಾರೆ. ಉಪಕ್ರಮದ ಆರ್ಥವನ್ನು ವಿವೇಚಿಸಿದರೆ 'ತತ್' ಶಬ್ದವು ಗುಣವಿಶಿಷ್ಟವಾದುದನ್ನು ತಿಳಿಸುತ್ತದೆ. 'ತದೈಕ್ಷತ ಬಹುಸ್ಯಾಮ್', 'ಸನ್ಮೂಲಾ: ಸೋಮ್ಯ ಇಮಾ: ಸರ್ವಾ: ಪ್ರಜಾ: ಸದಾಯತನಾ: ಸತ್ಪ್ರತಿಷ್ಠಾ:' ಎಂಬುವು ಸ್ವಸಂಕಲ್ಪದಿಂದ ಎಂಬುದಾಗಿ ಗುಣವಿಶಿಷ್ಟತ್ವವನ್ನು ತಿಳಿಸುತ್ತದೆ. ಸೃಷ್ಟಿ, ಸ್ಥಿತಿ, ಲಯ ಮೊದಲಾದುದನ್ನು ತಿಳಿಸುವ ಈ ವಾಕ್ಯಗಳಿಂದ ಅನುಪ್ರವೇಶ, ನಾಮರೂಪವಿಭಾಗ ಮುಂತಾದವೂ ಹೇಳಿದಂತಾಯಿತು. 'ತತ್ಸಂಬನ್ಧಿತಯಾ ಪ್ರಕರಣಾಂತರನಿರ್ದಿಷ್ಟಾ: ಸರ್ವಜ್ಞತಾ ಸರ್ವಶಕ್ತಿತ್ವ ಸರ್ವಪ್ರಕಾರತ್ವ ಸಮಾಭ್ಯಧಿಕನಿವೃತ್ತಿ ಸತ್ಯಕಾಮತ್ವ ಸತ್ಯಸಂಕಲ್ಪತ್ವ ಸರ್ವಾವಭಾಸಕತ್ವಾದಿ ಅನವಧಿಕ-ಅತಿಶಯ-ಅಸಂಖ್ಯೇಯ ಕಲ್ಯಾಣಗುಣಗಣಾ 'ಅಪಹತಪಾಪ್ಮಾ' ಇತ್ಯಾದ್ಯನೇಕ ವಾಕ್ಯಾವಗತ ನಿರಸ್ತನಿಖಿಲದೋಷತಾ' (ವೇ.ಸಂ.-೯) ಎಂದು ಸರ್ವಶಾಖಾಪ್ರತ್ಯಯ ನ್ಯಾಯದಿಂದ ಬೇರೆಯ ಪ್ರಕರಣಗಳಲ್ಲಿ ಹೇಳಿರುವ ಸರ್ವಜ್ಞತ್ವ ಮೊದಲಾದ ಗುಣಗಳನ್ನೂ ಉದಾಹರಿಸುತ್ತಾರೆ. ಈ ಗುಣಗಳನ್ನು ಹೇಳುವ ವಾಕ್ಯಗಳು 'ಯ: ಸರ್ವಜ್ಞ: ಸರ್ವವಿತ್', 'ತಸ್ಯ ಭಾಸಾ ಸರ್ವಮಿದಂ ವಿಭಾತಿ' ಮುಂತಾದವು. ಈ ಒಂದೊಂದು ಗುಣಗಳೂ ಮಿಗಿಲಿಲ್ಲದ್ದು, ಅತಿಶಯಿತವಾದುದು ಮತ್ತು ಎಣಿಕೆಗೆ ಮೀರಿದ್ದುದೂ ಆಗಿದೆ. ದೋಷರಹಿತತ್ವವನ್ನು 'ಅಪಹತಪಾಪ್ಮಾ' ಮುಂತಾದವು ತಿಳಿಸುತ್ತವೆ. ಈ ಎಲ್ಲ ಗುಣಗಳೂ ಜಗತ್ತಿನ ಸೃಷ್ಟಿಗೆ ಉಪಯುಕ್ತವಾದುದೆಂದು ಬೇರೆ ಪ್ರಕರಣಗಳಲ್ಲಿ ಹೇಳಿದುದಾಗಿ ಇಲ್ಲಿ ಸಂಬಂಧಿಸುತ್ತವೆ. ಬ್ರಹ್ಮಕ್ಕೆ ಸಮವೂ ಅಧಿಕವೂ ಇಲ್ಲದುದರಿಂದ ಬ್ರಹ್ಮವೊಂದೇ ಜಗತ್ತಿಗೆ ಕಾರಣವೆಂಬುದು ಸಿದ್ಧಿಸುತ್ತದೆ. 'ಎಲ್ಲವನ್ನೂ ಪ್ರಕಾಶಪಡಿಸುವಿಕೆ' ಎಂಬ ಗುಣವು ಜಗತ್ತಿನ ಸ್ಥಿತಿಗೆ ಉಪಯುಕ್ತವಾದುದರಿಂದ ಜಗತ್ಕಾರಣತ್ವಕ್ಕೆ ಬೇಕಾದುದೇ ಆಗಿದೆ. ಹೇಯ ಪ್ರತ್ಯನೀಕತ್ವವೂ ಸೃಷ್ಟಿಗೆ ಉಪಯುಕ್ತವಾದುದೇ. ದೋಷವಿರುವುದಾದರೆ ಕರ್ಮವಶ್ಯತ್ವವು ಬರುವುದರಿಂದ ಸ್ವಾತಂತ್ರ್ಯಕ್ಕೆ ಭಂಗವುಂಟಾಗುವ ಪ್ರಸಂಗ ಬರುವುದು. ಈ ಎಲ್ಲ ಗುಣಗಳೂ ಜಗದೇಕಕಾರಣವಾದ ಬ್ರಹ್ಮವನ್ನು ಹೇಳುವ 'ತತ್' ಶಬ್ದದಿಂದ ತಿಳಿಯುವುದರಿಂದ, ಇವೆಲ್ಲವೂ ನಿರ್ವಿಶೇಷಬ್ರಹ್ಮವನ್ನು ಹೇಳುವ ಇತರ ಮತಗಳಲ್ಲಿ ನಾಶವಾಗುತ್ತವೆ.

೨. ತತ್ತ್ವಮಸಿ ವಾಕ್ಯವು ಚೇತನಾಚೇತನಗಳ ಬ್ರಹ್ಮಾತ್ಮಕತ್ವವನ್ನು ಪ್ರತಿಪಾದಿಸುತ್ತದೆ

ತತ್ತ್ವಮಸಿ ವಾಕ್ಯವು ಬ್ರಹ್ಮಾತ್ಮಕತ್ವವನ್ನೇ ಹೇಳುತ್ತದೆಂಬುದನ್ನು ಭಗವದ್ರಾಮಾನುಜರು ಹೀಗೆ ವಿವರಿಸಿದ್ದಾರೆ: 'ಏವಂ ಸಮಸ್ತಸ್ಯ ಚಿದಚಿದಾತ್ಮಕಸ್ಯ ಪ್ರಪಂಚಸ್ಯ ಸದುಪಾದನತಾ ಸನ್ನಿಮಿತ್ತತಾ ಸದಾಧಾರತಾ ಸನ್ನಿಯಾಮ್ಯತಾ ಸಚ್ಛೇಷತಾದಿ ಸರ್ವಂ ಚ 'ಸನ್ಮೂಲಾ: ಸೋಮ್ಯೇಮಾ: ಸರ್ವಾ: ಪ್ರಜಾ: ಸದಾಯತನಾ: ಸತ್ಪ್ರತಿಷ್ಠಾ:' ಇತ್ಯಾದಿನಾ ವಿಸ್ತರೇಣ ಪ್ರತಿಪಾದ್ಯ ಕಾರ್ಯಕಾರಣಭಾವಾದಿಮುಖೇನ 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಮ್' ಇತಿ ಕೃತ್ಸ್ನಸ್ಯ ಜಗತ: ಬ್ರಹ್ಮಾತ್ಮಕತ್ವಮೇವ ಸತ್ಯಮಿತಿ ಪ್ರತಿಪಾದ್ಯ, ಕೃತ್ಸ್ನಸ್ಯ ಜಗತ: ಸ ಏವ ಆತ್ಮಾ ಕೃತ್ಸ್ನಂ ಚ ಜಗತ್ ತಸ್ಯ ಶರೀರಮ್ । ತಸ್ಮಾತ್ ತ್ವಂ ಶಬ್ದವಾಚ್ಯಮಪಿ ಜೀವಪ್ರಕಾರಂ ಬ್ರಹ್ಮೈವೇತಿ ಸರ್ವಸ್ಯ ಬ್ರಹ್ಮಾತ್ಮಕತ್ವಂ ಪ್ರತಿಜ್ಞಾತಂ 'ತತ್ತ್ವಮಸಿ' ಇತಿ ಜೀವವಿಶೇಷೇ ಉಪಸಂಹೃತಮ್' ಎಂಬುದಾಗಿ. ಎಂದರೆ ಈ ಸಮಸ್ತ ಚಿದಚಿದಾತ್ಮಕವಾದ ಪ್ರಪಂಚಕ್ಕೂ ಸತ್ ಶಬ್ದವಾಚ್ಯವಾದ ಬ್ರಹ್ಮವೇ ಉಪಾದಾನಕಾರಣವೂ, ನಿಮಿತ್ತಕಾರಣವೂ, ಆಧಾರವೂ ಆಗಿ, ಆದರಿಂದಲೇ ಎಲ್ಲವೂ ನಿಯಮಿಸಲ್ಪಡುವುದಾಗಿ ಎಲ್ಲವೂ ಆದಕ್ಕೆ ಶೇಷಭೂತವಾದುದು ಎಂಬುದೆಲ್ಲವನ್ನೂ, 'ಎಲೈ ಸೋಮ್ಯನೇ, ಈ ಎಲ್ಲವೂ ಸತ್ ಎಂಬುದರಿಂದಲೇ ಹುಟ್ಟಿ, ಸತ್ ಅನ್ನೇ ಆಶ್ರಯವನ್ನಾಗಿ ಹೊಂದಿ, ಸತ್ ಎಂಬುದರಲ್ಲಿಯೇ ಹೋಗಿ ಸೇರುತ್ತವೆ' ಮುಂತಾದವುಗಳಿಂದ ವಿಸ್ತಾರವಾಗಿ ಪ್ರತಿಪಾದಿಸಿ, ಕಾರ್ಯ-ಕಾರಣ ಭಾವವೇ ಮೊದಲಾದವುಗಳ ಮೂಲಕ 'ಈ ಎಲ್ಲವೂ ಇದನ್ನು ಆತ್ಮವನ್ನಾಗಿ ಹೊಂದಿವೆ, ಇದು ಸತ್ಯವು' ಎಂದು ಈ ಸಮಸ್ತ ಜಗತ್ತೂ ಬ್ರಹ್ಮಾತ್ಮಕವೆಂಬುದೇ ಸತ್ಯವು ಎಂದು ಪ್ರತಿಪಾದನೆಮಾಡಿ, 'ಈ ಸಮಸ್ತ ಜಗತ್ತಿಗೂ ಅವನೇ ಆತ್ಮನು, ಈ ಸಕಲ ಜಗತ್ತೂ ಸಹ ಅವನ ಶರೀರವು, ಆದ್ದರಿಂದ ತ್ವಮ್ ಶಬ್ದದಿಂದ ಹೇಳಲ್ಪಡುವವನೂ ಸಹ ಜೀವನನ್ನು ಪ್ರಕಾರವನ್ನಾಗಿ ಉಳ್ಳ ಬ್ರಹ್ಮವೇ' ಎಂಬುದಾಗಿ ಎಲ್ಲವೂ ಬ್ರಹ್ಮಾತ್ಮಕವೇ ಎಂದು ಪ್ರತಿಜ್ಞೆಮಾಡಿದುದು 'ತತ್ತ್ವಮಸಿ' ಎಂಬುದಾಗಿ ಜೀವವಿಶೇಷನಲ್ಲಿ ಉಪಸಂಹಾರಮಾಡಲಾಗಿದೆ' ಎಂದು.

ಇಲ್ಲಿ 'ಸನ್ಮೂಲಾ:...' ಎಂಬುದರ ಆರ್ಥವನ್ನು ವಿವರಿಸುತ್ತಾರೆ. ಸನ್ಮೂಲಾ: ಎಂಬಲ್ಲಿ 'ಮೂಲ' ಶಬ್ದದ ಆರ್ಥವನ್ನು 'ಸದುಪಾದಾನತಾ ಸನ್ನಿಮಿತ್ತತಾ' ಎಂದು ವಿವರಿಸಿದ್ದಾರೆ. 'ಸದಾಯತನಾ:' ಎಂಬುದರ ಆರ್ಥ 'ಸದಾಧಾರತಾ' ಎಂಬುದು. ಈ ಧಾರಕತ್ವವು ನಿಯಮನ ಮಾಡುವುದರ ಮೂಲಕವಾದ್ದರಿಂದ ಇದಕ್ಕೆ 'ಸನ್ನಿಯಾಮ್ಯತಾ' ಎಂದೂ ಆರ್ಥ ಸಿದ್ಧವಾಗುತ್ತದೆ. ಇದರಿಂದಲೇ ಶೇಷತ್ವವೂ ಆರ್ಥಸಿದ್ಧವಾಗುತ್ತದೆ. ಈ ಶೇಷತ್ವವು ಶರೀರವಾಗುವುದರ ಮೂಲಕವೇ. ಏಕೆಂದರೆ ಶರೀರವೆಂದರೆ ಶೇಷವಾಗಿ, ಧಾರ್ಯವಾಗಿ, ನಿಯಾಮ್ಯವಾಗಿರುವುದೇ ಆದ್ದರಿಂದ. 'ಕಾರ್ಯಕಾರಣಾದಿಮುಖೇನ' ಎಂಬಲ್ಲಿ 'ಆದಿ' ಎಂಬುದರಿಂದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸದಾಧಾರತ್ವವೇ ಮುಂತಾದವು ಹೇಳಲ್ಪಟ್ಟಿದೆ. ಆದ್ದರಿಂದ ಬ್ರಹ್ಮಾತ್ಮಕತ್ವವೆಂಬುದೇ ಸತ್ಯವು ಎಂದು ಪ್ರತಿಪಾದಿಸಿರುವುದು. ಧಾರಕತ್ವವೇ ಮುಂತಾದವುಗಳಿಂದ ಶರೀರಾತ್ಮಭಾವವು ಫಲಿಸುವುದು. ಕಾರ್ಯಕಾರಣಭಾವದಿಂದಲೂ ಇದು ಸಿದ್ಧಿಸುವುದು. ಹೇಗೆಂದರೆ ಸ್ವರೂಪಮಾತ್ರವೇ ಕಾರಣವಾಗಲು ಸಾಧ್ಯವಿಲ್ಲದ್ದರಿಂದ ಮತ್ತು ವಿಶಿಷ್ಟವಾದುದೇ ಕಾರಣವಾದುದರಿಂದ. 'ಬ್ರಹ್ಮಾತ್ಮಕತ್ವಮೇವ' ಎಂಬಲ್ಲಿ 'ಏವ' ಎಂಬುದರಿಂದ ತಾನೂ ಬ್ರಹ್ಮಾತ್ಮಕವೇ ಎಂಬುದು ಪ್ರಾಮಾಣಿಕವೆಂದು ಹೇಳಿದಂತಾಯಿತು.

'ಐತದಾತ್ಮ್ಯಮ್' ಎಂದರೆ 'ಏತದಾತ್ಮಕಮ್' ಎಂದು. ಎಂದರೆ ಈ ಆತ್ಮಕ್ಕೆ ಸಂಬಂಧಿಸಿದುದು ಎಂದರ್ಥವಾಗುತ್ತದೆ. ಈ ಆತ್ಮನಿಗೆ ಶರೀರವಾಗುವುದರ ಮೂಲಕ ಸಂಬಂಧಿಸಿರುವುದು ಎಂದು ಹೇಳಿದಂತಾಯಿತು. ಇಲ್ಲಿ 'ಐತದಾತ್ಮ್ಯಮ್ ಇದಂ ಸರ್ವಮ್...ಸ ಆತ್ಮಾ' ಎಂದು ಹೇಳಿರುವುದು 'ರಾಮಾನುಜಂ ಲಕ್ಷ್ಮಣಪೂರ್ವಜಂ ಚ' ಎಂಬಂತೆ. 'ಆತ್ಮ' ಶಬ್ದದಿಂದ ಈ ಸಕಲ ಜಗತ್ತೂ ಅವನ ಶರೀರವು ಎಂಬ ಅರ್ಥವು ಸಿದ್ಧಿಸುವುದು. 'ಇವನ ತಂದೆ ಇವನು' ಎಂದಾಗ ತಂದೆಯ ಪ್ರತಿಯೋಗಿಗೆ ಪುತ್ರತ್ವವು ತಾನೇ ಸಿದ್ಧವಾಗುತ್ತದೆಯಲ್ಲ ಹಾಗೆ.

'ಐತದಾತ್ಮ್ಯಮ್' ಎಂಬುದರಿಂದ ಸಾಮಾನ್ಯವಾಗಿ ಬೇರೆ ಬೇರೆ ಅಧಿಕರಣದಲ್ಲಿರುವುದೆಲ್ಲವೂ ಬ್ರಹ್ಮಾತ್ಮಕವು ಎಂದು ಹೇಳಿದುದು 'ತತ್ತ್ವಮಸಿ' ಎಂದು ಸಾಮಾನಾಧಿಕರಣ್ಯದಿಂದ ಜೀವವಿಶೇಷನಲ್ಲಿ ಉಪಸಂಹಾರಮಾಡಲ್ಪಟ್ಟಿದೆ.

೩. ತತ್ತ್ವಮಸಿ ವಾಕ್ಯದಲ್ಲಿ ಬ್ರಹ್ಮಾತ್ಮಕತ್ವವು ಶರೀರಾತ್ಮಭಾವದಿಂದ ಹೇಳಿದೆಯೇ ಹೊರತು ಸ್ವರೂಪೈಕ್ಯದಿಂದಲ್ಲ

'ಐತದಾತ್ಮ್ಯಮ್ ಇದಂ ಸರ್ವಮ್' ಎಂಬಲ್ಲಿ ಚೇತನಾಚೇತನ ಪ್ರಪಂಚವನ್ನು 'ಇದಂ ಸರ್ವಮ್' ಎಂದು ನಿರ್ದೇಶಿಸಿ ಈ ಪ್ರಪಂಚಕ್ಕೆ ಇವನು ಆತ್ಮನು ಎಂದು ಪ್ರತಿಪಾದಿಸಲ್ಪಟ್ಟಿದೆ. ಎಂದರೆ ಪ್ರಪಂಚವನ್ನು ಉದ್ದೇಶಿಸುವುದರ ಮೂಲಕ ಬ್ರಹ್ಮಾತ್ಮಕತ್ವವು ಪ್ರತಿಪಾದಿಸಲ್ಪಟ್ಟಿದೆ ಎಂದರ್ಥವು. ಇಲ್ಲಿ ಎರಡು ಆಶಂಕೆಗಳು ಉಂಟಾಗುತ್ತವೆ:

೧. ಐತದಾತ್ಮ್ಯಮ್ ಎಂಬಲ್ಲಿಯೂ ಆತ್ಮ ಶಬ್ದವು 'ಘಟವು ಮೃದಾತ್ಮಕವಾದುದು' ಎಂಬಂತೆ ಸ್ವರೂಪೈಕ್ಯವನ್ನೇ ತಿಳಿಸುತ್ತದೆ. ಆದ್ದರಿಂದ ತತ್ತ್ವಮಸಿ ಎಂಬ ಉಪಸಂಹಾರವೂ ಸಹ ಸ್ವರೂಪೈಕ್ಯವೇ ಆಗುವುದು.

೨. 'ಐತದಾತ್ಮ್ಯಮಿದಂ ಸರ್ವಮ್' ಎಂಬಲ್ಲಿ ಅಚಿತ್ತಿಗೂ ಬ್ರಹ್ಮಕ್ಕೂ ಐಕ್ಯವು ಹೇಳಲ್ಪಟ್ಟಿದೆ. 'ತತ್ತ್ವಮಸಿ' ಎಂಬಲ್ಲಿ ಜೀವನಿಗೂ ಬ್ರಹ್ಮಕ್ಕೂ ಐಕ್ಯವು ಹೇಳಲ್ಪಟ್ಟಿದೆ. ಆದ್ದರಿಂದ ಇದು ಅನುವಾದವಲ್ಲವು.

ಈ ಆಶಂಕೆಗಳ ಹೀಗೆ ಪರಿಹರಿಸುತ್ತಾರೆ:

ಇಲ್ಲಿ 'ಇದಂ ಸರ್ವಮ್' ಎಂಬುದರಿಂದ ಚೇತನಾಚೇತನ ಪ್ರಪಂಚವು ಹೇಳಲ್ಪಟ್ಟಿದೆಯಾದ್ದರಿಂದ 'ಅಚೇತನ ಮತ್ತು ಬ್ರಹ್ಮದ ಐಕ್ಯ' ಎಂಬ ಶಂಕೆಯು ಪರಿಹರಿಸಲ್ಪಟ್ಟಿದೆ. ಏಕೆಂದರೆ 'ಸರ್ವ' ಶಬ್ದವು ಸಂಕೋಚವಿಲ್ಲದೆ ಪ್ರಮಾಣಾಂತರದಿಂದ ತಿಳಿಯಲ್ಪಡುವ ಎಲ್ಲ ಚೇತನ ಮತ್ತು ಅಚೇತನಾತ್ಮಕವಾದ ಜಗತ್ತನ್ನು ತಿಳಿಸುತ್ತದೆ. ಆದ್ದರಿಂದ ಅಚಿದಾತ್ಮಕಮಾತ್ರವೆಂದರೆ 'ಸರ್ವ' ಶಬ್ದದ ಸ್ವಾರಸ್ಯಕ್ಕೆ ಭಂಗವುಂಟಾಗುವುದು. ಶ್ರುತಿಯಲ್ಲಿ ಬೇರೆಡೆಯಲ್ಲಿಯೂ ಸಹ 'ಇದಂ ಸರ್ವಮ್ ಅಸೃಜತ' ಎಂದಾರಂಭಿಸಿ 'ಸಚ್ಚತ್ಯಚ್ಚಾಭವತ್', 'ವಿಜ್ಞಾನಂಚಾವಿಜ್ಞಾನಂಚ' ಎಂಬುದಾಗಿ 'ಇದಂ ಸರ್ವಮ್' ಎಂದು ಹೇಳಲ್ಪಟ್ಟ ಜಗತ್ತು ಚೇತನಾಚೇತನಾತ್ಮಕವಾಗಿ ಪರಿಣಾಮವಾಯಿತು ಎಂದು ಹೇಳಿರುವುದರಿಂದ. ಇಲ್ಲಿ 'ಐತದಾತ್ಮ್ಯಮ್' ಎಂಬಲ್ಲಿ ಯಾವುದು ಉದ್ದೇಶ್ಯವೆಂದರೆ ಪ್ರಪಂಚವೆಂಬುದಾಗಿ ತಿಳಿಸುತ್ತಾ ಎರಡನೆಯ ಶಂಕೆಯನ್ನು ಪರಿಹರಿಸುತ್ತಾರೆ, 'ಐತದಾತ್ಮ್ಯಮಿದಂ ಸರ್ವಮಿತಿ ಚೇತನಾಚೇತನ ಪ್ರಪಂಚಮ್ ಇದಂ ಸರ್ವಮ್ ಇತಿ ನಿರ್ದಿಶ್ಯ ತಸ್ಯ ಪ್ರಪಂಚಸ್ಯ ಏಷ ಆತ್ಮಾ ಇತಿ ಪ್ರತಿಪಾದಿತ: । ಪ್ರಪಂಚೋದ್ದೇಶೇನ ಬ್ರಹ್ಮಾತ್ಮಕತ್ವಮ್ ಇತ್ಯರ್ಥ:' ಎಂಬುದಾಗಿ.

ಈಗ ಆತ್ಮ ಶಬ್ದವು ಸ್ವರೂಪೈಕ್ಯವನ್ನು ತಿಳಿಸುವುದೆಂಬ ಶಂಕೆಯು ಪರಿಹರಿಸಲ್ಪಡುತ್ತದೆ. ಭಗವದ್ರಾಮಾನುಜರು ಹೇಳುತ್ತಾರೆ, 'ಅತ: ಸರ್ವಸ್ಯ ಚಿದಚಿದ್ವಸ್ತುನೋ ಬ್ರಹ್ಮಶರೀರತ್ವಾತ್ ಸರ್ವಶರೀರಂ ಸರ್ವಪ್ರಕಾರಂ ಸರ್ವೈ: ಶಬ್ದೈ: ಬ್ರಹ್ಮೈವಾಭಿಧೀಯತ ಇತಿ ತತ್-ತ್ವಮ್ ಇತಿ ಸಾಮಾನಾಧಿಕರಣ್ಯೇನ ಜೀವಶರೀರತಯಾ ಜೀವಪ್ರಕಾರಂ ಬ್ರಹ್ಮೈವಾಭಿಹಿತಮ್' ಎಂಬುದಾಗಿ. ಸ್ವರೂಪೈಕ್ಯವೆಂದು ಹೇಳಿದರೆ ಬ್ರಹ್ಮದ ಸತ್ಯಸಂಕಲ್ಪತ್ವವೇ ಮುಂತಾದವು ವಿರೋಧವಾಗುತ್ತದೆ. ಹೇಗೆಂದರೆ, ಅಚೇತನಕ್ಕೂ ಬ್ರಹ್ಮಕ್ಕೂ ಸ್ವರೂಪೈಕ್ಯವನ್ನು ಹೇಳಿದರೆ ಅಚೇತನವು ಸಂಕಲ್ಪಿಸಲು ಸಾಧ್ಯವಿಲ್ಲದ್ದರಿಂದ ವಿರೋಧವು. ಜೀವನಿಗೂ ಬ್ರಹ್ಮಕ್ಕೂ ಐಕ್ಯವನ್ನು ಹೇಳಿದರೆ ಜೀವನು ಕರ್ಮವಶ್ಯನಾದ್ದರಿಂದ ಸತ್ಯಸಂಕಲ್ಪವೇ ಮುಂತಾದುದಕ್ಕೆ ವಿರೋಧವು. ಈ ವಿರೋಧವನ್ನು ಪರಿಹರಿಸಲು ಶರೀರಾತ್ಮಭಾವವು ಹೇಳಲ್ಪಟ್ಟಿದೆ. ಇದು ಈ 'ಐತದಾತ್ಮ್ಯಮಿದಮ್' ಎಂಬ ಶ್ರುತಿಯ ಅರ್ಥಾಪತ್ತಿಯಿಂದ ಮಾತ್ರವೇ ಕಲ್ಪಿಸಲ್ಪಟ್ಟಿಲ್ಲವು. ಏಕೆಂದರೆ ಬ್ರಹ್ಮದ ಆತ್ಮತ್ವವೂ, ಜಗತ್ತು ಬ್ರಹ್ಮದ ಶರೀರವಾಗಿ ಇರುವಿಕೆಯೂ ಕಂಠೋಕ್ತವಾಗಿ ಹೇಳಲ್ಪಟ್ಟಿದೆ. ಈ ವಿಶೇಷವನ್ನು ತಿಳಿಸುವ ಶ್ರುತಿಗಳಾವುವೆಂದರೆ, 'ಅಂತ: ಪ್ರವಿಷ್ಟ: ಶಾಸ್ತಾ ಜನಾನಾಂ ಸರ್ವಾತ್ಮಾ, ಮೊದಲಾದುದು. ಇಲ್ಲಿ 'ಸರ್ವಾತ್ಮಾ' ಎಂಬುದಾಗಿ ಹೇಳಿರುವ ಆತ್ಮತ್ವವು ಪ್ರಶಾಸನ ಮಾಡುವುದರ ಮೂಲಕ ಆತ್ಮವೆಂಬುದನ್ನು ತಿಳಿಸುತ್ತದೆ. 'ಅಂತ: ಪ್ರವಿಷ್ಟ:' ಎಂಬುದರಿಂದ ಇದು ಲೋಕದ ರಾಜರುಗಳು ಮಾಡುವ ಪ್ರಶಾಸನವಲ್ಲ ಎಂಬುದು ತಿಳಿಯುತ್ತದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

'ಶಾಸ್ತಾ' ಎಂಬುದರಿಂದ ಆಕಾಶವೇ ಮುಂತಾದುವಲ್ಲ ಎಂಬುದು ತಿಳಿಯುತ್ತದೆ. ಆದ್ದರಿಂದ ಅಂತ:ಪ್ರವೇಶಮಾಡಿ ಪ್ರಶಾಸನಮಾಡುವುದರಿಂದ ಎಂದು ಅರ್ಥವು. ನಂತರ ಆತ್ಮತ್ವ, ಶರೀರತ್ವವು ಕಂಠೋಕ್ತವಾಗಿ ಹೇಳಿರುವ ಶ್ರುತಿಗಳು, 'ಯ ಆತ್ಮನಿ ತಿಷ್ಠನ್...' ಮುಂತಾದವು. ಹೀಗೆ ಶರೀರಾತ್ಮಭಾವದಿಂದ ಬ್ರಹ್ಮಾತ್ಮಕತ್ವವು ಸಿದ್ಧಿಸುತ್ತದೆ.

೪. ತತ್ತ್ವಮಸಿ ವಾಕ್ಯದಲ್ಲಿ ಹೇಳಿರುವ ಸಾಮಾನಾಧಿಕರಣ್ಯವು ಶಬ್ದಗಳ ಬ್ರಹ್ಮಪರ್ಯಂತತ್ವವನ್ನು ತಿಳಿಸುತ್ತದೆ

ಇದನ್ನು ಹೀಗೆ ಪ್ರತಿಪಾದಿಸುತ್ತಾರೆ: 'ತ್ವಂ' ಎಂಬುದರಿಂದ ಮೊದಲು ದೇಹಕ್ಕೆ ಅಧಿಷ್ಠಾತೃವಾಗಿ ಯಾರು ತಿಳಿಯಲ್ಪಟ್ಟನೋ ಅವನು ಪರಮಾತ್ಮನ ಶರೀರವಾಗುವುದರ ಮೂಲಕ ಪರಮಾತ್ಮನ ಪ್ರಕಾರಭೂತನಾಗಿ ಪರಮಾತ್ಮ ಪರ್ಯಂತನು. ಆದ್ದರಿಂದ 'ತ್ವಂ' ಎಂಬ ಶಬ್ದವು ಆ ಪ್ರಕಾರ ವಿಶಿಷ್ಟನಾದ ಆ ಅಂತರ್ಯಾಮಿಯನ್ನೇ ಹೇಳುವುದು. 'ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' ಎಂಬುದರಿಂದ ಬ್ರಹ್ಮಾತ್ಮಕನಾದುದರಿಂದಲೇ ಶರೀರಿಯಾದ ಜೀವನಿಗೆ ತನ್ನ ಹೆಸರು ಹೊಂದುವುದಾಗುತ್ತದೆ. ತತ್-ತ್ವಮ್ ಎಂದು ಸಮಾನವಾದ ಅಧಿಕರಣದಲ್ಲಿ ವೃತ್ತಿಯನ್ನು ಹೊಂದಿರುವ ಎರಡು ಪದಗಳಿಗೂ ಬ್ರಹ್ಮವೇ ವಾಚ್ಯವಾದುದು. ಅಲ್ಲಿ 'ತತ್' ಎಂಬ ಪದವು ಜಗತ್ಕಾರಣಭೂತನೂ, ಎಲ್ಲ ಕಲ್ಯಾಣಗುಣಗಳನ್ನುಳ್ಳವನೂ, ದೋಷಸ್ಪರ್ಶವಿಲ್ಲದವನೂ, ವಿಕಾರರಹಿತನೂ ಆದವನನ್ನು ಹೇಳುತ್ತದೆ. 'ತ್ವಮ್' ಎಂಬುವುದೂ ಸಹ ಆದೇ ಬ್ರಹ್ಮವನ್ನು ಜೀವನಿಗೆ ಅಂತರ್ಯಾಮಿಯಾಗಿ, ಶರೀರವನ್ನುಳ್ಳ ಜೀವನನ್ನು ಪ್ರಕಾರವಿಶಿಷ್ಟವಾಗಿ ಹೊಂದಿರುವುದನ್ನು ತಿಳಿಸುತ್ತದೆ. ಇದುವೇ ಹೀಗೆ ಪ್ರವೃತ್ತಿ ನಿಮಿತ್ತ ಭೇದದಿಂದ ಒಂದೇ ಬ್ರಹ್ಮನಲ್ಲಿಯೇ 'ತತ್' ಮತ್ತು 'ತ್ವಮ್' ಎಂಬ ಎರಡು ಪದಗಳಿಗೂ ವೃತ್ತಿಯು ಹೇಳಲ್ಪಟ್ಟಿದೆ. ಇದರಿಂದ ಬ್ರಹ್ಮದ ದೋಷರಹಿತತ್ವವೂ, ವಿಕಾರರಹಿತತ್ವವೂ, ಎಲ್ಲ ಮಂಗಳಗುಣಗಳಿಗೆ ಆಕರವಾಗಿರುವಿಕೆಯೂ, ಜಗತ್ಕಾರಣತ್ವವೂ ಸಹ ಬಾಧಿತವಾಗುವುದಿಲ್ಲವು.

ಭಗವದ್ರಾಮಾನುಜರು ಇದನ್ನೇ ಹೀಗೆ ಸ್ಪಷ್ಟಪಡಿಸುತ್ತಾರೆ, 'ಅಶ್ರುತವೇದಾಂತಾ: ಪುರುಷಾ: ಸರ್ವೇ ಪದಾರ್ಥಾ: ಸರ್ವೇ ಜೀವಾತ್ಮಾನಶ್ಚ ಬ್ರಹ್ಮಾತ್ಮಕಾ ಇತಿ ನ ಪಶ್ಯಂತಿ । ಸರ್ವ ಶಬ್ದಾನಾಂ ಚ ಕೇವಲೇಷು ತತ್ತತ್ಪದಾರ್ಥೇಷು ವಾಚ್ಯೈಕದೇಶೇಷು ವಾಚ್ಯ ಪರ್ಯವಸಾನಮ್ ಮನ್ಯಂತೇ । ಇದಾನೀಮ್ ವೇದಾಂತವಾಕ್ಯಶ್ರವಣೇನ ಬ್ರಹ್ಮಕಾರ್ಯತಯಾ ತದಂತರ್ಯಾಮಿತಯಾ ಸರ್ವಸ್ಯ ಬ್ರಹ್ಮಾತ್ಮಕತ್ವಮ್ ಸರ್ವಶಬ್ದಾನಾಮ್ ತತ್ತತ್ಪ್ರಕಾರಸಂಸ್ಥಿತ ಬ್ರಹ್ಮವಾಚಿತ್ವಮ್ ಚ ಜಾನಂತಿ... ವೇದಾಂತ ಶ್ರವಣೇನ ಚ ವ್ಯುತ್ಪತ್ತಿ: ಪೂರ್ಯತೇ' ಎಂಬುದಾಗಿ.

ಹಾಗಾದರೆ 'ಹಸು' ಮುಂತಾದ ಶಬ್ದಗಳಿಗೆ ಆಯಾ ಪದಾರ್ಥಗಳನ್ನು ತಿಳಿಸುವುದು ಎಂಬ ವ್ಯುತ್ಪತ್ತಿಯು ಬಾಧಿತವಾಗುವುದಿಲ್ಲವೇ ಎಂದರೆ ಇಲ್ಲವೆನ್ನುತ್ತೇವೆ. ಏಕೆಂದರೆ ಎಲ್ಲ ಶಬ್ದಗಳೂ ಅಚೇತನವಿಶಿಷ್ಟ ಜೀವವಿಶಿಷ್ಟ ಪರಮಾತ್ಮನನ್ನೇ ತಿಳಿಸುತ್ತವೆ ಎಂದು ತಾನೇ 'ನಾಮ ಮತ್ತು ರೂಪಗಳ ವ್ಯಾಕರಣವನ್ನು ಮಾಡುವೆನು' ಎಂಬಲ್ಲಿ ಹೇಳಿರುವುದು. ವೇದಾಂತಶ್ರವಣದಿಂದಲೇ ಅಲ್ಲವೇ ವ್ಯುತ್ಪತ್ತಿಯು ಪೂರ್ಣವಾಗುವುದು ಎಂಬುದಾಗಿ.

ಇಲ್ಲಿ ಸಾಮಾನಾಧಿಕರಣ್ಯದಿಂದ ಉಪಸಂಹಾರ ಮಾಡಿರುವುದರಿಂದ ಏನು ಪ್ರಯೋಜನವೆಂದರೆ ಎಲ್ಲ ಶಬ್ದಗಳಿಗೂ ಅವುಗಳ ಪರ್ಯವಸಾಯಿತ್ವವನ್ನು ತಿಳಿಯುವುದೇ ಆಗಿದೆ. ಪರಮಾತ್ಮನ ಶರೀರವಾಗುವುದರ ಮೂಲಕ ಪ್ರಕಾರವಾಗಿರುವುದರಿಂದ ಜೀವನು ಪೃಥಕ್ಕಾದ ಸಿದ್ಧಿ, ಸ್ಥಿತಿ ಮತ್ತು ಪ್ರವೃತ್ತಿಗಳಿಗೆ ಅನರ್ಹನೆಂದರ್ಥವು. ನಮ್ಮ ಪಕ್ಷದಲ್ಲಿ ಸಾಮಾನಾಧಿಕರಣ್ಯವು ಪ್ರವೃತ್ತಿ ನಿಮಿತ್ತ ಭೇದದಿಂದ ಒಂದೇ ಅರ್ಥದಲ್ಲಿ ವೃತ್ತಿಯನ್ನು ಹೊಂದಿರುವುದರ ಮೂಲಕ ಸಿದ್ಧಿಸುತ್ತದೆ. ಸ್ವರೂಪೈಕ್ಯವನ್ನು ಹೇಳುವ ಪರಪಕ್ಷದಲ್ಲಿಯಾದರೋ ಸಾಮಾನಾಧಿಕರಣ್ಯದ ಲಕ್ಷಣವು ಸಿದ್ಧಿಸುವುದಿಲ್ಲ, ಬೇರೆಯ ಶ್ರುತಿವಾಕ್ಯಗಳು ಹೇಳುವ ಸರ್ವಜ್ಞತ್ವವೇ ಮೊದಲಾದ ಗುಣಗಳಿಗೆ ವಿರೋಧ ಉಂಟಾಗುವುದು ಮತ್ತು ಅವಿದ್ಯೆಗೆ ಆಶ್ರಯತ್ವವೇ ಮುಂತಾದುವನ್ನು ಕಲ್ಪನೆ ಮಾಡಬೇಕಾಗುವುದು. ಎಲ್ಲ ಪದಾರ್ಥಗಳೂ ಮತ್ತು ಶಬ್ದಗಳೂ ಬ್ರಹ್ಮಪರ್ಯಂತವಾದರೆ, ಬ್ರಹ್ಮಪರ್ಯಂತವಾಗಿಯೇ ಪದಾರ್ಥಗಳೂ ತಿಳಿಯುತ್ತವೆ. ಶಬ್ದಗಳೂ ಸಹ ಬ್ರಹ್ಮಪರ್ಯಂತವಾಗಿಯೇ ವ್ಯುತ್ಪತ್ತಿಯನ್ನು ಹೊಂದುತ್ತವೆ. ಪದಾರ್ಥಗಳು ಬ್ರಹ್ಮಪರ್ಯಂತವಾದುದು ಎಂಬುದು ತಿಳಿಯದಿರುವುದು ವೇದಾಂತಶ್ರವಣವೆಂಬ ಸಾಧನವು ಇಲ್ಲವಾದ್ದರಿಂದಲೇ ಹೊರತು ಪದಾರ್ಥಗಳಿಗೆ ಆ ಅರ್ಥವಿಲ್ಲ ಎಂಬುದರಿಂದಲ್ಲವು. ಕಣ್ಣಿನಿಂದ ಗಂಧವು ತಿಳಿಯದಿದ್ದರೆ ಗಂಧವಿಲ್ಲ ಎಂದರ್ಥವಲ್ಲ ಆದರೆ ಗಂಧವನ್ನು ಗ್ರಹಿಸುವ ಸಾಮಗ್ರಿಯು ಇಲ್ಲವೆಂಬುದೇ. ಆದ್ದರಿಂದ ವೇದಾಂತಶ್ರವಣವೆಂಬ ಸಾಮಗ್ರಿಯಿದ್ದರೆ ಎಲ್ಲ ಶಬ್ದಗಳೂ ಪದಾರ್ಥಗಳೂ ಬ್ರಹ್ಮಪರ್ಯಂತವೆಂಬುದು ತಿಳಿಯುತ್ತದೆ.

೫. ತತ್ತ್ವಮಸಿ ವಾಕ್ಯದಲ್ಲಿ ಹೇಳಿರುವ ಸಾಮಾನಾಧಿಕರಣ್ಯಕ್ಕೆ ಮುಖ್ಯವೃತ್ತಿಯನ್ನೇ ಹೇಳಬೇಕು

ಭಗವದ್ರಾಮಾನುಜರು ತಮ್ಮ ಪಕ್ಷದಲ್ಲಿ ಸಾಮಾನಾಧಿಕರಣ್ಯಕ್ಕೆ ಮುಖ್ಯವೃತ್ತಿಯನ್ನು ಹೇಳಿರುವುದು ಹೇಗೆ ಅತ್ಯಂತ ಸಮಂಜಸವಾದುದು ಮತ್ತು ದೋಷದೂರವಾದುದು ಎಂಬುದನ್ನು ವಿಸ್ತಾರವಾಗಿ ಪ್ರತಿಪಾದಿಸುತ್ತಾರೆ.

ಮೊದಲು ಘಟಕಶ್ರುತಿಗಳಿಗೂ ಮತ್ತು ಭೇದಶ್ರುತಿಗಳಿಗೂ ವಿರೋಧವಿಲ್ಲದಂತೆ ಮುಖ್ಯವೃತ್ತಿಯನ್ನು ಹೇಳುತ್ತಾರೆ.

ಘಟಕಶ್ರುತಿಗಳಲ್ಲಿ 'ಯ: ಪೃಥಿವ್ಯಾಂ ತಿಷ್ಠನ್...' ಮತ್ತು 'ಯ: ಆತ್ಮನಿ ತಿಷ್ಠನ್...' ಎಂಬುದನ್ನು ಉದಾಹರಿಸುತ್ತಾರೆ ಮೊದಲಿಗೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇವು ಕ್ರಮವಾಗಿ ಕಾಣ್ವ ಮತ್ತು ಮಾಧ್ಯಂದಿನ ಶಾಖೆಗಳಲ್ಲಿರುವ ವಾಕ್ಯಗಳು. ಈ ಎರಡು ವಾಕ್ಯಗಳ ಮೂಲಕ ಅಚಿತ್ತು ಮತ್ತು ಜೀವರುಗಳ ಅಂತರ್ಯಾಮಿತ್ವವು ಸಿದ್ಧವಾಯಿತು. ಈ ಎರಡು ಶಾಖೆಗಳ ವಾಕ್ಯವನ್ನೂ ಹೇಳಿರುವುದು 'ಉಭಯೇಪಿ ಭೇದೇನ ಏನಮಧೀಯತೇ' ಎಂಬ ಬ್ರಹ್ಮಸೂತ್ರಕ್ಕೂ ಅನುಗುಣವಾಗಿದೆ. ನಂತರ 'ಯ: ಪೃಥಿವೀಮಂತರೇ ಸಂಚರನ್' ಮೊದಲಾಗಿ 'ಯ: ಅಕ್ಷರಮಂತರೇ ಸಂಚರನ್', 'ಯ: ಮೃತ್ಯುಮಂತರೇ ಸಂಚರನ್...ಏಷ ಸರ್ವಭೂತಾಂತರಾತ್ಮಾ ಅಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣ:' ಎಂಬ ಸುಬಾಲೋಪನಿಷತ್ತಿನ ವಾಕ್ಯವನ್ನು ಉದಾಹರಿಸುತ್ತಾರೆ. ಇಲ್ಲಿ ಅಕ್ಷರ ಎಂದರೆ ಪ್ರತ್ಯಗಾತ್ಮನು ಮತ್ತು 'ಮೃತ್ಯು' ಎಂದರೆ ತಮ:ಶಬ್ದವಾಚ್ಯವಾದ ಪ್ರಕೃತಿಯು. ಇದರಿಂದ ಕಾರಣಾವಸ್ಥೆಯಲ್ಲಿಯೂ ಅಂತರ್ಯಾಮಿತ್ವವನ್ನು ಹೇಳಲು ಮತ್ತು ದೇವತಾವಿಶೇಷವನ್ನು ಜ್ಞಾಪಿಸಲು ಸಹ ಈ ವಾಕ್ಯಗಳನ್ನು ಉದಾಹರಿಸಿರುವರೆಂದು ತಿಳಿಯುವುದು. ಈ ಶ್ರುತಿಗಳಲ್ಲಿ 'ಅಂತರ್ಯಾಮೀ ಅಮೃತ:' ಎಂಬುದೂ, 'ಅಪಹತಪಾಪ್ಮಾ' ಎಂಬುದೂ ಸಹ ಬ್ರಹ್ಮಕ್ಕೆ ದೋಷದ ಗಂಧವೂ ಇಲ್ಲವೆಂಬುದನ್ನು ತಿಳಿಸುತ್ತದೆ. ಇದನ್ನೇ 'ದ್ವಾಸುಪರ್ಣಾ ಸಯುಜಾ ಸಖಾಯಾ' ಎಂಬ ಶ್ರುತಿಯೂ ತಿಳಿಸುತ್ತದೆ. ನಂತರ 'ಅಂತ: ಪ್ರವಿಷ್ಟ: ಶಾಸ್ತಾ ಜನಾನಾಂ ಸರ್ವಾತ್ಮಾ', 'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್', 'ಸತ್ಯಂ ಚಾನೃತಂ ಚ ಸತ್ಯಮಭವತ್', 'ಅನೇನ ಜೀವೇನಾತ್ಮನಾ' ಮುಂತಾದ ಶ್ರುತಿಗಳನ್ನು ಉದಾಹರಿಸುತ್ತಾರೆ. 'ಅಂತ: ಪ್ರವಿಷ್ಟ:...' ಎಂಬುದೂ ಘಟಕಶ್ರುತಿಯೇ. ಇದರ ಅರ್ಥವೇನೆಂದರೆ ಸರ್ವಾತ್ಮತ್ವವು ಅಂತರ್ಯಾಮಿಯಾಗಿ ಇರುವುದರಿಂದಲೇ ಹೊರತು ಸ್ವರೂಪೈಕ್ಯದಿಂದಲ್ಲ ಎಂಬುದಾಗಿ. 'ತತ್ ಸೃಷ್ಟ್ವಾ...' ಎಂಬುದು ಆಯಾ ಶಬ್ದವಾಚ್ಯತ್ವವು ಅವುಗಳನ್ನು ಅನುಪ್ರವೇಶ ಮಾಡಿದುದರಿಂದಲೇ ಹೊರತು ಸ್ವರೂಪೈಕ್ಯದಿಂದಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅವುಗಳನ್ನೆಲ್ಲ ಅನುಪ್ರವೇಶಮಾಡಿದ್ದರೂ ಸಹ ಅವುಗಳಲ್ಲಿನ ದೋಷಸ್ಪರ್ಶವಿಲ್ಲವೆಂಬುದನ್ನು 'ಸತ್ಯಂ ಚಾನೃತಂ ಚ ಸತ್ಯಮಭವತ್' ಎಂಬುದು ತಿಳಿಸುತ್ತದೆ. ಚಿತ್ ಮತ್ತು ಅಚಿತ್ತನ್ನು ಅನುಪ್ರವೇಶಮಾಡಿದ ಬ್ರಹ್ಮವು ಚಿತ್-ಶಬ್ದವಾಚ್ಯವೂ, ಅಚಿತ್-ಶಬ್ದವಾಚ್ಯವೂ ಆಗಿದ್ದರೂ ಸಹ ಅದು 'ಸತ್ಯಮಭವತ್' - ಎಂದರೆ ಯಾವ ದೋಷವಿಲ್ಲದ ತನ್ನ ಸ್ವಭಾವದಿಂದಲೇ ಇದ್ದಿತು ಎಂದು ಅರ್ಥವು. ನಾಮರೂಪವ್ಯಾಕರಣಶ್ರುತಿಯೂ ಸಹ ಘಟಕಶ್ರುತಿಯೇ ಆದ್ದರಿಂದ 'ಅನೇನ ಜೀವೇನ..' ಎಂಬ ಉದಾಹರಣೆಯು. 'ಜೀವೇನ' ಎಂಬ ನಿರ್ದೇಶವು ಅನುಪ್ರವೇಶದಿಂದ ಆದುದು ಎಂಬುದು ಹಿಂದಿನ ವಾಕ್ಯಗಳಿಂದಲೇ ಸ್ಪಷ್ಟವು.

ನಂತರ ಭೇದಶ್ರುತಿಗಳನ್ನು ಉದಾಹರಿಸುತ್ತಾರೆ. 'ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ', 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ', 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ', 'ಪ್ರಧಾನಕ್ಷೇತ್ರಜ್ಞಪತಿರ್ಗುಣೇಶ:', 'ಜ್ಞಾಜ್ಞೌ ದ್ವಾವಜೌ ಈಶನೀಶೌ' ಮುಂತಾದ ನೂರಾರು ಶ್ರುತಿವಾಕ್ಯಗಳಿಂದಲೂ ಎಲ್ಲಕ್ಕೂ ಬ್ರಹ್ಮವೇ ಆತ್ಮವೆಂಬುದೂ, ಎಲ್ಲವೂ ಬ್ರಹ್ಮದ ಶರೀರವೆಂಬುದೂ ತಿಳಿಯುತ್ತದೆ. ಆತ್ಮರುಗಳ ನಿತ್ಯತ್ವ, ಬಹುತ್ವ ಇವುಗಳೂ 'ನಿತ್ಯೋನಿತ್ಯಾನಾಂ...' ಎಂಬುವುಗಳಿಂದ ತಿಳಿಯುತ್ತದೆ.

'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ' ಎಂಬುದಕ್ಕೆ 'ಬ್ರಹ್ಮವು ಭೋಕ್ತಾವಾದ ಚಿತ್ತಿಗೆ ಆತ್ಮವೆಂದೂ, ಭೋಗ್ಯವಾದ ಅಚಿತ್ತಿಗೆ ಆತ್ಮವೇಂದೂ ಹಾಗೂ ತನ್ನದೇ ಸ್ವಭಾವದಲ್ಲಿರುವ ಪ್ರೇರಿತಾ ಎಂದೂ ಹೀಗೆ ಮೂರು ವಿಧದಲ್ಲಿರುವ ಎಲ್ಲವೂ ಹೇಳಲ್ಪಟ್ಟಿತು, ಇದೇ ಬ್ರಹ್ಮವು' ಎಂಬ ಅರ್ಥವು. ನಂತರ ಉಪಬೃಂಹಣಗಳನ್ನು ಉದಾಹರಿಸುತ್ತಾರೆ: 'ಜಗತ್ಸರ್ವಂ ಶರೀರಂ ತೇ ಸ್ಥೈರ್ಯಂ ತೇ ವಸುಧಾತಲಂ', 'ಯತ್ಕಿಂಚಿತ್ ಸೃಜ್ಯತೇ ಯೇನ...ತತ್ಸರ್ವಂ ವೈ ಹರೇಸ್ತನು:', 'ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತ:', 'ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟ:' ಮುಂತಾಗಿ.

'ಸ್ಥೈರ್ಯಂ ತೇ ವಸುಧಾತಲಮ್' ಎಂದರೆ ಭೂಮಿಯ ಸ್ಥಿರತ್ವ ಸ್ವಭಾವವೂ ನಿನ್ನ ಅಧೀನವಾದುದೇ ಎಂದರ್ಥವು. ಇಲ್ಲಿ ಸಾಮಾನಾಧಿಕರಣ್ಯವು ಕಾರ್ಯ-ಕಾರಣ ಭಾವದಿಂದಾದುದರಿಂದ ಲಾಕ್ಷಣಿಕವು. 'ಆಗ್ನಿ:ಕೋಪ: ಪ್ರಸಾದಸ್ತೇ ಸೋಮ:' ಇತ್ಯಾದಿ ವಾಕ್ಯಗಳಿಗೂ ಸಹ ಎಲ್ಲವೂ ಭಗವದಧೀನವಾದುದೆಂದೇ ಅರ್ಥವು. 'ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಶ್ಚ ಕ್ರೋಧಸಂಭವ:' ಇವುಗಳಿಂದ ದೇವತಾವಿಶೇಷಗಳಲ್ಲಿ ಪ್ರಸಾದ ಕ್ರೋಧ ಮುಂತಾದವುಗಳು ಪರಮಾತ್ಮನ ಅಧೀನವೆಂದು ತಿಳಿಯುತ್ತದೆ. 'ಬ್ರಾಹ್ಮಣೋsಸ್ಯ ಮುಖಮಾಸೀತ್' ಮುಂತಾದುವಲ್ಲಿ ಕಾರ್ಯ-ಕಾರಣಭಾವದಿಂದ ಸಾಮಾನಾಧಿಕರಣ್ಯ ನೋಡಬಹುದು. ಆದ್ದರಿಂದ 'ಸ್ಥೈರ್ಯಂ ತೇ ವಸುಧಾತಲಮ್' ಮುಂತಾದ ವಾಕ್ಯಗಳಿಂದ ಎಲ್ಲದರ ಉತ್ಪತ್ತಿ, ಸ್ಥಿತಿ ಮತ್ತು ಪ್ರವೃತ್ತಿಗಳು ಭಗವದಧೀನವಾದುದೆಂದು ಹೇಳಿದಂತಾಗುತ್ತದೆ. 'ಯತ್ಕಿಂಚಿತ್ ಸೃಜ್ಯತೇ...' ಎಂಬಲ್ಲಿ ಸಕಲಕಾರ್ಯವರ್ಗದ ಕಾರಣವೂ ಆಯಾ ಕಾರಣಗಳಿಗೆ ಅಂತರ್ಯಾಮಿಯಾಗಿ ಅವುಗಳನ್ನು ತನ್ನ ಶರೀರವನ್ನಾಗಿ ಉಳ್ಳ ಬ್ರಹ್ಮವೇ ಎಂದು ಅರ್ಥವು. 'ಅಹಮಾತ್ಮಾ ಗುಡಾಕೇಶ...' ಎಂಬಲ್ಲಿ 'ಆತ್ಮಾ' ಎಂಬುದರಿಂದ ಎಲ್ಲವೂ ಶರೀರವೆಂಬ ಅರ್ಥವು ತಿಳಿಯುತ್ತದೆ. 'ಸರ್ವಸ್ಯ ಚಾಹಂ' ಎಂಬುದೂ ಸಹ ಬ್ರಹ್ಮದ ಸರ್ವಾಂತರ್ಯಾಮಿತ್ವವನ್ನೇ ತಿಳಿಸುತ್ತದೆ. ಏಕೆಂದರೆ 'ಹೃದಿ ಹ್ಯಯಮಾತ್ಮಾ' ಎಂಬ ಪ್ರಮಾಣದಿಂದ ಜೀವನು ಹೃದಯದಲ್ಲಿರುವವನು ಎಂಬುದಾಗಿ ಆ ಜೀವನ ಅಂತರ್ಯಾಮಿಯೂ ಹೃದಯದಲ್ಲಿರುವವನೆಂಬುದನ್ನು ತಿಳಿಸುತ್ತದೆ. ಇವುಗಳಲ್ಲಿ ಆತ್ಮ-ಶರೀರಭಾವವು ಸಿದ್ಧವಾದರೂ ಮತ್ವರ್ಥೀಯ ಪ್ರತ್ಯಯ ನಿರಪೇಕ್ಷವಾದ ಸಾಮಾನಾಧಿಕರಣ್ಯವಿದೆಯಲ್ಲ ಎಂದರೆ ಶರೀರವು ಶರೀರಿಗೆ ಸಂಬಂಧಿಸಿದಂತೆ ಪ್ರಕಾರವಾಗಿಯೇ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪದಾರ್ಥವೆನಿಸುವುದು ಎಂದು ತಿಳಿಸುತ್ತಾರೆ. ಸಂಸರ್ಗಪ್ರಯುಕ್ತವಾದ ಧರ್ಮಸಾಂಕರ್ಯವು ಶರೀರ–ಶರೀರಿಗಳಿಗೆ ಉಂಟಾಗುವುದಿಲ್ಲ. ಶರೀರ ಎಂಬ ಶಬ್ದದಂತೆಯೇ ತನು, ಅಂಶ ಮುಂತಾದವೂ ತಿಳಿಸಲ್ಪಟ್ಟಿವೆ. ಆದ್ದರಿಂದ ಎಲ್ಲವನ್ನೂ ಶರೀರವನ್ನಾಗಿ ಉಳ್ಳುದರಿಂದ ಎಲ್ಲ ಚೇತನಾಚೇತನಗಳನ್ನೂ ಪ್ರಕಾರವನ್ನಾಗಿ ಉಳ್ಳ ಬ್ರಹ್ಮವೇ ಎಲ್ಲ ಶಬ್ದಗಳಿಂದಲೂ ಮುಖ್ಯಾರ್ಥದಲ್ಲಿ ತಿಳಿಯಲ್ಪಡುತ್ತದೆ. ಇದನ್ನು ಭಗವದ್ರಾಮಾನುಜರು ಹೀಗೆ ಸಂಗ್ರಹಿಸುತ್ತಾರೆ: 'ಪರಸ್ಯ ಬ್ರಹ್ಮಣ: ಸರ್ವಸ್ಯ ಆತ್ಮತ್ವಾವಗಮಾತ್ ಚಿದಚಿದಾತ್ಮಕಸ್ಯ ವಸ್ತುನ: ತಚ್ಛರೀರತ್ವಾವಗಮಾಚ್ಚ ಶರೀರಸ್ಯ ಶರೀರಿಣಂ ಪ್ರತಿ ಪ್ರಕಾರತಯೈವ ಪದಾರ್ಥತ್ವಾತ್, ಶರೀರ–ಶರೀರಿಣೋಶ್ಚ ಧರ್ಮಭೇದೇಪಿ ತಯೋರಸಂಕರಾತ್ ಸರ್ವಶರೀರಂ ಬ್ರಹ್ಮೇತಿ ಬ್ರಹ್ಮಣೋ ವೈಭವಂ ಪ್ರತಿಪಾದಯದ್ಭಿ: ಸಾಮಾನಾಧಿಕರಣ್ಯಾದಿಭಿ: ಮುಖ್ಯವೃತ್ತೈ: ಸರ್ವಚೇತನಾಚೇತನ ಪ್ರಕಾರಂ ಬ್ರಹ್ಮೈವಾಭಿ ಧೀಯತೇ' ಎಂಬುದಾಗಿ.

೬. ತತ್ತ್ವಮಸಿ ವಾಕ್ಯಾರ್ಥದಲ್ಲಿ ಪರಪಕ್ಷದವರು ಹೇಳುವ ಸಾಮಾನಾಧಿಕರಣ್ಯವು ಸರಿಯಲ್ಲ

ಭಗವದ್ರಾಮಾನುಜರು ತತ್–ತ್ವಮಸಿ ಎಂಬಲ್ಲಿ ಸಾಮಾನಾಧಿಕರಣ್ಯವನ್ನು ಹೀಗೆ ಪ್ರತಿಪಾದಿಸುತ್ತಾರೆ: 'ಸಾಮಾನಾಧಿಕರಣ್ಯಂ ಹಿ ದ್ವಯೋ: ಪದಯೋ: ಪ್ರಾಕಾರದ್ವಯಮುಖೇನ ಏಕಾರ್ಥನಿಷ್ಠತ್ವಮ್ । ತಸ್ಯ ಚ ಏತಸ್ಮಿನ್ ಪಕ್ಷೇ ಮುಖ್ಯತಾ । ತಥಾ ಹಿ । ತತ್–ತ್ವಮ್ ಇತಿ ಸಾಮಾನಾಧಿಕರಣ್ಯೇ ತತ್ ಇತ್ಯನೇನ ಜಗತ್ಕಾರಣಂ ಸರ್ವಕಲ್ಯಾಣಗುಣಾಕರಂ ನಿರವದ್ಯಂ ಬ್ರಹ್ಮೋಚ್ಯತೇ । ತ್ವಮ್ ಇತಿ ಚ ಚೇತನಸಮಾನಾಧಿಕರಣವೃತ್ತೇನ ಜೀವಾಂತರ್ಯಾಮಿರೂಪಿ ತಚ್ಛರೀರಂ ತದಾತ್ಮತಯಾ ಅವಸ್ಥಿತಂ ತತ್ಪ್ರಕಾರಂ ಬ್ರಹ್ಮೋಚ್ಯತೇ । ಇತರೇಷು ಪಕ್ಷೇಷು ಸಾಮಾನಾಧಿಕರಣ್ಯಹಾನಿ: ಬ್ರಹ್ಮಣ: ಸದೋಷತಾ ಚ ಸ್ಯಾತ್ ।' ಎಂಬುದಾಗಿ.

ಎಂದರೆ, 'ಸಾಮಾನಾಧಿಕರಣ್ಯವೆಂಬುದು ಎರಡು ಪದಗಳು ಎರಡು ಪ್ರಕಾರಗಳಾಗಿ ಒಂದೇ ಅರ್ಥವನ್ನು ತಿಳಿಸುವುದು. ಆದುವೇ ಈ ಪಕ್ಷದಲ್ಲಿ ಮುಖ್ಯವಾಗಿರುವುದು. ಆದ್ದರಿಂದ 'ತತ್–ತ್ವಮ್' ಎಂಬ ಸಾಮಾನಾಧಿಕರಣ್ಯದಲ್ಲಿ 'ತತ್' ಎಂಬುದರಿಂದ ಜಗತ್ಕಾರಣವೂ, ಎಲ್ಲ ಮಂಗಳಗುಣಗಳ ಗಣಿಯಾದುದೂ, ದೋಷದೂರವಾದುದೂ ಆದ ಬ್ರಹ್ಮವು ಹೇಳಲ್ಪಟ್ಟಿದೆ. 'ತ್ವಮ್' ಎಂಬುದರಿಂದ ಚೇತನನ ಸಮಾನವಾದ ಅಧಿಕರಣದಲ್ಲಿರುವುದರಿಂದ ಜೀವನಿಗೆ ಅಂತರ್ಯಾಮಿಯಾಗಿ ಜೀವನನ್ನು ಶರೀರವನ್ನಾಗಿ ಹೊಂದಿ ಜೀವನಿಗೆ ಆತ್ಮನಾಗಿದ್ದು ಜೀವನನ್ನು ಪ್ರಕಾರವನ್ನಾಗಿ ಉಳ್ಳ ಬ್ರಹ್ಮವು ಹೇಳಲ್ಪಟ್ಟಿದೆ. ಇತರ ಪಕ್ಷಗಳಲ್ಲಿಯೋ ಸಾಮಾನಾಧಿಕರಣ್ಯದ ಹಾನಿಯೂ ಬ್ರಹ್ಮಕ್ಕೆ ದೋಷವೂ ಉಂಟಾಗುತ್ತದೆ' ಎಂದು.

ತಮ್ಮ ಪಕ್ಷದ ದೋಷರಹಿತತ್ವವನ್ನು ಸ್ಪಷ್ಟಪಡಿಸುತ್ತಾರೆ ಮೇಲಿನ ವಾಕ್ಯದಲ್ಲಿ.

೧. ಕಾರಣತ್ವಕ್ಕೆ ಶಂಕೆಮಾಡಲ್ಪಟ್ಟ ದೋಷವನ್ನು ನಿವಾರಿಸಲು ಶೋಧಕವಾಕ್ಯದ ಅರ್ಥವನ್ನು ಹೇಳುತ್ತಾರೆ, 'ನಿರವದ್ಯಂ' (ದೋಷದೂರವಾದುದು) ಎಂಬುದಾಗಿ.

೨. 'ತ್ವಮ್' ಶಬ್ದವು ಜೀವನ ಅಂತರ್ಯಾಮಿಯೆಂದರೆ ಲಕ್ಷಣೆಯಾಗುವುದು ಎಂಬುದನ್ನು ಪರಿಹರಿಸಲು 'ಜೀವನನ್ನು ಶರೀರವನ್ನಾಗಿ ಹೊಂದಿ ಅದಕ್ಕೆ ಆತ್ಮನಾಗಿರುವುದು' ಎಂದು ಹೇಳುತ್ತಾರೆ.

೩. ಜೀವಾಂತರ್ಯಾಮಿಯಾದರೂ ಶರೀರವಾಗಿ ಹೊಂದಿ ತಾದಾತ್ಮ್ಯವೇಕೆ ಆಗಬಾರದು ಎಂದರೆ ಹೇಳುತ್ತಾರೆ 'ಜೀವನನ್ನು ತನ್ನ ಪ್ರಕಾರವನ್ನಾಗಿ ಹೊಂದಿರುವುದು' ಎಂದು.

ಈಗ ಇತರ ಪಕ್ಷಗಳಲ್ಲಿನ ಅಮುಖ್ಯತ್ವವನ್ನು ತಿಳಿಸುತ್ತಾರೆ.

೧. ಬ್ರಹ್ಮಕ್ಕೇ ಅಜ್ಞಾನವೆಂಬುವ (ಶಂಕರರ) ಪಕ್ಷದಲ್ಲಿ ಪ್ರವೃತ್ತಿನಿಮಿತ್ತವಿಲ್ಲವಾಗಿ ಸಾಮಾನಾಧಿಕರಣ್ಯಹಾನಿಯೂ ಮತ್ತು ಅವಿದ್ಯೆಗೆ ಆಶ್ರಯವಾಗಿರುವುದೆಂಬ ದೋಷವೂ ಉಂಟಾಗುವುದು.

೨. ಎರಡನೆಯ ಭಾಸ್ಕರರ ಮತದಲ್ಲಿ ಬ್ರಹ್ಮನಿಗೇ 'ತತ್' ಶಬ್ದದಿಂದ ತಿಳಿಯುವ ಕಲ್ಯಾಣಗುಣಗಳಿಗೆ ವಿರುದ್ಧವಾದ ಅಜ್ಞತ್ವ ಮುಂತಾದವು ಉಂಟಾಗುವುವು. ಸರ್ವಜ್ಞತ್ವ ಮುಂತಾದುವನ್ನು ತೆಗೆದುಹಾಕುವುದರಿಂದ 'ತ್ವಮ್' ಶಬ್ದಕ್ಕೆ ಜೀವತ್ವವನ್ನು ಹೇಳದೇ 'ವಸ್ತುಮಾತ್ರ' ಎಂದರೆ ಅಭಿಮುಖನಾದ ಚೇತನನೆಂಬ ರೂಪವಾದ ಪ್ರವೃತ್ತಿನಿಮಿತ್ತವೂ ಇಲ್ಲದೇ ಹೋಗುವುದು. ತನಗಭಿಮುಖನಾದ ಚೇತನನೇ ತಾನೇ 'ತ್ವಮ್' ಶಬ್ದದಿಂದ ಹೇಳಲ್ಪಡುವುದು? ಈ ಅಭಿಮುಖ್ಯವೂ ಶ್ವೇತಕೇತುವೆಂಬ ಜೀವವಿಶಿಷ್ಟನಾದವನೇ ಹೊರತು ವಸ್ತುಮಾತ್ರವಲ್ಲ. ಆದ್ದರಿಂದ ಸಾಮಾನಾಧಿಕರಣ್ಯದ ಹಾನಿಯೂ, ಬ್ರಹ್ಮಕ್ಕೆ ದೋಷವೂ ಎಂದು ಹೇಳಲ್ಪಟ್ಟಿತು.

೩. ಮುರನೆಯ ಯಾದವಪ್ರಕಾಶರ ಪಕ್ಷದಲ್ಲಿ ಸರ್ವಜ್ಞತ್ವವೇ ಮೊದಲಾದ ಗುಣಗಳನ್ನು ಹೇಳಿದುದರಿಂದ 'ತತ್' ಶಬ್ದದಿಂದ ಹೇಳಲ್ಪಡುವುದು ಈಶ್ವರನು. ಬ್ರಹ್ಮದ ಅಂಶವಾದ ಜೀವ ಮತ್ತು ಈಶ್ವರರಿಗೆ 'ಘಟ, ಶರಾವೆ' ಎಂಬಂತೆ ಸಾಮಾನಾಧಿಕರಣ್ಯ ಹೇಳಲಾಗದು. ಆದ್ದರಿಂದ 'ತತ್' ಶಬ್ದವು ಸನ್ಮಾತ್ರವು ಎಂದರೆ, ಸರ್ವಜ್ಞತ್ವವೇ ಮೊದಲಾದ ಗುಣಕನನ್ನು ಹೇಳಿರುವುದರಿಂದ, ಘಟವನ್ನು ಹೇಳಿದಾಗ ಮಣ್ಣುಮಾತ್ರವೆಂಬಂತೆ, ಸನ್ಮಾತ್ರವೆಂದು ಹೇಳಲಾಗದುದರಿಂದ, 'ತತ್' ಪದದ ಪ್ರವೃತ್ತಿ ನಿಮಿತ್ತ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಾಶವಾಗುವುದರಿಂದ ಸಾಮಾನಾಧಿಕರಣ್ಯ ಹಾನಿಯುಂಟಾಗುವುದು. 'ಸನ್ಮಾತ್ರ'ವೆಂದರೆ 'ಸತ್' ಎಂದೇ ಹೇಳಬೇಕು. ಏಕೆಂದರೆ 'ಮಾತ್ರ' ಎಂಬುದರಿಂದ 'ತದ್ಭೈಕ್ಷತ' ಮೊದಲಾಗಿ ಹೇಳಿದ ಸಾರ್ವಜ್ಞಾದಿ ವಿರೋಧವಾಗುವುದು. 'ತತ್' ಶಬ್ದವು ಈಶ್ವರಪರವೆಂದರೆ, ಆ ವಿರೋಧವನ್ನು ಪರಿಹರಿಸಲು 'ತ್ವಮ್' ಪದಕ್ಕೆ ವಸ್ತುಮಾತ್ರವೆಂದರೆ, ಸ್ವಾಭಿಮುಖಚೇತನರೂಪವಾದ ಪ್ರವೃತ್ತಿ ನಿಮಿತ್ತವು ನಾಶವಾಗಿ ಸಾಮಾನಾಧಿಕರಣ್ಯಹಾನಿಯೂ ದೋಷವೂ ಉಂಟಾಗುವುದು.

೭. ತತ್ತ್ವಮಸಿ ವಾಕ್ಯವು ಚಿದಚಿದಾತ್ಮಕವಾದ ಪ್ರಪಂಚವು ಬ್ರಹ್ಮದ ಪ್ರಕಾರವೆಂಬುದನ್ನೇ ತಿಳಿಸುತ್ತದೆ

ಭಗವದ್ರಾಮಾನುಜರು ನಂತರ ಹೀಗೆ ಪ್ರತಿಪಾದಿಸುತ್ತಾರೆ: 'ಬ್ರಹ್ಮೈವ ಏವಮ್ ಅವಸ್ಥಿತಮ್' (ಬ್ರಹ್ಮವೇ ಹೀಗೆ ಇದ್ದಿತು) ಎಂಬಲ್ಲಿ 'ಏವಮ್' ಶಬ್ದದಿಂದ ತಿಳಿಯುವ ಪ್ರಕಾರವಾಗಿಯೇ ವಿಚಿತ್ರ ಚೇತನಾಚೇತನಾತ್ಮಕವಾದ ಪ್ರಪಂಚದ ಸ್ಥೂಲ ಮತ್ತು ಸೂಕ್ಷ್ಮದ ಸದ್ಭಾವವು. ಹಾಗೆಯೇ 'ಬಹುಸ್ಯಾಮ್, ಪ್ರಜಾಯೇಯ' (ಅನೇಕವಾಗುವೆನು ಹುಟ್ಟುವೆನು') ಎಂಬ ಅರ್ಥವೂ ಕೂಡುವುದು. ಕಾರಣವಾಗಿಯೂ ಕಾರ್ಯವಾಗಿಯೂ ಅನೇಕರೂಪವಾಗಿ ಇರುವ ಈಶ್ವರನಿಗೇ ಸಂಸ್ಥಾನವಾಗಿ (ಅಸಾಧಾರಣರೂಪವಾಗಿ) ಚಿದಚಿತ್ತಾದ ವಸ್ತುವೆಲ್ಲವೂ ಇದ್ದಿತು ಎಂದು.

ಇದಕ್ಕೆ ಪೂರ್ವಪಕ್ಷಿಯು ಹೇಳುತ್ತಾನೆ: 'ಆದರೆ, ಸ್ವತಂತ್ರವಾದ ದಂಡವೇ ಮೊದಲಾದವು ಮತ್ತೊಂದು ದ್ರವ್ಯದ ಪ್ರಕಾರವಾಗಿರುವಾಗ ಮತ್ವರ್ಥೀಯ (ಉಳ್ಳ ಎಂಬ ಅರ್ಥವನ್ನು ಕೊಡುವ) ಪ್ರತ್ಯಯವನ್ನು ನೋಡಬಹುದು, ದಂಡೀ, ಕುಂಡಲೀ ಎಂಬಂತೆ. ಆದ್ದರಿಂದ ಗೋತ್ವವೇ ಮೊದಲಾದುವಂತೆ ಚೇತನಾಚೇತನವೆಂಬ ದ್ರವ್ಯವಾದ ವಸ್ತುವಿಗೆ ಈಶ್ವರನ ಪ್ರಕಾರವಾಗಿ ಸಾಮಾನಾಧಿಕರಣ್ಯವನ್ನು ಹೇಳುವುದು ಸರಿಹೊಂದುವುದಿಲ್ಲ ಎಂದು.

ಇದಕ್ಕೆ ಹೀಗೆ ಉತ್ತರಿಸುತ್ತೇವೆ: ಹಸು, ಕುದುರೆ, ಮನುಷ್ಯ, ದೇವ ಎಂಬಲ್ಲಿ ಭೂತಸಂಘಾತರೂಪದ ದ್ರವ್ಯಗಳಿಗೆ 'ದೇವದತ್ತನೆಂಬ ಮನುಷ್ಯ ಹುಟ್ಟಿದನು ಪುಣ್ಯವಿಶೇಷದಿಂದ', 'ಯಜ್ಞದತ್ತನೆಂಬ ಹಸು ಹುಟ್ಟಿತು ಪಾಪಕರ್ಮಗಳಿಂದ', 'ಮತ್ತೊಬ್ಬ ಚೇತನನು ಪುಣ್ಯ ವಿಶೇಷದಿಂದ ದೇವನಾಗಿ ಜನಿಸಿದನು' ಎಂಬುದಾಗಿ ದೇವನೇ ಮೊದಲಾದ ಶರೀರಗಳಿಗೆ ಚೇತನನ ಪ್ರಕಾರವಾಗಿರುವಂತೆ ಲೋಕವೇದಗಳಲ್ಲಿ ಸಾಮಾನಾಧಿಕರಣ್ಯವನ್ನು ಹೇಳಿರುವುದು ಕಂಡುಬರುವುದು ಎಂಬುದಾಗಿ.

ಇಲ್ಲಿ ಪೂರ್ವಪಕ್ಷಿಯು ಹೇಳುತ್ತಾನೆ, 'ಸೃಷ್ಟಿಗೆ ಮೊದಲು ಏಕತ್ವವನ್ನು ಹೇಳಿರುವುದರಿಂದ (ಸತ್ ಒಂದೇ ಇದ್ದಿತು ಎಂಬುದಾಗಿ) ಮತ್ತು 'ಯತ: ಪ್ರಧಾನಪುರುಷೌ' ಎಂದು ಪ್ರಧಾನ ಮತ್ತು ಪುರುಷರೂ ಉಂಟಾದರು ಎಂದು ತಿಳಿಯುವುದರಿಂದ ಆಗ ಶರೀರ–ಶರೀರಿ ಭಾವವು ಸಿದ್ಧಿಸುವುದಿಲ್ಲ. ಆದ್ದರಿಂದ ದ್ರವ್ಯ ಒಂದೇ ಇದ್ದಿತು ಎಂಬುದನ್ನು ಒಪ್ಪಿಕೊಳ್ಳಬೇಕು' ಎಂದು. ಇದಕ್ಕೆ ಉತ್ತರಿಸಲು, 'ಬ್ರಹ್ಮೈವ ಏವಮ್ ಅವಸ್ಥಿತಮ್' ಎಂಬುದಾಗಿ ವಿವರಿಸುತ್ತಾರೆ. ಇಲ್ಲಿ 'ಏವಮ್' ಎಂಬುದರಿಂದ ಯಾವ ಯಾವ ವಿಶೇಷಣಗಳು ವೇದಾಂತವಾಕ್ಯಗಳಲ್ಲಿ ತಿಳಿದುಬರುತ್ತದೋ ಅವುಗಳು ಬಹಳವಾಗಿರುವುದರಿಂದ ಅವೆಲ್ಲದರ ಅಭಿಪ್ರಾಯವನ್ನು ಹೇಳಿದೆ. ಹೇಗೆಂದರೆ:

– ನಿಮಿತ್ತಕಾರಣತ್ವವು ನಿಮಿತ್ತತ್ವಕ್ಕೆ ಉಪಯುಕ್ತವಾದ ಸರ್ವಜ್ಞತ್ವವೇ ಮೊದಲಾದುವನ್ನು ಅಪೇಕ್ಷಿಸುವುದು

– ಹಾಗೆಯೇ ಉಪಾದಾನತ್ವವು ನಿಷ್ಕೃಷ್ಟವಾದ ಸ್ವರೂಪವು ಉಪಪನ್ನವಾಗದುದರಿಂದ ಪ್ರಕೃತಿ–ಪುರುಷರುಗಳಿಂದ ವಿಶಿಷ್ಟವಾದುದನ್ನು ಅಪೇಕ್ಷಿಸುವುದು

– 'ಕಾರಣವಾಗಿರುವಿಕೆ' ಮತ್ತು 'ಒಂದೇ ಇದ್ದಿತು' ಎಂಬುದೂ ಸಹ ಕಾರಣತ್ವಕ್ಕೆ ಉಪಯುಕ್ತವಾದ ವಿಶೇಷಣಗಳಿಗೆ ವಿರುದ್ಧವಾದುದಲ್ಲವು

ಆದ್ದರಿಂದ ಸೃಷ್ಟಿಗೆ ಮೊದಲೂ ಸಹ ಚಿದಚಿದ್ವಿಶಿಷ್ಟವಾಗಿಯೇ ಬ್ರಹ್ಮವು ಇದ್ದಿತು ಎಂದು 'ಬ್ರಹ್ಮೈವ' ಎಂಬುದು ತಿಳಿಸುತ್ತದೆ. 'ಏವಮ್ ಅವಸ್ಥಿತಮ್' ಎಂಬಲ್ಲಿ 'ಏವಮ್' ಎಂಬ ಶಬ್ದದ ಅರ್ಥವಾದ 'ಪ್ರಕಾರವಾಗಿ' ಎಂಬ ಅರ್ಥವು ತಿಳಿಯುವುದು. 'ಸರ್ವಂ ಖಲ್ವಿದಂ ಬ್ರಹ್ಮ', 'ವ್ಯಕ್ತಂ ವಿಷ್ಣು: ತಥಾವ್ಯಕ್ತಂ', 'ಜ್ಯೋತೀಂಷಿ ವಿಷ್ಣು:' ಮುಂತಾದ ನಿರ್ದೇಶಗಳನ್ನು ತಿಳಿಸುತ್ತದೆ 'ಏವಮ್' ಎಂಬ ಶಬ್ದವು. 'ವ್ಯಕ್ತವಾದುದೂ ವಿಷ್ಣುವು' ಎಂಬುದು 'ಏವಮ್' ಎಂಬ ಶಬ್ದದ ಅರ್ಥವಾದ 'ಪ್ರಕಾರವಾಗಿ' ಎಂಬುದಾಗಿ ಆಯಾ ಶಬ್ದಗಳ ಪ್ರವೃತ್ತಿ ನಿಮಿತ್ತದಿಂದ ಪ್ರಕಾರವಾಗಿರುವುದರ ಮೂಲಕ ಎಲ್ಲ ಅವಸ್ಥೆಗಳಲ್ಲಿಯೂ ಚೇತನಾಚೇತನಗಳ ಸದ್ಭಾವವು ಎಂದು ತಿಳಿಸುತ್ತದೆ. 'ಸ್ಥೂಲ ಮತ್ತು ಸೂಕ್ಷ್ಮದ ಸದ್ಭಾವವು' ಎಂಬುದರಿಂದ ಏಕತ್ವವೆಂಬುದರ ಅರ್ಥವು ಸ್ಪಷ್ಟಪಡಿಸಲ್ಪಟ್ಟಿದೆ. ನಾಮ ಮತ್ತು ರೂಪಗಳ ವಿಭಾಗಕ್ಕೆ ಅನರ್ಹವಾದ ಸೂಕ್ಷ್ಮದಶೆಯಲ್ಲಿ ಇರುವಿಕೆಯೇ ಏಕತ್ವವೆಂಬುದರ ಅರ್ಥವು. ನಾಮ ಮತ್ತು ರೂಪಗಳ ವಿಭಾಗಕ್ಕೆ ಅರ್ಹವಾದ ಸ್ಥೂಲದಶೆಯನ್ನು ಹೊಂದುವುದೇ 'ಬಹುತ್ವ' ಎಂದು ಹೇಳಿರುವುದರ ಅರ್ಥವು.

ಇದನ್ನೇ ಮತ್ತೆ ವಿಸ್ತಾರವಾಗಿ ವಿವರಿಸುತ್ತಾರೆ. ಅನೇಕವಾಗುವಿಕೆಯು ಬ್ರಹ್ಮಕ್ಕೆ ಆದ್ವಾರಕವಾಗಿ ಸಾಧ್ಯವಿಲ್ಲವಲ್ಲ. ಏಕೆಂದರೆ ಆಗ ಬ್ರಹ್ಮಕ್ಕೆ ವಿಕಾರವಿಲ್ಲ ಎನ್ನುವ ಅವಿಕಾರಶ್ರುತಿವಾಕ್ಯಗಳಿಗೆ ವಿರೋಧವಾಗುತ್ತದೆ. ಆದ್ದರಿಂದ ಚಿದಚಿದ್ವಿಶಿಷ್ಟವಾದುದಕ್ಕೇ ಬಹುತ್ವವು (ಅನೇಕವಾಗುವಿಕೆ) ಮತ್ತು ಅವುಗಳ ನಾಮರೂಪವಿಲ್ಲದ ರೂಪದಲ್ಲಿ ಏಕತ್ವವೂ. ಆದ್ವಾರಕವು ಉಪಪನ್ನವಲ್ಲವಾದ್ದರಿಂದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಿಶಿಷ್ಟತ್ವವನ್ನು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಪ್ರಕೃತಿ ಮತ್ತು ಪುರುಷರಿಗೆ ಅಜತ್ವ, ನಿತ್ಯತ್ವ ಇವುಗಳನ್ನು ಹೇಳುವ ಶ್ರುತಿಗಳಿಗೆ ವಿರೋಧವೂ, ಮಾಡದಿರುವ ಕರ್ಮಗಳ ಫಲಭೋಗವೂ (ಅಕೃತಾಭ್ಯಾಗಮ) ಮತ್ತು ಮಾಡಿದ ಕರ್ಮಗಳ ಫಲದ ಅನುಭವವಿಲ್ಲದಿರುವಿಕೆಯೂ (ಕೃತ ವಿಪ್ರಣಾಶ) ಉಂಟಗುವುದು. ಆದ್ದರಿಂದ ಅನೇಕವಾಗುವಿಕೆ ಎಂಬುವುದು ಸದ್ವಾರಕವು ಎಂದು ಹೇಳಿದ ಅರ್ಥವು ಸರಿಹೊಂದುವುದು.

ಹಾಗಾದರೆ ಕಾರ್ಯವೂ ಕಾರಣವೂ ಬ್ರಹ್ಮವೇ ಹೇಗೆ ಆಗಲು ಸಾಧ್ಯ ಎಂಬ ಆಶಂಕೆಗೆ ಉತ್ತರ ಹೇಳುತ್ತಾರೆ: ಚಿದಚಿತ್ತುಗಳೆಲ್ಲ ಸಂಸ್ಥಾನವಾಗಿದ್ದವು, ಎಂದರೆ ಅಪೃಥಕ್ಸಿದ್ಧವಾದ ಧರ್ಮವಾಗಿದ್ದವು ಎಂದು. ವಿಶಿಷ್ಟವಾದ ವಸ್ತುವು ಒಂದೇ ಇದ್ದಿತು. ಅದೇ ಎರಡು ಅವಸ್ಥೆಗಳಲ್ಲಿಯೂ ಇದ್ದಿತು ಎಂಬುದಾಗಿ ಕಾರ್ಯ ಮತ್ತು ಕಾರಣವು ಒಂದೇ ಆಗಿದ್ದಿತು ಎಂಬುದು ಸರಿಹೊಂದುತ್ತದೆ. ಇವುಗಳಲ್ಲಿ ಯಾವುದಾದರೂ ಒಂದನ್ನು ತಿಳಿಸುವುದೇ ಮತ್ವರ್ಥೀಯ ಪ್ರತ್ಯಯನಿರಪೇಕ್ಷ ಸಾಮಾನಾಧಿಕರಣ್ಯದ ಪ್ರಯೋಜನವು.

ಪೂರ್ವಪಕ್ಷಿಯು ದಂಡ, ಕುಂಡಲವೇ ಮೊದಲಾದ ದ್ರವ್ಯಗಳು ಅಪೃಥಕ್ಸಿದ್ಧವಾಗಿ ಇರಲಾರವು ಆದ್ದರಿಂದ ಅವುಗಳನ್ನು ತಿಳಿಸುವ ಶಬ್ದಗಳಿಗೆ ಮತ್ವರ್ಥೀಯ ಪ್ರತ್ಯಯದ ಅಪೇಕ್ಷೆಯಿಲ್ಲದ ಸಾಮಾನಾಧಿಕರಣ್ಯವು ಉಪಪನ್ನವಾಗುವುದಿಲ್ಲ ಎಂದು ಹೇಳಿದರೆ ಹೀಗೆ ಉತ್ತರಿಸುತ್ತಾರೆ:

ಸಂಸ್ಥಾನದ ರೂಪದಲ್ಲಿ ಪ್ರಕಾರವಾಗಿರುವುದರ ಮೂಲಕ, ಎಂದರೆ ಅಪೃಥಕ್ಸಿದ್ಧವಾದ ರೂಪದಲ್ಲಿ ಪ್ರಕಾರವಾಗಿರುವುದರ ಮೂಲಕ ಇದು ಸಾಧ್ಯ ಎಂದು.

ಮತ್ತೆ ಪೂರ್ವಪಕ್ಷಿಯು ಹೇಳುತ್ತಾನೆ: ಧರ್ಮಗಳ ಮೂಲಕ ಧರ್ಮಿಯನ್ನು ತಿಳಿಸುವುದು 'ಏವಮ್' ಎಂಬ ಶಬ್ದವು. ಅಪೃಥಕ್ಸಿದ್ಧ ವಿಶೇಷಣದಿಂದ ಆಯಾ ಶಬ್ದಗಳನ್ನು ತಿಳಿಸುವಂತಹದು ಜಾತಿಗುಣಗಳಲ್ಲಿಯೇ ಕಂಡುಬರುವುದು. ಘಟ, ಬಿಳಿಯ ಬಟ್ಟೆ ಮುಂತಾದವುಗಳಲ್ಲಿ ಅಪೃಥಕ್ಸಿದ್ಧ ವಿಶೇಷಣಗಳ ಮೂಲಕ ಆಯಾ ಶಬ್ದಗಳ ಪ್ರವೃತ್ತಿ ಮಿನಿತ್ತವಾದ ಅರ್ಥವು ದ್ರವ್ಯಕ್ಕೆ ಹೇಳಬರುವುದಿಲ್ಲ. ಆದ್ದರಿಂದ ಪೃಥಕ್ಕಾಗಿ ಇರಬಲ್ಲ ಚಿದಚಿತ್ ಪದಾರ್ಥಗಳಿಗೆ ಈಶ್ವರಪರ್ಯಂತವಾದ ಅರ್ಥವನ್ನು ಹೇಳಿ ಈಶ್ವರನ ಪ್ರಕಾರವೆನ್ನುವುದು ಯುಕ್ತವಲ್ಲ ಎಂದು.

ಇದಕ್ಕೆ ಪರಿಹಾರವನ್ನು ಹೀಗೆ ಹೇಳುತ್ತಾರೆ: ನೀವು ಒಂದು ದ್ರವ್ಯವು ಇನ್ನೊಂದು ದ್ರವ್ಯಕ್ಕೆ ಪ್ರಕಾರವಾಗುವುದು ಸಾಧ್ಯವಿಲ್ಲವೆನ್ನುತ್ತೀರೋ ಇಲ್ಲ ನಿಯತವಾಗಿ ಪ್ರಕಾರವಾಗುವುದು ಸಾಧ್ಯವಿಲ್ಲವೆನ್ನುತ್ತೀರೋ ? ಮೊದಲ ಪಕ್ಷವಾದರೆ, ದ್ರವ್ಯವು ಇನ್ನೊಂದು ದ್ರವ್ಯದ ಪ್ರಕಾರವಾಗಿರುವುದು ನೋಡಲು ಸಾಧ್ಯವು. ದಂಡ ಮತ್ತು ಕುಂಡಲಗಳು ಪ್ರಕಾರವಾಗಿರುವುದನ್ನು ಒಪ್ಪಿಕೊಂಡರೂ ಅವುಗಳ ಬೇರೆಯಾದ ಇರುವಿಕೆಯು (ಪೃಥಕ್ ಸಿದ್ಧವಾಗಿರುವುದು) ಬೇರೆ ಪ್ರಮಾಣಗಳಿಂದ ತಿಳಿಯುತ್ತದೆ. ಇಲ್ಲಾದರೋ, ಚಿತ್ ಮತ್ತು ಅಚಿತ್ತುಗಳು ಬ್ರಹ್ಮದ ಪ್ರಕಾರವಾಗಿರುವುದು ಕಂಡುಬರುತ್ತದೆ. ಆದರೆ ಚಿತ್ ಮತ್ತು ಅಚಿತ್ತುಗಳು ಪೃಥಕ್ಕಾಗಿ ಇರಬಲ್ಲುದು ಎಂಬುದಕ್ಕೆ ಪ್ರಮಾಣವಿಲ್ಲದ್ದರಿಂದ ಅವು ಬ್ರಹ್ಮದ ಪ್ರಕಾರವೆಂಬುದು ಸಿದ್ಧವಾಗುವುದರಿಂದ ಅದು ನಿಯತವಾಗಿ ಪ್ರಕಾರವಾಗಿರುವುದು ಎಂಬುದು ಸಿದ್ಧವಾಗುವುದು.

ಪೂರ್ವಪಕ್ಷಿಯು ಮತ್ತೆ ಆಕ್ಷೇಪಿಸುತ್ತಾನೆ: ದಂಡ ಮತ್ತು ಕುಂಡಲ ಮುಂತಾದ ಶಬ್ದಗಳಂತೆ ಸಾಮಾನಾಧಿಕರಣ್ಯವು ಮತ್ವರ್ಥೀಯ ಪ್ರತ್ಯಯವನ್ನು ಅಪೇಕ್ಷಿಸುತ್ತದೆ ಎಂದು. ಒಂದು ದ್ರವ್ಯವು ಇನ್ನೊಂದು ದ್ರವ್ಯಕ್ಕೆ ಪ್ರಕಾರವಾಗಿರುವುದು ಸಾಧ್ಯವಾದರೂ, ನಿಯತವಾಗಿ ಪ್ರಕಾರವಾಗಿರುವುದು ಸಾಧ್ಯವಿಲ್ಲದ್ದರಿಂದ ಮತ್ವರ್ಥೀಯ ಪ್ರತ್ಯಯದ ಅಪೇಕ್ಷೆಯಿಲ್ಲದೆ ಸಾಮಾನಾಧಿಕರಣ್ಯವು ಸಾಧ್ಯವಿಲ್ಲವೆಂದು.

ಇದನ್ನು ಪರಿಹರಿಸುತ್ತಾರೆ: ಒಂದು ದ್ರವ್ಯವು ಇನ್ನೊಂದು ದ್ರವ್ಯಕ್ಕೆ ಪ್ರಕಾರವಾಗಿರುವುದು ಪ್ರಭಾ ಮತ್ತು ಪ್ರಭಾವತ್ ಗಳಂತೆ ಸಾಧ್ಯವಾದುದರಿಂದ ಒಂದು ದ್ರವ್ಯವು ಇನ್ನೊಂದು ದ್ರವ್ಯಕ್ಕೆ ವಿಶೇಷಣವಾಗಿರುವುದರಲ್ಲಿ ಮತ್ವರ್ಥೀಯ ಪ್ರತ್ಯಯದ ಅಪೇಕ್ಷೆಯಿಲ್ಲದೆ ಸಾಮಾನಾಧಿಕರಣ್ಯವು ಸಾಧ್ಯವೆಂಬುದನ್ನು ತಿಳಿಸುತ್ತಾರೆ, 'ಗೌ:, ಅಶ್ವ: ದೇವ: ಮನುಷ್ಯ:' ಎಂಬ ಉದಾಹರಣೆಯಿಂದ. ದೇವ, ಮನುಷ್ಯ ಮುಂತಾದ ಶಬ್ದಗಳು ಬರೀ ಪಿಂಡವನ್ನು (ಶರೀರವನ್ನು) ಮಾತ್ರ ಹೇಳುವುದಿಲ್ಲವೆಂದು ತಿಳಿಸಲು ಪುಣ್ಯಕರ್ಮದಿಂದ, ಪಾಪಕರ್ಮದಿಂದ ಮುಂತಾಗಿ ಹೇಳಿರುವುದು. ಅಚೇತನವಾದ ಬರೀ ಶರೀರಕ್ಕೆ ಪುಣ್ಯ ಪಾಪಗಳು ಸಾಧ್ಯವಿಲ್ಲವಷ್ಟೆ ? ಗೌ:, ಅಶ್ವ:, ಮನುಷ್ಯ:, ದೇವ: ಎಂಬ ಶಬ್ದಗಳನ್ನು ಉದಾಹರಿಸಿರುವುದು ದೇವತ್ವ, ಮನುಷ್ಯತ್ವ ಮುಂತಾದ ರೂಪಗಳಿಂದ ವಿಶಿಷ್ಟವಾದ ಶರೀರಗಳು ಎಂದರ್ಥ. ದೇವಾದಿ ಶರೀರಗಳು ಚೇತನನಿಗೆ ನಿಯತವಾಗಿ ಪ್ರಕಾರವಾಗಿರುವುವು ಎಂದರ್ಥವು. ಎಂದರೆ, ದೇವ, ಮನುಷ್ಯ ಎಂಬಲ್ಲಿ ಭೂತಸಂಘಾತರೂಪವಾದ ದ್ರವ್ಯಗಳು, ದೇವತ್ವ ಮನುಷ್ಯತ್ವ ಎಂಬ ಆಕಾರದಿಂದ ವಿಶಿಷ್ಟವಾದ ಶರೀರಗಳಾಗಿ ಚೇತನನ ಪ್ರಕಾರವಾಗಿರುವುದು ಲೋಕವೇದಗಳಲ್ಲಿ 'ದೇವದತ್ತನೆಂಬ ಮನುಷ್ಯನು ಹುಟ್ಟಿದನು ಪುಣ್ಯವಿಶೇಷದಿಂದ' ಮುಂತಾಗಿ ಸಾಮಾನಾಧಿಕರಣ್ಯದಿಂದ ಹೇಳಲ್ಪಡುವುದು ಪ್ರಸಿದ್ಧವಾಗಿದೆ ಎಂದರ್ಥವು. ಶರೀರಗಳು ಸಾಮಾನಾಧಿಕರಣ್ಯದಿಂದ ಹೇಳಲ್ಪಟ್ಟವೆ ಎಂಬುದರಿಂದ ಅವುಗಳಿಂದ ತಿಳಿಯಲ್ಪಡುವ ಶಬ್ದಗಳಿಗೂ ಸಾಮಾನಾಧಿಕರಣ್ಯವು ಹೇಳಿದಂತಾಗುವುದು. ಅರ್ಥಗಳಲ್ಲಿ ಸಾಮಾನಾಧಿಕರಣ್ಯವಿದ್ದರೇನೇ ಶಬ್ದಗಳಿಗೆ ಸಾಮಾನಾಧಿಕರಣ್ಯವನ್ನು ಹೇಳಲು ಸಾಧ್ಯವಷ್ಟೆ ? ಶರೀರಕ್ಕೆ ಚೇತನನೊಡನೆ ಸಾಮಾನಾಧಿಕರಣ್ಯ ಎಂದರೆ ಚೈತನ್ಯದೊಂದಿಗೆ ಸಮಾನವಾದ ಆಶ್ರಯವನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಹೊಂದಿರುವುದು. ಶರೀರವೂ, ಚೈತನ್ಯವೂ ಚೇತನನ ವಿಶೇಷಣವು. ಆದರೆ ಶರೀರವು ಉಪಾಧಿಯಿಂದಾದುದು, ಚೈತನ್ಯವು ಸ್ವಾಭಾವಿಕವಾದುದು ಎಂಬುದು ಇಲ್ಲಿ ವಿಶೇಷವು.

ನಂತರ ಭಗವದ್ರಾಮಾನುಜರು ಹೀಗೆ ಉಪಸಂಹಾರಮಾಡುತ್ತಾರೆ: ಜಾತಿಯಾಗಲಿ, ದ್ರವ್ಯವಾಗಲಿ ಆಥವಾ ಗುಣವಾಗಲಿ ಯಾವುದಾದರೂ ಆಗಬಹುದು. ಒಂದು ದ್ರವ್ಯವಿಶೇಷಕ್ಕೆ ವಿಶೇಷಣವಾಗಿಯೇ ಯಾವುದು ಇರುವುದೋ ಅದು ಆ ದ್ರವ್ಯಕ್ಕೆ ಅಪೃಥಕ್ಸಿದ್ಧವಾದುದರಿಂದ ಅದರ ಪ್ರಕಾರವಾಗಿರುವುದರ ಮೂಲಕ ಸಾಮಾನಾಧಿಕರಣ್ಯವನ್ನು ಹೇಳುವುದು ಯುಕ್ತವಾದುದು. ಮತ್ತು, ಯಾವ ದ್ರವ್ಯವು ಬೇರೆಯಾಗಿಯೇ ಇದ್ದುಕೊಂಡು ಯಾವಾಗಲಾದರೂ ಯಾವುದಾದರೂ ಮತ್ತೊಂದು ದ್ರವ್ಯದ ಪ್ರಕಾರವೆಂದು ಹೇಳಲ್ಪಡುವುದೋ ಅಲ್ಲಿ ಮತ್ವರ್ಥೀಯ ಪ್ರತ್ಯಯವನ್ನು ಹೇಳಬೇಕು ಎಂಬುದು ವಿಶೇಷವು. ಹೀಗೆಯೇ ಸ್ಥಾವರ ಜಂಗಮಾತ್ಮಕವಾದ ಎಲ್ಲ ವಸ್ತುಗಳಿಗೂ ಈಶ್ವರನ ಶರೀರವಾಗಿ ಅವನ ಪ್ರಕಾರವಾಗಿರುವುದರ ಮೂಲಕವೇ ಸ್ವರೂಪದ ಇರುವಿಕೆಯು ಎಂಬುದರಿಂದ ಅವನ ಸಾಮಾನಾಧಿಕರಣ್ಯವನ್ನು ಹೇಳುವುದು ಯುಕ್ತವೇ. ಆದ್ದರಿಂದ,

'ಪ್ರಕೃತಿ, ಪುರುಷ, ಮಹತ್, ಅಹಂಕಾರ, ತನ್ಮಾತ್ರೆ, ಭೂತಗಳು, ಇಂದ್ರಿಯಗಳು ಮತ್ತು ಇವುಗಳಿಂದ ಆರಂಭವಾದ ಹದಿನಾಲ್ಕು ಭುವನಗಳನ್ನುಳ್ಳ ಬ್ರಹ್ಮಾಂಡ ಮತ್ತು ಇದರೊಳಗಿರುವ ದೇವ, ಮನುಷ್ಯ, ತಿರ್ಯಕ್, ಸ್ಥಾವರವೇ ಮೊದಲಾಗಿ ಎಲ್ಲವನ್ನೂ ಪ್ರಕಾರವನ್ನಾಗಿ ಹೊಂದಿದ ರೂಪದಲ್ಲಿ ಇರುವ ಕಾರ್ಯವೂ ಸಹ ಸಕಲವೂ ಬ್ರಹ್ಮವೇ ಎಂಬುದಾಗಿ, ಕಾರಣನಾದ ಬ್ರಹ್ಮನನ್ನು ತಿಳಿಯುವುದರಿಂದಲೇ ಸಕಲವೂ ತಿಳಿದಂತಾಗುವುದು ಎಂಬುದರಿಂದ 'ಏಕವಿಜ್ಞಾನದಿಂದ ಸರ್ವವಿಜ್ಞಾನ' ಎಂಬುದು ಅತ್ಯಂತ ಉಪಪನ್ನವಾಗುವುದು. ಅದುವೇ ಕಾರ್ಯ–ಕಾರಣಭಾವವೇ ಮೊದಲಾದುವುಗಳ ಮೂಲಕ ಸಕಲ ಚಿದಚಿದ್ವಸ್ತುಗಳೂ ಪರಬ್ರಹ್ಮನ ಪ್ರಕಾರವಾದುದರಿಂದ ಎಲ್ಲವೂ ಬ್ರಹ್ಮಾತ್ಮಕವೆಂದು ಹೇಳಲ್ಪಟ್ಟಿತು' ಎಂಬುದಾಗಿ.

ಪೂರ್ವಪಕ್ಷಿಯು ಹೇಳುತ್ತಾನೆ: ಅದ್ರವ್ಯವಾಗಿದ್ದು ವಿಶೇಷಣವಾಗಿರುವುದೇ ಮತ್ವರ್ಥೀಯ ಪ್ರತ್ಯಯದ ಅಪೇಕ್ಷೆಯಿಲ್ಲದೆ ಸಾಮಾನಾಧಿಕರಣ್ಯವನ್ನು ಹೇಳುವುದರಲ್ಲಿ ಪ್ರಯೋಜಕವು. ಆದ್ದರಿಂದ ಇಲ್ಲಿ ಸಾಮಾನಾಧಿಕರಣ್ಯವು ಲಾಕ್ಷಣಿಕವು ಎಂಬುದಾಗಿ.

ಅದಕ್ಕೆ ಪರಿಹಾರ ಹೀಗೆ ಹೇಳುತ್ತಾರೆ: ಮತ್ವರ್ಥೀಯ ಪ್ರತ್ಯಯದ ಅಪೇಕ್ಷೆಯಿಲ್ಲದೆ ಸಾಮಾನಾಧಿಕರಣ್ಯವನ್ನು ಹೇಳುವುದರಲ್ಲಿ ಪ್ರಯೋಜಕವು ಜಾತಿತ್ವ, ಗುಣತ್ವ ಆಥವಾ ಬೇರೆ ಯಾವುದಾದರೂ ಆಗಬಹುದು. ಜಾತಿ, ಗುಣ ಆಥವಾ ದ್ರವ್ಯವನ್ನಾಗಲಿ ಮತ್ವರ್ಥೀಯ ಪ್ರತ್ಯಯ ನಿರಪೇಕ್ಷವಾದ ಸಾಮಾನಾಧಿಕರಣ್ಯದಲ್ಲಿ ಪ್ರಯೋಗಿಸುವಾಗ 'ಅದರ ಪ್ರಕಾರವಾಗಿರುವ ಮೂಲಕ ಅಪೃಥಕ್ಸಿದ್ಧವಾದುದು' ಎಂಬುದೇ ಯುಕ್ತವು. ಹಾಗಾದರೆ, 'ದ್ರವ್ಯವನ್ನು ಹೇಳುವ ಪದಗಳು ಆಯಾ ಪ್ರಕಾರಿಯನ್ನು ಹೇಳುವುದಾದರೆ ದಂಡ ಕುಂಡಲ ಮುಂತಾದವುಗಳಿಗೂ ಹಾಗೆಯೇ ಹೇಳಬೇಕಾಗುವ ಪ್ರಸಂಗ ಬರಬಹುದಲ್ಲ' ಎಂದರೆ, ಅವುಗಳಲ್ಲಿರುವ ವೈಷಮ್ಯವನ್ನು ಹೇಳುತ್ತಾರೆ – ಜೀವನನ್ನು ಕುರಿತಂತೆ ಶರೀರವು ನಿಯತವಾಗಿ ಪ್ರಕಾರವಾಗಿರುವುದರಿಂದ ಶರೀರವನ್ನು ಹೇಳುವ ಶಬ್ದಗಳೆಲ್ಲವೂ ಜೀವಪರ್ಯಂತವಾಗಿರುವುವು. ಹಾಗೆಯೇ ಜಗತ್ತನ್ನು ಹೇಳುವ ಶಬ್ದಗಳೆಲ್ಲವೂ ಈಶ್ವರನ ಪರ್ಯಂತವಾದುದು ಎಂಬುದಕ್ಕೆ ಪ್ರಮಾಣವಿರುವುದರಿಂದ ಅದನ್ನು ಪ್ರತಿಪಾದಿಸುವ ನ್ಯಾಯವು ಅಪೇಕ್ಷಿಸಲ್ಪಟ್ಟಿದೆ ಎಂದು.

ಇದಕ್ಕೆ ಪೂರ್ವಪಕ್ಷಿಯು: 'ಹಾಗಾದರೆ ಇದಕ್ಕೆ ಏನು ಪ್ರಮಾಣ? ಇದರಿಂದ ಶಬ್ದಗಳ ವ್ಯುತ್ಪತ್ತಿಯೂ ಭಂಗವಾಗುವುದು. ಮತ್ತು ಘಟ ಪಟ ಮೊದಲಾದವುಗಳಿಗೆ ಆಯಾ ವಿಷಯಗಳನ್ನು ಪ್ರತ್ಯಕ್ಷಪಡಿಸುವುದರಲ್ಲಿ ವಿರೋಧವೂ ಉಂಟಾಗುವುದು' ಎಂದರೆ, ಅದನ್ನು ನಿವಾರಿಸುತ್ತಾರೆ 'ನಾಮರೂಪ ಶ್ರುತಿಗಳಿಂದ ಇದು ಪರಿಹಾರವಾಗುವುದು' ಎಂದು.

ಹೀಗೆ, ಸದ್ವಿದ್ಯೆಯ ಉಪಸಂಹಾರದಲ್ಲಿರುವ 'ತತ್ತ್ವಮಸಿ' ಎಂಬ ಸಾಮಾನಾಧಿಕರಣ್ಯವು ದ್ರವ್ಯೈಕ್ಯವನ್ನು ಹೇಳುವುದಿಲ್ಲ. ಆದರೆ ಆತ್ಮ–ಶರೀರ ಭಾವವನ್ನು ತಿಳಿಸುತ್ತದೆ. ಹೀಗೆ ಉಪಕ್ರಮದಲ್ಲಿರುವ ಏಕವಿಜ್ಞಾನದಿಂದ ಸರ್ವವಿಜ್ಞಾನವೆಂಬ ಪ್ರತಿಜ್ಞಾವಾಕ್ಯವೂ ಸಹ ವಿಶಿಷ್ಟಗಳ ಐಕ್ಯವನ್ನು ತಿಳಿಸುತ್ತದೆ. ಆದ್ದರಿಂದ 'ತತ್ತ್ವಮಸಿ' ಎಂಬ ವಾಕ್ಯವು ವಿಶಿಷ್ಟೈಕ್ಯಪರವಾಗಿಯೇ ಇರುವುದು.

ಬ್ರಹ್ಮವು ತೇಜಸ್ಸು, ಅಪ್ಪು ಮತ್ತು ಅನ್ನಗಳಿಗೆ (ತೇಜೋಬನ್ನ) ಮಾತ್ರ ಕಾರಣವೆಂದರೆ ಸಕಲಕ್ಕೂ ಕಾರಣವೆಂಬುದು ಸರಿಹೊಂದದು ಎಂಬುದರಿಂದ ಅದನ್ನು ಪರಿಹರಿಸಲು ಸದ್ವಿದ್ಯೆಯಲ್ಲಿನ 'ತೇಜೋಬನ್ನ' ಸೃಷ್ಟಿಯನ್ನು ಹೇಳಿರುವುದು ಉಳಿದವುಗಳಿಗೂ ಕಾರಣವೆಂಬುದನ್ನು ತೋರಿಸಲು ಅಷ್ಟೆ. ಆದ್ದರಿಂದ 'ಪ್ರಕೃತಿ, ಪುರುಷ' ಎಂಬುದಾಗಿ ಹೇಳಲಾಗಿದೆ. ದೇವ, ತಿರ್ಯಕ್, ಮನುಷ್ಯ, ಸ್ಥಾವರ ಎಂಬುದು ಕಾರ್ಯವಿಶೇಷಣವು. 'ಆದಿ' ಎಂಬುದರಿಂದ ಇವುಗಳಲ್ಲಿನ ಅವಾಂತರ ಭೇದಗಳೂ ಹೇಳಲ್ಪಟ್ಟವೆ.

'ಸರ್ವಪ್ರಕಾರಸಂಸ್ಥಾನಸಂಸ್ಥಿತಮ್' ಎಂದರೆ ನಾನಾವಿಧವಾದ ರೂಪಗಳಿಂದ ವಿಶಿಷ್ಟವಾದುದು ಎಂದರ್ಥವು. ಆಥವಾ ದೇವತ್ವ, ಮನುಷ್ಯತ್ವ ಮುಂತಾದ ಎಲ್ಲ ಪ್ರಕಾರಗಳೂ ಯಾರಿಗಿದೆಯೋ ಆಯಾರೂಪವೆಂಬ ಅಪೃಥಕ್ಸಿದ್ಧ ಧರ್ಮದಿಂದ ವಿಶಿಷ್ಟವಾಗಿರುವುದು ಎಂದರ್ಥ. ವಿಶಿಷ್ಟವಾದುದೇ ಕಾರ್ಯವು ಮತ್ತು ಆದೇ ಕಾರಣವೂ ಎಂಬುದಾಗಿ ಕಾರ್ಯ–ಕಾರಣತ್ವಗಳಲ್ಲಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅನನ್ಯತ್ವವಿರುವುದರಿಂದ ಕಾರಣವನ್ನು ತಿಳಿದರೆ ಕಾರ್ಯವನ್ನು ತಿಳಿಯಬಹುದೆಂದರ್ಥ. ಹೀಗೆ ಉಪಕ್ರಮ ಮತ್ತು ಉಪಸಂಹಾರ ವಾಕ್ಯಗಳಿಗೆ ವಿಶಿಷ್ಟೈಕ್ಯಪರವಾಗಿ ಅರ್ಥವು ಹೇಳಲ್ಪಟ್ಟಿತು. ಹಾಗೆಯೇ 'ಸನ್ಮೂಲಾ:...' ಎಂಬಲ್ಲಿಯೂ ಆತ್ಮ-ಶರೀರ ಭಾವದಿಂದಲೇ ತಾದಾತ್ಮ್ಯವು. ತಾದಾತ್ಮ್ಯವು ಕಾರ್ಯ-ಕಾರಣಭಾವದಿಂದಲೂ ಮತ್ತು ಪ್ರಕಾರ-ಪ್ರಕಾರಿಭಾವದಿಂದಲೂ ಎರಡು ವಿಧವಾಗಿರುವುದು. ಇಲ್ಲಿ ಕಾರ್ಯ-ಕಾರಣಭಾವದಿಂದಲೇ ಪ್ರಕಾರ-ಪ್ರಕಾರಿ ಭಾವವೂ ಸಿದ್ಧವಾಗುವುದು.

ಹೀಗೆ ಭಗವದ್ರಾಮಾನುಜರು ತಮ್ಮ ಅಮೋಘವಾದ ವೇದಾರ್ಥಸಂಗ್ರಹವೆಂಬ ಗ್ರಂಥರತ್ನದಲ್ಲಿ ಬಹಳ ಮುಖ್ಯವಾದ ಈ 'ತತ್ತ್ವಮಸಿ' ವಾಕ್ಯಾರ್ಥವನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಶ್ರೀ ಸುದರ್ಶನಸೂರಿಗಳ ತತ್ತ್ವದೀಪಿಕೆಯು ಈ ಗ್ರಂಥದಲ್ಲಿನ ಸೂಕ್ಷ್ಮಾರ್ಥಗಳನ್ನೆಲ್ಲ ಅತ್ಯದ್ಭುತವಾಗಿ ಪ್ರಕಾಶಪಡಿಸುತ್ತದೆ. ಈ ಗ್ರಂಥಗಳ ಗೂಢವಾದ ಅರ್ಥಗಳನ್ನು ಈ ಲೇಖನದಲ್ಲಿ ಸಂಗ್ರಹಿಸುವ ಕೈಂಕರ್ಯವು ದಾಸನಿಗೆ ಲಭಿಸಿದ್ದು ಆಚಾರ್ಯರುಗಳ ದಿವ್ಯವಾದ ಅನುಗ್ರಹದಿಂದಲೇ. ಈ ಕೈಂಕರ್ಯವನ್ನು ಪರಮಹಂಸೇತ್ಯಾದಿ ಶ್ರೀ ಶ್ರೀ ಶ್ರೀ ಅಭಿನವ ರಾಮಾನುಜ ಬ್ರಹ್ಮತಂತ್ರಸ್ವತಂತ್ರ ಪರಕಾಲ ಮಹಾದೇಶಿಕರ ನೂರನೆಯ ತಿರುನಕ್ಷತ್ರದ ಶುಭಸಂದರ್ಭದಲ್ಲಿ ಆಚಾರ್ಯವರ್ಯರ ತಿರುವಡಿಗಳಲ್ಲಿ ಸಮರ್ಪಿಸುತ್ತಿದ್ದೇನೆ.

ಇದರಲ್ಲಿನ ದೋಷಗಳನ್ನು ಸಹೃದಯರು ಮನ್ನಿಸಿ ದಾಸನನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತೇನೆ.

The most celebrated Paramacharya

Swamy Deshika is the most celebrated acharya in Srivaishnava sampradayam. Innumerable compositions have been dedicated to his glories that include the likes of – Stotrams, Mangalams, Gadyams, Dandakams, Kavyams, Champus, Sahasranamam, Mantrams, Tani-shlokams, Prabhavams (Biographies), Vaibhavams (Glories), Dramas, Ashtottara-shata namams, Paraaks, Paintings of various styles and innumerable songs with lilting lyrics set to traditional music. Perhaps there is no other personality who has received such an admiration, devotion, followership and oeuvre as our Swamy. Simply said, it is beyond the reach of any human intellectual capacity to completely fathom and measure the glories and greatness of this acharya.

It may be written for ages and ages. Similar to the scriptural passages – "यतो वाचो निवर्तन्ते", it is best therefore to recede and just hold him at par with paramapurusha Sri Lakshmi Hayavadana, better, even higher. To consummately define and celebrate Swamy Deshika, one may say –

श्रीमद्रामानुजार्यैस्स्वहृदय-कवटे क्षेत्र-सारे समुप्तान् सारान् सिद्धान्तशालीन् श्रुतिमकुटगुरु सूक्तिनीराभिशेखैः ।
संवर्ध्य स्फारयुक्तिव्रतति वृतिगणैदुष्प्रवेशान् परेषां यो रक्षत्यार्द्रचित्तो निरवधिदयया तं विना कं भजामि ॥

He by the name Vedanta Deshika, who planted the rich seeds of saaram that were born in the heart of the great Ramanuja, and nurtured them with the waters of his Srisuktis, He who grew them opulently and covered them fully with the creepers of his yukti, to make them unreachable for the adversaries, he who out of mercy always contemplated on the protection of this vrksham, "If not him, who else to worship?!"

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ದೇವರು ಮತ್ತು ಆಚಾರ್ಯರು

ಶ್ರೀಮಾನ್ ಉ. ವೇ ಹೊಸಮನೆ ಶ್ರೀನಿವಾಸಗೊಪಾಲ
ಬೆಂಗಳೂರು

ಶ್ರೀ ಹಯಗ್ರೀವರ ಸಹಸ್ರನಾಮವನ್ನು ತನಗೆ ಉಪದೇಶ ಮಾಡಬೇಕೆಂದು ಕೇಳಿಕೊಂಡ ಕಾಶ್ಯಪ ಮಹರ್ಷಿಯವರಿಗೆ ಚತುರ್ಮುಖ ಬ್ರಹ್ಮನು

ಅಮತ್ಯಾವಿಹಿತಂ ಪಾಪಂ ಮೂಲತೋಹಿ ವಿನಶ್ಯತಿ
ರಹಸ್ಯಾನಾಂ ರಹಸ್ಯಂ ಚ ಪಾವನಾನಾಂ ಚ ಪಾವನಂ
ಪ್ರಾಯಶ್ಚಿತ್ತೇ ಕೃತೇ ತಸ್ಯ ಕರ್ತಾನ ನಿರಯೀಭವೈತ್
ಕಾಮತಸ್ತು ಕೃತೇ ಪಾಪಂ ಪ್ರಾಯಶ್ಚಿತ್ತ ಶತೇನ ಚ

ಎಂದರೆ ತಿಳಿಯದೇ ಮಾಡಿದ ಪಾಪಗಳನ್ನು ಪ್ರಾಯಶ್ಚಿತದ ಮೂಲಕ ನಿವಾರಿಸಬಹುದು. ಆದರೆ ತಿಳಿದೂ ತಿಳುದು ಮಾಡುವ ಪಾಪಗಳಿಗೆ ನೂರು ಪ್ರಾಯಶ್ಚಿತ್ತಗಳಿಂದಲೂ ಪರಿಹಾರವಿಲ್ಲವೆಂದಿದ್ದಾನೆ.

ಪ್ರಾಯಶ್ಚಿತ್ತಗಳಲ್ಲಿ ಒಂದಾದ ನಿತ್ಯಕರ್ಮಗಳಲ್ಲಿ ಸಂಧ್ಯಾವಂದನೆ ಮತ್ತು ಮಂತ್ರ ಜಪಗಳನ್ನು ವಿಧಿವತ್ತಾಗಿ ದೇವರು ಮತ್ತು ಹಿರಿಯರಿಗೆ ವಂದಿಸಿ ಮಾಡುತ್ತಿರುವುದು. ಜಪ ಮಂತ್ರಗಳಲ್ಲಿ ಪ್ರಧಾನವಾದದ್ದು ೧. ಮೂಲಮಂತ್ರ ೨. ದ್ವಯಮಂತ್ರ ೩. ಚರಮ ಶ್ಲೋಕ ಮಂತ್ರ. ಆಸಕ್ತಿಯುಳ್ಳವರು ಶ್ರೀ ಹಯಗ್ರೀವ, ಶ್ರೀ ನೃಸಿಂಹ ಮತ್ತು ಶ್ರೀ ಸುದರ್ಶನ ಮಂತ್ರಗಳನ್ನು ಜಪಿಸಬಹುದು.

ಈ ಮಂತ್ರಗಳನ್ನು ಜಪಿಸಲು ಸದಾಚಾರ್ಯರಿಂದ ಉಪದೇಶ ಪಡೆಯುವುದು ಬಹಳ ಮುಖ್ಯ. ಈ ಕಲಿಯುಗದಲ್ಲಿ ಜನಸಾಮಾನ್ಯರು ದೇವರನ್ನು ಪ್ರತ್ಯಕ್ಷ ನೋಡುವುದಾಗಲೀ ಅವನೊಡನೆ ಸಂಭಾಷಣೆ ಮಾಡುವುದಾಗಲೀ ಸಾಧ್ಯವೇ ಇಲ್ಲ. ಕೇವಲ ಸೂರ್ಯ ಭಗವಾನನು ಪ್ರತಿದಿನವೂ ಎಲ್ಲರಿಗೂ ದರ್ಶನ ಕೊಡುವುದು ನಮ್ಮ ಭಾಗ್ಯ. ವಿಗ್ರಹಗಳೂ ಭಾವಚಿತ್ರಗಳೂ ಮನುಷ್ಯನ ಕಲ್ಪನೆಯಾದರೂ ಪೂಜೆ ಮತ್ತು ಜಪಗಳನ್ನು ಕೇಂದ್ರಿತವಾಗಿರಿಸಲು ಇವುಗಳ ಅವಶ್ಯಕತೆ ಬಹುಮುಖ್ಯ. ಆಚಾರ್ಯರು ಅವರ ಸತತ ಅಭ್ಯಾಸಗಳಿಂದ ತಮ್ಮ ಪ್ರಾರ್ಥನೆಗೆ ದೇವರ ಅನುಜ್ಞೆಯನ್ನು ಪಡೆಯುವ ಸಾಮರ್ಥ್ಯ ಹೊಂದಿದ್ದಾರೆ. ಆದ್ದರಿಂದ ನಾವು ದೇವರನ್ನು ಆಚಾರ್ಯ ಮುಖೇನ ಅನುಭವಿಸಬೇಕು. ಈ ಅನುಭವಕ್ಕೆ ಆಚಾರ್ಯರನ್ನು ಆಶ್ರಯಿಸಲೇಬೇಕು.

ಜನಸಾಮಾನ್ಯರು ದೇವರ ಮೇಲೆ ಅಪಾರ ನಂಬಿಕೆಯಿಂದ ತಮ್ಮ ಇಷ್ಟಗಳನ್ನು ಪಡೆಯಲು ದೇವಾಲಯಗಳಿಗೂ ದೂರದೂರದ ಪುಣ್ಯ ಕ್ಷೇತ್ರಗಳಿಗೂ ಹೋಗಿ ಪ್ರಾರ್ಥನೆ ಮಾಡುತ್ತಾರೆ. ಶ್ರೀ ವೈಷ್ಣವರು ಭಗವದ್ದರ್ಶನಕ್ಕಾಗಿ ದಿವ್ಯ ದೇಶಗಳಿಗೆ ಹೋಗಿ ಬರುತ್ತಾರೆ. ಆದರೆ ಅವರು ಯಾವ ಬೇಡಿಕೆಗಳನ್ನು ಪ್ರಾರ್ಥನೆ ಮಾಡಬೇಕಾಗಿಲ್ಲ. ನಾವು ಮಾಡುವ ನಿತ್ಯ ಮತ್ತು ನೈಮಿತ್ತಿಕ ಕರ್ಮಗಳಲ್ಲಿ 'ಶ್ರೀಮನ್ನಾರಯಣ ಪ್ರೀತ್ಯರ್ಥಂ' ಅಥವಾ 'ಶ್ರೀ ಭಗವತ್ಕೈಂಕರ್ಯ ರೂಪಂ' ಎಂದು ಸಂಕಲ್ಪ ಮಾಡುತ್ತೇವೆಯೆ ಹೊರತು ಯಾವ ಇಷ್ಟಕಾಮ್ಯಗಳಿಗೂ ಸಂಕಲ್ಪ ಮಾಡುವುದಿಲ್ಲ.

ಈ ಕಲಿಯುಗದಲ್ಲಿ ದೇವತಾರ್ಚನೆಯೇ ಬಹಳ ಮುಖ್ಯ. ಈ ಅರ್ಚನೆಯ ಪ್ರಕಾರ ದೇವರೇ ನಮ್ಮ ಪ್ರಾರ್ಥನೆಗಳನ್ನು ಮನ್ನಿಸಿ ನಮಗೆ ಏನು ನೀಡಬೇಕೋ ಅದನ್ನು ಅವನೇ ಪಾಲಿಸುತ್ತಾನೆ. ಆದ್ದರಿಂದ ನಾವು ಪ್ರತಿ ದಿನವು ಸ್ನಾನದ ನಂತರ ಶುಚಿಯಾಗಿ ಸಂಧ್ಯಾವಂದನೆ, ಮಂತ್ರ ಜಪ ಮತ್ತು ಭಗವದಾರಾಧನೆ ಮಾಡಲೇಬೇಕು. ಸಂಧ್ಯಾವಂದನೆಯನ್ನು ಉಪನಯನವಾದಂದಿನಿಂದ ಮಾಡಬಹುದು. ಆದರೆ ಮಂತ್ರ ಜಪ ಮತ್ತು ಭಗವದಾರಾಧನೆಗೆ (ಸಾಲಿಗ್ರಾಮದ ಪೂಜೆ) ಆಚಾರ್ಯರ ಉಪದೇಶ ಬಹಳ ಮುಖ್ಯ. ಇವನ್ನು ಆಚಾರ್ಯರು ಪಂಚಸಂಸ್ಕಾರಗಳ ಮೂಲಕ ಉಪದೇಶ ಮಾಡುತ್ತಾರೆ. ನಾವು ಊಟ, ನಿದ್ರೆಗೆ ಹೇಗೆ ನಿಯಮಿತ ವೇಳೆಯನ್ನು ನಿಗದಿಪಡಿಸಿರುವೆವೋ ಹಾಗೇ ನಿತ್ಯಕರ್ಮಗಳಿಗೂ ಸಮಯವನ್ನು ನಿಗದಿ ಮಾಡಿಕೊಳ್ಳಬೇಕು. ಪಂಚಸಂಸ್ಕಾರವೆಂದರೆ ೧. ತಾಪ (ಭುಜಗಳ ಮೇಲೆ ಶಂಖ ಚಕ್ರಧಾರಣೆ) ೨. ಪುಂಡ್ರ (ಹನ್ನೆರಡು ನಾಮಗಳನ್ನು ಧರಿಸುವುದು) ೩. ನಾಮ (ನಮ್ಮ ಹೆಸರಿನ ಕೊನೆಯಲ್ಲಿ 'ದಾಸ' ಎಂದು ಸೇರಿಸಿಕೊಳ್ಳುವುದು) ೪. ಮಂತ್ರ (ರಾಮಾಯಣ, ಭಾರತ, ಭಾಗವತ ಮತ್ತು ಪ್ರಧಾನ ಮಂತ್ರಗಳು) ೫. ಯಾಗ (ಭಗವದಾರಾಧನೆ).

ಈಗಿನ ಪೀಳಿಗೆಯವರಿಗೆ ಆದರಲ್ಲೂ ಯುವಕರಿಗೆ ದೇವರು ಅಂದರೆ ತಾತ್ಸಾರ. ಕೇವಲ 'ಸಂಕಟ ಬಂದಾಗ ವೆಂಕಟರಮಣ' ಎಂಬ ಗಾದೆಗನುಸಾರ ಅವರು ತಮ್ಮ ಪರೀಕ್ಷೆಗೆ ಮುನ್ನ ದೇವಾಲಯಗಳಿಗೆ ಹೋಗಿ ಪ್ರಾರ್ಥಿಸುವುದು ಸಾಮಾನ್ಯವಾಗಿದೆ. ಕೆಲವರು ತಮ್ಮ ಪ್ರವೇಶಪತ್ರವನ್ನೂ ಪರೀಕ್ಷೆಯಲ್ಲಿ ಉಪಯೋಗಿಸುವ ಲೇಖನ ಸಾಮಗ್ರಿಗಳನ್ನೂ ದೇವರ ಮುಂದಿಟ್ಟು ಆಶೀರ್ವಾದ ಬಯಸುವುದು ಬಹಳ ಜಾಸ್ತಿಯಾಗಿದೆ. ಇದು ಸಾಮಾನ್ಯ ವಿದ್ಯಾರ್ಥಿಗಳ ವಿಷಯವಾದರೆ ನಮ್ಮಲ್ಲಿ ಒಂದು ವಿಶಿಷ್ಟಪಂಗಡದವರಿಗೆ 'ಧನಮದ' ದಿಂದ ಅವರ ಐಶ್ವರ್ಯ, ಆಸ್ತಿ, ಪದವಿಯ ಗರ್ವದಿಂದ ನಿತ್ಯಕರ್ಮಗಳನ್ನು ನಿರಾಕರಿಸುತ್ತರೆ. ಕೆಲವರಂತೂ ಆಚಾರ್ಯರೆಂಬ ಪದವನ್ನು ಕೇಳಿದರೆ ಹಗುರವಾದ ಮಾತನಾಡುತ್ತಾರೆ. ಇವರಿಗೆ ದೇವರಿರಲಿ, ಹಿರಿಯರಿಗೂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮರ್ಯಾದೆ ಕೊಡುವುದು ಬೇಕಿಲ್ಲ. ಅವರ ಉನ್ನತ ಸ್ಥಿತಿ ಅವರ ಪೂರ್ವಜನ್ಮದ ಸುಕೃತ ಎಂದು ಭಾವಿಸುವುದೇ ಇಲ್ಲ ಮತ್ತು ಈ ಜನ್ಮದಲ್ಲಿ ಪಾಪಕರ್ಮಗಳನ್ನು ಮಾಡುವುದೇ ಜಾಸ್ತಿ. ಇದು ಅವರ ಜೀವನದ ಅಶಿಸ್ತನ್ನು ಎತ್ತಿ ತೋರುತ್ತದೆ. ಈ ಅಶಿಸ್ತಿನಿಂದ ಕೆಲವರು ಅವರ ಮನೆಗಳಲ್ಲಿ ಹಿರಿಯರು ಸಾಂಪ್ರದಾಯಿಕವಾಗಿ ನಿತ್ಯಕರ್ಮಗಳನ್ನು ಮಾಡುವಾಗ ತರಹ ತರಹಾವರಿ ತೊಡಕುಗಳನ್ನು ತಂದಿಡುತ್ತಾರೆ. ದೇವರ ತೀರ್ಥ ಮತ್ತು ಪ್ರಸಾದವೆಂದರೆ ಅಸಡ್ಡೆಯಿಂದ ವರ್ತಿಸುತ್ತಾರೆ. ಈಗೀಗ ಅಂತರ್ಜಾತಿ ವಿವಾಹಗಳು ಹೆಚ್ಚಾಗಿ ಸಂಪ್ರದಾಯಗಳಿಗೆ ಚ್ಯುತಿಯನ್ನು ತಂದಿವೆ.

ಉಪನಿಷತ್ತಿನಲ್ಲಿ 'ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ', 'ಮಾತೃ ದೇವೋ ಭವ', 'ಪಿತೃ ದೇವೋ ಭವ', 'ಆಚಾರ್ಯ ದೇವೋ ಭವ' ಎಂದು ನಿರ್ದಿಷ್ಟವಾಗಿ ಋಷಿಗಳು ಸೂಚಿಸಿರುತ್ತಾರೆ. ಗರ್ವಿಗಳು ಇದೆಲ್ಲಾ ಕಟ್ಟುಕಥೆ, ಮೂಢನಂಬಿಕೆ ಎಂದು ಅಸಡ್ಡೆಯಿಂದ ಹೇಳುತ್ತಾರೆ.

ಈ ಅಶಿಸ್ತನ್ನು ನಿವಾರಿಸಿ ಜೀವನದಲ್ಲಿ ಶಿಸ್ತನ್ನು ಕಲಿಸಲು ಕೇವಲ ಆಚಾರ್ಯರಿಗೆ ಸಾಧ್ಯವೇ ಹೊರತು ಬೇರೆ ಯಾರಿಂದಲೂ ಆಗುವುದಿಲ್ಲ. ಆದ್ದರಿಂದ ನಾವು ಆಚಾರ್ಯರನ್ನು ಆಶ್ರಯಿಸಲೇ ಬೇಕು.

ನಾನು ಚಿಕ್ಕವನಾಗಿದ್ದಾಗಲಿಂದಲೇ ನಾನು ಪರಕಾಲ ಮಠಕ್ಕೆ ಸೇರಿದವನು ಎಂದು ಹೇಳಿಕೊಳ್ಳುತ್ತಿದ್ದೆ. ಆದರೆ ಮಠದಲ್ಲಿ ಏನಿದೆ, ಏನಾಗುತ್ತಿದೆ ಎಂಬುದರ ಅರಿವು ಸ್ವಲ್ಪವೂ ಇರಲಿಲ್ಲ. ೧೯೫೦ರ ಒಂದು ದಿನ ನನ್ನ ಸಂಬಂಧಿಕರ ಜೊತೆ ಮೈಸೂರು ಪರಕಾಲ ಮಠಕ್ಕೆ ಹೋಗಿದ್ದಾಗ ನನನ್ನು ಒಳಕ್ಕೆ ಬಿಡಲು ನಿರಾಕರಿಸಿದರು. ಕಾರಣ ನನಗೆ ಶಿಖೆ (ಜುಟ್ಟು) ಇರಲಿಲ್ಲ. ಇದಾದನಂತರ ನಾನು ಮಠದ ಕಡೆ ತಿರುಗಿ ಕೂಡ ನೋಡುತ್ತಿರಲಿಲ್ಲ. ಚಿಕ್ಕಂದಿನಿಂದಲೂ ನನ್ನ ಸಾಹಿತ್ಯ ಸೇವೆ, ನಮ್ಮ ತಂದೆಯವರು ಪ್ರತಿದಿನ ಆರಾಧನೆ ಮಾಡುತ್ತಿದ್ದಾಗ ಕೇಳಿ ಬರುತ್ತಿದ್ದ ಪಂಚಸೂಕ್ತಗಳನ್ನು ಸ್ನಾನ ಮಾಡಿದ ಕೂಡಲೆ ಪಠನ ಮಾಡಿ ದೇವರಿಗೆ ನಮಸ್ಕರಿಸುವುದಷ್ಟೇ ನನ್ನ ಪಾಲಿನ ದೇವತಾರ್ಚನೆಯಾಗಿ ಹೋಗಿತ್ತು. ೧೯೫೭ ರಿಂದ ಪರಕೀಯ ಕಂಪೆನಿಗಳಲ್ಲಿ ಮಾಡುತ್ತಿದ್ದು ಸೇವಾ ಭಾವನೆಯಿಂದ ಜಿಗುಪ್ಸೆಗೊಂಡು ಸಂಸಾರದಿಂದ ಹೊರಬಂದು ಎಲ್ಲಾದರೂ ಸನ್ಯಾಸಿಯಾಗಿ ಬದುಕಬೇಕೆಂದು ಹಂಬಲ ಹೆಚ್ಚಾಗುತ್ತಿತ್ತು. ೧೯೬೪ ರಲ್ಲಿ ಕನ್ಯಾಕುಮಾರಿಯಲ್ಲಿರುವ ಸ್ವಾಮಿ ವಿವೇಕಾನಂದ ಕೇಂದ್ರಕ್ಕೆ ಹೋಗಿ ಅಲ್ಲಿ ನನ್ನ ಮನಸನ್ನು ತೋಡಿಕೊಂಡಾಗ ನನಗಿನ್ನೂ ಸಂಸಾರದ ಜವಾಬ್ದಾರಿ ಇದೆ. ಆದ್ದರಿಂದ ನನ್ನನ್ನು ಅಲ್ಲಿ ಸೇರಿಸಿಕೊಳ್ಳಲಾಗದೆಂದು ಕಡಾ ಖಂಡಿತವಾಗಿ ಹೇಳಿ ಕಳುಹಿಸಬಿಟ್ಟರು. ಯಾವ ಗುರಿಯೂ ಇಲ್ಲದೆ ಹತ್ತು ವರ್ಷಗಳು ಕಳೆದವು. ಆಗ ಪರದೇಶದಲ್ಲಿದ್ದ ನನ್ನ ಮಗನಿಗೆ ವಿವಾಹವಾಗಿ ೧೮ ತಿಂಗಳು ಕಳೆದರೂ ಅವನ ಹೆಂಡತಿ ಅವನ ಜೊತೆ ಇರಲು ಅವಕಾಶವಾಗದಿದ್ದರಿಂದ ನಾನು ಗೋದಾದೇವಿಗೆ ಮೊರೆಯಿಟ್ಟು ಒಂದು ತಿಂಗಳು ಧನುರ್ಮಾಸ ವ್ರತವನ್ನು ಮಾಡಿ ಸಂಕ್ರಾಂತಿ ನಂತರ ಗೋದಾದೇವಿಗೆ ಅಭಿಷೇಕವನ್ನು ಮಾಡಿದ ದಿನ ಸಂಜೆಯೇ ನನ್ನ ಮಗನಿಂದ ಅವನ ಹೆಂಡತಿಗೆ ವೀಸಾ ದೊರಕಿತೆಂದು ಅವಳನ್ನು ಕರೆಸಿಕೊಳ್ಳುವುದಾಗಿಯೂ ಸುದ್ದಿ ಬಂದಾಗ ನಮ್ಮ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಆಗ ನನಗೆ ಚಕ್ರಾಂಕನ ಮಾಡಿಸಿಕೊಳ್ಳುವ ಬಯಕೆಯಾಗಿ ಮೈಸೂರು ಪರಕಾಲ ಮಠಕ್ಕೆ ಒಂದು ಕಾಗದ ಬರೆದೆ ಮತ್ತು ಜಯನಗರದ ಆಂಡವನ್ ಆಶ್ರಮದಲ್ಲಿ ವೇದಾಧ್ಯಯನವನ್ನಾರಂಭಿಸಿದೆ. ಆಗ ಒಂದು ದಿನ ನನ್ನ ಮಿತ್ರರೊಬ್ಬರು ಶ್ರೀ ಮದಾಂಡವನ್ರವರು ಬೆಂಗಳೂರಿಗೆ ಬರುವ ಮತ್ತು ಚಕ್ರಾಂಕನ ಮಾಡುವ ವಿಷಯವನ್ನು ನನಗೆ ತಿಳಿಸಿದಾಗ ನಾನು ಮಾಡಿಸಿಕೊಳ್ಳುತೇನೆಂದು ಹೇಳಿದೆ. ನನ್ನಿಚ್ಛೆ ಒಂದಾದರೆ ದೈವೇಚ್ಛೆ ಬೇರೆಯಾಗಿತ್ತು. ಅಂದೇ ಸಂಜೆ ಆರು ತಿಂಗಳ ನಂತರ ನನಗೆ ಮೈಸೂರು ಪರಕಾಲ ಮಠದಿಂದ ಬಂದ ಪತ್ರದಲ್ಲಿ ಶ್ರೀ ಪರಕಾಲ ಸ್ವಾಮಿಗಳು ಬೆಂಗಳೂರಿಗೆ ಬರುತ್ತಾರೆಂದೂ, ನಾನು ಅವರಿಂದ ಚಕ್ರಾಂಕನ ಮಾಡಿಸಿಕೊಳ್ಳಬಹುದೆಂದು ಬರೆದಿದ್ದರು. ತಕ್ಷಣ ನನ್ನ ಮನಸ್ಸು ಪರಕಾಲ ಮಠದ ಕಡೆ ವಾಲಿತು. ಆಗಲು, ನನ್ನ ೬೩ ನೇ ವರ್ಷದಲ್ಲಿ ಶಿಖೆಯು ಇಲ್ಲದ್ದು ಮತ್ತು ೪೫ ವರ್ಷಗಳ ಹಿಂದೆ ನಡೆದ ಘಟನೆಯನ್ನು ಸ್ವಾಮಿಗಳಿಗೆ ನಿವೇದಿಸಲು ಶ್ರೀಯವರು ಪರವಾಗಿಲ್ಲ ಇನ್ನು ಮುಂದೆಯಾದರು ಶಿಖೆಯನ್ನು ಇಟ್ಟುಕೊಳ್ಳಬಹುದಲ್ಲಾ ಎಂದು ಸೌಶೀಲ್ಯದಿಂದ ಹೇಳಿದ್ದು ಮತ್ತು ನನ್ನ ಶ್ರೀಮತಿಯವರಿಗೆ ಮಡಿಸಾಲು ಸೀರೆ ಅಭ್ಯಾಸವಿಲ್ಲದ್ದರಿಂದ ಅದಕ್ಕೂ ಶ್ರೀಯವರು ಪರವಾಗಿಲ್ಲ ಎಂದು ಇಬ್ಬರಿಗೂ ಚಕ್ರಾಂಕನ ಮಾಡಿ ಶ್ರೀ ಹಯಗ್ರೀವನ ಪಾದುಕಾ ಸೇವೆಯಲ್ಲಿ ನಿರತರಾದ ಶ್ರೀ ಶ್ರೀರವರು ನನ್ನನ್ನು ಹಯಗ್ರೀವನ ಪರಮ ಭಕ್ತನಾಗಿ ಮಾಡಿದರೆಂದರೆ ನನಗೆ ಆಶ್ಚರ್ಯ ಮತ್ತು ಸಂತೋಷವಾಯಿತು ಮತ್ತು ನನ್ನ ಚಿಕ್ಕಂದಿನಿಂದ ಹೇಳಿಕೊಳ್ಳುತ್ತಿದ್ದ ನಾನು ಪರಕಾಲ ಮಠದವನು ಎಂಬುದು ಗಟ್ಟಿಯಾಯಿತು. ಅಂದಿನಿಂದ ಈವರೆಗು ನಾನು ಶ್ರೀ ಲಕ್ಷ್ಮೀ ಹಯಗ್ರೀವನ ಮತ್ತು ಗೋದಾದೇವಿ (ಆಂಡಾಳ್) ಪರಮ ಭಕ್ತನಾಗಿರುವುದು ನಮ್ಮ ಸ್ವಾಮಿಗಳ ಕಟಾಕ್ಷದಿಂದಲೇ ಎಂಬ ದೃಢ ನಂಬಿಕೆ ನನ್ನದು.

ದೇವರ ಕೃಪೆ ಮತ್ತು ಆಚಾರ್ಯರ ಕಟಾಕ್ಷ ಮತ್ತು ಮಂತ್ರಾಕ್ಷತೆ ಮಹತ್ವವನ್ನು ಈ ಮುಂದೆ ನಿವೇದಿಸಿರುವ ನಿಜವಾದ ಘಟನೆಗಳು ತಿಳಿಸುತ್ತದೆ ಮತ್ತು ಇದರಲ್ಲಿ ಆಚಾರ್ಯರ ಪಾತ್ರವನ್ನು ದೃಢಪಡಿಸುತ್ತದೆ.

ಆಚಾರ್ಯ ಕಟಾಕ್ಷ

೧. ೧೯೬೬ರ ಶ್ರೀ ಶ್ರೀರವರ ತಿರುನಕ್ಷತ್ರದಲ್ಲಿ ಪಾಲ್ಗೊಂಡು ಹಿಂತಿರುಗಿ ಬರುವಾಗ ಶ್ರೀ ಶ್ರೀರವರನ್ನು ಭೇಟಿ ಮಾಡಿದಾಗ ಹಠಾತ್ತಾಗಿ ಶ್ರೀ ಶ್ರೀರವರು ನಿಮ್ಮ ಮಗನು ಯಾವುದೋ ಕಷ್ಟದಲ್ಲಿದ್ದಾನೆ, ಅದು ಏನು ಎಂದು ಕೇಳಿದಾಗ ಇಬ್ಬರೂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತಬ್ಬಿಬ್ಬಾದೆವು. ಸ್ವಲ್ಪ ಹೊತ್ತು ಯೋಚಿಸಿ ಅವನು ಮೂರು ತಿಂಗಳಿನಿಂದ ಅವನ ಕಾರ್ಯನಿಮಿತ್ತ ಲಂಡನ್ನಿಗೆ ಹೋಗುವ ವಿಷಯವೂ ಅದು ಅನಿರೀಕ್ಷಿತವಾಗಿ ವಿಳಂಬವಾಗಿರುತ್ತಿದ್ದುದನ್ನು ಶ್ರೀ ಶ್ರೀರವರಿಗೆ ಹೇಳಿದಾಗ ತಕ್ಷಣ ಒಂದು ಹಿಡಿ ಆಕ್ಷತೆಯನ್ನು ಅಭಿಮಂತ್ರಿಸಿ ಕೊಟ್ಟು ಅದನ್ನು ಅವನಿಗೆ ತಲುಪಿಸಬೇಕೆಂದು ಕೊಟ್ಟರು. ಕಾರಣಾಂತರದಿಂದ ಅದನ್ನು ಸುರಕ್ಷಿತವಾಗಿ ಅವನಿಗೆ ತಲುಪಿಸುವುದಕ್ಕೆ ೬ ವಾರ ಕಳೆದು ಹೋಯಿತು. ಕಾರಣ ಅವನಿರುವ ದೇಶದಲ್ಲಿ ಹಳದಿ ಪದಾರ್ಥಗಳು ಅಷ್ಟು ಸುಲಭವಾಗಿ ಬಿಡುತ್ತಿರಲಿಲ್ಲ. ಅವನಿಗೆ ಈ ಆಕ್ಷತೆ ಸಿಕ್ಕಿದ ಒಂದು ವಾರದೊಳಗೆ ಅವನು ಲಂಡನ್ ನಿಂದಲೇ ಸಂದೇಶ ಕಳುಹಿಸಿದನು. ಈ ಘಟನೆ ಅದ್ಭುತ ಮತ್ತು ಆಶ್ಚರ್ಯಕರ. ಚಿರಂಜೀವಿಯು ಆಗಿನಿಂದಲೇ ಮಾನಸಿಕವಾಗಿ ಸ್ವಾಮಿಗಳ ಶಿಷ್ಯನಾಗಿ ನಂತರ ದಂಪತಿಗಳು ರಜೆಯಲ್ಲಿ ಬಂದ ಕೂಡಲೆ ಚಕ್ರಾಂಕನ ಮಾಡಿಸಿಕೊಂಡರು.

೨. ಎರಡನೆಯ ಘಟನೆ ಇನ್ನೂ ಅದ್ಭುತ ಮತ್ತು ರೋಮಾಂಚಕ. ನನಗೆ ೪-೧೦-೨೦೦೪ ರಂದು ಗಂಟಲಿನ ಶಸ್ತ್ರಚಿಕಿತ್ಸೆ ಮಾಡಿ ಧ್ವನಿಪೆಟ್ಟಿಗೆ ತೆಗೆದು ಹಾಕಿದ ಮೂರು ತಿಂಗಳ ನಂತರ ಆರೋಗ್ಯ ಹದಗೆಟ್ಟು ನಿಶ್ಚೇತನನಾದೆ. ಇನ್ನೇನು ಕೊನೆಯ ಘಳಿಗೆಯೇನೋ ಎಂದು ಪರಿತಪಿಸುತ್ತಿದ್ದ ನಮ್ಮ ಮನೆಯವರಿಗೆ ನಮ್ಮ ಮಿತ್ರರೊಬ್ಬರು ಶ್ರೀ ಶ್ರೀರವರ ಶ್ರೀನಿವಾಸ ಗೋಪಾಲರನ್ನು ನೋಡಲು ಮನೆಗೆ ಇನ್ನು ೧೦ ನಿಮಿಷಗಳಲ್ಲಿ ಬರುತ್ತಾರೆಂದು ದೂರವಾಣಿ ಕರೆ ಮಾಡಿದರು. ಆಗ ಮನೆಯಲ್ಲಿದ್ದವರೆಲ್ಲಾ ಅವರನ್ನು ಹೇಗೆ ಬರಮಾಡಿಕೊಳ್ಳಬೇಕೆಂದು ಚಡಪಡಿಸುತ್ತಿರುವಾಗಲೇ ಶ್ರೀ ಶ್ರೀರವರು ೧೦ – ೧೨ ಶಿಷ್ಯರೊಂದಿಗೆ ದಡ ದಡ ಎಂದು ಮನೆಗೆ ಬಂದು ಕೋಣೆಯಲ್ಲಿ ನನ್ನ ಹಾಸಿಗೆಯ ಪಕ್ಕದಲ್ಲೇ ಕುಳಿತು ನಾನು ಏಳಬಾರದೆಂದೂ ಹಾಗೆಯೇ ಮಲಗಿರಬೇಕೆಂದು ಹೇಳಿ, ನಡೆದ ವಿಷಯಗಳನ್ನು ಸುಮಾರು ೪೫ ನಿಮಿಷಗಳಲ್ಲಿ ಕೇಳಿ ತಿಳಿದು ಒಂದು ಹಿಡಿ ಮಂತ್ರಾಕ್ಷತೆಯನ್ನು ೧೫ ನಿಮಿಷಗಳ ಕಾಲ ಅಭಿಮಂತ್ರಿಸಿ ನನ್ನ ಶ್ರೀಮತಿಯವರಿಗೆ ಕೊಟ್ಟು ಅದನ್ನು ಹಳದೀ ಬಟ್ಟೆಯಲ್ಲಿ ಕಟ್ಟಿ ದೇವರ ಮನೆಯಲ್ಲಿಡಬೇಕೆಂದೂ, ನಾನು ಆಂದಿನ ಸಂಜೆಯ ವೇಳೆಗೆ ಎದ್ದು ಕೂರುವ ಮತ್ತು ಮರುದಿನವೇ ಸಹಾಯದಿಂದ ನಡೆಯುವ ವಿಷಯವನ್ನು ತಿಳಿಸಿ ಯಾವ ತರಹದ ಆತಿಥ್ಯವನ್ನೂ ಅಪೇಕ್ಷಿಸದೆ ನನ್ನನ್ನು ಆಶೀರ್ವದಿಸಿ ಹಿಂತಿರುಗಿದರು. ಎಲ್ಲರಿಗೂ ಆಶ್ಚರ್ಯವಾಗುವಂತೆ ೧೦ ದಿನಗಳಿಂದ ಏಳಲು ಆಗದವನು ಅದೇ ಸಂಜೆ ಇಬ್ಬರ ಸಹಾಯದಿಂದ ನಾನು ಎದ್ದು ಕುಳಿತುಕೊಳ್ಳಲು ಆಯಿತು. ಮತ್ತು ಮಾರನೇ ದಿನ ಬೆಳಿಗ್ಗೆ ವಾಕರ್ ಸಹಾಯದಿಂದ ನನ್ನ ಕೋಣೆಯಿಂದ ದೇವರಮನೆಯವರಿಗೆ ನಡೆಯುವಂತಾಯಿತು. ಇದು ನಿಜವಾಗಿಯೂ ಅದ್ಭುತ ಮತ್ತು ಶ್ರೀ ಶ್ರೀರವರ ಹೇಳಿಕೆ ಸತ್ಯವಾಯಿತು.

ಈಗಲೂ ನಾನಾಗಲೀ ನನ್ನ ಮಗನಾಗಲೀ ನಮಗೆ ಯಾವ ಕಷ್ಟ ಬಂದರೂ ಶ್ರೀ ಶ್ರೀರವರಿಗೆ ಮನವರಿಕೆ ಮಾಡುವುದು ಅಭ್ಯಾಸವಾಗಿ ಹೋಗಿದೆ. ಈ ಎರಡು ಘಟನೆಗಳು ನಿಜವಾಗಿ ನಡೆದಿದ್ದೇ ಕಲ್ಪನೆಯಲ್ಲ.

–ಹೊಸಮನೆ ಶ್ರೀನಿವಾಸಗೋಪಾಲ.

Alankara manihara

alankAra Sastram is a deep accomplished science in sanskrit. There are innumerable works that elaborate this domain. One such distinguished work is "alankAra-maNihAra". This huge work of around 2000 pages and four volumes was composed by the 31st pattam parakAla swAmy – Srl kRShNa-brahmatantra-swatantra parakAla mahAdESikan, who was a paramount in terms of samskRuta vAngmayam. This swAmy has covered all alankArams with detailed vyAkhyAnams and examples. All examples have also been composed by this swAmy and all of them have been dedicated to Thirumalai SrInivAsa alone. The upOdghAtam of this work celebrates the AchArya paramparai. The corresponding verse on swAmy in this upOdghAtam is covered here. This is again very rich in SlESArthams as will be evident subsequently.

स्मृति-सन्देह-भ्रान्तिमदसङ्गति-विकल्प-मीलनोल्लासी। वेदान्तदेशिकमणिर्मोदान्विदधातु जगदलङ्कारः॥

May I be bestowed with bliss, by that resplendent gem, vEdAnta-dESika, who beams blemishless as the ornament of the universe, who takes great delight in relieving the world from the influences of those who question the authority of the mAnava dharma samhitAs (smRtisandEham), from purport (asangati - vitaNDAvAdi).

Amongst the many alankArA-s of sanskrit, the saptAlankAras may be found in the first line. smRityalankAra, sandEhAlankAra, bhrAntyalankAra, asangatyalankAra, vikalpAlankAra, mIlanAlankAra, ullAsAlankAra. The verse says that not only these seven but all the alankArAs have attained swAmy who is their alankAram. swAmy is the alankAram of alankArams themselves. And this swAmy of ours is the jewel of the universe (jagadalankAra:).

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವೇದಾಂತವೂ ವ್ಯವಹಾರವೂ

ಶ್ರೀಮತೀ ಎ. ಗೀತಾರಾಘವನ್
ಬೆಂಗಳೂರು

ಮಾನವನ ನೈತಿಕ, ಧಾರ್ಮಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಭಾವನೆಗಳಿಗೂ, ಆದರ್ಶಗಳಿಗೂ ಮೂಲವಾಗಿ, ಒಂದು ದೇಶ, ಕಾಲ, ಜನಾಂಗವೆಂಬ ಮಿತಿ ಇಲ್ಲದೆ ಮಾನವ ಕುಲಕ್ಕೆ ಉಪದೇಶ ನೀಡುವ ವೇದ ವಾಙ್ಮಯ ವಿಶ್ವದ ಅತಿ ಪ್ರಾಚೀನ ಜ್ಞಾನ ಭಂಡಾರ. ಈ ವೇದದ ಅಂತಿಮ ಭಾಗಗಳಾಗಿ ವೇದಾಂತವೆಂದು ಪ್ರಖ್ಯಾತವಾಗಿರುವ ಉಪನಿಷತ್ತುಗಳು ವೇದವಾಙ್ಮಯದ ಉತ್ತುಂಗ ಶಿಖರಗಳು. ಈ ಉಪನಿಶತ್ತುಗಳು ಮಹತ್ತರವಾದ ವಿಚಾರಧಾರೆಯನ್ನು ಅತ್ಯಂತ ಸರಳವೂ ಮಾರ್ಮಿಕವೂ ಆದ ರೀತಿಯಲ್ಲಿ ಪ್ರತಿಪಾದಿಸುತ್ತದೆ.

'ಉಪನಿಷತ್' ಎಂದರೆ ರಹಸ್ಯವಾದ ವಿದ್ಯೆ. 'ಏಷಾ ವೇದೋಪನಿಷತ್' – ಗುರುವಿನ ಸಮೀಪದಲ್ಲಿ ಕುಳಿತು ಗುರುವಿನಿಂದ ಅರಿಯಬೇಕಾದ ರಹಸ್ಯತಮ ಜ್ಞಾನ. ಈ ಜ್ಞಾನವನ್ನು ಎಲ್ಲರಿಗೂ ಸುಮ್ಮನೆ ಉಪದೇಶಿಸುವಂತಿಲ್ಲ. ಈ ಲೋಕದ ದುಃಖಗಳನ್ನು ಕಂಡು ಇದನ್ನು ಪರಿಹರಿಸಿಕೊಳ್ಳಲು ಉಪಾಯಕಾಣದೆ ಖಿನ್ನನಾದವನು ಇದನ್ನು ಉಪದೇಶಿಸಬಲ್ಲ ಗುರುವನ್ನು ಹುಡುಕಿಕೊಂಡು ಹೋಗಬೇಕೆಂದೂ ಅಂತಹ ಶಿಷ್ಯನಿಗೆ ಗುರುವು ಆ ಬ್ರಹ್ಮವಿದ್ಯೆಯನ್ನು ಯಥಾರ್ಥವಾಗಿ ಉಪದೇಶಿಸಬೇಕೆಂದು ಉಪನಿಷತ್ ವಿಧಿಸುತ್ತದೆ. ಉಪನಿಷತ್ತುಗಳ ಸಂಖ್ಯೆಯ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ. ಲಬ್ಧವಿರುವ ಉಪನಿಷತ್ತುಗಳಲ್ಲಿ ಅತ್ಯಂತ ಪ್ರಾಚೀನವೂ ಮಹತ್ವಪೂರ್ಣವೂ ಆದ ಉಪನಿಷತ್ತುಗಳು ಹದಿಮೂರು ಅಥವಾ ಹದಿನಾಲ್ಕೆಂದು ಅಂಗೀಕರಿಸಲಾಗಿದೆ. ದಶೋಪನಿಷತ್ತುಗಳೆಂದು ಪ್ರಖ್ಯಾತವಾದ ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ ಉಪನಿಷತ್ತುಗಳೊಡನೆ ಕೌಷೀತಕಿ, ಶ್ವೇತಾಶ್ವತರ ಮತ್ತು ಮೈತ್ರಾಯಣೀಯ ಹಾಗು ನಾರಾಯಣೀಯ ಉಪನಿಷತ್ತುಗಳು ಈ ಗುಂಪಿಗೆ ಸೇರಿವೆ. ಉಪನಿಷತ್ತುಗಳ ಕಾಲವಿಚಾರದಲ್ಲೂ ಪ್ರಾಚ್ಯ ಪಾಶ್ಚಾತ್ಯ ಪಂಡಿತರಲ್ಲಿ ಭಿನ್ನಾಭಿಪ್ರಾಯವಿದೆ. ಅತ್ಯಂತ ಪ್ರಾಚೀನವೆನ್ನಲಾದ ಉಪನಿಷತ್ತುಗಳು ಬೌದ್ಧ ಧರ್ಮದ ಆರಂಭಕ್ಕೂ ಹಿಂದಿನ ಕಾಲಕ್ಕೆ ಸೇರಿದುವೆಂದು ಎಲ್ಲರೂ ಒಪ್ಪುತ್ತಾರೆ. ಇವುಗಳಲ್ಲಿ ಬೌದ್ಧ ಧರ್ಮದ ಅಂಶಗಳಾವುವೂ ದೊರಕದೇ ಇರುವುದೇ ಇದಕ್ಕೆ ಕಾರಣವಾಗಿದೆ.

ಉಪನಿಷತ್ತಿನಲ್ಲಿ ಬರುವ ವಿಚಾರ ಸತ್ಯದ ಅನ್ವೇಷಣೆ. ಜಗತ್ಕಾರಣ ಯಾವುದು? ನಾವು ಎಲ್ಲಿಂದ ಬಂದೆವು? ಯಾರ ಕಟ್ಟಲೆಗೊಳಗಾಗಿ ಇಲ್ಲಿ ಸುಖದುಃಖಗಳನ್ನು ಅನುಭವಿಸುತ್ತಾ ತೊಳಲುವೆವು? ಇಲ್ಲಿಂದ ಮುಂದೆ ನಾವು ಹೋಗುವುದಾದರೂ ಎಲ್ಲಿಗೆ? ಈ ಬಗೆಯ ತತ್ತ್ವವಿವೇಚನೆ – ಮಾನವಕೋಟಿ ಮುಟ್ಟಬಹುದಾದಂತಹ ಅತ್ಯುನ್ನತ ಮಟ್ಟದ ತತ್ತ್ವ ದರ್ಶನ.

ಈ ಲೋಕದಲ್ಲಿ ನಮ್ಮ ದಿನದಿನದ ವ್ಯವಹಾರಕ್ಕೆ ಗೋಚರವಾಗುತ್ತಿರುವ ವಿಚಾರಗಳೂ ಸುಖದುಃಖಗಳೂ ನಿತ್ಯವೇ ಅಲ್ಲವೇ ಎಂಬ ಜಿಜ್ಞಾಸೆ ಬೆಳೆದು ಇವೆಲ್ಲಾ ಅಲ್ಪವೂ ಅಸ್ಥಿರವೂ ಆದುವುಗಳೆಂದು ತಿಳಿಯ ಪಡಿಸಿವೆ. ಇವುಗಳ ಹಿನ್ನೆಲೆಯಲ್ಲಿ ಯಾವುದೋ ಒಂದು ಸತ್ಯಸ್ಥಿತಿ ಇದೆಯೆಂದೂ, ಅದನ್ನು ಪಡೆದರೆ ಮನಃಶ್ಶಾಂತಿ ಸಿಗುವುದೆಂದೂ ತಿಳಿಸಲಾಗಿದೆ. ಉಪನಿಷತ್ತುಗಳ ವಿಚಾರಧಾರೆ ಅನೇಕ ದೇವತೋಪಾಸನೆಯಿಂದ ಏಕದೇವತೋಪಾಸನೆಕಡೆಗೆ ಸಾಗಿ, ಪುರುಷ ಹಾಗು ಪ್ರಕೃತಿಗಳಿಗಿಂತ ವಿಲಕ್ಷಣವಾದ ಪರಮಾತ್ಮ ತತ್ತ್ವವನ್ನು ಬಹಳ ಯಶಸ್ವಿಯಾಗಿ ಪ್ರತಿಪಾದಿಸಿವೆ.

ಉಪನಿಷತ್ತಿನ ಕಾಲದಲ್ಲಿ ಪರಿಶುದ್ಧವಾದ ವ್ಯಕ್ತಿಜೀವನಕ್ಕೆ ಬಹಳ ಗೌರವವಿತ್ತು. ಜನರು ಪಾಪದೂರವಾದ ಜೀವನವನ್ನು ನಡೆಸುತ್ತಿದ್ದರು. ಕಳ್ಳಕಾಕರನ್ನು ಹಿಡಿದು ಶಿಕ್ಷಿಸುತ್ತಿದ್ದರು. ರಾಜರು ಪ್ರಜೆಗಳಿಂದ ತೆರಿಗೆಗಳನ್ನು ತೆಗೆದುಕೊಳ್ಳುತ್ತಿದ್ದರು. ದೇಶದಲ್ಲಿ ಸುಭಿಕ್ಷತೆಯೂ, ನ್ಯಾಯಪಾಲನೆಯೂ ಇರುವಂತೆ ನೋಡಿಕೊಳ್ಳುತ್ತಿದ್ದರು. ರಾಜರುಗಳು ಕ್ಷತ್ರಿಯರೇ ಆಗಿರುತ್ತಿದ್ದರು. ವೇದವೇದಾಂತಗಳಲ್ಲಿ ಅವರು ನಿಷ್ಣಾತರಾಗಿರುತ್ತಿದ್ದರು. ಆಧ್ಯಾತ್ಮಿಕ ವಿಚಾರಗಳ ಚರ್ಚೆಯಲ್ಲಿ ಅತ್ಯಾಸಕ್ತಿವಹಿಸುತ್ತಿದ್ದರು. ಬ್ರಹ್ಮವಿದ್ಯೆಯಲ್ಲಿ ಪಾಂಡಿತ್ಯಹೊಂದಿದ್ದ ಬ್ರಾಹ್ಮಣರು ದೇಶದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಂಚರಿಸುತ್ತಾ ತಮಗೆ ಕರಗತವಾಗಿದ್ದ ವಿದ್ಯೆಯನ್ನು ಉಪದೇಶಿಸುತ್ತಿದ್ದರು. ಯಾಜ್ಞವಲ್ಕ್ಯ, ಉದ್ದಾಲಕ, ಆರುಣಿ, ಆಂಗಿರಸ, ಸತ್ಯಕಾಮಜಾಬಾಲ ಮುಂತಾದವರೆಲ್ಲಾ ಅಂದು ಇದ್ದವರೇ ಆಗಿರಬೇಕು. ಚಾತುರ್ವರ್ಣ್ಯ ವ್ಯವಸ್ಥೆ ಸುಭದ್ರವಾಗಿತ್ತು. ಕ್ಷತ್ರಿಯರು ವೇದಾಭ್ಯಾಸ ಮಾಡುತ್ತಿದ್ದರು. ಯಾಗಾದಿಗಳನ್ನು ಅನುಷ್ಠಿಸುತ್ತಿದ್ದರು. ಪ್ರಜೆಗಳನ್ನು ಆಳುತ್ತಿದ್ದರು. ಸಾಮಾಜಿಕವಾಗಿ ಬ್ರಾಹ್ಮಣರಿಗಿಂತ ಮೇಲಿನ ಸ್ಥಾನವನ್ನು ಅವರು ಹೊಂದಿದ್ದರು. 'ತಸ್ಮಾದ್ಬ್ರಾಹ್ಮಣಃ ಕ್ಷತ್ರಿಯಮಧಸ್ತಾದುಪಾಸ್ತೇ' ಬ್ರಾಹ್ಮಣರು ಆಚಾರ್ಯರುಗಳಾಗಿದ್ದ ಕಾರಣ ಧಾರ್ಮಿಕವಾಗಿ ಮೇಲಿನವರಾಗಿದ್ದರು. ಬ್ರಾಹ್ಮಣರು ಕ್ಷತ್ರಿಯರಿಂದಲೂ ಬ್ರಹ್ಮವಿದ್ಯೆಯನ್ನು ಕಲಿತ ನಿದರ್ಶನಗಳು ಉಪನಿಷತ್ತುಗಳಲ್ಲಿವೆ. ಶ್ವೇತಕೇತು ಆರುಣೇಯ ಅಶ್ವಪತಿಯಿಂದ ಬ್ರಹ್ಮವಿದ್ಯೆಯನ್ನು ಕಲಿತನು.

ನಾಲ್ಕು ವರ್ಣಗಳ ಜೊತೆಗೆ ನಾಲ್ಕು ಆಶ್ರಮಗಳು ಉಪನಿಷತ್ತುಗಳ ಕಾಲಕ್ಕೆ ರೂಢಿಗೆ ಬಂದಿದ್ದವು. ಬ್ರಹ್ಮವಿದ್ಯೆಯನ್ನು ಉಪದೇಶಿಸಿದ ಆಚಾರ್ಯನಿಗೆ ಬಹಳ ಮುಖ್ಯವಾದ ಸ್ಥಾನವಿತ್ತು. 'ಆಚಾರ್ಯಸ್ತು ತೇ ಗತಿಂ ವಕ್ತಾ ಆಚಾರ್ಯಾದ್ಧ್ಯೈವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪಯಃ'.

ಛಾಂದೋಗ್ಯ ಉಪನಿಷತ್ತಿನಲ್ಲಿ ವಿವಿಧ ವಿದ್ಯೆಗಳ ಉಲ್ಲೇಖವಿದೆ. ಅಲ್ಲಿ ಹೇಳಿರುವ ಪಿತ್ರ್ಯಂ, ರಾಶಿಂ, ದೈವಂ, ದೇವ ವಿದ್ಯಾ, ಬ್ರಹ್ಮ, ಭೂತವಿದ್ಯಾ, ಕ್ಷತ್ರಿಯವಿದ್ಯಾ, ನಕ್ಷತ್ರ ವಿದ್ಯಾ ಮುಂತಾದುವುಗಳು. ಕೇವಲ ಕಾಲ್ಪನಿಕವಾಗಿರದೆ ಯಥಾರ್ಥವಾಗಿ ಕಲಿಯತಕ್ಕ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಿದ್ಯೆಗಳಾಗಿದ್ದುವು. ವೇದಾಭ್ಯಾಸಕ್ಕೆ ಪ್ರಾಮುಖ್ಯವಿತ್ತು. ವೇದಗಳನ್ನು ಕಂಠಪಾಠ ಮಾಡಿ ಆಗಾಗ ಹೇಳುತ್ತಿದ್ದರು. ಬೃಹದಾರಣ್ಯಕದಲ್ಲಿ 'ಭಿಕ್ಷಾಚರ್ಯಂ ಚರಂತಿ' ಎಂಬುವುದರಿಂದ ಪ್ರಾಯಶಃ ಸಂನ್ಯಾಸಾಶ್ರಮ ಉಪನಿಷತ್ತಿನ ಕಾಲದಲ್ಲಿ ರೂಢಿಗೆ ಬಂದಿರಬೇಕು. ಸ್ತ್ರೀಯರು ಆಧ್ಯಾತ್ಮವಿಚಾರಕ್ಕೆ ಇಳಿಯಲು ಅವಕಾಶವಿತ್ತು. ಸುಲಭಾ, ಗಾರ್ಗಿ ಮುಂತಾದ ಬ್ರಹ್ಮವಾದಿನಿಯರು ಆ ಕಾಲದಲ್ಲಿದ್ದರು.

ಛಾಂದೋಗ್ಯದಲ್ಲಿ ಪಂಚಮಹಾಪಾತಕಗಳ ಉಲ್ಲೇಖವಿದೆ. ಸುರಾಪಾನವೂ ಪಂಚಪಾತಕಗಳಲ್ಲಿ ಒಂದೆಂದು ಇಲ್ಲಿ ಉದಾಹರಿಸಿದೆ. ಅನೇಕ ಪತ್ನಿಯರನ್ನು ವಿವಾಹವಾಗುವ ಪದ್ಧತಿಯೂ ಸಮಾಜದಲ್ಲಿತ್ತು. ದ್ಯೂತಪಣಗಳು ರೂಢಿಯಲ್ಲಿದ್ದವು. ಸತ್ಯವಾದಿತ್ವಕ್ಕೆ ಬಹಳ ಬೆಲೆಯಿತ್ತೆಂಬುದಕ್ಕೆ ಸತ್ಯಕಾಮ ಜಾಬಾಲನ ಕಥೆ ಉದಾಹರಣೆ. ಜನರು ಸತ್ಯಸಂಧರಾಗಿದ್ದರೆಂಬುದನ್ನು ಕ್ರಿ. ಪೂ ೩೦೦ ರಲ್ಲಿ ಅಲೆಕ್ಸಾಂಡರನ ಜೊತೆಯಲ್ಲಿ ಬಂದಿದ್ದ ಇತಿಹಾಸಕಾರರೂ, ಕ್ರಿ. ಶ ೯೦೦ ರ ಕಾಲದ ಅರಬ್ಬಿ ಪ್ರಯಾಣಕರೂ, ಕ್ರಿ. ಶ ೧೪೦೦ ಕಾಲದ ಮಾರ್ಕೋ ಪೋಲೋ ಹೇಳುತ್ತಾರೆ.

ಜನರು ನಾಗರೀಕತೆಯಲ್ಲಿ ಮುಂದುವರೆದಿದ್ದರು. ಅನೇಕ ಲೋಹಗಳ ಪರಿಚಯ ಅವರಿಗಿತ್ತು. ಪ್ರತಿಯೊಬ್ಬ ಗೃಹಸ್ಥನೂ ಅಗ್ನಿಹೋತ್ರಾದಿಗಳನ್ನು ಇಟ್ಟುಕೊಂಡಿದ್ದನು. 'ನ ಅನಾಹಿತಾಗ್ನಿ' ಇದನ್ನು ಸೂಚಿಸುತ್ತದೆ. ಇದನ್ನು ಸಮರ್ಥಿಸುತ್ತದೆ ಬೃಹದಾರಣ್ಯಕದ ವಚನ 'ವೇದಾನುವಚನೇನ ಬ್ರಹ್ಮಣಾ ವಿವಿದಿಶಂತಿ ಯಜ್ಞೇನ ದಾನೇನ ತಪಸಾ ಅನಾಶಕೇನ'.

ಸಮಾಜಜೀವನ ಸಾಕಷ್ಟು ಸುಖಮಯವಾಗಿತ್ತು. ಜನತೆಯಲ್ಲಿ ನಿರಾಶಾವಾದವಿರಲಿಲ್ಲ. ಒಬ್ಬನ ಅತೃಪ್ತಿ ಹಾಗು ಅಸುಖಗಳಿಗೆ ಇನ್ನೊಬ್ಬನು ಹೊಣೆಗಾರನೆಂದು ಯಾರೂ ತಿಳಿದಿರಲಿಲ್ಲ. ಒಬ್ಬನು ಮತ್ತೊಬ್ಬನನ್ನು ಹಿಂಸೆಗೊಳಪಡಿಸುತ್ತಿರಲಿಲ್ಲ. ಜನ್ಮ, ಮೃತ್ಯು, ಜರಾ, ವ್ಯಾಧಿ, ದುಃಖ ಮುಂತಾದುವು ವೈರಾಗ್ಯಕ್ಕೆ ಕಾರಣವಾಗಿದ್ದವು.

ವಿದ್ಯೆ – ಪರಾ, ಅಪರಾ ಎಂದು ಎರಡು ವಿಧವೆಂದೂ, ಸ್ವರ್ಗಕ್ಕೆ ದಾರಿಯಾದ ಯಾಗಾನುಷ್ಠಾನಗಳು ಅಪರಾವಿದ್ಯೆಯೆಂದೂ, ಅತ್ಯದ್ಭುತವಾದ ಬ್ರಹ್ಮವನ್ನು ಪಡೆಯುವ ವಿದ್ಯೆ ಪರಾವಿದ್ಯೆ, ಬ್ರಹ್ಮವಿದ್ಯೆ ಎಂದು ಉಪನಿಷತ್ತು ತಿಳಿಸಿತು.

ಯಾಗಾದ್ಯನುಷ್ಠಾನಗಳಿಂದ ಪಡೆಯುವ ಸ್ವರ್ಗಫಲಾದಿಗಳು ಅಲ್ಪವೂ, ಅಸ್ಥಿರವೂ ಆದ ಕಾರಣ, ಅನಂತವೂ ಅಕ್ಷಯವೂ ಆದ ಬ್ರಹ್ಮ ಪ್ರಾಪ್ತಿಯೇ ಜನರ ಧ್ಯೇಯವಾಗಬೇಕೆಂದು ಉಪನಿಷತ್ತುಗಳು ಬೋಧಿಸಿದುವು.

'ಅಮೃತತ್ವಸ್ಯ ತು ನಾಶಾಸ್ತಿ ವಿತ್ತೇನ', 'ನ ವಿತ್ತೇನ ತರ್ಪಣೀಯೋ ಮನುಷ್ಯಃ' ಎಂದು ಮತ್ತೆ ಮತ್ತೆ ಸಾರಿ ಕೇವಲ ಸಂಪದಭ್ಯುದಯಗಳಿಂದ ಪರಮ ಪುರುಷಾರ್ಥದ ಪ್ರಾಪ್ತಿಯಾಗದ ಕಾರಣ ಅದನ್ನು ತ್ಯಾಗಮಾಡಬೇಕೆಂದು ಘೋಷಿಸಿತು. ಪ್ರೇಯಸ್ಸನ್ನೂ ತ್ಯಜಿಸಿ ಶ್ರೇಯಸ್ಸನ್ನು ಸಾಧಿಸಬೇಕೆಂದು ಉಪದೇಶಿಸಿತು. ಪ್ರಪಂಚದ ಭೋಗಗಳಲ್ಲೇ ರಮಿಸಬಾರದೆಂದು ಎಚ್ಚರಿಸಿತು. ಐಹಿಕದ ತಳಪಾಯದ ಮೇಲೆ ಪಾರಮಾರ್ಥಿಕವನ್ನು ಸಾಧಿಸಬೇಕೆಂದು ಉದ್ಘೋಷಿಸಿತು.

'ಪುಣ್ಯಃ ಪುಣ್ಯೇನ ಭವತಿ ಪಾಪಃ ಪಾಪೇನ ಭವತಿ' ಎಂಬುದು ವೇದಾಂತದ ಸಿದ್ಧಾಂತ. ಲೋಕದಲ್ಲಿ ಜೀವಿಗಳು ವಿವಿಧವಾಗಿ ವಿಚಿತ್ರವಾಗಿ ಬಾಳುತ್ತಿರುವುದಕ್ಕೆ ಅವರವರ ಕರ್ಮ ಕಾರಣವೆಂದು ಸುಸ್ಪಷ್ಟವಾಗಿ ತಿಳಿಸಿದೆ. ಮೃತರು 'ಪಿತೃಯಾನ' ಮತ್ತು 'ದೇವಯಾನ' ಮಾರ್ಗವಾಗಿ ಸಾಗುವರೆಂದೂ ದೇವಯಾನದಲ್ಲಿ ಸಾಗಿದವರಿಗೆ ಸಂಸಾರ ನಿವೃತ್ತಿಯಾಗಿ ಬ್ರಹ್ಮಪ್ರಾಪ್ತಿಯಾಗುವುದೆಂದು ತಿಳಿಸಿದೆ. 'ಭಾರತೀಯ ದರ್ಶನ' ಕ್ಕೆ ಆಧಾರ 'ಬ್ರಹ್ಮ' ಮತ್ತು 'ಆತ್ಮಾ' ವೆಂಬ ಎರಡು ಮಹಾಸ್ತಂಭಗಳು. ಜಗತ್ಕಾರಣವಾದ ಪರವಸ್ತು 'ಬ್ರಹ್ಮ' ಮತ್ತು ದೇಹದಿಂದ ದೇಹಕ್ಕೆ ಸಂಸರಿಸುತ್ತಿರುವ ಜೀವನೇ 'ಆತ್ಮ'ನು. ಉಪನಿಷತ್ತುಗಳಲ್ಲಿ ಈ ಬ್ರಹ್ಮ, ಆತ್ಮರ ವಿಚಾರವನ್ನು ಸವಿಸ್ತಾರವಾಗಿ ಮಾಡಲಾಗಿದೆ.

ವೇದಾಂತದ ಗುರಿ ಅಮೃತತ್ವಪ್ರಾಪ್ತಿ. ಅದಕ್ಕಾಗಿ ನಾವು ಅರಿಯಬೇಕಾದುದನ್ನೂ ಆಚರಿಸಬೇಕಾದುದನ್ನೂ ಅದು ಸಾರುತ್ತಿದೆ.

ಈ ಸಂಸಾರದಲ್ಲಿ ಸುಖ ಬಹಳ ಕಡಿಮೆ. ದಿನನಿತ್ಯವೂ ವಿಚಿತ್ರವಾದ ವಿವಿಧವಾದ ಕಷ್ಟ ಕಾರ್ಪಣ್ಯಗಳಿಂದ ತೊಳಲುತ್ತಿರುವೆವು. ಜರಾ, ಮೃತ್ಯು, ವ್ಯಾಧಿಗಳಿಂದ ಬೇಸತ್ತು ಕಂಗಲಾಗಿರುವೆವು. ನಾವು ಇದರಿಂದ ಹೊರಬಂದು ನಿರತಿಶಯ ಆನಂದವನ್ನು ಪಡೆಯಲು ಯತ್ನಿಸಬೇಕು. ಆ ಪ್ರಯತ್ನ ನಮ್ಮನ್ನು ಆತ್ಮಾನ್ವೇಷಣೆ ಮತ್ತು ಸತ್ಯ ಸಾಕ್ಷಾತ್ಕಾರದ ಕಡೆಗೆ ಎಳೆದೊಯ್ಯುತ್ತದೆ.

ವ್ಯವಹಾರವೂ ವೇದಾಂತವೂ ಒಂದರೊಡನೊಂದು ಹೊಸೆದುಕೊಂಡಿದೆ. ನಾವು ನಮ್ಮ ದಿನ ನಿತ್ಯ ಜೀವನದ ವ್ಯವಹಾರದಲ್ಲಿ ವೇದಾಂತವನ್ನು ಅಳವಡಿಸಿಕೊಳ್ಳಬೇಕಾದುದು ಅತ್ಯವಶ್ಯಕವಾಗಿದೆ. ಆ ಉಪನಿಷತ್ಕಾಲದ ನಮ್ಮ ಪೂರ್ವಿಕರಲ್ಲಿದ್ದ ಸತ್ಯಸಂಧತೆ, ಪ್ರಾಮಾಣಿಕತೆ, ಅಧ್ಯಯನದಲ್ಲಿ ಆತ್ಯಾಸಕ್ತಿ ಮುಂತಾದ ಆತ್ಮಗುಣಗಳನ್ನು ವೃದ್ಧಿಪಡಿಸಿಕೊಂಡು ಪರಿಶುದ್ಧವಾದ ಪ್ರಾಮಾಣಿಕ ಜೀವನವನ್ನು ನಡೆಸಬೇಕಾಗಿರುವುದು ಇಂದಿನ ಸಮಾಜದ ಅತಿದೊಡ್ಡ ಬೇಡಿಕೆಯಾಗಿದೆ. ಕರ್ಮವಶ್ಯವಾದ ಈ ಜೀವನದಲ್ಲಿ ಅಲ್ಪವೂ ಅಸ್ಥಿರವೂ ಆದ ಪ್ರಾಪಂಚಿಕ ಸುಖಗಳಿಗೇ ನಮ್ಮನ್ನು ಸೀಮಿತಗೊಳಿಸಿಕೊಳ್ಳದೇ ಆ ಭಗವದುಪಾಸನೆ ಮಾಡಿ ಅಮೃತತ್ವ ಪಡೆಯಬೇಕಾದುದು ನಮಗೆ ಶ್ರೇಯಸ್ಸಾಗಿದೆ.

ಇಂದಿನ ಈ ದಾರುಣ ಪ್ರಪಂಚದಲ್ಲಿ ಮಾನವಕೋಟಿಗೆ ಅಜ್ಞಾನದ ಕತ್ತಲೆಯಿಂದ ಹೊರಬಂದು ವಿಶ್ವಶಾಂತಿಯನ್ನು ಸಾಧಿಸಿ, ಮುಕ್ತೈಶ್ವರ್ಯವನ್ನು ಪಡೆಯಲು ವೇದಾಂತ ಸ್ಫೂರ್ತಿದಾಯಕವಾಗಿದೆ, ದಾರಿದೀಪವಾಗಿದೆ, ರತ್ನದೀಪವಾಗಿದೆ.

ಎ. ಗೀತಾರಾಘವನ್

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸ್ಕಾಂದ ಪುರಾಣದಲ್ಲಿ ಹೇಳಿರುವ ಶ್ರೀ ವೈಷ್ಣವ ಲಕ್ಷಣಗಳು ಮತ್ತು ಅವುಗಳ ಹಿರಿಮೆ

ಶ್ರೀಮಾನ್ ಉ. ವೇ ಕಡಬ ಶ್ರೀಧರ್
ಬೆಂಗಳೂರು

ಆಕಾಶರಾಜನ ಪತ್ನಿಯೂ, ಪದ್ಮಾವತಿಯ ತಾಯಿಯಾದ ಧರಣೀ ದೇವಿಯಾದವಳು ತನ್ನ ಮಗಳಿಗೆ ಉಂಟಾದ ನೋವನ್ನು ತಿಳಿದು ಆದಕ್ಕೆ ತಕ್ಕ ಪರಿಹಾರವನ್ನು ಮಾಡಲು, ಬೀದಿಯಲ್ಲಿ ಬಂದ ಕುರತ್ತಿ(ಕೊರವಂಜಿ) ಯಲ್ಲಿ ಕಣಿಕೇಳಲು, ಅವಳು ಹೇಳಿದಂತಯೇ, ಬಂಗಾರದ ಮೊರದಲ್ಲಿ ಆರು ಸೇರು ಮುತ್ತುಗಳನ್ನು ಸುರಿದು ತಂದು ಕೊಡಲು, ಅವಳು ಹೇಳಿದ ಕಣಿಗಳ ಸಾರಾಂಶವನ್ನು ತಿಳಿದುಕೊಂಡು, ಅವಳಿಗೆ ಕೊಡಬೇಕಾದ ದಕ್ಷಿಣೆಯನ್ನು ಕೊಟ್ಟು, ಅವಳನ್ನು ಕಳುಹಿಸಿ, ಆಂತ:ಪುರಕ್ಕೆ ಬಂದು, ಕಾಮಾತುರಳಾದ ಮಗಳನ್ನು ಕುರಿತು, ನಿನಗೆ ಪ್ರಿಯವಾದ ಯಾವ ಕಾರ್ಯವನ್ನು ಮಾಡಬೇಕೆಂದು ಕೇಳಲು, ಆದಕ್ಕೆ ಪದ್ಮಾವತಿಯು ಈ ಕೆಳಕಂಡಂತೆ ಹೇಳಿದಳು.

ನೇತ್ರಾಭಿರಾಮಂ ಯಲ್ಲೋಕೇ ಸತಾಮಪಿ ಮನ: ಪ್ರಿಯಂ ।
ಯದ್ರಷ್ಟುಕಾಮಾ: ಬ್ರಹ್ಮಾದ್ಯಾ: ಯಸ್ತು ಸರ್ವಗತಂ ಮಹತ್ ॥

ಯಾವುದು ಲೋಕದಲ್ಲಿ ಕಣ್ಣಿಗೆ ಪ್ರಿಯವಾದುದೋ, ಒಳ್ಳೆಯವರ ಮನಸ್ಸಿಗೂ ಪ್ರಿಯವಾದುದೋ, ಚತುರ್ಮುಖ ಬ್ರಹ್ಮನೇ ಮೊದಲಾದವರು ಯಾವುದನ್ನು ನೋಡಲು ಇಷ್ಟಪಡುವರೋ, ಯಾವುದು ಹಿರಿಮೆಯಿಂದ ಕೂಡಿದುದಾಗಿ ಎಲ್ಲದಕ್ಕೂ ಅಂತರ್ಯಾಮಿಯಾಗಿರುವುದೋ,

ತೇಜಸಾಮಪಿ ತೇಜಸ್ವೀ ದೇವಾನಾಮಪಿ ದೈವತಮ್ ।
ಭಕ್ತೈಸ್ಸದ್ಭಿರಿಹ ಪ್ರಾಪ್ಯಂ ಅಭಕ್ತೈರ್ನಕದಾಚನ ॥

ತೇಜಸ್ಸಿನಿಂದ ಕೂಡಿದ ವಸ್ತುಗಳಲ್ಲಿ ಅತಿ ಶ್ರೇಷ್ಠವಾದ ತೇಜಸ್ಸುಳ್ಳ ವಸ್ತುವೋ, ದೇವತೆಗಳಿಗೆಲ್ಲಾ ಹಿರಿಯ ದೇವತೆಯಾದುದೋ, ಈ ಲೋಕದಲ್ಲಿ ಭಕ್ತರುಗಳಿಂದ ಪಡೆಯಲು ಅರ್ಹವಾದುದೋ, ಭಕ್ತರಲ್ಲದವರು ಹೊಂದಲು ಸಾಧ್ಯವಿಲ್ಲವೋ,

ತಸ್ಮಿನ್ನೇವಮನೋ ಮೇ ಅಂಬ ವಸ್ತುನೀಹ ಪ್ರವರ್ತತೇ ।
ತದೇವಾನ್ವಿಷ್ಯತಾಂ ಮಾತ: ಭಕ್ತಾನಾಂ ಸರ್ವಕಾಮದಂ ॥

ಅಂತಹ ವಸ್ತುವಿನ ಮೇಲೆ, ತಾಯೇ! ನನ್ನ ಮನಸ್ಸು ಆಸೆ ಪಟ್ಟಿದೆ. ಆದ್ದರಿಂದ ಭಕ್ತರುಗಳ ಆಸೆಯನ್ನು ನೆರವೇರಿಸುವ ಆ ಒಂದು ವಸ್ತುವನ್ನು ಹುಡುಕಿ ಪಡೆಯಬೇಕಾಗಿದೆ.

॥ ಶ್ರೀ ವರಾಹ ಉವಾಚ ॥ ಶ್ರೀ ವರಾಹನು ಹೇಳಿದನು –

ಏತತ್ ಶ್ರುತ್ವಾಥ ಧರಣೀ ತಾಮಪೃಚ್ಛತ್ ಪುನ: ಸುತಾಮ್ ।
ತದ್ ಭಕ್ತ ಲಕ್ಷಣಂ ಬ್ರೂಹಿ ಯೈ: ಪ್ರಾಪ್ಯ ಯತ್ಸುಲೋಚನೇ ॥ ೫೦ ॥

ಇದನ್ನು ಕೇಳಿದ ಪದ್ಮಾವತಿಯ ತಾಯಿಯಾದ ಧರಣೀ ದೇವಿಯು, ತನ್ನ ಮಗಳನ್ನು ಮತ್ತೆ ಕೇಳಿದಳು. "ಸುಂದರ ಕಣ್ಣುಗಳುಳ್ಳವಳೇ, ಯಾವ ಭಕ್ತರುಗಳಿಂದ ಆ ಪರಬ್ರಹ್ಮನನ್ನು ಹೊಂದಲು ಸಾಧ್ಯವೋ ಅಂತಹ ಭಕ್ತರುಗಳ ಲಕ್ಷಣವನ್ನು ನೀನು ಹೇಳುವಳಾಗು,"

॥ ಪದ್ಮಾಲಯೋವಾಚ ॥ ಪದ್ಮಾವತಿಯು ಹೇಳಿದಳು –

ಭಕ್ತಾನಾಂ ಲಕ್ಷಣಂ ಮಾತ: ಶ್ರುಣು ಗುಹ್ಯಂ ಸಮಾಹಿತಾ ।
ಶಂಖಚಕ್ರಾಂಕಿತಾ ನಿತ್ಯಂ ಭುಜಯುಗ್ಮೇ ವಸುಂಧರೇ ॥ ೫೧ ॥

ತಾಯಿಯೇ! ಅತ್ಯಂತ ರಹಸ್ಯವಾದ, ಭಕ್ತರುಗಳ ಲಕ್ಷಣವನ್ನು ಗಮನದಿಂದ ಕೇಳು, ತೋಳೆರಡರಲ್ಲೂ ಶಂಖ, ಚಕ್ರಗಳಿಂದ ಯಾವಾಗಲೂ ಗುರುತನ್ನು ಹೊಂದಿದವರಾಗಿಯೂ.

ಊರ್ಧ್ವಪುಂಡ್ರಂ ಸಾನ್ತರಾಲಂ ತೇಷಾಮೇವ ವಿಶೇಷತ: ।
ಪುಂಡ್ರಾನಿ ದ್ವಾದಶ ಪುನ: ಧಾರಯನ್ತಿ ತಥಾಽಪರೇ ॥ ೫೨ ॥

ಮಧ್ಯದಲ್ಲಿ ಅಂತರವಿರುವ ಊರ್ಧ್ವಪುಂಡ್ರ ಹನ್ನೆರಡನ್ನೂ, ಧರಿಸಿದವರಾಗಿಯೂ ಅದಾಗಿ, ಮುಖ್ಯವಾಗಿ,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಲಲಾಟೋದರ ಹೃತ್ಕಂಠೇ ಜಠರೇ ಪಾರ್ಶ್ವಯೋರಪಿ ।
ಕೂರ್ಪರಯೋರ್ಭುಜ ದ್ವಂದ್ವೇ ಚ ಪೃಷ್ಠೇಚ ಗಲಪೃಷ್ಠಕೇ ॥ ೫೩ ॥

ಲಲಾಟ (ಹಣೆ), ಹೊಟ್ಟೆ, ಎದೆ, ಕಂಠ, ಹೊಟ್ಟೆಯ ಎರಡು ಪಕ್ಕ, ಕತ್ತಿನ ಎರಡು ಪಕ್ಕ, ಎರಡು ಭುಜಗಳು, ಬೆನ್ನು, ಕತ್ತಿನ ಹಿಂಭಾಗ, ಹೀಗೆ,

ಕೇಶವಾದೀನಿ ನಾಮಾನಿ ದ್ವಾದಶಾಂಕೇಷು ದ್ವಾದಶ ।
ವಾಸುದೇವೇತಿ ತನ್ಮೂರ್ಧ್ನಿ ಧಾರಯನ್ತಿ ನವೋಸ್ತ್ವತಿ ॥ ೫೪ ॥

ಹನ್ನೆರಡನ್ನೂ, ಕೇಶವನೇ ಮೊದಲಾದ ಶ್ರೀನಾಮಗಳಿಂದಲೂ, ತಲೆಯಲ್ಲಿ ವಸುದೇವ ಎಂಬ ಶ್ರೀನಾಮದಿಂದಲೂ, ನವೋಂತವಾದ ಮಂತ್ರಗಳಿಂದ ತಿರುಮಣ್ ಗಳನ್ನು ಯಾರು ಧರಿಸುತ್ತಾರೋ

ತೇಷಾನ್ತು ನಿಯಮಾನ್ ವಕ್ಷ್ಯೇ ಮಾತ: ಶ್ರುಣು ಮನೋರಮಾನ್ ।
ವೇದಪಾರಾಯಣರತಾ: ಕರ್ಮ ಕುರ್ವನ್ತಿ ವೈದಿಕಂ ॥ ೫೫ ॥

ಅಂತಹವರ ನಿಯಮಗಳನ್ನು ಹೇಳುತ್ತೇನೆ. ಆ ಮನೋಹರವಾದ ನಿಯಮಗಳನ್ನು, ತಾಯೇ, ಕೇಳುವಂತಹವಳಾಗು

ಸತ್ಯಂ ವದನ್ತಿ ಯೇ ದೇವೀ ನಾಸೂಯನ್ತಿ ಪರಾನ್ ಕ್ವಚಿತ್ ।
ಪರನಿನ್ದಾಂ ನ ಕುರ್ವನ್ತಿ ಪರಸ್ವಂ ನ ಹರನ್ತಿ ಚ ॥ ೫೬ ॥

ಯಾರು ವೇದ ಪಾರಾಯಣದಲ್ಲಿ ನಿರತರಾಗಿ ವೈದಿಕ ಕರ್ಮಗಳನ್ನು ಮಾಡುತ್ತಾರೋ, ಸತ್ಯವನ್ನೇ ಹೇಳಿಕೊಂಡು, ಇತರರ ಮೇಲೆ ಅಸೂಯೆ ಇಲ್ಲದವರಾಗಿತ್ತಾರೋ, ಇತರರನ್ನು ನಿಂದಿಸದೆಯೂ, ಮತ್ತೊಬ್ಬರ ವಸ್ತುವಿಗೆ ಆಸೆ ಪಡದೆ ಇರುತ್ತಾರೆಯೋ,

ನಸ್ಮರನ್ತಿ ನಪಶ್ಯಂತಿ ನಸ್ಪೃಶನ್ತಿ ಕದಾಚನ ।
ಪರದಾರಾನ್ ಸುರೂಪಾಂಶ್ಚ ಯೇಚ ತಾನ್ ವಿದ್ಧಿ ವೈಷ್ಣವಾನ್ ॥ ೫೭ ॥

ಮತ್ತೊಬ್ಬರ ಪತ್ನಿಯನ್ನು ಯಾವಾಗಲೂ ನೆನೆಯುವುದಾಗಲೀ, ನೋಡುವುದಾಗಲೀ, ಮುಟ್ಟುವುದಾಗಲೀ, ಮಾಡುವುದಿಲ್ಲವೋ ಅಂತಹವರೇ ಶ್ರೇಷ್ಠರಾದ ವಿಷ್ಣು ಭಕ್ತರುಗಳು ಎಂದು ತಿಳಿಯುವುದು.

ಮೇಲಾಗಿ,

ಸರ್ವಭೂತದಯಾವಂತ: ಸರ್ವಭೂತಹಿತೇ ರತಾ: ।
ಸದಾ ಗಾಯನ್ತಿ ದೇವೇಶಂ ಏತಾನ್ ಭಕ್ತಾನವೇಹಿ ವೈ ॥ ೫೮ ॥

ಎಲ್ಲಾ ಪ್ರಾಣಿಗಳ ವಿಷಯದಲ್ಲೂ ದಯೆಯುಳ್ಳವರಾಗಿಯೂ, ಎಲ್ಲಾ ಪ್ರಾಣಿಗಳಿಗೂ ಹಿತವಾದ ಕಾರ್ಯವನ್ನೇ ಮಾಡುವುದರಲ್ಲಿ ನಿರತರಾಗಿರುವವರಾಗಿಯೂ, ಯಾವಾಗಲೂ ಭಗವಂತನನ್ನೇ ಕುರಿತು ಹಾಡುವರಾಗಿಯೂ ಇರುವರೋ, ಅಂತಹವರೇ ಶ್ರೇಷ್ಠರಾದ ಭಕ್ತರುಗಳಾಗುತ್ತಾರೆ.

ಯೇನ ಕೇನ ಚ ಸಂತುಷ್ಟಾ: ಸ್ವದಾರ ನಿರತಾಶ್ಚಯೇ ।
ವೀತರಾಗ ಭಯ ಕ್ರೋಧಾ: ತಾನ್ ಭಕ್ತಾನ್ ವಿದ್ಧಿ ವೈಷ್ಣವಾನ್ ॥ ೫೯ ॥

ಯಾವ ಒಂದು ವಸ್ತುವಿನಿಂದಲೇ ಸಂತುಷ್ಟ ಹೊಂದುವವರಾಗಿಯೂ, ತನ್ನ ಭಾರ್ಯೆಯಲ್ಲಿ ಪ್ರೀತಿ ಉಳ್ಳವರಾಗಿಯೂ, ಆಸೆ, ಭಯ, ಕೋಪ ಮೊದಲಾದುವುಗಳನ್ನು ತ್ಯಜಿಸಿದವರಾಗಿಯೂ ಇರುವವರೇ ವೈಷ್ಣವ ಭಕ್ತರಾಗುತ್ತಾರೆ.

ಏವಂ ವಿಧೈರ್ಗುಣೈರ್ಯುಕ್ತಾ: ಪಂಚಾಯುಧಧರಾ ಅಪಿ ।
ಪಿತ್ರಾಚಾಽಽಚಾರ್ಯರೂಪೇಣ ಶಿಷ್ಟೇನಾಽನ್ಯೇನ ವಾ ಪುನ: ॥ ೬೦ ॥

ಸ್ವಗೃಹ್ಯೋಕ್ತವಿಧಾನೇನ ವಹ್ನಿಮಾಧಾಯ ವೈ ಬುಧ: ।
ಚಕ್ರಾದ್ಯಾಯುಧಮಂತ್ರೇಣ ಜುಹುಯಾತ್ ಷೋಡಶಾಹೂತೀ: ॥ ೬೧ ॥

ಮೂಲಮಂತ್ರೇಣ ಸೂಕ್ತೇನ ಪೌರುಷೇಣ ತತ: ಪರಮ್ ।
ಜಾತವೇದ: ಸುಮನ್ತ್ರೇಣ ಪಶ್ಚಾದಷ್ಟೋತ್ತರಂ ಶತಂ ॥ ೬೨ ॥

ಹುತ್ವಾ ಮಹಾವ್ಯಾಹೃತಿಭಿಶ್ಚಕ್ರಾದೀಂಸ್ತತ್ರ ತಾಪಯೇತ್ ।
ಸಹ್ಯಾನ್ ಸುತಪ್ತಾನ್ ಗುರುಣಾಮನ್ವೃತ್ ಧಾರಯೇತ್ ಬುಧ: ॥ ೬೩ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಹೀಗೆ ಮೇಲೆ ಹೇಳಿದ ಗುಣಗಳೊಂದಿಗೆ ಪಂಚಾಯುಧಗಳನ್ನು ಧರಿಸಿರುವವರಾಗಿಯೂ ಇರುತ್ತಾರೆ. ಅಂದರೆ, ಆಚಾರ್ಯರೂಪದಲ್ಲಿರುವ ತನ್ನ ತಂದೆಯವರಿಂದಲೋ ಅಥವಾ ಮತ್ತೊಬ್ಬ ಶಿಷ್ಟ ಶ್ರೇಷ್ಠರಿಂದಲೋ, ತನ್ನ ಗೃಹಸೂತ್ರದಲ್ಲಿ ಸೂಚಿಸಿರುವ ವಿಧಿನಿಯಮದಂತೆ ಅಗ್ನಿಯನ್ನು ಆಧಾನ ಮಾಡಿಕೊಂಡು ಅದರಲ್ಲಿ ೧೬ ಬಾರಿ 'ಚಕ್ರಂ' ಮುಂತಾದ ಆಯುಧ ಮಂತ್ರಗಳಿಂದ ಹೋಮವನ್ನು ಮಾಡಬೇಕು. ನಂತರ, ಮೂಲ ಮಂತ್ರದಿಂದಲೂ, ಪುರುಷ ಸೂಕ್ತದಿಂದಲೂ ಹೋಮವನ್ನು ಮಾಡಿದ ನಂತರ, 'ಜಾತವೇದ' ಎಂಬ ಮಂತ್ರದಿಂದ ೧೦೮ ಬಾರಿ ಹೋಮವನ್ನು ಮಾಡಬೇಕು.

ಅದರಲ್ಲಿ ಮಹಾವ್ಯಾಹೃತಿಗಳಿಂದ ಚಕ್ರ ಮುಂತಾದುವುಗಳನ್ನು ಕಾಯಿಸಬೇಕು. ನಂತರ ಸಹಿಸುವಂತೆ ಕಾಯಿಸಿದ ಅವುಗಳನ್ನು ಆಚಾರ್ಯನ ಹಸ್ತಗಳಿಂದ ಮಂತ್ರಪೂರಕವಾಗಿ ತಾನು ಧರಿಸಿಕೊಳ್ಳಬೇಕು.

ಭುಜದ್ವಯೇ ಶಂಖಚಕ್ರೇ, ಮೂರ್ಧ್ನಿ ಶಾರ್ಙ್ಗಶರೌ ತಥಾ ।
ಲಲಾಟೇ ತು ಗದಾ ಧಾರ್ಯ ಹೃದಯೇ ಖಡ್ಗಮೇವಚ ॥ ೬೪ ॥

ಶಂಖ – ಚಕ್ರಗಳನ್ನು ಎರಡು ಕೈಗಳಲ್ಲಿಯೂ, ತಲೆಯ ಮೇಲ್ಭಾಗದಲ್ಲಿ ಶಾರ್ಙ್ಗಬಾಣಗಳನ್ನೂ, ಹಣೆಯಲ್ಲಿ ಗದೆಯನ್ನೂ, ಹೃದಯದಲ್ಲಿ ಕತ್ತಿಯನ್ನೂ ಹೀಗೆ ೫ ಆಯುಧಗಳನ್ನು ಮುಮುಕ್ಷುಗಳಾದ ವಿಷ್ಣುಭಕ್ತರುಗಳು ಧರಿಸಬೇಕು.

ಏವಂ ಧಾರ್ಯಾಣಿ ಪಂಚೈವ ವಿಷ್ಣು ಭಕ್ತೈರ್ಮುಮುಕ್ಷುಭಿ: ।
ಅಥವಾ ಭುಜಯೋಶ್ಚಕ್ರಶಂಖೌ ಚೈವ ಸುಲಕ್ಷಣೌ ॥ ೬೫ ॥

ಹೀಗೆ ೫ ಆಯುಧಗಳನ್ನು (ಕಾಯಿಸಿದ) ಮುಮುಕ್ಷಗಳಾದ ವಿಷ್ಣುಭಕ್ತರುಗಳು ಧರಿಸಬೇಕು, ಅಥವಾ ಆ ದಿನವೇ ಎರಡು ಭುಜಗಳಲ್ಲಿಯೂ ಸುಲಕ್ಷಣವಾದ ಚಕ್ರ ಮತ್ತು ಶಂಖಿವನ್ನು ಧರಿಸಬೇಕು.

ಏವಂ ಲಾಂಛನಯುಕ್ತಾ ಯೇ ಭಕ್ತಾಸ್ತೇ ವೈಷ್ಣವಾ: ಸ್ಮೃತಾ: ।
ತೈರೇವ ಲಭ್ಯಂ ತದ್ಬ್ರಹ್ಮ ಸದಾಚಾರಸಮನ್ವಿತೈ: ॥ ೬೬ ॥

ಈ ರೀತಿಯ ಚಿಹ್ನೆಗಳನ್ನುಳ್ಳವರೇ ವೈಷ್ಣವ ಭಕ್ತರುಗಳಾಗುತ್ತಾರೆ. ಇಂತಹ ಸದಾಚಾರಗಳಿಂದ ತುಂಬಿದವರೇ ಆ ಪರಬ್ರಹ್ಮನನ್ನು ಸುಲಭವಾಗಿ ಪಡೆಯಲು ಯೋಗ್ಯರಾಗಿರುತ್ತಾರೆ.

ಈ ರೀತಿಯ ವಿಷಯಗಳು ವಿಷ್ಣು ಪುರಾಣದಲ್ಲಿ ಕೂಡ ಕಂಡುಬರುವುದಿಲ್ಲ. ಹಾಗು, ಇದನ್ನು ಓದುವ ವಾಚಕರು ಸಂಪ್ರತಿಪನ್ನವಾದ ಶಾಸ್ತ್ರದೊಂದಿಗೆ ಕೂಡಿರುವ ಸತ್ಸಂಪ್ರದಾಯಾನುಷ್ಠಾನವನ್ನು ಆರಿತು ಪಾಲಿಸಬೇಕು.

(ಸೂಚನೆ – ಪಂಚಾಯುಧಗಳನ್ನು ಧರಿಸಬೇಕೆಂದು ಹೇಳಿದ್ದರೂ, ಆರಂಭದಲ್ಲೂ ಎರಡನ್ನೇ ಹೇಳಿ ಕೊನೆಯಲ್ಲಿಯೂ 'ಅಥವಾ' ಎಂದು ಎರಡನ್ನೇ ಸೂಚಿಸಿರುವುದನ್ನು ಗಮನಿಸತಕ್ಕದ್ದು)

ಸ್ಕಾಂದ ಪುರಾಣದಲ್ಲಿ ತಿರುಮಣ್ ಕುರಿತಾದ ವಿಷಯಗಳು – ವೈಷ್ಣವ ಖಂಡದಲ್ಲಿ ಮಾರ್ಗಶೀರ್ಷ ಮಾಹಾತ್ಮ್ಯದಲ್ಲಿ ಬ್ರಹ್ಮ–ವಿಷ್ಣು ಸಂವಾದದಲ್ಲಿ ಎರಡನೇ (೨) ಅಧ್ಯಾಯ.

ಏವಂ ಸ್ನಾತ್ವಾ ತತ: ಪಶ್ಚಾದಾಚಮ್ಯ ಚ ವಿಧಾನತ: ।
ಉತ್ಥಾಯ ವಾಸಸೀ ಶುಕ್ಲೇ ಕೂಲೇ ವೈ ಪರಿಧಾಯ ಚ ॥ ೭ ॥

ಈ ರೀತಿಯಾಗಿ ಸ್ನಾನ ಮಾಡಿದ ಮೇಲೆ ವಿಧಿಸಿದಂತೆ ಆಚಮನ ಮಾಡಿ ನೀರಿನಿಂದ ಎದ್ದು ಬಂದು ಬೆಳ್ಳಗಿರುವ ವಸ್ತ್ರಗಳನ್ನು ದಡದಲ್ಲಿದ್ದು ಧರಿಸಿಕೊಳ್ಳತಕ್ಕದ್ದು.

ಆಚಮ್ಯ ತರ್ಪಯೇದ್ದೇವಾನ್ ಪಿತೃಂಶ್ಚೈವ ಋಷೀಂಸ್ತಥಾ ।
ನಿಷ್ಪೀಡ್ಯ ವಸ್ತ್ರಮಾಚಮ್ಯ ಧೌತವಸ್ತ್ರೇಣ ವೇಷ್ಟಿತ: ॥ ೮ ॥

ನಂತರ ಆಚಮನ ಮಾಡಿ ದೇವ–ಋಷಿ–ಪಿತೃ ತರ್ಪಣಗಳನ್ನು ಮಾಡಿ, ಒದ್ದೆ ಬಟ್ಟೆಗಳನ್ನು ಹಿಂಡಿಕೊಂಡು ಮತ್ತೆ ಆಚಮನ ಮಾಡಿ ಶುಭವಸ್ತ್ರವನ್ನು ಧರಿಸಿದವನಾಗಿ

ವಿಮಲಾಂ ಮೃತ್ತಿಕಾಂ ರಮ್ಯಾಂ ಆದಾಯ ದ್ವಿಜಸತ್ತಮ !
ಮಂತ್ರೇಣೈವಾಭಿಮಂತ್ರ್ಯಾಥ ಲಲಾಟಾದಿಷು ವೈಷ್ಣವ: ॥ ೧೧ ॥

ಧಾರಯೇದೂರ್ಧ್ವಪುಂಡ್ರಾಣಿ ಯಥಾ ಸಂಖ್ಯಮತಂದ್ರಿತ: ।
ಬ್ರಹ್ಮನ್ ದ್ವಾದಶಪುಂಡ್ರಾಣಿ ಬ್ರಾಹ್ಮಣಸ್ಸತತಂ ವಹೇತ್ ॥ ೨೦ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಚತ್ವಾರಿ ಭೂಭ್ರುತಾಂ ಪುತ್ರ: ಪುಂಡ್ರಾಣಿ ದ್ವೇ ವಿಶಾಂಸ್ಮೃತೇ ।
ಏಕಂ ಪುಂಡ್ರಂಚ ನಾರೀಣಾಂ ಶೂದ್ರಾಣಾಂಚ ವಿಧೀಯತೇ ॥ ೨೧ ॥

ಬ್ರಹ್ಮನೇ! ಶುದ್ಧವಾದುದೂ ಆಂದವಾದುದೂ ಆದ ಮಣ್ಣನ್ನು ತೆಗೆದುಕೊಂಡು ಮಂತ್ರದಿಂದ ಅಭಿಮಂತ್ರಿಸಿ ವೈಷ್ಣವನಾದವನು ಹಣೆ ಮೊದಲಾದ ಜಾಗಗಳಲ್ಲಿ ನಿಗದಿತ ಸಂಖ್ಯೆಯಂತೆ ಊರ್ಧ್ವಪುಂಡ್ರಗಳನ್ನು ಯಾವಾಗಲೂ ಧರಿಸಬೇಕು, ಎಲೈ ಬ್ರಹ್ಮನೇ! ಬ್ರಾಹ್ಮಣನು ಯಾವಾಗಲೂ ಹನ್ನೆರಡು (೧೨) ನಾಮಗಳನ್ನು ಧರಿಸಬೇಕು. ಕ್ಷತ್ರಿಯನು ನಾಲ್ಕು (೪) ನಾಮಗಳನ್ನು ಧರಿಸಬೇಕು. ವೈಶ್ಯನು ಎರಡು (೨) ನಾಮಗಳನ್ನು ಧರಿಸಬೇಕು. ಸ್ತ್ರೀಯರು ಹಾಗೂ ನಾಲ್ಕನೇ ವರ್ಣದವರೂ ಒಂದು ತಿರುಮಣ್ಣನ್ನು ಧರಿಸಬೇಕು. ಇದುವೇ ನಿಯಮವಾಗಿದೆ.

ಲಲಾಟೇ ಉದರೇ ಚೈವ ವತ್ಸೇ ವೈಕಂಠಕೂಬರೇ ।
ಕುಕ್ಷ್ಯೋ ಬಾಹ್ವೋ: ಕರ್ಣಯೋಶ್ಚ ಪೃಷ್ಠೇ ತ್ರಿಕೇ ಚ ವೈ ಶಿರ: ॥
ತಿಲಕಾ: ದ್ವಾದಶಪ್ರೋಕ್ತಾ: ಬ್ರಾಹ್ಮಣಸ್ಯ ಸದಾऽನಘ ॥ ೨೧ ॥

ಲಲಾಟೇ ಹೃದಿ ಬಾಹ್ವೋಶ್ಚ ಕ್ಷತ್ರ: ಪುಂಡ್ರಾಣಿ ಧಾರಯೇತ್ ।
ಲಲಾಟೇ ಹೃದಯೇ ವೈಶ್ಯ: ಫಾಲೇ ವೈ ಶೂದ್ರಯೇಷಿತಮ್ ॥ ೨೨ ॥

ಹಣೆ–ಉದರ–ಎದೆ–ಕಂಠದ ಹಳ್ಳ – ಹೊಟ್ಟೆಯ ಎರಡು ಪಕ್ಕಗಳು – ಎರಡು ಕೈಗಳು – ಎರಡು ಕಿವಿಗಳ ಕೆಳಭಾಗವಾದ ಕತ್ತಿನ ಎರಡು ಪಕ್ಕಗಳು – ಹಿಂಭಾಗದಲ್ಲಿ ಬೆನ್ನಿನ ಕೆಳಗೆ – ಕತ್ತಿನ ಹಿಂಭಾಗ (ತಲೆ) ಈ ಭಾಗಗಳಲ್ಲಿ ೧೨ ತಿರುಮಣ್ ತಿಲಕಗಳನ್ನು ಬ್ರಾಹ್ಮಣನು ಯಾವಾಗಲು ಇಟ್ಟುಕೊಳ್ಳಬೇಕು.

(ಸೂಚನೆ – ತಿರುಮಣ್ ಅಂದರೆ ಊರ್ಧ್ವ ಪುಂಡ್ರವನ್ನು 'ತಿಲಕ' ವೆಂದು ಹೇಳುವುದುಂಟು, ಎಂಬುದನ್ನು ನಾವು ತಿಳಿಯಬೇಕು)

ರಾಜವಂಶಕ್ಕೆ ಸೇರಿದವನು ಹಣೆ–ಎದೆ–ಎರಡು ಕೈಗಳು ಈ ಭಾಗಗಳಲ್ಲಿ ಪುಂಡ್ರವನ್ನು ಧರಿಸಬೇಕು. ಹಣೆಯಲ್ಲೂ, ಎದೆಯಲ್ಲೂ ವೈಶ್ಯನು ಧರಿಸಬೇಕು. ಹಣೆಯಲ್ಲಿ ಮಾತ್ರವೇ ನಾಲ್ಕನೇ ವರ್ಣದವನೂ, ಸ್ತ್ರೀಗಳೂ ಊರ್ಧ್ವಪುಂಡ್ರವನ್ನು ಧರಿಸಬೇಕು.

ಲಲಾಟೇ ಕೇಶವಂ ಧ್ಯಾಯೇತ್ ನಾರಾಯಣಮಥೋದರೇ ।
ವಕ್ಷಸ್ಥಲೇ ಮಾಧವಂ ಚ ಗೋವಿಂದಂ ಕಂಠಕೂಬರೇ ॥

ವಿಷ್ಣುಂಚ ದಕ್ಷಿಣೇ ಕುಕ್ಷೌ ಬಾಹ್ವೌಚ ಮಧುಸೂದನಂ ।
ತ್ರಿವಿಕ್ರಮಂ ಕರ್ಣಮೂಲೇ ವಾಮನಂ ವಾಮಪಾರ್ಶ್ವಕೇ ॥

ಶ್ರೀಧರಂ ವಾಮಬಾಹೌ ಚ ಹೃಶೀಕೇಶಂಚ ಕರ್ಣಕೇ ।
ಪೃಷ್ಠೇ ತು ಪದ್ಮನಾಭಸ್ಯಾತ್ ತ್ರಿಕೇ ದಾಮೋದರಂ ನ್ಯಸೇತ್ ॥

ತತ್ಪ್ರಕ್ಷಾಲನ ತೋಯೇನ ವಾಸುದೇವನ್ತು ಮೂರ್ಧನಿ ಏವಂ ಕಾರ್ಯಂ ಬ್ರಾಹ್ಮಣಸ್ಯ,

ಈ ರೀತಿಯಾಗಿ ಹನ್ನೆರಡು ತಿರುಮಣ್ ಗಳಿಗೂ ಇರುವ ಹೆಸರನ್ನು, ಜಾಗಗಳನ್ನು ತಿಳಿಸಿ, ಕೈಯನ್ನು ತೊಳೆದ ನೀರಿನಿಂದ ವಾಸುದೇವನನ್ನು ತಲೆಯಲ್ಲಿ ಆದಕ್ಕೆ ತಿಳಿಸಿದ ಮಂತ್ರದಿಂದ ಪ್ರೋಕ್ಷಿಸಿಕೊಳ್ಳಬೇಕು.

ಆದ್ದರಿಂದಲೇ ಹನ್ನೆರಡು ನಾಮ 'ಪನ್ನಿರು ನಾಮಂ' ಎಂಬುದಾಗಿಯೇ ಹೆಸರುವಾಸಿಯಾಗಿದೆ.

..... ಕ್ಷತ್ರಿಯಸ್ಯೋಪಧಾರಯೇತ್ ।
ಲಲಾಟೇ ಕೇಶವಂ ಧ್ಯಾಯೇತ್ ಹೃದಯೇ ಮಾಧವಂ ತಥಾ ।
ಭುಜಯೋಶ್ಚಭಯೋರ್ವತ್ಸ, ಸ್ಮರೇದ್ವೈ ಮಧುಸೂದನಮ್ ॥

ಕ್ಷತ್ರಿಯರುಗಳು ಧರಿಸಿಕೊಳ್ಳುವ ನಾಲ್ಕು ಜಾಗಗಳಲ್ಲಿ ಇಡಬೇಕಾದ ರೀತಿಯು–ಹಣೆಯಲ್ಲಿ ಕೇಶವನನ್ನು, ಎದೆಯಲ್ಲಿ ಮಾಧವನನ್ನು, ಎರಡು ಕೈಗಳಲ್ಲೂ ಮಧುಸೂಧನನ್ನು ಸ್ಮರಿಸಿ ತಿರುಮಣ್ ನಾಲ್ಕನ್ನೂ ಇಟ್ಟುಕೊಳ್ಳಬೇಕು.

ಕ್ಷತ್ರಿಯಸ್ಯ ವಿಧಿ: ಪ್ರೋಕ್ತ: = ಈ ರೀತಿಯಾಗಿ ಅರಸರುಗಳಿಗೆ ವಿಧಿಕ್ರಮವನ್ನು ಹೇಳಲ್ಪಟ್ಟಿತು.

..... ವೈಶ್ಯಕೃತ್ಯಂ ನಿಶಾಮಯ ।
ಲಲಾಟೇ ಕೇಶವಂ ಧ್ಯಾಯೇತ್ ಹೃದಯೇ ಮಾಧವಂತಥಾ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇನ್ನು ವೈಶ್ಯರಿಗೆ ತಕ್ಕುದಾದ ವಿಧಿ ಕ್ರಮವನ್ನು ಕೇಳು, ಹಣೆಯಲ್ಲಿ ಕೇಶವನನ್ನು, ಎದೆಯಲ್ಲಿ ಮಾಧವನನ್ನು, ನೆನೆಸಿಕೊಂಡು ತಿರುಮಣ್ ಎರಡನ್ನು ಇಟ್ಟುಕೊಳ್ಳಬೇಕು.

ಯೋಷಿತ್ಸ್ಯಾದ್ಸ್ಮರೇತಾಂಚ ಕೇಶವಂ ಫಾಲದೇಶಕೇ ।
ಅನೇನ ವಿಧಿನಾ ಕುರ್ಯಾತ್ ಪುಂಡ್ರಾಣಿ ಮಮ ತುಷ್ಟಯೇ ॥

ಸ್ತ್ರೀಯರೂ, ನಾಲ್ಕನೇ ವರ್ಣದವರೂ, ಹಣೆಯಲ್ಲಿ ಕೇಶವನನ್ನು ನೆನೆಸಿ ಒಂದೇ ತಿರುಮಣ್ಣನ್ನು ಇಟ್ಟುಕೊಳ್ಳಬೇಕು. ಈ ರೀತಿಯಾಗಿ ನನ್ನ ಪ್ರೀತಿಗೋಸ್ಕರ ಊರ್ಧ್ವಪುಂಡ್ರಗಳನ್ನು ಇಟ್ಟುಕೊಳ್ಳಬೇಕೆಂಬುದಾಗಿ ಭಗವಂತನು ಬ್ರಹ್ಮನಿಗೆ ತಿಳಿಸಿದನು.

ಶ್ಯಾಮಂ ಶಾನ್ತಿಕರಂ ಪ್ರೋಕ್ತಂ ರಕ್ತಂ ವಶ್ಯಕರಂ ತಥಾ ।
ಶ್ರೀಕರಂ ಪೀತಮಿತ್ಯಾಹುಃ ಶ್ವೇತಂ ಮೋಕ್ಷಕರಂ ಶುಭಂ ॥

ಕಪ್ಪು ಬಣ್ಣ ಶಾಂತಿಯನ್ನು ತರುತ್ತದೆ. ಕೆಂಪು ಬಣ್ಣ ವಶ್ಯಕರವಾಗುತದೆ. ಹಳದಿ ಬಣ್ಣ ಮಂಗಳವನ್ನುಂಟು ಮಾಡುತ್ತದೆ. ಶುಭವಾದ ಬಿಳಿಯ ಬಣ್ಣ ಮೋಕ್ಷಕರವಾಗುತ್ತದೆ.

ಏಕಾನ್ತಿನೋ ಮಹಾಭಾಗಾಃ ಸರ್ವಲೋಕಹಿತೇರತಾಃ ।
ಸಾನ್ತರಾಲಂ ಪ್ರಕುರ್ವನ್ತಿ ಪುಂಡ್ರಂ ಹರಿಪದಾಕೃತಿಂ ॥

ಮಧ್ಯೇ ಛಿದ್ರೇಣ ಸಂಯುಕ್ತಂ ಏತದ್ಧಿ ಹರಿಮಂದಿರಂ ।
ಊರ್ಧ್ವಂ ಸೌಮ್ಯಂ ಋಜುಂ ಸೂಕ್ಷ್ಮಂ ಸುಪಾರ್ಶ್ವಂ ಸುಮನೋಹರಂ ॥

ನಿರನ್ತರಾಲಂ ಯಃ ಕುರ್ಯಾತ್ ಊರ್ಧ್ವಪುಂಡ್ರಂ ದ್ವಿಜಾಧಮಃ ।
ಸ ಹಿ ತತ್ರ ಸ್ಥಿತಂ ಲಕ್ಷ್ಮ್ಯಾ ಸಹ ಮಾಂಚ ವ್ಯಪೋಹತಿ ॥ ೩೩ ॥

ಅಚ್ಛಿದ್ರಂ ಊರ್ಧ್ವಪುಂಡ್ರಂ ತು ಯೇ ಕುರ್ವನ್ತಿ ದ್ವಿಜಾಧಮಾಃ ।
ತೈರ್ಲಲಾಟೇ ಶುನಃ ಪಾದಂ ನಿಕ್ಷಿಪ್ತಂ ವೈ ನ ಸಂಶಯಃ ॥ ೩೪ ॥

ತಸ್ಮಾಚ್ಛಿದ್ರಾನ್ವಿತಂ ಪುಂಡ್ರಂ ಮಹಚ್ಛಿದ್ರಂ ಶುಭಾನ್ವಿತಂ ।
ಧಾರಯೇದ್ಬ್ರಾಹ್ಮಣೋ ನಿತ್ಯಂ ಹರಿಸಾಲೋಕ್ಯ ಸಿದ್ಧಯೇ ॥ ೩೫ ॥

ಎಂಬುದರ ಸಾರಾರ್ಥ – ಹರಿಪದಾಕೃತಿಯಾದ ಪುಂಡ್ರವನ್ನು ಮಧ್ಯದಲ್ಲಿ ಅಂತರವಿಟ್ಟೇ ಧರಿಸಕೊಳ್ಳಬೇಕು. ಆ ರೀತಿಯಾದ ಅಂತರದಲ್ಲೇ ಭಗವಂತನ ವಾಸಸ್ಥಾನ. ಉದ್ದವಾಗಿಯೂ, ಅಂದವಾಗಿಯೂ, ಸೂಕ್ಷ್ಮವಾಗಿಯೂ, ಸುಂದರವಾದ ಪಕ್ಕಗಳನ್ನು ಉಳ್ಳದ್ದಾಗಿಯೂ, ಮನಸನ್ನು ವಶೀಕರಿಸುವಂತೆಯೂ ಇರಬೇಕು.

ಯಾವನು ಮಧ್ಯದಲ್ಲಿ ಅಂತರವಿಲ್ಲದೆ ತಿರುಮಣ್ಣನ್ನು ಧರಿಸುವನೋ ಅವನು ಲಕ್ಷ್ಮಿಯಿಂದ ಕೂಡಿ ಅಲ್ಲಿರುವ ನನ್ನನ್ನು ಕಳೆದುಕೊಳ್ಳುವನಾಗುತ್ತಾನೆ. ಮಧ್ಯದಲ್ಲಿ ಅಂತರವಿಲ್ಲದೆ ತಿರುಮಣ್ಣನ್ನು ಇಟ್ಟುಕೊಂಡರೆ ಅಲ್ಲಿ ನಾಯಿಯ ಪಾದವನ್ನು ಇಟ್ಟಂತಾಗುತ್ತದೆ. ಆದ್ದರಿಂದ ಹರಿಸಾಲೋಕ್ಯಸಿದ್ಧಿಗಾಗಿ ಮದ್ಯದಲ್ಲಿ ಅಂತರವಿಟ್ಟೇ ತಿರುಮಣ್ಣನ್ನು ಇಟ್ಟುಕೊಳ್ಳಬೇಕು.

(ಸೂಚನೆ – ಈಗಲೂ ಕೆಲವರು ಮಧ್ಯದಲ್ಲಿ ಅಂತರವಿಲ್ಲದೆ ತುರುಮಣ್ಣನ್ನು ಶಾಸ್ತ್ರ ವಿರುದ್ಧವಾಗಿ ಬೇರೆ ಕಾರ್ಯಗಳಂತೆಯೇ, ಇಟ್ಟುಕೊಂಡು ಬರುವುದನ್ನು ಸೂಕ್ಷ್ಮವಾಗಿ ಗಮನಿಸಿ ತಿಳಿದುಕೊಳ್ಳಬೇಕು)

ಊರ್ಧ್ವಪುಂಡ್ರಂ ಋಜುಂ ಸೌಮ್ಯಂ ಲಲಾಟೇ ಯಸ್ಯ ದೃಶ್ಯತೇ ।
ಸ ಚಂಡಾಲೋಪಿ ಶುದ್ಧಾತ್ಮಾ ಪೂಜ್ಯ ಏವ ನ ಸಂಶಯಃ ॥ ೧೨ ॥

ಯಾರೊಬ್ಬನ ಹಣೆಯಲ್ಲಿ ಊರ್ಧ್ವಪುಂಡ್ರವಾದುದು ನೇರವಾಗಿಯೂ ಅಂದವಾಗಿಯೂ ಕಾಣ ಬರುತ್ತದೋ ಅಂಥವನು ಚಂಡಾಲನಾಗಿದ್ದರೂ ಅವನು ಶುದ್ಧನೇ, ಪೂಜೆಗೆ ಅರ್ಹನು. ಇದರಲ್ಲಿ ಸಂದೇಹವೇ ಇಲ್ಲ.

ಅಶುಚಿರ್ವ್ಯಪ್ಯನಾಚಾರೋ ಮಹಾಪಾಪಂ ಸಮಾಚರೇತ್ ।
ಶುಚಿರೇವ ಭವೇನ್ನಿತ್ಯಂ ಊರ್ಧ್ವಪುಂಡ್ರಾಂಕಿತೋ ನರಃ ॥ ೧೪ ॥

ಶುದ್ಧಿಯಿಲ್ಲದವನೂ, ಆಚಾರಹೀನನೂ, ಮಹಾಪಾಪಗಳನ್ನು ಮಾಡುವವನಾಗಿದ್ದರೂ, ಊರ್ಧ್ವಪುಂಡ್ರವನ್ನಿಟ್ಟುಕೊಂಡ ಮನುಷ್ಯನು ಎಂದೂ ಶುದ್ಧನಾದವನೇ ಆಗುತ್ತಾನೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮತ್ಪ್ರಿಯಾರ್ಥಂ ಶುಭಾರ್ಥಂ ವಾ ರಕ್ಷಾರ್ಥಂ ಚತುರಾನನ! ।
ಮತ್ಪೂಜಾಹೋಮಕೇ ಚೈವ ಸಾಯಂ ಪ್ರಾತ: ಸಮಾಹಿತ: ॥
ಮದ್ಭಕ್ತೋ ಧಾರಯೇನ್ನಿತ್ಯಂ ಊರ್ಧ್ವಪುಂಡ್ರಂ ಭವಾಪಹಂ ॥ ೧೫ ॥

ಭಗವಂತನಾದ ನನ್ನ ಪ್ರೀತಿಗಾಗಿಯೂ, ಮಂಗಳಾರ್ಥವಾಗಿಯೂ, ರಕ್ಷಣೆಗಾಗಿಯೂ, ನನ್ನ ಪೂಜೆಯಲ್ಲಿಯೂ, ಹೋಮಗಳಲ್ಲಿಯೂ ಪ್ರಾತ: ಸಾಯಂ ಕಾರ್ಯಕಾಲಗಳಲ್ಲಿ, ನಿರತನಾಗಿರುವ ಓ ಬ್ರಹ್ಮನೇ, ನನ್ನ ಭಕ್ತನು ನಿತ್ಯವೂ ಊರ್ಧ್ವಪುಂಡ್ರವನ್ನು ಧರಿಸಬೇಕು.

('ಭವಾಪಹಂ' ಎನ್ನುವ ಪದವು ಅತ್ಯಂತ ಶ್ರೇಷ್ಠವಾದ ಅರ್ಥಗಳುಳ್ಳದ್ದು)

ಊರ್ಧ್ವಪುಂಡ್ರಧರೋ ಮರ್ತ್ಯೋ ಮ್ರಿಯತೇ ಯದಿ ಕುತ್ರಚಿತ್ ।
ಶ್ವಪಾಕೋಪಿ ವಿಮಾನಸ್ಥೋ ಮಮ ಲೋಕೇ ಮಹೀಯತೇ ॥

ಊರ್ಧ್ವಪುಂಡ್ರವನ್ನು ಧರಿಸಿದ ಮನುಷ್ಯನು ಯಾವುದೋ ಒಂದು ಸ್ಥಳದಲ್ಲಿ ಮೃತನಾದರೆ ಅವನು ನಾಯಿಮಾಂಸ ತಿನ್ನುವ ಕೀಳು ಜಾತಿಯವನಾದರೂ, ಒಳ್ಳೆಯ ವಿಮಾನವನ್ನು ಏರಿದವನಾಗಿ ವಿಷ್ಣುಲೋಕವನ್ನು ಸೇರಿ ಹಿರಿಮೆಯನ್ನು ಹೊಂದುತ್ತಾನೆ.

ಊರ್ಧ್ವಪುಂಡ್ರಧರೋ ಮರ್ತ್ಯೋ ಯದಾ ಯಸ್ಯಾನ್ನಮಶ್ನಾತೇ ।
ತದಾ ವಿಂಶತ್ ಕುಲಂ ತಸ್ಯ ನರಕಾದುದ್ಧರಾಮ್ಯಹಂ ॥ ೭೧ ॥

ತಿರುಮಣ್ ಧರಿಸಿದ ಮನುಷ್ಯನು ಯಾವಾಗ ಯಾವನೊಬ್ಬನ ಅನ್ನವನ್ನು ಭುಜಿಸುತ್ತಾನೆಯೋ ಅವನನ್ನಲ್ಲದೆ ಅವನ ಕುಲಕ್ಕೆ ಸೇರಿದ ೨೦ ಮಂದಿಯನ್ನು ನಾನು ನರಕದಿಂದ ಉದ್ಧರಿಸುತ್ತೇನೆ.

ವೀಕ್ಷ್ಯಾದರ್ಶೇ ಜಲೇ ವಾಪಿ ಯೋ ವಿದಧ್ಯಾತ್ ಪ್ರಯತ್ನತ: ।
ಊರ್ಧ್ವಪುಂಡ್ರಂ ಮಹಾಭಾಗ: ಸ ಯಾತಿ ಪರಮಾಂ ಗತಿಮ್ ॥ ೧೮ ॥

ಯಾವ ಮಹಾಭಾವನು ಕನ್ನಡಿಯಲ್ಲಿಯೋ ಅಥವಾ ನೀರಿನಲ್ಲೋ ಮುಖ ಮುಂತಾದುವುಗಳನ್ನು ನೋಡಿಕೊಂಡು ಪ್ರಯತ್ನಪೂರ್ವಕವಾಗಿ ತಿರುಮಣ್ಣನ್ನು ತಾನು ಇಟ್ಟುಕೊಳ್ಳುವನೋ ಅವನು ಶ್ರೇಷ್ಠ ಗತಿಯನ್ನು ಹೊಂದುವನು.

(ಸೂಚನೆ – ತಿರುಮಣ್ ಇಟ್ಟುಕೊಳ್ಳಲು ನೀರಿನಲ್ಲೂ ಮುಖ ಮುಂತಾದುವನ್ನೂ ನೋಡಿಕೊಳ್ಳಲು ಭಗವಂತನು ಅನುಮತಿಸುತ್ತಾನೆ ಎಂಬುದು ಇಲ್ಲಿ ತಿಳಿಯುತ್ತದೆ)

ಅನಾಮಿಕಾ ಶಾನ್ತಿದೋಕ್ತಾ ಮಧ್ಯಮಾಯುಷ್ಕರೀ ಭವೇತ್ ।
ಅಂಗುಷ್ಠ: ಪುಷ್ಟಿದ: ಪ್ರೋಕ್ತ: ತರ್ಜನೀ ಮೋಕ್ಷದಾಯಿನೀ ॥ ೧೯ ॥

ತಿರುಮಣ್ಣನ್ನು ಇಟ್ಟುಕೊಳ್ಳಲು ಅನಾಮಿಕಾ ಬೆರಳನ್ನು ಉಪಯೋಗಿಸಿದರೆ ಶಾಂತಿಯುಂಟಾಗುತ್ತದೆ. ಮಧ್ಯ ಬೆರಳು ದೀರ್ಘ ಆಯುಸ್ಸನ್ನು ತರುತ್ತದೆ. ಅಂಗುಷ್ಠವು ಪುಷ್ಟಿಯನ್ನು ಕೊಡುತ್ತದೆ. ತರ್ಜನೀ ಬೆರಳು ಮೋಕ್ಷವನ್ನು ಕೊಡುತ್ತದೆ.

ಯಜ್ಞೋ ದಾನಂ ತಪೋ ಹೋಮಸ್ವಾಧ್ಯಾಯ: ಪಿತೃ ತರ್ಪಣಮ್ ।
ವ್ಯರ್ಥಂ ಭವತಿ ತತ್ಸರ್ವಂ ಊರ್ಧ್ವಪುಂಡ್ರಂವಿನಾ ಕೃತಮ್ ॥ ೨೦ ॥

ತಿರುಮಣ್ ಇಲ್ಲದೇನೇ ಮಾಡುವ ವೈದಿಕ (ಲೌಕಿಕ) ಕಾರ್ಯಗಳೆಲ್ಲವೂ ವ್ಯರ್ಥವಾಗುತ್ತದೆ.

ಯಚ್ಛ ಶರೀರಂ ಮನುಷ್ಯಾಣಾಂ ಊರ್ಧ್ವಪುಂಡ್ರವಿನಾಕೃತಮ್ ।
ತನ್ಮುಖಂ ನೈವ ಪಶ್ಯಾಮಿ ಶ್ಮಶಾನಸದೃಶಂ ಹಿ ತತ್ ॥

ಯಾವ ದೇಹದಲ್ಲಿ ತಿರುಮಣ್ ಇಲ್ಲವೋ ಅವನ ಮುಖವನ್ನು ಭಗವಂತನಾದ ನಾನು ನೋಡುವುದಿಲ್ಲ. ಅದು ಸ್ಮಶಾನದಂತಾಗುತ್ತದೆ.

ಊರ್ಧ್ವಪುಂಡ್ರಂ ಪ್ರಕುರ್ವೀತ ಮತ್ಸ್ಯಕೂರ್ಮಾದಿ ಧಾರಣಮ್ ।
ಕುರ್ಯಾದ್ವಿಷ್ಣುಪ್ರಸಾದಾರ್ಥಂ ಮಹಾವಿಷ್ಣೋರತಿಪ್ರಿಯಂ ॥ ೨೩ ॥

ಮತ್ಸ್ಯ ಕೂರ್ಮ ರೂಪಿಯಾದ ತಿರುಮಣ್ಣನ್ನು ವಿಷ್ಣು ಪ್ರಸಾದಾರ್ಥವಾಗಿ ಇಟ್ಟುಕೊಳ್ಳಬೇಕು. ಇದು ವಿಷ್ಣುವಿಗೆ ಹೆಚ್ಚು ಪ್ರೀತಿಕರವಾದುದು.

ಮಮಾವತಾರಚಿಹ್ನಾನಿ ದೃಶ್ಯನ್ತೇ ಯಸ್ಯ ವಿಗ್ರಹೇ ।
ಮರ್ತ್ಯೋ ಮರ್ತ್ಯೋ ನ ವಿಜ್ಞೇಯ: ಸನೂನಂ ಮಾಮಕೀ ತನು: ॥ ೨೬ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾವನ ದೇಹದಲ್ಲಿ ನನ್ನ ಅವತಾರಗಳಾದ ಮತ್ಸ್ಯ–ಕೂರ್ಮ ರೂಪಿಯಾದ ಗುರುತುಗಳು ಇರುತ್ತವೆಯೋ ಅವನು ಬರೀ ಮನುಷ್ಯನಲ್ಲ. ಅವನು ನನ್ನ ಶ್ರೀಶರೀರವೇ ಆಗುತ್ತಾನೆ.

ಪಾಪಂ ಸುಕೃತರೂಪಂ ತು ಜಾಯತೇ ತಸ್ಯ ದೇಹಿನ: ।
ಮಮಾಯುಧಾನಿ ದೃಶ್ಯನ್ತೇ ಚಿಹ್ನಿತಾನಿ ಕಲೌ ಯುಗೇ ॥ ೨೭ ॥

ಕಲಿಯುಗದಲ್ಲಿ ನನ್ನ ಆಯುಧಗಳು ಯಾವನ ದೇಹದಲ್ಲಿ ಗುರುತಾಗಿ ಕಾಣಲ್ಪಡುತ್ತದೋ ಅಂಥವನ ಪಾಪಗಳು ಪುಣ್ಯಗಳಾಗಿಯೇ ಬದಲಾಗುತ್ತವೆ.

(ಸೂಚನೆ – ಪಾಪವನ್ನು ಕೂಡ ಪುಣ್ಯವನ್ನಾಗಿ ಮಾಡಬಲ್ಲ ಗುಣವು ಶಂಖ–ಚಕ್ರ ಲಾಂಛನಗಳಿಗೆ ಉಂಟು ಎಂಬುದನ್ನು ನಾವು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು)

ಉಭಾಭ್ಯಾಮಪಿ ಚಿಹ್ನಾಭ್ಯಾಂ ಯೋ ಅಂಕಿತೋ ಮತ್ಸ್ಯಮುದ್ರಯಾ ।
ಕೂರ್ಮಯಾ ಮಾಮಕಂ ತೇಜೋ ವಿಕ್ಷಿಪ್ತಂ ತಸ್ಯ ವಿಗ್ರಹೇ ॥ ೨೮ ॥

ಮತ್ಸ್ಯ – ಕೂರ್ಮ ಮುದ್ರೆಗಳಿಂದ ಯಾರೊಬ್ಬನ ದೇಹವು ಗುರುತಿಸಲ್ಪಟ್ಟಿದೆಯೋ ಅಲ್ಲಿ ನನ್ನ ತೇಜಸ್ಸಾದುದು ವಿಶೇಷವಾಗಿ ಉಂಟಾಗುತ್ತದೆ.

ಈವರೆಗೂ ಸಮಾಶ್ರಯಣ, ದ್ವಾದಶಪುಂಡ್ರ (ತಿರುಮಣ್) – ಅವುಗಳನ್ನು ಧರಿಸುವ ಕ್ರಮ ಈ ವಿಷಯವಾಗಿ ಸ್ಕಾಂದ ಪುರಾಣವು ಏನನ್ನು ತಿಳಿಸುತ್ತದೆ ಎಂಬುದನ್ನು ನೀವುಗಳು ಓದಿ ತಿಳಿದುಕೊಂಡಿದ್ದೀರಿ.

ಸಾವಿರಾರು ವರ್ಷಗಳ ಹಿಂದಯೇ ತೋರಿದ ಆ ಸ್ಕಾಂದ ಪುರಾಣದಲ್ಲಿಯೇ ತಿರುಪತಿ ಶ್ರೀನಿವಾಸನು ತಿರುಮಣ್ ಗೆ ಅಂಗವಾಗಿ ಸ್ನಾನವನ್ನು ಮಾಡಿಕೊಂಡ ಕ್ರಮ, ತದನಂತರ ತಾನೇ ಊರ್ದ್ವಪುಂಡ್ರ ಎಂದು ಹೇಳುವ ತಿರುಮಣ್ಣನ್ನು ಇಟ್ಟುಕೊಂಡ ರೀತಿ ಮುಂತಾದವುಗಳು ಬಹಳ ಚೆನ್ನಾಗಿ ಹೇಳಲ್ಪಟ್ಟಿದೆ. ಇವುಗಳನ್ನು ಓದುವ ವಾಚಕರು ಈಚೆಗೆ ಕೆಲವರು ಎಬ್ಬಿಸಿದ ಕೆಲವು ವಾದಗಳು ಅರ್ಥವಿಲ್ಲದ್ದು ಮತ್ತು ಬೇಜವಾಬ್ದಾರಿಯಾದದ್ದು – ಸತ್ಯಕ್ಕೆ ಬೇರೆಯಾದ ಅರ್ಥ ಉಳ್ಳದ್ದಾಗಿ, ಸಂಪ್ರದಾಯ ರೀತಿಯಾಗಿ ಅನಾದಿ ಕಾಲದಿಂದಲೂ ನಡೆದುಕೊಂಡು ಬರುತ್ತಿರುವ ಆಚರಣೆಗಳಿಗೆ ಅವಮರ್ಯಾದೆ ಉಂಟುಮಾಡುವಂತಹದು – ಅವರ ಸ್ಥಾನಕ್ಕೆ ತಕ್ಕುದ್ದಲ್ಲ ಹಾಗೂ ಅವುಗಳು ಒಪ್ಪಿಕೊಳ್ಳಲಾಗದಂತಹ ವಿವರಣೆಗಳು ಎಂಬುದನ್ನು ಇದರಿಂದ ಬಹಳ ಸ್ಪಷ್ಟವಾಗಿ ಅರಿತುಕೊಳ್ಳುವರು.

ವೈಷ್ಣವ ಖಿಂಡೇ ಮಾರ್ಗಶೀರ್ಷ ಮಹಾತ್ಮ್ಯೇ ತೃತಿಯೋಽಧ್ಯಾಯ:

ನಾರಾಯಣಾಯುಧೈರ್ನಿತ್ಯಂ ಚಿಹ್ನಿತೋ ಯಸ್ಯ ವಿಗ್ರಹ: ।
ಪಾಪಕೋಟಿ ಪ್ರಯುಕ್ತಸ್ಯ ಕಿಂ ತಸ್ಯ ಕುರುತೇ ಯಮ: ॥ ೩೦ ॥

ನಾರಾಯಣನ ಆಯುಧಗಳಿಂದ ಯಾರೊಬ್ಬನ ದೇಹದಲ್ಲಿ ಚಿಹ್ನೆಗಳಿರುವುದೋ ಅಂಥವನು ಪಾಪಗಳಿಂದ ಕೂಡಿದ್ದಾಗ್ಯೂ ಯಮನು ಅವನಿಗೆ ಯಾವ ದಂಡನೆಯನ್ನೂ ವಿಧಿಸಲಾರನು.

ಯದಾ ಯದಾ ಪ್ರಪಶ್ಯೇತ್ ದೇಹಂ ಶಂಖಾದಿ ಚಿಹ್ನಿತಮ್ ।
ತದಾ ತದಾ ಪ್ರಸನ್ನೋಽಹಂ ಪಾಪಂ ತಸ್ಯ ದಹಾಮಿ ವೈ ॥ ೩೬ ॥

ಶಂಖ ಚಕ್ರಾದಿಗಳಿಂದ ಗುರುತಿಸಲ್ಪಟ್ಟ ದೇಹವನ್ನು ಯಾವಾಗ ನೋಡಲ್ಪಡುವುದೋ ಆಗಲೇ ನಾನು ಹೆಚ್ಚಿನ ಪ್ರೀತಿಯುಳ್ಳವನಾಗಿ ಅವನ ಪಾಪಗಳನ್ನು ನಾಶಮಾಡುತ್ತೇನೆ.

ತಿಷ್ಠತೇ ಯಸ್ಯ ದೇಹೇ ತು ಅಹೋರಾತ್ರಂ ದಿನೇ ದಿನೇ ।
ಶಂಖಚಕ್ರಗದಾಪದ್ಮ ಲಿಖಿತಂ ಸ ಮದಾತ್ಮಕ: ॥

ಪ್ರತಿನಿತ್ಯವು ಅಹೋರಾತ್ರಿ ಯಾರೊಬ್ಬನ ಶರೀರದಲ್ಲಿ ಶಂಖ ಚಕ್ರ ಮುಂತಾದ ಗುರುತುಗಳಿರುತ್ತವೆಯೋ ಅಂಥವನು ನನ್ನ ರೂಪವನ್ನು ಹೊಂದಿದವಂಥವನಾಗಿ ಆಗುತ್ತಾನೆ.

ನಾರಾಯಣಾಯುಧೈರ್ಯುಕ್ತಂ ಕೃತ್ವಾತ್ಮಾನಂ ಕಲೌಯುಗೇ ।
ಯತ್ಪುಣ್ಯಂ ಕರ್ಮ ಕುರುತೇ ಮೇರುತುಲ್ಯಂ ನ ಸಂಶಯ: ॥ ೩೮ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ಕಲಿಯುಗದಲ್ಲಿ ನಾರಾಯಣನ ಆಯುಧಗಳಿಂದ ದೇಹದಲ್ಲಿ ಗುರುತು ಮಾಡಲ್ಪಟ್ಟು ಯಾವ ಪುಣ್ಯಕಾರ್ಯಗಳನ್ನು ಮಾಡಿದರೂ ಅದು ಮೇರು ಪರ್ವತದಂತೆ ಬೆಳೆಯುತ್ತದೆ.

ಶಂಖಾಯುಧಾಂಕಿತೋ ಭಕ್ತ್ಯಾ ಯಶ್ಶ್ರಾದ್ಧಂ ಕುರುತೇ ಸುತ ।
ವಿಧಿಹೀನಂ ತು ಸಂಪೂರ್ಣಂ ಪಿತೃಣಾಂ ದತ್ತಮಕ್ಷಯಂ ॥ ೩೯ ॥

ಶಂಖ ಚಕ್ರಾದಿಗಳಿಂದ ಮುದ್ರಿಸಲ್ಪಟ್ಟವನು ಭಕ್ತಿಯಿಂದ ಶ್ರಾದ್ಧವನ್ನು ಮಾಡಿದರೆ ಅದು ಕ್ರಮಬದ್ಧವಾಗಿಲ್ಲದಿದ್ದರೂ ಸಂಪೂರ್ಣಗೊಂಡೂ ಪಿತೃಗಳಿಗೆ ಅತ್ಯಂತ ತೃಪ್ತಿಯನ್ನುಂಟುಮಾಡುತ್ತದೆ.

ಯಥಾಗ್ನಿರ್ದಹತೇ ಕಾಷ್ಠಂ ವಾಯುನಾ ಪ್ರೇಷಿತೋ ಭೃಶಂ ।
ತಥಾ ದಹ್ಯಂತಿ ಪಾಪಾನಿ ದೃಷ್ಟ್ವಾ ಮೇ ಆಯುಧಾನಿ ವೈ ॥ ೪೦ ॥

ಯಾವ ರೀತಿ ಕಡ್ಡಿಗಳನ್ನು (ಸೌದೆಯನ್ನು) ಗಾಳಿಯಿಂದ ಪೋಷಿಸಲ್ಪಟ್ಟ ಅಗ್ನಿಯು ಸುಟ್ಟುಹಾಕುವುದೋ ಹಾಗೆ (ದೇಹದಲ್ಲಿರುವ) ನನ್ನ ಆಯುಧಗಳನ್ನು ಕಂಡ ಪಾಪಗಳು ದಹಿಸಲ್ಪಡುತ್ತವೆ. ಅವುಗಳನ್ನು ನನ್ನ ಆಯುಧಗಳೇ ಸುಟ್ಟುಹಾಕುತ್ತವೆ.

ಮಮ ನಾಮಾಂಕಿತಾಂ ಮುದ್ರಾಂ ಅಷ್ಟಾಕ್ಷರಸಮನ್ವಿತಾಮ್ ।
ಶಂಖಾದಿ ಸ್ವಾಯುಧೈರ್ಯುಕ್ತಾಂ ಸ್ವರ್ಣ ತಾಪಮಯೀಮಪಿ ॥ ೪೧ ॥

ಧತ್ತೇ ಭಗವತೋ ಯಸ್ತು ಕಲಿಕಾಲೇ ವಿಶೇಷತ: ।
ಪ್ರಹ್ಲಾದ ಸಮೋಜ್ಞೇಯೋ ನಾನ್ಯಥಾ ಮಮ ವಲ್ಲಭ: ॥ ೪೨ ॥

ಭಗವಂತನ ನಾಮದಿಂದಲೂ, ಅಷ್ಟಾಕ್ಷರ ಮಂತ್ರದಿಂದಲೂ, ಅವನ ಆಯುಧಗಳಿಂದಲೂ ಕೂಡಿದ ಚಿನ್ನ, ಬೆಳ್ಳಿಯಿಂದ ಮಾಡಲ್ಪಟ್ಟ ಮುದ್ದಿರೆಗಳಿಂದ ಕೂಡಿದ ಉಂಗುರ ಮುಂತಾದವುಗಳನ್ನು ಯಾರು ಈ ಕಲಿಗಾಲದಲ್ಲಿ ವಿಶೇಷವಾಗಿ ಧರಿಸುತ್ತಾನೆಯೋ ಅವನು ಪ್ರಹ್ಲಾದನಿಗೆ ಸಮನಾದ ಭಕ್ತನಾಗುತ್ತಾನೆ. ಭಗವಂತನ ಪ್ರೀತಿಗೆ ಪಾತ್ರನಾದವನು.

ಯಸ್ಯ ನಾರಾಯಣೇ ಮುದ್ರಾ ದೇಹಂ ಶಂಖಾದಿ ಚಿಹ್ನಿತಮ್ ।
ಧಾತ್ರೀಫಲೈ: ಕೃತಾ ಮಾಲಾ ತುಲಸೀಕಾಷ್ಠಸಂಭವಾ ॥ ೪೩ ॥

ದ್ವಾದಶಾಕ್ಷರಮಂತ್ರಸ್ತು ನಿಯುಕ್ತಾನಿ ಕಲೇವರೇ ।
ಆಯುಧಾನಿ ಚ ವಿಪ್ರಸ್ಯ ಮತ್ಸಮಸ್ಸ ಚ ವೈಷ್ಣವ: ॥ ೪೪ ॥

ಯಾರ ದೇಹದಲ್ಲಿ ನಾರಾಯಣನ ಮುದ್ರೆಯೂ ಶಂಖ ಮುಂತಾದ ಗುರುತುಗಳೂ, ತುಳಸಿ, ನೆಲ್ಲಿಕಾಯಿ ಇವುಗಳಿಂದ ಮಾಡಿದ ಮಾಲೆಗಳಿರುವವೋ, ಮೇಲಾಗಿ ದ್ವಾದಶಾಕ್ಷರ ಮಂತ್ರದಿಂದ ಕೂಡಿದ ಮುದ್ರೆಗಳೂ, ಆಯುಧಗಳೂ ಯಾರ ಶರೀರದಲ್ಲಿರುತ್ತದೆಯೋ ಅಂತಹ ಬ್ರಾಹ್ಮಣ ವೈಷ್ಣವನು ನನಗೆ ಸಮನೇ ಆಗುತ್ತಾನೆ.

ಶಂಖಾಂಕಿತತನುರ್ವಿಪ್ರೋ ಭುಂಕ್ತೇ ವೈ ಯಸ್ಯ ವೇಶ್ಮನಿ ।
ತದನ್ನಂ ಸ್ವಯಮಶ್ನಾಮಿ ಪಿತೃಭಿಸ್ಸಹ ಪುತ್ರಕ ॥ ೪೫ ॥

ಶಂಖಾದಿ ಮುದ್ರೆಗಳಿಂದ ಕೂಡಿದ ದೇಹವುಳ್ಳವನ ಗೃಹದಲ್ಲಿ ಬ್ರಾಹ್ಮಣನು ಅನ್ನವನ್ನು ಭುಜಿಸುವನೋ ಆ ಅನ್ನವನ್ನು ಪಿತೃಗಳಿಂದ ಕೂಡಿ ನಾನೇ ನೇರವಾಗಿ ಭುಜಿಸುತ್ತೇನೆ.

ಕೃಷ್ಣಾಯುಧಾಂಕಿತೋ ಯಸ್ತು ಶ್ಮಶಾನೇ ಮ್ರಿಯತೇ ಯದಿ ।
ಪ್ರಯಾಗೇ ಯಾ ಗತಿ: ಪ್ರೋಕ್ತಾ ಸಾ ಗತಿಸ್ತಸ್ಯ ಮಾನದಾ ॥

ಭಗವಂತನ ಆಯುಧಗಳಿಂದ ಮುದ್ರೆಯೊತ್ತಲ್ಪಟ್ಟವನು ಸ್ಮಶಾನದಲ್ಲಿ ಮೃತಪಟ್ಟರೂ, ಪ್ರಯಾಗದಲ್ಲಿ ಮೃತಹೊಂದಿದಂತೆ ಉಂಟಾಗುವ ಸದ್ಗತಿಯು ಅವನಿಗೆ ಉಂಟಾಗುತ್ತದೆ.

ಮೇಲಿನ ಲೇಖನ ಮೂಲ ತಮಿಳು ಲೇಖನದ ಕನ್ನಡ ರೂಪ.

ತಮಿಳು ಮೂಲ ಲೇಖನ – ಪರಮಹಂಸೇತ್ಯಾದಿ ಶ್ರೀಮುಷ್ಣಂ ಶ್ರೀಮದಾಂಡವನ್ ಸ್ವಾಮಿಗಳವರಿಂದ ತಾವೇ ಸಂಶೋಧಿಸಿ "ಶ್ರೀ ರಂಗನಾಥ ಪಾದುಕಾ" ಮಾಸಪತ್ರಿಕೆಯಲ್ಲಿ ಪ್ರಕಟವಾದದ್ದು.

ಕನ್ನಡ ರೂಪಾಂತರ – ಕಡಬ ಶ್ರೀಧರ್

ಶುಭಂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

मामुपेत्य तु कौन्तेय पुनर्जन्म न विद्यते।

ಶ್ರೀಮಾನ್ ಉ|| ವೇ|| ಎ. ಶ್ರೀನಿವಾಸರಂಗನ್, ಬೆಂಗಳೂರು

ಪಾಂಡವರಿಗೂ ಕೌರವರಿಗೂ ಯುದ್ಧ ನಡೆಯಬೇಕಾದ ಸಂದರ್ಭದಲ್ಲಿ ಬಂಧುಗಳ ವಿಯೋಗದಿಂದ ಉಂಟಾಗುವ ಶೋಕದಿಂದ ವ್ಯಾಕುಲಗೊಂಡ ಮನಸ್ಸುಳ್ಳವನಾಗಿ ಅರ್ಜುನನು ಬಿಲ್ಲು ಬಾಣಗಳನ್ನು ವಿಸರ್ಜಿಸಿ ಕುಳಿತು ಬಿಟ್ಟನು. शोकसंविग्नमानसः अर्जुनः संख्ये सशरं चापं विसृज्य उपविशत् (1-47)] ಶ್ರೀ ಕೃಷ್ಣನನ್ನು ಆಗ ಕುರಿತು "ನಾನು ಧರ್ಮದ ವಿಷಯದಲ್ಲಿ ಮೋಹಕ್ಕೊಳಗಾದ ಮನಸ್ಸುಳ್ಳವನಾಗಿ ನಿನ್ನನ್ನು ಪ್ರಶ್ನೆ ಮಾಡುತ್ತಿದ್ದೇನೆ. ನನಗೆ ಯಾವುದು ಶ್ರೇಯಸ್ಕರವೆಂದು ನಿನ್ನಿಂದ ನಿಶ್ಚಯಿಸಲ್ಪಟ್ಟಿದೆಯೋ ಅದನ್ನು ಶರಣಾಗತನು, ನಿನ್ನ ಶಿಷ್ಯನು ಆದ ನನಗೆ ಉಪದೇಶಿಸು" (2-7) ಎಂದು ಬೇಡುತ್ತಾನೆ. ಪ್ರತಿಫಲಾಪೇಕ್ಷೆಯು ಇಲ್ಲದೆ ತಾನು ಆಶ್ರಿತರಲ್ಲಿ ವಾತ್ಸಲ್ಯ ತೋರುವುದನ್ನು ಲೋಕವು ತಿಳಿದು ಉದ್ಧಾರವಾಗಲಿ ಹಾಗೂ ಎಲ್ಲರೂ ಪರಮ ಪುರುಷಾರ್ಥವನ್ನು ಹೊಂದಲಿ ಎಂದು ಶ್ರೀಕೃಷ್ಣನು ಗೀತಾಶಾಸ್ತ್ರವನ್ನು ಅರ್ಜುನನನ್ನು ನೆಪವಾಗಿ ಇಟ್ಟುಕೊಂಡು ಲೋಕಕ್ಕೆ ಉಪದೇಶಿಸಿದನು. ಉಪದೇಶಿಸಿದ ಎಲ್ಲಾ ಮುಖ್ಯವಾದ ಮೋಕ್ಷಸಾದಕ ರಹಸ್ಯಗಳಲ್ಲಿ मामुपेत्य तु कौन्तेय पुनर्जन्म न विद्यते (8-16) ಎಂಬುದು ಒಂದು. ಶ್ರೀಕೃಷ್ಣನು ಅರ್ಜುನನಿಗೆ "ಅರ್ಜುನ, ಬ್ರಹ್ಮಾಂಡದೊಳಗಿರುವ ಎಲ್ಲಾ ಲೋಕಗಳು (ಭೋಗ ಮತ್ತು ಐಶ್ವರ್ಯಗಳಿಗೆ ಆಶ್ರಯವಾಗಿರುವುದರಿಂದ) ಹೋಗಿ ಮತ್ತೇ ಜನ್ಮಪಡೆದು ಬರತಕ್ಕವು. ಆದರೆ ನನ್ನನ್ನು ಹೊಂದಿದವರಿಗೆ ವಿನಾಶದ ಪ್ರಸಂಗವೇ ಇಲ್ಲದ ಕಾರಣ ಪುನರ್ಜನ್ಮವಿರುವುದಿಲ್ಲ (8-16)" ಎಂದು ಹೇಳಿ ಪರಮಕಾರುಣಿಕನಾದ ಭಗವಂತನು ಸ್ವಾ ಎಂದರೆ ತನ್ನನ್ನು ಎಲ್ಲಾ ಚೇತನರು ಅರಿಯುವಂತೆ ತನ್ನ ವಿಭೂತಿಯನ್ನು ತಾನೇ ಹೇಳಿ, ತನ್ನನ್ನು ಪಡೆಯುವ ಮಾರ್ಗವನ್ನು, ಪಡೆದ ಮೇಲೆ ಸಿಗುವ ಫಲವನ್ನು, ಪಡೆಯದೆ ಇದ್ದಲ್ಲಿ ಆಗುವ ವಿನಷ್ಟಿಯನ್ನು, ತನ್ನ ಧ್ಯಾನದಲ್ಲಿ ನಿರತರಾದ ಭಕ್ತರ ಲಕ್ಷಣಗಳನ್ನು ತಿಳಿಸಿದ್ದಾನೆ. ಈ ವಿಷಯಗಳನ್ನು ಗುರುತಿಸುವುದೇ ಈ ಲೇಖನದ ಉದ್ದೇಶ.

ಸ್ವಾ ಶಬ್ದದ ವಿವರಣೆ:- ಭಗವದ್ರಾಮನುಜರು ಸ್ವಾ ಶಬ್ದಕ್ಕೆ ಈ ರೀತಿಯಾದ ವಿವರಣೆಯನ್ನು ನೀಡಿದ್ದಾರೆ. "ಸ್ವಾ ಎಂದರೆ ವಿಚಿತ್ರವೂ ಅಸಂಖ್ಯೇಯು ಆದ ಭೋಗ್ಯವಾದ, ಪ್ರಕೃತಿಯು, ಅದನ್ನು ಅನುಭವಿಸುವ ಭೋಕ್ತೃವರ್ಗಗಳೂ, ಅದಕ್ಕೆ ಸಾದಕವಾದ ಉಪಕರಣಗಳು, ಅನುಭವಿಸುವ ಸ್ಥಾನಗಳು ಇವೆ ಮುಂತಾದವುಗಳಿಂದ ಪರಿಪೂರ್ಣವಾದ ಸಮಸ್ತ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಲೀಲೆಯನ್ನಾಗಿ ಉಳ್ಳವನು [अहं कृत्स्नस्य जगतः प्रभवः प्रलयस्तथा (7-6)], ದೋಷರಹಿತನೂ, ಜ್ಞಾನ, ಬಲ, ಐಶ್ವರ್ಯ, ಶಕ್ತಿ, ವೀರ್ಯ, ತೇಜಸ್ಸು ಮೊದಲಾದ ಅಸಂಖ್ಯೇಯ ಕಲ್ಯಾಣಗುಣಗಳಿಗೆ ನಿಧಿಯಾಗಿರುವನು, ನಿತ್ಯವೂ, ದೋಷರಹಿತವೂ, ನಿರತಿಶಯವಾದ ಔಜ್ವಲ್ಯ, ಸೌಂದರ್ಯ, ಸೌಗಂಧ್ಯ, ಸೌಕುಮಾರ್ಯ, ಲಾವಣ್ಯ ಯೌವನ ಮುಂತಾದ ಅನಂತಗುಣಗಳಿಗೆ ನಿಧಿಯಾಗಿರುವನು. ದಿವ್ಯಮಂಗಳ ವಿಗ್ರಹವನ್ನುಳ್ಳವನೂ, ವಾಕ್ಕು ಮನಸ್ಸುಗಳಿಂದ ಪರಿಚ್ಛೇದಿಸಿ ತಿಳಿಯಲು ಶಕ್ಯವಾಗದ ಸ್ವರೂಪವುಳ್ಳವನೂ, ಎಲ್ಲೆ ಇಲ್ಲದ ಕರುಣೆ, ಸೌಶಿಲ್ಯ, ವಾತ್ಸಲ್ಯ, ಔದಾರ್ಯಗಳಿಗೆ ಮಹೋದಧಿಯಾದವನೂ, ಸಮಸ್ತಲೋಕ ರಕ್ಷಕನು, ಶರಣಾಗತರ ದುಃಖನಿವಾರಕನೂ, ಆಶ್ರಿತರಲ್ಲಿ ತೋರುವ ವಾತ್ಸಲ್ಯಕ್ಕೆ ಸಮುದ್ರನಾದವನೂ, ಸಮಸ್ತ ಚೇತನರಿಗೆ ಕಾಣಿಸಿಕೊಂಡವನೂ, ತನ್ನ ಸ್ವಭಾವವನ್ನು ಬಿಡದವನೂ ವಸುದೇವರ ಮನೆಯಲ್ಲಿ ಅವತಾರ ಮಾಡಿದವನೂ, ತನ್ನ ತೇಜಸ್ಸಿನಿಂದ ಜಗತ್ತನ್ನೇ ಪ್ರಕಾಶಪಡಿಸಿದವನೂ, ತನ್ನ ದಿವ್ಯಕಾಂತಿಯಿಂದ ವಿಶ್ವವನ್ನು ಆಪ್ಯಾಯನಗೊಳಿಸುತ್ತಿರುವನೂ ಆದ 'ನನ್ನನ್ನು' ಎಂದರ್ಥ" ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾರೆ.

ಶ್ರೀ ಕೃಷ್ಣನು ಅರ್ಜುನನಿಗೆ ತನ್ನ ವಿಭೂತಿಯನ್ನು ವರ್ಣಿಸುತ್ತಾ मत्तः परतरं नान्यत्किञ्चिदस्ति धनञ्जय (7-7) "ಎಲೈ ಧನಂಜಯನೇ, ನನಗಿಂತಲೂ ಶ್ರೇಷ್ಠವಾದುದು ಬೇರೆ ಯಾವುದೂ ಇಲ್ಲ. ಅಂದರೆ ನನಗೆ ಯಾರೂ ಸಮಾನರಿಲ್ಲ ಹಾಗೂ ಅಧಿಕರಿಲ್ಲ. ಈ ವಿಶ್ವದಲ್ಲಿರುವ ಸಮಸ್ತ ಭೂತಗಳು ಅವುಗಳಿಂದ ಕಾಣಲ್ಪಡದ ನನ್ನಲ್ಲಿ ಇರುತ್ತಿದೆ. सर्वाणि भूतानि मत्स्थानीत्युपधारय (9-6) ಇದಲ್ಲದೆ, ಜ್ಯೋತಿಷ್ಟೋಮಾದಿಕ್ರಮ, ಮಹಾಯಜ್ಞ, ಹವಿಸ್ಸು, ಮಂತ್ರ, ತುಪ್ಪ, ಅಗ್ನಿ, ಹೋಮ, ಇವೆಲ್ಲವೂ ನಾನೇ ಆಗಿದ್ದೇನೆ. गतिर्भर्ता प्रभुः साक्षी प्राप्यवಾದ ಸ್ಥಾನವೂ, ಶಾಸಕನು, ಎಲ್ಲಾದನ್ನು ಸಾಕ್ಷಾತ್ತಾಗಿ ನೋಡುವವನು, निवासः शरणँ सुहृत् ಮನೆಯೇ ಮೊದಲಾದ ವಾಸಸ್ಥಾನವೂ, ಇಷ್ಟವನ್ನು ಅನುಗ್ರಹಿಸಿ ಅನಿಷ್ಟವನ್ನು ತೊಲಗಿಸುವವನು, ಹಿತೈಷಿಯು, ಉತ್ಪತ್ತಿಗೂ ನಾಶಕ್ಕೂ ಕಾರಣನಾದವನು, ಯಾವುದು ಉಂಟುಮಾಡಲ್ಪಡುವುದೋ ಹಾಗೇ ಉಪಸಂಹಾರ್ಯವಾದದೋ ಅದೂ ನಾನೇ (9-18). ಅಗ್ನಿ ಸೂರ್ಯರ ರೂಪದಲ್ಲಿ ತಾಪವನ್ನುಂಟು ಮಾಡುವವನು ನಾನೇ. ಮಳೆಯನ್ನು ಕೊಡುವನು, ನಿಲ್ಲಿಸುವವನು अमृतं चैव मृत्युश्च ಅಂದರೆ ಲೋಕದ ಜನ ಯಾವುದರಿಂದ ಜೀವಿಸುವರೋ, ಮತ್ತು ಯಾವುದರಿಂದ ಮರಣಹೊಂದುವರೋ ಅವೆರಡು ನಾನೇ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

(9-19). ಹೀಗೆ ನಾನು ವಿಶ್ವಶರೀರವಾಗಿ ಇರುವೆನು. ನಾನು ಪ್ರಾಣಿಗಳ ಜಠರಾಗ್ನಿಯಾಗಿ ದೇಹವನ್ನು ಆಶ್ರಯಿಸಿ, ಪ್ರಾಣ, ಅಪಾನ ವಾಯುಗಳಿಂದ ಖಾಧ್ಯ, ಚೋಷ್ಯ, ಲೇಹ್ಯ, ಪೇಯ ಎಂಬ ನಾಲ್ಕು ವಿಧವಾದ ಆಹಾರವನ್ನು ಜೀರ್ಣಗೊಳಿಸುತ್ತೇನೆ. (15-14)

ನಾನು ಯಾರಿಗೂ ಅಧೀನನಾಗದ ಸ್ವತಂತ್ರ ಈಶ್ವರೋಽಹಮಹಂ ಭೋಗೀ ಸಿಷ್ಠೋಽಹಂ ಬಲವಾನ್ಸುಖೀ ನಾನು ಎಲ್ಲರಿಗೂ ನಿಯಾಮಿಕನು. ನಾನು ನನ್ನ ಪ್ರಯತ್ನದಿಂದಲೇ ಭೋಗಿ. ನಾನು ಸ್ವತಃ ಸಿದ್ಧನಾದವನು. ನಾನು ಬಲಿಷ್ಠನು ಹಾಗೂ ಸ್ವತಃ ಸುಖಿಯು (16-14) ಯಚ್ಚಾಪಿ ಸರ್ವಭೂತಾನಾಂ ಬೀಜಂ ತದಹಮರ್ಜುನ ಎಂದರೆ ಎಲ್ಲಾ ಅವಸ್ಥೆಗಳಲ್ಲಿರುವ ಎಲ್ಲಾ ಭೂತಗಳಿಗೆ ಆಯಾ ಅವಸ್ಥೆಗಳಿಗೆ ಕಾರಣನು ನಾನೇ. ನನಗೆ ಆತ್ಮವಾಗಿ ಇಲ್ಲದಿರುವ ಯಾವ ಚರಾಚರವಾದ ಭೂತವು ಇಲ್ಲ (10-39). ಸಮೋಽಹಂ ಸರ್ವಭೂತೇಷು, ಸಮಸ್ತಭೂತಗಳಲ್ಲಿ (ಅಂದರೆ ದೇವತೆಗಳು, ಮನುಷ್ಯರು, ಪಶು ಪಕ್ಷಿಗಳು, ಸ್ಥಾವರಗಳು) ನಾನು ನನ್ನನ್ನು ಆಶ್ರಯಿಸಿರುವ ವಿಷಯದಲ್ಲಿ ಸಮನಾಗಿದ್ದೇನೆ. ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ನನಗೆ ಶತ್ರುವು ಇಲ್ಲ, ಮಿತ್ರನು ಇಲ್ಲ. (9-29) ಸಮಸ್ತಪ್ರಾಣಿ ಸಮೂಹದ ಸಕಲ ಪ್ರವೃತ್ತಿ, ನಿವೃತ್ತಿಗೂ ಕಾರಣಭೂತವಾಗಿರುವ ಜ್ಞಾನವು ಉದಯಿಸುವ ಹೃದಯ ಪ್ರದೇಶದಲ್ಲಿ ನಾನು ನನ್ನ ಸಂಕಲ್ಪದಿಂದಲೇ ನಿಯಮಗೊಳಿಸುತ್ತಾ ಆತ್ಮವಾಗಿ ನೆಲಸಿದ್ದೇನೆ. ಎಲ್ಲರಿಗೂ ಸ್ಮರಣೆ, ಪ್ರತ್ಯಕ್ಷಾದಿ ಪ್ರಮಾಣ ಜನ್ಯವಾದ ಜ್ಞಾನವೂ, ಜ್ಞಾನ ನಿವೃತ್ತಿಯೂ ನನ್ನಿಂದಲೇ ಉಂಟಾಗುತ್ತದೆ. ಎಲ್ಲಾ ವೇದಗಳಿಂದಲೂ ತಿಳಿಯಲ್ಪಡತಕ್ಕವನೂ ನಾನೇ. ವೇದಗಳಲ್ಲಿ ಹೇಳಿರುವ ಕರ್ಮಗಳಿಗೆ ಫಲಕೊಡುವವನೂ ನಾನೇ. ವೇದದ ಸಾರಭೂತವಾದ ಅರ್ಥವನ್ನು ಅರಿತವನೂ ನಾನೇ (15-15). ಅಮೃತವೂ, ಅವ್ಯಯವೂ ಪ್ರಕೃತಿ ವಿಯುಕ್ತವಾದುದೂ ಆದ ಪರಿಶುದ್ಧಾವಸ್ಥೆಯಲ್ಲಿರುವ ಜೀವಾತ್ಮನಿಗೆ ಹೇಗೆ ಅಹಂ ಪ್ರತಿಷ್ಠ ನಾನು ಆಧಾರನೋ ಹಾಗೇ ಶಾಶ್ವತ ಫಲಕ್ಕೆ ಕಾರಣಭೂತವಾದ ಭಕ್ತಿಯೋಗಕ್ಕೂ ನಾನೇ ಕಾರಣನು. ಅತಿಶಯವೆನಿಸಿರುವ ನಿತ್ಯೈಶ್ವರ್ಯರೂಪವಾದ ಏಕಾಂತಿಕವಾದ ಸುಖಕ್ಕೂ ನಾನೇ ಕಾರಣನು (14-27)

ನಾನ್ತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ (10-40) ನನ್ನ ಮಂಗಳಕರವಾದ ವಿಭೂತಿಗೆ ಕೊನೆಯೇ ಇಲ್ಲ. ಯಾವ ಯಾವ ನಿಯಮಿಸಲ್ಪಡುವ ಸ್ವಭಾವವನ್ನುಳ್ಳದ್ದೂ ಅಂತಹ ಭೂತಜಾತಿಯು ಕಾಂತಿಯುಕ್ತವಾಗಿದೆಯೋ, ಮಂಗಳಕಾರ್ಯವನ್ನಾರಂಭಿಸುವುದರಲ್ಲಿ ಉದ್ಯುಕ್ತವಾಗಿದೆಯೋ, ಅವುಗಳನ್ನೆಲ್ಲಾ ಮಮ ತೇಜೋಂಽಶ ಸಂಭವ ಇತಿ ಅವಗಚ್ಛ ನನ್ನ ತೇಜಸ್ಸಿನ ಬಂದು ಅಂಶದಿಂದ ಉಂಟಾದೆಂದು ತಿಳಿ (10-41)

ಭಗವಂತನು ಅರ್ಜುನನಿಗೆ "ಅರ್ಜುನ ಬಹುನೈತೇನ ಕಿಂ ಜ್ಞಾತೇನ (ಪ್ರಯೋಜನಮ್) "ಅರ್ಜುನ, ಬಹುವಾಗಿ ಹೇಳುವ ಜ್ಞಾನದಿಂದ ಏನು ಪ್ರಯೋಜನ ? ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ ನಾನು ಚಿದಚಿದಾತ್ಮಕವಾದ ಈ ಸಮಸ್ತ ಜಗತ್ತನ್ನು ವಶಪಡಿಸಿಕೊಂಡು ನಿಯಮಿಸುತ್ತಾ (ಸಂಕಲ್ಪದಿಂದ) ನನ್ನ ಒಂದು ಅಂಶದಿಂದ ಇರುತ್ತಿದ್ದೇನೆ. (10-42)"

ಅರ್ಜುನ, "ಅಸಾಧಾರಣವಾದ ಕಲ್ಯಾಣಗುಣಗಳಿಂದಲೂ ಯಾವಾಗಲೂ ಏಕರೂಪಿಯಾಗಿರುವ ನನ್ನನ್ನು ಮೂರು ಬಗೆಯ (ಸಾತ್ವಿಕ, ರಾಜಸ, ತಾಮಸ) ಗುಣಗಳಿಂದ ಪ್ರಾಚುರ್ಯವನ್ನುಳ್ಳ ವಸ್ತುಗಳಿಂದ ಮೋಹಗೊಂಡು, ಈ ಸಮಸ್ತ ಜಗತ್ತು ತಿಳಿದುಕೊಳ್ಳದೆ ಇದೆ (7-13). ಮನುಷ್ಯತ್ವ, ಮೊದಲಾದ ರೂಪಗಳ ಯೋಗದಿಂದ ಕೂಡಿದವನಾದ ನಾನು ನಾಹಂ ಪ್ರಕಾಶಃ ಸರ್ವಸ್ಯ ಸರ್ವರಿಗೂ ಪ್ರಕಾಶನಲ್ಲ. ಜನ್ಮರಹಿತನಾದ ನಿರ್ವಿಕಾರನಾದ ನನ್ನನ್ನು ಅಜ್ಞರಾದ ಲೋಕದ ಜನರು ಅರಿಯಲಿಲ್ಲ (7-25) ಆದರೆ ನಾನಾದರೋ ಕಳೆದು ಹೋದ, ಈಗಿರುವ, ಮುಂದೆ ಬರುವ ಸಮಸ್ತ ಪ್ರಾಣಿಜಾತಿಗಳನ್ನು ತಿಳಿದಿರುವೆನು. ಆದರೆ ಮಾಂ ತ್ತು, ವೇದ ನ ಕಶ್ಚನ ನನನ್ನು ಯಾರು ಅರಿಯರು (7-26) ಸರ್ವಭೂತನಿಯಾಮಿಕನೂ, ಸರ್ವಜ್ಞನು, ಸತ್ಯಸಂಕಲ್ಪನೂ ಆದ ನಾನು (ಪರಮ ಕಾರುಣಿಕನಾದುದರಿಂದ ಚೇತನರ ಉದ್ಧಾರಕ್ಕಾಗಿ) ಮನುಷ್ಯ ಶರೀರವನ್ನು ಆಶ್ರಯಿಸಿದ ಕಾರಣ ನನ್ನನ್ನು ತಿರಸ್ಕರಿಸುತ್ತಾರೆ. (9-11). ಸರ್ವೇಶ್ವರನೂ ವಾಕ್ಕಿನಿಂದಲೂ, ಮನಸ್ಸಿನಿಂದಲೂ ತಿಳಿಯಲು ಸಾಧ್ಯವಿಲ್ಲದ ಸ್ವರೂಪ ಮತ್ತು ಸ್ವಭಾವವನ್ನುಳ್ಳವನು ಆದ ನನ್ನನ್ನು ಕರ್ಮದ ಕಾರಣ ಜನ್ಮ ವಿಶೇಷವನ್ನು ಹೊಂದಿ ವ್ಯಕ್ತನಾಗಿರುವೆನೆಂದು ತಿಳಿಯುತ್ತಾರೆ (7-24). ಇಂತಹ ಅದ್ಭುತವಾದ ನನ್ನ ವಿಭೂತಿಯೋಗವನು ಯಾರು ತಿಳಿಯುವವನೂ ಸಃ ಅವಿಕಂಪೇನ ಯೋಗೇನ ಯುಜ್ಯತೇ ಅವನು ಅಚಲವಾದ ಭಕ್ತಿಯೋಗದಲ್ಲಿ ಅನ್ವಯ ಹೊಂದುತ್ತಾನೆ (10-7).

ಅರ್ಜುನನು ಶ್ರೀಕೃಷ್ಣನನ್ನು ಕುರಿತು "ಭಗವಂತನೇ (ಇಂತಹ ಅದ್ಭುತ ವಿಭೂತಿಯನ್ನುಳ್ಳ) ನೀನು ಹೇಗೆ ಧ್ಯಾನಿಸಲ್ಪಡತಕ್ಕವನಾಗಿದ್ದೆಯೆ? ಹೇಗೆ ನಿನ್ನನ್ನು ಸಾಕ್ಷಾತ್ಕರಿಸಿಕೊಳ್ಳುವುದು? ಎಂದು (10-17) ಎಂದು ಹೇಳಿದಾಗ ಶ್ರೀಕೃಷ್ಣನು (ನನ್ನನ್ನು ಹೊಂದುವ) ಯಾವುದು ಪರಮ ಪ್ರಾಪ್ಯವೋ ಅದನ್ನು ಪಡೆಯುವ ಪ್ರಕಾರವನ್ನು ಸಮಾಸೇನೈವ ಮೇ ನಿಬೋಧ ಸಂಗ್ರಹವಾಗಿ ನನ್ನಿಂದ ತಿಳಿ (18-50)" ಎಂದು ತನ್ನನ್ನು ಹೊಂದುವ ಮಾರ್ಗವನ್ನು ತಿಳಿಸುತ್ತಾನೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನನ್ನನ್ನು ಹೊಂದುವ ಮಾರ್ಗ: ಅರ್ಜುನ " ಇಂದ್ರಾದಿದೇವತೆಗಳನ್ನುದ್ದೇಶಿಸಿ ಯಾಗಗಳನ್ನು ಮಾಡುವರು ಆಯಾ ದೇವತೆಗಳನ್ನು ಸೇರುತ್ತಾರೆ. ಆದರೆ ಯಾರು 'ದೇವಪಿತೃಭೂತಶರೀರನಾದ ಪರಮಾತ್ಮನಾದ ಭಗವಂತನನ್ನು ಆರಾಧಿಸುತ್ತೇವೆ' ಎಂದು ಆರಾಧಿಸುತ್ತಾರೋ ಅವರು ನನ್ನನ್ನೇ ಸೇರುತ್ತಾರೆ, ಮತ್ತೆ ಹಿಂದಿರುಗುವುದಿಲ್ಲ. (9-25). ಇಂದ್ರನೇ ಮೊದಲಾದವರಿಗೆ ಅಂತರಾತ್ಮನಾಗಿ ನೆಲಸಿರುವ ಎಲ್ಲಾ ಪ್ರಾಣಿಗಳ ಉತ್ಪತ್ತಿ ಮೊದಲಾದ ಪ್ರವೃತ್ತಿಯು ವ್ಯಾಪ್ತವಾಗಿರುವ ನನ್ನನ್ನು ತನಗೆ ಹಿತವಾದ ಕರ್ಮದಿಂದ ಪೂಜಿಸಿ ಸಿಧ್ಧಿ ವಿಂದತಿ ಮಾನವಃ ಮನುಷ್ಯರು ಸಿದ್ಧಿಯನ್ನು ಹೊಂದುತ್ತಾರೆ. ಅಂದರೆ ನನ್ನನ್ನು ಸೇರುತ್ತಾರೆ. (18-46). ಅನ್ಯದೇವತೆಗಳನ್ನು ಉಪಾಸನೆಮಾಡಿ ಪಡೆದ ಫಲವು ಶಾಶ್ವತವಲ್ಲ. ಅನ್ಯದೇವತಾಭಕ್ತರು ಆಯಾ ದೇವತೆಗಳನ್ನೇ ಸೇರುತ್ತಾರೆ. ಆದರೆ ಮತ್ತ ಭಕಃ ನನ್ನ ಭಕ್ತನಾದರೂ ಯಾನ್ತಿ ಮಾಮಪಿ ನನ್ನನ್ನೇ ಸೇರುತ್ತಾನೆ. (7-23). ಉಪಾಸನೆಯನ್ನು ಆರಂಭಿಸಿದ ಕಾಲದಿಂದ ಎಲ್ಲಾ ಕಾಲದಲ್ಲೂ ನನ್ನನ್ನು ಬಿಟ್ಟು ಬೇರೆ ವಿಷಯದಲ್ಲಿ ಮನಸ್ಸಿಡದೆ ಯಾವ ಭಕ್ತನು ನನ್ನನ್ನೇ ಧ್ಯಾನಿಸುತ್ತಾನೋ ಅಂತಹ ನಿತ್ಯಯೋಗವನ್ನು ಅಪೇಕ್ಷಿಸುವ ಯೋಗಿಗೆ ನಾನು ಪ್ರಾಪ್ಯನು ನಿತ್ಯಯುಕ್ತಸ್ಯ ಯೋಗಿನಃ ಅಹಂ ಸುಲಭಃ (8-14). ಹಾಗೇ ನನ್ನ ನಿತ್ಯಯೋಗವನ್ನು ಬಯಸುವವರಿಗೆ ನನ್ನನ್ನೇ ಉಪಾಸನೆ ಮಾಡುವ ಅವರಿಗೆ ಯಾವ ಬುದ್ಧಿಯೋಗದಿಂದ ನನ್ನನ್ನು ಹೊಂದುವರೋ ಅಂತಹ ಬುದ್ಧಿಯೋಗವನ್ನು ಪ್ರೀತಿ ಪೂರ್ವಕವಾಗಿ (ನಾನೇ) ಕೂಡುವೆನು ಯೇನ ಮಾಂ ಉಪಯಾನ್ತಿ ತೇ ಬುದ್ಧಿಯೋಗಂ ಪ್ರೀತಿಪೂರ್ವಕಮ್ ದದಾಮಿ (10-10)"

ಹಾಗೂ "ಎಲ್ಲಾ ಅಜ್ಞಾ ಅನುಜ್ಞ ಕೈಂಕರ್ಯಗಳು ಸೇರಿದಂತೆ ನಿತ್ಯ ನೈಮಿತ್ತಿಕ ಕರ್ಮಗಳನ್ನು ನನ್ನಲ್ಲಿ ಅರ್ಪಿಸಿ ಮತ್ಪರಾ ನನ್ನೊಬ್ಬನನ್ನೇ ಪ್ರಾಪ್ಯವನ್ನಾಗಿ ಹೊಂದಿರುವರಾಗಿ ಬೇರೆ ಯಾವ ಪ್ರಯೋಜನವನ್ನು ಹೊಂದಿರದ ಭಕ್ತಿಯೋಗದಿಂದ ನನ್ನನ್ನು ಧ್ಯಾನಿಸುವವರಾಗಿ ಉಪಾಸಾನೆ ಮಾಡುತ್ತಾರೋ, ಅಂತಹ ಭಕ್ತರನ್ನು ಅಹಂ ಮೃತ್ಯು ಸಂಸಾರಸಾಗರಾತ್ ನಚಿರಾತ್ಪಾರ್ಥ ಸಮ್ಭವಾಮಿ । ಈ ಸಂಸಾರ ಸಾಗರದಿಂದ ನಾನು ಶೀಘ್ರವಾಗಿ ಉದ್ಧರಿಸುತ್ತೇನೆ. (12-6,7) ಆದ್ದರಿಂದ ಮಯ್ಯೇವ ಮನ ಆಧತ್ಸ್ವ ನನ್ನಲ್ಲಿಯೇ ನಿನ್ನ ಮನಸ್ಸಿಡುವನಾಗು. ಬುದ್ಧಿಂ ನಿವೇಶಯ ಬುದ್ಧಿಯನ್ನು ನನ್ನಲ್ಲಿಯೇ ಇಡು. ನಂತರ ನನ್ನಲ್ಲಿಯೇ ವಾಸ ಮಾಡುವೆ ಇದಕ್ಕೆ ಸಂಶಯವಿಲ್ಲ (12.8) ಆದರೆ ಚಞ್ಚಲಂ ಹಿ ಮನಃ (6-34) ಎಂದು ಹೇಳಿದಂತೆ ಮನಸ್ಸು ಚಂಚಲವಾದದ್ದು. ಜಯಿಸಲು ಕಷ್ಟಕರವಾದದ್ದು. ಆದರೆ ಮನಸ್ಸನ್ನು ಜಯಿಸದೆ ಆತ್ಮಸಾಕ್ಷಾತ್ಕಾರವು ಬಹಳ ಕಷ್ಟಕರ ಎಂಬುದು ಮೇ ಮತಿ ನನ್ನ ಮತವು (6-36). ಮನಸ್ಸನ್ನು ಯಾವ ಚೇತನನು ಜಯಿಸಿರುವನೋ ಅವನಿಗೆ ಅದು ಬಂಧುವಾಗಿ ಇರುತ್ತದೆ. (6-6).

ಒಂದು ವೇಳೆ ನೀನು ಮನಸ್ಸನ್ನು (ಜಯಿಸಿ) ಸ್ಥಿರವಾಗಿ ನನ್ನಲ್ಲಿ ಇಡಲು ಶಕ್ತನಾಗದಿದ್ದಲ್ಲಿ, ಅಭ್ಯಾಸ ಯೋಗೇನ ಆಪ್ತುಂ, ಇಚ್ಛ ಪುನಃ ಪುನಃ ಸ್ಮರಿಸುವ ವಿಧಾನದಿಂದ ನನ್ನನ್ನು ಹೊಂದಲು ಇಚ್ಛಿಸು. (12-9) ಈ ಅಭ್ಯಾಸಯೋಗವು ಕಷ್ಟಕರವಾದಲ್ಲಿ ಮತ್ಕರ್ಮ ಪರಮೊ ಭವ ನನ್ನ ಪ್ರೀತಿಗಾಗಿ ಮಾಡುವ (ದೈವ) ಕಾರ್ಯಾಗಳಲ್ಲಿ ನಿರತನಾಗು. ನನಗಾಗಿ ಕರ್ಮಗಳನ್ನು ಮಾಡುತ್ತಿದ್ದರು, ಸಿದ್ಧಿಯನ್ನು ಹೊಂದಿ (ನನ್ನನ್ನು) ಸೇರುತ್ತೀಯೆ. (12-10) ಹೀಗೆ ಕರ್ಮವನ್ನು ಮಾಡಲು ಅಶಕ್ಯನಾದಲ್ಲಿ ಸರ್ವ ಕರ್ಮ ಫಲತ್ಯಾಗಂ ಕ್ರುರು ಎಲ್ಲಾ ಕರ್ಮಗಳ ಫಲತ್ಯಾಗವನ್ನು ಮಾಡು (12-11) ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್, ಯತ್ತಪಸ್ಯಸಿ । ಯಾವುದನ್ನು ಮಾಡುತ್ತಿಯೋ, ಯಾವುದನ್ನು ಭುಜಿಸುತ್ತಿಯೋ, ಯಾವುದನ್ನು ಹೋಮ ಮಾಡುತ್ತಿಯೋ, ಯಾವುದನ್ನು ದಾನ ಮಾಡುತ್ತಿಯೋ, ಯಾವ ತಪಸ್ಸನ್ನು ಮಾಡುತ್ತಿಯೋ, ಅವೆಲ್ಲವನ್ನೂ ನನಗೆ ಸಮರ್ಪಣೆ ಮಾಡು (9-27). ಆಗ ನೀನು ಎಲ್ಲ ಕರ್ಮ ಬಂಧನದಿಂದ ಬಿಡಲ್ಪಟ್ಟವನಾಗಿ ಮಾಮುಪೈಷ್ಯಸಿ ನನ್ನನ್ನೇ ಹೊಂದುತ್ತೀಯೆ (9-28). ಅಂದರೆ ಯಾವಾಗಲೂ ಮಾಡಬೇಕಾದ ಕರ್ಮಗಳನ್ನು ಮಾಡು, ಆದರೆ ಕರ್ಮ ಮತ್ತು ಫಲದಲ್ಲಿ ಸಂಗವಿಲ್ಲದೆ ಆಚರಿಸು (3-19) ಯಜ್ಞ, ದಾನ, ತಪಸ್ಸು ಮೊದಲಾದ ವೈದಿಕ ಕರ್ಮಗಳನ್ನು ಅವಶ್ಯವಾಗಿ ಮಾಡಲ್ಪಡತಕ್ಕದು (18-5). ಆದರೆ ನನ್ನ ಆರಾಧನೆಯ ರೂಪವಾದ ಈ ಕರ್ಮಗಳನ್ನು ಫಲ ಮತ್ತು ಸಂಬಂಧವನ್ನು ತ್ಯಾಗಮಾಡಿ ಮಾಡತಕ್ಕದ್ದು. ಇದು (ನನ್ನನ್ನು ಪಡೆಯಲು) ನನ್ನ ಉತ್ತಮವಾದ ಅಭಿಪ್ರಾಯ (18-6) ಯಾವ ಮನುಷ್ಯನು ಕರ್ಮವನ್ನು ಮಾಡುತ್ತಿರುವಾಗಲೇ ಆತ್ಮಯಾಥಾತ್ಮಜ್ಞಾನವನ್ನು ನೋಡುವನೋ, ಆತ್ಮಜ್ಞಾನದಲ್ಲಿದ್ದುಕೊಂಡಾಗಲೇ ಕರ್ಮವನ್ನು ಮಾಡುತ್ತಾನೆಯೋ, ಅವನು ಮನುಷ್ಯರಲ್ಲಿ ಬುದ್ಧಿವಂತನು ಸ ಯುಕ್ತಃ ಅವನು ಮೋಕ್ಷಕ್ಕೆ ಅರ್ಹನು (4-18) ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ ರೂಪವಾದ ಎಲ್ಲಾ ಮೋಕ್ಷಸಾಧನೆಗಳನ್ನು ಅತ್ಯಂತ ಪ್ರೀತಿಪೂರ್ವಕವಾಗಿ ಮಾಡಿ ಹಾಗೂ ಅವುಗಳಲ್ಲಿ ಫಲಸಂಗ ಕೃತ್ಯಾಧಿಗಳನ್ನು ತ್ಯಾಗಮಾಡಿ ನನ್ನೊಬ್ಬನನ್ನೇ ಕರ್ತೃವೆಂದು, ಆರಾಧನೆಗೆ ಅರ್ಹನೆಂದು, ಪ್ರಾಪ್ಯನೆಂದು, ಉಪಾಯನೆಂದು ಅನುಸಂಧಾನ ಮಾಡಲು, ನಾನು ನನ್ನ ಪ್ರಾಪ್ತಿಗೆ ವಿರೋಧವಾದ ಎಲ್ಲಾ ಪಾಪಗಳಿಂದಲೂ ಬಿಡಿಸಿ ಮೋಕ್ಷವನ್ನು ಕೊಡುತ್ತೇನೆ. ಇದಕ್ಕಾಗಿ ಶೋಕಿಸಬೇಡ (18-66). ನನ್ನ ಪ್ರೀತಿಯ ಭಕ್ತನಾಗಿ, ನನ್ನನ್ನು ಧ್ಯಾನಿಸಿ, ನನ್ನನ್ನು ಪೂಜಿಸಿ, ನನ್ನನ್ನು ನಮಸ್ಕರಿಸಿದಾಗ ಮಾಮೇವೈಷ್ಯಸಿ ನೀನು ನನ್ನನ್ನು ಹೊಂದುತ್ತಿಯ. ಸತ್ಯಂ ತೇ ಪ್ರತಿಜಾನೇ ಪ್ರಿಯೋsಸಿ ಮೇ ಇದನ್ನು (ನಾನು) ಪ್ರತಿಜ್ಞೆ ಮಾಡಿ ಹೇಳುತ್ತೇನೆ (18-65).

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

(ಹೀಗೆ) ಯಾರು ನನ್ನ ಚಿಂತನೆಯನ್ನೇ ಮುಖ್ಯ ಪ್ರಯೋಜನವಾಗಿ ಉಳ್ಳವರೋ, ಯಾರು ನನ್ನನ್ನು ಚಿಂತಿಸುತ್ತಾ ಉಪಾಸನೇ ಮಾಡುವರೋ, (ನನ್ನ) ನಿತ್ಯಯೋಗವನ್ನು ಬಯಸುವ ಅಂತಹ ಭಕ್ತರಿಗೆ ನನ್ನ ಪ್ರಾಪ್ತಿರೂಪವಾದ ಯೋಗವನ್ನು, ಪುನರಾವೃತ್ತಿಯಿಲ್ಲದ ಕ್ಷೇಮವನ್ನು ನಾನು ವಹಿಸುತ್ತೇನೆ. (9-22) ನನ್ನನ್ನು ಯಾರು ಜನ್ಮರಹಿತನೆಂದೂ, ಸರ್ವಲೋಕಮಹೇಶ್ವರನೆಂದು, ಸರ್ವಲೋಕಗಳಿಗೆ ಆಧಾರವೆಂದೂ, ಮನುಷ್ಯರಲ್ಲಿ ಮೋಹವಿಲ್ಲದವನಾಗಿ ತಿಳಿಯುವನೋ ಅವನು सर्वपापै प्रमुच्यते ಸರ್ವಪಾಪಗಳಿಂದ ಬಿಡಲ್ಪಟ್ಟು ನನ್ನನ್ನು ಹೊಂದುತ್ತಾನೆ (10-3) ಯಾರು ನನ್ನ ಸರ್ವೇಶ್ವರತ್ವ, ಸರ್ವ ಸಂಕಲ್ಪತ್ವ, ಮುಂತಾದ ಕಲ್ಯಾಣಗುಣಗಳಿಂದ ಕೂಡಿದವನೆಂದೂ, ಕರ್ಮದಿಂದ ಜನ್ಮ ಹೊಂದಿಲ್ಲವೆಂದೂ, ನನ್ನ ಜನ್ಮವು ಅಪ್ರಾಕೃತವಾದುದೆಂದು ನನಗೆ ಅಸಾಧಾರಣವಾದ ಜನ್ಮ ಮತ್ತು ಚೇಷ್ಟಿತಗಳನ್ನು ಯಾಥಾರ್ಥವಾಗಿ ತಿಳಿಯುತ್ತಾನೆಯೋ, ಅವನು ಈಗ ಇರುವ ದೇಹವನ್ನು ಪರಿತ್ಯಾಗ ಮಾಡಿದ ಮೇಲೆ ಪುನಃ ಜನ್ಮ ಹೊಂದುವುದಿಲ್ಲ. ನನ್ನನ್ನೇ ಸೇರುತ್ತಾನೆ." (4-9)

ನಾನು ಕೇವಲ ವೇದಾಧ್ಯಯನಗಳಿಂದಲೂ, ತಪಸ್ಸಿನಿಂದಲೂ, ದಾನದಿಂದಲೂ, ಯಾಗಾದಿಗಳಿಂದಲೂ ಸಾಕ್ಷಾತ್ಕರಿಸಲ್ಪಡಲು ಶಕ್ತವಿಲ್ಲ. (11-53, 54) ಅನನ್ಯವಾದ ಭಕ್ತಿಯಿಂದಲೇ ನಾನು ಶಾಸ್ತ್ರಗಳಿಂದ ತತ್ತ್ವತ ಪ್ರವೇಶಿಸಲ್ಪಡಲು ಶಕ್ತನು. ಯಾರು ನನ್ನಲ್ಲಿ ಭಕ್ತಿಯನ್ನು ಹೊಂದಿ ಎಲ್ಲಾ ಕರ್ಮಗಳನ್ನು ನನ್ನ ಆರಾಧನೆಯಿಂದ ಮಾಡುವನೋ, ಇತರ ವಿಷಯದಲ್ಲಿ ಆಸಕ್ತಿಯನ್ನೆ ಬಿಟ್ಟಿರಿವನೋ, ಸಮಸ್ತಭೂತಗಳು ಪರಮ ಪುರುಷನಾದ (ನನಗೆ) ಅಧಿನವೆಂದು ಅನುಸಂಧಾನ ಮಾಡುವನೋ, ಅಂತಹ ಭಕ್ತನು मेत्ति ನನ್ನನ್ನು ಹೊಂದುವನು (11-55). ನನ್ನನ್ನು ಆಶ್ರಯಿಸಿದ ಯಾರೇ ಆಗಲಿ, ಯಾವ ಪಾಪವನ್ನಾದರೂ ಹೊಂದಿರಲಿ (ಈ ರೀತಿಯಾಗಿ) ನನ್ನನ್ನು ಆಶ್ರಯಿಸಿದ್ದಲ್ಲಿ ಉತ್ತಮಗತಿಯನ್ನು ಹೊಂದುತ್ತಾರೆ (9-32). ಈ ಭಕ್ತಿಪಥದಲ್ಲಿ ಸಹಸ್ರರು ಮನುಷ್ಯರಲ್ಲಿ ಒಬ್ಬನು ಸಿದ್ದಿಗಾಗಿ ಪ್ರಯತ್ನ ಮಾಡುತ್ತಾನೆ. ಸಿದ್ದಿ ಪರ್ಯಂತವಾಗಿ ಪ್ರಯತ್ನಿಸುವ ಸಹಸ್ರಾರು ಮಂದಿಗಳಲ್ಲಿ ಎಲ್ಲೋ ಒಬ್ಬನು ನನ್ನನ್ನು ತಿಳಿದು ಸಿದ್ಧಿಕೋಸ್ಕರ ಪ್ರಯತ್ನ ಮಾಡುತ್ತಾನೆ. ನನ್ನನ್ನು ತಿಳಿದ ಸಹಸ್ರಮಂದಿಗಳಲ್ಲಿ ಯಾವನೋ ಒಬ್ಬನು ತತ್ತ್ವತಃ ಎಂದರೆ ನಾನಿರುವಂತೆ ತಿಳಿಯುತ್ತಾನೆ. (7-3) ಅಂತಹ ಮಹಾತ್ಮನು ಬಹಳ ದುರ್ಲಭನು (7-19). ಯಾವ ಭಕ್ತರು मां भक्त्या भजन्ति ನನ್ನನ್ನು ಪ್ರೀತಿಪೂರ್ವಕವಾಗಿ ಭಜಿಸುತ್ತಾರೋ ಅವರು ನನ್ನಲ್ಲೇ ಇರುತ್ತಾರೆ ಹಾಗೂ अहमपि तेषु च ನಾನು ಅವರಲ್ಲಿರುವೆನು (9-29). ಅರ್ಜುನ ಅಂತಹ ಭಕ್ತರ ಲಕ್ಷಣವನ್ನು ಹೇಳುತ್ತೇನೆ ಕೇಳು.

ಭಕ್ತರ ಲಕ್ಷಣ: ಅರ್ಜುನ "ನನ್ನನ್ನು ಭಜಿಸುವುದೇ ಶ್ರೇಷ್ಠವೆಂದು ಅರಿತ ಭಕ್ತನು ವೈಷ್ಣವಾಗ್ರೇಸರನೇ ಎಂದು ಆದರಿಸಲ್ಪಡುತ್ತಾನೆ (9-30). ನಾನು ಚಿದಚಿದಾತ್ಮಕವಾದ ಸಮಸ್ತ ಪ್ರಪಂಚದ ಉತ್ಪತ್ತಿಗೆ ಕಾರಣನು. ಎಲ್ಲವೂ ನನ್ನಿಂದಲೇ ಪ್ರವರ್ತಿಸುವುದು ಎಂದು ಅರಿತ ಭಕ್ತನು ನನ್ನಲ್ಲಿ ಪ್ರೇಮ ಭಾವ ಹೊಂದಿ ನನ್ನನ್ನು ಭಜಿಸುತ್ತಾನೆ (10-8) ನನ್ನ ಭಕ್ತರುಗಳು ನನ್ನಲ್ಲೇ ಸಂಪೂರ್ಣ ಮನಸ್ಸನ್ನು ಅರ್ಪಿಸಿ, ನನ್ನಲ್ಲೇ ತಮ್ಮ ಪ್ರಾಣವನ್ನು ಧಾರಣೆ ಮಾಡಿ ನನ್ನ ಕಲ್ಯಾಣಗುಣಗಳನ್ನು ಒಬ್ಬರಿಗೊಬ್ಬರು ಭೋದಿಸುತ್ತಾ ನನ್ನ ರಮಣೀಯ ಚೇಷ್ಟಿತಗಳನ್ನು ವರ್ಣಿಸುತ್ತಾ तुष्यन्ति च रमन्ति च ಸಂತೋಷಿಸುತ್ತಾರೆ. ಕೇಳುವವರು ಕಥಾಶ್ರವಣದಿಂದ ಅತ್ಯಂತ ಆನಂದವನ್ನು ಹೊಂದುತ್ತಾರೆ. (10-9) ಯಾವ ಭಕ್ತನು ನನ್ನನ್ನು ಪುರುಷೋತ್ತಮನೆಂದು ಅರಿತು, ಭ್ರಾಂತಿಯಿಲ್ಲದವನಾಗಿ ತಿಳಿದು, ನನ್ನನ್ನು ಪಡೆಯಲು ಸರ್ವವಿಧ ಸಾಧನವಾದ ಎಲ್ಲಾ ಉಪಾಯವನ್ನು ತಿಳಿದಿರುತ್ತಾನೆ (15-19) ನನಗಿಂತ ಬೇರೆಯಾದ ಯಾವುದರ ಬಗೆಯು ಶೋಕಿಸುವುದಿಲ್ಲ ಮತ್ತೇ ಯಾವುದನ್ನು ಆಶಿಸುವುದಿಲ್ಲ. ನನಗಿಂತ ಬೇರೆಯಾದ ಎಲ್ಲವುಗಳನ್ನು ತೃಣದಂತೆ ಕಾಣುತ್ತಾ मद्भक्तिं लभते पराम् । ನನ್ನಲ್ಲಿ ಪರಭಕ್ತಿಯನ್ನು ಹೊಂದುತ್ತಾನೆ (18-54). ಹೀಗೆ ಯಾವಾಗಲೂ ನನ್ನನ್ನು ಸ್ತುತಿಸುವವರಾಗಿ, ದೈವ ಕಾರ್ಯಗಳನ್ನು ಮಾಡುವುದರಲ್ಲಿ ದೃಡಸಂಕಲ್ಪ-ಹೊಂದಿ ನನ್ನೊಂದಿಗೆ ನಿತ್ಯಯೋಗವನ್ನು ಅಪೇಕ್ಷಿಸುತ್ತಾ ಪ್ರೀತಿಯಿಂದ ಉಪಾಸನೆ ಮಾಡುತ್ತಾರೆ (9-14). ನನ್ನ ಭಕ್ತನು ನನಗೆ ಅತ್ಯಂತ ಪ್ರಿಯನಾಗಿರುವುದರಿಂದ ಭಕ್ತಿಯಿಂದ ಅವನು ಸಮರ್ಪಿಸಿದ ತುಳಸಿದಳವನ್ನಾಗಾಲಿ, ಹೂವನ್ನಾಗಲಿ, ಹಣ್ಣನಾಗಲಿ, ಜಲವನ್ನಾಗಲಿ ಜಗದೀಶ್ವರನಾದ ನಾನು ಬಹಳ ಪ್ರೀತಿಯಿಂದ ಸ್ವೀಕರಿಸುತ್ತೇನೆ. (9-26). ಈ ರೀತಿಯಾಗಿ ನನ್ನನ್ನೇ ಪರಮಭೋಗ್ಯನೆಂದು ನಿಶ್ಚಯಿಸಿಕೊಂಡವನು ಬೇಗನೇ ಪ್ರತಿಭಂದಕವಿಲ್ಲದೆ ನನ್ನನ್ನು ಭಜಿಸುವನಾಗುತ್ತಾನೆ. ನನ್ನ ಪ್ರಾಪ್ತಿಗೆ ವಿರೋಧಿಯಾದ ಆಚಾರದ ನಿವೃತ್ತಿಯನ್ನು ಹೊಂದಿ ಪರಿಪೂರ್ಣವಾದ ಭಕ್ತಿಯನ್ನು ಉಳ್ಳವನಾಗುತ್ತಾನೆ. न मे भक्तः प्रणश्यति ನನ್ನ ಭಕ್ತನು ಎಂದೂ ನಾಶವಾಗುವುದಿಲ್ಲ (9-31). ಅರ್ಜುನ ಯಾರು ನನ್ನ ವಿಷಯದಲ್ಲಿ ಪರಮಶ್ರದ್ದೆಯಿಂದ ಕೂಡಿದವರಾಗಿ ತಮ್ಮ ಮನಸ್ಸನ್ನು ಇಟ್ಟು मां उपासते ನನ್ನ ಉಪಾಸನೆ ಮಾಡಿದರು, ಅವರು ಶೀಘ್ರವಾಗಿ ನನ್ನನ್ನು ಸೇರುವವರಾಗಿ ನನಗೆ ಪ್ರಿಯರಾಗಿರುತ್ತಾರೆ. (12-2), ಎಂದು ತನಗೆ ಪ್ರಿಯರಾದವರ ಲಕ್ಷಣವನ್ನು ಹೀಗೆ ತಿಳಿಸುತ್ತಾರೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನನಗೆ ಪ್ರಿಯರು: ಸದಾಕಾಲದಲ್ಲೂ ನನ್ನನ್ನೇ ಧ್ಯಾನಿಸುವವನು, ನನ್ನಲ್ಲೇ ಸಂಪೂರ್ಣ ಭಕ್ತಿಯುಳ್ಳವನು ಆದ ಜ್ಞಾನಿಯು ಸರ್ವಶ್ರೇಷ್ಠನೆನಿಸುತ್ತಾನೆ. ಅಂತಹ ಜ್ಞಾನಿಗೆ ನಾನು ಪ್ರಿಯನು ಹಾಗೆಯೆ ಆ ಜ್ಞಾನಿಯು ನನಗೆ ಪ್ರಿಯನು. ಆ ಜ್ಞಾನಿಯು ಎಷ್ಟು ಪ್ರಿಯನೆಂದರೆ ಮಯಾ ಸರ್ವಜ್ಞೇನ ಸರ್ವಶಕ್ತಿನಾಪಿ ಅಭಿಧಾತ್ತುಂ ನ ಶಕ್ಯತೇ (7-17) ಸರ್ವಜ್ಞನೂ ಸರ್ವಶಕ್ತನೂ ಆದ ನನ್ನಿಂದಲೂ ಹೇಳಲು ಸಾಧ್ಯವಿಲ್ಲ. ಜ್ಞಾನಿ ತ್ವಾತ್ಮೈವ ಮೇ ಮತಮ್ (ಅಂತಹ) ಜ್ಞಾನಿಯು ನನ್ನ ಆತ್ಮವೆಂದೇ ನನ್ನ ಮತ. ಏಕೆಂದರೆ ಅವನು ನನ್ನನ್ನು ಳಿದು ತನಗೆ ಆತ್ಮಧಾರಣೆ ಅಸಂಭವವೆಂದು ತಿಳಿದು ಸುಜ್ಞಾನದಿಂದ ನನ್ನಲ್ಲೆ ಮನಸ್ಸಿಟ್ಟು ನನ್ನೊಬ್ಬನನ್ನೇ ಅತ್ಯುತ್ತಮವಾದ ಪ್ರಾಪ್ಯವೆಂದು ಆಶ್ರಯಿಸಿರುತ್ತಾನೆ (7-18). ಯಾವ ಭಕ್ತನು ಫಲಸಂಧಿಯಿಲ್ಲದೆ ಮಾಡಿದ ಕರ್ಮದಿಂದ ನನ್ನನ್ನು ಆರಾಧಿಸಿ ತನ್ನ ಮನಸ್ಸು ಬುದ್ಧಿಯನ್ನು ಅರ್ಪಿಸುವನೋ ಅವನು ನನಗೆ ಪ್ರಿಯನು. (12-14) ಯಾವ ಉಪಾಸಿಕನು ಲೋಕೋದ್ವೇಗಕರವಾದ ಕರ್ಮವನ್ನು ಮಾಡುವುದಿಲ್ಲವೋ, ಯಾವ ಲೋಕದ ದೆಸೆಯಿಂದ ಉದ್ವೇಗಗೊಳ್ಳುವುದಿಲ್ಲವೋ, ಹರ್ಷ, ಕೋಪ, ಭಯ ಮತ್ತು ಉದ್ವೇಗಗಳನ್ನು ತ್ಯಜಿಸಿರುವನೋ ಅವನು ನನಗೆ ಪ್ರಿಯನು (12-15) ಆತ್ಮದ ವಿಷಯದ ಹೊರತು ಬೇರೆ ವಿಷಯದಲ್ಲಿ ಅಪೇಕ್ಷೇ ಇಲ್ಲದವನು. ಸಾತ್ವಿಕವಾದ ಶಾಸ್ತ್ರ ವಿಹಿತ ಆಹಾರದಿಂದ ದೇಹವನ್ನು ಪೋಷಿಸುವನು, ಶಾಸ್ತ್ರವಿಹಿತ ಕರ್ಮಗಳನ್ನು ಮಾಡುತ್ತಿರುವನು (ಆಕ್ರಿಯೇ ಮಾಡುವಾಗ ತಪ್ಪಿಸುವುದಕ್ಕಾಗದ ದುಃಖಿಗಳಲ್ಲಿ ವ್ಯಥೆ ಇಲ್ಲದವನೂ) ಅಶಾಸ್ತ್ರಿಯವಾದ ಬೇರೆ ಸಮಸ್ತ ಕರ್ಮಗಳನ್ನು ಪ್ರಾರಂಭದಲ್ಲೇ ಪರಿತ್ಯಾಗ ಮಾಡವನು ನನಗೆ ಪ್ರಿಯನು (12-16) ದೈವ ಸಂಕಲ್ಪದಿಂದ ಪ್ರಾಪ್ತಿಯಾಗುವ ಪ್ರಿಯಾಪ್ರಿಯಗಳನ್ನು ಹರ್ಷವನ್ನಾಗಲಿ, ಶೋಕವನ್ನಾಗಲಿ ಹೊಂದಿದಾಗ ಎಲ್ಲಾ ಪುಣ್ಯ ಪಾಪದ ಫಲಗಳನ್ನು ಪರಿತ್ಯಾಗ ಮಾಡುವ ಭಕ್ತನು ನನಗೆ ಪ್ರಿಯನು (12-17) ಹಾಗೆಯೇ ಶತ್ರು ಮಿತ್ರರನ್ನು, ಮಾನ ಅಪಮಾನಗಳನ್ನು, ನಿಂದೆಸ್ತುತಿಯನ್ನು ಸಮಭಾವದಿಂದ ನೋಡುವನು, ಮನೆಯೇ ಮೊದಲಾದವುಗಳಲ್ಲಿ ಆಸಕ್ತಿ ಇಲ್ಲದವನಾಗಿ, ಆತ್ಮಜ್ಞಾನವನ್ನೂ ಅರಿತವನಾಗಿ ಇರುವ ಭಕ್ತನು ನನಗೆ ಪ್ರಿಯನು (12-18), ಸಂಪೂರ್ಣ ಆತ್ಮಜ್ಞಾನವನ್ನು ಹೊಂದಿ ತನ್ನ ಹಾಗೆ ಇತರ ಸುಖಿವನ್ನಾಗಲೀ, ದುಃಖಿವನ್ನಾಗಲೀ, ಸಮಂ ಯಃ ಪಶ್ಯತಿ ಯಾವನು ಆತ್ಮನಿಗೆ ಸಂಬಂಧಪಟ್ಟಿಲ್ಲವೆಂದು ಸಮನಾಗಿ ನೋಡುತ್ತಾನೋ ಸ ಯೋಗೀ ಪರಮೋ ಮತಃ ಆಯೋಗಿಯು ಸರ್ವೋತ್ಕೃಷ್ಟವೆಂದು ನನ್ನ ಅಭಿಪ್ರಾಯ. (6-32). ಯಾವ ಯೋಗಿಯು ನನ್ನ ಹೊಂದುವ ಪ್ರಯತ್ನದಲ್ಲಿ ತ್ವರೆವುಳ್ಳವನ್ನಾಗಿ ಮನಸ್ಸನ್ನು ನನ್ನಲ್ಲೇ ಇಟ್ಟು, ನನ್ನನ್ನು ಭಜಿಸುವನೋ ಸ ಶ್ರುಕ್ತಮೋ ಮೇ ಮತಃ ಅವನು ಯೋಗಿಗಳಲ್ಲಿ ಸರ್ವಾಧಿಕನೆಂದು ನನ್ನ ಅಭಿಪ್ರಾಯ (6-47) ಈ ರೀತಿಯಾಗಿ ಶ್ರದ್ಧೆಯಿಂದ ಕೂಡಿ ನನ್ನನ್ನು ಪರಮಪ್ರಾಪ್ಯನೆಂದು ಸದಾ ಉಪಾಸನೆ ಮಾಡುವ ಭಕ್ತನು ನನಗೆ ಅತೀವ ಪ್ರಿಯನು" (12-20) ಅರ್ಜುನ, "ಈ ರೀತಿಯಾಗಿ ಭಕ್ತಿಯಿಂದ ನನ್ನಲ್ಲಿ ಮನಸ್ಸಿಟ್ಟು ಉಪಾಸನೆ ಮಾಡಿದರೆ ಸಾಂಸಾರಿಕವಾದ ಎಲ್ಲಾ ಕಷ್ಟಗಳನ್ನು ನನ್ನ ಅನುಗ್ರಹದಿಂದ ದಾಟಬಹುದು. ಆದರೆ ನಾನೇ ಬಲ್ಲನೆಂಬ ಅಹಂಕಾರದಿಂದ ನಾನು ಹೇಳಿದ್ದನ್ನು ಕೇಳದೆ ಹೋದರೆ ಅಪಾರ ವಿನಷ್ಟಿ ಉಂಟಾಗುತ್ತದೆ." (18-58).

ನನ್ನನ್ನು ಪಡೆಯದೆ ಆಗುವ ವಿನಷ್ಟಿ : "ನನ್ನ ಉಪಾಸನೆಯಲ್ಲಿ ಶ್ರದ್ಧೆ ಇಲ್ಲದ ಜನರು ಮಾಂ ಅಪ್ರಾಪ್ಯಾ ಮೃತ್ಯುಸಂಸಾರ ವರ್ತ್ಮನಿ ನಿವರ್ತಂತೆ ನನ್ನನ್ನು ಹೊಂದದೆ ಮೃತ್ಯುರೂಪದ ಸಂಸಾರ ಮಾರ್ಗಕ್ಕೆ ಹಿಂತಿರುಗಿ ಅಧಿಕವಾಗಿ ಅಲ್ಲೇ ಇರುತ್ತಾರೆ. (9-3). ನನ್ನನ್ನು ದ್ವೇಷಿಸುವವರೂ, ಕ್ರೂರರೂ, ನೀಚಮನುಷ್ಯರೂ, ಅಶುಭಪ್ರವೃತ್ತಿಯರೂ, ಆದ ಅಸುರಸ್ವಭಾವದವರನ್ನು ಹುಟ್ಟು, ಮುಪ್ಪು, ಸಾವು ಎಂಬ ರೂಪದಲ್ಲಿ ಅಸುರ ಜನ್ಮಗಳಲ್ಲೆ ತಳ್ಳಿಬಿಡುವೆನು (16-19) ಯಃ ಶಾಸ್ತ್ರವಿಧಿಮುತ್ಸೃಜ್ಯ ಯಾರು ವೇದ ಎಂಬ ನನ್ನ ಆಜ್ಞೆಯನ್ನು ತ್ಯಜಿಸಿ ತನ್ನಿಷ್ಟಕ್ಕೆ ಅನುಗುಣವಾಗಿ ನಡೆಯುವನೋ ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ಅವನು ಆಮುಷ್ಮಕವಾದ ಸಿದ್ಧಿಯನ್ನು, ಐಹಿಕ ಸುಖಿವನ್ನು, ಹಾಗೂ ಉತ್ತಮಗತವಾದ ಮೋಕ್ಷವನ್ನು ಹೊಂದುವುದಿಲ್ಲ. (16-23). ನನ್ನಲ್ಲಿ ಮನಸ್ಸಿಡದವನಿಗೆ ಶುದ್ಧಾತ್ಮವಿಷಯಕವಾದ ಬುದ್ಧಿಯು ಲಭಿಸುವುದಿಲ್ಲ. ವಿಷಯಾಸಕ್ತಿಯ ಶಾಂತಿಯು ಸಿಗುವುದಿಲ್ಲ. ಅಶಾಂತಸ್ಯ ಕುತಃ ಸುಖಮ್ ವಿಷಯರಾಗ ಶಮನವಾಗದವನಿಗೆ ಸುಖವೆಲ್ಲಿಯದು? (2-66).

ಅರ್ಜುನ "ಚೇತನರನ್ನು ಉದ್ದರಿಸಬೇಕೆಂಬ ಕರುಣೆವುಳ್ಳ ನನ್ನ ಜನ್ಮಕ್ಕೆ ಕಾಲನಿಯವವಿಲ್ಲ. ಯಾವ ಸಂದರ್ಭದಲ್ಲಿ ಧರ್ಮಕ್ಕೆ ಕೊರತೆವುಂಟಾಗುತ್ತದೆಯೋ, ಮತ್ತು ಯಾವಾಗ ಅಧರ್ಮದ ಅಭಿವೃದ್ಧಿವುಂಟಾಗುತ್ತದೆಯೋ, (4-7) ಅಂತಹ ಸಮಯದಲ್ಲಿ ಸತ್ಪುರುಷರ ಸಂರಕ್ಷಣೆಗಾಗಿಯೂ, ದುಷ್ಟರನ್ನು ನಾಶಮಾಡುವುದಕ್ಕಾಗಿಯೇ ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೂ ನಾನು ಪ್ರತಿಯುಗದಲ್ಲೂ ಅವತರಿಸುತ್ತೇನೆ. (4-8).

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಃ

ಶ್ರೀಮತೇ ವೇದಾಂತರಾಮಾನುಜ ಮಹಾದೇಶಿಕಾಯ ನಮಃ

ಸದಾಚಾರ್ಯ ಮಹಿಮಾ

ಶ್ರೀಮಾನ್ ಉ|| ವೇ|| ಹೆಚ್. ಆರ್. ಶ್ರೀಧರಾಚಾರ್ಯ, ಬೆಂಗಳೂರು

"ಆಚಾರ್ಯಃ ಸದ್ಭಿಃ ಅಪ್ರತ್ಯುಪಕರಣಧಿಯಾ ದೇವವತ್ ಸ್ಯಾದುಪಾಸ್ಯಃ" ನ್ಯಾಸವಿಂಶತಿ - 2, "ಆಚಾರ್ಯಾದಿಹ ದೇವತಾಂ ಸಮಧಿತಾಂ ಅನ್ಯಾಂ ನಮನ್ಯಾಮಹೇ" "ಆಭಗವತ್ತಃ ಪ್ರಧಿತಾಂ ಅನಘಾಂ ಆಚಾರ್ಯ ಸನ್ತತಿಂ ವಂದೇ" (ಶ್ರೀಮದ್ರಹಸ್ಯತ್ರಯಸಾರ ಗುರುಪರಂಪರಾಸಾರಃ) "ಏತ್ತಿ ಮನತ್ತೆಳಿಲ್ ಜ್ಞಾನವಿಳಕ್ಕೈ ಇರುಳಥನೈತ್ತುಂ ಮಾತ್ತಿನವರ್ಕು ಒರು ಕೈಮ್ಮಾರು ಮಾಯನುಂ ಕಾಣಹಿಲ್ಲ್ಲ್ಲ" (ಆಚಾರ್ಯಕೃತ್ಯಾಧಿಕಾರ) ಇದೇ ಮೊದಲಾದ ಅನಂತಾನಂತ ಪ್ರಮಾಣಗಳೊಂದಿಗೆ ಸದಾಚಾರ್ಯಸಾರ್ವಭೌಮರು ದೇವ ದೇವೋತ್ತಮ, ದೇವತಾ ಸಾರ್ವಭೌಮ, ಶ್ರೀಮದಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ, ನಿಸ್ಸಮಾಭ್ಯಧಿಕ, ಸಮಾಧಿಕ ದರಿದ್ರ, ಒತ್ತಾರ್ ಮಿಕ್ಕಾರೈ ಇಲ್ಲೈಯಾಯ ಮಾಮಾರ್ಯ, ಎದಿರ್ ನಿಹಳ್ ಕಳಿವಿನುಂ ಇನನಿರ್ಲ, ಉಯರ್ವರ ಉಯರ್‌ನಲಂ ಉಡೈಯವರ್ಲ, ತಾನೇ ತನಕ್ಕು ಉವಮರ್ಲ, ನತತ್ಸಮಶ್ಚಾಭ್ಯಧಿಕಶ್ಚಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾಚ ಮೊದಲಾದ ಪರಶ್ರುತ ಪ್ರಮಾಣಗಳಿಂದ ಪರಮನೆಂದು ಸ್ತುತಿಸಲ್ಪಡುವ ಶ್ರಿಯಃಪತಿಗೆ ಸಮ ಅಥವಾ ಅಧಿಕರೆಂದು ಸರ್ವಜ್ಞರಾದ ಸ್ವಾಮಿ ನಿಗಮಾನ್ತ ಮಹಾದೇಶಿಕರು ಅನೇಕ ಕಡೆಗಳಲ್ಲಿ ಸಿದ್ಧಾಂತಿಸಿದ್ದಾರೆ. ಈ ಮಹಾಮಹಿಮರುಗಳ ಕೀರ್ತಿಯನ್ನು ಭಗವದ್ಗುಣಾನುಭವೈಕ ಪ್ರಯೋಜನರಾಗಿ ತದೇಕಧಾರಕರಾಗಿ ತದೇಕಪ್ರಿಯರಾಗಿರುವ ಅನೇಕ ಹಿರಿಯರ ಮುಖಾರವಿಂದದಿಂದ ಹೊರಬಂದ ದಿವ್ಯವಾಣಿಗಳೊಂದಿಗೆ ಯಥಾಮತಿ ಯಥಾಶಕ್ತಿ ವರ್ಣಿಸಲು ಪ್ರಯತ್ನಿಸುತ್ತೇನೆ.

ಶ್ರೀಮತ್ತಿರುಕ್ಕುಡಂದೈ ಆಂಡವರ್ಲ ಶ್ರೀ ವೇದಾಂತ ರಾಮಾನುಜ ಮಹಾದೇಶಿಕರ್ಲ ಸ್ವಾಮಿಗಳು ಶ್ರೀಮದ್ರಾಮಾಯಣ ಉಪನ್ಯಾಸದಲ್ಲಿ ಖರದೂಷಣವಧ ವೃತ್ತಾಂತವನ್ನು ವಿಸ್ತಾರವಾಗಿ ತಿಳಿಸಿ ಈ ಸುದ್ದಿ ತಿಳಿದೊಡನೆ ರಾವಣನಿಗೆ ಸಿಡಿಲು ಎರಗಿದಂತೆ ಆಗಿ ಇವೆಲ್ಲಕ್ಕೂ ಕಾರಣಳಾದ ಶೂರ್ಪಣಖಿಯ ಮೇಲೆ ಅಸಾಧ್ಯ ಕೋಪಗೊಂಡನಂತೆ. ಅವಳನ್ನು ನಿಗ್ರಹಿಸಲು ಮುಂದಾದಾಗ ಶೂರ್ಪಣಖಿ ತನ್ನ ಪ್ರಾಣ ಉಳಿಸಿಕೊಳ್ಳಲು ಅಣ್ಣನಲ್ಲಿ ವಿನಮ್ರತೆಯೊಂದಿಗೆ ವಿನಂತಿಸಿಕೊಂಡ ಮಾತುಗಳಿವು, ರಾವಣೋಲೋಕ ರಾವಣಃ ಎಂಬಂತೆ ಲೋಕದಲ್ಲಿ ಎಲ್ಲರನ್ನೂ ಭಯದಲ್ಲಿಟ್ಟು ಇಂದ್ರಾದಿಗಳೂ ಸಹ ಭೀಷಾಸ್ಮಾದ್ವಾತಃ ಪವತೇ ಮೊದಲಾದ ಉಪನಿಷದ್ವಾಕ್ಯದಲ್ಲಿ ತಿಳಿಸಿರುವಂತೆ ಭಗವಂತನಿಗೆ ಹೆದರಿ ಕೆಲಸ ಮಾಡುವಂತೆ ತಮ್ಮಲ್ಲಿಯೂ ಕೈ ಕಟ್ಟಿ ನಿಂತು ಆಜ್ಞಾಪಾಲಕ ಬದ್ಧರಾಗಿದ್ದಾರೆ. ಸಹೋದರನೇ ನಿನಗೂ ಶ್ರಿಯಃಪತಿಯಾದ ಶ್ರೀಮನ್ನಾರಾಯಣನಿಗೂ ಶ್ರಿಯಃಪತಿತ್ವ ಬಿಟ್ಟು ಹೆಚ್ಚು ಅಂತರವಿಲ್ಲ.

ಇಂದ್ರಾದಿ ಸಮಸ್ತ ದೇವತೆಗಳೆಲ್ಲರನ್ನೂ ನಿಯಮನ ಮಾಡುತ್ತಾ ಅವರುಗಳಿಂದ ಪ್ರಯೋಜನ ಪಡೆಯುತ್ತಾ ಇದ್ದೀಯೆ. ಸರ್ವೇಶ್ವರನು ಶ್ರಿಯಃಪತಿಯು "ಹ್ರೀಶ್ಚತೇ ಲಕ್ಷ್ಮೀಶ್ಚಪತ್ನ್ಯೌ" (ಪುರುಷಸೂಕ್ತ) ಶ್ರೀದೇವಿಗೂ ಭೂ ದೇವಿಗೂ ಪತಿಯಾದುದರಿಂದ ಸರ್ವಲೋಕಕ್ಕೂ ಪ್ರಭುವಾಗಿ ಬೆಳಗುತ್ತಿದ್ದಾನೆ ಎಂಬ ಶಾಸ್ತ್ರಾರ್ಥವನ್ನರಿತವಳಾಗಿ ಶ್ರೀದೇವಿಯ ಅವತಾರವಾದ ಶ್ರೀ ಸೀತಾದೇವಿಯನ್ನು ಅಪಹರಿಸಿಯಾದರೂ ತಂದು ತಮ್ಮೊಂದಿಗೆ ವಿವಾಹ ಮಾಡಿಸಿ ತಮ್ಮನ್ನು ಸರ್ವ ಲೋಕಾಧಿಪತಿಯನ್ನಾಗಿಸಬೇಕೆಂಬ ಸದುದ್ದೇಶದಿಂದ ಜನಸ್ಥಾನಕ್ಕೆ ಹೋಗಿದ್ದಾಗ ಲಕ್ಷ್ಮಣನು ಅದಕ್ಕೆ ವಿಘ್ನ ಉಂಟು ಮಾಡಿದನು ತಮಗೆ ಇಷ್ಟೊಂದು ಏಳಿಗೆಯನ್ನು ಬಯಸಿದ ದಾಸಿಯ ಮೇಲೆ ಕೋಪಗೊಳ್ಳುವುದು ಸರ್ವಥಾಯುಕ್ತವಲ್ಲವೆಂದು ಸಮಂಜಸ, ಕೋಪಶಮನಯುಕ್ತವಾದ ಮಾತುಗಳಿಂದ ಪ್ರಾಣ ಉಳಿಸಿಕೊಂಡಳು. ಬ್ರಹ್ಮದೇವನ ಪುತ್ರನಾದ ವಿಶ್ರವಸ್ಸಿನ ಮಗನಾದ ಜೀವಾತ್ಮನಾದ ರಾವಣನನ್ನು ಪರಮಾತ್ಮನನ್ನಾಗಿಸಲು ಜನಸ್ಥಾನಕ್ಕೆ ತೆರಳಿದ್ದೆ ಎಂದು ಕಾರಣ ಹೇಳಿದಳು. ಸಮಯಕ್ಕೆ ತಕ್ಕುದಾದ ಸಮಂಜಸ ಉತ್ತರ ನೀಡುವುದರಲ್ಲಿ ಸ್ತ್ರೀಯರು ಸಮರ್ಥರೆಂಬ ಚಟಾಕಿಯೊಂದಿಗೆ ಜೀವಾತ್ಮನನ್ನು ಪರಮಾತ್ಮನನ್ನಾಗಿಸಲು ಹೊರಟವರು ಶೂರ್ಪಣಖಿಯಂತೆ ಮೂಗು ಕಿವಿ ಕತ್ತರಿಸಲ್ಪಡುತ್ತಾರೆಂಬ ಚಟಾಕಿಯನ್ನೂ ಸಿಡಿಸಿದ್ದರು. ರಾವಣನು ಅತಿಶೂರರಾದ ಖರದೂಷಣಾದಿಗಳನ್ನು ಮೀಸಲಾತಿ ಪಡೆಯಾಗಿಟ್ಟುಕೊಂಡಿದ್ದನು. ಎಲ್ಲರೂ ಪರಿಪೂರ್ಣರಾಗಿ ನಾಶವಾದುದರಿಂದ ಕಡುಕೋಪದಿಂದ ಶೂರ್ಪಣಖಿಯನ್ನು ನಿಗ್ರಹಿಸಲು ಹೊರಟ ರಾವಣನನ್ನು ಸೀತಾಪಹರಣಕ್ಕೆ ಸಹಾಯ ಮಾಡಬೇಕೆಂದು ಮಾರೀಚನಲ್ಲಿಗೆ ಕಳುಹಿಸಿದ ಸಾಮರ್ಥ್ಯಯುಕ್ತ ವಚನಗಳು ಎಂದ ಮೇಲೆ ಸಾಮರ್ಥ್ಯಕ್ಕೇನು ಕೊರತೆ ? ಎಂದು ಪ್ರಶ್ನಿಸುತ್ತಿದ್ದರು. ಇಷ್ಟೆಲ್ಲಾ ವಿವರಿಸಿದ ನಂತರ ಸ್ವಾಮಿಗಳು ನಾನು ಪರಮಾತ್ಮನಾಗಬೇಕೆಂದು ನಮ್ಮ (ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಸೇರಿದ) ಆಚಾರ್ಯರುಗಳಾರೂ ಬಯಸಲಿಲ್ಲ. ಅವಾಪ್ತ ಸಮಸ್ತಕಾಮನೂ ಪರಿಪೂರ್ಣಕಾಮನೂ ಆದ ಸರ್ವೇಶ್ವರನು ಆಚಾರ್ಯ ಪದವಿಯನ್ನಪೇಕ್ಷಿಸಿ ಅರ್ಜುನನಿಗೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮೋಹವನ್ನುಂಟುಮಾಡಿ ಗೀತಾಶಾಸ್ತ್ರವನ್ನು ಲೋಕಕಲ್ಯಾಣಾರ್ಥನಾಗಿ ಪರಮ ಕರುಣೆಯಿಂದ ಕೊಟ್ಟನು. ಆಚಾರ್ಯ ಪದವಿಯನ್ನಾಸೆಪಟ್ಟು ನಿಸ್ಸಮಾಭ್ಯಧಿಕನಾದ ಭಗವಂತ ಅಧಿಕನೇ ? ಅಥವಾ ಆಚಾರ್ಯರಧಿಕರೇ ? ಎಂಬುದನ್ನು ನೀವೇ ತೀರ್ಮಾನಮಾಡಿ ಎಂದು ಸಭಿಕರನ್ನುದ್ದೇಶಿಸಿ ತಿಳಿಸುತ್ತಿದ್ದರು. ದಿವ್ಯವಾದ ಈ ಅಮೃತವಾಣಿಯನ್ನು ಪುಷ್ಟೀಕರಿಸುವ ಸಮಾಚಾರಗಳು ಗೀತಾಶಾಸ್ತ್ರದ ಅವತರಿಣಿಕೆಯಲ್ಲಿ ಕಾಣಬಹುದಾಗಿದೆ.

ಧರ್ಮರಾಜನಲ್ಲದೆ ಮಿಕ್ಕವರೆಲ್ಲರೂ ಪ್ರಧಾನತಃ ಭೀಮಾರ್ಜುನರುಗಳು ಯುದ್ಧ ನಡೆಯಲೇಬೇಕು ಆಗತಾನೇ ದುಷ್ಟ ನಿಗ್ರಹ ನಡೆಯುತ್ತದೆಂದು ತೀರ್ಮಾನವಾಗಿದ್ದರು ಕೌರವಾದಿಗಳ ಗರ್ವಕ್ಕೆ ತಕ್ಕ ಶಾಸ್ತಿ ಯುದ್ಧ ಮಾತ್ರವೆಂಬ ಅಭಿಪ್ರಾಯದೊಂದಿಗಿದ್ದ ಅರ್ಜುನಾದಿಗಳ ಅಭಿಪ್ರಾಯವನ್ನು ನಡೆಸಿ ಲೋಕ ಕಂಟಕರಾಗಿರುವ ದುರ್ಯೋಧನಾದಿಗಳನ್ನು ಅಳಿಸಿ ಭೂಭಾರವನ್ನಿಳಿಸಬೇಕೆಂಬ ಸದುದ್ದೇಶದಿಂದ ಭಾರತಯುದ್ಧ ನಡೆಯಲೇಬೇಕೆಂಬ ಆಶಯದೊಂದಿಗೆ ಪಾಂಡವ ದೂತನಾಗಿ ದುರ್ಯೋಧನನ ಸಭೆಗೆ ಸ್ವಾಮಿಯು ತೆರಳಿದನೆಂದು ಶ್ರೀ ತಿರುಮಂಗೈ ಆಳ್ವಾರ್‌ರವರು "ಪಾರೇರು ಪೆರುಂ ಭಾರಂ ತೀರ ಪಂಡು ಭಾರತತ್ತುತ್ತೂದಿಯಂಗಿ" (ಪೆರಿಯತಿರುಮೊಳಿ 2-10-8) "ಮನ್ನಕ್ಕಾಯ್ ಮುನ್ನಂ ಶೆನ್ರತೂದಾಳ್ಳ" (ಪೆರಿಯತಿರುಮೊಳಿ 5-5-6) ಎಂದು ತಿಳಿಸಿದ್ದಾರೆ. ಬೇರೆ ಯಾರಾದರೂ ಸಂಧಾನಕ್ಕೆ ಹೋಗಿ ಯುದ್ಧ ನಡೆಯದಂತೆ ಸಮಾಧಾನ ಏರ್ಪಡಿಸಿ ಬಿಟ್ಟರೆ ಮಹಾ ಅನರ್ಥವಾಗಿಬಿಡುತ್ತದೆಂದು ಯಾರಿಗೂ ಅವಕಾಶಕೊಡದೆ ತಾನೇ ಮೊದಲಿಗನಾಗಿ ನಡೆದ ಪಾಂಡವದೂತನ ಹೃದಯವನ್ನರಿತ ತಿರುಮಂಗೈ ಮನ್ನರವರು ಅದರ ಹಿನ್ನಲೆ ಗೀತಾಚಾರ್ಯನಾಗಬೇಕೆಂದು ಮಹತ್ವಾಕಾಂಕ್ಷೆಯೇ ಎಂಬುದನ್ನು ವ್ಯಕ್ತಪಡಿಸಿದ್ದಾರೆ. ಯುದ್ಧ ಮಾಡಿಯೇ ತೀರಬೇಕು ಆಗ ತಾನೇ ಪಾಂಚಾಲಿಯ ಶಪಥವೂ ನೆರವೇರುತ್ತದೆಂದು ಅಚಲ ಸಂಕಲ್ಪ ಮಾಡಿಕೊಂಡಿದ್ದ ಅರ್ಜುನನಿಗೆ ಮೋಹವನ್ನುಂಟುಮಾಡಿದುದು ಭೂಯ ಏವ ಮಹಾಭಾಹೋ ಶೃಣು ಮೇ ಪರಮಂ ವಚಃ ಎಂದೆಲ್ಲಾ ಹೇಳಿದುದಕ್ಕೆ ಕಾರಣ ಆಚಾರ್ಯ ಎಂಬ ಪದವಿಯಲ್ಲಿರುವ ಮೋಹವೇ ಎಂದು ವ್ಯಕ್ತವಾಗುತ್ತದೆ. ಉಪನ್ಯಾಸದ ಆಹಂ ಅಣಿ ಮತ್ತೊಂದನ್ನು ತಿಳಿಸಬಯಸುತ್ತದೆ.

ಆಚಾರ್ಯರ ಪಾದ ಸಂಬಂಧ ಅನಾದಿಕಾಲದಿಂದ ಜನನ ಮರಣ ಚಂದ್ರನಲ್ಲಿ ಸುತ್ತುವಂತೆ ಮಾಡುವ ಮಹಾಪರಾಧಕ್ಕೂ ಸೂಕ್ತ ಔಷಧವಾಗಿದೆಯೆಂದು ಶ್ರೀ ಕೃಷ್ಣನು ಸಾಂದೀಪಿನೀ ಋಷಿಯ ಮಹತ್ವವನ್ನು ತಿಳಿಯಪಡಿಸುವುದರ ಮೂಲಕ ಸ್ಪಷ್ಟಪಡಿಸಿದನೆಂದು ಸ್ವಾಮಿಗಳು ತಿಳಿಸುತ್ತಿದ್ದರು.

ಶ್ರಿಯಃಪತಿಯಾದ ಸರ್ವೇಶ್ವರನು ಜನನ ಮರಣ ಚಕ್ರದಲ್ಲಿ ಸುತ್ತುತ್ತಾ ಸಂಸಾರ ಎಂಬ ಘೋರವಾದ ಕೆಸರಿನ ಹೊಂಡದಲ್ಲಿ ಸಿಲುಕಿ ತತ್ತರಿಸುತ್ತಿರುವ ಚೇತನರುಗಳನ್ನು ಮೇಲೆತ್ತುವ ಸಲುವಾಗಿ ಶಾಸ್ತ್ರಪಾಣಿಯಾಗಿ, ಆಚಾರ್ಯನಾಗಿ ಅವತರಿಸುತ್ತಾನೆಂದು "ಸಾಕ್ಷಾನ್ನಾರಾಯಣೇ ದೇವಃ ಕೃತ್ವಾ ಮರ್ತ್ಯಮಯೀಂ ತನೂಂ ಮಗ್ನಾನುದ್ಧರತೇ ಲೋಕಾ ಕಾರುಣ್ಯಾತ್ ಶಾಸ್ತ್ರಪಾಣಿನಾ" ಎಂಬ ಪ್ರಮಾಣವು ತಿಳಿಸುತ್ತದೆ. 'ಆಚಾರ್ಯ ಸ್ಸದ್ಭಿರಪ್ರತ್ಯುಪಕರಣಧಿಯಾ ದೇವವತ್ ಸ್ಯಾದುಪಾಸ್ಯಃ" (ನ್ಯಾಸ ವಿಂಶತಿ ಶ್ಲೋಕ 2) ಎಂದು ಸ್ವಾಮಿ ನಿಗಮಾಂತ ಮಹಾದೇಶಿಕರು ಆಚಾರ್ಯರ ಪಾರಮ್ಯವನ್ನೂ, ಪರಮಪುರುಷನೊಂದಿಗಿರುವ ಸಾಮ್ಯವನ್ನು ಅದ್ಭುತವಾಗಿ ತಿಳಿಸಿರುತ್ತಾರೆ. ಎಲ್ಲ ಸಂದರ್ಭಗಳಲ್ಲಿಯೂ ಆಚಾರ್ಯಾದಿಹ ದೇವತಾಂ ಸಮಧಿಕಾಂ ಅನ್ಯಾಂ ನಮನ್ಯಾಮಹೇ ಆಚಾರ್ಯರು ಭಗವಂತನಿಗಿಂತ ಮಿಗಿಲಾದವರೆಂಬ ಅಭಿಪ್ರಾಯವನ್ನು ಅನೇಕ ಮಹನೀಯರುಗಳು ತಮ್ಮ ಶ್ರೀಸೂಕ್ತಿಗಳ ಮೂಲಕ ಪ್ರತಿಪಾದಿಸಿದ್ದಾರೆ. "ಅನ್ಪಕ್ಕೆ ಅವತರಿಕ್ಕುಂಮಾಯ್ನಿರ್ಕ ಅರುಮರೈಹಳ್ ತಮಿಳ್ ಶೆಯ್ದಾ ತಾಳೇಕೊಂಡು ತುನ್ಪತ್ತ ಮಧುರ ಕವಿ" ಚೇತನೋಜ್ಜೀವನಾರ್ಥವಾಗಿ ಅನೇಕ ಕಲ್ಯಾಣಗುಣಗಳನ್ನು ಪ್ರಕಾಶಪಡಿಸಿಕೊಳ್ಳುತ್ತಾ ಆಶ್ಚರ್ಯ ಗುಣೈಕತಾನನಿಂದ ಕೃಷ್ಣನು ಎದುರಿಗೇ ಬಂದು ನಿಂತರೂ ಸಹ ದುರಧಿಗಮ್ಯವಾದ ವೇದಗಳನ್ನು ತಮಿಳಿನಲ್ಲಿ ಹಾಡಿಕೊಟ್ಟ ಶ್ರೀ ನಮ್ಮಾಳ್ವಾರ್‌ರವರ ದಿವ್ಯ ಚರಣಾರವಿಂದಗಳೇ ಭಗವತ್ಪಾಪ್ತಿಗೆ ಉಪಾಯವೆಂದು ಆಚಾರ್ಯನಿಷ್ಠೆಯ ಉತ್ಕರ್ಷವನ್ನರಿತು ಅದರಲ್ಲಿಯೇ ನೆಲೆಯಾಗಿ ನಿಂತ ಮಧುರ ಕವಿ ಆಳ್ವಾರ್‌ರವರ ಮನೋದಾರ್ಢ್ಯವನ್ನು ಮುಕ್ತ ಕಂಠದಿಂದ ಪ್ರಶಂಸಿಸಿ ಈ ಮಾರ್ಗವೇ ಎಲ್ಲಕ್ಕಿಂತ ಸುಕರ ಮಾರ್ಗ ಎಂದು ಸಾರಿದ್ದಾರೆ ಶ್ರೀಮನ್ನಿಗಮಾಂತ ಮಹಾದೇಶಿಕರು. "ಶೆಯ್ತ್ತಲೈ ಚ್ಚಂಗಂ ಶೆಳು ಮುತ್ತ ಮೀನುಂ ತಿರುವರಂಗರ್ ಕೈತ್ತಲತ್ತಾಳಿಯುಂ ಶಂಗಮುಂ ಏನ್ದಿ ನಂ ಕಣ್ ಮುಹಪ್ಪೇ ಮೊಯ್ತ್ತಲೈತ್ತು ಉನ್ನೈ ವಿಡೇ ಎನ್ರಿರುಕ್ಕಿಲುಂ ನಿಪುಹಳೇ ಮೊಯ್ತ್ತಲೈಕ್ಕುಂ ವಂದು ಇರಾಮಾನುಶಾ ಎನ್ನೈ ಮುತ್ತುಂ ನಿನ್ರೇ. (ರಾಮಾನುಜ ನೂತ್ತಂದಾದಿ 75) ಶ್ರೀ ತಿರುವರಂಗತ್ತಮುದನಾರವರು ತಮ್ಮ ರಾಮಾನುಜ ನೂತ್ತಂದಾದಿಯ 75ನೇ ಪಾಶುರದಲ್ಲಿ ಶಂಖಚಕ್ರಧಾರಿಯಾಗಿ ಶ್ರೀರಂಗನಾಥನು ಕಣ್ಣೆದುರಿಗೆ ನಿಂತು ನಿನ್ನನ್ನು ಬಿಡಲಾರೆನೆಂದು ತೀರ್ಮಾನದೊಂದಿಗಿದ್ದರೂ ಹೇ ರಾಮಾನುಜರೇ ನಿಮ್ಮ ಕೀರ್ತಿಯೇ ದಾಸನನ್ನು ಪರಿಪೂರ್ಣವಾಗಿ ಆವರಿಸಿಕೊಂಡಿರುತ್ತದೆ ನನಗೆ ನೀವೇ ಪರಮಪ್ರಾಪ್ಯರು ಎಂದು ತಿಳಿಸಿದ್ದಾರೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪೇರೊನ್ರು ಮುತ್ತಿಲ್ಲೆ ನಿ಼ ಶರಣನ್ರಿ ಅಪ್ಪೇರಳಿತ್ತರ್ಕು ಆರೊನ್ರುಂ ಇಲ್ಲೆ, ಮತ್ತಚ್ಚರಣನ್ರಿ" ನನಗೆ ಪರಮ ಪ್ರಾಪ್ಯವಾದುದು ಆಚಾರ್ಯರ ತಿರುವಡಿಯೇ ಆ ಪ್ರಯೋಜನವನ್ನು ತಂದುಕೊಡಲು "ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ" ಎಂಬ ಆಚಾರ್ಯ ತಿರುವಡಿಗಳಲ್ಲಿ ನಾವು ಮಾಡುವ ಪ್ರಪದನವಲ್ಲದೆ ಬೇರೆ ಮಾರ್ಗವೂ ಇಲ್ಲ ಎಂದು ಪ್ರಾಪ್ಯ ಮತ್ತು ಪ್ರಾಪಕ ಆಚಾರ್ಯರ ತಿರುವಡಿಹಳೇ ಎಂಬುದನ್ನು ರಾಮಾನುಜನೂತ್ತಂದಾದಿಯ 45ನೇ ಪಾಶುರದಲ್ಲಿ ಇಲ್ಲಿಯೂ ಅಲ್ಲಿಯೂ ನಮಗೆ ಆಚಾರ್ಯರ ತಿರುವಡಿಯೇ ಪ್ರಾಪ್ಯವೆಂಬುದನ್ನು ಸಂಪ್ರದಾಯದಲ್ಲಿ ಅತಿಸುಂದರವಾಗಿ ಹಿರಿಯರು ಅಳವಡಿಸಿದ್ದಾರೆ. ಯಾರಾದರೂ ಶ್ರೀವೈಷ್ಣವರು ಪ್ರಾಕೃತ ದೇಹವನ್ನು ತ್ಯಜಿಸಿ ತಮ್ಮ ಉಪಾಯಾನುಷ್ಠಾನದ ಫಲವಾಗಿ ನಿತ್ಯೈಶ್ವರ್ಯವನ್ನು ಪಡೆದಾಗ ಆಚಾರ್ಯನ್ ತಿರುವಡಿಹಳ್ಳೆ ಅಡ್ಯೆಂದಾರ್ ಎಂಬುದಾಗಿ ತಿಳಿಯಪಡಿಸುವುದು ಸಂಪ್ರದಾಯ "ಕೂರುಕವರ್ನ್ದ ಗುರುಕ್ಕುಳ್ ಕುಳಾಂಗಳ್ ಕುರ್ಕೆಕಳಲ್ಕೀಳ್ ಮಾರುದಲಿನ್ರಿ ಮಹಿಳ್ನ್ದು ಎಳುಂ ಭೋಗತ್ತು ಮನ್ನುವಮೇ" (ಅಧಿಕಾರ ಸಂಗ್ರಹ 29) ತಮ್ಮ ಪೂರ್ವಾಚಾರ್ಯರುಗಳ ಅಡಿದಾವರೆಗಳಿಗೆ ಕೈಂಕರ್ಯಮಾಡುತ್ತಾ ಪರಮಾನಂದಭರಿತರಾಗಿ ಪರಿಪೂರ್ಣ ಬ್ರಹ್ಮಾನುಭವವನ್ನು ಪಡೆಯುತ್ತಿರುತ್ತಾರೆ. ಇಲ್ಲಿಂದ ಆಚಾರ್ಯಾನುಗ್ರಹದ ಕಾರಣ ತೆರಳಿದ ಮುಕ್ತಾತ್ಮರುಗಳು ಪರಮಪದದಲ್ಲಿ ಅನುಭವಿಸುವ ಆನಂದಾತಿಶಯವನ್ನು ಸ್ವಾಮಿ ನಿಗಮಾಂತ ಮಹಾದೇಶಿಕರು ಶ್ರೀಮದ್ರಹಸ್ಯತ್ರಯಸಾರ ಶಾಸ್ತ್ರದಲ್ಲಿ ಸಾರುತ್ತಾರೆ. ನಮಗೆ ಮುಕ್ತಿಗೆ ಉಪಾಯ ಆಚಾರ್ಯರ ಚರಣಾರವಿಂದಗಳಲ್ಲಿ ಪ್ರಪದನ. ಇಲ್ಲಿ ಮಾಡುವ ಪ್ರಪದನಕ್ಕೆ ಪರಮಪದದಲ್ಲಿ ಆಚಾರ್ಯರ ತಿರುವಡಿಗಳಲ್ಲಿ ಕೈಂಕರ್ಯವೇ ಪರಮ ಪ್ರಯೋಜನ. ಶ್ರೀಮತ್ತಿರುಕ್ಕುಡಂದೈ ಅಂಡವರ್ ಸ್ವಾಮಿಗಳ ಭಗವದ್ವಿಷಯ ಕಾಲಕ್ಷೇಪ ಸಮಯದಲ್ಲಿ ತೇನುಂಪಾಲಂ ಕನ್ನಲುಂ ಅಮುದುಂ ಒತ್ತೇ ಎಂಬಂತೆ ರಸಾಸ್ವಾದ ಮಾಡಿದ ಮಹನೀಯರೊಬ್ಬರು ಪ್ರಾತೃತವಾಗಿ ಅಶಕ್ತರಾದಾಗ ಉತ್ತಮ ವೈದ್ಯರಿಂದ ಸೂಕ್ತ ಚಿಕಿತ್ಸೆಯನ್ನು ಬೇಗನೆ ಪಡೆದು ಉತ್ತಮ ಆರೋಗ್ಯದೊಂದಿಗೆ ಕಾಲಕ್ಷೇಪಗೋಷ್ಠಿಯಲ್ಲಿ ಅನ್ವಯಿಸಬೇಕು. ಇಂತಹ ಅನುಭವ ರಸ ಪರೀವಾಹವನ್ನು ನಿರಂತರ ಹರಿಸುವ ಆಚಾರ್ಯರು ಇಲ್ಲಿಯೇ ಇರುವಾಗ ಪರಮಪದದಲ್ಲಿ ಏನು ಸುಖವಿರುತ್ತದೆ ಅಲ್ಲಿಗೆ ಹೋದರೆ ಕಾಲ ಕಳೆಯುವುದು ಕಷ್ಟ ಆಚಾರ್ಯರು ತಿರುನಾಟ್ಟನ್ನು ಅಲಂಕರಿಸಿದ ಮೇಲೆ ಹೋದರೆ ಅಲ್ಲಿ ಕಾಲಕ್ಷೇಪದ ರಸಾನುಭವವನ್ನು ಮುಂದುವರೆಸಬಹುದು ಅದುವರೆಗೆ ಹೇಗಾದರೂ ಇಲ್ಲಿಯೇ ಇದ್ದು ಅಂದಮಿಲ್ ಪೇರಿನ್ಬವಾದ ರಸಾನುಭವವನ್ನು ಆಚಾರ್ಯರ ಸಕಾಶದಲ್ಲಿ ಮಾಡುತ್ತಿರಬೇಕೆಂದು ಆಸೆ ಪಡುತ್ತಿದ್ದರಂತೆ. ಕೂರತ್ತಾಳ್ವಾರವರು ಭಗವದ್ರಾಮಾನುಜರು ತಿರುನಾಡನ್ನು ಅಲಂಕರಿಸುವ ಮುನ್ನ ತಾನು ಅಲ್ಲಿ ಅವರನ್ನು ಸ್ವಾಗತಿಸಲು ಮುಂದಾಗಬೇಕೆಂದು ಬಯಸಿದರೆಂದು ಅವರ ಚರಿತ್ರದಲ್ಲಿ ಕಂಡುಬರುತ್ತದೆ. ಇವೆಲ್ಲವೂ ಈ ಮಹಾನುಭಾವರುಗಳ ಆಚಾರ್ಯ ಪ್ರತಿಪತ್ತಿಯನ್ನು ವ್ಯಕ್ತಪಡಿಸುವ ನಿದರ್ಶನಗಳು.

ಕೌರವರುಗಳ ದುರಾಸೆಯ ನಿಮಿತ್ತವಾದ ದೌರ್ಜನ್ಯವನ್ನು ಸಹಿಸಲಾಗದೆ ಐದು ಸೂಜಿ ಮೊನೆಯಷ್ಟು ಭೂಮಿಯನ್ನೂ ಕೊಡಲಾರೆನೆಂದ ಸುಯೋದನನ್ನು ದಮನಗೊಳಿಸುವ ಸದುದ್ದೇಶದಿಂದ ಯುದ್ಧ ಪ್ರಾರಂಭ ಮಾಡಿದ ಸಮಯದಲ್ಲಿ ಅರ್ಜುನನನ್ನು ಅಸ್ಥಾನದಲ್ಲಿ ಸ್ನೇಹ ಕಾರುಣ್ಯ ಮುಂತಾದ ಸ್ವರೂಪಕ್ಕನುಚಿತವಾದ ಮೋಹದಲ್ಲಿ ಮುಳುಗಿಸಿ ಅವನಿಂದ ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ ಎಂದು ಪ್ರಾರ್ಥಿಸಲ್ಪಟ್ಟು ಮಂದಹಾಸದೊಂದಿಗೆ ಅದಕ್ಕುತ್ತರವಾಗಿ ಹದಿನೆಂಟು ಅಧ್ಯಾಯಗಳಿರುವ ಶ್ರೀಮದ್ಭಗವದ್ಗೀತೆ ಎಂಬ ಸ್ವವಿಷಯಿಕಶಾಸ್ತ್ರವನ್ನು ಸರ್ವಲೋಕೋಜ್ಜೀವನಾರ್ಥವಾಗಿ ಸರ್ವಲೋಕ ಸಾಕ್ಷಿಕಂ ಚಕಾರ ಎಂದು ಶ್ರೀಮದ್ಭಗವದ್ಭಾಷ್ಯಕಾರರು ತಮ್ಮ ಗೀತಾಭಾಷ್ಯದ ಅವತಾರಿಕೆಯಲ್ಲಿ ತಿಳಿಯಪಡಿಸುತ್ತಾರೆ.

ಅಜ್ಞಾನಧ್ವಾಂತರೋಧಾತ್ ಅಘಪರಿಹರಣಾತ್ ಆತ್ಮಸಾಮ್ಯಾವಹತ್ವಾತ್
ಜನ್ಮಪ್ರಧ್ವಂಸಿ ಜನ್ಮಪ್ರದ ಗರಿಮತಯಾ ದಿವ್ಯದೃಷ್ಟಿಪ್ರದಾನಾತ್ |
ನಿಷ್ಪ್ರತ್ಯೂಹಾನ್ಯಶಂಸ್ಯಾತ್ ನಿಯತರಸತಯಾ ನಿತ್ಯಶೇಷಿತ್ವಯೋಗಾತ್
ಆಚಾರ್ಯಃ ಸದ್ಭಿಃ ಅಪ್ರತ್ಯುಪಕರಣಧಿಯಾ ದೇವವತ್ ಸ್ಯಾದುಪಾಸ್ಯಃ ||

ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸುವುದರಿಂದಲೂ ಪಾಪವನ್ನು ತೊಲಗಿಸುವುದರಿಂದಲೂ, ತನ್ನೊಡನೇ ಸಾಮ್ಯವನ್ನುಂಟು ಮಾಡುವುದರಿಂದಲೂ, ಜನನ ಮರಣಗಳನ್ನು ನೀಗಿಸುವ (ಪುನರ್ಜನ್ಮದಿಂದ ವಿಮೋಚನೆ ನೀಡುವ) ಬ್ರಹ್ಮವಿದ್ಯಾ ಜನ್ಮವನ್ನು ಅನುಗ್ರಹಿಸುವ ಕರುಣಾಪೂರ್ಣಮಹಿಮಾನ್ವಿತರಾದುದರಿಂದಲೂ, ದಿವ್ಯದೃಷ್ಟಿಯನ್ನು ಕೊಡುವುದರಿಂದಲೂ, ಯಾವ ಅಡೆತಡೆಯೂ ಇಲ್ಲದಂತೆ ದಯೆಯನ್ನು ತೋರುವುದರಿಂದಲೂ, ನಿಯತವಾದ ಆನಂದಾತಿಶಯವನ್ನುಂಟುಮಾಡುವುದರಿಂದಲೂ, ಎಂದೆಂದಿಗೂ ಶೇಷಿಯಾಗಿರುವ ಸಂಬಂಧವನ್ನು ಹೊಂದಿರುವುದರಿಂದಲೂ, ಸದಾಚಾರ್ಯನು ಭಗವಂತನು ಹೇಗೋ ಹಾಗೆ ಸಜ್ಜನರುಗಳಿಂದ ಪ್ರತ್ಯುಪಕಾರ ಮಾಡುತ್ತಿರುವೆನೆಂಬ ಬುದ್ಧಿಯನ್ನು ಹೊಂದದೆ ಉಪಾಸನೆ ಮಾಡಲ್ಪಡಬೇಕು ಎಂದು ಈ ಶ್ಲೋಕದಲ್ಲಿ ಸ್ವಾಮಿ ನಿಗಮಾಂತ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಹಾದೇಶಿಕರು ಸದಾಚಾರ್ಯನಿಗೂ ಶ್ರಿಯಃಪತಿಯಾದ ಸರ್ವೇಶ್ವರನಿಗೂ ಸಮಾನವಾಗಿ ಅನ್ವಯಿಸುವ ವಿಶೇಷಣಗಳಿಂದ ಸದಾಚಾರ್ಯನ ಸ್ಥಾನ ನಿಸ್ಸಮಾಭ್ಯಧಿಕನಾದ ಭಗವಂತನ ಸ್ಥಾನದಷ್ಟೇ ಉನ್ನತವಾದುದೆಂದು ತಿಳಿಯಪಡಿಸಿ ಅವರುಗಳ ಚರಣಾರವಿಂದಗಳಲ್ಲಿರುವ ಕೃತಜ್ಞತೆಯಿಂದಲೇ ಉಜ್ಜೀವನ ಹೊಂದುವ ಸುಲಭೋಪಾಯವನ್ನು ತಿಳಿಸಿದ್ದಾರೆ.

"ಏತ್ತಿಮನತ್ತೆಲ್ಲಿಲ್ ಜ್ಞಾನವಿಳಕ್ಕೆ ಇರುಳನೈತ್ತು ಮಾತ್ತಿನವರ್ಕು ಒರುಕ್ಕೈಮ್ಮಾರು ಮಾಯನುಂ ಕಾಣಹಿಲ್ಲಾನ್ ಪೋತ್ತಿಉಹಪ್ಪದುಂ ಪುಂದಿಯಿಲ್‌ಕೊಳ್ವದುಂ ಪೊಂಗು ಪುಹಲ್ಲೆ ಶಾತ್ತಿವಳರ್ಪ್ಪದುಂ ಶೆತ್ತಲ್ಲವೊ ಮುನ್ನಂ ಪೆತ್ತದರ್ಕ್ಕೇ

ಅಜ್ಞರುಗಳಾದ ನಮ್ಮ ಹೃದಯದಲ್ಲಿ ಸುಂದರವಾದ ಸುಜ್ಞಾನಜ್ಯೋತಿಯನ್ನು ಹೊತ್ತಿಸಿ ಅಲ್ಲಿ ನೆಲೆ ಮಾಡಿದ್ದ ಅಜ್ಞಾನಾಂಧಕಾರವನ್ನು ಪರಿಪೂರ್ಣವಾಗಿ ಹೋಗಲಾಡಿಸಿದ ಆಚಾರ್ಯ ಸಾರ್ವಭೌಮರ ಕರುಣಾಮಯ ಉಪಕಾರಕ್ಕೆ ಪ್ರತ್ಯುಪಕಾರವನ್ನು ಅಘಟಿತಘಟನಾ ಸಾಮರ್ಥ್ಯ ಮತ್ತು ಸರ್ವಜ್ಞತ್ವವನ್ನು ಹೊಂದಿರುವ ಸರ್ವಸ್ವಾಮಿಗೂ ಚಿಂತಿಸಲಸಾಧ್ಯವೆಂಬ ಸತ್ಯಸಂಗತಿಯನ್ನು ಸರ್ವಜ್ಞರಾದ ಸ್ವಾಮಿ ದೇಶಿಕರು ಶ್ರೀ ಮದ್ರಹಸ್ಯತ್ರಯಸಾರದಲ್ಲಿ ತಿಳಿಸುತ್ತಾರೆ. ಆದುದರಿಂದ ಆತ್ಮಯಾಥಾತ್ಮ್ಯ ಜ್ಞಾನದಿಂದ ಸರ್ವಶೇಷಿಯಾದ ಸರ್ವೇಶ್ವರನಿಗೆ ಸದಾ ಅತಿಶಯಾಧಾತ್ವವೇ ನಮ್ಮ ಸ್ವರೂಪವೆಂಬ ಆಚಾರ್ಯ ಸಾರ್ವಭೌಮರ ಸದುಪದೇಶವನ್ನು ಸದಾ ಬುದ್ಧಿಯಲ್ಲಿರಿಸಿಕೊಳ್ಳುತ್ತಾ (ಉಪದೇಶಾನುಸಾರವಾಗಿ ನಡೆಯುತ್ತಾ ಎಂದು ತಾತ್ಪರ್ಯ) ಅವರುಗಳ ಮಹಿಮೆಯನ್ನು ಸಂತೋಷದಿಂದ ಸ್ತುತಿಸುತ್ತಾ, ಸ್ತುತಿಸುವುದರಿಂದ ಸಂತೋಷಿಸುತ್ತಾ ಉಕ್ಕಿಬರುತ್ತಿರುವ ಅವರ ಕೀರ್ತಿಯನ್ನು ಸರ್ವ ಜನರಿಗೂ ತಿಳಿಯುವಂತೆ ಕೊಂಡಾಡುವುದು, ಅವರಿಂದ ಪಡೆದುಕೊಂಡ ಮಹದುಪಕಾರಕ್ಕೆ ನಾವು ಮಾಡುವ ಕಿಂಚಿತ್ ಪ್ರತ್ಯುಪಕಾರವಾಗುತ್ತದೆ.

ನ್ಯಾಸವಿಂಶತಿಯ ಶ್ಲೋಕದಲ್ಲಿ 'ಅಪ್ರತ್ಯುಪಕರಣಧಿಯಾ' ಎಂದು ಈ ವಿಷಯಕ್ಕೆ ಒತ್ತು ಕೊಟ್ಟಿದ್ದಾರೆ ಸ್ವಾಮಿ ದೇಶಿಕರು. ಸರ್ವಜ್ಞನೂ ಸರ್ವ ಸಮರ್ಥನು ಆದ ಸ್ವಾಮಿಗೆ ಅಸಾಧ್ಯವಾದ ಕಾರ್ಯವೂ ಒಂದುಂಟು ಎಂದರೆ ಈ ಗುಣಗಳಿಗೆ ಹಾನಿಯುಂಟಾಗದೇ ? ಎಂಬ ಪ್ರಶ್ನೆ ಬರುವುದು ಸಹಜ. ಇದಕ್ಕೆ ಉತ್ತರವನ್ನು ಶ್ರೀ ಕೂರತ್ತಾಳ್ವಾರವರ ಶ್ರೀಸ್ತವದ ಆನೇ ಶ್ಲೋಕದಲ್ಲಿ ಕಾಣಬಹುದಾಗಿದೆ.

ದೇವಿ ತ್ವನ್ಮಹಿಮಾವಧಿರ್ನ ಹರಿಣಾ ನಾಪಿ ತ್ವಯಾ ಜ್ಞಾಯತೇ ಯದ್ಯಪ್ಯೇವಮಥಾಪಿ ನೈವ ಯುವಯೋಃ ಸರ್ವಜ್ಞತಾ ಹೀಯತೇ |
ಯನ್ನಾಸ್ತ್ಯೇವ ತದಜ್ಞತಾಮನುಗುಣಾಂ ಸರ್ವಜ್ಞತಾಯಾ ವಿದುಃ
ವ್ಯೋಮಾಂಭೋಜಂ ಇದಂತಯಾ ಕಿಲ ವಿದನ್ ಭ್ರಾಂತೋಽಯಮಿತ್ಯುಚ್ಯತೇ || ||೮||

(ವ್ಯೋಮಾಂಭೂಜ) ಆಕಾಶದಲ್ಲಿ ಅರಳಿರುವ ತಾವರೆ ಹೇಗೆ ಇಲ್ಲದಿರುವ ವಸ್ತುವೋ ಅದೇ ರೀತಿ ಆಚಾರ್ಯವರೇಣ್ಯರಿಂದ ನಾವು ಪಡೆದ ಉಪಕಾರಕ್ಕೆ ಪ್ರತ್ಯುಪಕಾರವೆಂಬುದು ಇಲ್ಲದಿರುವ ವಸ್ತು ಅದರ ಅರಿವು ಭಗವಂತನಿಗಲ್ಲ ಎಂದರೆ ಅವನ ಸರ್ವಜ್ಞತ್ವಕ್ಕೆ ಹಾನಿಯುಂಟಾಗದು. ಇರುವ ವಸ್ತುವಿನ ಪೂರ್ಣವಾದ ಅರಿವು ಹೊಂದಿಲ್ಲದಿದ್ದರೆ ಜ್ಞಾನದ ಕೊರತೆ ಇಲ್ಲದ್ದನ್ನು ಇಲ್ಲವೆಂದೇ ತಿಳಿಯುವುದು ಸಹಜವಾದ ತಿಳಿವಳಿಕೆ ಎಂದು ಸಮರ್ಥಿಸಿದ್ದಾರೆ.

ಇಲ್ಲಿಂದ ಆಕಾಶಕ್ಕೆ ಇಷ್ಟು ಮೈಲಿಗಳ ಅಂತರವಿದೆ. ಸಮುದ್ರದಲ್ಲಿ ಇಷ್ಟು ಗ್ಯಾಲ್ ನೀರಿದೆ, ಸಮುದ್ರ ತೀರದಲ್ಲಿ ಇಷ್ಟು ಮರಳಿನ ಕಣಗಳಿವೆ ಎಂಬುದಾಗಿ ಯಾರಾದರೂ ತಿಳಿಸಿದ್ದಲ್ಲಿ ಅವನನ್ನು ಭ್ರಾಂತಚಿತ್ತ (ಹುಚ್ಚ)ನೆಂದು ತೀರ್ಮಾನಿಸುತ್ತಾರೆ ಯಾವುದಕ್ಕೆ ಅಳತೆಯೇ ಇಲ್ಲವೊ ಅದು ತಿಳಿದಿಲ್ಲವೆಂದರೆ ಆ ವಸ್ತುವಿನ ಬಗ್ಗೆ ಯಥಾರ್ಥಜ್ಞಾನವನ್ನು ಹೊಂದಿದ್ದಾರೆಂಬುದೇ ತಾತ್ಪರ್ಯ. ಅವಿಜ್ಞಾತಂ ವಿಜಾನತಾಂ ವಿಜ್ಞಾತಂ ಅವಿಜಾನತಾಂರಹಸ್ಯತ್ರಯ ಸಾರಾಖ್ಯಂ ಪರಂಬ್ರಹ್ಮಾಸ್ತುಮೇ ಹೃದಿ.

ಭಗವಂತನ ಬಗ್ಗೆ ತಿಳಿದಿಲ್ಲವೆಂದು ತಿಳಿದವನು ತತ್ವವನ್ನು ಅರಿತವನು ತಿಳಿದಿದೆ ಎಂದು ಹೇಳುವವನಿಗೆ ಏನೂ ತಿಳಿದಿಲ್ಲ ಎಂದು ಉಪನಿಷತ್ತುಗಳು ಉದ್ಘೋಷಿಸುತ್ತವೆ. ಅದೇ ರೀತಿಯಲ್ಲಿ ಶ್ರೀ ಮದ್ರಹಸ್ಯತ್ರಯಸಾರ ಎಂದು ಸಾರಗ್ರಾಹಿಗಳಾದ ಮಹಾತ್ಮರುಗಳು ತಿಳಿಸಿಕೊಟ್ಟಿದ್ದಾರೆ.

"ಆಂವಣ್ಣಂ ಇನ್ನದೊನ್ನೆನ್ರು ಅರಿವದರಿಯ ಅರಿಯೈಆಂವಣ್ಣತ್ತಾಲ್ ಕುರುಹೂರ್
ಶಡಗೋಪನ್ ಅರಿಂದುರ್ತ್ತ (ತಿರುವಾಯ್‌ಮೊಳಿ 7.8.11)

ಸ್ವರೂಪಸ್ವಭಾವಗಳು ಇಂತಹುದು ಎಂದು ತಿಳಿದುಕೊಳ್ಳಸಲಾಸಾಧ್ಯವಾದ ಶ್ರೀ ಹರಿಯನ್ನು ಅಂತೆಯೇ ಅರಿತು ತಿಳಿಸಿದ ಶಠಕೋಪರು ಎಂದು ತನ್ನ ಬಗ್ಗೆ ಹೇಳಿಕೊಂಡಿದ್ದಾರೆ ಶ್ರೀ ಶಠಕೋಪರು. ನಾಹಂವೇದೇತಿ ವೇದಚ `ನಾನರಿಯಲಿಲ್ಲವೆಂದು ಅರಿತುಕೊಂಡೆ' ಎಂಬ ಶ್ರುತಿ ವಾಕ್ಯವನ್ನೇ ಸ್ವಾನುಭವದಿಂದ ತಿಳಿಸುತ್ತಾರೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಯರ್ವರ ಮದಿನಲಂ ಅರುಳಿನರ್ (ತಿರುವಾಯ್‌ಮೊಳಿ 1-1-1) ತನ್ನ ವಿಷಯವಾದ ಸ್ವರೂಪ ಯಾಥಾತ್ಮ್ಯಜ್ಞಾನದಿಂದ ಮನದಲ್ಲಿ ಅದುವರೆವಿಗೂ ತುಂಬಿಕೊಂಡಿದ್ದ ಈಶ್ವರೋಹಂ ಅಹಂಭೋಗೀ ಎಂಬ ದೇಹಾತ್ಮಭ್ರಮ ಸ್ವತಂತ್ರಾತ್ಮಭ್ರಮ ಮತ್ತು ಅನ್ಯಶೇಷತ್ವ ಭ್ರಮೆ ಮೊದಲಾದ ಅಜ್ಞಾನವನ್ನು ಹೋಗಲಾಡಿಸಿದ ಸ್ವಾಮಿಯನ್ನು ಕೊಂಡಾಡುತ್ತಾರೆ. ಅದೇ ರೀತಿಯಲ್ಲಿ "ಮಿಕ್ಕವೇದಿಯರ್ ವೇದತ್ತಿಉಳ್‌ಪೊರುಳ್ ನಿರ್ಕ್ಕಪ್ಪಾಡಿ ಎನ್‌ನೆಂಜುಳ್ ನಿರುತ್ತಿನರ್" ವೇದಾಧ್ಯಯನ ಸಂಪನ್ನರು ಸಮಸ್ತ ವೇದಗಳ ಸಾರವಾಗಿರುವ ಪಾರಾರ್ಥ್ಯದ ವೈಭವವನ್ನು ಅರಿತಿರುವ ರೀತಿಯಲ್ಲಿ ಅಜ್ಞನಾದ ದಾಸನು ತಿಳಿದು ಉಜ್ಜೀವನ ಹೊಂದಲು ನಮ್ಮಾಳ್‌ವಾರ್‌ರವರು ದಾಸನ ಹೃದಯದಲ್ಲಿಯೇ ಈ ವೈಭವವು ನೆಲೆಯಾಗಿ ಉಳಿಯುವಂತೆ ಅನುಗ್ರಹಿಸಿದರೆಂದು ಶ್ರೀ ಮಧುರ ಕವಿ ಆಳ್ವಾರ್‌ರವರು ತಮ್ಮ ಕಣ್ಣಿನುಣ್ ಶಿರುತ್ತಾಂಬು ಪ್ರಬಂಧದ 10ನೇ ಪಾಶುರದಲ್ಲಿ ತಿಳಿಸುತ್ತಾರೆ. ಅಜ್ಞಾನವನ್ನು ನೀಗಿಸುವುದಕ್ಕಾಗಿಯೇ ಭಗವಂತನು ಶಾಸ್ತ್ರವೆಂಬ ದೀಪವನ್ನು ನೀಡಿದನೆಂದು ಹಿರಿಯರು ತಿಳಿಸಿರುತ್ತಾರೆ" ಹರ್ತುಂ ತಮಃ ಸದಸದೀತಿ ವಿವೇಕ್ತುಂಈಶಃ ಮಾನಂ ಪ್ರದೀಪಮಿವ ಕಾರುಣಿಕೋ ದದಾತಿ" ಶಾಸ್ತ್ರಜ್ಞಾನ ಬಹು ಕ್ಲೇಶಕರ ನಮ್ಮ ಅಲ್ಪಬುದ್ಧಿಗೆ ಎಟುಕದು. ಉಪದೇಶದಿಂದ ಹರಿಯನ್ನು ತಿಳಿದು ಮಿಕ್ಕ ವಿಷಯಗಳಿಂದ ವಿರಮಿಸಬೇಕೆಂದು ಹಿರಿಯರು ತಿಳಿಸಿದ್ದಾರೆ.

"ಶಾಸ್ತ್ರಜ್ಞಾನಂ ಬಹುಕ್ಲೇಶಂ ಬುದ್ಧೇಶ್ಚಲನಕಾರಣಂ ಉಪದೇಶಾದ್ಧರಿಂ ಬುಧ್ವಾ ವಿರಮೇತ್ಸರ್ವಕರ್ಮಸು"

ಭಗವಂತನಿಗೂ ಸದಾಚಾರ್ಯರಿಗೂ ಯಾವ ಅರ್ಥಸಂಕೋಪವೂ ಇಲ್ಲದಂತೆ ಅನ್ವಯವಾಗುವ ವಿಶೇಷಣ "ಅಜ್ಞಾನಧ್ವಾಂತರೋಧ" ಎಂಬುದು.

ಅಘಪರಿಹರಣ ಪಾಪವನ್ನು ಹೋಗಲಾಡಿಸುವಿಕೆ. ಪಾಪದ ಅಥವಾ ಪುಣ್ಯದ ಫಲವನ್ನು ಅನುಭವಿಸಿಯೇ ತೀರಿಸಬೇಕೆಂಬುದು ವಿಧಿಲಿಖಿತ. ಅವಶ್ಯಂ ಅನುಭೋಕ್ತವ್ಯಂ ಕರ್ಮ ಶುಭಾಶುಭಂ ಎಂದಿದೆ. ಕೆಟ್ಟ ಹಣೆಬರಹವನ್ನು ಹೋಗಲಾಡಿಸುವ ಶಕ್ತಿ ಆಚಾರ್ಯರಿಗುಂಟೆಂದು ಪರಿಸರವಿನತಾನಾಂ ಮೂರ್ಧ್ನಿ ದುರ್ವರ್ಣ ಪಂಕ್ತಿಂ ಪರಿಣಮಯಸಿ ಶೌರೇಃ ಪಾದುಕೇ ತ್ವಂ ಸುವರ್ಣಂ ಕುಹಕ ಜನ ವಿದೂರೇ ಸತ್ಪಥೇ ಲಬ್ಧವೃತ್ತೇಃ ಕ್ವನು ಖಲು ವಿದಿತಸ್ತೇ ಕೋಽಪ್ಯಸೌ ಧಾತುವಾದ ಶ್ರೀರಂಗನಾಥಪಾದುಕಾ ಸಹಸ್ರ 50ನೇ ಶ್ಲೋಕದಲ್ಲಿ ಕಾಣಬಹುದು. ಅವತಾರ ಸಮಯದಲ್ಲಿ ಶ್ರೀಕೃಷ್ಣನೇ ಇದನ್ನು ಲೋಕದಲ್ಲಿ ಪ್ರಚುರಗೊಳಿಸಿದನೆಂದು ಶ್ರೀಮತ್ತಿರುಕ್ಕುಡಂದೈ ಆಂಡವರ್ ಸ್ವಾಮಿಗಳು ತಿಳಿಸುತ್ತಿದ್ದುದನ್ನು ನೆನಪು ಮಾಡಿಕೊಂಡು ಬರೆಯಲು ಆಶಿಸುತ್ತೇನೆ. ಶ್ರೀ ಸಾಂದೀಪಿನಿ ಮಹರ್ಷಿಗಳ ಗುರು ಕುಲದಲ್ಲಿ ಎಲ್ಲ ಶಿಷ್ಯರುಗಳಿಗೂ ಆಚಾರ್ಯರು ಹೊಸಪಾಠ ಆರಂಭಿಸುತ್ತೇನೆ ತಮ್ಮ ತಮ್ಮ ಹಲಗೆಗಳಲ್ಲಿರುವ ಹಳೆಯ ಪಾಠವನ್ನು ಅಳಿಸಿಕೊಂಡು ಬನ್ನಿರೆಂದು ಸಂಧ್ಯಾವಂದನ ನಿರತರಾಗಿ ನದಿಯಲ್ಲಿ ಇಳಿದಿರುವಾಗ ಆಜ್ಞಾಪಿಸಿದರು. ಎಲ್ಲರೂ ಆಚಾರ್ಯಾದೇಶದಂತೆ ಅಳಿಸಿಕೊಂಡು ಬಂದರಂತೆ. ಶ್ರೀ ಕೃಷ್ಣನ ಹಲಗೆಯಲ್ಲಿ ಹಳೆಯ ಅಕ್ಷರಗಳು ಹಾಗೆಯೇ ಇದ್ದವಂತೆ. ಕೇಳಿದಾಗ ಶ್ರೀ ಕೃಷ್ಣ ನನ್ನ ಅಕ್ಷರ ಅಳಿಸಲಾಗದು ಅದು ಶಾಶ್ವತವೆಂದನಂತೆ. ಆಚಾರ್ಯರು ತಮ್ಮ ಅನುಷ್ಠಾನದ ಸ್ಥಾನದಲ್ಲಿ ನಿಂತುಕೊಂಡೇ (ತೀರ್ಥವನ್ನು) ದಯಪಾಲಿಸಿದ ತೀರ್ಥದಿಂದ ಶ್ರೀ ಕೃಷ್ಣ ತನ್ನ ಹಲಗೆಯನ್ನು ಅಳಿಸಲು ಪ್ರಯತ್ನಿಸಿದಾಗ ಎಲ್ಲ ಅಕ್ಷರಗಳೂ ಅಳಿದವಂತೆ. ಈಗ ಏನೆಂದು ಹೇಳುವೆ ಎಂಬ ಆಚಾರ್ಯರ ಪ್ರಶ್ನೆಗೆ ಶ್ರೀ ಕೃಷ್ಣ ಉತ್ತರಿಸಿದನಂತೆ ಸ್ವಾಮಿ ! ನನ್ನ ಅಕ್ಷರ ಎಂದೂ ಅಳಿಸಲಾಗುವುದಿಲ್ಲ ಆದರೆ ಆಚಾರ್ಯರ ಶ್ರೀಪಾದತೀರ್ಥ ನನ್ನ ಅಕ್ಷರಗಳನ್ನೂ ಅಳಿಸಬಲ್ಲದು ಅದರ ಮಹಿಮೆ ಅಪಾರವೆಂದನಂತೆ ವಿಧಿಲಿಖಿತ ವ್ಯತ್ಯಾಸವಾಗಿದ್ದರೂ ಅದನ್ನು ಸರಿಪಡಿಸುವ ಯೋಗ್ಯತೆ ಆಚಾರ್ಯರುಗಳಿಗುಂಟು ಅವರೂ ಭಗವಂತನಂತೆಯೇ ಅತ್ಯಾಶ್ಚರ್ಯಕರವಾದ ಚೇಷ್ಟಿತಗಳನ್ನುಳ್ಳವರೆಂದೂ ಕಬ್ಬಿಣವನ್ನು ಚಿನ್ನವಾಗಿ ಪರಿವರ್ತಿಸುವ ಸಾಮರ್ಥ್ಯವುಳ್ಳವರೆಂದೂ ಕೊಂಡಾಡುತ್ತಾರೆ. ಇದಕ್ಕೆ ರಸ ವಿದ್ಯೆ ಎಂದೂ ಧಾತುವಾದವೆಂದೂ ಹೆಸರು. ಕೆಟ್ಟ ಜನರು ಮಾತ್ರ ಇದನ್ನು ತಿಳಿದು ತಮ್ಮ ಪ್ರಯೋಜನಕ್ಕಾಗಿ ಬಳಸುತ್ತಾರೆ. ಅಮ್ಮಾ ! ಪಾದುಕಾದೇವಿಯೇ ಕುಹಕ ಜನರಿಂದ ದೂರಳಾಗಿರುವ ನಿನಗೆ ಈ ಧಾತುನಾದ ಹೇಗೆ ಪರಿಚಯವಾಯಿತೆಂದು ಆಶ್ಚರ್ಯಪಡುತ್ತಾ ಕೇಳುತ್ತಾರೆ. ಸ್ವಾಮಿ ದೇಶಿಕರು. ದುರ್ವರ್ಣ ಎಂದರೆ ಕಬ್ಬಿಣ ಅಥವಾ ಕೆಟ್ಟ ಹಣೆಬರಹ ಸುವರ್ಣ ಚಿನ್ನ ಅಥವಾ ಒಳ್ಳೆಯ ಬರಹ. ಶ್ಲೇಷಾಲಂಕಾರದಲ್ಲಿ ಅತಿಚಮತ್ಕಾರಯುಕ್ತವಾದ ಮಾತುಗಳಿಂದ ಪಾದುಕಾದೇವಿಯನ್ನು ಸ್ತುತಿಸಿ ನಮ್ಮಾಳ್‌ವಾರ್‌ರವರ ಮಹದುಪಕಾರವನ್ನು ಕೊಂಡಾಡುತ್ತಾರೆ. ಶ್ರೀಮಧುರಕವಿ ಆ ್‌ವಾರವರು ತಮ್ಮ ಕಣ್ಣಿನುಣ್ ಶಿರುತ್ತಾಂಬಿನ 7ನೇ ಪಾಶುರದಲ್ಲಿ "ಪಂಡೈ ವಲ್ ವಿನೈ ಪಾತ್ತಿ ಅರುಳಿನರ್" ಎಂದು ನಮ್ಮಾಳ್‌ವಾರ್‌ರವರು ತಮಗೆ ಸಮಸ್ತಪಾಪಗಳಿಂದಲೂ ಬಿಡುಗಡೆ ಉಂಟುಮಾಡಿದ ಅಮೋಘ ಕರುಣೆಯನ್ನು ಕೊಂಡಾಡಿದ್ದಾರೆ. ಶುರಕ್ಕುಂ ತಿರುವುಂ ಉಣರ್ವುಂ ಶೊಲಪ್ಪುಹಿಲ್ ವಾಯಮುದಂ ಪರಕ್ಕುಂ ಇರುವಿನೈ ಪತ್ತರಶೋಡುಂ" ಇರಾಮಾನುರನೂತ್ತಂದಾದಿ 43ನೇ ಪಾಶುರದಲ್ಲಿ ಆಚಾರ್ಯಾನುಗ್ರಹವೇ ಮೋಕ್ಷಕ್ಕೆ ಪ್ರತಿಬಂಧಕವಾಗಿರುವ ಪುಣ್ಯಪಾಪ ವಿಮೋಚನೆಗೆ ಕಾರಣಭೂತವಾದುದೆಂದು ಶ್ರೀ ತಿರುವರಂಗತ್ತಮುದನಾರ್ ಅಪ್ಪಣೆ ಕೊಡಿಸಿದ್ದಾರೆ. "ಕಾರಾಗೃಹೇ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕನಕಶ್ಯಂಖಿಲಯಾಪಿಬಂಧಃ" ಜೈಲಿನಲ್ಲಿದ್ದಾಗ ಚಿನ್ನದ ಬೇಡಿಯಾದರೂ ಅದೂ ಬಂಧನವೇ ಪುಣ್ಯ ಚಿನ್ನದ ಬೇಡಿ ಪಾಪ ಕಬ್ಬಿಣದ ಬೇಡಿ ಎಂದು ಭಗವತ್ಪಾಪ್ತಿಗೆ ವಿರೋಧವಾದ ಪುಣ್ಯ ಪಾಪಗಳ ನಿಜ ಸ್ವರೂಪವನ್ನು ಶ್ರೀಮನ್ನಿಗಮಾಂತ ಮಹಾದೇಶಿಕರು ವರದರಾಜ ಪಂಚಾಶತ್ ಸೋತ್ರದಲ್ಲಿ ತಿಳಿಸಿರುತ್ತಾರೆ.

ನಮಗೆ ಸದಾಚಾರ್ಯೋಪದೇಶದ ನಿರಂತರ ಚಿಂತನೆ ಈ ವಿರೋಧ ವರ್ಗಗಳನ್ನು ಹೋಗಲಾಡಿಸಿ "ನಿರಂಜನಃ ಪರಮಂ ಸಾಮ್ಯಮುಪೈತಿ ದಿವ್ಯಂ" ಎಂಬ ಉಪನಿಷತ್ತಿನ ಪರಿಪೂರ್ಣ ಪ್ರಯೋಜನಕ್ಕೆ ಪಾತ್ರರಾಗುವಂತೆ ಮಾಡುವುದು ನಿಶ್ಚಯ. ಕುಮಾರ ವರದಾಚಾರ್ಯರು ತಮ್ಮ ಪಿಳ್ಳೈಯಂದಾದಿಯ 7ನೇ ಪಾಶುರದಲ್ಲಿ "ಇರಾಮಾನುಶಮುನಿ ಇನ್ನುರೈಶೇರುಂ ತೂಪ್ಪುಲ್ ಪುನಿದರ್ ಎಱ ಪುಂದಿಪುಹುಂದು ತಿಹಳ್‌ನ್ನು ಪೊರುಂದಿನರೇ" ಪಾಪಗಳೇ ಇನ್ನು ಮೇಲೆ ನಿಮಗಿಲ್ಲಿ ಉಳಿಗಾಲವಿಲ್ಲ ಬೇರೆ ಜಾಗವನ್ನರಸಿಕೊಂಡು ಹೋಗಿರಿ ಏಕೆಂದರೆ ಶ್ರೀರಾಮಾನುಜರ ಶ್ರೀ ಸೂಕ್ತಿಗಳೆಂಬ ಸಮಸ್ತನದಿಗಳೂ ಸಮುದ್ರದೋಪಾದಿಯಲ್ಲಿ ಸಂಗಮಿಸುವ ವೇದಾಂತದೇಶಿಕರೆಂಬ ಆಚಾರ್ಯ ಸಾರ್ವಭೌಮರು ನನ್ನ ಬುದ್ಧಿಯಲ್ಲಿ ಹೊಕ್ಕು ಬೆಳಗಿ ನೆಲೆಯಾಗಿ ವಾಸಿಸುತ್ತಿದ್ದಾರೆ." ಯತಿಪ್ರದರ ಭಾರತೀ ರಸಭರೇಣ ನೀತಂವಯಃ" "ನಿರ್ವಿಷ್ಣಂ ಯತಿ ಸಾರ್ವಭೌಮ ವಚಸಾಂ ಆವೃತ್ತಿಭಿಃಯೌವನಂ" ಮುಂತಾದ ಶ್ರೀಮದಾಚಾರ್ಯರ ಶ್ರೀಸೂಕ್ತಿಗಳನ್ನೇ

ಪ್ರತಿಪಾದಿಸುತ್ತಾರೆ ಶ್ರೀ ಕುಮಾರವರದಾಚಾರ್ಯರು ಇಂತಹ ಮಹಾಮಹಿಮರಾದ ಆಚಾರ್ಯರ ನಿರಂತರ ಸಂಗಮ ತನಗೆ ಪುಣ್ಯಪಾಪಗಳಿಂದ ಬಿಡುಗಡೆ ಉಂಟು ಮಾಡಿ ಮುಕ್ತಿ ಪರ್ಯಂತವಾದ ಸಮಸ್ತ ಪುರುಷಾರ್ಥಗಳನ್ನು ಪಡೆಯಲು ಹೇತುವಾಗಿದೆಯೆಂದು ತಿಳಿಸುತ್ತಾರೆ.

ಶ್ರೀಮತ್ತಿರುಕ್ಕುಡಂದೈ ಆಂಡವರ್ ಸ್ವಾಮಿಗಳೂ ಮತ್ತು ಶ್ರೀಮದಹೋಬಿಲ ಮಠದಲ್ಲಿ 44ನೇ ಪೀಠಾಧಿಪತಿಯಾಗಿ ವಿರಾಜಮಾನರಾಗಿದ್ದ ಶ್ರೀ ಮುಕ್ಕೂರ್ ಅಳಹಿಯ ಶಿಂಗರ್ ಸ್ವಾಮಿಗಳು ಭಾಗವಹಿಸಿದ್ದ ರಾಜಮನ್ನಾರ್ ಕೋಯಿಲ್ ಎಂದು ಪ್ರಸಿದ್ಧವಾಗಿರುವ ಮನ್ನಾರ್ ಗುಡಿಯ ವಿದ್ವತ್ಸಭೆಯಲ್ಲಿ ನಡೆದ ವೃತ್ತಾಂತವನ್ನು ಪ್ರಕೃತದಲ್ಲಿ ಶ್ರೀರಂಗಂ ಶ್ರೀಮದಾಂಡವರ್ ಆಶ್ರಮದಲ್ಲಿ ಪೀಠವನ್ನಲಂಕರಿಸಿರುವ ಶ್ರೀ ರಂಗರಾಮಾನುಜ ಮಹಾದೇಶಿಕರ ಶ್ರೀಕಾರ್ಯಕರ್ತರಾಗಿ ಸೇವೆ ಮಾಡುತ್ತಿದ್ದ ಶ್ರೀ ನರಸಿಂಹ ರಾಘವಾಚಾರ್ಯಸ್ವಾಮಿಗಳು ದಾಸನಲ್ಲಿ ಅತ್ಯಂತ ಕುರಣೆಯೊಂದಿಗೆ ಅನುಗ್ರಹಿಸಿದುದನ್ನು ಇಲ್ಲಿ ಎಲ್ಲ ಸಜ್ಜನರೊಂದಿಗೆ ಕೂಡಿಯಿದ್ದು ಅನುಭವಿಸಲು ಇಚ್ಛಿಸಿ ಬರೆಯಲು ಅಪೇಕ್ಷಿಸುತ್ತೇನೆ. ದೊಡ್ಡದಾದ ವಿದ್ವತ್ಸಭೆಯಲ್ಲಿ ಇಬ್ಬರು ಯತಿಶ್ರೇಷ್ಠರೂ ಉಪಸ್ಥಿತರಾಗಿದ್ದಾರೆ ಶ್ರೀ ಕಾರ್ಯಕರ್ತಾ ಸ್ವಾಮಿಗಳು ಶ್ರೀಮತ್ತಿರುಕ್ಕುಡಂದೈ ಆಂಡವರ್‌ರವರ ಹಿಂದೆ ಕುಳಿತಿದ್ದಾರೆ. ಆಗ ಶ್ರೀಮದಳಹಿಯಶಿಂಗರ್‌ರವರು ವಿಶೇಷ ಶಾಸ್ತ್ರವೇತ್ತರ ಸಭೆಯನ್ನುದ್ದೇಶಿಸಿ ವಿಚಿತ್ರವಾದ ಒಂದು ಪ್ರಶ್ನೆಯನ್ನು ಕೇಳಿದರು. ಕೊಶುವುಕ್ಕು ಮೋಕ್ಷಂ ಉಂಡಾ ? ಎಪ್ಪೊವೀದು ? ಎಪ್ಪಡಿ ? ಸೊಳ್ಳೆಗೆ ಮೋಕ್ಷ ಉಂಟೇ? ಯಾವಾಗ ? ಹೇಗೆ ? ಸಭೆಯಲ್ಲಿ ಪರಿಪೂರ್ಣ ನಿಶ್ಶಬ್ದ ಆವರಿಸಿತ್ತು. ಯಾರೂ ಉತ್ತರ ಕೊಡಲಿಲ್ಲ.

ಇಬ್ಬರು ಯತಿಶ್ರೇಷ್ಠರುರುಗಳ ಹಿಂಭಾಗದಲ್ಲಿ ಕುಳಿತಿದ್ದ ಶ್ರೀ ಕಾರ್ಯಕರ್ತರು ಮೆಲುದನಿಯಲ್ಲಿ ನುಡಿದ ಉತ್ತರ "ಕಂಡಿಪ್ಪಾಹ ಉಂಡು" ನಿಶ್ಚಯವಾಗಿ ಉಂಟು. ಅಳಹಿಯಶಿಂಗರು ಎಲ್ಲರೆದುರಿಗೆ ಬಂದು ಸಭೆಯಲ್ಲಿ ನಿಂತು ಹೇಳು ಎಂದು ನಿಯಮಿಸಿದರು ಅದಕ್ಕೆ ಶ್ರೀಕಾರ್ಯಕರ್ತರು ತಮ್ಮಿಬ್ಬರಿಗೆ ಮಾತ್ರ ಕೇಳುವಂತೆ ಮೆಲುದನಿಯಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ ಸಭೆಯಲ್ಲಲ್ಲ ಎಂದು ಅರಿಕೆ ಮಾಡಿಕೊಂಡಾಗ, ಹಾಳಾಗಿ ಹೋಗಲಿ ಹೇಳಿಬಿಡು "ಶೂಲ್ಲಿತ್ತೊಲೆ" ಎಂದು ಆಜ್ಞಾಪಿಸಿದರು. 'ಅಂದಕೊಶು ಅಳಹಿಯ ಶಿಂಗರಿನ್ ತಿರುವಡಿಹಳ್ಳೆ ಪಿಡಿತ್ತು ವಿಡಾಮೆಕಡಿತ್ತುಕ್ಕೊಂಡಿರುಂದಾಲ್ ಅದರ್ಕು ಮೋಕ್ಷಂ ನಿಶ್ಚಯಂ ಉಂಡು. ಅದರ್ಕ್ಕು ಅಳಹಿಯ ಶಿಂಗರಿನ್ ತಿರುವಡಿರ್ತಾವ್ಯೆನ್ನುವೋ ಉಂಗಳ್ ಆಂಡವರ್ ತಿರುವಡಿಹಳ್ಳೆ ಪಿಡಿತ್ತು ವಿಡಾಮೆ ಕಡಿತ್ತುಕ್ಕೊಂಡಿರುನ್ದಾಲ್ ಮೋಕ್ಷಂ ಕಿಡ್ಡೆಕ್ಕಾದೋ ಆ ಸೊಳ್ಳೆಯು ಅಳಹಿಯ ಶಿಂಗರ ತಿರುವಡಿಗಳನ್ನು ಹಿಡಿದು ಬಿಡದೇ ಕಚ್ಚುತ್ತಾ ಇದ್ದರೆ ಮೋಕ್ಷನಿಶ್ಚಿತವೆಂದರು. ಅದಕ್ಕೆ ಅಳಹಿಯ ಶಿಂಗರು (ಅದೇ ಸೊಳ್ಳೆ ನಿಮ್ಮ ಆಂಡವರ್ ಸ್ವಾಮಿಗಳ ತಿರುವಡಿಗಳನ್ನು ಹಿಡಿದು ಬಿಡದೇ ಕಚ್ಚಿದರೆ ಮೋಕ್ಷವು ಸಿಗುವುದಿಲ್ಲವೇ ಅದಕ್ಕೆ ಅಳಹಿಯಶಿಂಗರ ತಿರುವಡಿಯೇ ಬೇಕೇ ? ಎಂಬ ಪ್ರಶ್ನೆಗೆ ಶ್ರೀ ಕಾರ್ಯಕರ್ತಾರವರು ಈ ಪ್ರಶ್ನೆಯು ಅಳಹಿಯಶಿಂಗರಿಂದ ಉದಯವಾದುದಾದರಿಂದ ಹಾಗೆ ಉತ್ತರ ನೀಡಿದೆ ಅದೇ ಪ್ರಶ್ನೆ ಶ್ರೀಮದಾಂಡವರ್‌ರವರಿಂದ ಬಂದಿದ್ದರೆ ಉತ್ತರ ಅವರ ಪರವಾಗಿರುತ್ತಿತ್ತು ಎಂದರು. ಆಚಾರ್ಯವತ್ತ್ಯಾ ಮುಕ್ತಾ ತಸ್ಮಾದಾಚಾರ್ಯವಾ ಭವೇತ್ ಎಂಬ ಪ್ರಮಾಣದಂತೆ ಆಚಾರ್ಯ ಸಂಬಂಧ ನೆಲೆಯಾಗಿದ್ದರೆ ಮೋಕ್ಷ ಶತಸ್ಸಿದ್ಧ ಎಂಬ ಸಿದ್ಧಾಂತವನ್ನು ಮಂಡಿಸಿ ಅಳಹಿಯ ಶಿಂಗರಿಂದ ಸೂಕ್ತ ಸನ್ಮಾನವನ್ನು ಪಡೆದರು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಮದಭಿನವರಾಮಾನುಜ ವಿಜಯು ಚಂಪು

ಶ್ರೀಮತೀ ಎ. ಕಮಲಾ ಗೋವಿಂದಾಚಾರ್ಯ
ಬೆಂಗಳೂರು

ಲಕ್ಷ್ಮೀಹಯಾಸ್ಯ ಪದೂವರಿವಸ್ಯೈ ಕಾಂತಮಾನಸಸ್ಸತತಂ ।
ಜಯತು ಶ್ರೀಮದಭಿನವರಾಮಾನುಜ ಸಂಯಮೀಂದ್ರ ಪರಕಾಲಃ ॥

ಉಪೋದ್ಘಾತಃ

ಲಕ್ಷ್ಮೀನಾಥಾರಂಭಾಂ ಯತಿಪತಿನಿಗಮಾಂಚಲಾರ್ಯಕೃತಗುಂಭಾಂ ।
ಅಸ್ಮದ್ಗುರುಪರ್ಯಂತಾಂ ಸೇವೇಽಹಂ ಗುರುಪರಂಪರಾಂ ಶಾನ್ತಾಂ ॥

(ಶ್ರೀಕೃಷ್ಣ ಬ್ರಹ್ಮತಂತ್ರಸ್ವತಂತ್ರ ಪರಕಾಲ ಸ್ವಾಮಿ)

ಲಕ್ಷ್ಮೀನಾಥನೇ ಮೊದಲಾಗಿ, ಯತಿರಾಜರು, ವೇದಾಂತದೇಶಿಕರಿಂದ ಗುಂಭಿತವಾದ ಸ್ವಾಚಾರ್ಯ ಪರ್ಯಂತವಾದ ಗುರುಪರಂಪರೆಯನ್ನು ವಂದಿಸುತ್ತೇನೆ.

ಭಗವದ್ರಾಮಾನುಜರ ಅಂಶಭೂತರಾಗಿ ಜನಿಸಿ, ಆಚಾರ್ಯ ಪರಂಪರೆಗೇ ಶಿರೋಭೂಷಣವಾಗಿಯೂ ನಿರುಪಾಧಿಕ–ದೇಶಿಕ–ಶಬ್ದವಾಚ್ಯರಾಗಿ ಬೆಳಗುತ್ತಿರುವ ನಮ್ಮ ಸ್ವಾಮಿ ವೇದಾಂತ ದೇಶಿಕರ ಚರಣ ನಳಿನಗಳಿಂದ ಹರಿದು ಬಂದ ಪರಂಪರೆಯಲ್ಲಿ ಆಚಾರ್ಯ ಸಾರ್ವಭೌಮರಾಗಿ ರಾರಾಜಿಸಿ, ಸರ್ವತಂತ್ರಸ್ವತಂತ್ರ–ಕವಿತಾರ್ಕಿಕಸಿಂಹರ ಪರಮಭಕ್ತರಾಗಿ, ಆಶ್ರಿತೋದ್ಧಾರ ಮಾಡಿ ಭಗವದ್ರಾಮಾನುಜರ ಸಾಮ್ರಾಜ್ಯವನ್ನು ಪ್ರಜ್ವಲವಾಗಿ ಬೆಳಗುವಂತೆ ಮಾಡಿದ ನಮ್ಮ ಪರಮಾಚಾರ್ಯರಾದ ಸ್ವಾಮಿ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾ ದೇಶಿಕರ ದಿವ್ಯ ಜನ್ಮನಕ್ಷತ್ರವನ್ನ ಶತಮಾನೋತ್ಸವವನ್ನೂ ಕೊಂಡಾಡುವ ಸಲುವಾಗಿ ಭಗವತ್–ಭಾಗವತ–ಆಚಾರ್ಯ ಕೃಪೆಯಿಂದ ರಚಿಸಲ್ಪಟ್ಟ ಈ ಅಕ್ಷರರಾಶಿಯು ಶ್ರೀ ಲಕ್ಷ್ಮೀ ಹಯಗ್ರೀವನ ದಿವ್ಯ ಚರಣಗಳಲ್ಲಿ ಸಮರ್ಪಿತವಾಗಿದೆ.

ಪೂರ್ವಾಚಾರ್ಯ ವಂದನಂ

ಶ್ರೀಯನ್ನು ಪುರುಷಕಾರವಾಗಿ ಇಟ್ಟುಕೊಂಡು ಪರಮಸಾಮ್ಯವನ್ನು ಪಡೆಯುವ ಮಾರ್ಗವನ್ನು ತೋರಿದ ನಮ್ಮ ಆಚಾರ್ಯರೆಲ್ಲರೂ ಸರ್ವೋತ್ಕೃಷ್ಟವಾಗಿ ಬೆಳಗುತ್ತಿರಲಿ.

ವೇದಗಳ ನಾಥನು ಶ್ರೀಹರಿಯು ಹಯನಾಗಿ
ಪಂಕ್ತಿಯಲಿ ನಿಂತಿಹನು ಮೊದಲಿಗನು ತಾನಾಗಿ
ನಿಮಿತ್ತನೂ ಪ್ರಕಾರಿಯೂ ಒಂದೆಡೆಗೆ ತಾನಾಗಿ
ಬೆಳಗುತಾ ನಿಂತಿಹನು ಶ್ರೀಯೊಡನೆ ವಿಭುವಾಗಿ

ಆಚಾರ್ಯ ಪಂಕ್ತಿಯಲ್ಲಿ ಪ್ರಥಮಾಚಾರ್ಯರುಗಳಾದ ಶ್ರೀಲಕ್ಷ್ಮೀ ಹಯಗ್ರೀವರನ್ನು ಪ್ರಥಮವಾಗಿ ಕೊಂಡಾಡುವುದು ಸಂಪ್ರದಾಯವೂ ಕರ್ತವ್ಯವೂ ಹೌದು. ವೇದಸಂರಕ್ಷಣಾರ್ಥವಾಗಿ ಶ್ರೀಹರಿಯು ಶ್ರೀ ಲಕ್ಷ್ಮೀಹಯಗ್ರೀವನಾಗಿ ಅವತರಿಸಿ, ವೇದೋಪದೇಶ ಮಾಡಿ ಪ್ರಥಮಾಚಾರ್ಯನಾಗಿ ವಿರಾಜಿಸುತ್ತಿದ್ದಾನೆ. ಈ ಸರಣಿಯಲ್ಲಿ ನಂತರ ಬರುವ ಶ್ರೀ ಮಹಾಲಕ್ಷ್ಮಿಯನ್ನು ನಾವು ಭಜಿಸುತ್ತೇವೆ. ಶ್ರೀಮನ್ನಾರಾಯಣನು ಸಮಸ್ತ ಚಿದಚಿದ್ವಸ್ತುಗಳನ್ನು ತನಗೆ ಪ್ರಕಾರವಾಗಿ ಹೊಂದಿ ತಾನು ಅವುಗಳ ಸೃಷ್ಟಿಗೆ ನಿಮಿತ್ತಕಾರಣನೂ ಆಗಿ ಸಮಸ್ತ ವೇದಗಳಲ್ಲಿ ವೇದ್ಯನಾಗಿ ಶ್ರುತ್ಯಂತದ ಎಲ್ಲ ಆಡಿಗಳಲ್ಲಿಯೂ ದೇದೀಪ್ಯಮಾನವಾಗಿ ಶ್ರೀಯೊಡನೆ ಬೆಳಗುತ್ತಿದ್ದಾನೆ.

ಪರಂಪರೆಯಲ್ಲಿ ನಂತರ ಬರುವ ಶ್ರೀಹರಿಯ ಸೇನೇಶನಾದ ವಿಶ್ವಕ್ಸೇನರ ಪಾದಪಂಕಜಗಳಲ್ಲಿ ಭ್ರಮರವಾಗಿ ಚಲಿಸಿ ಅವರ ಶಿಷ್ಯ ಪರಂಪರೆಯನ್ನು ಕೊಂಡಾಡಲು ಬಳಿಸಾರೋಣ.

ಶಠವಾಯು ಜಯಿಸಿದನು ಧರೆಗಿಳಿದ ಮಾರನು
ವೇದಕ್ಕೆ ಸಮನಾಗಿ ಸಾಸಿರವ ರಚಿಸಿದನು
ಇವ ಪಾದ ಹೊಕ್ಕಿದನು ನಾಥನು ತಾ ಬಂದು
ಯೋಗದಲಿ ಪಡೆದನು ಶ್ರುತ್ಯಂತ ಸಾರವನು

ಶಠವಾಯುವನ್ನು ಜಯಿಸಿ ಶಠಕೋಪರೆನಿಸಿಕೊಂಡ ಪಾದುಕಾವತಾರಿಯಾದ ನಮ್ಮಾಳ್ವಾರ್ ಅವರು ಅರ್ಥಪೌಷ್ಕಲ್ಯದಲ್ಲಿ ನಾಲ್ಕು ವೇದಗಳಿಗೆ ಸಮಾನವಾದ ನಾಲ್ಕು ಪ್ರಬಂಧಗಳನ್ನು ರಚಿಸಿದರು. ದಿವ್ಯಸೂರಿಗಳು ರಚಿಸಿದ ನಾಲ್ಕು ಸಾವಿರ ಪ್ರಬಂಧಗಳು ಕಾಲಕ್ರಮೇಣ ದುರ್ಗ್ರಹವಾಗಲು, ಶ್ರೀಮನ್ನಾಥಮುನಿಗಳು ಇವುಗಳನ್ನು ಪುನಃ ಸಾಕ್ಷಾತ್ಕರಿಸಿಕೊಳ್ಳಲು ಶ್ರೀ ನಮ್ಮಾಳ್ವಾರ್ ಅವರಲ್ಲಿ ನ್ಯಾಸವನ್ನು ಅನುಷ್ಠಿಸಿದರು. ಯೋಗದಶೆಯಲ್ಲಿ ನಮ್ಮಾಳ್ವಾರ್ ಅವರು ಸಮಸ್ತ ವೇದಾರ್ಥಗಳನ್ನೂ ಹಾಗು ಈ ಪ್ರಬಂಧಗಳನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಾಥಮುನಿಗಳಿಗೆ ಪ್ರಸಾದಿಸಿದರು. ಶ್ರೀವೈಷ್ಣವ ಸಸ್ಯಕೋಟಿಗೆ ದಿವ್ಯಪ್ರಬಂಧಗಳ ಮಳೆಯನ್ನು ದಯಪಾಲಿಸಿದ ನಾಥಮುನಿಗಳಿಗೆ ನಾವು ವಂದಿಸುತ್ತೇವೆ.

ಈ ಶ್ರೇಣಿಯಲ್ಲಿ ಮುಂದೆ ಪುಂಡರೀಕಾಕ್ಷರನ್ನು (ಉಯ್ಯಕ್ಕೊಂಡಾರ್) ಹಾಗು ರಾಮಮಿಶ್ರರನ್ನು ವಂದಿಸಿ, ಶ್ರೀವೈಷ್ಣವ ಸಂಪ್ರದಾಯಕ್ಕೆ ರಾಮಾನುಜರನ್ನು ಪ್ರಸಾದಿಸಬೇಕೆಂದು ಕರಿಮಾಣಿಕ್ಯವರದನಲ್ಲಿ ಪ್ರಪತ್ತಿಯನ್ನು ಅನುಷ್ಠಿಸಿದ ಯಾಮುನಾಚಾರ್ಯರನ್ನು ನಾವು ನಮಿಸುತ್ತೇವೆ.

ಗುರುವಾಜ್ಞೆಯಂತೆ ರಾಮಾನುಜರನ್ನು ಶಿಷ್ಯರನ್ನಾಗಿ ಸ್ವೀಕರಿಸಿ ಅದರಿಂದಲೇ ಪೂರ್ಣತ್ವವನ್ನು ಹೊಂದಿದ ಪೆರಿಯ ನಂಬಿಗಳಾದ ಮಹಾಪೂರ್ಣರನ್ನು ವಂದಿಸುತ್ತೇವೆ.

ಚೈತ್ರದಲಿ ಜನಿಸಿದನು ಶೇಷನು ಗುರುವಾಗಿ
ತ್ರೈಲೋಕ್ಯಪುಣ್ಯಗಳ ಸಾರಫಲ ತಾನಾಗಿ
ಎರಗಿದನು ಕೃಪೆಮಾಡಿ ದರ್ಶನವ ಮನುಕುಲಕೆ
ಸೃಜಿಸಿದನು ಮಾಲೆಯನು ಹರಿಚರಣ ಶೋಭಿಸಲು

ಚೈತ್ರಮಾಸದಲ್ಲಿ ಆರಿದ್ರಾ ಶುಭನಕ್ಷತ್ರದಲ್ಲಿ ಜನಿಸಿದ ರಾಮಾನುಜರು, ಪಂಚ ಮಹಾ ಆಚಾರ್ಯರುಗಳ ಚರಣಗಳಲ್ಲಿ ಸಮಸ್ತವನ್ನೂ ಅಧಿಕರಿಸಿಕೊಂಡು ಪರಮ ವೈದಿಕ ಶ್ರೀವೈಷ್ಣವ ಶ್ರೀಸಂಪ್ರದಾಯದ ಪುನಃ ಸ್ಥಾಪನೆಯನ್ನು ಸಫಲವಾಗಿ ನೆರವೇರಿಸಿದರು. ಯಾಮುನಾಚಾರ್ಯರ ಅಭಿಲಾಷೆಯಂತೆ ಬ್ರಹ್ಮಸೂತ್ರಗಳಿಗೆ ಬೋಧಾಯನವೃತ್ತಿಯನ್ನು ಅವಲಂಬಿಸಿದಂತೆ ಶ್ರೀಭಾಷ್ಯವನ್ನು ರಚಿಸಿ ವೇದಬಾಹ್ಯರನ್ನೂ, ಪ್ರಚ್ಛನ್ನ ಬೌದ್ಧರನ್ನೂ ಮತ್ತು ಇತರ ಅನ್ಯಮತವಾದಿಗಳನ್ನು ನಿರಸನ ಮಾಡಿದರು. ಮೂರುಲೋಕಗಳು ಮಾಡಿದ ಪುಣ್ಯಗಳ ಸಾರಫಲವಾಗಿ ತ್ರಿದಂಡ ಕಾಷಾಯಗಳೊಂದಿಗೆ ಅವತರಿಸಿದ ಸ್ವಾಮಿ ರಾಮಾನುಜರ ಚರಣಗಳಲ್ಲಿ ನಮ್ಮ ಭರವನ್ನು ಸಮರ್ಪಿಸಿ, ನಾವು ಅವರ ದಾಸ–ದಾಸರ ಪಾದ ಧೂಳಾಗಿರಲು ಪ್ರಾರ್ಥಿಸುತ್ತೇವೆ.

ರಾಮಾನುಜರ ಶಿಷ್ಯಪರಂಪರೆಯಲ್ಲಿ ಬಂದ ಎಪ್ಪತ್ತುನಾಲ್ಕು ಸಿಂಹಾಸನಾಧಿಪತಿಗಳನ್ನೂ ಹಾಗು ಅವರ ಪರಂಪರೆಗಳನ್ನು ವಂದಿಸುತ್ತೇವೆ. ಇವರೆಲ್ಲರ ಚರಣಕಮಲಗಳ ಛಾಯೆ ನಮ್ಮ ಶಿರಸ್ಸಿನ ಮೇಲೆ ಸದಾ ಕಾಲ ವಾಸಿಸಲೆಂದು ಪ್ರಾರ್ಥಿಸುತ್ತೇವೆ.

ಗರುಡಾಂಶಸಂಭೂತರಾದ ಹಾಗು ಸ್ವಾಮಿ ದೇಶಿಕರ ಆಚಾರ್ಯರಾದ ಆತ್ರೇಯ ರಾಮಾನುಜ ಅಪ್ಪುಳ್ಳಾರ್ ಅವರನ್ನು ನಾವು ವಂದಿಸುತ್ತೇವೆ.

ಜ್ಞಾನಕ್ಕೆ ವಿರಕ್ತಿಗೆ ಭೂಷಣನು ತಾನಾಗಿ
ಕವಿಕಥಕ ಸಿಂಹನೂ ದೇಶಿಕನು ತಾನಾಗಿ
ಶ್ರೀಹರಿಯ ಘಂಟಾಂಶ ಮೊಳಗಿದನು ಕಲಿಯುಗದಿ
ರಚಿಸಿದನು ಸೂಕ್ತಿಗಳನು ಶತಕ್ರತುವು ತಾನಾಗಿ

ರಾಮಾನುಜರ ಚರಣಗಳಿಂದ ಹೊರಹೊಮ್ಮಿದ ಎಲ್ಲ ಜ್ಞಾನ ಪರಂಪರೆಗಳೂ ಬಂದು ಸೇರುವ ದಿವ್ಯ ಸಂಗಮವೇ ಘಂಟಾಂಶಸಂಭೂತರಾದ ನಮ್ಮ ಸ್ವಾಮಿ ವೇದಾಂತ ದೇಶಿಕರು. ಅವರನ್ನು ಕಾಯಾ, ವಾಚಾ ಮತ್ತು ಮನಸಾ ಭಕ್ತಿಯಿಂದ ವಂದಿಸುತ್ತೇವೆ. ಅವರಿಗೆ ನಮಸ್ಕಾರ ಮಾಡದೇ ಹೋದರೆ ವಿಷ್ಣು ನಮಸ್ಕಾರವೂ ವಿಫಲವಷ್ಟೇ. ಪ್ರತಿವಾದಿ ಭಯಂಕರಂ ಅಣ್ಣನ್ ಅವರು ಈ ವಿಷಯವನ್ನು ಹೇಳುವಾಗ – "ಗುರೌ ವಾದಿಹಂಸಾಂಬುದಾಚಾರ್ಯ ಶಿಷ್ಯೇ ಜನಾ ಭಕ್ತಿಹೀನಾ ಯತೀಂದ್ರಾಪ್ರಿಯಾಸ್ಯುಃ । ಯತೀಂದ್ರಾಪ್ರಿಯಾ ವಿಷ್ಣುಕಾರುಣ್ಯ ದೂರಾ ಕುತೋಮುಕ್ತಿವಾರ್ತಾಹಿ ತಾದೃಗ್ವಿಧಾನಾಂ" ಎಂದು ಹೇಳಿ ಕೊಂಡಾಡಿದ್ದಾರೆ. ಇವರಿಗೆ ಜ್ಞಾನ ವೈರಾಗ್ಯಗಳು ಭೂಷಣವಾಗದೆ, ಇವರೇ ಜ್ಞಾನ ವೈರಾಗ್ಯಗಳಿಗೆ ಭೂಷಣವಾಗಿದ್ದರು. ಕವಿತಾರ್ಕಿಕ ಸಿಂಹರಾಗಿ, ನಿರುಪಾಧಿಕವಾದ ದೇಶಿಕ ಶಬ್ದ ವಾಚ್ಯರಾಗಿ, ನೂರಕ್ಕೂ ಅಧಿಕವಾಗಿ ಶ್ರೀಸೂಕ್ತಿಗಳನ್ನು ರಚಿಸಿ ರಾಮಾನುಜ ದರ್ಶನವನ್ನು ಆಪಾದಚೂಡ ಪರ್ಯಂತ ಅನಪಾಯಿನಿಯಾಗಿಸಿದರು. ಇಂತಹ ವೈಭವಯುತರಾದ ನಮ್ಮ ಸ್ವಾಮಿಯ ಸನ್ನಿಧಿಯಲ್ಲಿ ನಮಸ್ಕರಿಸಿ ನಮ್ಮ ಭರವನ್ನು ಅವರ ಚರಣ ನಳಿನಗಳಲ್ಲಿ ಸಮರ್ಪಿಸುತ್ತೇವೆ.

ಪರಕಾಲ ಮಠದ ಪ್ರಥಮಾಚಾರ್ಯರಾದ ಸ್ವಾಮಿ ವೇದಾಂತ ದೇಶಿಕರ ಚರಣ ನಳಿನಗಳೆಂದೇ ಪ್ರಸಿದ್ಧರಾದ ಅವರ ಕುಮಾರರೂ ಹಾಗು ಅವರ ನಂತರ ಸಂಪ್ರದಾಯ ಪ್ರವರ್ತಕರೂ ಆದ ಸ್ವಾಮಿ ಕುಮಾರ ವರದನಾಥ ನಯನಾರಾಚಾರ್ಯರ ಅಡಿದಾವರೆಗಳಲ್ಲಿ ನಮ್ಮ ವಂದನೆಗಳನ್ನು ಅರ್ಪಿಸುತ್ತೇವೆ.

ಸ್ವಾಮಿ ವೇದಾಂತ ದೇಶಿಕರ ಪಾದುಕೆಗಳೂ ಹಾಗು ಕುಮಾರ ವರದನಾಥರ ಶಿಷ್ಯರೂ, ಶ್ರೀ ಪರಕಾಲ ಮಠದ ಪ್ರಥಮ ಯತೀಶ್ವರ ಆಚಾರ್ಯರೂ ಆದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾ ದೇಶಿಕರನ್ನು ವಂದಿಸುತ್ತೇವೆ. ಈ ಸ್ವಾಮಿಯ ಚರಣಗಳಿಂದ ಹೊರ ಹೊಮ್ಮುವ ಎಲ್ಲ ಪರಂಪರೆಗಳನ್ನೂ ನಾವು ವಂದಿಸುತ್ತೇವೆ. ಈ ಸ್ವಾಮಿಯ ಪಾದಾಬ್ಜಗಳಿಂದ ನಿರರ್ಗಳವಾಗಿ ಹರಿದು ಬಂದಿರುವ ಪರಕಾಲ ಮಠದ ಆಚಾರ್ಯ ಪರಂಪರೆಯನ್ನು ನಾವು ವಂದಿಸುತ್ತೇವೆ. ಸ್ವಾಮಿ ನಿಗಮಾಂತ ಮಹಾ ದೇಶಿಕರು, ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳಿಗೆ ಕಾಲಕ್ಷೇಪ ಆಚಾರ್ಯರು, ಸಮಾಶ್ರಯಣ/ಭರನ್ಯಾಸ ಆಚಾರ್ಯರು ಹಾಗು ತುರೀಯಾಶ್ರಮ ಸ್ವೀಕಾರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆಚಾರ್ಯರು. ಹೀಗಾಗಿ ಪರಕಾಲಮಠದ ಎಲ್ಲ ಪರಂಪರೆಗಳೂ ಸ್ವಾಮಿ ದೇಶಿಕರ ಮೂಲಕ ಭಗವದ್ರಾಮಾನುಜರ ಪಾದಾಬ್ಜಗಳನ್ನು ಸೇರುತ್ತವೆ. ಇದು ಎಂತಹ ಸುಕೃತ ವಿಶೇಷ !!!

ಚತುಸ್ಸಹಸ್ರ ವ್ಯಾಖ್ಯಾತಾ ಎಂದು ಬಿರುದಾಂಕಿತರಾದ ೨೧ನೇಯ ಪಟ್ಟದ ಆಚಾರ್ಯ ಸಾರ್ವಭೌಮರಾದ ಶ್ರೀ ಮಹಾ ಪರಕಾಲ ಮಹಾ ದೇಶಿಕರನ್ನು ಭಕ್ತಿಪೂರ್ವಕವಾಗಿ ಆಶ್ರಯಿಸುತ್ತೇವೆ.

ಪ್ರಾಚಾರ್ಯ ವಂದನಂ

ಲಕ್ಷ್ಮಣನು ದೇಶಿಕನು ಒಂದೆಡೆಗೆ ತಾನಾಗಿ
ಹಯಶಿರನ ಸೇವೆಯಲಿ ನೂತನ ಶ್ರೀರಂಗನಾಗಿ
ಬೆಳಗಿಸಲು ಗೂಢಾರ್ಥಸಂಗ್ರಹದ ದೀಪವನು
ನಮಿಸುತಲಿ ನಿಂತರು ಬುಧಜನರು ನೂರಾಗಿ

ಪರಕಾಲ ಮಠದ ಪರಂಪರೆಯಲ್ಲಿ ಬಂದ ೩೩ನೇಯ ಪಟ್ಟದ ಆಚಾರ್ಯ ಸಾರ್ವಭೌಮರಾದ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾ ದೇಶಿಕರನ್ನು ನಾವು ವಂದಿಸುತ್ತೇವೆ. ಶ್ರೀಮಠದ ಸರ್ವೋತ್ಕೃಷ್ಟ ಅಭಿವೃದ್ಧಿಗೆ ಕಾರಣಭೂತರಾದ ಈ ಆಚಾರ್ಯರು ವಸಿಷ್ಠರೆಂದೇ ಪ್ರಖ್ಯಾತರಾಗಿದ್ದರು. ಅಸಂಖ್ಯಾತ ಶಿಷ್ಯವರ್ಗಗಳು ಇವರನ್ನು ಆಚಾರ್ಯರಾಗಿ ವರಿಸಿ ಕೃತಾರ್ಥರಾದರು. ಭಾಷ್ಯಕ್ಕೆ ಉಪಬೃಂಹಣರೂಪವಾಗಿ ಗೂಢಾರ್ಥಸಂಗ್ರಹವೆಂಬ ಬೃಹತ್ ಶ್ರೀಸೂಕ್ತಿಯನ್ನು ರಚಿಸಿ ಕೀರ್ತಿಮಾನ್ಯರಾಗಿದ್ದಾರೆ. ಇಂತಹ ಆಚಾರ್ಯ ರತ್ನವು ನಮಗೆ ಸದಾ ಕಾಲ ಚಿಂತಾರತ್ನವಾಗಿರಲೆಂದು ಪ್ರಾರ್ಥಿಸುತ್ತೇವೆ.

ಇವರ ಪ್ರಮುಖ ಶಿಷ್ಯರೂ ಹಾಗು ೩೪ನೇಯ ಪಟ್ಟದ ಆಚಾರ್ಯರಾದ ಶ್ರೀ ಶ್ರೀನಿವಾಸ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾ ದೇಶಿಕರನ್ನು ನಾವು ವಂದಿಸುತ್ತೇವೆ.

ಅಸ್ಮದಾಚಾರ್ಯ ವಂದನಂ

ಇನ್ನು ಈ ಚಂಪೂ ಕಾವ್ಯದ ವಿಷಯವಾಗಿರುವ ಅಸ್ಮದಾಚಾರ್ಯರಾದ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ ದಿವ್ಯ ಜೀವನ ಹಾಗು ವೈಭವಗಳನ್ನು ಕೊಂಡಾಡಿ ಕೃತಾರ್ಥರಾಗುವ.

ಅವತಾರಃ

ಘಂಟಾಂಶನೂ ಮೊಳಗಿದಾ ದಿವ್ಯ ವೇಳೆಯೋಳ್
ಜನಿಸಿದರು ಅನಂತಾರ್ಯರು ಧರೆಗೆ ಹೂವಾಗಿ

ಪಿಂಗಳ ವರ್ಷದ ಭಾದ್ರಪದದಲ್ಲಿ ಶ್ರವಣನಕ್ಷತ್ರಜನಿತರಾಗಿ ನಮ್ಮ ಸ್ವಾಮಿಯ ಜನನವಾಯಿತು. ತಿರುಮಲ್ಲೈ ರಂಗಾಚಾರ್ಯ ದಂಪತಿಗಳಿಗೆ ಜನಿಸಿದ ನಮ್ಮ ಸ್ವಾಮಿಗೆ ಅನಂತಾಚಾರ್ಯರೆಂದು ನಾಮಕರಣ ಮಾಡಲ್ಪಟ್ಟು ಬಾಲ್ಯದಿಂದಲೇ ಮಹಾ ಮೇಧಾವಿಗಳಾಗಿ ಬೆಳಗಿದರು. ಇವರು ಶ್ರೀಮಾನ್ ತಿರುಮಲ್ಲೈ ಕೃಷ್ಣಮಾಚಾರ್ಯರನ್ನು ಆಶ್ರಯಿಸಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಇವರ ಅನುಗ್ರಹದಿಂದ ಚೌಲೋಪನಯನಾದಿ ಸಂಸ್ಕಾರಗಳನ್ನು ಪಡೆದರು. ಹೀಗೆ ಬಾಲ್ಯ ವಿದ್ಯಾಭ್ಯಾಸವನ್ನು ಚಿಕ್ಕಬಳ್ಳಾಪುರದಲ್ಲಿ ಮುಗಿಸಿ, ಪ್ರೌಢ ಶಿಕ್ಷಣೆಗಾಗಿ ಮೈಸೂರಿಗೆ ಬಂದು ಪರಕಾಲ ಮಠಾಧೀಶರಾದ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳನ್ನು ಆಶ್ರಯಿಸಿದರು. ಶ್ರೀ ಅನಂತಾಚಾರ್ಯರು ಸ್ವಾಮಿಗಳ ಚರಣಗಳನ್ನು ಆಶ್ರಯಿಸಿ ಚಕ್ರಾಂಕನ ಮಂತ್ರೋಪದೇಶಗಳನ್ನು ಪಡೆದು ಸಂಸ್ಕೃತ ಉಚ್ಚ ಶಿಕ್ಷಣಕ್ಕಾಗಿ ಸಂಸ್ಕೃತ ಪಾಠಶಾಲೆಯನ್ನು ಸೇರಿದರು. ಅನಂತಾಚಾರ್ಯರು ವೇದಾಂತ ವ್ಯಾಕರಣಾದಿಗಳನ್ನು ಸಾಂಗವಾಗಿ ವ್ಯಾಸಂಗ ಮಾಡಿ ಆಚಾರ್ಯರ ಕೃಪೆಗೆ ಪಾತ್ರರಾದರು.

ಕಾಲಕ್ಷೇಪಾರಂಭಃ

ಶ್ರೀಹಯನ ಪ್ರಭೆಯಂತೆ ಧರೆಯೊಳಗೆ ತಾ ಬೆಳಗಿ
ಅವಪದವನರ್ಚಿಸುತಲಿ ಮಿನುಗಿದರು ಗುರುವಾಶ್ರಯದಿ

ವೈರಾಗ್ಯಾಚಾರಾನುಷ್ಠಾನ ಮತ್ತು ವೈದುಷ್ಯದಿಂದ ಬೆಳಗುತ್ತಿದ್ದ ಅನಂತಾಚಾರ್ಯರು ಅಭಿನವ ರಂಗನಾಥರ ಅಡಿದಾವರೆಗಳಲ್ಲಿ ಭರಸಮರ್ಪಣವನ್ನು ಅನುಷ್ಠಿಸಿ ವೇದಾಂತ ಸಂಪ್ರದಾಯಗ್ರಂಥಗಳ ಕಾಲಕ್ಷೇಪವನ್ನು ಸಾಂಗೋಪಾಂಗವಾಗಿ ಮುಗಿಸಿದರು. ಇದರ ಫಲವಾಗಿ ಶ್ರೀಮಠದಲ್ಲಿ ಶ್ರೀ ಲಕ್ಷ್ಮೀಹಯಗ್ರೀವನ ಆರಾಧನವನ್ನು ಮಾಡುವ ಸದಾವಕಾಶ ಲಭಿಸಿತು. ತದನಂತರ ಅನೇಕ ಪಾಠಶಾಲೆಗಳಲ್ಲಿ ಸಂಸ್ಕೃತ ಪಂಡಿತರಾಗಿ ಸೇವೆ ಸಲ್ಲಿಸಿದರು. ಸಂಸ್ಕೃತ, ತಮಿಳು, ಕನ್ನಡ, ತೆಲುಗು ಮತ್ತು ಆಂಗ್ಲ ಭಾಷೆಗಳಲ್ಲಿ ಅತ್ಯುತ್ತಮ ಪಾಂಡಿತ್ಯದೊಂದಿಗೆ ವಿರಾಜಮಾನರಾಗಿದ್ದರು.

ತುರೀಯಾಶ್ರಮ ಸ್ವೀಕಾರಃ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

೧೯೭೧, ವಿರೋಧಿಕೃತ್ ಜ್ಯೇಷ್ಠ ಶುದ್ಧ ದಶಮಿಯಲ್ಲಿ ಶ್ರೀಮದಭಿನವ ಶ್ರೀನಿವಾಸ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು ಅನಂತಾಚಾರ್ಯರಿಗೆ ತುರೀಯಾಶ್ರಮವನ್ನು ಪ್ರಸಾದಿಸಿದರು. ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾ ದೇಶಿಕಃ ಎಂಬ ನಾಮಧೇಯದಿಂದ ತ್ರಿವಿಕ್ರಮನಂತೆ ಬೆಳಗಿದರು. ಆರಾಧನ ಕಾಲಕ್ಷೇಪಾದಿಗಳಲ್ಲಿ ಹಾಗು ಶಿಷ್ಯವರ್ಗಗಳಿಗೆ ಸಮಾಶ್ರಯಣ, ಪ್ರಪತ್ತಿ ಹಾಗು ಮಂತ್ರೋಪದೇಶಗಳನ್ನು ಪ್ರಸಾದಿಸುವುದರಲ್ಲಿ ನಿರತರಾದರು.

ದಿವ್ಯಕ್ಷೇತ್ರ ಮಂಗಳಾಶಾಸನಂ

ತದನಂತರ ನಮ್ಮ ಸ್ವಾಮಿಗಳು ದಿವ್ಯದೇಶ ಪರ್ಯಟನೆಯನ್ನು ಕೈಗೊಂಡರು. ಆಸೇತು ಹಿಮಾಚಲವನ್ನು ಸಂಚರಿಸಿ ರಾಮಾನುಜ ಸಂಪ್ರದಾಯವನ್ನು ಸಾರುತ್ತಲಿ ಶಿಷ್ಯಕೋಟಿಯನ್ನು ಉದ್ಧರಿಸಿದರು.

ಆಚಾರ್ಯ ವೈಭವಂ

ನಮ್ಮ ಸ್ವಾಮಿಯ ಆರಾಧ್ಯ ದೈವ ಶ್ರೀ ಲಕ್ಷ್ಮೀ ಹಯಗ್ರೀವ. ಶ್ರೀ ಹಯಗ್ರೀವನ ಅವತಾರ ನಕ್ಷತ್ರವು ಶ್ರವಣ. ಶ್ರೀ ಲಕ್ಷ್ಮೀಹಯಗ್ರೀವನ ಅಪರಾವತಾರಿಯೂ, ಶ್ರೀ ಪರಕಾಲ ಮಠದ ಆದಿಗುರುಗಳೂ ಹಾಗು ಪರಕಾಲ ಮಠದ ಶ್ರೀಧನವೂ ಆರಾಧ್ಯಮೂರ್ತಿಯೂ ಆದ ಶ್ರೀ ಲಕ್ಷ್ಮೀ ಹಯಗ್ರೀವನನ್ನು ಅನುಗ್ರಹಿಸಿದವರು ಸ್ವಾಮಿ ವೇದಾಂತ ದೇಶಿಕರು. ಇವರ ಅವತಾರ ನಕ್ಷತ್ರವೂ ಶ್ರವಣವೇ. ಪರಕಾಲ ಮಠದ ಪ್ರಥಮ ಯತೀಶ್ವರ ಆಚಾರ್ಯರೂ ಶ್ರೀ ವೇದಾಂತ ದೇಶಿಕರ ಶಿಷ್ಯರೂ ಆದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾ ದೇಶಿಕರ ಜನ್ಮ ನಕ್ಷತ್ರವೂ ಶ್ರವಣವೇ. ಈ ಪರಂಪರೆಯಲ್ಲಿ ಬಂದ ಗುಣವೈಶಿಷ್ಟ್ಯಪೂರ್ಣರಾದ ನಮ್ಮ ಸ್ವಾಮಿಗಳು ಸ್ವಾಮಿ ದೇಶಿಕರಂತೆಯೇ ಶ್ರವಣ ನಕ್ಷತ್ರದಲ್ಲಿ ಜನಿಸಿದ ಮಹನೀಯರು. ಶ್ರವಣ ನಕ್ಷತ್ರದ ಪ್ರಭಾವವು ನಮ್ಮ ಸ್ವಾಮಿಯ ಮೇಲೆ ಸರ್ವೋತ್ಕೃಷ್ಟವಾಗಿರುವುದನ್ನು ನಾವು ಕಾಣಬಹುದು. ಶ್ರವಣ ನಕ್ಷತ್ರಕ್ಕೆ ಅಧಿದೇವತೆ ಶ್ರೀ ತ್ರಿವಿಕ್ರಮನು. ಈ ಕಾರಣವೇ ಇರಬಹುದು, ನಮ್ಮ ಸ್ವಾಮಿಯು ಜ್ಞಾನಾನುಷ್ಠಾನವೈರಾಗ್ಯಗಳಲ್ಲಿ ತ್ರಿವಿಕ್ರಮನಂತೆ ಬೆಳಗಿದರು.

ಪರಮಾತ್ಮ ಸಾಮ್ಯಂ

ಸ್ವಾಮಿ ದೇಶಿಕರು ಭಾಷ್ಯವನ್ನು ಅವಲಂಬಿಸಿ ಬ್ರಹ್ಮಸೂತ್ರಾರ್ಥಗಳನ್ನು ಸಚ್ಛಿಷ್ಯರಿಗೆ ಉಪದೇಶಿಸಲು ಶರೋರೂಪವಾದ ಅಧಿಕರಣಸಾರಾವಳೀ ಎಂಬ ಅದ್ಭುತ ಶ್ರೀಸೂಕ್ತಿಯನ್ನು ಅನುಗ್ರಹಿಸಿದ್ದಾರೆ. ಈ ಶ್ರೀಸೂಕ್ತಿಯ ಶಾಸ್ತ್ರಾವತಾರದಲ್ಲಿ ಸ್ವಾಮಿಯು ಒಂದೇ ಪದ್ಯದಲ್ಲಿ ಪರಮಪುರುಷನ ಅಖಿಲಹೇಯಪ್ರತ್ಯನೀಕ-ಕಲ್ಯಾಣಗುಣವಿಶಿಷ್ಟತ್ವವನ್ನು ವೇದವ್ಯಾಸವಿರಚಿತ ಬ್ರಹ್ಮಸೂತ್ರದ ೧೬ ಪಾದಗಳ ಸಮಸ್ತ ಅರ್ಥಗಳನ್ನು ಅನುಗ್ರಹಿಸಿದ್ದಾರೆ. ಈ ಪದ್ಯದ ಅಡಿಗಳಲ್ಲಿ ಬ್ರಹ್ಮಸೂತ್ರದ ೧೬ ಪಾದಗಳ ಅರ್ಥಗಳು ವಿಚಾರಿಸಲ್ಪಟ್ಟಿದೆ. ಈ ಎಲ್ಲ ಪಾದಗಳಲ್ಲಿಯೂ ಶ್ರೀಹರಿಯ ಗುಣವೈಶಿಷ್ಟ್ಯಾದಿಗಳೇ ಕೊಂಡಾಡಲ್ಪಟ್ಟಿದೆ ಎಂದು ಸ್ವಾಮಿಯು ಸಂದೇಹಕ್ಕೆ ಆಸ್ಪದವಿಲ್ಲದಂತೆ ಪರಮವೈದಿಕ ಶ್ರೀವೈಷ್ಣವ ಶ್ರೀಸಂಪ್ರದಾಯದ ಪೂರ್ವಾಚಾರ್ಯರುಗಳ ಶುಭಾಭಿಪ್ರಾಯವನ್ನು ಅವಲಂಬಿಸಿ ಆಪಾದಚೂಡಮನಪಾಯಭೂತವಾಗಿ ಸಂಸ್ಥಾಪಿಸಿರುತ್ತಾರೆ.

ಸ್ರಷ್ಟಾ ದೇಹೀ ಸ್ವನಿಷ್ಠಃ ನಿರವಧಿಮಹಿಮಾ ಆಪಾಸ್ತಬಾಧಃ ಶ್ರಿತಾಪ್ತಃ
ಖಾತ್ಮಾ ದೇಹೇಂದ್ರಿಯಾದೇಃ ಉಚಿತಜನನಕೃತ್ ಸಂಸೃತೌ ತಂತ್ರವಾಹೀ
ನಿರ್ದೋಷತ್ವಾದಿರಮ್ಯೇ ಬಹುಭಜನಪದಂ ಸ್ವಾರ್ಹ ಕರ್ಮಪ್ರಸಾದ್ಯಃ
ಪಾಪಛಿತ್ ಬ್ರಹ್ಮನಾಡೀಗತಿಕೃತ್ ಅತಿವಹನ್ ಸಾಮ್ಯದಶ್ಚಾತ್ರವೇದ್ಯಃ

(ಶ್ರೀ ಅಧಿಕರಣಸಾರಾವಳೀ – ಶಾಸ್ತ್ರಾವತಾರ – ೧೯)

ತಾತ್ಪರ್ಯ –

ನಿಮಿತ್ತ ಕಾರಣ – ಉಪಾದಾನ ಕಾರಣ – ಸರ್ವಾಧಾರಿ – ಎಲ್ಲೆಯಿಲ್ಲದ ಮಹಿಮೆಯುಳ್ಳವನು – ಬಾಧೆಗಳಿಂದ ಎಂದಿಗೂ ಅಸ್ಪರ್ಶನು – ಆಶ್ರಿತರಿಗೆ ಆಪ್ತನು – ಆದ್ವಾರಕ ಸೃಷ್ಟಿಕರ್ತಾ – ಸದ್ವಾರಕ ಸೃಷ್ಟಿಕರ್ತಾ – ಸಂಸಾರಚಕ್ರವನ್ನು ನಡೆಸುವವನು – ದೋಷಗಳಿಂದ ಅಸ್ಪರ್ಶನಾದವನು – ಬುಧಜನರಿಂದ ಕೊಂಡಾದಲ್ಪಡುವವನು – ವರ್ಣಾಶ್ರಮಗಳಿಗನುಗುಣವಾಗಿ ಜೀವನಿಗೆ ಕರ್ಮಗಳನ್ನು ಪ್ರಸಾದಿಸುವವನು – ಪಾಪವನ್ನು ನೀಗಿಸುವವನು – ಬ್ರಹ್ಮನಾಡಿಯ ಮೂಲಕ ಜೀವನನ್ನು ಮೇಲೊಯ್ಯುವನು – ಅತಿವಾಹಕರ ಮೂಲಕ ಜೀವನನ್ನು ಅರ್ಚಿರಾದಿಯಲ್ಲಿ ನಡೆಸುವವನು – ಮುಕ್ತದೆಶೆಯಲ್ಲಿ ಜೀವನಿಗೆ ಸಾಮ್ಯ ಸಾಯುಜ್ಯ ಹಾಗು ಸಾಮೀಪ್ಯವನ್ನು ಪ್ರಸಾದಿಸುವವನು.

ಇದೇ ತಾತ್ಪರ್ಯವನ್ನು ಸ್ವಾಮಿ ದೇಶಿಕರ ಹಸ್ತಿಗಿರಿ ಮಹಾತ್ಮ್ಯದಲ್ಲಿಯೂ ೧೯ ನೇಯ ಪದ್ಯದಲ್ಲಿ ಕಾಣಬಹುದು.

ಈ ಗುಣವೈಶಿಷ್ಟ್ಯಗಳು ಪರಮನಿಗೆ ಮಾತ್ರವಲ್ಲದೆ ರಾಮಾನುಜ ಸಂಪ್ರದಾಯವನ್ನು ಅವಲಂಬಿಸಿರುವ ಸದಾಚಾರ್ಯರೆಲ್ಲರಿಗೂ ಸಂಪೂರ್ಣವಾಗಿ ಹೋಲುವುದು. "ಏತ್ತಿ ಮನತ್ತೆಟ್ರಿಲ್ ..." ಇತ್ಯಾದಿ ಪದ್ಯದಲ್ಲಿ ನಮ್ಮ ಸ್ವಾಮಿ ದೇಶಿಕರು, ಸದಾಚಾರ್ಯರ ಮಹಿಮೆಯನ್ನೂ, ಸದಾಚಾರ್ಯರು ನಮಗೆ ಮಾಡುವ ಉಪಕಾರವನ್ನೂ ಹಾಗು ಅಂತಹ ಸದಾಚಾರ್ಯರಿಗೆ ನಾವು ಮಾಡಬೇಕಾದ ಕೈಂಕರ್ಯಗಳನ್ನು ಸ್ಪಷ್ಟವಾಗಿ ನಿರ್ವಹಿಸಿದ್ದಾರೆ. ಪೂರ್ವಾಚಾರ್ಯರ ಈ ಉಪದೇಶವನ್ನು ಅವಲಂಬಿಸಿ, ನಮ್ಮ ಪರಮಾಚಾರ್ಯರಾದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಸ್ವಾಮಿಗಳ ವಿಷಯದಲ್ಲಿ ಬ್ರಹ್ಮಸೂತ್ರದ ಕಲ್ಯಾಣಗುಣಗಳು ಹೋಲುವ ರೀತಿಯನ್ನು ಇನ್ನು ನಾವು ಕೊಂಡಾಡಿ ಆನಂದಿಸೋಣ.

ನಮ್ಮ ಸ್ವಾಮಿಯು ಸಂಪ್ರದಾಯ ಪ್ರವರ್ತಕರೂಪವಾದ ಅನೇಕ ಶ್ರೀ ಸೂಕ್ತಿಗಳನ್ನು ರಚಿಸಿದ್ದಾರೆ. ಆದ್ದರಿಂದ ಅವರಿಗೆ 'ಸ್ರಷ್ಟಾ' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

'ಜ್ಞಾನೀತ್ವಾತ್ಮೈವ ಮೇ ಮತಂ' ಎನ್ನುವ ಗೀತಾಚಾರ್ಯನ ವಾಕ್ಯಿನಂತೆ, ಪರಿಪೂರ್ಣ ಬ್ರಹ್ಮಜ್ಞಾನಿಗಳಾದ ನಮ್ಮ ಆಚಾರ್ಯವರ್ಯರು ಪರಮನಿಗೇ ಆತ್ಮಾವಾದ ಕಾರಣ ಅವರಿಗೆ 'ದೇಹೀ' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ತತ್ತ್ವ ಹಿತ ಪುರುಶಾರ್ಥಗಳ ಸಂಪೂರ್ಣ ಜ್ಞಾನವನ್ನು ಉಳ್ಳವರು ನಮ್ಮ ಸ್ವಾಮಿ. ಅವರ ಕಲ್ಯಾಣ ಗುಣಗಳು ಎಣಿಸಲಸಾಧ್ಯ. ಅವರ ಮಹಿಮೆಯು ಅಪಾರವಾದುದು ಮತ್ತು ಎಲ್ಲೆ ಇಲ್ಲದ್ದು. ಆದ್ದರಿಂದ ನಮ್ಮ ಸ್ವಾಮಿಗೆ 'ಸ್ವನಿಷ್ಠಃ' ಮತ್ತು 'ನಿರವಧಿಮಹಿಮಾ' ಎನ್ನುವ ಕಲ್ಯಾಣ ಗುಣಗಳು ಸಂಪೂರ್ಣವಾಗಿ ಹೋಲುತ್ತದೆ.

ಈ ರೀತಿಯಾಗಿ ಬ್ರಹ್ಮಸೂತ್ರಗಳ ಮೊದಲನೆಯ ಅಧ್ಯಾಯದ ನಾಲ್ಕು ಪಾದಗಳ ಕಲ್ಯಾಣ ಗುಣಗಳಿಂದ ನಮ್ಮ ಸ್ವಾಮಿಯು ಕೊಂಡಾಡಪಟ್ಟಿರುತ್ತಾರೆ. ನಮ್ಮ ಸ್ವಾಮಿಯ ಮುಖಮಂಡಲವು ನಮ್ಮ ಮನಸ್ಸಿನಲ್ಲಿ ಸದಾ ಕಾಲ ವಾಸಿಸಲಿ.

ನಮ್ಮ ಆಚಾರ್ಯರು ಸನಾತನವಾದ ಪರಮ ವೈದಿಕ ಶ್ರೀವೈಷ್ಣವ ಶ್ರೀ ಸಂಪ್ರದಾಯವನ್ನು ಸಂಪೂರ್ಣವಾಗಿ ಅವಲಂಬಿಸಿದವರು. "ತತ್ತ್ವೇಷು ನಿಶ್ಚಿತಧಿಯೋ ವಯಮೇವ ನಾನ್ಯೇ" ಎನ್ನುವ ದೇಶಿಕ ವಾಕ್ಯಿನಂತೆ ದೃಢವಾದ ತತ್ತ್ವ ಜ್ಞಾನವನ್ನು ಉಳ್ಳವರು. ಆದ್ದರಿಂದ ವೇದ ವಿರುದ್ಧವಾದ ಅನ್ಯ ಮತಗಳ ಬಾಧೆಯೇ ಇಲ್ಲದವರಾಗಿದ್ದರು. ಆದ್ದರಿಂದ ನಮ್ಮ ಸ್ವಾಮಿಗೆ 'ಅಪಾಸ್ತಬಾಧಃ' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ನಮ್ಮ ಸ್ವಾಮಿಯ ಚರಣಗಳನ್ನು ಅನೇಕ ಬುಧಜನರು ಆಶಯಿಸಿ ಬಂದಿರುವರು. ಅಂತಹ ಶಿಷ್ಯರಿಗೆ ಸಮಾಶ್ರಯಣ, ಮಂತ್ರೋಪದೇಶ, ಪ್ರಪತ್ತಿಗಳನ್ನು ಅನುಗ್ರಹಿಸಿ ಅವರಿಗೆ ಆಪ್ತರಾಗಿ ಇರುವವರು ನಮ್ಮ ಸ್ವಾಮಿ. ಆದ್ದರಿಂದ ನಮ್ಮ ಸ್ವಾಮಿಗೆ 'ಶ್ರಿತಾಪ್ತಃ' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ತನ್ನನ್ನು ಆಶ್ರಯಿಸಿ ಬರುವ ಶಿಷ್ಯರ ಹೃದಯದಲ್ಲಿ, ತಮ್ಮ ಉಪದೇಶಗಳ ಮೂಲಕ ಭಕ್ತಿ ಎನ್ನುವ ಪ್ರಜ್ವಲವಾದ ಆಕಾಶವನ್ನು ಸೃಷ್ಟಿಸಿದ ಕಾರಣ ಸ್ವಾಮಿಗೆ 'ಖಾತ್ಮಾ ಉಚಿತಜನನಕೃತ್' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ಸಮಾಶ್ರಯಣ ಮತ್ತು ಭರಸಮರ್ಪಣಾದಿಗಳಿಗೆ ಅವಶ್ಯಕವಾಗಿರುವ ಅಂಗಗಳನ್ನು, ರಹಸ್ಯ ಉಪದೇಶಗಳ ಮೂಲಕ ಉಚಿತ ರೀತಿಯಲ್ಲಿ ನಮ್ಮ ಸ್ವಾಮಿಯು ಅನುಗ್ರಹಿಸುತ್ತಾರೆ. ಆದ್ದರಿಂದ ನಮ್ಮ ಸ್ವಾಮಿಗೆ 'ದೇಹೇಂದ್ರಿಯಾದೇಃ ಉಚಿತಜನನಕೃತ್' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ಈ ರೀತಿಯಾಗಿ ಬ್ರಹ್ಮಸೂತ್ರಗಳ ಎರಡನೇಯ ಅಧ್ಯಾಯದ ನಾಲ್ಕು ಪಾದಗಳ ಕಲ್ಯಾಣ ಗುಣಗಳಿಂದ ನಮ್ಮ ಸ್ವಾಮಿಯು ಕೊಂಡಾಡಪಟ್ಟಿರುತ್ತಾರೆ. ನಮ್ಮ ಸ್ವಾಮಿಯ ಚರಣ ನಳಿನಗಳು ನಮ್ಮ ಹೃದಯದಲ್ಲಿ ಸದಾ ಕಾಲ ವಾಸಿಸಲಿ.

ಪರಮನೊಬ್ಬನೇ ಸಂಸಾರ ಚಕ್ರವನ್ನು ನಡೆಸುವವನು. ಬೇರೆ ವರ್ಗಗಳಲ್ಲಿ ಯಾರಿಗೂ ಜಗದ್ವ್ಯಾಪಾರದಲ್ಲಿ ಅನ್ವಯವಿಲ್ಲ. ಆದರೆ ಸಂಸಾರದಲ್ಲಿರುವ ಒಬ್ಬ ಪ್ರಪನ್ನನನ್ನು, ಆಚಾರ್ಯರು ಅವರ ಉಪದೇಶಗಳ ಮೂಲಕ ಪಂಚಕಾಲ ಪಥದಲ್ಲಿ ನಡೆಸಿಕೊಂಡು ಹೋಗುತ್ತಾರೆ. ಆದ್ದರಿಂದ ನಮ್ಮ ಸ್ವಾಮಿಗೆ 'ಸಂಸೃತೌ ತಂತ್ರವಾಹೀ' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ನಮ್ಮ ಸ್ವಾಮಿಯು ಯಾವ ವಿಧವಾದ ದೋಷಗಳೂ ಇಲ್ಲದವರು. ಆಚಾರಾನುಷ್ಠಾನದಲ್ಲಿ ನಿರತವಾಗಿದ್ದು, ದಿವ್ಯಸೂರಿಗಳು ಹಾಡಿ ಕೊಂಡಾಡಿರುವ ದಿವ್ಯದೇಶಗಳನ್ನು ಸೇವಿಸಿ ಅಲ್ಲಿಯೇ ಇದ್ದು ಶಿಷ್ಯ ರಕ್ಷಣೆ ಮಾಡಿದವರು ನಮ್ಮ ಸ್ವಾಮಿ. ಆದ್ದರಿಂದ ನಮ್ಮ ಸ್ವಾಮಿಗೆ 'ನಿರ್ದೋಷತ್ವಾದಿ ರಮ್ಯೇ' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ನಮ್ಮ ಸ್ವಾಮಿಯ ಕಲ್ಯಾಣ ಗುಣಗಳು ಎಣಿಸಲಸಾಧ್ಯ. ಇವನ್ನು ಅನೇಕ ಬುಧಜನರು ಹಾಡಿ ಅನುಭವಿಸಿದ್ದಾರೆ. ಆದ್ದರಿಂದ ನಮ್ಮ ಸ್ವಾಮಿಗೆ 'ಬಹುಭಜನಪದಂ' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ಸಂಧ್ಯಾವಂದನಾದಿ ಕರ್ಮಗಳು ನಿತ್ಯ ನೈಮಿತ್ತಿಕ ಎಂದು ಪ್ರಸ್ಥಾನಗಳು ಉದ್ಘೋಷಿಸುತ್ತವೆ. ಇವುಗಳನ್ನು ತ್ಯಜಿಸುವುದು ಅವದ್ಯ. ಇವುಗಳನ್ನು ಎಡೆಬಿಡದೆ ಅನುಷ್ಠಿಸಬೇಕೆಂಬುದು ನಮ್ಮ ಸ್ವಾಮಿಯ ಬಹು ಮುಖ್ಯವಾದ ಉಪದೇಶ. ಆದ್ದರಿಂದ ನಮ್ಮ ಸ್ವಾಮಿಗೆ 'ಸ್ವಾರ್ಹಕರ್ಮ ಪ್ರಸಾದ್ಯಃ' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ಈ ರೀತಿಯಾಗಿ ಬ್ರಹ್ಮಸೂತ್ರಗಳ ಮೂರನೇಯ ಅಧ್ಯಾಯದ ನಾಲ್ಕು ಪಾದಗಳ ಕಲ್ಯಾಣ ಗುಣಗಳಿಂದ ನಮ್ಮ ಸ್ವಾಮಿಯು ಕೊಂಡಾಡಪಟ್ಟಿರುತ್ತಾರೆ. ನಮ್ಮ ಸ್ವಾಮಿಯ ಉಪದೇಶಗಳು ನಮಗೆ ಸದಾಕಾಲ ದಾರಿದೀಪವಾಗಿರಲಿ.

ಕರ್ಮವಶ್ಯರಾಗಿ ಸಂಸಾರದಲ್ಲಿ ಬಳಲುತ್ತಿರುವ ಜೀವರುಗಳಿಗೆ ನಮ್ಮ ಸ್ವಾಮಿಯು, ರಹಸ್ಯ ಉಪದೇಶಗಳ ಮೂಲಕ ಉಪಾಯ ಮತ್ತು ಉಪೇಯ ಸ್ವರೂಪಗಳನ್ನು ಬೋಧಿಸಿ ಪ್ರಪತ್ತಿಯನ್ನು ಅನುಷ್ಠಿಸುವಂತೆ ಅನುಗ್ರಹಿಸುತ್ತಾರೆ. ಇದರ ಫಲವಾಗಿ ಈ ಜೀವರುಗಳು ಎಲ್ಲಾ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪಾಪಗಳಿಂದಲೂ ಮುಕ್ತರಾಗಿ, ಅವರ ದೇಹಾವಸಾನದಲ್ಲಿ ಬ್ರಹ್ಮನಾಡಿಯ ಮೂಲಕ ಊರ್ಧ್ವದಿಕ್ಕಿನಲ್ಲಿ ಹೊರ ಹೊರಟು ಅರ್ಚಿರಾದಿ ಮಾರ್ಗದಲ್ಲಿ ಚಲಿಸಿ ಪರಮಪದವನ್ನು ಹೊಂದುತ್ತಾರೆ. ಜೀವರುಗಳು ಪರಮಪದವನ್ನು ಹೊಂದಿದಮೇಲೆ ಪರಮನೊಡನೆ ಆನಂದ ಸಾಮ್ಯದಲ್ಲಿ ಪಾಲ್ಗೊಳ್ಳುತ್ತಾರೆ. ಆದ್ದರಿಂದ ನಮ್ಮ ಸ್ವಾಮಿಗೆ 'ಪಾಪಭಿತ್', 'ಬ್ರಹ್ಮನಾಡೀಗತಿಕೃತ್' ಮತ್ತು 'ಅತಿವಹನ್' ಎನ್ನುವ ಕಲ್ಯಾಣ ಗುಣಗಳು ಸಂಪೂರ್ಣವಾಗಿ ಹೋಲುತ್ತದೆ.

ನಮ್ಮ ಸ್ವಾಮಿ ಅವರ ಉಪದೇಶಗಳ ಮೂಲಕ, ಜೀವರುಗಳಿಗೆ ಈ ಜಗತ್ತಿನಲ್ಲಿಯೇ ಬ್ರಹ್ಮಾನಂದವನ್ನು ಅನುಭವಿಸುವಂತೆ ಮಾಡುತ್ತಾರೆ. ಆದ್ದರಿಂದ ನಮ್ಮ ಸ್ವಾಮಿಗೆ 'ಸಾಮ್ಯದಃ' ಎನ್ನುವ ಕಲ್ಯಾಣ ಗುಣವು ಸಂಪೂರ್ಣವಾಗಿ ಹೋಲುತ್ತದೆ.

ಈ ರೀತಿಯಾಗಿ ಬ್ರಹ್ಮಸೂತ್ರಗಳ ನಾಲ್ಕನೇಯ ಅಧ್ಯಾಯದ ನಾಲ್ಕು ಪಾದಗಳ ಕಲ್ಯಾಣ ಗುಣಗಳಿಂದ ನಮ್ಮ ಸ್ವಾಮಿಯು ಕೊಂಡಾಡಪಟ್ಟಿರುತ್ತಾರೆ. ನಮ್ಮ ಸ್ವಾಮಿಯ ಚರಣ ನಳಿನಗಳು ನಡೆದಿರುವ ಪಥದಲ್ಲಿ ಧೂಳಾಗುವ ಸುಕೃತವು ನಮ್ಮೆಲ್ಲರಿಗೂ ಲಭಿಸಲಿ.

ಪ್ರಾರ್ಥನಂ

ಸೂರ್ಯನ ಸಮ್ಮುಖದಲ್ಲಿ ತಾವರೆಯು ಅರಳುವಂತೆ, ಆಚಾರ್ಯರೆಂಬ ಸೂರ್ಯರ ಕಾಂತಿಯಿಂದ ಒಬ್ಬ ಜೀವಾತ್ಮನಲ್ಲಿ ಜ್ಞಾನವೆಂಬ ನಳಿನವು ವಿಕಸಿತವಾಗುತ್ತದೆ. ನಮ್ಮ ಆಚಾರ್ಯರ ಉಪದೇಶಗಳು ನಮಗೆ ವಾಕ್ ಶುದ್ಧಿಯನ್ನು ಹಾಗು ಹೃದಯ ಶುದ್ಧಿಯನ್ನು ಅನುಗ್ರಹಿಸಲಿ. ನಮ್ಮ ಕಣ್ಣಿಗೆ ಅವರ ಶ್ರೀ ಚರಣಾರವಿಂದವು ಎಂದೆಂದಿಗೂ ರಕ್ಷಕ ದೀಪದಂತೆ ಬೆಳಗಲಿ. ನಮ್ಮ ಸ್ವಾಮಿಯ ಅನುಗ್ರಹದಿಂದ ಮನೋಜ್ಞವಾದ ಬ್ರಹ್ಮಜ್ಞಾನದ ಪ್ರವಾಹವು ಮರುಳುಗಾಡಿನಂತಿರುವ ನಮ್ಮ ಬುದ್ಧಿಯನ್ನು ಬಂದು ಸೇರಲಿ.

ಉಪಸಂಹಾರ

ಪರಮನಂತೆಯೇ ನಮ್ಮ ಆಚಾರ್ಯರ ವೈಭವವೂ ಎಲ್ಲೆಯಿಲ್ಲದ ಸಮುದ್ರದಂತೆ. ಎಷ್ಟು ಬರೆದು ಕೊಂಡಾಡಿದರೂ ಆ ಸಮುದ್ರದ ಎಲ್ಲೆಯು ನಮಗೆ ಗೋಚರವಾಗುವುದಿಲ್ಲ. ವೇದಗಳೇ "ಯತೋ ವಾಚೋ ನಿವರ್ತಂತೇ" ಎಂದು ತಿಳಿಸಿರುವಂತೆ ನಾವು ನಮ್ಮ ಆಚಾರ್ಯರನ್ನು ಸಂಪೂರ್ಣವಾಗಿ ಕೊಂಡಾಡಲಾಗದೆ ಹಿಂದಕ್ಕೆ ಬರಬೇಕಷ್ಟೇ. ಧರ್ಮವನ್ನು ನಾವು ರಕ್ಷಿಸಿದರೆ ಆ ಧರ್ಮವು ನಮ್ಮನ್ನು ರಕ್ಷಿಸುತ್ತದೆ ಎಂಬಂತೆ ಧರ್ಮದಾಚರಣೆಯಲ್ಲಿ ಕಷ್ಟವಾಗದಂತೆ ಧರ್ಮಸೂಕ್ಷ್ಮಗಳನ್ನೆಲ್ಲಾ ಸುಲಭವಾದ ಮಾತುಗಳಲ್ಲಿ ಜೋಡಿಸಿಕೊಟ್ಟವರು ನಮ್ಮ ಆಚಾರ್ಯವರ್ಯರು. ಅವರ ಮಾತುಗಳು ಅಪೌರುಷೇಯವೂ, ದೈವದತ್ತವೂ ಅಖಂಡವೂ ಅನಂತವೂ ಆಗಿರುವುದರಿಂದ ಅದು ಶ್ರುತಿಗೆ ಸಮಾನವಾಗಿದೆ. ಇವರ ಆದರ್ಶವು ಸಮರ್ಥವಾದ ಸಂದೇಶವಾಗಿ ಪ್ರತಿಯೊಂದೂ ನಮಗೆ ದಾರಿದೀಪಿಗೆಯಂತಿದ್ದು ನಮ್ಮ ಜೀವನಕ್ಕೆ ಬೆಳಕು ನೀಡುತ್ತಾ ಇದೆ. ನಾವು ಕಿವಿಗಳಿಂದ ಸದಾ ಮಂಗಳಕರವಾದ ವಿಚಾರವನ್ನೇ ಕೇಳೋಣ, ಕಣ್ಣುಗಳಿಂದ ಮಂಗಳಕರವಾದ ದೃಶ್ಯಗಳನ್ನೇ ನೋಡೋಣ, ಧೃಢಕಾಯರಾಗಿ ಸತ್ಕಾರ್ಯಮಾಡುತ್ತಾ ದೈವದತ್ತವಾದ ಆಯುಷ್ಯವನ್ನು ವ್ಯಯಿಸೋಣ ಎನ್ನುವುದೇ ನಮ್ಮ ಆಚಾರ್ಯರ ಉಪದೇಶ. ಹಾಗೆ ಮಾಡಿದರೆ ನಮ್ಮ ದೈವದತ್ತವಾದ ಆಯುಷ್ಯವು ಸದ್ವಿನಿಯೋಗವಾಗುತ್ತದೆ.

ಪರಮಾತ್ಮನ ಸ್ವರೂಪ, ರೂಪ, ಗುಣಗಳ ಅಧ್ಯಯನ ಅನುಸಂಧಾನಗಳನ್ನು ಮಾಡುವುದು, ನಮ್ಮ ಆಚಾರ್ಯರ ಅನುಗ್ರಹಕ್ಕೆ ಪಾತ್ರರಾಗಿ ಸಮಾಶ್ರಯಣ ಮತ್ತು ಪ್ರಪತ್ತಿಗಳನ್ನು ಅನುಷ್ಟಿಸಿ ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಜಿತೇಂದ್ರಿಯರಾಗಿ ಆತ್ಮ ಪರಮಾತ್ಮ ಭೂತಾರ್ಥ ಸ್ವರೂಪ ಜ್ಞಾನಾನುಸಂಧಾನದೊಂದಿಗೆ ಪರಮಾತ್ಮನನ್ನು ಭಕ್ತಿಯಿಚಿದ ಸ್ಮರಿಸುತ್ತಾ ಧ್ಯಾನಿಸುತ್ತಾ ಅವನಿಗೆ ಶರಣರಾಗಿ ಅಹಂಕಾರ ಮಮಕಾರ ರಹಿತರಾಗಿ ತಮ್ಮ ಕರ್ತವ್ಯ ಕರ್ಮಗಳನ್ನು ಫಲಾಸಕ್ತಿರಹಿತವಾಗಿ ಭಗವದಾರಾಧನರೂಪವಾಗಿ ಮಾಡಬೇಕೆಂಬುದೇ ನಮ್ಮ ಆಚಾರ್ಯರ ಉಪದೇಶ.

ಆಚಾರ್ಯರ ಶ್ರೀ ಚರಣಗಳಲ್ಲಿ ಭರಸಮರ್ಪಣವನ್ನು ಅನುಷ್ಠಿಸಿ ಪಂಚಸಂಸ್ಕಾರ ಮತ್ತು ಮಂತ್ರೋಪದೇಶಗಳನ್ನು ಪಡೆದ ಈ ಜೀವವು ಅತ್ಯಂತ ಕೃತಾರ್ಥವಾಗಿದೆ. ಜ್ಞಾನದಲ್ಲಿ ಅತ್ಯಂತ ಕ್ಷುದ್ರವಾಗಿದ್ದರೂ, ಆಚಾರ್ಯರ ವೈಭವವನ್ನು ಅಕ್ಷರಗಳಲ್ಲಿ ಚಿತ್ರಿಸುವ ಶಕ್ತಿಯನ್ನು ಕರುಣಿಸಿದ ತನ್ನ ಆಚಾರ್ಯರ ಚರಣಪಾದುಕೆಗಳಲ್ಲಿ ಧನ್ಯತೆಯನ್ನು ಸೂಚಿಸುತ್ತ ಈ ಅಕ್ಷರ ಮಾಲೆಯನ್ನು ಅವರ ಜನ್ಮಶತಮಾನೋತ್ಸವದಂದು ಅವರ ಶ್ರೀ ಚರಣಗಳಲ್ಲಿ ಅರ್ಪಿಸಿ ಸ್ವಾಮಿ ದೇಶಿಕರ ಹಾಗು ಆಚಾರ್ಯ ಪರಂಪರೆಯ ಸ್ಮರಣೆಯೊಂದಿಗೆ ಅಂಜಲಿಬದ್ಧವಾಗಿ ಉಪಸಂಹರಿಸಿಕೊಳ್ಳುತ್ತಿದ್ದೇನೆ.

ಕವಿತಾರ್ಕಿಕ ಸಿಂಹಾಯ ಕಲ್ಯಾಣಗುಣಶಾಲಿನೇ. ಶ್ರೀಮತೇ ವೇಂಕಟೇಶಾಯ ವೇದಾಂತ ಗುರವೇ ನಮಃ.

– ಶ್ರೀಮತಿ ಕಮಲಾ ಗೋವಿಂದಾಚಾರ್ಯ.

Rudolf Otto (Sweden) addressing the Parish after after his audience with Srimadabhinava Ranganatha Brahmatantra Swatantra Parakala Swamy at Parakala Matham Mysore – "His imparts give us a deep impression of the noble symbolism of Indian religion and of the personality of one of its most important representatives and patriarchs". Swamy blessed him with a portrait of Sri Lakshmi Hayavadana and Swamy Vedanta Deshika, which is still found in the Swedish university library.

Vedanta Deshika's philosophy is the crown of his poetry and his poetry is the essence of his philosophy.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಮನ

ಶ್ರೀಮತೀ ಎ. ಗೀತಾರಾಘವನ್
ಬೆಂಗಳೂರು

ನಮಿಸುವೆಂ ನಮಿಸುವೆಂ ಗುರುಗಳಡಿದಾವರೆಗೆ
ಭಕ್ತಿಶ್ರದ್ಧೆಗಳಿಂದ ಶಿರಬಾಗಿ ನಮಿಸುವೆಂ
ಶ್ರೀಮದಭಿನವ ರಾಮಾನುಜ ಗುರುಶೇಖರರ
ಸಿರಿಪಾದಯುಗಳವಂ ಮನದೊಳಗೆ ಧೇನಿಸುತ ..೧..

ಜ್ಞಾನವೈರಾಗ್ಯನಿಧಿ ವಾತ್ಸಲ್ಯ ಪೂರಿತರು
ಚೇತನರ ಪಲಕೋಟಿ ರಕ್ಷಿಸುವ ದೀಕ್ಷೆಯಲಿ
ಲೋಕವನ್ನುದ್ಧರಿಸಿದ ಲೋಕಪೂಜ್ಯರು ಇವರು
ಮಹಿಷೂರು ರಾಜಕುಲ ಗುರುವಾಗಿ ಮೆರೆದರು ..೨..

ವೇದಾಂತ ವಿಜ್ಞಾನ ಪರಮತತ್ವಾರ್ಥಗಳ
ಸರಳ ಸುಂದರವಾಗಿ ಬೋಧಿಸಿದ ಯತಿವರರು
ಶಿಷ್ಯಕೋಟಿಯ ಜ್ಞಾನವೃದ್ಧಿಗೆ ಶ್ರಮಿಸಿದರು
ಕಾರುಣ್ಯಮೂರ್ತಿ ಗುರುವರರು ಸರ್ವಕಾಲ ..೩..

ಬ್ರಹ್ಮತೇಜಸ್ಸಿನಿಂ ಮೆರೆದ ಗುರುವರರು
ಮೂರುದಶಕಕೆ ಮೀರಿ ಶ್ರೀಮಠದ ಸಾರ್ವಜ್ಞರು
ನೂರಾರು ಚೇತನರ ಉದ್ಧರಿಸಿ ಸಲಹಿದರು
ಪೂಜ್ಯ ಗುರುವರರಿಂಗೆ ಭಕ್ತಿಯಿಂ ನಮಿಸುವೆಂ ..೪..

ಬಡವ ಬಲ್ಲಿದನೆಂಬ ಜ್ಞಾನ ಅಜ್ಞಾನಿ ಎಂಬ
ಗುಣಯುಕ್ತ ಗುಣರಹಿತ ಎಂಬ ಭೇದವೇ ಇಲ್ಲ
ಶರಣು ಶರಣು ಎಂದು ಶರಣಾದ ಜನರಿಗೆ
ದೇವನಲಿ ಭಿನ್ನವಿಸಿ ಸದ್ಗತಿಯ ಕರುಣಿಸಿದ ಪುಣ್ಯರಿವರು ..೫..

ಯತಿವರರು ತಾವೆನಿಸಿ ಲಕ್ಷ್ಮೀಹಯಾಸ್ಯನಂ
ಅನುದಿನಂ ಭಕ್ತಿಯಿಂ ಮೋದದಿಂದರ್ಚಿಸುತ
ಲೋಕ ಕಲ್ಯಾಣಮಂ ಸಾಧಿಸಿದ ಗುರುವರಗೆ
ಭಕ್ತಿಯಿಂ ನೇಮದಿಂ ನಮಿಸುವೆಂ ನಮಿಸುವೆಂ ..೬..

ಇಂದು ಈ ಸುದಿನದಲಿ ಪೂಜ್ಯ ಗುರುವರರ
ಶುಭತಮರ ಶತಮಾನದುತ್ಸವದ ಸಮಯದಲಿ
ಗುರುವರರ ಪದಕಮಲಯುಗಳಮಂ ಭಾವಿಸುತ
ಭಕ್ತಿ ಕುಸುಮಗಳಿಂದ ಅರ್ಚನೆಯಗೈಯುತ ನಮಿಸುವೆಂ ..೭..

ಭಕ್ತಿ ಶ್ರದ್ಧೆಗಳಿಂದ ತಲೆಬಾಗಿ ನಮಿಸುತಲಿ
ಕರಗಳಂ ಮುಗಿಯುತಲಿ ಅವರ ಕರುಣೆಯ ನೋಟ
ನಮ್ಮನೆಂದಿಗೂ ಸಲಹಲೆನ್ನುತ ಬೇಡಿ
ಗುರುಗಳಡಿದಾವರೆಗೆ ಸಂತತಂ ಪೂಜಿಪೆವು ..೮..

ಜಯಮಕ್ಕೆ ಜಯಮಕ್ಕೆ ಲಕ್ಷ್ಮೀಹಯಾಸ್ಯನಿಗೆ
ಜಯಮಕ್ಕೆ ಜಯಮಕ್ಕೆ ಶ್ರೀಮಠದ ಗುರುಗಳಿಗೆ
ಜಯಮಕ್ಕೆ ಜಯಮಕ್ಕೆ ಗುರುಪರಂಪರೆಗೆಲ್ಲಾ
ಶ್ರೀಮದಭಿನವ ರಾಮಾನುಜ ಗುರುವರರಿಂಗೆ
ಜಯಮಕ್ಕೆ ಜಯಮಕ್ಕೆ ಸಕಲಕಾಲದೊಳು ..೯..

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅರ್ಥ ಪಂಚಕಗಳು

ಶ್ರೀಮತೀ ಪದ್ಮಾವತೀ ಶ್ರೀನಿವಾಸ ರಂಗನ್

ವೈಕುಂಠೇ ತು ಪರೇ ಲೋಕೇ ಶ್ರಿಯಾಸಾರ್ಧಂ ಜಗತ್ಪತಿಃ। ಆಸ್ತೇ ವಿಷ್ಣುರಚಿಂತ್ಯಾತ್ಮಾ ಭಕ್ತೈರ್ಭಾಗವತೈಃ ಸಹ ॥

ವೈಕುಂಠ ಲೋಕದಲ್ಲಿ ಜಗತ್ಪತಿಯಾಗಿರುವ ನಾರಾಯಣನು ಲಕ್ಷ್ಮೀದೇವಿಯೊಡನೆ ನಿತ್ಯ ಮುಕ್ತರಿಗೂ, ಭಕ್ತರು, ಭಾಗವತರಿಗೂ ಊಹಿಸಲು ಸಾಧ್ಯವಾಗದಂತೆ ಸರ್ವದಾ ಅವರೊಂದಿಗೆ ಇದ್ದು ಅನುಗ್ರಹಿಸುತ್ತಿರುವನು. ಅಂತಹ ಪರಮ ಪದವನ್ನು ಸೇರಿ ಶ್ರೀಮನ್ನಾರಾಯಣನ ನಿತ್ಯಕೈಂಕರ್ಯ ಸುಖಾನುಭವವನ್ನು ಬಯಸುವವನು ಅವಶ್ಯಕವಾಗಿ ಅರ್ಥಪಂಚಕ ಜ್ಞಾನವನ್ನು ಅರಿಯಲೇಬೇಕು.

ಮೊಟ್ಟ ಮೊದಲು ಶ್ರೀಮದ್ರಾಮಾಯಣದಲ್ಲಿ ವಿಭೀಷಣನು ಅರ್ಥಪಂಚಕ ಜ್ಞಾನವನ್ನು ಹೊಂದಿದ್ದನು ಎಂಬುದನ್ನು ಅವನು ಶ್ರೀರಾಮನಲ್ಲಿ ಮಾಡಿದ ಶರಣಾಗತಿಯಿಂದ ತಿಳಿಯಬಹುದು. ಹೇಗೆಂದರೆ **ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ** ಮೊದಲು ಶ್ರೀರಾಮನೇ ಸರ್ವಲೋಕ ಶರಣ್ಯ ಎಂಬುದನ್ನು ಅರಿತುಕೊಂಡನು. **ಪ್ರಾಪ್ತುಶ್ಚ ಪ್ರತ್ಯಗಾತ್ಮನಃ** ನಂತರ ತಾನು ಯಾರೆಂದು ತಿಳಿಯುತ್ತಾ ತನ್ನ ಸ್ವರೂಪವನ್ನು ಅರಿತನು. **ಪ್ರಾಪ್ತುಪಾಯಂ** ತಾನು ಯಾರೆಂದು ಅರಿತ ನಂತರ ಶ್ರೀರಾಮನಲ್ಲಿ ಶರಣಾಗಲು ಹಾತೊರೆಯುತ್ತಾ ಅವನನ್ನು ಹೊಂದಲು ಪ್ರಯತ್ನಿಸುತ್ತಾನೆ. **ಫಲಂ ಚೈವ** ಅವನ ಪ್ರಯತ್ನದಿಂದ ನಿರಂತರ ಶ್ರೀರಾಮನ ಕೈಂಕರ್ಯಭಾಗ್ಯವು ದೊರಕುತ್ತದೆ. **ಪ್ರಾಪ್ತಿ ವಿರೋಧಿ ಚ** ಶ್ರೀರಾಮನ ಕೈಂಕರ್ಯಕ್ಕೆ ವಿರೋಧಿಗಳಾದ ಹೆಂಡತಿ, ಮಕ್ಕಳು, ರಾಜ್ಯ, ಧನ, ಮಿತ್ರರು ಇವರುಗಳನ್ನು ತೊರೆದು ರಾಮನೇ ಪರತತ್ತ್ವನೆಂದು ತಿಳಿದು ಶರಣನಾದನು.

ಹೀಗೆ ಸಂಸಾರವೆಂಬ ಬಂಧನದಿಂದ ಮುಕ್ತನಾಗಬೇಕೆಂಬ ಚೇತನನು ಕೂಡ ಉಜ್ಜೀವಿಸಬೇಕಾದರೆ ಅರ್ಥಪಂಚಕವನ್ನು ಅರಿತುಕೊಳ್ಳುವುದು ಅತ್ಯಾವಶ್ಯಕ. ಇದರಿಂದ ಪ್ರಧಾನವಾಗಿ ಶರೀರಾತ್ಮ ಭಾವ ಸಂಬಂಧದ ಅರಿವಿನೊಂದಿಗೆ ಶೇಷ – ಶೇಷೀಭಾವ ಸಂಬಂಧ ಜ್ಞಾನವು ದೊರಕುತ್ತದೆ. ಅರ್ಥಪಂಚಕ ಜ್ಞಾನವನ್ನು ತಿಳಿದವನು ಸರ್ವವೇದಗಳನ್ನೂ ಸ್ಮೃತಿ, ಇತಿಹಾಸ ಪುರಾಣಗಳನ್ನು ತಿಳಿದವನೆಂದು ಭಾವಿಸಲ್ಪಡುತ್ತಾನೆ. ಈ ರೀತಿ ಶ್ರೀನಿಗಮಾಂತ ಮಹಾ ದೇಶಿಕಾಚಾರ್ಯರು ನಿರೂಪಿಸಿರುತ್ತಾರೆ. ಅರ್ಥ ಎಂದರೆ ಮೋಕ್ಷ ಮತ್ತು ಪಂಚಕ ಎಂದರೆ ಐದು ಒಟ್ಟಾರೆ ಅರ್ಥ ಪಂಚಕ ಎಂದರೆ ಮುಮುಕ್ಷುವು ಅರಿಯಬೇಕಾದ ಮುಖ್ಯ ಜ್ಞಾನವೆಂದರ್ಥ. ಆ ಐದು ಪಂಚಕಗಳಾವುವು ಎಂದರೆ & **ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ, ಪ್ರಾಪ್ತುಶ್ಚ ಪ್ರತ್ಯಗಾತ್ಮನಃ, ಪ್ರಾಪ್ತುಪಾಯಂ, ಫಲಂ ಚೈವ, ತಥಾ ಪ್ರಾಪ್ತಿ ವಿರೋಧಿ ಚ ವದನ್ತಿ ಸಕಲಾ ವೇದಾಸ್ತೇತಿಹಾಸ ಪುರಾಣಕಾಃ ॥** ಆದ್ದರಿಂದ **ಅರ್ಥಸ್ಯಾದ್ವಿಷಯೇ ಮೋಕ್ಷೆ ಇತಿ ಅಭಿಧಾನವಿದಃ** ಅಂದರೆ ಅರ್ಥಪಂಚಕ ಜ್ಞಾನವುಳ್ಳವನಿಗೆ ಮೋಕ್ಷ ಸಿದ್ಧಿಸುವುದು. ಎಂದು ಜ್ಞಾನಿಗಳು ತಿಳಿಸಿದ್ದಾರೆ.

ಪ್ರಾಪ್ಯಸ್ಯ ಬ್ರಹ್ಮಣೋ ರೂಪಂ :– ಶ್ರೀಭಗವದ್ರಾಮಾನುಜರು ಬ್ರಹ್ಮಸ್ವರೂಪವನ್ನು ಹೀಗೆ ನಿರೂಪಿಸಿದ್ದಾರೆ.

ಅಖಿಲ ಭುವನ ಜನ್ಮ ಸ್ಥೇಮ ಭಂಗಾದಿಲೀಲೇ। ವಿನತ ವಿವಿಧ ಭೂತವ್ರಾತರಕ್ಷೈಕದೀಕ್ಷೇ।
ಶ್ರುತಿಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ ಭವತು ಮಮ ಪರಸ್ಮಿನ್ ಶೇಮುಷೀ ಭಕ್ತಿರೂಪಾ॥

ಅಖಿಲ ಜಗತ್ತುಗಳ ಸೃಷ್ಟಿ, ಸ್ಥಿತಿ, ಮತ್ತು ಲಯಕ್ಕೆ ಕಾರಣನಾಗಿರುವನು.ಸಕಲ ಚೇತನಾಚೇತನಗಳಿಗೆ ಸರ್ವ ರಕ್ಷಕನಾಗಿರುವನು. ಈಶ್ವರನನ್ನು ವೇದವೇದಾಂತಗಳಿಂದಲೇ ತಿಳಿಯಬೇಕು.ಭಕ್ತರನ್ನು ಅನುಗ್ರಹಿಸಲುಶ್ರೀನಿವಾಸನು ಅರ್ಚಾ ರೂಪದಲ್ಲಿರುವನು. ಅವನನ್ನು ಪಡೆಯಲು ಉಪಾಯಗಳು ಭಕ್ತಿ ಅಥವಾ ಉಪಾಸನೆ. ಹೀಗೆ ಈ ಶ್ಲೋಕದಲ್ಲಿರುವ ಅಂಶಗಳನ್ನು ಆಚಾರ್ಯರು ಸಮರ್ಥಿಸಿದ್ದಾರೆ.

ಈ ಸಮಸ್ತ ಜಗತ್ತಿಗೂ ಪರಮಾತ್ಮನು ಏಕೈಕ ಕಾರಣನೆಂದೂ ಹಾಗೂ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳು ಯಾರಿಂದ ಆಗುವುದೋ ಅವನೇ ಪರಬ್ರಹ್ಮ ಎಂಬುದಾಗಿ ಸೂತ್ರಕಾರರು ಬ್ರಹ್ಮ ಲಕ್ಷಣವನ್ನು ನಿರೂಪಿಸಿದ್ದಾರೆ. ಈ ಪ್ರಪಂಚಕ್ಕೆ ಉಪಾದಾನಕಾರಣನು, ನಿಮಿತ್ತ ಕಾರಣನು ಪರಬ್ರಹ್ಮನೇ ಎಂದು ವೇದಗಳು ಘೋಷಿಸುತ್ತವೆ. ಸೊ ಕಾಮಯತ ಬಹ್ವಸ್ಯಾಂ ಪ್ರಜಾಯೇ ಯೇತಿ, ಬ್ರಹ್ಮ ವನಂ ಬ್ರಹ್ಮ ಸ ವೃಕ್ಷ ಆಸೀತ್, ತದಾತ್ಮಾನಂ ಸ್ವಯಂ ಕೃರುತ, ಕರ್ತಾರಮೀಶಂ ಪುರುಷಂ ಬ್ರಹ್ಮ ಯೋನಿಃ ಇತ್ಯಾದಿ ಶ್ರುತಿ ವಾಕ್ಯಗಳಿಂದ ವ್ಯಕ್ತವಾಗುವುದೆನೆಂದರೆ ಬ್ರಹ್ಮನು ಸರ್ವವ್ಯಾಪಿ, ಸರ್ವತ್ರಗೋಚರ, ಜಗದಂತರ್ಯಾಮಿ, ಸರ್ವನಿಯಂತ ಇತ್ಯಾದಿ ಕಲ್ಯಾಣಗುಣಗಳಿಂದ ಕೂಡಿರುವನೆಂದು ತಿಳಿಸುತ್ತದೆ. ಹಾಗೂ ಸೃಷ್ಟಿಗೆ ಮೊದಲು ಚೇತನಾಚೇತನ ಪದಾರ್ಥಗಳು ಪರಮಾತ್ಮನಿಗೆ ಅಧೀನವಾಗಿ ಸೂಕ್ಷ್ಮರೂಪದಲ್ಲಿರುತ್ತದೆ. ಸೃಷ್ಟಿಕಾಲದಲ್ಲಿ ಅವನು ಅನೇಕವಾಗಲು ಸಂಕಲ್ಪಿಸುತ್ತಾನೆ. ಆಗ ನಾಮರೂಪಾತ್ಮಕವಾದ ಜಗತ್ತನ್ನು ಉಂಟು ಮಾಡುತ್ತಾನೆ. ಬ್ರಹ್ಮಾತ್ಮಕ ಜೀವಾನುಪ್ರವೇಶಾದೇವ ಕೃತ್ಸ್ನಸ್ಯಾಚಿದ್ವಸ್ತುನಃ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ಪದಾರ್ಥತ್ವಂ ಏವಂ ಭೂತಸ್ಯೈ ವ ಅಚಿದ್ವಸ್ತುನೋ ನಾಮರೂಪಭಾಕ್ತ್ವಮಿತಿ ಚ ದರ್ಶಯತಿ ಎಂದು ಆಚಾರ್ಯರು ಪ್ರತಿಪಾದಿಸಿದ್ದಾರೆ. ಉಪನಿಷತ್ತುಗಳು ಸಹ ಸ ದೇವ ಸೋಮ್ಯೇದಮಗ್ರ ಆಸೀತ್ ಏಕಮೇವಾದ್ವಿತೀಯಮ್ ಎಂದು ತಿಳಿಸುತ್ತದೆ.

ಪರಮಾತ್ಮನ ಸ್ವರೂಪವನ್ನು ಶ್ರೀನಿಗಮಾಂತ ಮಹಾದೇಶಿಕರು ಅತ್ಯದ್ಭುತವಾಗಿ ರಹಸ್ಯತ್ರಯ ಮಂತ್ರಗಳಾದ ಮೂಲಮಂತ್ರ, ದ್ವಯ ಮಂತ್ರ, ಹಾಗು ಚರಮ ಶ್ಲೋಕದಲ್ಲಿ ನಿರೂಪಣೆ ಮಾಡಿದ್ದಾರೆ. ಮೂಲಮಂತ್ರವಾದ ಅಷ್ಟಾಕ್ಷರದಲ್ಲಿರುವ ಪ್ರಣವದಲ್ಲಿ ಆದಿ ಅಕ್ಷರವಾದ ಅ ಕಾರದಲ್ಲಿಯೂ, ನಾರಾಯಣ ಶಬ್ದದಲ್ಲಿಯೂ, ದ್ವಯಮಂತ್ರದಲ್ಲಿ ಶ್ರೀವಿಶಿಷ್ಟ ನಾರಾಯಣ ಶಬ್ದ ಶ್ರೀಮನ್ ಎಂಬಲ್ಲಿಯೂ, ಚರಮಶ್ಲೋಕದಲ್ಲಿ ಮಾಂ ಮತ್ತು ಅಹಂ ಎಂಬ ಪದಗಳಲ್ಲಿಯೂ, ಕಾಣಬಹುದು.

ಅ ಕಾರದಲ್ಲಿ ಸರ್ವ ರಕ್ಷಕನಾಗಿಯೂ, ನಾರಾಯಣ ಶಬ್ದವು ಶೇಷ-ಶೇಷಿ ತತ್ತ್ವಗಳೆರಡನ್ನು ಪ್ರಕಾಶಪಡಿಸುವ ದಿವ್ಯನಾಮವಾಗಿದೆ. ಏಕೆಂದರೆ ನಾರಾಯಣ ಶಬ್ದವನ್ನು ನಾರಾಃ ಅಯನಂ ಯಸ್ಯ ಸಃ ಮತ್ತು ನಾರಾಣಾಂ ಅಯನಂ ಎಂದು ಎರಡು ಬಗೆಯಾಗಿ ವಿವರಿಸಬಹುದು. ನಾರಾಯಣಾನುವಾಕಾದಲ್ಲಿ ಬ್ರಹ್ಮ ರುದ್ರಾದಿಗಳಿಗೂ ನಾರಾಯಣನು ಕಾರಣನು ಎಂಬುದು ನಾಮ ನಿರ್ವಚನವೇ ತಿಳಿಸುತ್ತದೆ. ನಾರಸ್ತ್ವಿತಿ ಸರ್ವ ಪುಂಸಾಂ ಸಮೂಹಃ ಪರಿಕೀರ್ತಿತಃ । ಗತಿರಾಲಂಬನಂ ತಸ್ಯತೇನ ನಾರಾಯಣಃ ಸ್ಮೃತಃ ॥ ಎಂಬಲ್ಲಿ ನಾರಾಯಣನೇ ಎಲ್ಲರಿಗೂ ಉಪೇಯನೂ ಹಾಗು ಉಪಾಯನು ಆಗಿದ್ದಾನೆಂದು ಹೇಳಿದೆ. ದ್ವಯಮಂತ್ರದಲ್ಲಿ ಹೇಳಿರುವ ಶ್ರೀಮನ್ನಾರಾಯಣ ಮತ್ತು ಶ್ರೀಮತೇ ನಾರಾಯಣ ಎಂಬ ಪದಗಳಿಂದ ಪರಮಾತ್ಮನು ಲಕ್ಷ್ಮೀವಿಶಿಷ್ಟನಾಗಿಯೂ ಇರುವೆನೆಂದು, ಚರಮ ಶ್ಲೋಕದಲ್ಲಿರುವ ಸರ್ವನಾಮ ಪದವಾದ ಮಾಂ ಮತ್ತು ಅಹಂ ಎಂಬ ಪದಗಳಿಂದ ರಕ್ಷಣೆ ಹಾಗೂ ಮೋಕ್ಷವನ್ನು ಕೊಡಲು ಬೇಕಾದ ಕಾರುಣ್ಯ, ವಾತ್ಸಲ್ಯ, ಔದಾರ್ಯ, ಸ್ವಾಮಿತ್ವ, ಸರ್ವಶಕ್ತಿತ್ವ, ಸರ್ವಪಾಪ ನಾಶಕ, ಕ್ಷಮತ್ವ ಇತ್ಯಾದಿ ಗುಣಗಳಿಂದ ಕೂಡಿರುವನು ಪರಮಾತ್ಮ ಎಂದು ಅರಿಯಬೇಕು. ಪರಮಾತ್ಮನ ಸ್ವರೂಪವನ್ನು ಸ್ವರೂಪಕ ನಿರೂಪಕ ಧರ್ಮ ಮತ್ತು ನಿರೂಪಿತ ಸ್ವರೂಪ ವಿಶೇಷಣಗಳೆಂದು ವಿಭಾಗಿಸಿದ್ದಾರೆ. ಸ್ವರೂಪ ನಿರೂಪಕ ಧರ್ಮಗಳು ಸತ್ಯತ್ವ, ಜ್ಞಾನತ್ವ, ಆನಂದತ್ವ, ಅನಂತತ್ವ, ಅಮಲತ್ವ. ಹಾಗೂ ರಕ್ಷಕತ್ವ ಮತ್ತು ಮೋಕ್ಷಪ್ರದತ್ವ ಇವೆರಡು ನಿರೂಪಿತ ಸ್ವರೂಪ ವಿಶೇಷಣಗಳು.

मम प्रकाराः पञ्चेति प्राहु वेदान्त पारगाः परो व्यूहश्च विभवो नियन्ता सर्वदेहिनां अर्चावतारश्च तथा इति । ಎಂದು ಹೇಳಲ್ಪಟ್ಟಿದೆ. ಪರಮಾತ್ಮನ ಸ್ವರೂಪವು ಉಭಯವಿಭೂತಿ ಕಾರ್ಯ ನಿರ್ವಹಿಸಲು ತೊಡಗಿರುತ್ತದೆ. ಹಾಗು ಪರಮಾತ್ಮನು ಭಕ್ತಾನುಗ್ರಹಕ್ಕಾಗಿ ತನ್ನ ಸಂಕಲ್ಪದಿಂದಲೇ ಐದು ರೂಪಗಳನ್ನು ಧರಿಸಿರುತ್ತಾನೆ. ಅವು ಪರ, ವ್ಯೂಹ, ವಿಭವ, ಅಂತರ್ಯಾಮಿ, ಹಾಗೂ ಅರ್ಚಾವತಾರ ಎಂಬುದಾಗಿವೆ.

ಪರತ್ವ :- ಅನಾದಿಯಾಗಿ, ನಿರವಧಿಕ ತೇಜೋಮಯ ದಿವ್ಯ ಮಂಗಳ ವಿಗ್ರಹ ವಿಶಿಷ್ಟನಾಗಿ, ಅಪ್ರಾಕೃತ ದಿವ್ಯ ಶ್ರೀವೈಕುಂಠದಲ್ಲಿ ಶ್ರೀಭೂನೀಳಾಸಮೇತನಾಗಿ ಅಸಂಖ್ಯೇಯ ದಿವ್ಯಾಯುಧಧಾರಿಯಾಗಿ ಪರಮಪದದಲ್ಲಿ ನೆಲೆಸಿರುವ ಪರಂಜ್ಯೋತಿ ಸ್ವರೂಪನಾದ ಪರವಾಸುದೇವನು . ಇವನು ಅನಂತ, ಗರುಡ ವಿಷ್ವಕ್ಸೇನಾದಿ ನಿತ್ಯಸೂರಿಗಳಿಂದಲೂ ಮತ್ತು ಮುಕ್ತಾತ್ಮರಿಂದಲೂ ನಿತ್ಯ ಕೈಂಕರ್ಯವನ್ನು ಸ್ವೀಕರಿಸುತ್ತಾ ಇರುವನು. ಈ ಪರವಾಸುದೇವನೇ ಸಕಲ ಚೇತನಗಳಿಗೂ ಮುಕ್ತ ಪ್ರಾಪ್ಯನಾಗಿರುವನು.

ವ್ಯೂಹಾವತಾರ :- ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆಗಾಗಿಯೇ ಲೀಲಾ ವಿಭೂತಿಯಾಗಿ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳಿಗೆ ಅನುಕೂಲವಾಗಿ ಕೆಲವು ಗುಣಗಳನ್ನು ಹೊಂದಿ, ಚೇತನರ ಗುಣ ಧ್ಯಾನಕ್ಕೆ ಅನುಕೂಲವಾಗುವಂತೆ ಪರಮಾತ್ಮನು ತಾನಾಗಿಯೇ ಸಂಕಲ್ಪಿಸಿಕೊಂಡು ಧರಿಸಿರುವ ನಾಲ್ಕು ವ್ಯೂಹಗಳೇ ಪ್ರದ್ಯುಮ್ನ, ವಾಸುದೇವ, ಅನಿರುದ್ಧ, ಮತ್ತು ಸಂಕರ್ಷಣರೆಂದು ಪ್ರಸಿದ್ಧಿ ಹೊಂದಿರುವರು. ವಾಸುದೇವನಲ್ಲಿ ಜ್ಞಾನಶಕ್ತ್ಯಾದಿ ಷಾಡ್ಗುಣ್ಯಗಳೂ ಪೂರ್ಣವಾಗಿ ಅಭಿವ್ಯಕ್ತವಾಗಿರುವುದು. ಈ ಪರವಾಸುದೇವನ ರೂಪವು ಮುಕ್ತ ಭೋಗ್ಯವಾದದ್ದು. ಸಂಕರ್ಷಣ ರೂಪದಲ್ಲಿ ಬಲ ಮತ್ತು ಜ್ಞಾನಗಳು ಪ್ರಧಾನವಾಗಿದೆ. ಈ ರೂಪದಿಂದ ಶಾಸ್ತ್ರ ಸೃಷ್ಟಿ ಮತ್ತು ಪ್ರಳಯವಾಗುತ್ತದೆ. ಪ್ರದ್ಯುಮ್ನ ರೂಪದಲ್ಲಿ ಐಶ್ವರ್ಯ ಮತ್ತು ವೀರ್ಯಗುಣ ಪ್ರಧಾನವಾಗಿದೆ. ಈ ರೂಪದಿಂದ ಜಗತ್ ಸೃಷ್ಟಿ ಮತ್ತು ಧರ್ಮಪಾಲನೆ ಆಗುತ್ತದೆ. ಅನಿರುದ್ಧ ರೂಪದಲ್ಲಿ ಶಕ್ತಿ ಮತ್ತು ತೇಜಸ್ಸು ಪ್ರಧಾನವಾಗಿರುತ್ತದೆ. ಭಗವಂತನು ಜಗದ್ರಕ್ಷಣೆಯನ್ನು ಹಾಗೂ ಸತ್ಯಜ್ಞಾನೋಪದೇಶವನ್ನು ಮಾಡುತ್ತಾನೆ.

ವಿಭವಾವತಾರಗಳು :- ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ।। ಎಂಬಂತೆ ಪ್ರತಿಜ್ಞಾ ಪಾಲನರೂಪವಾಗಿರುವುದು. ವಿಭವಾವತಾರಗಳು ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಬಲರಾಮ, ಶ್ರೀಕೃಷ್ಣ, ಹಾಗೂ ಕಲ್ಕ್ಯವತಾರ ಎಂಬುದಾಗಿದೆ. ಇವೆಲ್ಲವೂ ಸಹ ನಿಮಿತ್ತವಾದದ್ದು. ತತ್ತತ್ ಕಾಲದಲ್ಲಿದ್ದ ಚೇತನರಿಗೆ ಮಾತ್ರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಗೋಚರವಾಗಿ ಅನುಭವಿಸಲ್ಪಟ್ಟದ್ದು. ಆಯಾ ಕಾರ್ಯವಿಶೇಷಗಳಿಗೆ ಅನುಸಾರವಾಗಿ ಅದಕ್ಕೆ ಅನುಗುಣವಾದ ಗುಣಗಳನ್ನು ಆಯಾ ಅವತಾರಕಾಲದಲ್ಲಿ ಮರೆಸಿಯೂ, ಪ್ರಕಾಶಿಸಿಯೂ ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ರಕ್ಷಿಸುತ್ತಿದ್ದಾನೆ. ಈ ಅವತಾರಗಳಿಗೆಲ್ಲಾ ಅವನ ಸಂಕಲ್ಪವೇ ಆಗಿದೆ. ಇದರ ಉದ್ದೇಶವು ಕೂಡ ಕೇವಲ ದುಷ್ಟ ಶಿಕ್ಷೆ ಹಾಗೂ ಶಿಷ್ಟ ರಕ್ಷಣೆ ಮಾತ್ರವಲ್ಲದೆ ಪಾಪಿಷ್ಠರನ್ನೂ ಕೂಡ ಪಾಪದಿಂದ ಮುಕ್ತಗೊಳಿಸುವುದಾಗಿದೆ. ಉದಾ:- ಹಿರಣ್ಯಕಶಿಪು, ಹಿರಣ್ಯಾಕ್ಷ, ರಾವಣ, ಕುಂಭಕರ್ಣ, ಕಂಸ, ಶಿಶುಪಾಲಾದಿಗಳಲ್ಲದೆ ಪೂತನಿ, ಮಾರೀಚ , ಮುಂತಾದವರುಗಳು.

ಅಂತರ್ಯಾಮಿ :- ಸಮಸ್ತ ಚೇತನರ ಹೃದಯದಲ್ಲಿ ಪರಮಾತ್ಮನು ಅಂತರ್ಗತನಾಗಿರುವುದು ವೇದ, ಪುರಾಣೇತಿಹಾಸ, ಶಾಸ್ತ್ರಗಳಿಂದ ಆಳ್ವಾರ್‌ಗಳು ಮತ್ತು ಆಚಾರ್ಯರುಗಳು ಪ್ರತಿಪಾದಿಸಿದ್ದಾರೆ. ಜ್ಞಾನಿಗಳ ಹೃದಯ ಕಮಲದಲ್ಲಿ ಲಕ್ಷ್ಮೀಸಮೇತನಾಗಿ, ವಿಲಕ್ಷಣ ವಿಗ್ರಹವನ್ನು ಹೊಂದಿದವನಾಗಿಯೂ, ಸಕಲ ಕರ್ಮಸಾಕ್ಷಿಯಾಗಿಯೂ,ನೆಲಸಿರುವುದು ಇನ್ನೊಂದು ಬಗೆಯಾಗಿದೆ. ಇವನ ಈ ರೂಪವನ್ನು ಯೋಗಿಗಳು ಉಪಾಸನೆ ಮಾಡುತ್ತಾರೆ. ಜ್ಞಾನಿಗಳಿಂದ ಭಿನ್ನರಾದ ಅಂದರೆ ಸಾಮಾನ್ಯರ ಆತ್ಮಗಳಲ್ಲಿ ಸ್ವರೂಪ ಮಾತ್ರದಿಂದ ಅಂತರ್ಗತನಾಗಿರುವನು.

ಅರ್ಚಾವತಾರ :- ಚೇತನಾನುಗ್ರಹಕ್ಕಾಗಿ ಶ್ರಿಯಃಪತಿಯು ಉಭಯವಿಭೂತಿ ನಾಯಕನಾಗಿ ತನ್ನ ಅಂತರಂಗದ ಪರಿವಾರದೊಡನೆ ಶ್ರೀರಂಗ, ಶ್ರೀಹಸ್ತಿಶೈಲ, ಶ್ರೀವೇಂಕಟಾದ್ರಿ, ಶ್ರೀಯಾದವಾದ್ರಿ , ಇತ್ಯಾದಿ ಅನೇಕ ರಮಣೀಯ ಪ್ರದೇಶಗಳಲ್ಲಿ, ಹಾಗೂ ನದೀ ತೀರಗಳಲ್ಲಿ, ಬೆಟ್ಟದಡಿಗಳಲ್ಲಿ ಚೇತನಾನುಗ್ರಹಕ್ಕಾಗಿ ಶ್ರಿಯಃಪತಿಯು ಉಭಯವಿಭೂತಿ ನಾಯಕನಾಗಿ ತನ್ನ ಅಂತರಂಗದ ಪರಿವಾರದೊಡನೆ ಶ್ರೀರಂಗ, ಶ್ರೀಹಸ್ತಿಶೈಲ, ಶ್ರೀವೇಂಕಟಾದ್ರಿ, ಶ್ರೀಯಾದವಾದ್ರಿ, , ಇತ್ಯಾದಿ ಅನೇಕ ರಮಣೀಯ ಪ್ರದೇಶಗಳಲ್ಲಿ, ಹಾಗೂ ನದೀ ತೀರಗಳಲ್ಲಿ, ಬೆಟ್ಟದಡಿಗಳಲ್ಲಿ ಅರ್ಚಾರೂಪಿಯಾಗಿರುವನು.

ಪರವ್ಯೂಹಾಶ್ರಯಣಂ ದೇಶವಿಪ್ರಕರ್ಷಾದ್ ದುಷ್ಕರಂ । ವಿಭವಾಶ್ರಯಣಂ ಅಸ್ಮದಾದೀನಾಂ ಕಾಲ ವಿಪ್ರಕರ್ಷಾದ್ ದುಷ್ಕರಂ । ಅಂತರ್ಯಾಮ್ಯಾಶ್ರಯಣಂ ಕರಣಂ ವಿಪ್ರಕರ್ಷಾದ್ ದುಷ್ಕರಂ । ಅರ್ಚಾವತಾರಸ್ತು ಆಶ್ರಿತಪರಾಧೀನತಾ ನೈಯತ್ಯೇನಾತ್ಯಂತಸುಲಭಾ ಇತಿ ತಸ್ಮಾಶ್ರಯಣಮೇವ ಸುಕರತಮಮ್ ।। ಈ ರೀತಿ ದಿವ್ಯಕ್ಷೇತ್ರಗಳಲ್ಲಿ ಶ್ರೀಭೂಮಿ ನೀಳಾಸಮೇತನಾಗಿ ನಿಂತು ಅರ್ಚಕಪರಾಧೀನನಾಗಿ ಎಲ್ಲ ಭಕ್ತರುಗಳಿಂದಲೂ ಸೇವೆಯನ್ನು ಸ್ವೀಕರಿಸುತ್ತಾ ಇರುವನು.

ಪ್ರಾಪ್ತುಶ್ಚ ಪ್ರತ್ಯಗಾತ್ಮನ :- ಜೀವಾತ್ಮನ ಸ್ವರೂಪ :- ಪರಮಾತ್ಮನನ್ನು ಹೊಂದುವ ಈ ಪ್ರತ್ಯಗಾತ್ಮನು ಮೂರು ವಿಧವಾಗಿರುವನು. ಬದ್ಧರು, ಮುಕ್ತರು, ಮತ್ತು ನಿತ್ಯರು ಎಂಬುದಾಗಿರುವರು. ಬದ್ಧರು ಕರ್ಮಪರವಶರಾಗಿರುವರು. ಕರ್ಮದಿಂದ ಬಿಡುಗಡೆ ಹೊಂದಿದವರು ಮುಕ್ತರು ವ್ಯಾಸ, ವಾಲ್ಮೀಕಿ, ನಾಥಮುನಿಗಳು ಮುಂತಾದವರುಗಳು. ಎಂದೂ ಕರ್ಮಪರವಶರಾಗದೇ ಇರುವವರು ನಿತ್ಯ ಮುಕ್ತರು. ಇವರು ಅನಂತ, ಗರುಡ, ವಿಷ್ವಕ್ಸೇನಾದಿಗಳು.ಇವರೇ ನಿತ್ಯಸೂರಿಗಳು. ಆಚಾರ್ಯರು ಪ್ರತಿಪಾದಿಸಿರುವ ರಹಸ್ಯತ್ರಯದಲ್ಲಿ ಜೀವಾತ್ಮನ ಸ್ವರೂಪವನ್ನು ಕಾಣಬಹುದು. ಅಷ್ಟಾಕ್ಷರ ಮಂತ್ರದಲ್ಲಿರುವ ಪ್ರಣವದಲ್ಲಿಯ ಮಕಾರವು ಹಾಗೂ ನಮಸ್ಸ ಶಬ್ದದಲ್ಲಿರುವ ಮಕಾರಗಳಲ್ಲಿಯೂ, ದ್ವಯಮಂತ್ರದಲ್ಲಿರುವ ನಾರ ಶಬ್ದದಲ್ಲಿಯೂ ಮತ್ತು ಪ್ರಪದ್ಯೇ ಎಂಬಲ್ಲಿಯೂ, ಚರಮಶ್ಲೋಕದಲ್ಲಿ ವ್ರಜ , ತ್ವಾ, ಮಾ ಶುಚಃ ಎಂಬ ಪದಗಳಲ್ಲಿ ಜೀವಾತ್ಮನನ್ನು ಉದ್ದೇಶಿಸಿ ಹೇಳಿರುವುದನ್ನು ಅನುಸಂಧಾನ ಮಾಡಬೇಕು. ಜೀವಾತ್ಮನಿಗೆ ಭಾಗವತ ಶೇಷತ್ವವೇ ಉದ್ದೇಶವಾಗಿದೆ. ಹಾಗೂ ಜೀವಾತ್ಮನು ಭಗವದನನ್ಯಾರ್ಹ ಶೇಷಭೂತನೆಂದೂ ತಿಳಿಸುತ್ತದೆ.

ಪ್ರಾಪ್ಯೋಪಾಯಮುಮ್ :- ಪರಮಾತ್ಮನನ್ನು ಪಡೆಯಬೇಕಾದರೆ ಭಗವಂತನೇ ತಿಳಿಸಿರುವ ಉಪಾಯಗಳಾದ ಭಕ್ತಿ ಮತ್ತು ಪ್ರಪತ್ತಿಯನ್ನು ಅನುಷ್ಠಿಸಬೇಕು. ಅದಾಗಿ ಈ ಭಕ್ತಿ ಮತ್ತು ಪ್ರಪತ್ತಿಗಳು ಫಲಾಂತರಕ್ಕೆ ಉಪಾಯಗಳಾಗುತ್ತವೆ. ಶ್ರೀರಾಮಾನುಜಾಚಾರ್ಯರು ತಿಳಿಸಿರುವಂತೆ **ತಸ್ಲಬ್ಧಿಃ ವಿವೇಕ ವಿಮೋಕಾಭ್ಯಾಸಕ್ರಿಯಾಕಲ್ಯಾಣಾನವಸಾದಾನುದ್ಧರ್ಷೇಭ್ಯಃ** ಎಂಬಂತೆ ಈ ಏಳು ವಿಧವಾದ ಸಾಧನಗಳಿಂದ ಹುಟ್ಟಿ ಅಷ್ಟಾಂಗ ಯೋಗದಿಂದ ಬಲಿತರೆ ಅವಿಚ್ಛಿನ್ನವಾದ ಸ್ಮೃತಿ ಧಾರರೂಪವಾಗಿ ಭಕ್ತಿಯು ನಿಂತು ದರ್ಶನ ಸಮಾನಾಕಾರವಾಗುವುದು. ಕ್ರಮೇಣ ಇದು ಪರಭಕ್ತಿ, ಪರಜ್ಞಾನ, ಮತ್ತು ಪರಮಭಕ್ತಿ ಎಂಬ ಅವಸ್ಥೆಗಳನ್ನು ಪಡೆಯುತ್ತದೆ. ಈ ಭಕ್ತಿ ಎರಡು ವಿಧವಾಗಿದೆ. ಸಾಧನ ಭಕ್ತಿ ಮತ್ತು ಫಲಭಕ್ತಿ ಎಂದಾಗಿದೆ. ಏಳು ವಿಧ ಸಾಧನಗಳಿಂದ ಹುಟ್ಟಿ ಬಲಿತ ಭಕ್ತಿಯೋಗವೇ ಸಾಧನಭಕ್ತಿ .ಇದು ವ್ಯಾಸಾದಿ ಮಹರ್ಷಿಗಳಿಗೆ ಇರುವುದು. ಪರಮಾತ್ಮನು ಈ ಚೇತನನ್ನು ಉದ್ಧರಿಸಬೇಕೆಂದು ಸಂಕಲ್ಪಿಸಿದರೆ ಅವನ ಅನುಗ್ರಹದಿಂದಲೇ ಹುಟ್ಟಿ ಬಲಿತ ಭಕ್ತಿ ಫಲಭಕ್ತಿ ಎನಿಸುವುದು. ಉದಾ:- ಪರಾಂಕುಶ, ಆಳ್ವಾರುಗಳು, ನಾಥಮುನಿ ಮುಂತಾದವರು. ವೇದನ, ಧ್ಯಾನ, ಉಪಾಸನ ಮುಂತಾದ ಶಬ್ದಗಳಿಂದ ಹೇಳಿಸಿಕೊಳ್ಳುವ ಸಾಧನಭಕ್ತಿ ಬಹುವಿಧವಾಗಿದೆ. ಇವೆಲ್ಲವೂ ಬ್ರಹ್ಮವಿದ್ಯೆ ಎನಿಸಿದೆ. ಇವುಗಳಲ್ಲಿ ಕೂಡ ಕೆಲವು ವಿದ್ಯೆ ಐಹಿಕ ಫಲವನ್ನು ನೀಡುವುದು. ಅವು ಉದ್ಗೀಥ ವಿದ್ಯೆ, ಮುಂತಾದವುಗಳು. ಇನ್ನು ಫಲಭಕ್ತಿಯನ್ನು ಅಂದರೆ ಮೋಕ್ಷವನ್ನು ನೀಡುವ ವಿದ್ಯೆಗಳು ನ್ಯಾಸವಿದ್ಯೆ, ಉಪಕೋಸಲವಿದ್ಯೆ, ದಹರವಿದ್ಯೆ, ಸದ್ವಿದ್ಯೆ ಇವೇ ಮುಂತಾದವುಗಳಾಗಿವೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಬ್ರಹ್ಮ ವಿದ್ಯೆಗಳಲ್ಲಿ ನ್ಯಾಸವಿದ್ಯೆ ಎಂಬುದು ಪ್ರಪತ್ತಿಯೋಗ. ಪರಮಕಾರುಣಿಕನಾದ ಶ್ರೀಮನ್ನಾರಾಯಣನಲ್ಲಿ ಈ ಜೀವಾತ್ಮ ನಿನ್ನದು ಎಂದು ಮಹಾವಿಶ್ವಾಸದೊಂದಿಗೆ ಆತ್ಮಸಮರ್ಪಣೆ ಮಾಡುವುದೇ ಪ್ರಪತ್ತಿಯೋಗ. ಶ್ರೀಮನ್ನಾರಾಯಣನೊಬ್ಬನೆ ಉಪಾಯವೆಂದು ಅಕಿಂಚನ್ಯ ಮತ್ತು ಅನನ್ಯಗತಿತ್ವದೊಂದಿಗೆ ಪ್ರಾರ್ಥಿಸುವ ಜ್ಞಾನವೇ ಶರಣಾಗತಿ ಅಥವಾ ಪ್ರಪತ್ತಿ ಎನಿಸುವುದು. **ತ್ವಮೇವೋಪಾಯಭೂತೋ ಮೆ ಭವೇತಿ ಪ್ರಾರ್ಥನಾ ಮತಿಃ । ಶರಣಾಗತಿರಿತ್ಯುಕ್ತಾ ಸಾ ದೇವೇಪಿ ಸ್ಮಿತ್ ಪ್ರಯುಜ್ಯತಾಂ ॥** ಈ ರೀತಿಯಾಗಿ ಪಾಂಚರಾತ್ರಾದಿ ಶಾಸ್ತ್ರಗಳಲ್ಲಿ ಇದರ ವೈಭವವನ್ನು ವಿವರಿಸಿದೆ.

ಫಲಂ ಪ್ರಾಪ್ತೇ :– ಪುರುಷಾರ್ಥ ಸ್ವರೂಪ :– ಶೇಷಭೂತನಾದ ಜೀವನಿಗೆ ಶೇಷಿ ಪ್ರಾಪ್ತಿಯೇ ಪರಮಪುರುಷಾರ್ಥ. ಭಗವದಾಶ್ರಯ ಬಲದಿಂದ ಪುಣ್ಯ ಪಾಪಗಳೆಲ್ಲವೂ ನಶಿಸಿದ ಮೇಲೆ ಚೇತನನು ಈ ಸ್ಥೂಲ ಶರೀರವನ್ನು ತ್ಯಜಿಸಿ, ಸೂಕ್ಷ್ಮಶರೀರದಿಂದ ಅರ್ಚಿರಾದಿ ಮಾರ್ಗದಿಂದ ಹೊರಟು ವಿರಜಾನದೀ ಸ್ನಾನದಿಂದ ಸೂಕ್ಷ್ಮಶರೀರವನ್ನು ಬಿಟ್ಟು ಅಮಾನವ ಕರಸ್ಪರ್ಶವನ್ನು ಪಡೆದು ಶುದ್ಧಸತ್ತ್ವಮಯವಾಗಿ ಜ್ಞಾನಾನಂದವುಳ್ಳವನಾಗಿ ಶ್ರೀಮನ್ನಾರಾಯಣನನ್ನು ನಿತ್ಯಕೈಂಕರ್ಯ ರೂಪದಿಂದ ಅನುಭವಿಸುತ್ತಾ ನಿತ್ಯಾನಂದವನ್ನು ಪಡೆಯುವುದೇ ಪುರುಷಾರ್ಥವಾದ ಮೋಕ್ಷ.

ಉಪಾಯ :– ರಹಸ್ಯತ್ರಯದಲ್ಲಿ ಕಂಡುಬರುವ ಅಂಶವೇನೆಂದರೆ ತಿರುಮಂತ್ರದಲ್ಲಿರುವ ನಮಸ್ಸಿನಲ್ಲಿ ಮತ್ತು ಅಯನ ಶಬ್ದದಲ್ಲಿ , ದ್ವಯಮಂತ್ರದ ಪೂರ್ವಾರ್ಧವೂ ಹಾಗೂ ನಮಃ ಶಬ್ದದಲ್ಲಿಯೂ, ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಎಂದು ಚರಮಶ್ಲೋಕದಲ್ಲಿಯೂ ನಾವು ತಿಳಿಯಬೇಕು.

ಫಲ ಸ್ವರೂಪ :– ದ್ವಯಮಂತ್ರದ ಉತ್ತರ ಖಂಡದಲ್ಲಿ ಇರುವ ನಮಃ ಎಂಬ ಶಬ್ದವು ನ ಮಮ ನಾನು, ನನ್ನದು ಎಂಬ ಅಹಂಕಾರ ಮಮಕಾರವೆಂಬ ಅನಿಷ್ಟನಿವೃತ್ತಿ ರೂಪ ಫಲವನ್ನು ತಿಳಿಸುತ್ತದೆ. ಚರಮಶ್ಲೋಕದಲ್ಲಿ ಕಂಡು ಬರುವ ಮೋಕ್ಷಯಿಷ್ಯಾಮಿ ಎಂಬ ಪದದಿಂದ ಇಷ್ಟಪ್ರಾಪ್ತಿಯು ದೊರಕುತ್ತದೆ.

ಪ್ರಾಪ್ತಿ ವಿರೋಧಿ ಚ :– ವಿರೋಧಿ ಸ್ವರೂಪವು ಭಗವದ್ವ್ಯತಿರಿಕ್ತ ವಿಷಯಗಳನ್ನು ಆಶ್ರಯಿಸುವುದಕ್ಕೆ ಪ್ರೇರಕಗಳಾದ ಅಹಂಕಾರ ಮಮಕಾರಗಳಾಗಿವೆ. ಇವು ನಾವು ಹೊಂದಬೇಕಾದ ಪರಮಪುರುಷಾರ್ಥವಾದ ಮೋಕ್ಷವನ್ನು ಹೊಂದಲು ಅವಕಾಶ ನೀಡದೆ ಇರುವುದಾಗಿದೆ. ಭಗವತ್ ಪ್ರಾಪ್ತಿಗೆ ಪ್ರಧಾನ ವಿರೋಧಿ ಅವಿದ್ಯಾಕರ್ಮವಾಸನಾದಿಗಳು. ಅಂದರೆ ದೇಹವೇ ಆತ್ಮ ಎಂಬ ಬುದ್ಧಿ, ಆತ್ಮನನ್ನು ಸ್ವತಂತ್ರನೆಂದು ಭಾವಿಸುವುದು. ಅರ್ಥಾತ್ ದೇಹಾತ್ಮ ಭ್ರಮೆ ಮತ್ತು ಸ್ವತಂತ್ರಾತ್ಮ ಭ್ರಮೆ ಎಂಬುದಾಗಿದೆ.

ಹೀಗೆ ಶ್ರೀವೇದಾಂತದೇಶಿಕರು ಲಕ್ಷ್ಮೀನಾರಾಯಣನೇ ಪ್ರಾಪ್ತನಾದ ಬ್ರಹ್ಮನೆಂದು, ಅವನ ಚರಣಾರವಿಂದಗಳಲ್ಲಿ ಶರಣಾಗತರಾಗಿ ಅವನ ಕೃಪೆಯನ್ನೇ ಅವಲಂಬಿಸಿರುವವನು ಜೀವಾತ್ಮ. ಆ ಜೀವಾತ್ಮನು ಪರಿಗ್ರಹಿಸಬೇಕಾದ ಉಪಾಯಗಳು ಭಕ್ತಿ ಮತ್ತು ಪ್ರಪತ್ತಿಗಳು. ಇವುಗಳಲ್ಲಿ ಒಂದನ್ನು ಅನುಷ್ಠಿಸಿದರೂ ಸಾಕು ಎಂಬುದಾಗಿಯೂ, ಉಪಾಯಗಳಿಂದ ಲಭಿಸುವ ಪರಮ ಪುರುಷಾರ್ಥವೇ ಮೋಕ್ಷವೆಂಬ ಫಲ. ಇದಕ್ಕೆ ವಿರೋಧಿಯಾದದ್ದು ಅನಾದಿಯಾದ ಅವಿದ್ಯಾರೂಪವಾದ ಸಂಸಾರವೆಂಬ ಕರ್ಮಬಂಧನ. ಇವೆಲ್ಲದರ ಅರ್ಥಗಳನ್ನು ಅದ್ಭುತವಾಗಿ ನಮಗೆ ಉಪದೇಶಿದ್ದಾರೆ.

ಶ್ರೀನಿಗಮಾಂತಮಹಾದೇಶಿಕರು ತಮ್ಮ ರಹಸ್ಯತ್ರಯಗಳಲ್ಲಿ ಅರ್ಥಪಂಚಕದ ಅರ್ಥವನ್ನು ಹೀಗೆ ವಿವರಿಸಿದ್ದಾರೆ.

ಪರಬ್ರಹ್ಮ ಸ್ವರೂಪವನ್ನು ಪ್ರಥಮಾಕ್ಷರವಾದ ಅಕಾರವೂ, ತದ್ವಿವರಣವಾದ ನಾರಾಯಣ ಪದವೂ, ಜೀವಾತ್ಮ ಸ್ವರೂಪವನ್ನು ತೃತೀಯಾಕ್ಷರವಾದ ಮ ಕಾರವೂ,ತದ್ವಿವರಣವಾದ ಚತುರ್ಥಿ ಪ್ರತ್ಯಯವೂ, ನಾರ ಪದವು ಉಪಾಯಸ್ವರೂಪವನ್ನು, ಮಧ್ಯಮ ಪದವಾದ ಅಖಿಂಡ ನಮಸ್ಸು ಪುರುಷಾರ್ಥ ಸ್ವರೂಪವನ್ನು ತಾದರ್ಥ್ಯ ಚತುರ್ಥಿಯಿಂದ ಕೂಡಿರುವ ನಾರಾಯಣ ಪದವೂ, ಸ್ವರೂಪ ವಿರೋಧವನ್ನು, ಉಪಾಯ ವಿರೋಧವನ್ನು, ಪ್ರಾಪ್ಯ ವಿರೋಧವನ್ನು ಈ ಮೂರರ ಸ್ವರೂಪವನ್ನು ಖಂಡ ನಮಸ್ಸು ತಿಳಿಸುತ್ತದೆ. ನ–ಮಃ ಎಂಬ ಎರಡಕ್ಷರದಿಂದ ಅಹಂಕಾರ– ಮಮಕಾರಗಳಾದ ನಾನು, ನನ್ನದು ಎಂಬುದನ್ನು ತ್ಯಜಿಸಬೇಕೆಂದು ವಿಶದೀಕರಿಸಿದ್ದಾರೆ. ಆದ್ದರಿಂದಲೇ **ಅರ್ಥ ಪಂಚಕ ತತ್ತ್ವ ಜ್ಞಾಃ ಪಂಚ ಸಂಸ್ಕಾರ ಸಂಸ್ಕೃತಾಃ** ಎಂಬುದು ಅಕ್ಷರಶಃ ಸತ್ಯವಾದದ್ದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶುಭಂ ಭೂಯಾತ್

ಆದಿತ್ಯ ಹೃದಯ ಸ್ತೋತ್ರ

ಶ್ರೀಮತೀ ವನಮಾಲಾ. ಎ

ಬೆಂಗಳೂರು

ಲಕ್ಷ್ಮೀಹಯಾಸ್ಯ ಪದೂವರಿವಸ್ಯೈ ಕಾಂತಮಾನಸಸ್ಸತತಂ ।
ಜಯತು ಶ್ರೀಮದಭಿನವರಾಮಾನುಜ ಸಂಯಮೀಂದ್ರ ಪರಕಾಲಃ ॥

ಮಾನವನು ದೇವನ ಮಹಾಶಕ್ತಿಗೆ ಮಣಿದು ಸಹಜವಾಗಿ ಭಯ – ಭಕ್ತಿಗಳಿಂದ ಅನುಗ್ರಹಕ್ಕಾಗಿ ಅಪನನ್ನು ಸ್ತೋತ್ರ ಮಾಡುತ್ತಾನೆ. ಭಕ್ತನು ದೇವನೊಡನೆ ವ್ಯವಹರಿಸುವ ಮಾಧ್ಯಮ ಅಥವಾ ಭಾಷೆಯೇ ಸ್ತೋತ್ರ, ಭಗವಂತನ ಮಹಿಮೆಯನ್ನು ಕೊಂಡಾಡುವ ಮೂಲಕ ತನ್ನ ಹೃದಯದ ಭಕ್ತಿಯನ್ನು ತೋಡಿಕೊಳ್ಳುವ ಒಂದು ಮಾರ್ಗ ಇದು ಭಾವ ಪ್ರದರ್ಶನವಿರುವುದರಿಂದ ಸ್ತೋತ್ರಗಳು ಮೋಹಕವಾಗಿರುತ್ತವೆ. ಸಂಗೀತ ಬೆರೆತರಂತೂ ಭಾವದ ಹುಚ್ಚು ಹೊಳೆ ಹರಿಯುತ್ತದೆ. ಚಂಚಲ ಚಿತ್ತವನ್ನು ಏಕತ್ರ ಸ್ಥಿರವಾಗಿ ನಿಲ್ಲಿಸಲು ಸ್ತೋತ್ರ ಸಮರ್ಥವಾದುದು. ಇದು ಭಾರತೀಯರ ಜೀವನಕ್ಕೆ ಅವಿಭಾಜ್ಯವಾಗಿ ಸೇರಿಕೊಂಡಿದೆ.

ಸಂಹಿತೆಗಳ ಕಾಲದಿಂದ ಹಿಡಿದು ಇಂದಿನವರೆಗೆ ಅಪರಿಮಿತವಾಗಿ ಸ್ತೋತ್ರ ಸಾಹಿತ್ಯ ಬೆಳೆದಿದೆ. ಋಕ್ಸಂಹಿತೆಯ ಸ್ತೋತ್ರ ರೂಪವಾದುದು. ಪ್ರಭುಸಂಮಿತೆ, ಮಿತ್ರಸಂಮಿತೆ, ಕಾಂತಾಸಂಮಿತೆ, ಈ ಮೂರು ಪ್ರಕಾರಗಳಲ್ಲೂ ಸ್ತೋತ್ರವಿದೆ, ಸಂಸ್ಕೃತಕಾವ್ಯಗಳ ಆದಿ ಹಾಗೂ ಅಂತ್ಯಗಳಲ್ಲಿ ಸ್ತೋತ್ರವಿದೆ. ಕಾಳಿದಾಸ, ಭಾರವಿ, ಮಾಘ, ಭವಭೂತಿ ಭಾಸ ಮುಂತಾದವರ ಕೃತಿಗಳಲ್ಲಿನ ಸ್ತೋತ್ರಗಳು ಹೃದ್ಯವಾಗಿವೆ ನೂರೆಂಟು, ಸಾವಿರದೆಂಟು, ದೇವರನಾಮಗಳ ರೂಪದಲ್ಲಿರುವ ಸ್ತೋತ್ರಗಳೂ ಉಂಟು.

ಸ್ತೋತ್ರಗಳಲ್ಲಿ ಧರ್ಮ, ಮತ, ಭಕ್ತಿ ಮತ್ತು ಸಾಹಿತ್ಯಗಳು ಬೆರೆತುಹೋಗಿವೆ. ಅಗಸ್ತ್ಯ ಋಷಿಗಳು ರಾಮನಿಗೆ ಉಪದೇಶ ಮಾಡಿರುವ ಆದಿತ್ಯ ಹೃದಯ ಸ್ತೋತ್ರವನ್ನು ಪಠಿಸುವುದರಿಂದ ಎಲ್ಲಾ ಕಷ್ಟಗಳೂ ನಿವಾರಣೆಯಾಗುವುದು ಹಾಗೂ ಎಲ್ಲಾ ಕಾರ್ಯಗಳಲ್ಲೂ ಮಂಗಳವಾಗುವುದು.

ಸ್ತೋತ್ರ ಸಾಹಿತ್ಯ

ಆದಿತ್ಯ ಹೃದಯ

ततो युद्ध परिश्रान्तं समरे चिन्तथा स्थितम् । रावणं च अग्रतो दृष्ट्वा युद्धाय समुपस्थितम् ॥
दैवतश्च समागम्य दृष्टमभ्यागतो रणम् । उपागम्याब्रवीद्रामेमगस्त्थो भगवान् ऋषि : ॥

ದೇವತೆಗಳೊಡನೆ ಯುದ್ಧವನ್ನು ವೀಕ್ಷಿಸಲು ಬಂದಿದ್ದ ಅಗಸ್ತ್ಯ ಋಷಿಗಳು ಯುದ್ಧದಲ್ಲಿ ದಣಿದಿದ್ದ, ಮುಂದೆ ಯುದ್ಧಸನ್ನದ್ಧನಾಗಿ ನಿಂತಿರುವ ರಾವಣನನ್ನು ನೋಡಿ ಚಿಂತಿತನಾಗಿದ್ದ ರಾಮನನ್ನು ನೋಡಿ ಹೀಗೆ ಹೇಳಿದನು

राम राम महाबाहो श्रुणु गुह्मं सनातनम् । येन सर्वानरीन् वत्स समरे विजयिष्यसि ॥

ಎಲೈ ರಾಮನೆ, ಮಹಾಬಾಹುವೆ, ಯಾವುದರಿಂದ ನೀನು ಯುದ್ಧದಲ್ಲಿ ಎಲ್ಲ ಶತ್ರುಗಳನ್ನು ಜಯಿಸುತ್ತೀಯೋ ಆ ಸನಾತನ ರಹಸ್ಯವನ್ನು ಕೇಳು.

आदित्यह्रदयं पुण्यं सर्वशत्रुविनाशनम् । जयावहं जपेन्नित्यमक्षयं परमं शिवम् ॥

ಆದಿತ್ಯಹೃದಯವೆಂಬ ಈ ಪುಣ್ಯಸ್ತುತಿಯನ್ನು ನಿತ್ಯವೂ ಜಪಿಸಿದರೆ ನಿನ್ನ ಎಲ್ಲ ಶತ್ರುಗಳೂ ನಾಶವಾಗುತ್ತಾರೆ, ನಿನಗೆ ಜಯ ಸಿಕ್ಕುತ್ತದೆ ಮತ್ತು ಅಕ್ಷಯವಾದ ಪರಮ ಮಂಗಳವುಂಟಾಗುತ್ತದೆ.

सर्वमङ्गलमाङ्ल्यं सर्वपापप्रणाशनम् । चिन्ताशोकप्रशमनमायुर्वर्धनमुत्तमम् ॥

ಇದು ಎಲ್ಲ ಮಂಗಲಕ್ಕೂ ಮಂಗಲಕರವಾದುದು ಎಲ್ಲ ಪಾಪಗಳನ್ನು ನಾಶಮಾಡುವಂತಹುದು, ಚಿಂತೆಶೋಕಗಳನ್ನು ಪರಿಹರಿಸುವಂತಹುದು ಮತ್ತು ದೀರ್ಘಾಯುಸ್ಸನ್ನು ನೀಡುವಂತಹುದು.

रश्मिमन्तं समुद्यन्तं देवासुरनमस्कृतम् । पूजयस्व विवस्वन्तं भास्करं भुवनेश्वरम् ॥

ದೇವಾಸುರರಿಂದ ನಮಸ್ಕರಿಸಲ್ಪಡುವ, ರಶ್ಮಿಗಳಿಂದ ಕೂಡಿದ, ತನ್ನ ಪ್ರಭೆಯಿಂದ ಬೇರೆ ಬೆಳಗುವ ವಸ್ತುಗಳನ್ನು ಕಳೆಗುಂದಿಸುವ, ಜಗತ್ತಿಗೆ ಒಡೆಯನಾದ, ಉದಯಿಸುತ್ತಿರುವೆ ಭಾಸ್ಕರನನ್ನು ಪೂಜಿಸು.

सर्वदेवात्मको हि एषः तेजस्वी रश्मिभावानः। एष देवासुरगणान् लोकान् पाति गमस्तिभिः ।

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅವನು ಎಲ್ಲಾ ದೇವತೆಗಳನ್ನೂ ಪ್ರತಿನಿಧಿಸುತ್ತಾನೆ. ಅವನು ತೇಜಸ್ಸಿ ಮತ್ತು ತನ್ನ ಕಿರಣಗಳಿಂದ ಎಲ್ಲರನ್ನು ಪೋಷಿಸುತ್ತಿರುವನು. ಅವನು ತನ್ನ ಶಕ್ತಿಯುತ ಕಿರಣಗಳಿಂದ ದೇವಾಸುರರನ್ನೂ ಲೋಕಗಳನ್ನೂ ರಕ್ಷಿಸುತ್ತಿರುವನು.

एष ब्रह्मा च विष्णुश्च शिवः स्कन्धः प्रजपतिः । महेन्द्रो धनदः कालो यमः सोमोहपांपतिः ।

ಅವನೇ ಬ್ರಹ್ಮ, ವಿಷ್ಣು, ಶಿವ, ದೇವಸೇನಾಪತಿಸ್ಕಂದ, ಪ್ರಜಾಪತಿ ಮತ್ತು ಮಹೇಂದ್ರ, ಕುಬೇರನೂ ಅವನೇ, ಅವನೇ ಕಾಲ ಮತ್ತು ಯಮ ಸೋಮ ಮತ್ತು ವರಣರೂ ಅವನೇ.

पितरो वसवः साध्या हि अश्विनौ झश्विनौ मरुतो मनुः । वायुर्वन्हिः प्रजापाण ऋतुकर्ता प्रभाकरः ॥

ಅವನೇ ಪಿತೃಗಳು, ಅಷ್ಟವಸುಗಳೂ ಅವನೇ, ಸಾಧ್ಯರೂ, ಅಶ್ವಿನೀ ದೇವತೆಗಳೂ ಮರುದ್ಗಣಗಳೂ ಮತ್ತು ಮನುವೂ ಅವನೇ. ಅವನೇ ವಾಯು ಮತ್ತು ಅಗ್ನಿ, ಎಲ್ಲರ ಪ್ರಾಣಶಕ್ತಿಯೂ ಅವನೇ ಆರು ಋತುಗಳನ್ನು ಉಂಟುಮಾಡುವನೂ ಪ್ರಭಾಕರನೂ ಅವನೇ.

आदित्यः सविता सूर्यः खगः पूषा गभस्तिमान् । सुवर्णसदृशो भानुर्हिरण्यरेता दिवाकर ॥

ಅವನೇ ಅದೀಪುತ್ರ, ವಿಶ್ವಕರ್ತಾ, ಕ್ರಿಯೋತ್ತೇಜಕ, ಆಕಾಶದಲ್ಲಿ ಚಲಿಸುವವನು, ಪೋಷಕನು, ಎಲ್ಲಾ ದಿಕ್ಕುಗಳನ್ನು ಬೆಳಗುವವನು, ಸ್ವರ್ಣಮಯ ಪ್ರಭೆಯುಳ್ಳವನು, ವಿಶ್ವೋತ್ಪತ್ತಿಯ ಬೀಜ ಮತ್ತು ಹಗಲು ಉಂಟುಮಾಡುವನು.

हरिदश्वः सहस्रार्चिः सप्तसप्तिर्मरीचिमान् । तिभिरोन्मथनः शंम्भुस्त्वष्टा मार्ताण्ड अंशुमान् ॥

ಅವನು ಹಸಿರು ಕುದುರೆಗಳುಳ್ಳವನು, ಆ ಸಂಖ್ಯೆ ಕಿರಣಗಳುಳ್ಳವನು, ಏಳು ಇಂದ್ರಿಯಗಳ (ಎರಡು ಕಣ್ಣು, ಎರಡು ಕಿವಿ, ಎರಡು ಮೂಗು ಮತ್ತು ಒಂದು ನಾಲಿಗೆ) ಶಕ್ತಿ ಕತ್ತಲೆಯನ್ನು ಹೋಗಲಾಡಿಸುವವನು, ಸಂತೋಷವನ್ನುಂಟು ಮಾಡುವವನು, ಭಕ್ತರ ಅಶುಭವನ್ನು ಹೋಗಲಾಡಿಸುವವನು, ಜಗತ್ತಿಗೆ ಪ್ರಾಣದಾಯಕನು ಮತ್ತು ಕಿರಣಗಳಿಂದ ಕೂಡಿರುವವನು.

हरिण्यगर्भः शिशिरस्तपनो भास्करो रविः । अग्निगर्भोदितेः पुत्रः शंखः शिशिरनाशनः ।

ಅವನೇ ಹಿರಣ್ಯಗರ್ಭನು, ಶೀತಲನೂ ತಪಿಸುವವನೂ ಅವನೇ, ಉಜ್ವಲ ಕಿರಣಗಳುಳ್ಳ ರವಿಯೂ ಅವನೇ. ಒಳಗೆ ಅಗ್ನಿಯನ್ನು ಧರಿಸಿದ ಅದಿತಿಯ ಪುತ್ರನು ಅವನು. ಅನಂತ ಶುಭದಾಯಕನೂ ಓಡತೆಯನ್ನು ನಾಶಮಾಡುವವನೂ ಅವನು.

व्योमनाथस्तमोभेदी ऋग् यजुस् सामपारगः । घनवृष्टरपां मित्रो विन्ध्यविथील्पवंगमः ॥

ಅವನು ಆಕಾಶಕ್ಕೆ ಒಡೆಯನು, ತಮಸ್ಸನ್ನು ಹೋಗಲಾಡಿಸುವವನು, ಋಕ್ – ಯಜುಸ್ – ಸಾಮವೇದಗಳಲ್ಲಿ ಪಾರಂಗತನಾದವನು, ಮಳೆಯನ್ನು ಸುರಿಸುವವನು, ನೀರಿನ ಮಿತ್ರನು ಮತ್ತು ವಿಂಧ್ಯಪರ್ವತ ಶ್ರೇಣಿಯನ್ನು ದಾಟಿದವನು.

आतपी मण्डली मृत्युः पिङ्गलः सर्वतापनः । कविर्विश्वो महातेजा रक्तः सर्वभवोद्भवः ॥

ಅವನು ಯಾವಾಗಲೂ ಬ್ರಹ್ಮನಂತೆ ಸೃಷ್ಟಿಕ್ರಿಯೆಯಲ್ಲಿ ನಿರತನಾದವನು ಕೌಸ್ತುಭದಿಂದ ಶೋಭಿಸುವ ವಿಷ್ಣುವಿನಂತೆ ಮಂಡಲಾಕಾರನು ಮತ್ತು ಎಲ್ಲವನ್ನು ನಾಶಮಾಡುವವನು (ಶಿವ) ಅವನು ಪಿಂಗಳವರ್ಣವುಳ್ಳವನು (ಉದಿಸುವ ಸೂರ್ಯ) ಮತ್ತು ಎಲ್ಲವನ್ನೂ ತಪಿಸುವವನು. ಅವನೇ ಕ್ರಾಂತದರ್ಶಿ, ವಿಶ್ವಸ್ವರೂಪ, ಮಹಾತೇಜನು, ಎಲ್ಲರಿಗೂ ಪ್ರಿಯವಾದವನು ಮತ್ತು ಕ್ರಿಯೆಗಳನ್ನು ಹುಟ್ಟಿಸುವವನು.

नक्षत्रग्रहताराणामधिपो विश्वभावनः । तेजसामपि तेजस्वि व्दादशात्मन्नमोस्त्वडते ।

ನಕ್ಷತ್ರ, ಗ್ರಹ ತಾರಾಗಣಗಳಿಗೆ ಅವನು ಅಧಿಪನು ಮತ್ತು ವಿಶ್ವದಲ್ಲಿರುವುದಕ್ಕೆಲ್ಲ ಮೂಲಪುರುಷನು, ಎಲ್ಲ ತೇಜಸ್ಸುಗಳಿಗೂ ಅವನೇ ಮೂಲತೇಜಸ್ಸು, ದ್ವಾದಶರೂಪದಲ್ಲಿ ಆವಿರ್ಭವಿಸಿರುವ ನಿನಗೆ ನಮಸ್ಕಾರ.

नमः पूर्वाय गिरचे पश्चिमायाद्रये नमः । ज्योतिर्गणानां पतये दिनाधिपतये नमः ।

ಪೂರ್ವಾಚಲ ದೇವತೆಗೆ ನಮಸ್ಕಾರ, ಪಶ್ಚಿಮಾಚಲ ದೇವತೆಗೆ ನಮಸ್ಕಾರ. ಜ್ಯೋತಿರ್ಗಣಗಳ ಒಡೆಯನಿಗೂ ಹಗಲಿನ ಒಡೆಯನಿಗೂ ನಮಸ್ಕಾರ.

जयाय जयभद्राय हर्यश्वाय नमो नमः । नमो नमः सहस्रांशो आदित्याय नमो नमः ।

ಜಯವನ್ನುಂಟು ಮಾಡುವವನಿಗೂ ಐಶ್ವರ್ಯ ಪ್ರದನಿಗೂ ಹಳದಿ ಕುದುರೆಯುಳ್ಳವನಿಗೂ ನಮಸ್ಕಾರ. ಅಸಂಖ್ಯ ಕಿರಣಗಳುಳ್ಳ ಆದಿತ್ಯನಿಗೆ ನಮಸ್ಕಾರ.

नम उग्राय वीराय सारङ्गाय नमो नमः । नमः पद्मप्रबोधाय मार्ताण्डाय नमो नमः ।।

ಉಗ್ರನಿಗೂ, ವೀರನಿಗೂ, ವೇಗವಾಗಿ ಚಲಿಸುವವನಿಗೂ ನಮಸ್ಕಾರ, ತಾವರೆಯನ್ನು ಅರಳಿಸುವವನಿಗೂ ಮಾರ್ತಾಂಡನಿಗೂ ನಮಸ್ಕಾರ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ब्रह्मेशानाच्युतेशाय सूर्यायादित्यवर्यसे । भास्वते सर्वभक्षाय रौद्राय वपुषे नमः ।

ಬ್ರಹ್ಮ, ಶಿವ ಆಚ್ಯುತರ ಒಡೆಯನಿಗೂ, ಸೂರ್ಯನಿಗೂ, ಎಲ್ಲವನ್ನೂ ಬೆಳಗುವ ಮತ್ತು ಎಲ್ಲವನ್ನೂ ಭಕ್ಷಿಸುವ ಆದಿತ್ಯವರ್ಚಸ್ಸಿಗೂ ಮತ್ತು ಭಯಂಕರ ಶರೀರವುಳ್ಳವನಿಗೂ ನಮಸ್ಕಾರ.

तमोघ्नाय हिमघ्नाय शत्रुघ्नायामितात्मने । कृतघ्नघ्नाय देवाय ज्योतिषां पतये नमः ॥

ತಯೋನಾಶಕನಿಗೂ, ಹಿಮನಾಶಕನಿಗೂ, ಶತ್ರುನಾಶಕನಿಗೂ, ಆನಂತಾತ್ಮನಿಗೂ ಕೃತಘ್ನರನ್ನು ನಾಶಮಾಡುವವನಿಗೂ, ದೇವನಿಗೂ ಮತ್ತು ಜ್ಯೋತಿಗಳ್ ಒಡೆಯನಿಗೂ ನಮಸ್ಕಾರ.

तप्तचामीकराभाय वह्नये विश्वकर्मणे । नमस्तमोऽभिनिघ्नाय रुचये लोकसाक्षिणे ॥

ಕರಗಿದ ಚಿನ್ನದಂತೆ ಬೆಳಗುತ್ತಿರುವವನಿಗೂ ಅಗ್ನಿಸ್ವರೂಪನಿಗೂ ವಿಶ್ವಕರ್ಮನಿಗೂ ಕತ್ತಲೆಯನ್ನು ನಾಶಮಾಡುವವನಿಗೂ ವಿಶ್ವಸಾಕ್ಷಿಯಾದ ಜ್ಯೋತಿರ್ಮಯನಿಗೂ ನಮಸ್ಕಾರ.

नाशयत्येष वै भूतं तदेव सृजति प्रभुः । पायत्येष तपत्येष वर्षत्येष गभस्तिभिः ॥

ಆವನೇ ಎಲ್ಲವನ್ನೂ ನಾಶಮಾಡುತ್ತಾನೆ. ಮತ್ತೆ ಆವನೇ ಎಲ್ಲವನ್ನೂ ಪುನಃ ಸೃಷ್ಟಿಸುತ್ತಾನೆ. ಆವನೇ ತನ್ನ ಕಿರಣಗಳ ಮೂಲಕ ನೀರನ್ನು ಸೆಳೆದುಕೊಂಡು, ಅದನ್ನು ಮೋಡವಾಗಿ ಪರಿವರ್ತಿಸಿ ಮಳೆಯ ರೂಪದಲ್ಲಿ ಸುರಿಸುವನು.

एष सुप्तेषु जागर्ति भूतेषु परिनिष्ठितः। एष एवाग्निहोत्रं च फलं चैवाग्निहोत्रिणाम् ॥

ಆವನು ಎಲ್ಲರ ಹೃದಯದಲ್ಲಿ ನೆಲೆಸಿದ್ದು ಎಲ್ಲರೂ ನಿದ್ರಿಸುವಾಗ ಆವನ ಎಚ್ಚರಿರುತ್ತಾನೆ. ಆವನೇ ಅಗ್ನಿಹೋತ್ರ ಮತ್ತು ಹೋತ್ರಿಗಳಿಗೆ ದೊರೆಯುವ ಫಲವೂ ಆವನೇ.

वेदाश्च क्रतवश्चैव क्रतूनां फलमेव च । यानि कृत्यानि लोकेषु सर्व पष रविः प्रभुः ॥

ಆವನೇ ವೇದಗಳಾಗಿರುವನು, ಎಲ್ಲ ಕರ್ಮಗಳೂ ಮತ್ತು ಕರ್ಮಫಲವೂ ಆವನೇ ಆಗಿರುವನು. ಪ್ರಪಂಚದಲ್ಲಿರುವ ಎಲ್ಲ ಕೃತ್ಯಗಳಿಗೂ ಈ ರವಿಯೇ ಒಡೆಯ ಫಲಶ್ರುತಿ.

एतमापत्सु कृच्छ्रेषु कान्तारेषु भयेषु च । कीर्तयन् पुरुषः कश्चिन्नावसीदति राघव ॥

ಎಲೈ ರಾಘವನೆ, ಕಷ್ಟಕಾಲದಲ್ಲಿ ಸಂಕಟ ಪರಿಸ್ಥಿತಿಯಲ್ಲಿ, ಆರಣ್ಯ ಮಧ್ಯದಲ್ಲಿ ಸಿಕ್ಕಿಕೊಂಡು ಭಯಗೊಂಡಿರುವಾಗ ಮನುಷ್ಯನು ಈ ಸ್ತೋತ್ರವನ್ನು ಪಠಿಸಿದರೆ ಆವನು ದುಃಖಿಕ್ಕೀಡಾಗುವುದಿಲ್ಲ.

पूजयस्वैनमेकाग्रो देवदेवं जगत्पतितम् । एतत् त्रिगुणितं जप्तवा युद्धेषु विजयिष्यसि ॥

ದೇವದೇವನಾದ ಜಗತ್ಪತಿಯಾದ ಇವನನ್ನು ಪೂಜಿಸು ಮೂರು ಬಾರಿ ಇದನ್ನು ಜಪಿಸಿದರೆ ಯುದ್ಧದಲ್ಲಿ ನೀನು ಜಯಶಾಲಿಯಾಗುತ್ತೀಯೆ.

अस्मिन् क्षणे महाबाहो रावणं त्वं वधिष्यसी । एवमुक्त्वा तदागस्त्यो जगाम च यथागतम् ॥

ಎಲೈ ಮಹಾಬಾಹುವೇ, ಇದೇ ಕ್ಷಣದಲ್ಲಿ ನೀನು ರಾವಣನನ್ನು ಕೊಲ್ಲುತ್ತೀಯೆ ಹೀಗೆ ಹೇಳಿ ಅಗಸ್ತ್ಯನು ಎಲ್ಲಿಂದ ಬಂದಿದ್ದನೋ ಅಲ್ಲಿಗೆ ಹಿಂದಿರುಗಿದನು.

एतत् श्रुत्वा महातेजा नष्टशोकोऽभवत्तदा । धारयामास सुप्रीतो राघवः प्रयतात्मवान् ॥

ಇದನ್ನು ಕೇಳಿ ಮಹಾತೇಜಸ್ವಿಯಾದ ರಾಘವನು ನಿಶ್ಚಿಂತನಾದನು. ಪುನಃ ಚೇತರಿಸಿಕೊಂಡು ಅತಿ ಉತ್ಸಾಹದಿಂದ ಸುಪ್ರೀತನಾದನು.

आदित्यं प्रेक्ष्य जप्त्वा तु परं हर्षमवाप्तवान् । त्रिराचम्य शुचिभूत्वा धनुरादाय वीर्यवान् ।

ಆದಿತ್ಯನನ್ನೇ ನೋಡುತ್ತ ಜಪವನ್ನು ಮಾಡಿ ರಾಘವನು ಅತ್ಯಂತ ಹರ್ಷಗೊಂಡನು ಮೂರು ಬಾರಿ ಆಚಮನ ಮಾಡಿ ಶುಚಿಯಾಗಿ ವೀರ್ಯವಂತನಾದ ಆವನು ಧನುಸ್ಸನ್ನು ಎತ್ತಿಕೊಂಡನು.

रावणं प्रेक्ष्य हृष्टात्मा युद्धाय समुपागतम् । सर्वयत्नेन महता वधे तस्य धृतोऽभवत् ।

ರಾವಣನನ್ನು ನೋಡಿ ಸಂತೋಷದಿಂದ ಯುದ್ಧಕ್ಕೆ ಮುಂದೆ ಬಂದನು. ಆವನನ್ನು ವಧಿಸುವ ನಿರ್ಧಾರದಿಂದ ಸರ್ವಯತ್ನದಲ್ಲಿ ತೊಡಗಿದನು.

अथ रविरवदन्निरीक्ष्य रामं मुदितमनाः परमं प्रहृष्यमाणः । निशिचरपतिसंक्षयं विदित्वा सुरगणमध्यगतो वचस्त्वरेति ॥

ರಾಕ್ಷಸರ ರಾಜನ ನಾಶವು ಸನ್ನಿಹಿತವಾಗಿರುವುದನ್ನು ತಿಳಿದುಕೊಂಡು ಸುರಗಣಮಧ್ಯದಲ್ಲಿದ್ದ ಸೂರ್ಯನು ಆನಂದದಿಂದ ರಾಮನನ್ನು ನೋಡುತ್ತ ಸಂತೋಷ ಚಿತ್ತನಾಗಿ ತ್ವರೆಮಾಡು ಎಂದು ರಾಮನಿಗೆ ಹೇಳಿದನು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ನಮ್ಮ ತಾತನವರ ಪಾತ್ರ

ಶ್ರೀಮತೀ ವಸುಧಾ ಅ. ಅಯ್ಯಂಗಾರ್

ಬೆಂಗಳೂರು

ನಮ್ಮ ತಾತನವರು ದಿನಾಂಕ 14.09.2011ಕ್ಕೆ ಜನಿಸಿ ನೂರು ವರ್ಷಗಳು ಆಗುವುದು. ನಾನು ತುಂಬಾ ಚಿಕ್ಕವಳಿದ್ದಾಗ ಮೈಸೂರಿನಲ್ಲಿರುವ ಶ್ರೀಪರಕಾಲ ಮಠಕ್ಕೆ ನಮ್ಮ ಹಿರಿಯರ ಜೊತೆಯಲ್ಲಿ ಹೋಗಿ ಅವರ ಆರ್ಶೀವಾದ ಪಡೆದು ಬರುತ್ತಿದ್ದೆ. ಹೆಚ್ಚಾಗಿ ಅವರ ಸಂಪರ್ಕ ನನಗೆ ಇರಲಿಲ್ಲ. ಆದರೆ ನಮ್ಮ ಮನೆಯಲ್ಲಿ ಹಿರಿಯರು ಅವರ ವ್ಯಕ್ತಿತ್ವದ ಬಗ್ಗೆ ಆಡುತ್ತಿದ್ದ ಮಾತುಗಳನ್ನು ಕೇಳಿ ತಿಳಿದ ವಿಷಯವನ್ನು, ಈ ಶತಮಾನೋತ್ಸವದ ಸಂದರ್ಭದಲ್ಲಿ ಅವರಿಗೆ ನನ್ನ ನುಡಿನಮನ ಕುಸುಮಗಳನ್ನು ಅರ್ಪಿಸಬೇಕೆಂದು ಆಶಿಸುತ್ತೇನೆ.

ಧರ್ಮಶಾಸ್ತ್ರಕಾರನಾದ ಶ್ರೀಮನು ಮಹಾರಾಜನು "ಯತ್ರನಾರ್ಯಸ್ತು ಪೂಜ್ಯಂತೆ, ತತ್ರರಮಂತೆ ದೇವತಾಃ" ಎಂದು ಹೇಳಿದ್ದಾನೆ. ಎಲ್ಲಿ ಸ್ತ್ರೀಯರು ಆದರದಿಂದ ಗೌರವಿಸಲ್ಪಡುತ್ತಾರೋ ಅಲ್ಲಿ ದೈವವು ಸಂತೋಷ ಪಡುತ್ತದೆ ಎಂಬುದು ಈ ವಾಕ್ಯದ ತಾತ್ಪರ್ಯ.

ನಮ್ಮ ಸನಾತನ ಧರ್ಮದಲ್ಲಿ ಸ್ತ್ರೀಯರಿಗೆ ವಿಶೇಷ ಆದರವಿದೆ. ಒಬ್ಬ ಪ್ರಸಿದ್ಧನಾದ ಪುರುಷನ ಹಿಂದೆ ಮಹಿಳೆಯ ಸಹಕಾರ ಇದ್ದೆ ಇರುವುದು. ಕುಟುಂಬದಲ್ಲಿ ಮಹಿಳೆಯರ ಪೂರ್ಣ ಸಹಕಾರ ಅತಿ ಮುಖ್ಯ. ಮಕ್ಕಳಿಗೆ "ಮನೆಯೇ ಮೊದಲ ಪಾಠಶಾಲೆ", ಆಂಗ್ಲರಲ್ಲಿ "CHARITY BEGINS AT HOME" ಎಂಬ ನಾಣ್ನುಡಿ ತುಂಬಾ ಪ್ರಸಿದ್ಧ. ಮಾನವನಾಗಿ ಜನಿಸಿದ ಮೇಲೆ ವಿದ್ಯೆಯನ್ನು ಕಲಿಯಬೇಕು, ಒಂದು ಕುಟುಂಬದಲ್ಲಿ ಮಹಿಳೆಯು ವಿದ್ಯಾವಂತಳಾದರೆ ಅದರ ಪೂರ್ಣ ಪ್ರಯೋಜನವನ್ನು ತನ್ನ ಕುಟುಂಬದ ಒಳಿತಿಗಾಗಿ ಮೀಸಲಿಡುತ್ತಾಳೆ. ಒರ್ವ ವಿದ್ಯಾವಂತ ಮಹಿಳೆ ಕುಟುಂಬಕ್ಕೆ ಒಂದು ದೊಡ್ಡ ಆಸ್ತಿ. ಮಹಿಳಾಮಣಿಗಳು ಬಾಲಕಿಯರು ವಿದ್ಯಾವಂತರಾಗಲು ಅನೇಕ ಮಹನೀಯರು ವ್ಯವಸ್ಥಿತ ರೀತಿಯಲ್ಲಿ ಪ್ರಯತ್ನ ಮಾಡಿ ಜಯಶೀಲರಾಗಿದ್ದಾರೆ.

ಈ ದಿಸೆಯಲ್ಲಿ ನಮ್ಮ ತಾತನವರಾದ ಶ್ರೀ ಅನಂತಾಚಾರ್ಯರು ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಬಹಳ ಒತ್ತು ನೀಡುತ್ತಿದ್ದರು. ಸಂಸ್ಕೃತ ಪಂಡಿತರಾಗಿದ್ದರೂ ಸಹ, ಅವರು ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ಪರಿಚಿತರಾದ ವ್ಯಕ್ತಿಗಳಿಗೆ, ಸಂಸ್ಕೃತ ಭಾಷೆಯನ್ನು ಕಲಿಯಲು ಪ್ರೋತ್ಸಾಹಿಸುತ್ತಿದ್ದರು. ಸ್ನೇಹಿತರ ಕುಟುಂಬದ ಸ್ತ್ರೀಯರಿಗೆ ತಮ್ಮ ವಿರಾಮದ ವೇಳೆಯನ್ನು ಸದುಪಯೋಗ ಮಾಡಿಕೊಳ್ಳಿ, ಸಂಸ್ಕೃತ ಭಾಷೆ ತುಂಬಾ ಪ್ರಯೋಜನಕಾರಿ ಎಂದು ವಿವರಿಸುತ್ತಿದ್ದರು. ಸಂಸ್ಕೃತ ಭಾಷೆಯಲ್ಲಿ ವಿಜ್ಞಾನದಿಂದ ಹಿಡಿದು ವೈದ್ಯ ವೃತ್ತಿಯವರೆಗೂ ಅನೇಕ ಪುಸ್ತಕಗಳು ಬರೆಯಲ್ಪಟ್ಟಿವೆ. ಈ ಭಾಷೆಯ ಕಲಿಕೆಯಿಂದ ಸ್ಪಷ್ಟ ಉಚ್ಚಾರಣೆ ಬರುವುದರ ಜೊತೆಗೆ ಭಾಷೆಯ ಲಾಲಿತ್ಯದ ಪರಿಚಯ, ಹೃದಯಂಗಮವಾದ ಶ್ಲೋಕಗಳ ಸುಭಾಷಿತಗಳು, ನೀತಿ ಸೂಕ್ತಗಳ, ಎಲ್ಲಕ್ಕಿಂತ ಹೆಚ್ಚಾಗಿ ರಾಮಾಯಣ, ಮಹಾಭಾರತ ಎರಡು ಮಹಾಕಾವ್ಯಗಳ ಮತ್ತು ಭಗವದ್ಗೀತೆಯ ಅಧ್ಯಯನ ಮತ್ತು ಪಾರಾಯಣಕ್ಕೂ ಬಹಳ ಉಪಕಾರ ಆಗುವುದು ಎಂದು ತಿಳಿ ಹೇಳುತ್ತಿದ್ದರು.

ಮೊದಲು ನಮ್ಮ ತಾತನವರು ಸ್ತ್ರೀ ವಿದ್ಯಾಭ್ಯಾಸಕ್ಕೆ ಮನೆಯನ್ನೇ ಪ್ರಥಮ ಕೇಂದ್ರವಾಗಿಸಿದರು. ತಮ್ಮ ಧರ್ಮಪತ್ನಿ ಶ್ರೀಮತಿ ನಾಗರತ್ನಿಮ್ಮನವರನ್ನೇ ಆಯ್ಕೆ ಮಾಡಿಕೊಂಡರು. ಕಾರಣ ನಮ್ಮ ಅಜ್ಜಿಯವರಿಗೆ ಚಿಕ್ಕಂದಿನಿಂದಲೂ ಓದುವ ಆಸಕ್ತಿ ಬಹಳ. ಮೊದಲು ಎಸ್.ಎಸ್.ಎಲ್.ಸಿ ಪರೀಕ್ಷೆ ಪಾಸು ಮಾಡಿದ ಮೇಲೆ, ಕನ್ನಡ ಪಂಡಿತ ಪರೀಕ್ಷೆಗೆ ಅಭ್ಯಾಸ ಮಾಡಲು ಸಕಲ ರೀತಿಯ ಸಹಕಾರ ನೀಡಿದರು. ಅದರ ಫಲವಾಗಿ ನಮ್ಮ ಅಜ್ಜಿಯವರು ಪರಿಶ್ರಮದಿಂದ ಅಧ್ಯಯನ ಮಾಡಿ ಎರಡು ಪರೀಕ್ಷೆಗಳಲ್ಲೂ ಉತ್ತಮವಾದ ಅಂಕಗಳನ್ನು ಪಡೆದು ತೇರ್ಗಡೆ ಹೊಂದಿದರು, ಜೊತೆಗೆ ಹಿಂದಿಯಲ್ಲಿ ರಾಷ್ಟ್ರಭಾಷಾ ವಿಶಾರದ ಪರೀಕ್ಷೆಯನ್ನು ಪಾಸು ಮಾಡಿದರು. ಕಲಿತ ವಿದ್ಯೆಯನ್ನು ಸಾರ್ಥಕ ಮಾಡಿಕೊಳ್ಳಬೇಕೆಂಬ ತಾತನವರ ಸೂಚನೆಗೆ ಅನುಸಾರವಾಗಿ ಉದ್ಯೋಗಕ್ಕೆ ಸೇರಿದರು. ಈಗ ಬೆಂಗಳೂರಿನಲ್ಲಿರುವ "ರಾಷ್ಟ್ರೀಯ ವಿದ್ಯಾಲಯ ಬಾಲಕಿಯರ ಪ್ರೌಢಶಾಲೆಯಲ್ಲಿ" ಕನ್ನಡ ಮತ್ತು ಹಿಂದಿ ಭಾಷಾ ಬೋಧಕಿಯಾಗಿ ಸುಮಾರು 30 ವರ್ಷಕ್ಕೂ ಮೇಲ್ಪಟ್ಟು ಕೆಲಸ ಮಾಡಿ ನಿವೃತ್ತರಾದರು. ಹೀಗೆ ನಮ್ಮ ತಾತನವರ ವಿದ್ಯಾಪ್ರೇಮ ಅಜ್ಜಿಯವರ ಜೀವನಕ್ಕೆ ಹೊಸ ತಿರುವನ್ನು ತಂದುಕೊಟ್ಟಿತು.

ನಮ್ಮ ಪಿತಾಮಹರು ಪ್ರಥಮವಾಗಿ ಉದ್ಯೋಗಕ್ಕೆ ಸೇರಿದ ಸ್ಥಳ ಚಿಂತಾಮಣಿ. ಒಂದು ದಿನ ಅಂದಿನ ಕರ್ತವ್ಯವನ್ನು ಮುಗಿಸಿಕೊಂಡು ಮನೆಗೆ ಹಿಂದಿಗಿರುತ್ತಿದ್ದಾಗ ಲಕ್ಷ್ಮೀ ಎಂಬ ಬಾಲಕಿಯು ನಮಸ್ಕಾರದೊಂದಿಗೆ ಇವರ ಎದುರಿಗೆ ಬಂದು ನಿಂತಳು. ಆಶ್ಚರ್ಯಗೊಂಡ ತಾತನವರು ಅವಳಿಗೆ ತಮ್ಮಿಂದ ಏನಾಗಬೇಕೆಂದು ಕೇಳಿದರು. ಅದಕ್ಕೆ ಲಕ್ಷ್ಮೀಯು ತಾನು ವಿದ್ಯಾಕಾಂಕ್ಷಿಯಾಗಿ ಅವರಲ್ಲಿಗೆ ಬಂದಿರುವುದಾಗಿ ತಿಳಿಸಿದಳು, ಆಯಿತು ನಾನು ಸಂಸ್ಕೃತ ಪಾಠವನ್ನು ಬೇಕಾದರೆ ಹೇಳಬಲ್ಲೆ, ಲಕ್ಷ್ಮೀಯು ತಾನು ಮಡಿವಾಳರ ಮನೆತನದ ಹುಡುಗಿ ಸಂಸ್ಕೃತ ಕಲಿಯಲು ಸಾಧ್ಯವೆ ಎಂದು ಪ್ರಶ್ನಿಸಿದಳು? ಅದಕ್ಕೆ ಆಚಾರ್ಯರು ವಿದ್ಯೆ ಕಲಿಯಲು ಬೇಕಾದದ್ದು ಉತ್ಸಾಹ, ಶ್ರದ್ಧೆ ಅದು ಇದ್ದರೆ ಯಾವುದು ಅಸಾಧ್ಯ ಎಂದು ತಿಳಿಸಿದರು. ಲಕ್ಷ್ಮೀಯ ಮಾತಾ ಪಿತೃಗಳಿಗೆ ಅವರ ಮಗಳ ವಿದ್ಯಾ ವ್ಯಾಮೋಹ ಸರಿಕಾಣಲಿಲ್ಲ. ಕಾರಣ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸುವ ತವಕ ಅವರದು. ಆದರೆ ನಮ್ಮ ತಾತನವರು ಅವರನ್ನು ಕರೆಸಿಕೊಂಡು ಸರಳ ರೀತಿಯಲ್ಲಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತಿಳಿಹೇಳಿ ವಿದ್ಯಾಭ್ಯಾಸದಿಂದ ಅವರ ಮಗಳ ಮದುವೆಗೆ ಅಡ್ಡಿಯಿಲ್ಲವೆಂದೂ ಮತ್ತು ತಾವೇ ಅವಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಾಗಿ ತಿಳಿಸಿದರು.

ನಂತರ ಲಕ್ಷ್ಮೀಯು ನಮ್ಮ ತಾತನವರ ದಿವ್ಯ ಮಾರ್ಗದರ್ಶನದಲ್ಲಿ ಸಂಸ್ಕೃತ ಭಾಷೆಯ ಅಭ್ಯಾಸದಲ್ಲಿ ತೊಡಗಿ ಅನೇಕ ಪರೀಕ್ಷೆಗಳಲ್ಲಿ ಉತ್ತಮ ರೀತಿಯಲ್ಲಿ ತೇರ್ಗಡೆ ಹೊಂದಿದಳಲ್ಲದೆ, ಬಿ.ಎ. ಮತ್ತು ಎಂ.ಎ. ಪರೀಕ್ಷೆಗಳನ್ನು ಸಹ ಪಾಸು ಮಾಡಿ ಕೋಲಾರದ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕಳಾಗಿ ಮತ್ತು ಪ್ರಾಂಶುಪಾಲಳಾಗಿ ನಿವೃತ್ತಿ ಹೊಂದಿದಳು.

1960ರ ವೇಳೆಯಲ್ಲಿ ನಮ್ಮ ತಾತ ಅನಂತಾಚಾರ್ಯರು ಹಾಸನದ ಪುರ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ಆಗಲೂ ಸಂಸ್ಕೃತ ಭಾಷಾ ಪ್ರಚಾರ ಕಾರ್ಯ ಕೈಬಿಡಲು ಮನಸ್ಸಾಗಲಿಲ್ಲ. ಆ ನಗರದ ಲೋಕೋಪಯೋಗಿ ಕಛೇರಿಯಲ್ಲಿ ಸಹಾಯಕ ಅಭಿಯಂತರರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಯುತ ಶೇಷಾದ್ರಿ ಶೆಟ್ಟಿ ಎಂಬ ಪರಿಚಿತರ ಪತ್ನಿಗೆ ವಿರಾಮದ ವೇಳೆಯಲ್ಲಿ ಸ್ವಲ್ಪ ಸಮಯವನ್ನು ಸಂಸ್ಕೃತ ಅಭ್ಯಾಸಕ್ಕೆ ಮೀಸಲಿಡಿ ಎಂದರು. ಆಕೆಯು ಸಹ ನಮ್ಮ ತಾತನವರ ಹತ್ತಿರ ಸಂಸ್ಕೃತ ಕಲಿಯಲು ಮುಂದಾದರು. ಅಕ್ಷರಾಭ್ಯಾಸದಿಂದ ಹಿಡಿದು ಕೆಲವು ಸರಳ ಸಂಸ್ಕೃತ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಸಂತೋಷಪಟ್ಟರು. ಶಾಸನದಲ್ಲಿ ರಾವ್ ಬಹದ್ದೂರ್ ನಂಜುಂಡಯ್ಯ ಎಂಬುವರು ತುಂಬಾ ಪ್ರಸಿದ್ಧರು. ಅವರು ದೊಡ್ಡ ವಕೀಲರಾಗಿ ಅನೇಕ ಬಿರುದುಗಳನ್ನು ಪಡೆದ ಮಹನೀಯರು. ಅವರದೇ ಆದ ಬಂಗಲೆಯ ಒಂದು ಭಾಗದಲ್ಲಿ ಬಾಡಿಗೆಗೆ ನಮ್ಮ ತಾತನವರ ವಾಸವಾಗಿದ್ದರು. ಇವರ ಮಗಳು ಸಾವಿತ್ರಮ್ಮ ಎಂಬುವರು ಕೂಡ ಸಂಸ್ಕೃತ ಭಾಷೆಯನ್ನು ಕಲಿಯುವ ಉತ್ಸಾಹ ತೋರ್ಪಡಿಸಿದರು. ಅಕ್ಷರಾಭ್ಯಾಸದಿಂದ ಪ್ರಾರಂಭ ಮಾಡಿದವರು ಮೈಸೂರು ಮಹಾರಾಜ ಪಾಠಶಾಲೆಯವರು ನಡೆಸುತ್ತಿದ್ದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರು. ಸಂಸ್ಕೃತ ಭಾಷೆಯ ಸದುಪಯೋಗ ಮಾಡಿಕೊಂಡ ತೃಪ್ತಿ ಅವರದಾಯಿತು. ಈ ಹಾಸನದಲ್ಲಿಯೇ ನಾರಾಯಣ ಭಟ್ಟರ ಮಗಳು ಲಲಿತಮ್ಮ ಎಂಬುವರು ಸಹ ಸಂಸ್ಕೃತ ಭಾಷೆಯನ್ನು ಅಭ್ಯಸಿಸಿದರು. ಅವರು ವಿವಾಹವಾಗಿ ಗಂಡನ ಮನೆಯನ್ನು ಸೇರಿದರು. ಹೊಸ ಜೀವನದಲ್ಲಿ ಸಂಸ್ಕೃತ ಭಾಷಾ ಜ್ಞಾನ ಅವರಿಗೆ ಹೆಚ್ಚು ಉಪಯುಕ್ತವಾಯಿತೆಂದು ಆಗಾಗ ನಮ್ಮ ತಾತನವರನ್ನು ಬಹು ಕೃತಜ್ಞತೆಯಿಂದ ನೆನೆಯುತ್ತಿದ್ದರೆಂದು ಹೇಳುತ್ತಿದ್ದುದನ್ನು ಕೇಳಿದ್ದೇನೆ.

ಹಾಸನದಿಂದ 1969ನೇ ವರ್ಷದಲ್ಲಿ ತಾತನವರು ವಿಜಯಪುರವೆಂಬ ಸ್ಥಳಕ್ಕೆ ವರ್ಗವಾಯಿತು. ಅಲ್ಲಿಯೂ ಇವರ ಸಂಸ್ಕೃತ ಭಾಷಾ ಕೈಂಕರ್ಯ ಮುಂದುವರೆಯಿತು. ಅವರು ಸಹೋದ್ಯೋಗಿಗಳಿಗೂ ವಿರಾಮದ ವೇಳೆಯಲ್ಲಿ ಸಂಸ್ಕೃತ ಕಲಿಸುವ ಉತ್ಸಾಹವನ್ನು ತೋರುತ್ತಿದ್ದರು. ಅನಂತಾಚಾರ್ಯರು ಬರಿ ಸಂಸ್ಕೃತ ಕಲಿಸಲು ಅಷ್ಟೆ ಅಲ್ಲ ಯಾವುದೇ ವಿದ್ಯಾಭ್ಯಾಸಕ್ಕೂ ಪ್ರೋತ್ಸಾಹ ನೀಡುತ್ತಿದ್ದರು. ತಮಗೆ ಗೊತ್ತಿರದ ವಿಷಯವಾಗಿದ್ದರೂ ಸಂಬಂಧಪಟ್ಟವರ ಮನವೊಲಿಸಿ ವಿದ್ಯಾದಾನ ಮಾಡಲು ಪ್ರೋತ್ಸಾಹಿಸುತ್ತಿದ್ದರು. ಸಾಧ್ಯವಾದಷ್ಟು ಆರ್ಥಿಕ ಸಹಾಯ ಒದಗಿಸುತ್ತಿದ್ದರು. ಅವರ ಮತ್ತು ಇತರ ಅಧ್ಯಾಪಕರುಗಳ ಸಹಕಾರದಿಂದ ವಿದ್ಯಾರ್ಥಿಗಳು ಯಶಸ್ಸು ಸಾಧಿಸಲು ಕಾರಣರಾಗಿದ್ದರು. ಭೇದವಿಲ್ಲದ ಅವರ ಔದಾರ್ಯ ಚಿರಕಾಲ ನೆನೆಯುವಂತಹುದಲ್ಲವೆ! ವಿಜಯಪುರದಲ್ಲಿ ವೃತ್ತಿಯಲ್ಲಿದ್ದಾಗಲೇ ಮೈಸೂರಿನ ಗುರುಪೀಠದಿಂದ ಕರೆ ಬಂದಿತು. ತಮ್ಮ ವಿದ್ಯೆ ಮತ್ತು ಬದುಕಿಗೂ ಆಸರೆ ಆಗಿದ್ದ ಗುರುಪೀಠದ ಕರೆಗೆ ಓಗೊಟ್ಟು ಮೈಸೂರಿಗೆ ಬಂದು ಸೇರಿದರು. ಮೈಸೂರಿನ ಮಹಾರಾಜರ ಆಹ್ವಾನದ ಮೇರೆಗೆ ತಮ್ಮ ಪತ್ನಿ ನಾಗರತ್ನಮ್ಮನವರ ಸಮೇತ ಅರಮನೆಗೆ ದಯಮಾಡಿಸಿದರು. ರಮನೆಯಲ್ಲಿ ರಾಜದಂಪತಿಗಳನ್ನು ಭೇಟಿಯಾದ ಸಮಯದಲ್ಲಿ ಅವರು ನಮ್ಮ ಅಜ್ಜಿಯವರನ್ನು ನೋಡಿ, ನಿಮಗೆ ನಿಮ್ಮ ಪತಿಯವರನ್ನು ಗುರುಪೀಠಕ್ಕೆ ಕಳುಹಿಸಿಕೊಡಲು ಮನಸ್ಸಿಗೆ ಕಷ್ಟವೆನಿಸುವುದಿಲ್ಲವೆ? ಎಂದು ಪ್ರಶ್ನಿಸಿದರು. ಅದಕ್ಕೆ ಅಜ್ಜಿಯವರು, ಅವರು ಈ ಗುರುಪೀಠಕ್ಕೆ ಬರುವುದು ಬಹಳ ಹೆಮ್ಮೆಯ ವಿಷಯ, ನನ್ನ ಕೈಹಿಡಿದು ಬಾಳಿಗೆ ಒಂದು ಪರಮಾರ್ಥ ಕೊಟ್ಟ ಈ ಮಹನೀಯರು ಅನೇಕರ ಬಾಳಿಗೆ ದಾರಿದೀಪವಾಗಿರಬೇಕೆಂದು, ಆಧ್ಯಾತ್ಮ ಪಿಪಾಸುಗಳಿಗೆ ಆಶಾ ಜ್ಯೋತಿಯಾಗಿ ಬೆಳಗಬೇಕೆಂಬ ಮಹದುದ್ದೇಶದಿಂದ ಮಾನಸಿಕವಾಗಿ ಮತ್ತು ಬೌದ್ಧಿಕವಾಗಿಯೂ ಸಿದ್ಧರಾಗಿರುವನೆಂದೂ ರಾಜ ದಂಪತಿಗಳಲ್ಲಿ ಅರಿಕೆ ಮಾಡಿಕೊಂಡರು, ಅವರ ಈ ಮಾತುಗಳಿಂದ ಸಂತುಷ್ಟರಾದರಲ್ಲದೆ ಮೆಚ್ಚಿಕೊಂಡರು. ಅಂತಹ ಮಾತುಗಳು ಅವರ ಬಾಯಿಂದ ಬರಲು ಕಲಿತ ವಿದ್ಯೆಯೇ ಕಾರಣವಾಗಿರಬಹುದಲ್ಲವೆ?

"ವಿದ್ಯಾಧನಂ ಸರ್ವಧನಂ ಪ್ರಧಾನಂ" ನಮ್ಮ ತಾತನವರು ಆಚಾರ್ಯ ಪಟ್ಟಕ್ಕೇರಿದಾಗಲೂ ಸುಮ್ಮನಿರಲಿಲ್ಲ. ಅನೇಕ ಹುಡುಗರು ಉನ್ನತ ಮಟ್ಟದ ವಿದ್ಯಾಭ್ಯಾಸ ಮಾಡಲು ಕಾರಣರಾದರು. ಉದಾತ್ತ ಧ್ಯೇಯವುಳ್ಳ ಅವರು ಶಿಷ್ಯರನ್ನು ಸಂಪಾದಿಸುವುದರಲ್ಲಿ ನಿಷ್ಣಾತರು.

ವಿದ್ಯಾರ್ಜನೆ ವಿಷಯದಲ್ಲಿ ಆಚಾರ್ಯರ ಕಳಕಳಿ ಎಷ್ಟು ಹೇಳಿದರೂ ಕಡಿಮೆಯೇ. ಈ ನನ್ನ ನುಡಿ ಕುಸುಮಗಳ ಮಾಲೆಯನ್ನು ಅವರ ಶ್ರೀ ಚರಣದಲ್ಲಿ ಅರ್ಪಿಸಿರುತ್ತೇನೆ.

ಶ್ರೀಮತೀ ವಸುಧಾ ಅ. ಅಯ್ಯಂಗಾರ್

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಮದಭಿನವರಂಗನಾಥ ಬ್ರಹ್ಮತಂತ್ರಸ್ವತಂತ್ರ ಪರಕಾಲಸ್ವಾಮಿಗಳು

ಶ್ರೀಮಾನ್ ಉ. ವೇ ಡಾ ॥ ನೀಲತ್ತಹಳ್ಳಿ ಕೃಷ್ಣ ಐಯ್ಯಂಗಾರ್ ರಾಮಶೇಷ

ಪರಮ ಪೂಜ್ಯ, ಪ್ರಾತ: ಸ್ಮರಣೀಯ, ವಿದ್ವತ್ತು–ಪ್ರತಿಭೆ (ನವನವೋನ್ಮೇಷಶಾಲಿನೀ ನಿತ್ಯತಾಪ್ರತಿಭಾ) ತ್ಯಾಗ ಮೈವೆತ್ತ ಕರ್ತವ್ಯ ನಿಷ್ಠೆ, ವೈರಾಗ್ಯ – ಸದಾಚಾರ ಪ್ರೀತಿ, ಭಗವಂತನಲ್ಲಿ ಅಪಾರವಾದ ಭಕ್ತಿ, ಶ್ರೀರಾಮಾನುಜಾಚಾರ್ಯ ಪ್ರಣೀತ – ಶ್ರೀತತ್ವ – ಪ್ರಪತ್ತಿರಸಸ್ಯಂದಿ ವಿರಕ್ತಿಯಲ್ಲಿಯೇ ಮನಸ್ಸು, ಹೀಗೆ ಮುಂತಾದ ಸದ್ಗುಣಗಳು ಒಬ್ಬ ಮಹಾನುಭಾವನಲ್ಲಿ ನೆಲೆಗೊಂಡಿದ್ದರೆ, ಆ ದಿವ್ಯತೇಜಸ್ಸನ್ನು ಏನೆಂಬುದಾಗಿ ಕರೆಯಲು ಆದೀತು? ಜೊತೆಗೆ ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ನ್ಯಾಯ ಶಾಸ್ತ್ರ ಪ್ರಧಾನ ಅಧ್ಯಾಪಕರು – ತರ್ಕಶಾಸ್ತ್ರದಲ್ಲಿ ಅದ್ವಿತೀಯ ಪ್ರವೇಶ, ಮಹಾವಿದ್ವಾಂಸರು – ಅಷ್ಟೇ ಸಹೃದಯಿ – ಹಿರಿಯ ಪ್ರಸನ್ನ ಚೇತನ – ಆತ್ಮಕೂರು ರಂಗಾಚಾರ್ಯರ ವ್ಯಕ್ತಿ – ಶಕ್ತಿ – ಸಾಧನೆ – ವೈವಿಧ್ಯವನ್ನು ಕುರಿತು ಏನು ಬರೆದರೂ ಅದು ಉತ್ಪ್ರೇಕ್ಷೆಯಾಗದು!

ಇದನ್ನೆಲ್ಲ ಸ್ವಾಮಿಗಳನ್ನು ಪ್ರತ್ಯಕ್ಷ ಕಂಡವರೇ ಬಣ್ಣಿಸುತ್ತಾರೆ: ಬ್ರಹ್ಮತಂತ್ರ ಸ್ವತಂತ್ರ ಶ್ರೀ ಶ್ರೀ ಪರಕಾಲ ಮಠ ಉನ್ನತ ಶ್ರೇಯಸ್ಸನ್ನು ಕಂಡದ್ದು ಸನ್ಮಾನ್ಯ ಶ್ರೀ ಆತ್ಮಕೂರು ರಂಗಾಚಾರ್ಯರು – ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳೆಂದು ಗುರುಪೀಠ ಅಲಂಕರಿಸಿದಂದಿನಿಂದಲೇ! ೧೯೨೫ – ೧೯೬೬ರ ನಲವತ್ತಕ್ಕೂ ಮಿಕ್ಕ ವರ್ಷಗಳ ಅವಧಿಯಲ್ಲಿ ಶ್ರೀ ವಿಶಿಷ್ಟಾದ್ವೈತ ವೇದಾಂತ ಸಿಂಹಾಸನ ಆಚಾರ್ಯರಾಗಿದ್ದ ಸ್ವಾಮಿಗಳಿಗೆ "ಶ್ರೀ ಮದಭಿನವ ರಂಗನಾಥ" ನೆಂಬ ಆಶ್ರಮ ನಾಮಧೇಯ ಕೂಡ ಅನ್ವರ್ಥವಾಯಿತಷ್ಟೆ! ಈ ನಾಲ್ಕು ದಶಕಗಳಲ್ಲಿ ಶ್ರೀ ಮಠದಲ್ಲಿ ಜರುಗಿದ ವಿವಿಧ ತೆರನಾದ ಚಟುವಟಿಕೆ – ಶ್ರೀ ಶ್ರೀಗಳವರು ವೃಂದಾವನಸ್ಥರಾಗುವಾಗ್ಗೆ "ಕಾಲಪುರುಷರಿಗೆ ಕರುಣಮಣಮಿಲ್ಲಮ್ ಗಡಾ!" ಎಂದು ಉದ್ಗರಿಸುವಂತಾಯಿತು!

ಹಿಂದಿನ ಗುರುವರ್ಯರಾಗಿದ್ದ ಶ್ರೀ ಶ್ರೀವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳು ೦೪/೧೦/೧೯೨೬ ರ ರಾತ್ರಿ ಪರಮಪದಿಸಿದ ಅನಂತರ, ಗುರುಪೀಠ ಅಲಂಕರಿಸಿದ ಧೀಮಂತರು, ಶ್ರೀ ಆತ್ಮಕೂರು ರಂಗಾಚಾರ್ಯರು ನುಡಿ ನಡೆ ಸೀದಾ ಸಾದಾ – ಅಷ್ಟೇ ಭಕ್ತಿ ಪ್ರಿಯ – ಹಯಾಸ್ಯನ ಸೇವಾ ಪ್ರಿಯರು! ಅವರು ಸೇವಾ ಅವಧಿಯಲ್ಲಿ ಶ್ರೀ ಮಠವೂ ಉನ್ನತಗೇರಿದ್ದು ಹಿರಿಯರೆಲ್ಲರೂ ಬಲ್ಲರು.

ದಿವ್ಯವಂಶ ಪರಂಪರೆ

ಇಂದಿನ ಆಂಧ್ರಪ್ರದೇಶದ ರಾಜಧಾನಿ ಹೈದರಾಬಾದ್ ಹಿಂದೆ 'ಭಾಗ್ಯನಗರ' ವೆಂದೇ ಪ್ರಸಿದ್ಧ. ಈ ರಾಜ್ಯಕ್ಕೆ ಸೇರಿದ ಮಹಬೂಬ್ ನಗರ ಜಿಲ್ಲೆಗೆ ಸೇರಿರುವ ಗ್ರಾಮ – ಮಾನವತಿಪುರ (ಮಾನಾಜಿಪೇಟ). ಹೆಸರೇ ಸಂತೋಷಕೊಡುತ್ತದೆ. ಗ್ರಾಮಕ್ಕೆ ಉತ್ತರ ದಿಕ್ಕಿನಲ್ಲಿರುವ ಅಂಜನಗಿರಿ (ಅಂಜನಾದ್ರಿ) ಸ್ವಯಂವ್ಯಕ್ತ ಶ್ರೀನಿವಾಸ ಸ್ವಾಮಿಯ ದಿವ್ಯ ದೇವಾಲಯ ಬಹುಹಿಂದೆ, ಮಾನವತಿಪುರ – ಅಮರಾಬಾದ್ – ಇಲ್ಲೆಲ್ಲ ವೇದಾಧ್ಯಯನ ಸಂಪನ್ನರೂ, ಯಜ್ಞಯಾಗಾದಿ ಸತ್ಕರ್ಮನಿರತರೂ, ಶ್ರೌತಭಾಗನಿಷ್ಣಾತರೂ, ಭಗವದ್ಭಕ್ತಿ ಭಾಗವತಭಕ್ತಿಯುಳ್ಳವರೂ ಅನೇಕರಿದ್ದರು.

ಮಾನವತಿಪುರದಲ್ಲಿದ್ದ ಮಹನೀಯರು, ಆಸೂರಿ ರಂಗಾಚಾರ್ಯರು ವೇದಶಾಸ್ತ್ರಪಂಡಿತ, ಹಾರೀತಗೋತ್ರಜರು, ಮಂತ್ರ ಶಾಸ್ತ್ರದಲ್ಲೂ ಪರಿಣತಿ. ಶ್ರೀ ಲಕ್ಷ್ಮೀನೃಸಿಂಹ ಉಪಾಸಕರು ತಮ್ಮ ಅವಿರತ ಸಾಧನೆಯ ಫಲದಿಂದ ಇವರನ್ನು ಕಂಡ ಅನೇಕ ಆರ್ತರ ಉಪದ್ರವ ಪರಿಹಾರವಾಗುತ್ತಿದ್ದವು. ಇಷ್ಟಾದರೂ ರಂಗಾಚಾರ್ಯರಿಗೆ ಉಪಾಸನಾದೃಷ್ಟಿ ಪ್ರಧಾನ – ಅರ್ಥಗಳಿಕೆಯಾಗಿರಲಿಲ್ಲ! "ವಿನಾಯಂತ್ರೇಣ ಚೇತ್ ಪೂಜಾ ದೇವತಾ ನಪ್ರಸೀದತಿ" – ಸಾಂಗೋಪಾಂಗ ರೀತಿಯಲ್ಲಿ ತಿಳಿದುಕೊಂಡೇ ಆಚಾರ್ಯರು ಉಪಾಸನಗೈಯುತ್ತಿದ್ದದ್ದು. ಶ್ರೀ ನರಸಿಂಹರ ಆರಾಧನೆ, ಅರ್ಚನೆ ಮುಗಿದನಂತರ "ಲೋಕ – ಲೋಗರೆಲ್ಲರಿಗೆ ಕ್ಷೇಮವುಂಟಾಗಲಿ" ಎಂದು ಮಂಗಳಾರತಿ ಮಾಡುವ ವಾಡಿಕೆ ಮಾತ್ರ ವಿಶಿಷ್ಟ – ವಿಚಿತ್ರ ರೀತಿಯದು! ದೊಡ್ಡ ವಸ್ತ್ರವೊಂದನ್ನು ಕಮ್ಮನೆಯ ತುಪ್ಪದಲ್ಲಿ ಅದ್ದಿ ನೆನೆಯಿಸಿ, ತಟ್ಟೆಯಲ್ಲಿರಿಸಿ, ಅದರ ಒಂದು ತುದಿಯನ್ನು ಬತ್ತಿಯಾಗಿಸಿ, ಹೊತ್ತಿಸಿ ಮತ್ತೆ ಸಾಕಷ್ಟು ತುಪ್ಪವರೆದು, ಪೂರ್ತಿ ವಸ್ತ್ರ ಉರಿಯುವತನಕವು, ಒಂದೇ ಚಿತ್ತದಿಂದ ಧ್ಯಾನಿಸುತ್ತಾ ಸ್ವಾಮಿಯನ್ನೇ ನೋಡುತ್ತಾ ಮಂಗಳಹಾರತಿ ಅರ್ಪಿಸುವ ಪರಿಯೇ ಸೋಗಸು! "ಮಂಗಳಾರತಿ ರಂಗಾಚಾರ್ಯ" ರೆಂದೇ ಅವರಿಗೆ ರೂಢಿಯಲಿದ್ದ ಹೆಸರು.

ಶ್ರೀಯುತರ ಮಗ ಆಸೂರಿ ರಾಘವಾಚಾರ್ಯರು ತಂದೆಯ ಹಾಗೆಯೇ ವೇದಾಧ್ಯಯನ ಸಂಪನ್ನರು, ಸಾತ್ವಿಕರು, ಶಾಸ್ತ್ರನಿಷ್ಠರು, ವಿರಕ್ತ ಸ್ವಭಾವ, ಭಗವಂತನ ಸೇವೆ ಮಾನವತೀಪುರದಲ್ಲಿ! ಒಮ್ಮೆ ಆಚಾರ್ಯರ ಕನಸಿನಲ್ಲಿ ತೇಜ:ಪುಂಜನಾದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕಾಣಿಸಿಕೊಂಡು, "ಶ್ರೀಘ್ರದಲ್ಲಿಯೇ ನಿಮಗೆ ವಂಶ ಬೆಳಗುವಂತಹ ಪುತ್ರ ಜನಿಸುವ" ನೆಂದು ವರವಿತ್ತಂತಾಯ್ತು!

ಕಾಲಕ್ರಮದಲ್ಲಿ ಆಚಾರ್ಯರ ಧರ್ಮಪತ್ನಿ ಶೇಷಮ್ಮನವರು ಗರ್ಭಧರಿಸಿ, ತಿಂಗಳುಗಳನಂತರ ತಾರಣ ಸಂವತ್ಸರ, ಆಷಾಢ ಕೃಷ್ಣ ಪುನರ್ವಸು ಮಂಗಳವಾರದಂದು, ಕ್ಷೀರಸಾಗರದಿಂದ ಕೌಸ್ತುಭರತ್ನ ಉದ್ಭವಿಸಿದಂತೆ, ಪುತ್ರರತ್ನವನ್ನು ಪ್ರಸವಿಸಿದರು! ತಾಯಿಗೆ ಮಗುವಿನ ವಿಲಕ್ಷಣ ಕಾಂತಿ ಕಾಣುವುದೇ ಆನಂದ! ಆಸೂರಿಯವರಿಗೂ, ಅದೇಪರಿತೋಷ! ತತ್ಕಾಲಗ್ರಹ ಸಂಪತ್ತಿ: – ಜನನಕಾಲ – ಜಾತಕ ಬರೆದನಂತರ ಹಿರಿಯ ಜ್ಯೋತಿಷ್ಯರು ತಿಳಿಸಿದಂತೆ "ತಾರಣ ಸಂವತ್ಸರದಲ್ಲಿ ಜನಿಸಿದವರಾದ್ದರಿಂದ ಸಂಸಾರ ಸಾಗರ ತಾರಕ, ಪುನರ್ವಸು ಶುಭ ನಕ್ಷತ್ರ – ಶ್ರೀರಾಮನಂತೆ ಕೃಪೆಯುಳ್ಳವರೂ, ಶ್ರೀ ಶ್ರೀನಿವಾಸರ ಹಾಗೂ ಶ್ರೀ ಲಕ್ಷ್ಮೀನೃಸಿಂಹರ ಕಟಾಕ್ಷವಿರುವಪ್ರಕಾರ, ಉತ್ತಮ ಸಾತ್ವಿಕ ಪ್ರಕೃತಿ, ಆಚಾರ್ಯರ ಅನುಗ್ರಹ ಪಾತ್ರ, ಬ್ರಹ್ಮಜ್ಞಾನಿಯೂ ಆಗುತ್ತಾರೆ" ಇನ್ನೇನು ಬೇಕು?

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಗುವಿಗೆ ಆಚಾರ್ಯರು ತಮ್ಮ ತಂದೆಯವರ ಹೆಸರನ್ನೇ "ರಂಗಾಚಾರ್ಯ" ರೆಂದೇ ಕರೆದರು. ಕ್ರಮೇಣ ಚೂಡಾಕರ್ಮ, ವಿದ್ಯಾಮೂರ್ತಿ ಶ್ರೀ ಲಕ್ಷ್ಮೀಹಯಗ್ರೀವರ ಆರಾಧನೆ ಮಾಡಿ, ಮಗುವಿಗೆ ಸ್ಪುಟ ಅಕ್ಷರಾಭ್ಯಾಸ – ಸಂಸ್ಕೃತ ಹೇಳಿಕೊಡಲಾರಂಭಿಸಿದರು. ಬಾಲಕ ರಂಗಾಚಾರ್ಯ, ಗ್ರಹಣ – ಧಾರಣ – ವಚನ ಚತುರರ – ವ್ಯಾಕರಣ – ಗದ್ಯಪದ್ಯ – ಅಲಂಕಾರ – ತರ್ಕ – ವಿಶೇಷ ಆಸಕ್ತಿಯುಳ್ಳವ!

ಪ್ರತಿಯೊಂದು ಮಹಾಮಂತ್ರಗಳಲ್ಲಿಯೂ ಅನೇಕ ಕ್ರಮ ಉಂಟಲ್ಲವೇ? ಮಹಾಮಂತ್ರ – ಧಾರಣಾಯಂತ್ರ – ಈ ಕ್ರಮ ಬೇರೆಬೇರೆ. ಇವೆರೆಡರ ರಹಸ್ಯ – ವಶೀಕರಣ, ಆಕರ್ಷಣ, ಉಚ್ಚಾಟನ – ಮಾರಣ – ಮೋಹನ – ಸ್ತಂಭನ – ಈ ಆರು ಕ್ರಿಯೆಗಳ ಮೂಲಕವೇ!

ನಮಃ ಸ್ವಾಹಾ – ವಷಟ್ – ವೌಷಟ್ – ಹುಂಫಟ್ – ಈ ಆರು ಪಲ್ಲವ ಪ್ರಯೋಗಕ್ರಮ. ಇಲ್ಲೆಲ್ಲ ಸಂಹಾರ – ಉಪಸಂಹಾರಕ್ರಮ – ಇವೆಲ್ಲವನ್ನು, ಬೆಳೆಯುತ್ತಿದ್ದ ರಂಗಾಚಾರ್ಯರು ತಮ್ಮ ಧೀಶಕ್ತಿಯಿಂದ ಚೆನ್ನಾಗಿ ಅರಿತುಕೊಂಡರು.

ಇವಲ್ಲದೆ, ಪ್ರತಿಮಹಾಮಂತ್ರದಲ್ಲಿ ಆರು ಭಾಗವಿದೆ – ಮೂಲ, ಗಾಯತ್ರಿ, ಅನುಷ್ಟುಪ್, ಮಾಲಾ, ಅಸ್ತ್ರ, ಭೋಧ. ಇವುಗಳಲ್ಲಿಯೂ ಎಷ್ಟೋ ಬೀಜಾಕ್ಷರ ರಹಸ್ಯ!

ಮಹಾಮಂತ್ರಗಳೆಂದರೆ – ಶ್ರೀಮನ್ನಾರಾಯಣ, ಶ್ರೀಹಯಗ್ರೀವ, ಶ್ರೀನೃಸಿಂಹ, ಶ್ರೀ ಶ್ರೀರಾಮ, ಶ್ರೀ ಶ್ರೀಕೃಷ್ಣ – ಹಾಗು ಶ್ರೀ ಗರುಡ ಮಹಾಮಂತ್ರ .... ಇದರಲ್ಲಿ ಶ್ರೀರಂಗಾಚಾರ್ಯರು ಶ್ರೀ ನೃಸಿಂಹ ಮಂತ್ರ ಇಟ್ಟುಕೊಂಡುದು ವಿಶೇಷವೇ! (ಪುರಂದರದಾಸವರೇಣ್ಯರ – ಶ್ರೀನೃಸಿಂಹ ಮಂತ್ರವೊಂದೆ ಸಾಕು – – ಕೀರ್ತನೆ ಗಮನಾರ್ಹ).

ಆತ್ಮಕೂರು ರಂಗಾಚಾರ್ಯರಿಗೆ ಬ್ರಹ್ಮೋಪದೇಶ – ಉಪನಯನ ಸಕಾಲದಲ್ಲಿ ಸಾಂಗವಾದ ವೇದಾಧ್ಯಯನ (ಆದೇ ಈಗ ಸನ್ಮಾನ್ಯ ಡಾ। ಎ. ಎಸ್ . ವೆಂಕಠನಾಥರಲ್ಲಿಯೂ ಪ್ರತಿಬಿಂಬಿಸಿ ಮೂಡಿದೆ!) ತ್ರಿಕಾಲ ಸಂಧ್ಯಾವಂದನ – ಬ್ರಹ್ಮಚರ್ಯ ನಿಯಮ ಪಾಲನ! ಹನ್ನೆರಡು ವರ್ಷವಾಗುವುದರೊಳಗೇ ಇವರು ಛಂದಸ್ಸು – ಅಲಂಕಾರ – ವ್ಯಾಕರಣ – ತರ್ಕ – ವಿಶೇಷ ಅಧ್ಯಯನ ನಡೆಸಿದರು! ತರ್ಕದಲ್ಲಿ ಅದ್ವಿತೀಯ ಪಾಂಡಿತ್ಯ, ಪರಿಣತಿ.

ಆಸೂರಿರಾಘವಾಚಾರ್ಯರು, ಸಕಾಲದಲ್ಲಿ ತಮ್ಮ ಮಗನ ವಿವಾಹವನ್ನು ನೆರವೇರಿಸಲು ಇಚ್ಛಿಸಿದ್ದು, ಅಂದಿನ ಪದ್ಧತಿ! ಆ ಸಮಯಕ್ಕೆ ಸರಿಯಾಗಿ, ಸಮೀಪದ ಅಮ್ಮವ್ವೂರೆಂಬಲ್ಲಿದ್ದ ಈಚ್ಚಂಬಾಡಿ ವೆಂಕಟಾಚಾರ್ಯರು ದಯಮಾಡಿಸಿ, ತಮ್ಮ ಪುತ್ರಿಗೆ ತಕ್ಕ ವರನೀತನೆಂದುಕೊಂಡು, ಆಸೂರಿ ರಾಘವಾಚಾರ್ಯರಲ್ಲಿ ನಿವೇದಿಸಿದರು. ಅನುಮತಿಯೂ ದೊರೆಯಿತು. ಆತ್ಮಕೂರು ರಂಗಾಚಾರ್ಯರು – ಶೇಷಮ್ಮನವರು ದುರ್ಮುಖ ಸಂವತ್ಸರದ ಒಂದು ಶುಭ ಮುಹೂರ್ತದಲ್ಲಿ, ಹಿರಿಯರ ಆಶೀರ್ವಾದದಿಂದ, ದಂಪತಿಗಳಾದರು.

ಆತ್ಮಕೂರು ರಂಗಾಚಾರ್ಯರ ವಿದ್ಯಾಭ್ಯಾಸ ಮಾತ್ರ ಮುಂದುವರೆಯಿತು. ವನಪರ್ತಿಯಲ್ಲಿದ್ದ ಮಾತಾಮಹರ ಆಣ್ಣಂದಿರ ಬಳಿ ವ್ಯಾಕರಣ ಅಧ್ಯಯನ ನಡೆಸಬಂದರು. ಅಷ್ಟರಲ್ಲಿ ಪಿತೃವಿಯೋಗ ಸಂಘಟಿಸುವುದೇ! ಎಲ್ಲ ಕೈಂಕರ್ಯವನ್ನು ನೆರವೇರಿಸಿ ಅನಂತರ ಶ್ರೀ ವೈಷ್ಣವದೀಕ್ಷೆಯನ್ನು ಪಡೆದ ವ್ಯಾಜದಿಂದ ಮೈಸೂರಿನ ಶ್ರೀ ಪರಕಾಲ ಮಠದ ಅಂದಿನ ಆಚಾರ್ಯರಾಗಿದ್ದ ಶ್ರೀ ಕೃಷ್ಣ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳಲ್ಲಿ ಆಶ್ರಯಿಸಿ, ಪಂಚ ಸಂಸ್ಕಾರ ಪಡೆದುದಲ್ಲದೆ, ಶ್ರೀ ಹಯಗ್ರೀವ ಮಹಾಮಂತ್ರದ ಉಪದೇಶ ಕೂಡ ಪಡೆದರು! ಅನಂತರ ಶ್ರೀಭಾಷ್ಯಾದಿ ವೇದಾಂತ ಗ್ರಂಥಗಳ ಉಪದೇಶವು ನಡೆಯಿತು.

ಮೈಸೂರು ಶ್ರೀ ಪರಕಾಲಮಠದ ತಾತಾಚಾರ್ಯರಲ್ಲಿ ವ್ಯಾಕರಣಶಾಸ್ತ್ರ ಅಧ್ಯಯನ, ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ "ನವ್ಯನ್ಯಾಯಶಾಸ್ತ್ರ' ಅಧ್ಯಾಪಕರಾಗಿದ್ದ ನಾಮಗುಂಡಲಂ ಶಾಮಾಚಾರ್ಯರಲ್ಲಿ ನ್ಯಾಯಶಾಸ್ತ್ರ ಅಧ್ಯಯನ, ಪಂಡಿತರತ್ನ ಆಸ್ಥಾನ ಧರ್ಮಾಧಿಕಾರಿ ಕಸ್ತೂರಿ ರಂಗಾಚಾರ್ಯರಲ್ಲಿ ಷಟ್ ಶಾಸ್ತ್ರ ಅಧ್ಯಯನ, ತರ್ಕಶಾಸ್ತ್ರದ ವಿಶೇಷ ಅಧ್ಯಯನ ನಡೆಸಿದುದು ಶ್ರೀ ರಂಗಾಚಾರ್ಯರ ಮೇಧಾವಿತನ ಇನ್ನು ಪ್ರಖರ ಆಗಲು ಅನುಕೂಲ ಆಯಿತೆನ್ನಬೇಕು. ತರ್ಕಶಾಸ್ತ್ರ ವಿದ್ವತ್ಪರೀಕ್ಷೆಯಲ್ಲಿ ಸ್ವಸಾಮರ್ಥ್ಯದಿಂದ ಪ್ರಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಮಹಾರಾಜರಿಂದ ವಿಶೇಷ ಬಹುಮಾನಿತರಾದರು! ೧೯೧೨ ರಷ್ಟು ಹಿಂದಯೇ, ವೇದಾಂತ ವಿದ್ವತ್ ಪರೀಕ್ಷೆಯಲ್ಲಿ ಪ್ರಥಮಶ್ರೇಣಿ! ಮಹರಾಜರಿಂದ ಬಹುಮಾನ! ಆತ್ಮಕೂರು ರಂಗಾಚಾರ್ಯರ ನಿಶಿತಮತಿ, ಭೋಧನಾಶಕ್ತಿ, ಜ್ಞಾನ ಮನಗಂಡ ಇನ್ಸ್ಪೆಕ್ಟರ್ ರಂಗಾಚಾರ್ಯರು, ಆತ್ಮಕೂರು ರಂಗಾಚಾರ್ಯರನ್ನು ಪಾಠಶಾಲೆಯ ತರ್ಕಶಾಸ್ತ್ರ ಪ್ರಧಾನ ಅಧ್ಯಾಪಕರಾಗಿ ನೇಮಕಮಾಡಿದರು!

ಪರ್ಯಟನ ದಿವ್ಯದೇಶ ಸಂಚಾರ – ಆತ್ಮಕೂರು ರಂಗಾಚಾರ್ಯರ ತರ್ಕಶಾಸ್ತ್ರಪರಿಣತಿ – ಅಧ್ಯಾತ್ಮ ಶಾಸ್ತ್ರ ಅಧ್ಯಯನ ಎಲ್ಲ ವಿದ್ಯಾರ್ಥಿಗೂ ಮಾದರಿ! ಒಮ್ಮೆ ತುಮಕೂರು ಜಿಲ್ಲೆಗೆ ಸೇರಿದ ಕೊರಟಗೆರೆ ಸನಿಹವಿರುವ ಹೊಳವನಹಳ್ಳಿಗೆ ಶ್ರೀಭಾಗವತ ಸಪ್ತಾಹಕ್ಕೆ ದಯಮಾಡಿಸಿದ ಆಚಾರ್ಯರ ಪಾರಾಯಣ ವೈಭವ ಎಲ್ಲರಿಗೂ ಮೆಚ್ಚುಗೆಯಾಯಿತು.

ದೂರದ ಗದ್ವಾಲ್ ಸಂಸ್ಥಾನದ ವಿದ್ವತ್ ಗೋಷ್ಠಿಯಲ್ಲಿ ವಾಕ್ಯಾರ್ಥಮಾಡಿ, ಜಯಗಳಿಸಿದ ಶ್ರೀರಂಗಾಚಾರ್ಯರು, ಮುಂದೆ, ಶ್ರೀಪರಕಾಲಾಧೀಶರ ಆದೇಶದಂತೆ ರೀವಾ ಸಂಸ್ಥಾನದ ರಾಜಸಭೆಯಲ್ಲಿ ಯಾವುದೇ ಸಂಪ್ರದಾಯ ವಿರೋಧ ವಿರದಂತೆ ಶಾಸ್ತ್ರಾರ್ಥ ತಿಳಿಸಿ, ಸಿದ್ಧಾಂತಸ್ಥಾಪಿಸಿ, ಮೈಸೂರು ಮಹಾರಾಜರಿಗೂ ಹಾಗು ಶ್ರೀ ಮಠಕ್ಕೂ ಕೀರ್ತಿತಂದರು! ಅನಂತರ, ಬೊಂಬಾಯಿ ವಿದ್ವತ್ ಗೋಷ್ಠಿಯಲ್ಲಿ ವಿಜಯ! ಸನ್ಮಾನಗಳ ಸುರಿಮಳೆ!

ಶ್ರೀ ಪರಕಾಲ ಮಠದಲ್ಲಿ ಶ್ರಾವಣಮಾಸ ಶ್ರೀ ಹಯಗ್ರೀವರ ಜಯಂತಿ ಪ್ರಯುಕ್ತ ವಿದ್ವತ್ ಸಭೆ ಸೇರುತ್ತಿತ್ತು – ಈಗಲೂ ನಡೆಯುತ್ತಿದೆ. ಕಾಶಿ, ಅಯೋಧ್ಯೆ, ಮುಂತಾದ ಅನೇಕ ಸ್ಥಳಗಳ ವಿದ್ವಾಂಸರು ಬಂದು ದರ್ಶನ – ಶಾಸ್ತ್ರವಾಕ್ಯಾರ್ಥ ನಡೆಸುತ್ತಾರೆ. ಶ್ರೀ ಆತ್ಮಕೂರು ರಂಗಾಚಾರ್ಯರು ಉಪನ್ಯಾಸ ಮಾಡಿದ್ದು 'ಕಾವ್ಯಪ್ರಕಾಶ' ಗ್ರಂಥ ಕುರಿತಂತೆ! (ದಂಡಿರು) ಅಧ್ಭುತ ನಿರೂಪಣೆ! ಪಂಡಿತರಿಗೂ, ಶ್ರೀ ಗುರುಗಳಿಗೂ, ಆನಂದ!

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮುಂದೆ ೧೯೧೬ ರಲ್ಲಿ ಆಚಾರ್ಯರು, ತಿರುವಳ್ಳೂರು, ಶ್ರೀಪೆರಂಬುದೂರು, ಕಾಂಚೀಪುರ, ತಿರುವಹೀಂದ್ರಪುರ, ಕುಂಭಕೋಣ, ಶ್ರೀರಂಗ, ತಿರುಪತಿ, ತಿರುನಾರಾಯಣಪುರ (ಮೇಲುಕೋಟೆ) ಇಲ್ಲೆಲ್ಲಾ ಭೇಟಿಯಿತ್ತು ಅಲ್ಲಲ್ಲಿಯ ಭಗವಂತನ ದಿವ್ಯ ವಿಭೂತಿ – ವೈಭವವನ್ನು ಸೇವಿಸುತ್ತಾ, ಎಲ್ಲಾ ವಿದ್ವಾಂಸರ – ಭಾಗವತರ ಸನ್ಮಾನಕ್ಕೆ ಪಾತ್ರರಾದರು.

ಶ್ರೀವೇದಾಂತದೇಶಿಕರ ದಿವ್ಯಸೂಕ್ತಿ – ಗ್ರಂಥಗಳಲ್ಲಿ ಆಚಾರ್ಯರಿಗೆ ತಲಸ್ಪರ್ಶಿ ವಿದ್ವತ್ತು – ಅನುಭವಿಸುವ ಹೃದಯ ! ಶ್ರೀರಂಗದ ದಿವ್ಯ ಸನ್ನಿಧಿ – ಶ್ರೀರಂಗನಾಥಸ್ವಾಮಿ ಪಾದಾರವಿಂದಗಳಲ್ಲಿ ಭರನ್ಯಾಸ ಪಡೆಯಲು ಶ್ರೀ ರಂಗಾಚಾರ್ಯರು ಬಂದದ್ದು!

ಅನುಷ್ಠಾನ – ಬ್ರಾಹ್ಮೀಮೂಹೂರ್ತದಲ್ಲಿ (ಅರುಣೋದಯಕ್ಕೆ ಪೂರ್ವದಲ್ಲೆ) ಎದ್ದು, ಉನ್ನತ ಸ್ವರದಲ್ಲಿ ಸುಪ್ರಭಾತ ಪಠಿಸುವುದು, ಅವಗಾಹನ ಸ್ನಾನ – ಜಪತಪಾದಿ ಆಹ್ನಿಕ – ಸೂರ್ಯೋದಯಕ್ಕೆ ಸರಿಯಾಗಿ ಉಪಸ್ಥಾನ – ಅನಂತರ ಅಭಿಗಮನ, ಔಪಾಸನ, ಗ್ರಂಥಾವಲೋಕನ, ಮಾಧ್ಯಾಹ್ನಿಕ ಸ್ನಾನ, ಇಜ್ಯಾರಾಧನ, ವೈಶ್ವದೇವ, ವೈಶ್ವದೇವ ಶಾಸ್ತ್ರ, ಪ್ರವಚನ ವಿಶಿಷ್ಟ– ಸ್ವೀಕಾರ, ಸಾಯಂಕಾಲ ಸಂಧ್ಯಾನುಷ್ಠಾನ, ಭಗವಂತನಾರಾಧನ – ಹಣ್ಣುಹಾಲು ಮಾತ್ರ ನಿವೇದನ – ಕಡಲೆಕಾಯಿ, ಕಡಲೆ ಪಯರ್ (ಹೆಸರು) ಇವುಗಳದ್ದೇ ಸ್ವೀಕಾರ! ಇದು ದಿನಚರಿ – ತುರಿಯಾಶ್ರಮಕ್ಕು ಪೂರ್ವದಲ್ಲೇ!

ಹೀಗಿರುವಾಗ್ಗೆ ಶ್ರೀವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು ಪರಮಪದಸಿದ್ದು. ಮಹಾರಾಜರಿಗೆ – ಮುಂದೆ, ಶ್ರೀ ಲಕ್ಷ್ಮೀಹಯಗ್ರೀವರನ್ನು ಸದಾಚಾರನಿಷ್ಠೆಯಿಂದ, ತಪಸ್ಯೆಯಾಚರಿಸುತ್ತಾ ಸೇವೆ ಮಾಡುವವರು, ಶ್ರೀಮಠದ ಅಭಿವೃದ್ಧಿ ಹೇಗೆ, ಸದಾಚಾರ – ಸಂಪ್ರದಾಯ ಅನುಷ್ಠಾನ, ಶ್ರೀ ಮದ್ರಾಮಾನುಜರ – ಆಚಾರ್ಯ ಶ್ರೀದೇಶಿಕರ ದಿವ್ಯ ಗ್ರಂಥ ಸೂತ್ರಗಳನ್ನು ತಿಳಿಯಪಡಿಸುವ ಸಮರ್ಥರು ಯಾರು – ಹೀಗೆ ನಾನಾ ರೀತಿಯ ಸಮಸ್ಯೆ! ಈ ಎಲ್ಲಕ್ಕು ಸಮರ್ಥರೆಂದರೆ –

ಆತ್ಮಕೂರು ರಂಗಾಚಾರ್ಯರೆಂದು ಶ್ರೀ ಮಹಾರಾಜರ ಅಭಿಮತ! "ನಾನು ಅಂತಹ ರಾಜಕುಲಗುರು ಪೀಠಕ್ಕೆ ಅರ್ಹನೆ! ಇರುವ ಕಾರ್ಯದಲ್ಲೇ ನಿಷ್ಠನಾಗಿ ಇರುವೆ" ಇದು ರಂಗಾಚಾರ್ಯರ ಉತ್ತರ!

ನಾಲ್ವಡಿಕೃಷ್ಣರಾಜ ಪ್ರಭುಗಳು ನಿರ್ಣಯಿಸಿದ್ದೇ – ಆತ್ಮಕೂರೂ ಶ್ರೀ ರಂಗಾಚಾರ್ಯರೇ ಗುರುಪೀಠಕ್ಕೆ ತಕ್ಕವರೆಂದು! ಶ್ರೀಮಠದ ಪರಂಪರೆ ಇನ್ನು ಅತಿಶಯ ರೀತಿಯಲ್ಲಿ ಬೆಳೆಗಲು ಶ್ರೀರಂಗಾಚಾರ್ಯರಂತಹ ಸಂಘಟನ ವ್ಯಕ್ತಿತೆಯುಳ್ಳ – ವಿದ್ವತ್ತು ಮೈವೆತ್ತ ಮಹನೀಯರು ಅನುಮೋದನೆ ನೀಡಬೇಕೆಂದು ಪ್ರಭುಗಳ ಆಪ್ತಕಾರ್ಯದರ್ಶಿಗಳು – ಸಂಸ್ಕೃತ ಪಾಠಶಾಲ ಅಧ್ಯಕ್ಷರು ಮನೆಗೆ ಆಗಮಿಸಿ, ತಿಳಿಸಿದರು!

ಯದುಕುಲರಾಜಗುರುಗಳೆಂದು ಖ್ಯಾತಿವೆತ್ತ ಶ್ರೀಮಠದ ಪರಂಪರೆ ತನ್ನಿಂದ ನ್ಯೂನತೆಯನ್ನು ಕಾಣದಿರಲೆಂಬ ಸದ್ದುದ್ದೇಶ, ಶ್ರೀ ಹಯವದನ ಸಾಮೀಪ್ಯ, ಆತ್ಮಕೂರು ರಂಗಾಚಾರ್ಯರನ್ನು ಸಮ್ಮತಿನೀಡಲು ಪ್ರೇರಿಸಿತೇನೊ!

ಮರುದಿನವೇ ಅರಮನೆಯಿಂದ ಮೇನೆ, ಸಮಯೋಚಿತ ಗೌರವಗಳು, ರಂಗಾಚಾರ್ಯರು ಮನೆ ಬಿಟ್ಟರೂ ಅಸಂಖ್ಯಾತ ಭಕ್ತರ ಮನದಾಲಯಗಳಲ್ಲಿರುವಂತೆ ಗೈದ ಭಾಗ್ಯವಿಶೇಷ! ೧೫/೧೦/೧೯೨೫ ರಂದು, ಸುಪ್ರಭಾತ – ಶ್ರೀಯುತ ಆಚಾರ್ಯರು ಗುರು ಪೀಠ ಅಲಂಕರಿಸುವಲ್ಲಿ – ತುರೀಯಾಶ್ರಮ ಸ್ವೀಕಾರದ ಸಂದರ್ಭ ನಡೆಯಬೇಕಾದ ವಿಧ್ಯುಕ್ತ ಕ್ರಿಯೆಗಳು – ಪ್ರಾತಃಕಾಲ ಕಾವೇರಿಸ್ನಾನ ಶ್ರೀರಂಗಪಟ್ಟಣದಲ್ಲಿ ಅಲ್ಲಿಯೇ ಶ್ರೀ ಶ್ರೀನಿವಾಸ ಬ್ರಹ್ಮತಂತ್ರ ಸ್ವತಂತ್ರ ಪರಕಾಲಯತೀಂದ್ರರ ವೃಂದಾವನ ದರ್ಶನ – ನಮನ ಅನಂತರ – ವೇದಾಂತಾಚಾರ್ಯ ಶ್ರೀ ನಿಗಮಾಂತ ಮಹಾದೇಶಿಕರು ತಮ್ಮ "ಶರಣಾಗತಿ ದೀಪಿಕೆ" ಯಲ್ಲಿ ತಿಳಿಸಿರುವಂತೆ, ಆಶ್ರಮ ಧರ್ಮಕ್ಕೆ ತಮ್ಮಿಂದ ಯಾವ ಲೋಪವೂ ಉಂಟಾಗದಂತಿರಲು, ಆಚಾರ್ಯರು ಶ್ರೀಶನನ್ನು ಪ್ರಾರ್ಥಿಸಿದರು –

ಯೋಗ್ಯಂ ಯಮಶ್ಚ ನಿಯಮೈಶ್ಚ ವಿಧಾಯಚಿತ್ತಂ
ಸಂತೋ ಚಿತಾಸಿತನಯ, ಸ್ವವಶಾಸುವರ್ಗಾ: ।

ಪ್ರತ್ಯಾಹೃತೇಂದ್ರಿಯಗಣಾ: ಸ್ಥಿರಧಾರಣಾ ಸ್ತಾವಂ
ಧ್ಯಾತ್ವಾ ಸಮಾಧಿಯುಗಳೇನ ವಿಲೋಕಯಂತಿ ॥

ಆತ್ಮ ಸಂಯಮ, ಯೋಗಾಗ್ನಿ – ಜ್ಞಾನಾಗ್ನಿ – ಎಲ್ಲ ದಯಪಾಲಿಸೆಂದು ಪ್ರಾರ್ಥಿಸಿದರು. ಆಶ್ವಯುಜ ಕೃಷ್ಣ ತ್ರಯೋದಶಿಯ ಶುಭದಿನ, ಪಟ್ಟಾಭಿಷೇಕ ನೆರವೇರಿತು! ಅಂದಿನಿಂದ ಆತ್ಮಕೂರು ರಂಗಾಚಾರ್ಯರು – "ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕ" ರೆಂಬ ನಾಮಧೇಯದಿಂದ ವಿರಾಜಿಸಿದರು!

ಕಾರ್ಯ ಗಣ್ಯರ ಭೇಟಿ ಸ್ವಾಮಿಗಳ ತೇಜಸ್ಸು – ಮುಂದೆ, ಶ್ರೀಗಳು ಕೈಗೊಂಡ ಆಡಳಿತಸೂತ್ರ, ಶ್ರೀಮಠಹೊಂದಿದ್ದ ಒಂದು ಲಕ್ಷರೂಪಾಯಿ ಸಾಲ ತೀರಿಸಿದ್ದು, ಸ್ವಾಮಿಗಳ ಆಡಳಿತ ವಿಚಕ್ಷಣೆ, ಹಾಗೆಯೇ ದೇವತಾರ್ಚನೆ, (ಆಗಿನಕಾಲದಲ್ಲಿ ಬಹುದೊಡ್ಡವೊತ್ತ) ೧೯೨೬ ರ ಸೆಪ್ಟೆಂಬರ್ ೧೯ ರಂದು ನಡೆಸಿದ ಪಾರಿತೋಷಕ ಪ್ರಧಾನಸದಸ್ಸು, ಎಲ್ಲವನ್ನು ಈ ಲೇಖನದಲ್ಲಿ ಆಳವಡಿಸಲು ವಿಸ್ತರದ ಭಯ ಆಗುತ್ತದೆ!

ಮಹಾಮಹೋಪಾಧ್ಯಾಯ ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳು, ಬಾಗೇಪಲ್ಲಿ ಶ್ರೀ ಶ್ರೀನಿವಾಸಾಚಾರ್ಯರು, ಮೊದಲಾದ ಘನತೆವೆತ್ತ ವಿದ್ವಾಂಸರು ಉಪಸ್ಥಿತರಿದ್ದ ಸಭೆಯದು.

ಶ್ರೀಗುರುಗಳು, ತಮ್ಮ ವಿದ್ಯಾಗುರುಗಳಾಗಿದ್ದ ಪಂಡಿತರತ್ನಂ ಧರ್ಮಾಧಿಕಾರಿ ಕಸ್ತೂರಿ ರಂಗಾಚಾರ್ಯರನ್ನು ಸ್ಮರಿಸುವಂತೆ, ಒಂದು ಸಾವಿರ ರೂ ದತ್ತಿನಿಧಿ ಸ್ಥಾಪಿಸಿ, ವಿಶಿಷ್ಟಾದ್ವೈತ ಸಿದ್ಧಾಂತ ವಿದ್ವತ್ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗೆ ದತ್ತಿಯಿಂದ ಬರುವ ಐವತ್ತು ರೂ ಬಡ್ಡಿಯನ್ನು ಬಹುಮಾನ ರೂಪದಲ್ಲಿ ನೀಡಲು ಆದೇಶ ನೀಡಿದರು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ ಕೃಷ್ಣಾಪುರ ದೇವಾಲಯದ (ಟಿ. ನರಸೀಪುರ ತಾಲ್ಲೂಕು) ಪುನರ್ನಿರ್ಮಾಣ, ೧೪/೦೬/೧೯೨೭ ರಂದು ಪಂಡಿತ ಮದನ ಮೋಹನ ಮಾಳವೀಯರು ಶ್ರೀಶ್ರೀಗಳವರ ದರ್ಶನ ಪಡೆಯಲಾಶಿಸಿ, ಶ್ರೀ ಮಠಕ್ಕೆ ಬಂದರು. ಕಾಶೀಕ್ಷೇತ್ರ – ವಿದ್ಯಾಪೀಠ ರಾಮಾನುಜ ಮಾರ್ಗವನ್ನು ಕುರಿತು ಶ್ರೀಶ್ರೀಗಳು ಸಮರ್ಥರೀತಿಯಲ್ಲಿ ತಿಳಿಯಹೇಳುವುದು ಉತ್ತಮ, ಎಂಬುದು ಮಾಳವೀಯರ ಕೋರಿಕೆ. ಶ್ರೀಶ್ರೀಗಳವರಿಂದ ತತ್ಕಾಲೀನ ಪರಿಹಾರಗಳ ಸೂಚನೆ! ೧೩/೧೨/೧೯೨೭ ರಂದು ಜರ್ಮನಿಯ ಮಾರ್ಲ್ ಬುರ್ಗ್ ವಿಶ್ವವಿದ್ಯಾನಿಲಯದ ವೇದಾಂತ ಪ್ರಾಧ್ಯಾಪಕರಾದ ಹರ್ ರುಡೋಲ್ಫ್ ಆಟೋ ಮುಂತಾದವರು ಶ್ರೀರಂಗಕ್ಕೆ ಬಂದು ಶ್ರೀಶ್ರೀಗಳ ಸಂದರ್ಶನ ಪಡೆದರು. ಸಂಸ್ಕೃತ ಭಾಷೆಯಲ್ಲಿಯೇ ಎಲ್ಲವನ್ನು ಶ್ರೀಗಳು ವಿವರಿಸಿದರು.

ಶ್ರೀ ಶ್ರೀ ಗಳವರ ಪ್ರತಿವರ್ಷ ಚಾತುರ್ಮಾಸ ಸಂಕಲ್ಪದ ಅಂಗವಾಗಿ ಏರ್ಪಡಿಸುತ್ತಿದ್ದ 'ವಿದ್ವತ್ ಸದಸ್ಸು' ವಿಶೇಷ ರೀತಿಯದು. ವಿದ್ವಾಂಸರಿಗೆ ಉತ್ತೇಜನ ಅಖಿಲಭಾರತ ಮಟ್ಟದಲ್ಲಿ ಮಾತ್ರವಲ್ಲ, ಒಂದು ಅರ್ಥದಲ್ಲಿ ಜಗತ್ ಪ್ರಸಿದ್ಧ ತಾತ್ವಿಕ ಸದಸ್ಸು!

೧೭/೦೩/೧೯೨೯ ರಂದು, ಸತ್ಯಾಗಾಲದಲ್ಲಿ ಶ್ರೀಗಳು ಕೂರ್ಮಾಸನ ಪ್ರತಿಷ್ಠೆಯನ್ನು ನೆರವೇರಿಸಿದ್ದು! ಅದು ಶ್ರೀವೇದಾಂತ ದೇಶಿಕರು ಶ್ರೀವರದರಾಜನ ಆರಾಧನೆ ನಡೆಸಿದ ಪವಿತ್ರ ತಪೋತಾಣ!

ಶ್ರೀಗಳವರ ಧಾರ್ಮಿಕ ಸಾಮಾಜಿಕ – ಸಾಂಸ್ಕೃತಿಕ – ರಾಮನುಜಮಾರ್ಗ – ದರ್ಶನಗಳ – ಆಳ್ವಾರರ ಆಚಾರ್ಯರ ಸಂದೇಶ ಪ್ರಸಾರ, ಪರ್ಯಟನ, ಆಮೋಘ ರೀತಿಯದು!

ಮಹಾರಾಜರ ವರ್ಧಂತಿ – ಶ್ರೀಮಠದಲ್ಲೂ ವಿಶೇಷವೇ! ಹೊಟ್ಟಿಗೆ ಅನ್ನಮಾತ್ರ ಅಲ್ಲ, ತಲೆಗೂ ತಿಳುವಳಿಕೆ ಹೆಚ್ಚುವಶ್ರೇಷ್ಠ ಆಹಾರ – ವಿದ್ಯಾಪ್ರದಾನ ಅದೇ ಶ್ರೀಗಳವರು ಕೈಗೊಳ್ಳುತ್ತಿದ್ದ "ಕೈಂಕರ್ಯ"! ಅನೇಕ ಗಣ್ಯರ ಭೇಟಿ, ನಿರಂತರ ಸಂದರ್ಶನದ, ಉತ್ತೇಜನ!

೧೫/೬/೧೯೩೩ ರಂದು ವಿದೇಶೀಯ ಗಣ್ಯರು ಕೌಂಟಿಸ್ ಡಿ. ಪೆಸ್ಟೋರ ಭೇಟಿ, ತಿರುವಾಂಕೂರಿನ ಮಹಾರಾಜರ ಸಂಪರ್ಕ, ಡಾ॥ ರಾಧಾಕೃಷ್ಣನ್ ಅವರ ಭೇಟಿ, ಗದ್ವಾಲ್ ಸಂಸ್ಥಾನದ ರಾಣಿಯವರ ಭೇಟಿ, ಕಾಥೇವಾಡದ ಆದ್ವೈತಯತಿಗಳಾಗಿದ್ದ ಶ್ರೀ ವಾಸುದೇವೇಂದ್ರ ಸರಸ್ವತಿಯವರ ಭೇಟಿ, ನಾಲ್ವಡಿಕೃಷ್ಣರಾಜಭೂಪಾಲರ ಸತತ ಸಂಪರ್ಕ.

ಮದ್ರಾಸ್ – ಕಾಂಚೀಪುರ ಪ್ರವಾಸ – ತೂಪ್ಪುಲ್ ಅಗ್ರಹಾರದ ಪರಕಾಲಮಠದ "ಶ್ರೀ ರಾಮಾನುಜದಯಾಪಾತ್ರಂ ಜ್ಞಾನವೈರಾಗ್ಯ ಭೂಷಣಂ" ಮಹೋತ್ಸವ, ದಿವ್ಯದೇಶ – ಕ್ಷೇತ್ರಗಳ ಆರಾಧ್ಯ ಶ್ರೀಮನ್ನಾರಾಯಣ ಅರ್ಚಾಮೂರ್ತಿಗಳ ಸಂದರ್ಶನ, ೧೯೪೧ ರ ಸೆಪ್ಟೆಂಬರ್ನಲ್ಲಿ ನಡೆದ ಶ್ರೀದೇಶಿಕರ ತಿರುನಕ್ಷತ್ರದುತ್ಸವ – ಗ್ರಂಥ ಪಾರಾಯಣ, ಎಲ್ಲದರಲ್ಲಿ ಸ್ವಾಮಿಗಳು ತೋರುತ್ತಿದ್ದ ಉತ್ಸಾಹ – ನೀಡುತಿದ್ದ ಪ್ರೋತ್ಸಾಹ ಅಕ್ಷರಶ: ಅವರ್ಣನೀಯ! ಶ್ರೀ ಪರಕಾಲಮಠ ತತ್ವ ಕೇಂದ್ರ ಅಲ್ಲದೆ ಯದುಕುಲರಾಜಗುರು ಸಂಸ್ಥಾನವು, ಆಯಿತು. "ಗುರುರ್ಗರೀಯಾನ್", "ಆಚಾರ್ಯದೇವೋ ಭವ" – ಪಾಲನೆಯೇ ಆದದ್ದು!

ಉತ್ತರ ಭಾರತ ಪರ್ಯಟನ ಶ್ರೀಗಳ ವಿದ್ವತ್ ಪ್ರಸಿದ್ಧಿ ಪಡೆದ ಶುಭಕ್ಷಣಗಳು – ಪ್ರಮುಖ ಧ್ಯೇಯ, ವಿಶಿಷ್ಟಾದ್ವೈತ ಪ್ರಚಾರ – ಧರ್ಮದಿಗ್ವಿಜಯ ಯತ್ರೆ ನಾಗಪುರದಲ್ಲಿ ಶ್ರೀವೈಕುಂಠನಾಥ ದೇವಾಲಯ ನಿರ್ಮಿತಿಗೆ ಪ್ರೋತ್ಸಾಹ, ಕಲ್ಕತ್ತ – ಕಾಶಿ – ವೈದಿಕ – ಅವೈದಿಕ ದರ್ಶನಗಳ ಕುರಿತು ಉಪನ್ಯಾಸ – ಸಂಸ್ಕೃತದಲ್ಲಿ, ವಿಶೇಷ ಸನ್ಮಾನ ಡೆಲ್ಲಿಯಲ್ಲಿ.

ಹರಿದ್ವಾರ, ನೈಮಿಶಾರಣ್ಯ, ಅಯೋಧ್ಯೆ, ಗಯಾ, ಅಲಹಾಬಾದ್, ಚಿತ್ರಕೂಟ, ಹೃಷೀಕೇಶ, ಬದರಿಯಾತ್ರೆ – ಪುಷ್ಕರ ಕ್ಷೇತ್ರದಲ್ಲಿ ಶ್ರೀಗಳವರಿಗೆ ಅದ್ಭುತ ಸ್ವಾಗತ, ಆದಿ ಬದರಿ, ಧ್ಯಾನ ಬದರಿ, ಯೋಗ ಬದರಿ, ವಿಶಾಲ ಬದರಿ, ಭವಿಶ್ಯ ಬದರಿ, ಎಂಬ ಐದು ಪುಣ್ಯ ಕ್ಷೇತ್ರಗಳು – ಬದರೀನಾರಾಯಣನ ಸನ್ನಿಧಿಯಲ್ಲಿ ಶ್ರೀಗಳವರ ದೈವಾರಾಧನೆ, ಉಪನ್ಯಾಸ – ಅನಂತರ, ಸ್ವಸ್ಥಾನ ಮೈಸೂರಿನತ್ತ ಗಮನ.

ಇಡೀ ಉತ್ತರ ಭಾರತ ಪರ್ಯಟನ ಶ್ರೀಗಳವರ ಕೇವಲ ಯಾತ್ರಾಸ್ಥಳ ದರ್ಶನ ಮಾತ್ರವಲ್ಲದೆ, ವಿಶಿಷ್ಟಾದ್ವೈತ ಪ್ರಸಾರದ ಕಾರ್ಯವೂ ವಿಶೇಷ ತೆರನಾಗಿ ನೆರವೇರಿತೆಂದರೆ, ಉತ್ಪ್ರೇಕ್ಷೆಯಲ್ಲ.

ಸಾಹಿತ್ಯ ತತ್ವ ಸಂಸ್ಕೃತಿ ಪ್ರಸಾರ ಕಾರ್ಯ – ಮೈಸೂರು ಸುತ್ತಮುತ್ತ ನಡೆಸಿದ ಅನೇಕ ಸಾಂಸ್ಕೃತಿಕ ಕಾರ್ಯ ಇಲ್ಲಿ ವಿವರಿಸಲು ಸಾಧ್ಯವಾಗದು.

ಅನಾಥಾಲಯ ಪ್ರೋತ್ಸಾಹ, ವಿದ್ಯೋದಯ ಸಭೆ – ವೇದಾಂತ ದೇಶಿಕ ಗ್ರಂಥ ಪ್ರಚಾರಿಣಿ ಸಭಾ, ಉಭಯವೇದಾಂತ ಪ್ರವರ್ತನ ಸಭೆ, ಶ್ರೀವೈಷ್ಣವಸಭೆ, ವೇದಾಂತ ದೇಶಿಕ ವಿಹಾರ ಸಭೆ – ಶ್ರೀ ಪರಕಾಲಯತೀಂದ್ರ ಗ್ರಂಥಮಾಲಾ, ಶ್ರೀಮದ್ ವೇದಾಂತದೇಶಿಕ ಗ್ರಂಥಮಾಲಾ, ಭಗವದ್ರಾಮನುಜ ಗ್ರಂಥಮಾಲಾ – ಇವೇ ಮೊದಲಾದ ಗ್ರಂಥ ಪ್ರಕಟಣ ಕೇಂದ್ರಗಳ ಸ್ಥಾಪನೆ, ಕಾಂಚೀಪುರದ ಪ್ರತಿವಾದಿ ಭಯಂಕರ ಅಣ್ಣಂಗರಾಚಾರ್ಯ ಸ್ವಾಮಿಯವರ ಸಹಕಾರ, ಪ್ರೀತಿಯಿಂದ ಅನೇಕ ಗ್ರಂಥ ಬೆಳಕು ಕಂಡವು.

ಕುರುಕೇಶ್ವರ ವ್ಯಾಖ್ಯಾನ ಪ್ರಕರಣೆ (ತೆಲುಗಿನಲ್ಲಿ) ಇನ್ನು ಅನೇಕಾನೇಕ ಸಂಘ – ಸಂಸ್ಥೆಗಳಿಗೆ ಪೋಷಕರಾಗಿದ್ದುದು.

೧೯೬೬ ರ ತನಕ ೪೧ ವರ್ಷ ಸ್ವಾಮಿಗಳು ತಮ್ಮ ಎಲ್ಲಾ ಕಾರ್ಯ ನಡಸಿದ ಸಮಯ. ೦೬/೦೮/೧೯೬೪ – ಶ್ರೀಗಳ ಎಂಭತ್ತನೆ ತಿರುನಕ್ಷತ್ರದ ಅಂಗವಾಗಿ ಶ್ರೀಲಕ್ಷ್ಮೀಹಯಗ್ರೀವರಿಗೆ ವಿಶೇಷ ತಿರುಮಂಜನ – ವಿದ್ವತ್ ಸದಸ್ಸು ನಡೆಸಿದ್ದು.

ಅನೇಕ ಹಿರಿಯ ವಿದ್ವಾಂಸರಿಗೆ ಪ್ರಶಸ್ತಿ, ಬಿರುದುಗಳನ್ನು ನೀಡಿ ಹರಸಿದುದು, ತಾನೇ ಸ್ವಯಂ ರಚಿಸಿದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

೧) ಭಾವಪ್ರಕಾಶ – ಶ್ರೀ ದೇಶಿಕರ ತತ್ವಮುಕ್ತ ಕಲಾಪ ವ್ಯಾಖ್ಯಾನ.
೨) ಹಯಶಿರೋಪಾಖ್ಯಾನ – ಸಂಸ್ಕೃತ ಶ್ಲೋಕಗಳ ವಿವರಣೆ.
೩) ತ್ರಯ್ಯಂತ ಸಾರಾಮೃತ –
೪) ಉಪನಿಷತ್ ಸಾರ –
೫) ವೇದಾರ್ಥ ಸಂಜೀವನ –
೬) ಗೂಡಾರ್ಥ ಸಂಗ್ರಹ – ೧, ೨ ನೇ ಸಂಪುಟಗಳು
೭) ಔಪನಿಷದ ಮಣಿಹಾರ – ಉಪನಿಷತ್ತುಗಳ ತಾತ್ಪರ್ಯ.

ಇವಲ್ಲದೆ ಹಯಶಿರೋರತ್ನಮಾಲಿಕಾ ಸ್ತೋತ್ರ, ಪಾದುಕಾಸ್ತುತಿ, ಬದರೀನಾಥ ಅಷ್ಟಾಕ್ಷರೀ ಮಹಿಮಾ, ಶ್ರೀರಾಮಾನುಜಮತಾದರ್ಶ ಮೊದಲಾದ ಅಪೂರ್ವ ಗ್ರಂಥಗಳನ್ನು ಶ್ರೀಗಳು ರಚಿಸಿದ್ದಾರೆ. ಇವೆಲ್ಲಾ ಅವರ ವಿದ್ವತ್ತಿಗೆ ಸಾಕ್ಷಿ ನುಡಿಯುತ್ತದೆ.

ಪರಮಪದ – ೧೯೬೭ ನವಂಬರ್ ೨೪ ಶ್ರೀಗಳವರು ಬೆಂಗಳೂರಿಂದ ಬಂದರು. ೦೪/೧೨/೧೯೬೭ – ಅಕಸ್ಮಾತ್ ಕಾಲು ಜಾರಿ ಬಿದ್ದದ್ದು – ಆನಂತರ ಗಂಭೀರಸ್ಥಿತಿ – ೦೮/೧೨/೧೯೬೭ ಪರಾಭವ ಸಂವತ್ಸರ, ಕಾರ್ತಿಕ ಬಹುಳ ಏಕಾದಶಿ ಮಧ್ಯಾಹ್ನ ಎರಡು ಗಂಟೆ ಸಮಯ – ಆಚಾರ್ಯ ತಿರುವಡಿ ಸೇರಿದರು.

ಶ್ರೀಮದಭಿನವ ರಂಗನಾಥ ಸ್ವಾಮಿಗಳವರ ವಿಶಾಲ ಜೀವಿತೇತಿಹಾಸ, ಅವರು ಕೈಕೊಂಡು ನಡೆಸಿದ ವಿವಿಧ ರೀತಿಯ ಸೃಜನಾತ್ಮಕ ಕಾರ್ಯಗಳು. "ಗುರುಂ ಪ್ರಕಾಶಯೇದ್ವೀಮಾನ್" ಎಂಬುವ ಸೂಕ್ತಿಯಂತೆ, ಇಂತಹ ಪರಮ ಪವಿತ್ರ ಚೇತನರನ್ನು ಸ್ಮರಿಸಿ, ಕೊಂಡಾಡುವುದರೊಂದಿಗೆ ಅವರು ನಡೆಸಿದ ಕಾರ್ಯಗಳನ್ನು ಇನ್ನು ಸಕ್ರಿಯವಾಗಿ ಮುಂದುವರಿಸುವುದು ಆ ಆತ್ಮಕ್ಕೆ ಸಲ್ಲುವ ಗೌರವ, ಎನ್ನಬಹುದಾಗಿದೆ. ಶ್ರೀ ಪರಕಾಲಮಠದ ಮಾಣಿಕ್ಯ ಶ್ರೀ ಶ್ರೀಗಳು ಎಂದರು ಅತಿಶಯೋಕ್ತಿ ಎನಿಸದು. ಇದಲ್ಲಕ್ಕೂ ಅಂತರಿಕ ಕಾರಣ, ಅವರಲ್ಲಿದ್ದ ಕಾರ್ಯನಿರತ ಮನ, ಶಿಷ್ಯವಾತ್ಸಲ್ಯ, ಸಂಸ್ಕೃತಿ ಪ್ರಸಾರ, ದೈವಾರಾಧನೆ, ಸಮಾಜೋದ್ಧಾರಮಿಕ ಕೈಂಕರ್ಯಗಳು – ಲೇಖನವಿಸ್ತರ ಭಯದಿಂದ ಇನ್ನು ಫಲಶ್ರುತಿ ಶ್ಲೋಕ ತಿಳಿಸುತ್ತೇನೆ:

ಶ್ರೀ ರಂಗಾಶ್ರಮ ವಾಸೀ ಶ್ರೀವಾಸಮುನಿ: ಗುರೋ: ಗುಣಕ್ರೀತ: ।
ಅಭಿನವ ರಂಗೇಶ ಮುನೇ: ಆಸ್ತೌ ದೇವಂ ಪವಿತ್ರ ಚಾರಿತ್ರಂ ॥

(ಶ್ರೀ ಶ್ರೀರಂಗಂ ಶ್ರೀ ಪೌಂಡರೀಕ ಆಶ್ರಮದ ಶ್ರೀಮದಾಂಡವನ್ ಸ್ವಾಮಿಗಳ ಸಂದೇಶ)

"ಜಯತು ಜಯತು ಶ್ರೀ ಶ್ರೀಮದಭಿನವರಂಗನಾಥ ಸ್ವಾಮಿನ:
ಶ್ರೀ ಲಕ್ಷ್ಮೀಹಯಾಸ್ಯ ದಿವ್ಯಮಣಿಪಾದುಕಾ ಸೇವಾಧುರಂಧರ:"

ವಿಶೇಷ ಅನುಬಂಧಗಳು

ಪರಮ ಪೂಜ್ಯ ಶ್ರೀ ಶ್ರೀಮದಭಿನವ ರಂಗನಾಥರನ್ನು ಸ್ಮರಿಸುತ್ತ ಆ ದಿವ್ಯ ಚೇತನರನ್ನು ಆರಾಧಿಸಿ – ಆ ಅರ್ಚಾಮೂರ್ತಿಯನ್ನು ಹೀಗೆ ಸ್ಮರಿಸಿ, ಗುರುವರ್ಯರಿಗೆ ಸ: ಅಷ್ಟಾಂಗ ನಮನ ಕೈಂಕರ್ಯ ಸಲ್ಲಿಸಬೇಕೆನ್ನಿಸುತ್ತದೆ:

ವಿದ್ಯಾಮೂರ್ತಿಂ ಅಖಿಂಡ ಚಂದ್ರ ವಲಯ – ಶ್ವೇತಾರವಿಂದ ಸ್ಥಿತಂ
ಹೃದ್ಯಾಭ್ಯಂ ಸ್ಫಟಿಕಾದ್ರಿ ಮಿರ್ಮಲತನುಂ ವಿದ್ಯೋತಮಾನಂ ಶ್ರಿಯಾ ।

ವಾಮಾಂಕಸ್ಥಿತ – ವಲ್ಲಭಾಂ ಪ್ರತಿ ಸದಾವ್ಯಾಖ್ಯಾಂತಂ ಆಮ್ನಾಯ –
ವಾಗರ್ಥಾನ್ ಆದಿಮಪೂರುಷಂ ಹಯಮುಖಿಂ ಧ್ಯಾಯಾಮಿ ಹಂಸಾತ್ಮಕಂ ॥

ವ್ಯಾಖ್ಯಾಮುದ್ರಾಂ ಕರಸರಸಿಜೈ: ಪುಸ್ತಕಂ ಶಂಖಚಕ್ರೇ
ಭಿಭ್ರದ್ ಭಿನ್ನ ಸ್ಫಟಿಕರುಚಿರೇ ಪುಂಡರೀಕೇ ನಿಷಣ್ಣ: ।

ಅಮ್ಲಾನ ಶ್ರೀ: ಅಮೃತ ವಿಶದೈ: ಅಂಶುಭಿ: ಪ್ಲಾವಯನ್ ಮಾಂ
ಆವಿರ್ಭೂಯಾತ್ ಅನಘಮಹಿಮಾ ಮಾನಸೇ ವಾಗಧೀಶ: ॥

ವಂದೇ ಲಕ್ಷ್ಮೀಪತಿಂ ದೇವಂ ಶಂಖಚಕ್ರ ಗ್ಬದಾಧರಂ
ವಿದ್ಯಾಮೂರ್ತಿಂ ಹಯಗ್ರೀವಂ ಶಬ್ದಾರ್ಥ ಜ್ಞಾನಸಿದ್ಧಯೇ ।

ಪ್ರಜ್ಞೋಪಿಯತ್ ಪ್ರಸಾದೇನ ಜ್ಞಾನಂತತ್ಫಲಮಾಪ್ನುಯಾತ್
ಸೋಽಯಂ ಹಯಶ್ಚೋ ಭಗವನ್ ಹೃದಿಮೇಭಾತು ಸರ್ವದಾ ॥

ಇದರ ಸಂಗಡವೇ ಶ್ರೀಯತಿವರ್ಯರನ್ನು ಕುರಿತಂತೆ ಶ್ರೀಪರಕಾಲಮಠೀಯತನಿಯನ್ ಗಮನಾರ್ಹ: ಇದರ ಮೂಲಕ ಪರಮ ಪೂಜ್ಯ ಶ್ರೀಮದಭಿನವರಂಗನಾಥರ ವ್ಯಕ್ತಿತೆಯೂ ದರ್ಶನೀಯ:–

ಪಟ್ಟಾಭಿಷೇಕ ಸಮಯದಲ್ಲಿ ಶ್ರೀಮಠದ ವಿದ್ವಾಂಸರೊಬ್ಬರು ರಚಿಸಿದ ಶ್ಲೋಕ –

---ಶ್ರೀ ವಾಗೀಶಾತ್ತ ತುರ್ಯಂ ಶಠರಿಪುಯತಿರಾಟ್ ವೇದ ಚೂಡಾರ್ಯಮೂರ್ತಿಂ
ನೂತ್ನಂ ಶ್ರೀ ರಂಗನಾಥಂ ಕಲಿರಿಪುಮನಘಂ ಬ್ರಹ್ಮತಂತ್ರಂ ಶ್ರಯಾಮ: ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ ತುರಗವದನ ಪಾದೂ ಸಂತತ ಪರಿಚರಣ ಮಾತ್ರ ಪರಮಾರ್ಥ: ।
ಜಯತು ಶ್ರೀಮಾನ್ ಅಭಿನವ ರಂಗೇಂದ್ರ ಬ್ರಹ್ಮತಂತ್ರ ಪರಕಾಲ: ॥

ಈ ತನಿಯನ್ ಪಠಿಸುವಂತೆಯೇ ಅವರಿಗೆ ಪರಮಸುಖ ನೀಡುತ್ತಿದ್ದ ಪದಪುಂಜ – "ಶ್ರೀಮತೇ ಲಕ್ಷ್ಮೀಹಯಗ್ರೀವ ದಿವ್ಯಮಣಿಪಾದುಕಾ ಸೇವಕ" ಎಂಬುದರಲ್ಲಿ ಅಡಕ ಆಗಿರುವ ಶ್ರೀ ರಾಮಾನುಜ ಪ್ರಪತ್ತಿಭಾವ, ಮನದಲ್ಲಿ ಅನುರಣನಗೊಳ್ಳದೇ! ವಿದ್ಯಾದಧಾತಿ ವಿನಯಂ – ಎಂಬುದು ಆ ಹಿರಿಯ ಚೇತನ ತನ್ನಲ್ಲಿ ಅಕ್ಷರಶ: ಅಡಕಮಾಡಿಕೊಂಡಿದ್ದರು – ಇದು, ನಮಗೆ ಅನುಸರಣೀಯವಲ್ಲವೇ?

*ಅನೇಕ ಆಂತರಿಕ ವಿವರಗಳನ್ನು ನನ್ನ ಅತ್ಯಂತ ಪ್ರಿಯ ಹಿರಿಯ ಡಾ ॥ ವೆಂಕಟನಾಥನ್ ಅವರು ತಿಳಿಸಿದುದು. ಅವರಿಗೆ ಸದಾ "ನಮೋನಮ:" ಎನ್ನುತ್ತೇನೆ.

ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳ ಜನ್ಮ ಕುಂಡಲೀ – ತತ್ಕಾಲಗ್ರಹ ಸಂಪತ್ತಿ:

(ಆಧಾರ: – ಪರಕಾಲ ಮಠದ ಇತಿಹಾಸ, ಇಂಗ್ಲೀಷ್ ಗ್ರಂಥ ಹಾಗು ಇತರ ಕನ್ನಡ ಪುಸ್ತಕಗಳು – ಈ ದೆಸೆಯಲ್ಲಿ ಡಾ. ವೆಂಕಟನಾಥನ್ ಅವರ ಸಂದರ್ಶನ ತುಂಬಾ ಉಪಕರಿಸಿದೆ)

<table>
<tr><td>ಕೇತು</td><td></td><td>ಶನಿ</td><td>ಶುಕ</td></tr>
<tr><td></td><td colspan="2" rowspan="2">ರಾಶಿಕುಂಡಲೀ</td><td rowspan="2">ಲಗ್ನ–ರವಿ
ಚಂದ್ರ
ಗುರು, ಬುಧ</td></tr>
<tr><td></td></tr>
<tr><td></td><td></td><td></td><td>ಕುಜ
ರಾಹು</td></tr>
</table>

<table>
<tr><td>ಲಗ್ನ</td><td>ಶುಕ್ರ</td><td></td><td></td></tr>
<tr><td>ಕೇತು
ಕುಜ</td><td colspan="2" rowspan="2">ಅಂಶಕುಂಡಲೀ</td><td>ಚಂದ್ರ</td></tr>
<tr><td></td><td>ಶನಿ
ರಾಹು</td></tr>
<tr><td>ಬುಧ
ಗುರು</td><td></td><td></td><td>ರವಿ</td></tr>
</table>

ತಾರಣ ಸಂವತ್ಸರದಲ್ಲಿ ಜನನ – ಸಂಸಾರ ತಾರಕರು

ಪುನರ್ವಸು – ಶ್ರೀರಾಮನಂತೆ ಕರುಣಾಳು, ರಜ–ತಮೋ ನಿವಾರಕರು
ಶುದ್ಧ ಸಾತ್ವಿಕ ಮಾರ್ಗ ಗಮನಿಸುವವರು, ಪ್ರಪಂಚದಲ್ಲಿ ಸಾತ್ವಿಕ ಸಿದ್ಧಾಂತ ಸ್ಥಾಪಕರಾಗುತ್ತಾರೆ.

ನಕ್ಷತ್ರ ಶ್ರವಣ, ಜನ್ಮ ರಾಶಿ ಮಕರ

ಇದಕ್ಕೆ ಕರ್ಕಾಟಕ ಏಳನೆಯ ಸ್ಥಾನ ಮಕರಾಧಿಪ ಶನಿಯು ಕಟಕದ ಅಧಿಕ, ಚಂದ್ರನನ್ನು ನೊಡೂತ್ತಾರಾದ ಪ್ರಯುಕ್ತ, ತಿರುಪತಿ ಶ್ರೀ ಶ್ರೀನಿವಾಸರ (ಶ್ರವಣ) ಶ್ರೀ ಲಕ್ಷ್ಮೀಹಯಗ್ರೀವರ ಕಟಾಕ್ಷ ಉಂಟು.

ಮಗುವಿಗೆ – ಎಲ್ಲ ಸೂಕ್ತ ಜಾತಕರ್ಮ ಸಂಸ್ಕಾರ – ಹಿರಿಯರ ಆಶೀರ್ವಚನ, ಮುಂದೆ ಈತ ಜಗದ್ವಿಖ್ಯಾತನಾಗುನೆಂಬುವ ಭವಿಷ್ಯ.

ಅಡಿಯೇನ್ ಶ್ರೀ ಆಚಾರ್ಯದಾಸನ್

ಡಾ ॥ ನೀಲತ್ತಹಳ್ಳಿ ಕೃಷ್ಣ ಐಯ್ಯಂಗಾರ್ ರಾಮಶೇಷ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ದೇಶಿಕ ಲಾಲಿ

ಮಿಂದಿಹುದು ಮುಗಿಲೆಲ್ಲ ಚಂದ್ರಿಕೆಯ ಹಾಲಿನಲಿ
ಮುತ್ತಿನಾ ತಾರೆಗಳ ಚಪ್ಪರವು ಹೊಳೆಯುತಲಿ
ತೆಂಕಣದ ಸವಿಯುಂಡು ಮಲಗಿಹನು ಮಾಯನು
ಗೋವುಗಳ ಪಾಲಕನೇ ಮಲಗ್ಯೈಯ್ಯ ಜೋಜೋ ..೧..

ಮಾಯಿಗಳ ತಂಡವು ಕೋಟೆಯನು ಮುತ್ತಲು
ಸೇನೇಶನಾಣೆಗೆ ವಶಪಟ್ಟು ನೀ ಬಂದು
ಬತ್ತಳಿಕೆಯ ಶರಗಳಿಂ ಮಾಯಿಗಳ ಮಡಿಸಿಟ್ಟ
ತ್ರಯ್ಯಂತ ದೇಶಿಕನೇ ಮಲಗ್ಯೈಯ್ಯ ಜೋಜೋ ..೨..

ದೇಗುಲದ ಸುತ್ತಲೂ ವಿಷವೃಕ್ಷ ಹೊಮ್ಮಲು
ಅಸಿಯಿಂದ ಬಳ್ಳಿಗಳ ಅಡಿಪಾಯದಿಂ ಕಿತ್ತೆಸೆದು
ಆಲಯದ ಸುತ್ತಲೂ ಕೋಟೆಯನು ನೀ ಕ್ಟಟ್ಟಿ
ಕಾವಲಿಗೆ ನಿಂತವನೇ ಮಲಗ್ಯೈಯ್ಯ ಜೋಜೋ ..೩..

ಹೊನ್ನಿನಾ ಮೆರುಗನು ತೋರಿಸಲು ನೃಪರು
ಹೊನ್ನು ತೃಣವೆಂದು ದೂರಗ್ಯೈದವನು ನೀನು
ಆರಮನೆಯು ನರಕವು ಗೌರವವು ವಿಷವೆಚಿದ
ವಿರಕ್ತರಲಿ ತುಂಗನೇ ಮಲಗ್ಯೈಯ್ಯ ಜೋಜೋ ..೪..

ನಾದಮಾತ್ರದಿಂ ಅರಿಸರ್ವಗಳ ನಶಿಸುವ
ಶ್ರೀಶನಾ ಪೂಜಿಸಲು ತಾತನು ನಿರ್ಮಿಸಿದ
ಘಂಟೆಯಲಿ ನಿನ ಛಾಯೆ ಬುಧಜನರು ಕಂಡರು
ಶ್ರೀಹರಿಯ ಆತ್ಮನೇ ಮಲಗ್ಯೈಯ್ಯ ಜೋಜೋ ..೫..

ವಾದಿಗಳು ಸೂರಿಗಳ ಅರ್ಚೆಯನು ನಿಂದಿಸಲು
ಸೂರಿಗಳ ದಿವ್ಯೋಕ್ತಿ ಶ್ರುತಿಗಳೆಂ ನಿರ್ವಹಿಸಿ
ಉತ್ಸವವ ತಾ ನಡೆಸಿ ಸೂರಿಗಳ ಪದತೊಳೆದ
ತ್ರಯ್ಯಂತ ದ್ವಯವಿದನೇ ಮಲಗ್ಯೈಯ್ಯ ಜೋಜೋ ..೬..

ಸುಕೋಮಲ ಕಾವ್ಯಗಳ ಮಧುರಸಮ ಸೂಕ್ತಿಗಳ
ದೀರ್ಘಸಮ ಪ್ರಕರಣಗಳ ಗೂಢತಮ ರಹಸ್ಯಗಳ
ದಿವ್ಯಸಮ ಪ್ರಬಂಧಗಳ ಸುದೀರ್ಘ ವ್ಯಾಖ್ಯಾನಗಳ
ಸೃಷ್ಟಿಸಿದ ಶತಕ್ರತುವೇ ಮಲಗ್ಯೈಯ್ಯ ಜೋಜೋ ..೭..

ಮುಸುಕಿದಾ ಕಣ್ಗಳಿಗೆ ವಾಮನಂತಿಹ ನೀನು
ಮುಸುಕು ಮರೆಯಾಗಿ ನೋಡುವಾ ಕಣ್ಗಳಿಗೆ
ತ್ರಿವಿಕ್ರಮನು ನೀನಾಗಿ ಮನವಳೆದು ನಿಲ್ಲಲು
ಸಾಧನದ ಕಾಷ್ಠೆಯೇ ಮಲಗ್ಯೈಯ್ಯ ಜೋಜೋ ..೮..

ಇರುಳಿನಲಿ ಬಳಲುತಿಹ ಅಂಧರಾ ಮನದಲ್ಲಿ
ಕತ್ತಲೆಯ ನೀಗಿಸುವ ಬೆಳಕು ನೀನಾಗಿರಲು
ರಾತ್ರಿಯು ತುಂಬಿಹುದು ಕೊನೆಯ ಪಥ ಪಾಲಿಸಲು
ಕವಿಕಥಕ ಸಿಂಹನೇ ಮಲಗ್ಯೈಯ್ಯ ಜೋಜೋ ..೯..

ಕರಿಗಿರಿಯ ಕಾರ್ಮೋಡದಡಿಯಲ್ಲಿ ನೀನಿರಲು
ಶೇಷನಾ ಆರ್ಣವದ ಜಲದಿಂದ ಶೋಭಿಸಲು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕುಲಿಶವಾ ಹಿಡಿದವನ ಪಾದದಲಿ ಮುಳುಗಿದ
ಪರಮಹಂಸನು ನೀನೈಯ್ಯ ಮಲಗೈಯ್ಯ ಜೋಜೋ ..೧೦..

ಅನ್ಯಮತವಾದಿಗಳ ಕುತಂತ್ರವನು ನೀ ಗೆದ್ದು
ಶ್ರೀಹರಿಯ ಭಕ್ತರಲಿ ಪರತಂತ್ರನು ನೀನಾಗಿ
ತ್ರಯ ಮಂತ್ರಗಳ ಸಾರವನು ವಿಸ್ತಾರದಿಂ ನಿರ್ವಹಿಸಿದ
ಸರ್ವತಂತ್ರ ಸ್ವತಂತ್ರನೇ ಮಲಗೈಯ್ಯ ಜೋಜೋ ..೧೧..

ಪಶುಗಳೂ ಹಕ್ಕಿಗಳು ಗೂಡನೂ ಹೊಕ್ಕಿರಲು
ಹರಿಯುವಾ ಝರಿ ನಡುವೆ ತಂಗಾಳಿ ಬೀಸಿರಲು
ಚಂದಿರನು ತಾರೆಗಳು ಜೋಗುಳವ ಹಾಡಿರಲು
ಆ ಪದವ ಕೇಳುತಲಿ ಮಲಗೈಯ್ಯ ಜೋಜೋ ..೧೨..

ಮುಗಿಯಲುಬೇಡ ಈ ರಾತ್ರಿಯು ನಿನ ಸೇವೆಯಲಿ ನಾನಿರಲು
ಮುಗಿಯಲುಬೇಡ ಈ ನೋಟವು ನಿನ ಸೊಬಗನು ನಾ ನೋಡಿರಲು
ಮುಗಿಯಲುಬೇಡ ಈ ಪದಗಳು ನಿನ ಪೊಗಳಿ ನಾ ಪಾಡಿರಲು
ಮುಗಿಯಲುಬೇಡ ಈ ಮಿಲನವು ನಿನ್ನೊಂದಿಗೆ ನಾನಿರಲು ..೧೩..

ಕಣ್ಗಳೆಂದಿಗು ನೋಡಿರಲಿ ದೇಗುಲದಿ ನಿನ ರೂಪವನು
ಕಿವಿಗಳೂ ಕೇಳಿರಲಿ ನಿನ ಪೊಗಳುವ ನುಡಿಮುತ್ತುಗಳನು
ನಾಲಿಗೆಯು ನುಡಿದಿರಲಿ ನಿನ ನಾಮ ವೈಭವಗಳನು
ದೇಹವೂ ಭುಜಿಸಿರಲಿ ನೀನುಂಡ ಶೇಷವನು
ಬುದ್ಧಿಯೂ ಧರಿಸಿರಲಿ ನಿನ ಸೂಕ್ತಿಮಾಲೆಯನು
ನಿನ ಪಾದ ನೆನೆಯುತಲಿ ನೆಲೆಸಿರಲಿ ಜೀವರು ನೀನಿರುವ ಬೀಡಿನಲಿ ..೧೪..

ಮರಯಲೆಂದಿಗು ಬೇಡ ದೇವರಾಜನಾ ಪದದಿ ನಿನ ಅಂಜಲಿಯ ಮಿಲನವನು
ಮರಯಲೆಂದಿಗು ಬೇಡ ಮುತ್ತಿಂದ ಸಜ್ಜಾದ ಆ ನಿನ್ನ ದಿವ್ಯ ವದನವನು
ಮರಯಲೆಂದಿಗು ಬೇಡ ನಿನ ಮೇಲೆ ಎರಗಿದ ಆ ಪುಷ್ಪವೃಷ್ಟಿಯನು
ಮರಯಲೆಂದಿಗು ಬೇಡ ಹೂವುಗಳ ರಥವೇರಿ ನೀ ಬರುವ ಶೀವಿಯನು ..೧೫..

ಅಂಜದಿರು ನಾಥನೇ ಎನ ಪದವ ನೀ ಕೇಳಿ
ಗತಿಯಿಲ್ಲ ಎಂದಿಗೂ ನಿನ ಪಾದ ಬಿಟ್ಟೆನಗೆ
ಹರಿಯ ಒಲುಮೆಯು ಬೇಡ ನಿನ ಪಾದ ಎನಗಿರಲು
ನಿನ ಪಾದ ಧೂಳಾಗಿ ಬಯಸುವೆನು ನಾನಿರಲು
ಪರ್ಯಾಪ್ತವಾಗಲು ಬೇಡ ನಿನ ಭಕ್ತಿ ಎನ ಮನದಿ
ಎನ್ನಾತ್ಮ ಬಂಧುವೇ ಮಲಗೈಯ್ಯ ಜೋಜೋ ಜೋಜೋ ..೧೬..

ಈ ಪದ್ಯಮಾಲಿಕೆಯು ಶ್ರೀಮದ್ವೇದಾಂತ ದೇಶಿಕರ ಪಾದಕಮಲಗಳಲ್ಲಿ ಅರ್ಪಿತವಾಗಲಿ.

The practice of Prapatti-vidya does not depend upon the practice of karma, jnana and bhakta-sadhana. It requires only the full realisation of its essentials which are – Anukulyasya sankalpah, Pratikulyasya varjanam, Rakshishyatiti vishvasah, Goptrutva varanam, Karpanyam and Atma Nikshepa.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ದೇಶಿಕ ನಮನ

ಶ್ರೀಮಾನ್ ರಾಜೀವ ಲೋಚನ ರಾಮಾನುಜದಾಸ

ಲಕ್ಷ್ಮೀಹಯಾಸ್ಯ ಪದೂವರಿವಸ್ಯೈ ಕಾಂತಮಾನಸಸ್ಸತತಂ ।
ಜಯತು ಶ್ರೀಮದಭಿನವರಾಮಾನುಜ ಸಂಯಮೀಂದ್ರ ಪರಕಾಲಃ ॥

ಧರೆಗಿಳಿದು ಬಂದನಿವ ನಾದವು ಮೊಳಗುತಲಿ
ಹಯಶಿರನ ತನ್ನ ವಾಣಿಯೋಳ್ ಅಲಂಕರಿಸಿ
ಕರಿಗಿರೀಶನ ಪದದ್ವಯವ ಮನದಿ ತೊಳೆದು
ಮಿನುಗುತಲಿಹನು ತಾರೆಗಳೋಳ್ ಚಂದಿರನಂತೆ ತಾ ..೧..

ಶ್ರೀನಿವಾಸನ ನಿತ್ಯಾರಾಧನಪರಿಚಾರಕ್ಕಾಗಿ ಚತುರ್ಮುಖನಿಂದ ಘಂಟೆಯು ಸೃಷ್ಟಿಸಲ್ಪಟ್ಟಿತು. ವಿತ್ರಾಸಿನೀ ವಿಬುಧವೈರಿ ವರೂಥಿನೀನಾಂ ಎನ್ನುವಂತೆ ತನ್ನ ನಾದಮಾತ್ರದಿಂದಲೇ ವೈರಿಗಳನ್ನು ನಾಶಪಡಿಸುವ ಸಾಮರ್ಥ್ಯವುಳ್ಳ ಈ ಘಂಟೆಯು ತನ್ನ ಘೋಷವನ್ನು ಎಲ್ಲೆಡೆ ಮೊಳಗುತ ಶ್ರೀಶೈಲೇಶನ ಸನ್ನಿಧಿಯನ್ನು ಸೇರಲು, ಸ್ವಾಮಿಯ ಆಜ್ಞಾನುಸಾರವಾಗಿ ಅನಂತಸೂರಿ ದಂಪತಿಗಳಿಗೆ ಸೀಮಂತ ಪುತ್ರರಾಗಿ ವೇಂಕಟನಾಥರಾಗಿ ಜನಿಸಿದರು. ಲಕ್ಷ್ಮೀಹಯವದನನನ್ನು ಕುರಿತು ದೀರ್ಘಕಾಲ ತಪವನ್ನು ಆಚರಿಸಿ, ಜಿಹ್ವಾಗ್ರ ಸಿಂಹಾಸನಮಾರುರುಕ್ಷೋಃ ಎಂಬ ಸೂಕ್ತಿಗೆ ಅನುಗುಣವಾಗಿ ಹಯಶೀರ್ಷನನ್ನು ವೇಂಕಟನಾಥರು ತಮ್ಮ ನಾಲಿಗೆಯ ಮೇಲಿನ ಸಿಂಹಾಸನದಲ್ಲಿ ಅಲಂಕರಿಸಿಕೊಂಡರು. ತಮ್ಮ ಆರಾಧ್ಯದೈವವಾದ ಪ್ರಣತಾರ್ತಿಹರನನ್ನು ಚಿರಂತನವಾಗಿ ತಮ್ಮ ಹೃದಯಾಕಾಶದಲ್ಲಿ ನೆನೆದು ಅವರ ಅಡಿದಾವರೆಗಳಲ್ಲಿ ತಮ್ಮ ಭರವನ್ನು ಅರ್ಪಿಸಿಕೊಂಡು ಸರ್ವಾತ್ಮಗುಣಸಂಪನ್ನರೂ ಪರಮಾಚಾರ್ಯರೂ ಆದ ಸ್ವಾಮಿ ದೇಶಿಕರು, ಶರತ್ಕಾಲ ಚಂದ್ರನು ತಾರೆಗಳನಡುವೆ ಮಿನುಗುವಂತೆ, ನಕ್ಷತ್ರಮಂಡಲದಂತಿಹ ಆಚಾರ್ಯಸಮೂಹದಲ್ಲಿ ಪೂರ್ಣಚಂದ್ರನಂತೆ ಬೆಳಗುತಲಿಹರು.

ಸಾರ್ವಭೌಮನಾ ಸೆರೆಹಿಡಿದ ತನ್ನ ವಾಗ್ಝರಿಯೋಳ್
ಪರವಾದಿಹಂಸಗಳಮೇಲೆರಗಿದನು ಕಾರ್ಮೋಡದಿಂ
ಪ್ರಚ್ಛನ್ನಬೌದ್ಧರಾ ಮುಳುಗಿಸಿದ ಕಾಳಮೇಘನಿವನು
ಪರಾಪರವಸ್ತುಗಳ ಸಾರವತಿಳಿಸಿದ ದ್ವಿಜಪುಂಗನಿವನು ..೨..

ಆಗರ್ಭ ಬ್ರಹ್ಮವಿತ್ತಾದ ನಮ್ಮ ಸ್ವಾಮಿ ದೇಶಿಕರು ತಮ್ಮ ಸ್ವಾರಸ್ಯಮಯವಾದ ಅರ್ಥಗರ್ಭಿತವಾದ ಸೂಕ್ತಿಗಳಿಂದ ಅಖಿಲ ಕಲ್ಯಾಣಗುಣ ಪರಿಪೂರ್ಣನೂ ಸರ್ವವೇದಪ್ರತಿಪಾದ್ಯನೂ ಆದ ಪರಮಪುರುಷನನ್ನು ಅವನ ನಿಜಸ್ವರೂಪದಲ್ಲಿ ರಾಮಾನುಜಸೂಕ್ತಿಗಳಿಗೆ ಅನುಗುಣವಾಗಿ ಸ್ಥಾಪಿಸಿದರು. ವೈದಿಕ ಧರ್ಮಕ್ಕೇ ಕಳಂಕಪ್ರಾಯದಂತಿದ್ದ ಅನ್ಯ ಮತವಾದಿ ಹಂಸಗಳ ಮೇಲೆ ಮಿಂಚು ಗುಡುಗಿನೊಂದಿಗೆ ಕೂಡಿದ ಕಾರ್ಮೋಡದ ಮಳೆಯಾಗಿ ಎರಗಿದರು. ವೈದಿಕಧರ್ಮವೆಂಬ ಹೆಸರಿನಲ್ಲಿ ಪರಬ್ರಹ್ಮನನ್ನೇ ಅಜ್ಞಾನದ ಕೆಸರಿನಲ್ಲಿ ಮುಳುಗಿಸಿದ ಅದ್ವೈತಿಗಳಿಗೆ ಕಾಳಮೇಘನಂತೆ ತೋರಿ ತನ್ನ ಶತದೂಷಣೀ ಎಂಬ ವಾದಗ್ರಂಥದಿಂದ ಅದ್ವೈತವನ್ನು ನಿರ್ನಾಮ ಮಾಡಿದರು. ಆಕಾರದಲ್ಲಿ ಹ್ರಸ್ವರಾಗಿದ್ದರೂ ವೇದಾಂತದಲ್ಲಿ ಪ್ರತಿಪಾದ್ಯನಾಗಿರುವ ಪರ ಮತ್ತು ಅಪರ ತತ್ತ್ವಗಳನ್ನು ರಾಮಾನುಜರ ದಿವ್ಯಸೂಕ್ತಿಗಳಿಗೆ ಅನುಗುಣವಾಗಿ ಅವುಗಳ ನಿಜಸ್ವರೂಪದಲ್ಲಿ ತಮ್ಮ ರಹಸ್ಯಗ್ರಂಥಗಳಲ್ಲಿ ಸುಭದ್ರವಾಗಿ ಸ್ಥಾಪಿಸಿ ಸಿದ್ಧಾಂತ ಸ್ಥಾಪನಾಚಾರ್ಯರಾಗಿ ತ್ರಿವಿಕ್ರಮನಂತೆ ಬೆಳಗುತ್ತಿದ್ದಾರೆ.

ಶ್ರೀಮಾನ್ ಶಬ್ದ ವಾಚ್ಯನಿವ ಶ್ರೀವೇಂಕಟನಾಥಾರ್ಯನಿವನು
ಸ್ವತಃ ಸಿದ್ಧನಿವ ಕವಿಗಂಡ ತಾರ್ಕಿಕರೋಳ್ ಕೇಸರೀ ಇವನು
ವೇದಾಂತಾಚಾರ್ಯನೆಂಬಿರುದಾಂಕಿತನಿವ ಆಚಾರ್ಯೋಪಾಸಕನಿವನು
ಕಾಳಮೇಘನಾ ಸನ್ನಿಧಾನದಿ ಅಲಂಕೃತನಾದ ಧರ್ಮಜ್ಞನಿವನು
ಬ್ರಹ್ಮವಿತ್ತಾಗುವರು ಇವನ ಪಾದಕಮಲದಾ ನರಳು ಸೋಕಲು
ಘಂಟಾಂಶಗುರುವಿವನು ಸದಾಶ್ರಿತನಾಗಲಿ ಬುಧರಹೃದಿಗುಹೆಗಳಲಿ ..೩..

ವೇಂಕಟನಾಥರು ತಮ್ಮ ಬಾಲ್ಯದಿಂದಲೇ ಅತಿ ವಿರಕ್ತರಾಗಿ ಪರಮಾರ್ಥಚಿಂತನೆಯಲ್ಲಿಯೇ ತಮ್ಮ ಕಾಲವನೆಲ್ಲಾ ಕಳೆಯುತ್ತಿದ್ದರು. ಇವರ ಜನನದ ಕಾಲದಲ್ಲಿ ಪಾಮರರಲ್ಲಿ ಪರಮಾರ್ಥವು ಯಾವುದು ಎನ್ನುವುದರ ಬಗೆ ಬಹಳಷ್ಟು ಸಂದೇಹಗಳಿದ್ದವು. ವೇದಗಳು ತಪ್ಪಾದ ವ್ಯಾಖ್ಯಾನಗಳಿಗೆ ಸಿಕ್ಕಿಬಿದ್ದವು. ಪುರಾಣಗಳು ವ್ಯರ್ಥವೆಂದು ಸಾರಲ್ಪಟ್ಟವು. ಮಾಯಾವಾದಿಗಳು ಶೂನ್ಯವಾದಿಗಳು ಸುಭಿಕ್ಷವಾಗಿದ್ದರು. ಧರ್ಮತ್ರಾಣಾಯ ಯೊ ಭೂತ್ ಸ ಜಯತು ಭಗವಾನ್ ವಿಷ್ಣು ಘಂಟಾವತಾರ: ಎಂಬ ಸ್ವಾಮಿ ದೇಶಿಕರನ್ನು ಕುರಿತ ಡಿಂಡಿಮ ಕವಿಯ ಸೂಕ್ತಿಯಂತೆ ನಮ್ಮ ದೇಶಿಕರು ಅಜ್ಞಾನದ ಕಡಲಿನಲ್ಲಿ ಮುಳುಗಿದ ಸಂಸಾರಿಗಳನ್ನು ಉದ್ಧರಿಸಿ ಅವರಿಗೆ ಪ್ರಪತ್ತಿ ಮಾರ್ಗವನ್ನು ಉಪದೇಶಿಸಿದರು. ವೇದಗಳಲ್ಲಿ ಪ್ರತಿಪಾದ್ಯವಾಗಿರುವ ಶ್ರೀಮನ್ ನಾರಾಯಣನನ್ನು ಅನಪಾಚುವಾಗಿ ಸ್ಥಾಪಿಸಿ ಎಲ್ಲರಿಗೂ ಆತ್ಮೋದ್ಧಾರದ ಹಾದಿಯನ್ನು ತೋರಿದರು. ಇಂಥಹ ವಿದ್ವನ್ಮಣಿಗಲ್ಲದೆ ಪರರಿಗೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಹೊಂದುವುದುಂಟೇ ಶ್ರೀಮಾನ್ ಎಂಬ ಅಂಕಿತ ನಾಮವು? ಒಬ್ಬ ಆಚಾರ್ಯನಿಗೆ ಇರಬೇಕಾದ ಸಮಸ್ತ ಲಕ್ಷಣಗಳೂ ಇವರಲ್ಲಿ ನೆಲೆಯಾಗಿದ್ದಿತು. ಕವಿತಾರ್ಕಿಕ ಸಿಂಹರಾಗಿ ವೇದಾಂತಾಚಾರ್ಯರಾಗಿ ಪರಮನ ಪರಿಪೂರ್ಣ ಕಟಾಕ್ಷಕ್ಕೆ ಪಾತ್ರರಾದರು. ಸದಾ ಕಾಲ ತಮ್ಮ ಆಚಾರ್ಯರ ಸವಿನುಡಿಗಳನ್ನು ನೆನೆಯುತ್ತ ಸಂಪ್ರದಾಯ ಸಂರಕ್ಷಣವನ್ನು ಮಾಡಿದ ನಮ್ಮ ವೇದಾಂತ ದೇಶಿಕರ ಪಾದ ಕಮಲಗಳ ನೆರಳು ಸೋಕಿದರೂ ಸಾಕು ನಾವು ಬ್ರಹ್ಮವಿತ್ತುಗಳಾಗಲು. ಘಂಟಾಂಶಸಂಭೂತರಾದ ಇಂತಹ ಆಚಾರ್ಯರು ಸದಾ ಕಾಲ ನಮ್ಮ ಮನಸ್ಸಿನಲ್ಲಿ ಸ್ಥಿರವಾಗಿ ನೆಲೆಸಲಿ.

ಈ ಪದ್ಯದ ವೈಶಿಷ್ಟ್ಯವೇನೆಂದರೆ ಇದು ಗರ್ಭ ಪದ್ಯದ ಶೈಲಿಯಲ್ಲಿ ರಚಿಸಲ್ಪಟ್ಟಿದೆ. ಈ ಪದ್ಯದಲ್ಲಿ ಸ್ವಾಮಿ ದೇಶಿಕರನ್ನು ಕುರಿತು ಅವರ ಔರಸ ಪುತ್ರರಾದ ಶ್ರೀಮಾನ್ ವರದನಾಥ ನಯನಾರಾಚಾರ್ಯರು ತಮ್ಮ ಆಚಾರ್ಯರಾದ ಸ್ವಾಮಿ ದೇಶಿಕರ ಸನ್ನಿಧಿಯಲ್ಲಿ ಶ್ರೀಭಾಷ್ಯವನ್ನು ಅಧಿಕರಿಸಿಕೊಳ್ಳುವ ಮೊದಲು ರಚಿಸಿದ ತನಿಯನ್ ಶ್ಲೋಕವು ಗರ್ಭಿತವಾಗಿದೆ. ಪದ್ಯದಲ್ಲಿ ಸೂಚಿಸಿರುವ ರೀತಿಯಲ್ಲಿ ಅಕ್ಷರಗಳನ್ನು ಕೂಡಿಸಿಕೊಂಡು ಓದಿದಾಗ ಕೆಳಕಂಡ ಈ ತನಿಯನ್ ಶ್ಲೋಕವನ್ನು ನಾವು ಕಾಣಬಹುದು.

ಶ್ರೀಮಾನ್ ವೇಂಕಟನಾಥಾರ್ಯ: ಕವಿ ತಾರ್ಕಿಕಕೇಸರೀ ।
ವೇದಾಂತಾಚಾರ್ಯವರ್ಯೋ ಮೇ ಸನ್ನಿಧತ್ತಾಂ ಸದಾಹೃದಿ ॥

ರಾಮಾನುಜ ಪಟ್ಟದಾ ಅರಸನಿವ ದಯಾಶೀಲನು
ಗರುಡಾಧೀಶನಾ ಕರುಣೆಗೆ ಪಾತ್ರನಿವ ಸಿಂಹರೂಪನು
ಜ್ಞಾನ ವೈರಾಗ್ಯಗಳಿಗೇ ಭೂಷಣನಿವ ಶಾಂತಚಿತ್ತನು
ಶ್ರೀಮದ್ವೇದವತಂಸನಿವ ವೇಂಕಟಶೈಲಾಧೀಶನಂಶನಿವನು
ನಾಥಾರ್ಯನಿಂತೊಡಗಿ ಹರಿವ ತೀರ್ಥಗಳ ಕೌಸ್ತುಭನಿವನು
ವಂದೇಹಂ ಎನ ಬೇದುವಗೆ ಸದ್ಗತಿಯ ತೋರುವ ವೃಕ್ಷನಿವನು
ವೇದಾಂತ ದೇಶಿಕನಿವ ಹರಿ ಘಂಟಾಂಶ ಸಂಭೂತನಿವನು ..೪..

ಭಗವದ್ರಾಮಾನುಜರು ಸನಾತನವಾದ ಪರಮ ವದಿಕ ಶ್ರೀವೈಷ್ಣವ ಶ್ರೀ ಸಂಪ್ರದಾಯವನ್ನು ಪುನ:ಪ್ರತಿಷ್ಠಾಪಿಸಿ ಪ್ರಪತ್ತಿ ಮಾರ್ಗವನ್ನು ಎಲ್ಲರಿಗೂ ತೋರಿ ಮೋಕ್ಷ ಸಾಮ್ರಾಜ್ಯಕ್ಕೇ ಸಾರ್ವಭೌಮರಾದರು. ಇಂತಹ ರಾಮಾನುಜ ಪತ್ತಕ್ಕೇ ಸರ್ವಗುಣ ಸಂಪನ್ನರಾದ ನಮ್ಮ ದೇಶಿಕರು ಅರಸರೆಂದರೇ ಅದು ಅತಿಶಯೋಕ್ತಿಯಲ್ಲ. ಗರುಡಾಂಶಸಂಭೂತರಾದ ಆತ್ರೇಯ ರಾಮಾನುಜರಲ್ಲಿ ತಮ್ಮ ಪರಿಪೂರ್ಣ ವ್ಯಾಸಂಗವನ್ನು ಮುಗಿಸಿ ಅವರ ಪರಮ ಕೃಪೆಗೆ ಪಾತ್ರರಾದ ನಮ್ಮ ಸ್ವಾಮಿಯು ಪರವಾದಿಗಳಿಗೆ ಸಿಂಹರೂಪಿಯಾಗಿದ್ದು ರಾಮಾನುಜ ದರ್ಶನ ಅನುಯಾಯಿಗಳಿಗೆ ಪ್ರಹ್ಲಾದನನ್ನು ಕಾಪಾಡಿದ ನೃಸಿಂಹನಂತೆ ಶಾಂತಚಿತ್ತರಾಗಿದ್ದರು. ಶ್ರೀನಿವಾಸನ ದಿವ್ಯಾಂಶಸಂಭೂತರಾದ ನಮ್ಮ ಸ್ವಾಮಿಯು ಪರಮನಂತೆಯೇ ಸರ್ವಗುಣ ಸಂಪನ್ನರಾಗಿ ವೇದಾಂತಾಚಾರ್ಯರಾಗಿ ಜ್ಞಾನ ವೈರಾಗ್ಯಗಳಿಗೇ ಭೂಷಣರಾಗಿದ್ದರು. ಶ್ರೀರಂಗನಾಥನಿಂದ ತೊಡಗಿ ನಿರರ್ಗಳವಾಗಿ ಹರಿದು ಬರುವ ಆಚಾರ್ಯ ಪರಂಪರೆಯಲ್ಲಿ ಕೌಸ್ತುಭ ಮಣಿಯಂತೆ ಮಿನುಗುತ್ತಿದ್ದಾರೆ ನಮ್ಮ ಆಚಾರ್ಯರು. ತನ್ನಲ್ಲಿ ಜ್ಞಾನಾರ್ಜನೆಗಾಗಿ ಶರಣಾದವರಿಗೆ ಪ್ರಪತ್ತಿಮಾರ್ಗವನ್ನು ತೋರಿ ಸದ್ಗತಿಯತ್ತ ನಡೆಸುವ ಕಲ್ಪವೃಕ್ಷರಾದ ನಮ್ಮ ಸ್ವಾಮಿ ದೇಶಿಕರ ಅಡಿದಾವರೆಗಳಲ್ಲಿ ವೈದಾಂತಸೂರಿ ಚರಣೌ ಶರಣಂ ಪ್ರಪದ್ಯೇ ಅಂಬ ಸೂಕ್ತಿಯಂತೆ ನಮ್ಮ ಆತ್ಮಭರವನ್ನು ನಾವು ಅವರ ಥಿರುವಡಿಗಳಲ್ಲಿ ಸಮರ್ಪಿಸುವೆವು.

ಈ ಪದ್ಯದ ವೈಶಿಷ್ಟ್ಯವೇನೆಂದರೆ ಇದು ಗರ್ಭ ಪದ್ಯದ ಶೈಲಿಯಲ್ಲಿ ರಚಿಸಲ್ಪಟ್ಟಿದೆ. ಈ ಪದ್ಯದಲ್ಲಿ ಸ್ವಾಮಿ ದೇಶಿಕರನ್ನು ಕುರಿತು ಅವರ ಜ್ಞಾನ ಪುತ್ರರಾದ ಶ್ರೀಮಾನ್ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು ತಮ್ಮ ಆಚಾರ್ಯರಾದ ಸ್ವಾಮಿ ದೇಶಿಕರ ಸನ್ನಿಧಿಯಲ್ಲಿ ಭಗವದ್ವಿಷಯವನ್ನು ಅಧಿಕರಿಸಿಕೊಳ್ಳುವ ಮೊದಲು ರಚಿಸಿದ ತನಿಯನ್ ಶ್ಲೋಕವು ಗರ್ಭಿತವಾಗಿದೆ. ಪದ್ಯದಲ್ಲಿ ಸೂಚಿಸಿರುವ ರೀತಿಯಲ್ಲಿ ಅಕ್ಷರಗಳನ್ನು ಕೂಡಿಸಿಕೊಂಡು ಓದಿದಾಗ ಕೆಳಕಂಡ ಈ ತನಿಯನ್ ಶ್ಲೋಕವನ್ನು ನಾವು ಕಾಣಬಹುದು.

ರಾಮಾನುಜದಯಾಪಾತ್ರಂ ಜ್ಞಾನವೈರಾಗ್ಯಭೂಷಣಂ ।
ಶ್ರೀಮದ್ವೇಂಕಟನಾಥಾರ್ಯಂ ವಂದೇ ವೇದಾಂತದೇಶಿಕಂ ॥

ಮಲೆಯಿಳಿದು ಬಂದನಿವ ಕವಿಗಂಡ ತಾರ್ಕಿಕಸಿಂಹಾಸನಾಧೀಶನಿವನು
ಯತೀಶ್ವರನ ಕಲ್ಯಾಣಗುಣ ಸಾಗರದಿ ಮಿಂದೆದ್ದ ಶಾಸಕನಿವನು
ಕಲಿದೋಷವಾ ಕಬಳಿಸಿದ ಶಠರಿಪು ಸ್ತುತಿಪ್ರಿಯನಿವನೇ
ಶ್ರೀಮಂತನಿವ ಜ್ಞಾನದೋಳ್ ಜಿತೇಂದ್ರಿಯನಿವ ವೈರಾಗ್ಯದೋಳ್
ವೇಂಕಟೇಶಾತ್ಮಜನಿವ ಯತೀಶ್ವರಕುಲದ ವೇದಾಂತಗುರವರ್ಯನಿವನು
ವೇದಾಂತವೇದ್ಯನಿವಪಾದದಿ ಬೇಡುವೆವು ನಾವೆಲ್ಲ ನಮ: ನಮ: ಎಂದು ..೫..

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀನಿವಾಸನ ದಿವ್ಯಾಜ್ಞೆಯಂತೆ ತಿರುಮಲೆಯಿಂದಿಳಿದು ಅನಂತಸೂರಿ ದಂಪತಿಗಳಿಗೆ ಪುತ್ರರಾಗಿ ಅವತರಿಸಿದ ನಮ್ಮ ದೇಶಿಕರು ಕವಿಗಳಲ್ಲಿಯೂ ತಾರ್ಕಿಕರಲ್ಲಿಯೂ ಸಿಂಹರಾಗಿ, ಉಭಯವೇದಾಂತಸಿಂಹಾಸನಾಧಿಪತಿಯಾಗಿ ಬೆಳಗಿದರು.

ವಿಷ್ವಗ್-ವ್ಯಾಪಿನ್ಯಗಾಧೇ ಯತಿ-ನೃಪತಿ-ಯಶ: ಸಂಪದೇಕಾರ್ಣವೇಸ್ಮಿನ್
ಶ್ರದ್ಧಾ-ಶುದ್ಧಾವಗಾಹ್ಯೈ: ಶುಭಮತಿವಿರಸೌ ವೇಂಕಟೇಶೋ-ಅಭಿಶಿಕ್ತ: ।

ಪ್ರಜ್ಞಾ್ಯದೌರ್ಜನ್ಯಗರ್ಜತ್-ಪ್ರತಿಕಥಕ-ವಚಸ್ಥೂಲವಾತೂಲ-ವೃತ್ಯಾ್ಯ
ಸಪ್ತತ್ಯಾ ಸಾರವತ್ಯಾ ಸಮತನುತ ಸತಾಮ್ ಪ್ರೀತಿಮೇತಾಮ್ ಸಮೇತಾಮ್ ॥

ಎಂಬ ಯತಿರಾಜ ಸಪ್ತತಿಯ ಸೂಕ್ತಿಯಂತೆ ಯತಿಸಾರ್ವಭೌಮರಾದ ರಾಮಾನುಜರ ಕಲ್ಯಾಣಗುಣ ಸಾಗರದ ಜಲದಿಂದ ಪಟ್ಟಾಭಿಶಿಕ್ತರಾದ ಆಚಾರ್ಯರಿವರು. ಸ್ವಾಮಿ ನಮ್ಮಾಳ್ವಾರರು ರಚಿಸಿದ ದಿವ್ಯ ಪ್ರಬಂಧಗಳಿಗೆ ದ್ರವಿಡೋಪನಿಷತ್ ಎಂಬ ನಾಮಾಂಕಿತವನ್ನಿತ್ತು ಅದಕ್ಕೆ ದ್ರವಿಡೋಪನಿಷತ್ ತಾತ್ಪರ್ಯರತ್ನಾವಳೀ ಹಾಗು ದ್ರವಿಡೋಪನಿಷತ್ಸಾರಂ ಎಂಬ ಸಂಸ್ಕೃತ ವ್ಯಾಖ್ಯಾನಗಳನ್ನು ರಚಿಸಿ ಪ್ರಪನ್ನ ಜನ ಸಂತಾನ ಕೂಠಸ್ಥರಾದ ನಮ್ಮಾಳ್ವಾರರಿಗೆ ಅಂಜಲಿ ಸಲ್ಲಿಸಿದರು. ಜ್ಞಾನವೈರಾಗ್ಯಗಳಲ್ಲಿ ಅತ್ಯತಿಶಯ ಶ್ರೀಮಂತರಾಗಿದ್ದು ಪಂಚಕಾಲಪರಾಯಣರಾಗಿ ಪರಮನಿಂದಲೇ ವೇದಾಂತಾಚಾರ್ಯನೆಂದು ಬಿರುದಾಂಕಿತರಾದ ವೇಂಕಟನಾಥಾರ್ಯರ ಪಾದಕಮಲಗಳಲ್ಲಿ ಆತ್ಮ ನಿಕ್ಷೇಪವನ್ನು ಅನುಷ್ಠಿಸಿ ಶ್ರೀಮಾನ್ ವೇಂಕಟನಾಥಾರ್ಯ: ಚಿರಂ ವಿಜಯತಾಂ ಭುವಿ ಎಂದು ಆಶಿಸುವೆವು.

ಈ ಪದ್ಯದ ವೈಶಿಷ್ಟ್ಯವೇನೆಂದರೆ ಇದು ಗರ್ಭ ಪದ್ಯದ ಶೈಲಿಯಲ್ಲಿ ರಚಿಸಲ್ಪಟ್ಟಿದೆ. ಈ ಪದ್ಯದಲ್ಲಿ ಸ್ವಾಮಿ ದೇಶಿಕರನ್ನು ಕುರಿತು ಅವರ ಔರಸ ಪುತ್ರರಾದ ಶ್ರೀಮಾನ್ ವರದನಾಥ ನಯನಾರಾಚಾರ್ಯರು ತಮ್ಮ ಆಚಾರ್ಯರಾದ ಸ್ವಾಮಿ ದೇಶಿಕರ ವಿಷಯವಾಗಿ ರಚಿಸಿದ ಒಚಿದು ತನಿಯನ್ ಶ್ಲೋಕವು ಗರ್ಭಿತವಾಗಿದೆ. ಪದ್ಯದಲ್ಲಿ ಸೂಚಿಸಿರುವ ರೀತಿಯಲ್ಲಿ ಅಕ್ಷರಗಳನ್ನು ಕೂಡಿಸಿಕೊಂಡು ಓದಿದಾಗ ಕೆಳಕಂಡ ಈ ತನಿಯನ್ ಶ್ಲೋಕವನ್ನು ನಾವು ಕಾಣಬಹುದು.

ಶ್ರೀಮದಭಿನವರಾಮಾನುಜ ಸಂಯಮೀಂದ್ರ ಪರಕಾಲ ಆಚಾರ್ಯರ ಶ್ರೀ ಚರಣಗಳಲ್ಲಿ ಭರಸಮರ್ಪಣವನ್ನು ಅನುಷ್ಠಿಸಿ ಪಂಚಸಂಸ್ಕಾರ ಮತ್ತು ಮಂತ್ರೋಪದೇಶಗಳನ್ನು ಪಡೆದ ಈ ಜೀವವು ಅತ್ಯಂತ ಕೃತಾರ್ಥವಾಗಿದೆ. ಜ್ಞಾನದಲ್ಲಿ ಅತ್ಯಂತ ಕ್ಷುದ್ರವಾಗಿದ್ದರೂ, ಆಚಾರ್ಯರ ವೈಭವವನ್ನು ಅಕ್ಷರಗಳಲ್ಲಿ ಚಿತ್ರಿಸುವ ಶಕ್ತಿಯನ್ನು ಕರುಣಿಸಿದ ತನ್ನ ಆಚಾರ್ಯರ ಚರಣಪಾದುಕೆಗಳಲ್ಲಿ ಧನ್ಯತೆಯನ್ನು ಸೂಚಿಸುತ್ತ ಈ ಅಕ್ಷರ ಮಾಲೆಯನ್ನು ಅವರ ಜನ್ಮಶತಮಾನೋತ್ಸವದಂದು ಅವರ ಶ್ರೀ ಚರಣಗಳಲ್ಲಿ ಅರ್ಪಿಸಿ ಸ್ವಾಮಿ ದೇಶಿಕರ ಹಾಗು ಆಚಾರ್ಯ ಪರಂಪರೆಯ ಸ್ಮರಣೆಯೊಂದಿಗೆ ಅಂಜಲಿಬದ್ಧವಾಗಿ ಉಪಸಂಹರಿಸಿಕೊಳ್ಳುತ್ತಿದ್ದೇನೆ.

ಕವಿತಾರ್ಕಿಕಸಿಂಹಾಯ ಕಲ್ಯಾಣ ಗುಣ ಶಾಲಿನೇ ।
ಶ್ರೀಮತೇ ವೇಂಕಟೇಶಾಯ ವೇದಾಂತಗುರವೇ ನಮ: ॥

काव्येषु कोमलधियो वयमेव नान्ये तर्केषु कर्कषधियो वयमेव नान्ये

तत्त्वेषु निश्चितधियो वयमेव नान्ये कृष्णे निश्चितधियो वयमेव नान्ये

- Swamy Deshika

असिना तत्त्वमसिना परजीव प्रभेदिना। विद्यारण्यमहारण्यं अक्षोभ्यमुनिरच्छिनत्॥

- Swamy Deshika's verdict as judge in a debate between Vidyaranya and Akshobhyamuni.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಾ ಕಂಡ ಯತಿಯಾತ್ರೆ

ಶ್ರೀಮಾನ್ ಉ. ವೇ ಕಂದಾಡೈ ತೋಳಪ್ಪರ್ ವೆಂಬಾರ್ ಚಿಟ್ಟಂಪಲ್ಲಿ ಪ್ರೋ. ಗೋವಿಂದಾಚಾರ್ಯ
ಬೆಂಗಳೂರು

ತೇವು ಮಟ್ರರಿಯೇನ್ – ಗುರುದೇವರನ್ನು ಬಿಟ್ಟು ಬೇರಾವದ್ಯೈವವನ್ನು ನಾ ಕಾಣೆ ಎಂದು ಮಧುರಕವಿ ಆಳ್ವಾರರು ತಮ್ಮ ಗುರುವಾದ ನಮ್ಮಾಳವಾರರನ್ನು ಕೊಂಡಾಡಿ ಆಚಾರ್ಯ ನಿಷ್ಠೆಯ ಗರಿಷ್ಟತೆಯನ್ನು ಮನಮಟ್ಟುವಂತೆ ಪ್ರಚಾರ ಮಾಡಿರುತ್ತಾರೆ. ಸ್ವೇಚ್ಛೆಯಾಗಿ ದಿವ್ಯದೇಶಗಳನ್ನು ಸಂದರ್ಶಿಸಿ ಅಥವ ಉತ್ಸವ ಮೂರ್ತಿಯನ್ನು ಮನೆಗೆ ಕರೆಸಿ ದೊಡ್ಡ ಹಬ್ಬದಂತೆ ಆಚರಿಸಿ ಪುಣ್ಯವನ್ನು ಸಂಪಾದಿಸಬಹುದು. ಆದರೆ ಯತಿವರ್ಯರೊಂದಿಗೆ ಯಾತ್ರಾ ಕೈಂಕರ್ಯವನ್ನು ಮಾಡುವುದು ಎಲ್ಲಕಿಂತಲೂ ಮಿಗಿಲಾದ ಸೇವೆ. ಇದು ಪುರುಷಾರ್ಥವೇ ಸರಿ. ಈ ನಿಟ್ಟಿನಲ್ಲಿ ನಾನು ತುಂಬಾ ಭಾಗ್ಯಶಾಲಿ. ನನ್ನ ಆಚಾರ್ಯ ಶ್ರೀಮಧಭಿನವ ರಾಮಾನುಜರೊಂದಿಗೆ ೧೯೮೪ ರಿಂದ ೧೯೯೦ ರ ವರೆಗೂ ಹಾಗು ಅಭಿನವ ವಾಗೀಶ ಸ್ವಾಮಿಗಳೊಂದಿಗೆ ೧೯೯೨ ರಿಂದಲೂ ಇಲ್ಲಿಯವರೆಗೆ ದಕ್ಷಿಣ ಭಾರತದ ಪ್ರಮುಖ ದಿವ್ಯಕ್ಷೇತ್ರಗಳು, ನಗರ, ಊರು ಗ್ರಾಮಗಳ ಯಾತ್ರೆಯಲ್ಲಿ ಪಾಲ್ಗೊಂಡಿದ್ದೇನೆ.

ಅದೊಂದು ಸುಂದರ ಸಂಜೆ. ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ಕನಕದಾಸ ಜಯಂತಿ ಪ್ರಯುಕ್ತ ಶ್ರೀಮಧಭಿನವ ರಾಮಾನುಜರು ಅಧ್ಯಕ್ಷತೆ ವಹಿಸಿದ್ದರು. ಹಿತವಚನಗಳೊಂದಿಗೆ ಸಮಾರಂಭ ಮುಗಿದು ಸ್ವಾಮಿಗಳು ವಾಪಸಾಗುತ್ತಿದ್ದಾಗ ಭಕ್ತನೊಬ್ಬ ಧೀರ್ಘಪ್ರಣಾಮಗಳೊಂದಿಗೆ ಸ್ವಾಮಿಗಳ ಪಾದಗಳನ್ನು ಸ್ಪರ್ಶಿಸಿಬಿಟ್ಟ. ಅಲ್ಲೇ ಬೆಳ್ಳಿ ತಡಿಹಿಡಿದಿದ್ದನಾನು ಅದರಿಂದ ಅವನ ಕೈಗಳನ್ನು ದೂರಸರಿಸಿ ಸ್ವಲ್ಪ ಗದರಿದೆ. ತಕ್ಷಣ ಸ್ವಾಮಿಗಳು ' ಬಿಡಪ್ಪಾ ಅವನದೇನು ತಪ್ಪಿಲ್ಲ. ಅವನು ಭಾಗ್ಯವಂತ ನಿನಗಿದಯೇ ಆ ಭಾಗ್ಯ' ಎಂದುಬಿಟ್ಟರು. ಚಿತ್ರಕೂಟದಲ್ಲಿ ಯಾತ್ರೆಬಗ್ಗೆ ಸ್ವಾಮಿಗಳು ಮಾತಾಡುತ್ತಾ ಮಧ್ಯೆ 'ನೋಡ್ರಪ್ಪಾ ಜನಸಹಾಯ ಇಲ್ಲ, ಕೈಂಕರ್ಯಕ್ಕೆ ಮನುಷ್ಯರೇ ಇಲ್ಲ ನೀವೆಲ್ಲಾ ಸಹಾಯ ಮಾಡಬೇಕು' ಎಂದು ನಿಯಮಿಸಿದರು. ಆದೇನೆ ಕಷ್ಟ ಬರಲಿ ಎದುರಿಸಲು ಸಿದ್ಧನಾಗಿ ಯಾತ್ರಾಕೈಂಕರ್ಯ ಮಾಡಲು ನಿರ್ಧರಿಸಿದೆ.

ಈ ದಿವ್ಯಯಾತ್ರೆಗಳನ್ನು ದೂರದ ಆಧಾರದಿಂದ ಮೂರು ಅಥವ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು –

ಅ) ತಿರುಪತಿ, ಶ್ರೀರಂಗಾದಿ ದಕ್ಷಿಣ ದಿವ್ಯದೇಶಗಳು
ಆ) ಅಹ್ಮದಾಬಾದ್, ಬೊಂಬಾಯಿ, ಹೈದರಾಬಾದ್, ಬರೋಡ ಇತ್ಯಾದಿ
ಇ) ಚೆನ್ನೈ ಕಂಚಿ, ಪಾಂಡಿಚೇರಿ, ತಿರುವಹೀಂದ್ರಪುರ
ಈ) ಹಳೆ ಮೈಸೂರು ಪ್ರಾಂತ್ಯ ಹಾಗು ಇತರಸ್ಥಳಗಳು.

ತುಂಬಾ ದೂರದ ಯಾತ್ರೆ ಎಂದರೆ ಸಮಸ್ಯೆಗಳ ಗೋಜಲನ್ನು ಬಿಡಿಸಿಕೊಂಡೇ ಹೋಗುವ ಯಾತ್ರೆ ಎಂದರ್ಥ. ಶ್ರೀ ಮಠದ ತ್ರಿಕಾಲ ಪೂಜಾವಿಧಿಯಲ್ಲಿ ಅಭಿಗಮನ ಹಾಗು ಸಾಯಂಕಾಲದ ಪೂಜೆ ಆಗಲೇಬೇಕಾದ್ದು.

ಹೈದರಾಬಾದ್ ಯಾತ್ರೆಯಲ್ಲಿ ಸಾಮಾನ್ಯವಾಗಿ ಅನಂತಪುರದಲ್ಲಿ ಪ್ರಥಮ ನಿಲುಗಡೆ, ಕರ್ನೂಲ್ ನಗರದಲ್ಲಿ ಎರಡನೆ ಮೊಕ್ಕಾಂ ವ್ಯವಸ್ಥೆ ಇರುವುದು. ಯಾತ್ರಾ ಸಾಫಲ್ಯಕ್ಕಾಗಿ ಕೃಷ್ಣಾನದಿ ದಂಡೆಯಲ್ಲಿರುವ ಆಂಜನೇಯನನ್ನೂ, ಪಾಂಡಿಚೇರಿಯಿಂದ ವಾಪಸಾಗುವಾಗ ಪಂಚಮುಖಿ ಆಂಜನೇಯನನ್ನು ಸಂದರ್ಶಿಸುವುದು ಅಭಿನವವಾಗೀಶರ ಅಭೀಚ್ಛೆಯಾಗಿದೆ.

ಮುಂಬೈಪ್ರವಾಸದಲ್ಲಿ ದಾವಣಗೆರೆ, ಧಾರವಾಡ, ಬೆಳಗಾಂ, ಅಥವ ರಾಯಚೂರ್, ಗುಲ್ಬರ್ಗ, ಪೂನಾದ್ವಾರ ದೊಂಬಿವಿಲಿಯ ಬಾಲಾಜಿಮಂದಿರವನ್ನು ತಲಪುವುದು ವಾಡಿಕೆ.

೨೦೦೭ ರಲ್ಲಿ ಪಾವಗಡದ ಸಮೀಪದ ಕೃಷ್ಣಾಪುರದ ಶ್ರೀನಿವಾಸಮೂರ್ತಿಯ ಪ್ರತಿಷ್ಠಾಪನೆ ಮಹೋತ್ಸವದಲ್ಲಿ ಅನಿವಾರ್ಯತೆಯಿಂದ ವಾಗೀಶರ ಆದೇಶದ ಮೇರೆಗೆ ಬೆಳಗಿನ ಜಾವವೇ ಬೆಂಗಳೂರನ್ನು ನಿರ್ಗಮಿಸಿ ಮಧುಗಿರಿಯ ಶ್ರೀನಿವಾಸಕ್ಷೇತ್ರದಲ್ಲಿ ಅಭಿಗಮನ ಆರಾಧನೆಯನ್ನು ಮುಗಿಸಿ ಮುಂದುವರೆದೆವು.

ತುಂಬಾತುರ್ತು ಪರಿಸ್ಥಿತಿಯಲ್ಲಿ ಇಡೀರಾತ್ರಿ ಪ್ರಯಾಣ ಮಾಡಿದ್ದ ಎರಡು ಘಟನೆಗಳು ಇಂತಿವೆ –

೧) ಸೇತುಸ್ನಾನ ಕಾರ್ಯಕ್ರಮದ ನಂತರ ಮಧುರೈ ಭಕ್ತರೊಬ್ಬರಮನೆಯಲ್ಲಿ ಡೋಲೋತ್ಸವವನ್ನು ಮಾಡಿ ಮಾರನೆದಿನ ಮೈಸೂರಿಗೆ ಪ್ರಯಾಣ ಮಾಡಲು ನಿರ್ಧರಿಸಲಾಗಿತ್ತು. ತಿರುಪ್ಪಲ್ಲಾಣಿ ಕ್ಷೇತ್ರವನ್ನು ನಿರ್ಗಮಿಸಿ ಮಧುರೈನಗರ ಸಮೀಪಿಸುತ್ತಿರುವಾಗಲೇ ಸೇವಾರ್ಥಕರಿಂದ ಅನಾನುಕೂಲದ ಮೊಬೈಲ್ ಸುದ್ದಿತಿಳಿಯಿತು. ಬೇರಾವವ್ಯವಸ್ಥೆಯನ್ನು ಮಾಡಿರಲಿಲ್ಲ. ಸುಮಾರು ಸಂಜೆ ೬.೩೦ ಕ್ಕೆ ಮಧುರೈಯನ್ನು ನಿರ್ಗಮಿಸಿ ಮೈಸೂರುನಗರ ತಲುಪಿದಾಗ ಬೆಳಗಿನ ಜಾವ ೪.೩೦.

೨) ೨೨೦೬ ಜನವರಿ, ಫೆಬ್ರವರಿ – ನಂದ್ಯಾಲವನ್ನು ಸಂಜೆ ೬.೩೦ ಕ್ಕೆ ನಿರ್ಗಮಿಸಿ ಬೆಂಗಳೂರನ್ನು ಬೆಳಗ್ಗೆ ತಲುಪಿದೆವು. ೨೦೧೦ ರ ಹೈದರಾಬಾದ್ ಯಾತ್ರೆಯಿಂದ ವಾಪಸಾಗುವಾಗ ಮೆಹಬೂಬ್ ನಗರ ಒಂದುದಿನ ವಿದ್ದು ಮಾರನೆದಿನ ಮಧ್ಯಾಹ್ನ ಹೊರಡಲು ನಿರ್ಧರಿಸಲಾಗಿತ್ತು. ಸಂಜೆ ಎರಡು ಕಡೆಗಳಲ್ಲಿ ಡೋಲೋತ್ಸವಗಳನ್ನು ಮುಗಿಸುತ್ತಿರುವಾಗಲೇ ಅನಿವಾರ್ಯವಾಗಿ ರಾತ್ರಿಯೇ ಹೊರಡಲು ತುರ್ತುನಿರ್ಧಾರವನ್ನು ಕೈಗೊಳ್ಳಲಾಯಿತು.

ವಾಹನಗಳಲ್ಲಿ ತಾಂತ್ರಿಕ ತೊಂದರೆಯಿಂದುಂಟಾಗುವ ವಿಳಂಬವನ್ನು ಸಹಿಸಿಕೊಳ್ಳಬೇಕು. ಶ್ರೀಮಧಭಿನವ ರಾಮಾನುಜರ ೧೯೮೫ ರ ಕಂಚಿಯಾತ್ರೆಯಲ್ಲಿ ತಿರುವಹೀಂದ್ರಪುರ ಮತ್ತು ಈರೋಡಿನ ಕಲಾಪಗಳನ್ನು ಮುಗಿಸಿಕೊಂಡು ಸತ್ಯಮಂಗಲದ್ವಾರ ಮೈಸೂರನ್ನು ಸೇರಲು ನಿರ್ಧರಿಸಲಾಗಿತ್ತು. ಶ್ರೀ ಮಠದ 'ಡಾಡ್ಜ' ಕಾರು ಸತ್ಯಮಂಗಲದ ಏರು ಮಾರ್ಗದ ತೀವ್ರ ತಿರುವುಗಳನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಹತ್ತಿಹಾದು ಹೋಗಲಾಗಲಿಲ್ಲ ತಕ್ಷಣ ಒಬ್ಬನುರಿತ ವೃತ್ತಿಪರ ಚಾಲಕನನ್ನು ಗೊತ್ತುಮಾಡಿ ಅವನು ಕಾರನ್ನು ಎಡಕ್ಕುಬಲಕ್ಕು ಉಯ್ಯಾಲೆಯಂತೆ ಚಲಿಸಿಕೊಂಡು ಆ ಏರು ಮಾರ್ಗವನ್ನು ದಾಟಿ ಎಲ್ಲರನ್ನು ಚಾಮರಾಜನಗರದವರೆಗೆ ಸುರಕ್ಷಿತವಾಗಿ ಸೇರಿಸಿದ.

ಸಮಿತಿರಚನೆ – ಬೊಂಬಾಯಿ, ಹೈದರಾಬಾದ್ ಹಾಗು ಚನ್ನೈ ಯಾತ್ರೆಗಳಲ್ಲಿ ಕಾರ್ಯಕಾರಿ ಸಮಿತಿ ಇರುವುದು. ಮಠ ಹಾಗು ಆಶ್ರಮಗಳ ಪ್ರಮುಖ ಶಿಷ್ಯರು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಸಮಿತಿಯ ಕಾರ್ಯಾಚರಣೆ ಈ ಕೆಳಕಂಡಂತೆ ವ್ಯಾಪಕವಾಗಿದೆ:

ಅ) ಸ್ವಾಮಿಗಳ ಆಗಮನಕ್ಕಾಗಿ ಸ್ವಾಗತ ಸಮಿತಿಯ ರಚನೆ.
ಆ) ಸ್ವಾಮಿಗಳ ಹಾಗು ಪರಿವಾರದವರ ಯೋಗಕ್ಷೇಮ ವಸತಿ ಪೂರ್ಯೆಕೆಗಳು
ಇ) ಆರಾಧನೆಗಾಗಿ ನಿತ್ಯ ಪೂರ್ಯೆಕೆಗಳು.
ಈ) ಡೋಲೋತ್ಸವಗಳ ಏರ್ಪಾಡು.
ಉ) ಸತ್ಸಂಪ್ರದಾಯಗಳಲ್ಲಿ ತೊಡಗಿರುವುದು – ಸಮಾಶ್ರಯಣ, ಭರನ್ಯಾಸ, ಉಪದೇಶ – ದಿವ್ಯದೇಶಮಂಗಳಾಶಾಸನ – ಸರ್ವಧರ್ಮಸಮ್ಮೇಳನ, ಉಪನ್ಯಾಸಮಾಲೆ – ಹೋಮಹವನಗಳಮೂಲಕ ಹೆಚ್ಚುಹೆಚ್ಚು ಭಕ್ತಸಮೂಹವನ್ನು ಆಕರ್ಷಿಸುವುದು ಇತ್ಯಾದಿ.

ಈ ಹಿನ್ನೆಲೆಯೊಂದಿಗೆ ಇಬ್ಬರು ಮಹಾನ್ ಯತಿಗಳೊಂದಿಗೆ ಕೈಗೊಂಡ ಯಾತ್ರಾಕೈಂಕರ್ಯಗಳನ್ನು ಇವುಗಳಲ್ಲಿ ಕಂಡುಬರುವ ಘಟನಾವಳಿಯನ್ನು ಹೇಳಬಯಸುವೆನು.

ಈ ಯಾತ್ರೆಗಳು ಸಿಬ್ಬಂದಿಕೊರತೆಯ ಸಮಸ್ಯೆಯೊಂದಿಗೆ ಆರಂಭಗೊಂಡಿದ್ದು ಆಹಿತಕರ ಸಂಗತಿಯೇ ಸರಿ. ಕೇವಲ ಒಂದು ಆರು ಏಳು ಕೈಂಕರ್ಯಪರರೊಂದಿಗೆ ಅಭಿನವರಾಮಾನುಜರು ಹಯಗ್ರೀವ ಪ್ರತಿಷ್ಠಾಪನೆ ಗಾಗಿ ೧೯೮೪ ರಲ್ಲಿ ಮೆಹಬೂಬ್ ನಗರಕ್ಕೆ ತೆರಳಿದರು. ಬೆಂಗಳೂರನ್ನು ಬಿಟ್ಟಾಗ ಮಧ್ಯಾಹ್ನ ೨ ಗಂಟೆ. ಹಿಂದೂಪುರದಲ್ಲಿ ಒಂದರ್ಧಗಂಟೆ ಕಾಲ ಭಕ್ತರನ್ನು ಅನುಗ್ರಹಿಸಿ ಧರ್ಮಾವರಂಗೆ ತೆರಳಿದರು. ವೈಶ್ಯಸಮುದಾಯವು ಅದ್ಧೂರಿ ಸ್ವಾಗತವನ್ನು ನೀಡಿತು. ಮಾರನೆಯದಿನ ಮಧ್ಯಾಹ್ನ ೧ ಗಂಟೆಗೆ ಹಯಗ್ರೀವಮಂದಿರದಿಂದ ಹೊರಟರು. ಕರ್ನೂಲ್ ನಗರಕ್ಕೆ ಹೋಗುವ ಹೆದ್ದಾರಿಯ ಮಧ್ಯೆ ಬಿಸಿಲಿನ ತಾಪವನ್ನು ತಾಳಲಾರದೆ ಸ್ವಾಮಿಗಳು ಮರದ ನೆರಳಿನಲ್ಲಿ ಒಂದರ್ಧ ಗಂಟೆಗಳ ಕಾಲ ವಿಶ್ರಮಿಸಿಕೊಂಡು ಮುಂದುವರೆದು ಕರ್ನೂಲ್ ತಲುಪುವ ವೇಳೆಗೆ ರಾತ್ರಿ ೮ ಗಂಟೆಯಾಗಿತ್ತು ಪೋಲಿಸ್ ಭದ್ರತಾವ್ಯವಸ್ಥೆಯನ್ನು ಗಮನಿಸಿದ ಸ್ವಾಮಿಗಳು ನನ್ನನ್ನು ನೋಡಿ 'ನೀನು ಬೆಂಗಳೂರಿನಲ್ಲಿ ಪೋಲಿಸ್ ಮಹಾ ನಿರ್ದೇಶಕರಿಗೆ ಬರೆದ ಪತ್ರ ಚೆನ್ನಾಗಿ ಕೆಲಸ ಮಾಡಿದೆ' ಎಂದರು. ಮಾರನೆಯ ದಿನ ಬಿಸಿಲಿನ ತಾಪದೊಂದಿಗೆ ಮೆಹಬೂಬ್ ನಗರವನ್ನು ತಲುಪಿ ತಕ್ಷಣ ಶೀತಲಹವಾನಿರವಿನಿಂದ ಸ್ವಾಮಿಗಳು ಒಂದುಗಂಟೆ ಕಾಲ ವಿಶ್ರಮಿಸಿಕೊಂಡರು. ಮಾರನೆದಿನ ಹಯಗ್ರೀವಪ್ರತಿಷ್ಠಾಪನ ಕಾರ್ಯದಲ್ಲಿ ನಾನು ಭಾಗವಹಿಸಲಾಗಲಿಲ್ಲ. ಅಧಿಕೃತ ಕಾರ್ಯದ ಸಲುವಾಗಿ ಬೆಂಗಳೂರಿಗೆ ನಿರ್ಗಮಿಸಬೇಕಾಯಿತು.

ಹೀಗೆಯೇ ೨೦೦೯ ಡಿಸೆಂಬರ್ ಚಿನ್ನೈ ಮೊಕ್ಕಾಂನಲ್ಲಿ ತೀವ್ರಾ ಅನಾರೋಗ್ಯದ ಕಾರಣ ನಾನು ಬೆಂಗಳೂರಿಗೆ ನಿರ್ಗಮಿಸಿದೆ. ಕೇವಲ ಐದು ಜನ ಕೈಂಕರ್ಯ ಪರರು ಸ್ವಾಮಿಗಳೊಂದಿಗಿದ್ದರು.

<u>ಆಲಯ ಕಟ್ಟಳೆಗಳು</u>

೧. ಕಂಚಿಗೆ ಮೈಸೂರು ಪರಕಾಲಯತಿಗಳು ಬಂದಾಗ ಆಲಯದ ಮುಂದಿರುವ ಮಂಟಪದಿಂದ ಶ್ರೀಶಠಾರಿ ಎದುರುಗೊಂಡು ಆಹ್ವಾನಿಸಬೇಕು, ಯತಿಗಳಿಗೆ ಆರುಳಪ್ಪಾಡ್ ಪರಾಕ್ ಹೇಳುವುದು ಆಲಯ ಕೈಂಕರ್ಯದವರಲ್ಲಿ ಒಬ್ಬರ ಹಕ್ಕಾಗಿರುವುದು.

೨. ಪ್ರತಿಮೂರು ವರ್ಷಕ್ಕೊಮ್ಮೆ ಈ ಪ್ರಥಮ ದರ್ಜೆ ಮರ್ಯಾದೆ ಇರುವುದು.

೩. ತಿರುಪತಿಯ ಯಾವುದೇ ಸನ್ನಿಧಿಯಲ್ಲಾಗಲಿ ಆರುಳಪ್ಪಾಡ್ ಪರಾಕ್ ಹೇಳುವಂತಿಲ್ಲ.

೪. ತಿರುವಳ್ಳೂರಿನಲ್ಲಿ ಕೂಡ ಪರಾಕ್ ಹೇಳುವರು ಆಲಯದವರೆಗೆ 'ಮಹಾದೇಶಿಕ' ಎಂಬ ದಿವ್ಯ ನಾಮದ ಬದಲು 'ಮಹಾಗುರು' ಎಂದು ಹೇಳುವರು.

೫. ತಿರುವಹೀಂದ್ರಪುರದಲ್ಲಿ ದೇಶಿಕರ ತಿರುಮಾಳಿಹೈ ಸಮೀಪವೇ ಪರಕಾಲ ಸ್ವಾಮಿಗಳನ್ನು ಶ್ರೀಶಠಾರಿ ಉಭಯ ವೇದಗೋಷ್ಟಿಯೊಂದಿಗೆ ಸ್ವಾಗತಿಸಬೇಕು.

ಅಭಿನವ ರಾಮಾನುಜರ ಪ್ರವಾಸಕ್ಕೂ ಹಿಂದಿನ ಪರಕಾಲಸ್ವಾಮಿಗಳ ಯಾತ್ರೆಗೂ ಸುಮಾರು ೬೦ ವರ್ಷಗಳ ಅಂತರವಿದೆ ಎಂದು ಸ್ಥಳೀಯ ಭಕ್ತರು ಹೇಳುತ್ತಿದ್ದರು. ಪಟಾಕಿ ಬಾಣ ಬಿರುಸುಗಳ ಉಡಾವಣೆಯೊಂದಿಗೆ ಭವ್ಯವಾದ ಸ್ವಾಗತ ದೊರೆಯಿತು. ಹೊಂತಗಳನ್ನು ಏರಲಾಗದ ಕಾರಣದಿಂದ ನಾನು ಮತ್ತು ಯಾತ್ರೆಕಾರ್ಯದರ್ಶಿಗಳು ಫಲಪುಷ್ಪ ವಸ್ತ್ರಗಳನ್ನು ಔಷದಾಚಲದ ಹಯಗ್ರೀವರಿಗೆ ಸಮರ್ಪಿಸಲು ಸ್ವಾಮಿಗಳು ಆದೇಶಿಸಿದರು.

ನನ್ನ ಜೀವಮಾನದಲ್ಲೇ ಪ್ರಥಮ ಬಾರಿಗೆ ಗರುಡೋತ್ಸವವನ್ನು ನೋಡಿದ ಭಾಗ್ಯ ಒದಗಿದ್ದು ನನ್ನ ಆಚಾರ್ಯ ಅಭಿನವರಾಮಾನುಜರ ೧೯೮೫ ರ ಕಂಚಿಯಾತ್ರೆಯಲ್ಲಿ. 'ನಿನ್ನ ಕೈಯಿಂದ ಭಾಗವತ ಸಂಭಾವನೆಯನ್ನು ಕೊಡಿಸಲು ನಿಶ್ಚಯಿಸಿದ್ದೇನೆ' ಎಂದು ಸ್ವಾಮಿ ನನಗೆ ಹೇಳಿದ್ದರು. ಪ್ರಯಾಣ ಅಲಸೂರಿನ ಭಕ್ತರೊಬ್ಬರೆ ಮನೆಯಿಂದ ಆರಂಭಗೊಂಡು ಸಂಜೆ ೭ ಗಂಟೆಗೆ ತಿರುಪತ್ತೂರಿನ ಶಂಕರ ಮಠವನ್ನು ಸೇರಿ ಸಾಯಂಕಾಲದ ಪೂಜಾ ಕಲಾಪಗಳು ಜರುಗಿದವು. ಮಾರನೆಯದಿನ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮದ್ಯಾಹ್ನ ಪ್ರಯಾಣ ಮುಂದುವರೆದು ಕಂಚಿಯ ತೂಪ್ಪಿಲ್‌ನಲ್ಲಿ ಭವ್ಯಸ್ವಾಗತ ದೊರೆಯಿತು. ಅಭಿನವ ದೇಶಿಕರೆಂದು ಖ್ಯಾತಿಹೊಂದಿದ ದಾಶರಥಿಮಾಮರವರೊಂದಿಗೆ ಸ್ವಾಮಿಗಳು ಬಹಳಹೊತ್ತು ಮಾತನಾಡುತ್ತಿದ್ದರು. ದೊಚ್ಚುಶಿತ್ಯ ಶ್ರೀನಿವಾಸನ್ ತಿರುವಹೀಂದ್ರಪುರದ ಭಾಗವತರ ತಂಡ, ಹಿಂದೂಪುರ, ಧರ್ಮಾವರಂನ ವೈಶ್ಯಭಕ್ತರು ಇತರ ಗಣ್ಯರು ಬಂದು ಸೇರಿದರು.

ಪ್ರಥಮದರ್ಜೆ ಮರ್ಯಾದೆಯೊಂದಿಗೆ ಸ್ವಾಮಿಗಳು ಆಲಯವನ್ನು ಪ್ರವೇಶಿಸಿ ಪವಿತ್ರವಾದ ಗಾಯತ್ರಿಮಂತ್ರವನ್ನು ಪ್ರತಿನಿಧಿಸುವ ಹಂತಗಳನ್ನು ಹತ್ತಿಬಂದು ವರದನಸನ್ನಿಧಿಯ ಆಡಿಯಿಂದಲೇ 'ಪ್ರಭೋ' ಎಂದು ಹೇಳಿಕೊಂಡೇ ಹತ್ತಿದರು. ತಿರುವಳವಟ್ಟಂ (ಬೀಸಣಿಗೆ) ಚಾಮರಾದಿ ಸೇವೆಗಳು ನೀರಾಜನ ತೀರ್ಥ ಶಠಾರಿ ಆರುಳಪಾಡ್ ನಂತರ ಇತರ ಸನ್ನಿಧಿಗಳನ್ನು ಸಂದರ್ಶಿಸಿದರು.

ಮಾರನೆದಿನ ಬೆಳೆಗ್ಗೆ ೮ ಗಂಟೆ ವೇಳೆಗೆ ಸ್ವಾಮಿಗಳು ಪರಿವಾರದೊಂದಿಗೆ ರಾಜಗೋಪುರದ ಸಮೀಪದ ಮಂಟಪವನ್ನು ಸೇರಿದರು. ಅದೇ ಮಂಟಪಕ್ಕೆ ಜಿಲ್ಲಾಧಿಕಾರಿ, ಪೋಲೀಸ್ ಅಧಿಕಾರಿಗಳು ಇತರ ಗಣ್ಯರು ಸೇರಿದರು. ಅಲ್ಲೇ ಸ್ವಾಮಿಗಳನ್ನು ಸೇವಿಸಿ ಫಲಮಂತ್ರಾಕ್ಷತೆಯನ್ನು ಪಡೆದರು. ದೊಡ್ಡಯ್ಯಾಚಾರ್ಯರ ವಂಶಪರಂಪರೆಯಾಗಿ ಬಂದಿರುವ ಕರ್ಪೂರ ಆರತಿಸೇವೆಯ ನಂತರ ಉತ್ಸವವು ಮಹಾದ್ವಾರಗೋಪುರವನ್ನು ಬಿಟ್ಟು ಮುಂದುವರೆಯಿತು. ವೇದಗೋಷ್ಟಿಯೊಂದಿಗೆ ಸ್ವಾಮಿಗಳು ಒಂದುಸ್ವಲ್ಪದೂರ ನಡೆದು ವಾಪಸಾಗುತ್ತಿದ್ದಾಗ ಇನ್ನೊಂದು ಗೋಷ್ಟಿಯ ಭಾಗವತರೊಬ್ಬರು ಸ್ವಾಮಿಯನ್ನು ಆಹ್ವಾನಿಸಿದರು 'ನಾನು ಆಷ್ಟುದೂರ ನಡೆಯಲು ಅಶಕ್ತನಪ್ಪ, ನನ್ನ ಶಾಲಾ ಜೀವನದಲ್ಲಿ ನಾನು 'ಫುಟ್ ಬಾಲ್' ಪಟುವಾಗಿದ್ದೆ' ಎಂದು ಹೇಳಿ ಸ್ವಾಮಿ ತಕ್ಷಣ ತೂಪ್ಪುಲ್ ಗೆ ವಾಪಸಾದರು. ಗರುಡೋತ್ಸವವು ದೇಶಿಕರ ಸನ್ನಿಧಿಯನ್ನು ಸೇರಿತು ಭಾಗವತರಿಗೆ ಸಂಭಾವನೆ ಪ್ರಸಾದವಿನಿಯೋಗದ ನಂತರ ಉತ್ಸವವು ನಿರ್ಗಮಿಸಿತು. ಸ್ವಾಮಿಗಳ ಆದೇಶದಮೇರೆಗೆ ಅಂದು ಸಂಜೆ ವೈಶ್ಯ ಭಕ್ತರಿಗೆ ಕಂಚಿಯಲ್ಲಿರುವ ದಿವ್ಯಕ್ಷೇತ್ರಗಳನ್ನು ಸಂದರ್ಶಿಸುವ ಏರ್ಪಾಡನ್ನು ಮಾಡಿದೆವು. ತಿರುವಹೀಂದ್ರಪುರ ಪ್ರವಾಸ ಎರಡುದಿನಗಳವರೆಗೆ ಮೂಂದೂಡಲಾಯಿತು. ಆರಾಧನಕ್ಕಾಗಿ ಉಪಯೋಗಿಸುವ ಕೋಯಿಲ್ ಆಳ್ವಾರ್ ಸಿಂಹಾಸನ ಮಂಟಪವು ಲಾರಿಯಲ್ಲಿ ಬರುವುದು ತಡವಾಯಿತು, ತಕ್ಷಣವೇ ಶ್ರೀಕಾರ್ಯಂ ಸ್ವಾಮಿಗಳು ತಾತಾಚಾರ್ಯರ ಬೀಡಾದ ನಾವಲ್ಪಾಕಂಗೆ ಪ್ರಯಾಣ ಏರ್ಪಡಿಸಿದರು. ಅಭಿಗಮನ ಆರಾಧನೆ ಸಮಯದಲ್ಲಿ ಆಯ್ಯಾದೇವನಾಥತಾತಾಚಾರ್ಯರೊಂದಿಗೆ ಒಂದು ೩೦೦ ಭಾಗವತರು ಸೇರಿದ್ದರು. ಆ ಭಕ್ತಗೋಷ್ಟಿಯನ್ನು ನೋಡಿದ ಸ್ವಾಮಿಗಳಿಗೆ ಅತ್ಯಾನಂದ ಉಂಟಾಯಿತು ಹಯಗ್ರೀವ ಶ್ರೀನಿವಾಸ ಸನ್ನಿಧಿಯಲ್ಲಿ ಹಾಕಿದ ಘನವಾದ ಪುಷ್ಪಹಾರವನ್ನು ಸ್ವಾಮಿಗಳು ಶ್ರೀಕಾರ್ಯಂಗೆ ಹಾಕಿ 'ನೀವು ಹಾಕಿದ ಈ ಕಾರ್ಯಕ್ರಮ ಮರೆಯುವಂತಿಲ್ಲ' ಎಂದರು.

<u>ಸಂಪ್ರದಾಯ ವ್ಯಾಪ್ತಿ</u>

ಈ ಮಹಾನರುಗಳ ಯಾತ್ರೆಯಲ್ಲಿ ಶಿಷ್ಯಾರ್ಜನೆ ಗಮನಾರ್ಹ. ಅಭಿನವ ವಾಗೀಶರ ೨೦೦೮ ರಲ್ಲಿ ಕೈಗೊಂಡಿದ್ದ ಕೇರಳಾದ ಸುಲ್ತಾನ್ ಬತೇರಿ ಸಮೀಪ ಇರುವ ಒಂದು ನರಸಿಂಹ ಕ್ಷೇತ್ರದ ೨ ದಿನಗಳ ಪ್ರವಾಸದಲ್ಲಿ ಸೇರಿದದಿನವೇ ರಾತ್ರಿ ಸುಮಾರು ೮೦ ಭಕ್ತರು ಚಕ್ರಾಂಕನಕ್ಕಾಗಿ ಪ್ರಾರ್ಥಿಸಿದರು. ಮಾರನೆ ಬೆಳಿಗ್ಗೆ ಇನ್ನೊಂದು ೩೦ ಭಕ್ತರು ನೋಂದಾಯಿಸಿದರು ಸಮಾಶ್ರಯಣ ಜರುಗುತ್ತಿರುವಾಗಲೇ ಇನ್ನೊಂದು ೨೫ ಭಕ್ತರು ಸಾಲಿನಲ್ಲಿ ನಿಂತು ಒಟ್ಟು ೧೩೫ ಭಕ್ತರಿಗೆ ಶಿಷ್ಯತ್ವ ಪ್ರಾಪ್ತವಾಯಿತು. ಶ್ರೀ ಮಠದ ಇತಿಹಾಸದಲ್ಲೇ ಇದು ದಾಖಲೆಯೇಸರಿ. ಸಿಂಧುವಳ್ಳಿಗ್ರಾಮದ ಅನೇಕ ಭಕ್ತರಿಗೂ ಶಿಷ್ಯತ್ವ ಪ್ರಾಪ್ತವಾಯಿತು.

ಅಹ್ಮದಾಬಾದ್ ಪಟೇಲರ ಮನೆಯಲ್ಲಿ ೩ ದಿನಗಳ ಮೊಕ್ಕಾಂನಲ್ಲಿ ದಂಪತಿಗಳಿಗೆ ಚಕ್ರಾಂಕನ ಏರ್ಪಾಡಾಗಿತ್ತು. ಬಿಸಿಯಾದ ಬೆಳ್ಳಿ ಶಂಖ ಚಕ್ರ ಮುದ್ರೆಯನ್ನು ನೋಡೂತ್ತಿರವಾಗಲೇ ಪಟೇಲರ ದರ್ಮ ಪತ್ನಿ ಪ್ರಜ್ಞೆತಪ್ಪಿ ಬಿದ್ದರು. ಹೀಗೆಯೇ ಹೆದರಿಕೆಯಿಂದ ಪುಟ್ಟಬಾಲಕರಿಗೆ ಚಕ್ರಾಂಕನ ಪ್ರಯಾಸಕಾರ್ಯ.

ಈ ಎರಡು ಯಾತ್ರೆಗಳಲ್ಲಿ ಸುಮಾರು ಸಾವಿರ ಭಕ್ತರಿಗೆ ಪ್ರಪತ್ತಿಯೋಗ ಉಂಟಾಗಿ ಶ್ರೀಮಠದ ಶಿಷ್ಯಸಂಪತ್ತು ವೃದ್ಧಿ ಆಯಿತು. ಶ್ರೀವೈಷ್ಣವ ದಿವ್ಯದೇಶಗಳ ಮಂಗಳಾಶಾಸನಗಳು ಸಿದ್ಧಾಂತ ಪ್ರಚಾರಕ್ಕೆ ಒತ್ತುಕೊಡುವಂಥಾವು. ಅಭಿನವ ರಾಮಾನುಜರ ೧೯೭೭ರ ವೈರಮುಡಿ ಬ್ರಹ್ಮೋತ್ಸವದಲ್ಲಿ ಮೇಲುಕೋಟೆ ಕ್ಷೇತ್ರದಲ್ಲಿ ಆರುದಿನಗಳ ಮೊಕ್ಕಾಂ. ಇಲ್ಲಿನ ಕಲ್ಯಾಣೋತ್ಸವವು ಪರಂಪರೆಯಾಗಿ ಬಂದಿರುವ ಮಠದ ಕೈಂಕರ್ಯ. ಅಂದು ರಾತ್ರಿ ಭುವನೇಶ್ವರಿ ಮಂಟಪವು ಚೆನ್ನಾಗಿ ಅಲಂಕರಿಸಲಾಗಿತ್ತು. ಇದನ್ನು ನೋಡಲು ಸ್ಥಳೀಯಭಕ್ತರು, ವೈಶ್ಯ ಹಾಗು ನೂರಾರು ಮಾರವಾಡಿ ಸೇಟ್ ಭಕ್ತರು ಸೇರಿದ್ದರು.ಪುಷ್ಪಹಾರ ವಿನಿಮಯದಲ್ಲಿ ಅಭಿನವ ರಾಮಾನುಜರು ರಾಮಪ್ರಿಯನನ್ನು ನೋಡುತ್ತಾ ನೋಡುತ್ತಾ ಆನಂದ ಬಾಷ್ಪದಿಂದ 'ಗೃಹಸ್ಥನಾಗಿದ್ದಾಗ ಇಲ್ಲ, ಈಗ ಸಂನ್ಯಾಸಿ ಆದಮೇಲೆ ಈ ಸೇವೆಕೊಡುತ್ತಿದ್ದಿಯಲ್ಲಾ' ಎಂದು ಭಾವಾ ವೇಷದಿಂದ ಹೇಳಿದರು.

ಸರಿಯಾದ ಸಂಪರ್ಕಮಾಹಿತಿ ವ್ಯವಸ್ಥೆ ಇಲ್ಲದಿದ್ದರೆ ಏನು ಸಮಸ್ಯೆ ಉದ್ಭವಿಸಬಹುದು ಎಂಬುದಕ್ಕೆ ಇಲ್ಲಿ ಒಂದು ನಿದರ್ಶನ. ೧೯೮೫ ರ ಕಂಚಿ ಸಂಯುಕ್ತಯಾತ್ರೆಯಲ್ಲಿ ಕಂಚಿ ನಾವಲ್ಪಾಕಂ, ತಿರುವಹೀಂದ್ರಪುರ ಕ್ಷೇತ್ರಗಳನ್ನು ಸಂದರ್ಶಿಸಿ ವಿಲ್ಲೂಪುರಂ, ಪನ್ರೋಟಿ, ನೈವೇಲಿ (ಆಂಡವನ್ ಆಶ್ರಮ) ಗಳಲ್ಲಿ ಒಂದೊಂದುದಿನ ವಿದ್ದು ಈರೋಡಿಗೆ ಹೊರಟರು. ಈರೋಡಿಗೆ ಹೋಗುವ ಮಾರ್ಗದಲ್ಲಿ ಸಾರಿಗೆ ಸಮಸ್ಯಗಳಿಂದ ಆರಾಧಕರ ವಾಹನ ಒಂದು ಮಾರ್ಗದಲ್ಲಿ, ಸ್ವಾಮಿಗಳ ವಾಹನ ಬೇರೊಂದು ಮರ್ಗದಲ್ಲಿ ಹೊರಟಿತು.

ಈರೋಡಿನ ಶಂಕರಮಠದ ಸಂಯುಕ್ತ ದೇವಸ್ಥಾನಗಳ ವಿಳಾಸ ಕಾರ್ಯದರ್ಶಿಗಳ ಹತ್ತಿರ ವಿದ್ದುದರಿಂದ ಆರಾಧಕರ ವಾಹನ ಮುಂಚೆಯೇತಲುಪಿತು.ಸಂಪುಟ, ಡೋಲು ಪದಾರ್ಥಗಳಿದ್ದ ಸ್ವಾಮಿಗಳವಾಹನ ತುಂಬಾ ವಿಳಂಬವಾಗಿ ತಲುಪಿ ಸಾಯಂಕಾಲದ ಆರಾಧನ ಮುಗಿಯುವ ವೇಳೆಗೆ ರಾತ್ರಿ ೨.೩೦ ಆಗಿತ್ತು. ಘಂಟೆಶಬ್ದಕೇಳುತ್ತಲೇ ಸುತ್ತಲು ಇದ್ದ ಭಕ್ತರ ಮನೆಗಳಲ್ಲಿ 'ಬುಗ್'

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಎಂದು ದೀಪಬೆಳಗಿತು, ಕುತೂಹಲಭಕ್ತರಾಗಿ ಎಲ್ಲರೂ ಹೊರಬಂದು ನೋಡಿ ಕೆಲವರು ಶಠಾರಿ ತೀರ್ಥ ಸೇವನೆಗೆ ಸನ್ನಿಧಿಗೆ ಬಂದರು.

ಅಭಿನವ ವಾಗೀಶರು ಸಂನ್ಯಾಸಾಶ್ರಮ ಸ್ವೀಕರಿಸಿದ ಮೇಲೆ ೧೯೬೨ ರಲ್ಲಿ ಪ್ರಥಮ ಯಾತ್ರೆ ತೊಂಡನೂರಿಗೆ. ಅಂದು ರಥೋತ್ಸವದ ಆಶ್ಚರ್ಯವೆಂದರೆ ನಾಲ್ಕುಬೀದಿಗಳು ಸೇರುವ ಚೌಕದಲ್ಲಿ ಯಾರ ಸುಳಿವು ಇಲ್ಲದೆ ಕೇವಲ ನಂಬಿನಾರಾಯಣ ಮೂರ್ತಿ ಮಾತ್ರ ರಥದಲ್ಲಿತ್ತು. ಸ್ವಾಮಿಗಳೊಂದಿಗೆ ನಾವೆಲ್ಲಾ ಸೇವೆಮಾಡಿ ಬಂದೆವು.ಮುಂದಿನ ವರ್ಷಗಳು 'ಘಷ್ಟ್ಯತೆ ಯಸ್ಯ ನಗರೆ ಶ್ರೀ ರಂಗಯಾತ್ರಾ ದಿನೆ ದಿನೆ' ಎಂಬ ಕುಲಶೇಕರ ವಾಣಿಯಂತೆ ಶ್ರೀರಂಗ ಹಾಗು ದಕ್ಷಿಣ ತಿರುಪತಿಗಳ ಯಾತ್ರೆ ಆರಂಭವಾಯಿತು. ಇದು ವರೆವಿಗು ಒಂದು ೧೫ ಬಾರಿ ಶ್ರೀರಂಗ ಕ್ಷೇತ್ರವನ್ನು ಸೇವಿಸಿರುತ್ತಾರೆ. ಸಾಮಾನ್ಯವಾಗಿ ಪೌಂಡರೀಕಪುರಂ ಸ್ವಾಮಿ, ಆಂಡವನ್, ಅಳಶಿಂಗರ್ ಸ್ವಾಮಿಗಳ ತಿರುನಕ್ಷತ್ರಗಳಿಗೆ ಹೊಂದುಕೊಳ್ಳುವಂತೆ ಯಾತ್ರೆಯನ್ನು ಸಂಯೋಜಿಸಲಾಗಿತ್ತು.ಆಂಡವನ್ ಆಶ್ರಮದ ಶ್ರೀಕಾರ್ಯಂರವರ ಮಾರ್ಗದರ್ಶನದಲ್ಲಿ ಶ್ರೀರಂಗದ ಸುತ್ತಲೂ ಇರುವ ಹಾಗು ಕುಂಭಕೋಣದ ದಿವ್ಯದೇಶಗಳನ್ನು ಸಂದರ್ಶಿಸಿದರು. ಮನ್ನಾರ್ಗುಡಿ ಕ್ಷೇತ್ರದ ವಿದ್ಯಾರಾಜಗೋಪಾಲ್ ಮೂರ್ತಿಯನ್ನು ಸೇವೆ ಮಾಡುತ್ತಾ ರಂಗಪ್ರಿಯ ಶ್ರೀಗಳು ಆನಂದ ಬಾಷ್ಪದಿಂದ ಸೊಬಗನ್ನು ಅನುಭವಿಸಿದರು.

ಸೇತು ಯಾತ್ರೆಯಲ್ಲಿ ಮಧುರೆ, ತಿರುಮಯ್ಯಂ ತಿರುಕೋಟ್ಟಿಯೂರ್ ಕ್ಷೇತ್ರಗಳನ್ನು ಸೇವಿಸಿ ತಿರುಪುಲ್ಲಾಣಿಯಲ್ಲಿ ೨ ದಿನಗಳ ವೊಕ್ಕಾಂ. ಲಕ್ಷ್ಮೀ ಹಯಗ್ರೀವ ಸ್ವಾಮಿಗೆ ಎರಡು ಬಾರಿ ಸಮುದ್ರದಲ್ಲಿ ಅವಭೃತ ಸ್ನಾನವಾಗಿದೆ.

೧೯೯೫ ರಲ್ಲಿ ಮಳೂರು ಅಪ್ರಮೇಯ ಕ್ಷೇತ್ರವನ್ನು ಸೇವಿಸಿ ಹುಲಿಕಲ್ ರಾಮನಾಥಪುರ, ಮಗ್ಗೆ ಮಾದಿಹಳ್ಳಿ ಮುಂತಾದ ಪಶ್ಚಿಮ ದೇಶದ ಯಾತ್ರೆಯಲ್ಲಿ ಈ ಎಲ್ಲಾ ಊರುಗಳಿಂದ ಭಕ್ತರು ಬಿಡದೆ ಸ್ವಾಮಿಗಳ ಸೇವೆ ಮಾಡಿ ಸ್ವಾಮಿಗಳ ನಿರ್ಗಮನದ ವರೆಗೂ ಅಲ್ಲಲೇ ಇದ್ದು ಶಾತ್ತುಮೊರೈಯಲ್ಲಿ ಭಾಗವಹಿಸಿದ್ದು ಸ್ವಾಮಿಗಳಿಗೆ ಹರ್ಷವನ್ನು ತಂದಿತು. ಇವರಲ್ಲಿರುವ ಶ್ರದ್ಧೆ ಭಕ್ತಿ ನಿಷ್ಠೆ ಅಭಿನವ ವಾಗೀಶರಿಗೆ ತುಂಬಾ ಅಭಿಮತವಾದುದು.

ಸ್ವಾಮಿಗಳೊಂದಿಗೆ ದೇವರ ಸೇವೆ ಮಾಡಲು ಅವಕಾಶವಾಗುವುದೆಂದು ತಿಳಿದ ಭಕ್ತರು ಮಂಗಳಾಶಾಸನದಲ್ಲಿ ಹೆಚ್ಚು ಭಾಗವಹಿಸುತ್ತಿದ್ದರು. ಮಠದ ಎರಡು ವಾಹನಗಳು ಯಾತ್ರೆ ಪೂರಾ ಸಹಕಾರಿಯಾಗಿ ಒದಗಿ ಬಂದುವು. ಒಂದು ಸಂಜೆ ಚೆನ್ನೈ ಬಡಾವಣೆಯಲ್ಲಿ ದೋಲೋತ್ಸವದ ಏರ್ಪಾಡಾಗಿತ್ತು ಹಳೆಯ ವಾಹನದಲ್ಲಿ ಸಂಪುಟ ಹಾಗು ಆರಾಧಕರು ಹೊರಟರು. ಹೊಸವಾಹನದಲ್ಲಿ ಸ್ವಾಮಿಗಳೊಂದಿಗೆ ಕಾರ್ಯಕಾರಿ ಸಮತಿಯವರು ಮಂಗಳಾಶಾಸನಕ್ಕಾಗಿ ತಿರುನೀರ್ ಮಲೈ ಕ್ಷೇತ್ರಕ್ಕೆ ಹೊರಟರು.

ಹೀಗೆಯೇ ಹೈದರಾಬಾದಿನ ಒಳಗೂ ಹೊರಗೂ ಇರುವ ಶ್ರೀ ವೈಷ್ಣವ ಕ್ಷೆತ್ರಗಳನ್ನು ಸಂದರ್ಶಿಸಿದರು. ಇವುಗಳಲ್ಲಿ ಒಂದು ೬೦ ಕಿಮೀ ದೂರದಲ್ಲಿರುವ ಯಾದಗಿರಿ ನೃಸಿಂಹಕ್ಷೇತ್ರದಲ್ಲಿ ಮಂಗಳಾಶಾಸನ.

೧೯೮೮ ರಲ್ಲಿ ಸರ್ವಧರ್ಮಸಮ್ಮೇಳನದಲ್ಲಿ ಅಭಿನವ ರಾಮಾನುಜರು ಭಾಗವಹಿಸಿದ್ದರು. ಶಿವಮೊಗ್ಗ ಸಮೀಪ ಬಸವಾಪಟ್ಟಣದ ಬಡಾವಣೆಯ ಪುಣ್ಯಸ್ಥಳದಲ್ಲಿ ಅಂದು ರಾಜ್ಯಪಾಲರಾಗಿದ್ದ ಶ್ರೀ ವೆಂಕಟಸುಬ್ಬಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನ ಮುಗಿಯುತ್ತಿದಂತೆಯೇ ಸ್ವಾಮಿಗಳು ನಿರ್ಗಮಿಸುತ್ತಿದ್ದ ರಾಜ್ಯಪಾಲರನ್ನು ಕಂಡು ಶ್ರೀ ಮಠದ ಜಮೀನಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತೆಲುಗಿನಲ್ಲಿ ಹೇಳುತ್ತಾ ಹಲವಾರು ದಾಖಲೆಗಳನ್ನು ಅವರಿಗೆ ತೋರಿಸಿದರು. ಎಲ್ಲವನ್ನು ಗಮನಿಸಿದ ರಾಜ್ಯಪಾಲರು 'ನೇನು ಇದಂತಾ ಚೂಸ್ತಾಮು' ಎಂದು ಹೇಳಿ ನಿರ್ಗಮಿಸಿಯೇಬಿಟ್ಟರು.

ಇಡಿ ಬ್ರಾಹ್ಮಣ ಕುಲಕ್ಕೂ ಸಂಪ್ರದಾಯಗಳಿಗೂ ಒತ್ತುಕೊಡುವ ಮತ್ತೊಂದು ಸತ್ಕಾರ್ಯ ಗಾಯತ್ರಿ ಮಹಾಯಾಗ ಎರಡು ದಿನಗಳ ಮಟ್ಟಿಗೆ ಅಭಿನವ ರಾಮಾನುಜರು ಗುಡಿಬಂಡೆ ಬ್ರಾಹ್ಮಣರು ಏರ್ಪಡಿಸಿದ್ದ ಈ ಮಹಾಯಾಗಕ್ಕೆ ದಯಮಾಡಿಸಿದ್ದರು ಸುತ್ತಲೂ ಇರುವ ಸುಮಾರು ೧೫೦೦ ಬ್ರಾಹ್ಮಣ ಭಕ್ತರು ಇದರಲ್ಲಿ ಪಾಲ್ಗೊಂಡಿದ್ದು ಸ್ವಾಮಿಗಳಿಗೆ ಸಂತಸ ಉಂಟುಮಾಡಿತು. ವಾಪಸಾಗುವಾಗ ಇವರಿಗೆ ತುಂಬಾ ಅಭಿಮತವಾದ ಸೋಮನಹಳ್ಳಿಯಲ್ಲಿ ಒಂದು ಗಂಟೆಕಾಲ ತಂಗಿದ್ದರು.

<u>ಉಪನ್ಯಾಸ</u>

ಅಭಿನವ ರಾಮಾನುಜರು ಯಾತ್ರೆಗಳಲ್ಲಿ ತೆಲುಗು ತಮಿಳು ಹಾಗು ಕನ್ನಡ ಭಾಷೆಗಳಲ್ಲಿ ವೇದ ವಾಕ್ಯಗಳಲ್ಲಿ ಒಂದನ್ನು ಉಲ್ಲೇಖಿಸಿ ಉಪನ್ಯಾಸ ಮಾಡುತ್ತಿದ್ದರು. ನಾವಲ್ಪಾಕಂನಲ್ಲಿ ದೊಡ್ಡಭಾಗವತ ಗೋಷ್ಟಿಯ ಮುಂದೆ 'ಹಯಗ್ರೀವಸ್ವಾಮಿಯು ಬೇರೆಲ್ಲೂ ಹೋಗದೆ ನಮ್ಮ ಆಸ್ಥಾನಕ್ಕೆ ಏಕೆ ಬಂದ' ಎಂಬ ವಿಷಯದ ಬಗ್ಗೆ ಆದ್ಭುತವಾಗಿ ಉಪನ್ಯಾಸ ಮಾಡಿದರು. ತಿರುವಹೀಂದ್ರಪುರ ಯಾತ್ರೆಯಲ್ಲಿ ಇಲ್ಲಿಂದ ಒಂದು ೩೦ ಕಿಮೀ ದೂರದ ಪನ್ರೊಟಿಯಲ್ಲಿ ಭಕ್ತರೊಬ್ಬರ ಮನೆಗೆ ಸಾಯಂಕಾಲದ ಆರಾಧನೆಗಾಗಿ ತೆರಳಿದರು ಪೂಜೆ ಆರಂಭವಾಗುವುದಕ್ಕೆ ಇನ್ನು ಸಮಯ ವಿದ್ದುದ್ದರಿಂದ ತಿರುಪಾವೈ ಉಪನ್ಯಾಸಕರೊಬ್ಬರಿಂದ 'ಹಯಾಸ್ಯ ಹಾಗು ತಿರುವಹೀಂದ್ರಪುರ' ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಉಪನ್ಯಾಸಕರು ರಾಮಾನುಜರ ಕಾಶ್ಮೀರ ಪ್ರವಾಸದ ಬಗ್ಗೆ ಹೇಳಿ " ಸರಸ್ವತಿ ಪೀಠದಲ್ಲಿ ಸಾಕ್ಷಾತ್ ಸರಸ್ವತಿಯಿಂದ ದತ್ತವಾಗಿ ಬಂದ ಹಯಾಸ್ಯ ಮೂರ್ತಿಯೇ ನಮ್ಮ ಕ್ಷೇತ್ರದಲ್ಲಿ ರಾರಾಜಿಸುತ್ತಿರುವ ಯೋಗ ಹಯಗ್ರೀವ ಮೂರ್ತಿ" ಎಂದು ಬಿಟ್ಟರು. ಪಕ್ಕದ ಕೊಠಡಿಯಲ್ಲಿ ವಿಶ್ರಮಿಸಿಕೊಂಡಿದ್ದ ಸ್ವಾಮಿಗಳು ತಕ್ಷಣ ಎದ್ದು ಬಂದು ಮಧ್ಯ ಪ್ರವೇಶಿಸಿ 'ನೀನು ಯಾವಾಗ ನನಗೆ ಸಂಬಂಧಿಯಾದೆ' ಎಂದು ಆಗ್ರಹರೀತಿಯಲ್ಲಿ ಪ್ರಶ್ನಿಸಿದರು.

೧೯೯೯–೨೦೦೦ ಡಿಸೆಂಬರ್ – ಜನವರಿ ಧನುರ್ಮಾಸ ಕಲಾಪಗಳಲ್ಲಿ ಅಭಿನವ ವಾಗೀಶರು ಮುಂಬೈನ ದೊಂಬಿವಿಲ್ಲಿಯಲ್ಲಿ ೧೫ ದಿವಸಗಳು ದಿನಕ್ಕೆ ಎರಡು ಪಾಶುರಗಳಂತೆ ತಿರುಪ್ಪಾವೈ ಉಪನ್ಯಾಸವನ್ನು, ೨೦೦೨, ೨೦೦೫, ೨೦೦೬ ರಲ್ಲಿ ಹೈದರಬಾದಿನ ದೇಶಿಕಸಭೆಯವರು ಏರ್ಪಡಿಸಿದ್ದ ತಿರುಪ್ಪಾವೈ ಉಪನ್ಯಾಸವನ್ನು ಆದ್ಭುತ ಉಲ್ಲೇಖ ವ್ಯಾಖ್ಯಾನಗಳೊಂದಿಗೆ ರಸವತ್ತಾಗಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಾಡಿದರು. ಚೆನ್ನೈ ಯಾತ್ರೆಯಲ್ಲೂ ನಂಗನಲ್ಲೂರಿನ ಹಯಗ್ರೀವ ದೇವಸ್ಥಾನದಲ್ಲಿ ತಿರುಪ್ಪಾವೈ ಉಪನ್ಯಾಸವನ್ನು ಯಶಸ್ವಿಯಾಗಿ ನೆರವೇರಿಸಿದರು.

ತಿರುಪ್ಪಾವೈ ಕಲಾಪಗಳು ಮುಗಿಯುತ್ತಿದ್ದಂತೆಯೇ ಬೇರೆಡೆಗಳಲ್ಲಿ ಅಂದರೆ ಮುಂಬೈನ ಶ್ರೀವೈಷ್ಣವ ಸಮುದಾಯದ ಕೃಷ್ಣಸಭ, ದೇಶಿಕ ಸಭೆ ಮತ್ತು ಶಂಕರ ಮಠಗಳಲ್ಲಿ ಅಭಿನವ ವಾಗೀಶ ಸ್ವಾಮಿಗಳು, ಹಯಗ್ರೀವಾವತಾರ ಹಾಗು ಪರಕಾಲ ಮಠದ ಇತಿಹಾಸವನ್ನು ಪ್ರಥಮ ಬ್ರಹ್ಮತಂತ್ರ ಸ್ವಾಮಿ, ಮತಾಂತರಗೊಂಡ ವಾತ್ಸ್ಯ ವರದ ಸ್ವಾಮಿಗಳು, ಪೆರಿಯ ಪರಕಾಲ ಹಾಗು ಅಭಿನವ ರಂಗನಾಥ ಸ್ವಾಮಿಗಳ ಕೊಡುಗೆಗಳನ್ನು ಆದ್ಯುತವಾಗಿ ವಿವರಿಸಿದರು.

೧೯೯೪ ರ ಆಹೋಬಿಲ ಪ್ರವಾಸದಿಂದ ಹಿಂತಿರುಗುತ್ತಿರುವಾಗ ಅನುಷ್ಠಾನಕ್ಕಾಗಿ ಎರಡು ಘಂಟೆಗಳಕಾಲ ಕದಿರಿ ನರಸಿಂಹ ಕ್ಷೇತ್ರಕ್ಕೆ ತೆರಳಿದರು. ಭಕ್ತರ ಪ್ರಾರ್ಥನೆಯ ಮೇರೆಗೆ, ಸ್ವಾಮಿಗಳು ಹಯಗ್ರೀವಾವತಾರದ ಬಗ್ಗೆ ಪ್ರಥಮವಾಗಿ ತೆಲುಗಿನಲ್ಲಿ ಉಪನ್ಯಾಸ ಮಾಡಿದರು.

ನಾರಾಯಣ ಶತಕೋಪ ಮಹಾದೇಶಿಕರ ತಿರುನಕ್ಷತ್ರದಂದು ಅಭಿನವ ವಾಗೀಶರು ಹಯಗ್ರೀವ ನೃಸಿಂಹ ಮೂರ್ತಿಗಳ ಸಮಾಭ್ಯಧಿಕತ್ವವನ್ನು ಕುರಿತ ಭಾಗವತ ಪುರಾಣದ ವಾಕ್ಯಗಳನ್ನು ಉಲ್ಲೇಖಿಸಿ, ಎಲ್ಲರೂ ಮೆಚ್ಚುವಂತಹ ಉಪನ್ಯಾಸವನ್ನು ಮಾಡಿದರು.

ವಿಳುಪ್ಪುರಂನಲ್ಲಿ ವಕೀಲರೊಬ್ಬರ ಗೃಹದಲ್ಲಿ, ಇಬ್ಬರು ಯತಿಗಳೂ ಬಿಡಾರ ಮಾಡಿದ್ದಾರೆ. ಹಯಶಿರೋಪಾಖ್ಯಾನ ಹಾಗು ಪಂಚಕಾಲ ಪ್ರಕಾಶಿಕೆಯ ಬಗ್ಗೆ ಮನೆಯ ಯಜಮಾನರ ಸಂಶಯ ನಿವಾರಣೆ ಹಾಗು ಪ್ರಶ್ನೋತ್ತರಗಳು ಉಪನ್ಯಾಸದಂತೆಯೇ ಇದ್ದಿತು.

ಪೌಂಡರೀಕಪುರಮ್ ಆಶ್ರಮದ ಶ್ರೀ ಗೋಪಾಲದೇಶಿಕ ಮಹಾದೇಶಿಕರಿಗೆ, ನಮ್ಮ ಆಸ್ಥಾನದ ಹಯಗ್ರೀವಮೂರ್ತಿ ಹಾಗು ಪೆರಿಯ ಸ್ವಾಮಿಗಳಾದ ಶ್ರೀಮದಭಿನವ ರಂಗನಾಥಸ್ವಾಮಿಗಳೆಂದರೆ ಉತ್ಕೃಷ್ಟವಾದ ಭಕ್ತಿ. ಪೂರ್ವಾಶ್ರಮದಲ್ಲಿ ಇವರು ಮೈಸೂರಿನಲ್ಲೇ ವಾಸವಾಗಿದ್ದರು. ಅಭಿನವ ರಂಗನಾಥರೇ ಇವರಿಗೆ ಕಾಲಕ್ಷೇಪ ಆಚಾರ್ಯರು. ಇವರ ಸಂನ್ಯಾಸಾಶ್ರಮದ ಬಗ್ಗೆ ಪೆರಿಯ ಸ್ವಾಮಿಗಳು ಭವಿಷ್ಯವನ್ನು ನುಡಿದಿದ್ದರು. ಶ್ರೀರಂಗದಲ್ಲಿ ಇವರ ತಿರುನಕ್ಷತ್ರದಂದು ಹನ್ನೆರಡು ಮಂಗಳಾರತಿಯ ಸಮೇತ ಡೋಲೋತ್ಸವವು ಏರ್ಪಾಡಾಗಿತ್ತು. ಅಭಿಗಮನ ಆರಾಧನೆಯಲ್ಲಿ ಅಭಿನವ ವಾಗೀಶರು ಹಯಾಸ್ಯಮೂರ್ತಿಯನ್ನು ಶಿರಸ್ಸಿನ ಮೇಲಿಟ್ಟುಕೊಳ್ಳುವುದು ವಾಡಿಕೆ. ಅಂದು ಅಲ್ಲಿಯೇ ನಿಂತು ಆರಾಧನೆಯನ್ನು ವೀಕ್ಷಿಸುತ್ತಿದ್ದ ಪೌಂಡರೀಕಪುರಮ್ ಸ್ವಾಮಿಯ ಶಿರಸ್ಸಿನ ಮೇಲೆಯೂ ಹಯಾಸ್ಯನನ್ನು ಸ್ಪರ್ಶಿಸಲಾಯಿತು. ಆವರ ಲಘು ಉಪನ್ಯಾಸದಲ್ಲಿ ಶ್ರೀವೈಷ್ಣವರ ನಿತ್ಯಾನುಷ್ಠಾನಗಳ ಬಗ್ಗೆ ಹೇಳುತ್ತಾ, ಹಯಗ್ರೀವ-ಪೆರಿಯ ಸ್ವಾಮಿಗಳ ವಿಷಯಗಳು ಬಂದಾಗ ಆನಂದ ಬಾಷ್ಪದೊಂದಿಗೆ ಮಾತುಗಳೇ ಹೊರಡದೆ ಉಪನ್ಯಾಸ ಅಷ್ಟಕ್ಕೆ ನಿಂತಿತು. ಈ ದಾಸನು ದೀರ್ಘದಂಡ ಪ್ರಣಾಮಗಳೊಂದಿಗೆ ಸೇವಿಸುವಾಗಲೆಲ್ಲಾ "ನೀನು ಪರಕಾಲಸ್ವಾಮಿಗಳೊಂದಿಗೆ ಯಾತ್ರಾ ಕೈಂಕರ್ಯವನ್ನು ಮಾಡುತ್ತಿದ್ದೀಯೇ ತಾನೇ? ನೀನು ಮಾಡುತ್ತಿರುವ ಸೇವೆ ನನಗೆ ಬಹಳ ಸಂತೋಷವನ್ನುಂಟುಮಾಡಿದೆ" ಎಂದು ಹೇಳಿದರು.

ಡೋಲೋತ್ಸವಗಳ ಒತ್ತಡ

ಅಭಿನವ ವಾಗೀಶರ ೧೯೯೭ ರ ಸಂಯುಕ್ತ ಯಾತ್ರೆಯಲ್ಲಿ ೧೨೦ ಕ್ಕೂ ಹೆಚ್ಚು ಡೋಲೋತ್ಸವಗಳು ಏರ್ಪಾಡಾಗಿತ್ತು. ದಿನಂ ಪ್ರತಿ ಎರಡು ಡೋಲೋತ್ಸವಗಳಲ್ಲಿ ಯಾವ ಸಮಸ್ಯೆಯೂ ಇರಲಿಲ್ಲ. ಮೂರು ಅಥವಾ ನಾಲ್ಕು ಡೋಲೋತ್ಸವಗಳಲ್ಲಿ ಸಣ್ಣ-ಪುಟ್ಟ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಮುಖ್ಯವಾಗಿ ಎಲ್ಲೆಡೆಗಳಲ್ಲಿ ವಿಳಂಬದಿಂದ ಹಿಂತಿರುಗುವುದು ಮಧ್ಯ ರಾತ್ರಿಯೇ. ಈ ವಿಳಂಬಕ್ಕೆ ಅನೇಕ ಕಾರಣಗಳಿವೆ. ೧. ತಿಳಿಯದೇ ಯಾರಾದರೊಬ್ಬ ಭಕ್ತರ ಆರಾಧಕರನ್ನು ಸ್ಪರ್ಶಿಸಿಬಿಟ್ಟರೇ, ಪುನಃ ತೀರ್ಥಮಾಡಿಸಿದ್ದವಾಗಬೇಕು. ಒಂದು ಡೋಲೋತ್ಸವದಲ್ಲಿ ಹೀಗೆಯೇ ಆಗಿ ಮುಂದಿನ ಡೋಲೋತ್ಸವಗಳು ವಿಳಂಬವಾಗಿ ಒಬ್ಬ ರೈತ ಭಕ್ತರ ಮನೆಗೆ ಹೋದಾಗ, ಸುಮಾರು ರಾತ್ರಿ ೦೯-೩೦ ಆಗಿತ್ತು. ವಿದ್ಯುಚ್ಛಕ್ತಿಯ ಅಭಾವದಿಂದ ಸಂಪುಟವನ್ನು ಉಯ್ಯಾಲೆಯ ಮೇಲಿಟ್ಟು ಹಾಲು-ಹಣ್ಣು ನಿವೇದಿಸಿ, ಆರತಿಯೊಂದಿಗೆ ಹಿಂತಿರುಗಿದಾಗ, ರಾತ್ರಿ ೧೨ ಘಂಟೆಯಾಗಿತ್ತು. ೨. ವಾಹನದಲ್ಲಿ ತಾಂತ್ರಿಕ ತೊಂದರೆಗಳ ನಿವಾರಣೆಗಾಗಿ ಹತ್ತಿರದ ಮೆಕ್ಯಾನಿಕ್ ಅಂಗಡಿಯನ್ನು ಹುಡುಕಿಕೊಂಡು ಹೋಗಬೇಕಾಗಿತ್ತು. ೩. ಸಾರಿಗೆ ಒತ್ತಡ, ರೈಲ್ವೇ ಕ್ರಾಸಿಂಗುಗಳಲ್ಲಿ ಕಾಯುವುದು. ೪. ಭಕ್ತರ ಆಭೀಷ್ಟದಂತೆ ಸ್ವಾಮಿಗಳಿಂದ ಲಘು ಉಪನ್ಯಾಸ ಅಥವಾ ಸ್ವಾಮಿಗಳು ಸಾಯಂಕಾಲದ ಆರಾಧನೆಯಲ್ಲಿ ತೊಡಗಿದ್ದರೆ ಬೇರೆ ತಜ್ಞರಿಂದ ಉಪನ್ಯಾಸ. ೫. ಪೂಜೋಪಕರಣಗಳ ಪೂರೈಕೆ. ೨೦೧೦ ನೆಯ ಹೈದರಾಬಾದ್ ಯಾತ್ರೆಯಲ್ಲಿ ಮಠದ ಶಾಖೆಯು ನಗರದ ಸರಹದ್ದಿಗೆ ದೂರವಾಗಿರುವುದರಿಂದ ಫಲ-ಪುಷ್ಪ ದ್ರವ್ಯಾದಿಗಳು ನಗರದಿಂದಲೇ ಬರಬೇಕು. ಒಂದೆರಡು ದಿನ ಪ್ರಾತಃಕಾಲ ಸುಪ್ರಭಾತ ಸೇವೆ ಈ ಕಾರಣದಿಂದ ತುಂಬಾ ವಿಳಂಬವಾಯಿತು. ೬. ವಿಳಾಸದ ಪರದಾಟ. ಕೆಲವು ವೇಳೆ ಸೇವಾರ್ತಿಗಳ ವಿಳಾಸವನ್ನು ತಿಳಿದು ಆದಕ್ಕಾಗಿ ಹುಡುಕುವ ಸಾಹಸವು ವಿಳಂಬವನ್ನೇ ತಂದೊಡ್ಡುವುದು. ೨೦೧೦ ರಲ್ಲಿ ಲಕ್ಷ್ಮೀಪುರದ ಸಮೀಪ ಇರುವ ಕರಮನಪಲ್ಲಿಯ ಶ್ರೀನಿವಾಸ ಕ್ಷೇತ್ರಕ್ಕೆ ಹೋಗುವಾಗ ಎರಡು ಕಡೆಗಳಲ್ಲಿ ವಿಳಂಬ - ಅ) ಲಕ್ಷ್ಮೀಪುರಕ್ಕೆ ಸರಿಯಾದ ಮಾರ್ಗದಲ್ಲಿ ಹೋಗದೆ, ಬೇರಾವುದೋ ಮಾರ್ಗದಲ್ಲಿ ತುಂಬಾ ದೂರ ಹೋಗಿ, ಮತ್ತೆ ಹಿಂತಿರುಗಿ ದಾರಿಹೋಕರನ್ನು ಕೇಳುತ್ತಾ-ಕೇಳುತ್ತಾ ಅಲ್ಲಿ-ಇಲ್ಲಿ ಹೋಗಿದ್ದು, ೦೧-೩೦ ಘಂಟೆ ಕಾಲಗಳ ವಿಳಂಬವಾಯಿತು. ಆ) ಲಕ್ಷ್ಮೀಪುರವನ್ನು ತಲುಪಿಯೂ, ಕರಂಬಟ್ಟಿ ವಿಳಾಸವನ್ನು ಅರ್ಧ ಘಂಟೆಗಳ ಕಾಲ ಹುಡುಕಿ ತಲುಪುವ ವೇಳೆಗೆ ರಾತ್ರಿ ೦೧-೩೦ ಆಗಿತ್ತು. ೭. ಕೆಲವು ವೇಳೆ ಅಕ್ಕ ಪಕ್ಕದ ರಸ್ತೆಗಳಲ್ಲಿ ಪಾದಪೂಜೆ ಕಾರ್ಯಕ್ರಮ, ವ್ಯಾಪಾರಘಟಕಗಳ ಉದ್ಘಾಟನೆ, ಕಟ್ಟಡಗಳ ವೀಕ್ಷಣೆ ಇತ್ಯಾದಿ. ೨೦೦೨ ಚಿತ್ತೂರಿನ ಪ್ರವಾಸದಲ್ಲಿ ಅ) ನ್ಯೂಟ್ರಿನ್ ಮಿಠಾಯಿ ಫ್ಯಾಕ್ಟರಿಯಲ್ಲಿ ಡೋಲೋತ್ಸವದ ಏರ್ಪಾಡಾಗಿತ್ತು. ಸ್ವಾಮಿಗಳಿಂದ ಇಡೀ ಫ್ಯಾಕ್ಟರಿಯ ವೀಕ್ಷಣೆಯಾಗಿ ಪ್ರತಿಯೊಂದು ವಿಭಾಗಕ್ಕೂ ಫಲ ಮಂತ್ರಾಕ್ಷತೆಯನ್ನು ಅನುಗ್ರಹಿಸಿ, ಹಿಂತಿರುಗಿ ಮುಂದಿನ ಕಾರ್ಯಕ್ರಮಗಳು ವಿಳಂಬವಾಯಿತು. ಆ) ನೀರಿನ ತೀವ್ರ ಅಭಾವ. ಶಂಕರ ಸಂಸ್ಕೃತಿ ಕೇಂದ್ರದಲ್ಲಿ ಬಿಡಾರ ಮಾಡಿದ್ದ ಸ್ವಾಮಿ ಹಾಗು ಪರಿಚಾರಕರು, ಇಲ್ಲಿಂದ ನಾಲ್ಕು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಿಲೋಮೀಟರ್ ದೂರದ ಕಾಲುದಾರಿಯಲ್ಲಿದ್ದ ಬಾವಿಯಲ್ಲಿ ತೀರ್ಥಮಾಡಿ, ನಾಲ್ಕಾರು ಕೊಡಗಳಲ್ಲಿ ತುಂಬಿಕೊಂಡು ವಾಹನದಲ್ಲಿ ತರಲಾಯಿತು.

ಅಭಿನವ ವಾಗೀಶರ ಯಾತ್ರೆಯಲ್ಲಿ ಮೂರು ಡೋಲೋತ್ಸವಗಳನ್ನು ಮರೆಯುವಂತಿಲ್ಲ. ೧. ಒಂದೊಂದು ದಿಕ್ಕಿನಲ್ಲಿ ಒಂದೊಂದು ಡೋಲೋತ್ಸವವನ್ನು ಮಾಡುವ ಬದಲು, ವಿಕೇಂದ್ರೀಕರಣದ ವ್ಯವಸ್ಥೆಯನ್ನು ಮಾಡಲಾಯಿತು. ಅಂದರೆ ಪ್ರಮುಖ ಬಡಾವಣೆಗಳಲ್ಲಿ ಬಿಡಾರ ಮಾಡಿ ಭಕ್ತರ ಅಭೀಷ್ಟಗಳನ್ನು ನೆರವೇರಿಸುವುದು. ಪ್ರಥಮವಾಗಿ ಚೆನ್ನೈನ ನಂಗನಲ್ಲೂರಿನ ಸಮುದಾಯಭವನದಲ್ಲಿ ಮೂರು ದಿನಗಳ ಮುಕ್ಕಾಂ. ಅಂದು ಆ ಬಡಾವಣೆಯಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿದ್ದುದರಿಂದ ಸುತ್ತಲೂ ಇದ್ದ ಕೊಳಚೆ ನೀರಿನ ಸೊಳ್ಳೆಗಳ ಕಾಟ ಹೇಳತೀರದು. ಹೇಗೋ ಕಷ್ಟಪಟ್ಟು ದಿನಗಳನ್ನು ಕಳೆದದ್ದಾಯಿತು. ಪೆರುಂಗಳತ್ತೂರ್ ಶ್ರೀನಿವಾಸ ಕ್ಷೇತ್ರದಲ್ಲಿ ಎರಡು ದಿನ ಮುಕ್ಕಾಂನಲ್ಲೂ ಇದೇ ಕಾರ್ಪಣ್ಯವನ್ನು ಎದುರಿಸಿದ್ದಾಯಿತು. ಇಂದು ಈ ಸಮಸ್ಯೆ ಬಗೆಹರೆದಿದೆ. ೨. ಭಕ್ತರೊಬ್ಬರ ಮನೆಗೆ ಮುಖ್ಯ ರಸ್ತೆಯಿಂದ ವಾಹನ ಹೋಗಲಾರದಷ್ಟು ಚಿಕ್ಕ ದಾರಿಯಲ್ಲಿ ಸುಮಾರು ಕಾಲು ಕಿಲೋಮೀಟರ್ ದೂರ, ನಡೆದೇ ಹೋಗಬೇಕು. ಒಬ್ಬೊಬ್ಬರಾಗಿ ಡೋಲು ಪದಾರ್ಥಗಳನ್ನು ತಲೆಹೊರೆಯಾಗಿಟ್ಟುಕೊಂಡು ನಡೆದುಹೋಗಬೇಕಾಯಿತು. ಒಬ್ಬರು ಒಳಗೆ ಹೋದರೆ ಇನ್ನೊಬ್ಬರು ಆಚೆಗೆ ಬರುವಷ್ಟು ಸಣ್ಣ ಕೊಠಡಿಯಲ್ಲಿ ಡೋಲೋತ್ಸವವು ಜರುಗಿತು. ಸ್ವಾಮಿಗಳ ಸಾನಿಧ್ಯವೂ ಆದೇ ಕೊಠಡಿಯಲ್ಲಿತ್ತು. ಶ್ರೀಮಠದ ಎರಡು ಘಂಟೆಗಳನ್ನು ಸೇವೆ ಮಾಡಲಾಗಲಿಲ್ಲ. ೩. ಇನ್ನೊಬ್ಬ ಭಕ್ತರ ಮನೆಯ ೬ನೆಯ ಅಂತಸ್ತಿನಲ್ಲಿ ತುಂಬ ಇಕ್ಕಟ್ಟಾದ ಸುರುಳಿಯಂತಿರುವ ಹಂತಗಳನ್ನು ಹತ್ತಿ ಪದಾರ್ಥಗಳನ್ನು ಇಕ್ಕೆಲಗಳಲ್ಲಿ ತಗುಲಿಸಿಕೊಂಡೇ ಹೋಗಿ ಡೋಲೋತ್ಸವವನ್ನು ಮಾಡಿಸಲಾಯಿತು. ೪. ಮೂರನೆಯ ಡೋಲೋತ್ಸವ ರಾತ್ರಿ ೧೦-೩೦ ಆಗಿದ್ದರಿಂದ, ನಾಲ್ಕನೆಯ ಡೋಲೋತ್ಸವವನ್ನು ಮುಂದೂಡಲಾಗಿ, ಮಾರನೆಯ ದಿನ ನೂತನ ಬಡಾವಣೆಯ ಮಡಿಪಾಕ್ಕಂನಲ್ಲಿ ಏರ್ಪಾಡಾಗಿತ್ತು. ಆದರೆ ನಿವೇಶನಗಳು ಹಳೆಯ ಟ್ಯಾಂಕ್ಬೆಡ್ ಆಗಿದ್ದ ಕಾರಣ, ಬಾವಿಯ ನೀರನ್ನು ಉಪಯೋಗಿಸಲಾಗಲಿಲ್ಲ. ಈ ತೊಂದರೆಯನ್ನು ತಪ್ಪಿಸಲು ಸ್ವಾಮಿಗಳು ಬಿಡಾರ ಮಾಡಿರುವ ಸ್ಥಳದಿಂದಲೇ ತೀರ್ಥವನ್ನು ಒಯ್ಯುವಂತೆ ನಿರ್ಧರಿಸಲಾಯಿತು.

ಅಹಮದಾಬಾದ್ ಪಟೇಲ್ ಭಕ್ತರ ಮನೆಯಲ್ಲಿ ಬಾವಿಯಿರದೆ ನಾಲ್ಕು ಕಿಲೋಮೀಟರ್ ದೂರ ದೊಡ್ಡ ಬಂಡೆಗಲ್ಲುಗಳಲ್ಲಿಳಿದು ತೀರ್ಥವನ್ನು ತರುವುದು ಕಷ್ಟಕರವಾಯಿತು. ಮನೆಯಮುಂದೆಯೇ ಶಾಸ್ತ್ರೋಕ್ತ ರೀತಿಯಲ್ಲಿ ಬೇರೆ ವ್ಯವಸ್ಥೆ ಮಾಡಲಾಯಿತು.

<u>ಅಪರೂಪದ ಸ್ಥಳಾದರ್ಶಗಳು</u>

೧. ಅಭಿನವ ವಾಗೀಶರ ೧೯೬೭ ರ ಚೆನ್ನೈ ಸಂಯುಕ್ತ ಯಾತ್ರೆಯಲ್ಲಿ ಭಗವದ್ರಾಮಾನುಜರ ಅಭಿಮಾನ ಕ್ಷೇತ್ರಗಳಲ್ಲೊಂದಾದ ಮಧುರಾಂತಕಂನ ಏರಿ ಕಾತ್ತ ರಾಮನನ್ನು ಸಂದರ್ಶಿಸಿ ಇಲ್ಲಿಂದ ಹತ್ತು ಕಿಲೋಮೀಟರ್ ದೂರದಲ್ಲಿರುವ ಸೀತಾರಾಮಸ್ವಾಮಿಯೆಂಬ ಗೃಹಸ್ಥರ ನಿರ್ವಹಣೆಯಲ್ಲಿರುವ ಸಾವಿರ ವರ್ಷ ಇತಿಹಾಸವುಳ್ಳ ತಿರುಮಲೈವಯ್ಯಾವೂರ್ ಗ್ರಾಮದ ಬೆಟ್ಟದ ಶ್ರೀನಿವಾಸ ನಿಕೇತನ ಎಂಬ ಕ್ಷೇತ್ರಕ್ಕೆ ಒಂದು ದಿನದ ಮಟ್ಟಿಗೆ ದಯಮಾಡಿಸಿದ್ದರು. ನಾದಸ್ವರಮೇಳದೊಂದಿಗೆ ಭಕ್ತರ ಸಮೂಹದಿಂದ ಭವ್ಯ ಸ್ವಾಗತ ದೊರೆಯಿತು. ಇಲ್ಲಿಯ ಡೋಲೋತ್ಸವಕ್ಕಾಗಿ ಮುಂಚೆಯೇ ಸೀತಾರಾಮಸ್ವಾಮಿಗಳು ಊರಿನ ಸುತ್ತಮುತ್ತಲಿದ್ದ ಹಾಗು ದೂರದ ಭಕ್ತರನ್ನು ಆಹ್ವಾನಿಸಿದ್ದರು. ಇಲ್ಲಿಯ ಅದ್ಭುತವೆಂದರೆ ಪ್ರತಿವರ್ಷ ಕೊನೆಯ ಎರಡು ಶ್ರಾವಣ ಶನಿವಾರಗಳಲ್ಲಿ ಸೀತಾರಾಮಸ್ವಾಮಿಗಳೊಂದಿಗೆ ಚೆನ್ನೈನಿಂದ ಒಂದು ಐನೂರು ಭಕ್ತರು ಹಾಗು ಕ್ಷೇತ್ರಕ್ಕೆ ಬರುವ ಮಾರ್ಗದಲ್ಲಿರುವ ಊರು, ಗ್ರಾಮಗಳಲ್ಲಿನ ಭಕ್ತರು ಸೇರಿಕೊಂಡು ಇಲ್ಲಿಗೆ ಪಾದಯಾತ್ರೆಯನ್ನು ಮಾಡುವರು. ಅದ್ಭುತ ಹಾಗು ಅತಿಮಾನುಷ ಹರಕೆ, ಪ್ರಾರ್ಥನೆಗಳನ್ನು ಭಕ್ತರು ಮಾಡುವರು.

೨. ಹೈದರಾಬಾದ್ ನಗರದ ಫತೆ ದರ್ವಾಜ಼ಾ ಬಡಾವಣೆಯಲ್ಲಿ ಶ್ರೀಮದಭಿನವ ರಂಗನಾಥ ಸ್ವಾಮಿಗಳು ಮಂಗಳಾಶಾಸನ ಮಾಡಿದ್ದ, ತುಂಬಾ ಪ್ರಾಚೀನವಾದ ಶ್ರೀನಿವಾಸ ಕ್ಷೇತ್ರಕ್ಕೆ ಅಭಿನವ ವಾಗೀಶರು ಮೂರು ಬಾರಿ ದಯಮಾಡಿಸಿರುತ್ತಾರೆ. ಪೆರಿಯ ಸ್ವಾಮಿಗಳ ಹೆಸರನ್ನು ಕೇಳಿದೊಡನೆಯೇ ಶ್ರವಣ ನಕ್ಷತ್ರದಂದು ಐನೂರಕ್ಕೂ ಹೆಚ್ಚು ಭಕ್ತರು ಸುದರ್ಶನ ಹೋಮ, ಹನ್ನೆರಡು ಮಂಗಳಾರತಿಗಳೊಂದಿಗೆ ಡೋಲೋತ್ಸವದಲ್ಲಿ ಪಾಲ್ಗೊಂಡರು. ಪಂಚ ಭಕ್ಷ ವಿನಿಯೋಗದೊಂದಿಗೆ ಕಾರ್ಯಕ್ರಮವು ಸಂಜೆ ಮುಗಿಯಿತು. ಪ್ರತಿ ಶನಿವಾರ, ಭಾನುವಾರ ಅಖಿಂಡ ಸಹಸ್ರನಾಮ ಕಾರ್ಯಕ್ರಮವನ್ನು ಹಮ್ಮಿಕೊಂಡು ಹೆಚ್ಚು ಆಕರ್ಷಣೆಯೊಂದಿಗೆ ಭಕ್ತರನ್ನೊಟ್ಟುಗೂಡಿಸಲು ಸ್ವಾಮಿಗಳು ಕರೆಯಿತ್ತರು.

೩. ಗೋಲ್ಕೊಂಡ ಮಾರ್ಗದಲ್ಲಿ ಚಿಲಕೂರೆಂಬ ಗ್ರಾಮದಲ್ಲಿ ಶ್ರೀನಿವಾಸ ಕ್ಷೇತ್ರಕ್ಕೆ ಅಭಿನವ ವಾಗೀಶರು ಎರಡು ಬಾರಿ ಭೇಟಿ ನೀಡಿರುತ್ತಾರೆ. ಈ ಕ್ಷೇತ್ರದ ವೈಶಿಷ್ಟ್ಯಗಳು - ಅ) ದಿನವೂ ಕನಿಷ್ಠ ಪಕ್ಷ ಒಂದೆರಡು ಸಾವಿರ ಭಕ್ತರು ಬಿಡದೆ ಗೋವಿಂದ ನಾಮಾವಳಿಯನ್ನು ಧ್ಯಾನ ಮಾಡುತ್ತಾ ಇಡೀ ಕ್ಷೇತ್ರವನ್ನೇ ಪ್ರದಕ್ಷಿಣೆ ಮಾಡುವರು. ಇದರಿಂದ ಈ ದೇವರಿಗೆ ಪ್ರದಕ್ಷಿಣೆ ಬಾಲಾಜಿ ಎಂದೇ ಹೆಸರಿದೆ. ಆ) ಯಾವುದೇ ಸೇವೆಯಾಗಲೀ ಶುಲ್ಕವಿಲ್ಲ. ಇ) ವಿದೇಶಗಳಿಗೆ ಹೋಗುವರ ಹರಕೆ ಪ್ರಾರ್ಥನೆಗಳ ಮಹಾಪೂರದಿಂದ ವೀಸಾ-ಪಾಸ್ಪೋರ್ಟ್ ಬಾಲಾಜಿ ಎಂದೇ ಹೆಸರಿದೆ.

೪. ಚೆನ್ನೈನಿಂದ ಹಿಂತಿರುಗುವಾಗ ಮಲೈಯಾಂಗುಳಂ ಶ್ರೀ ಸೀತಾರಾಮ ಕ್ಷೇತ್ರವನ್ನು ಸಂದರ್ಶಿಸಲಾಯಿತು. ಪ್ರಾಚೀನ ಕಾಲದಲ್ಲಿ ತಿರುಪತಿ ಶ್ರೀನಿವಾಸನಿಗೆ ಪುಳ್ಳಿದೊರೆಯ ಕಾಲದಲ್ಲಿ ಅನ್ನ ಪ್ರಸಾದಕ್ಕೆ ಹುಣಸೆಹಣ್ಣನ್ನು ಸೇರಿಸಿ ನಿವೇದಿಸುತ್ತಿದ್ದಂತೆಯೇ, ಇಲ್ಲಿಯೂ ಕೂಡ ಪಚ್ಚಪುಳಿ ನಿವೇದನೆ ಇರುವುದು. ಇಲ್ಲಿಯ ಗ್ರಾಮವಾಸಿಗಳು ಮನೆಮನೆಗಳಲ್ಲಿ ಇದನ್ನೇ ಉಪಯೋಗಿಸುವರು.

೫. ಒಂದು ದಿನದ ಸುಗ್ಗನ ಹಳ್ಳಿ ಪ್ರವಾಸ ಗಮನಾರ್ಹ. ನಿಂತ ಭಂಗಿಯಲ್ಲಿರುವ ನೃಸಿಂಹಸ್ವಾಮಿಯ ಕ್ಷೇತ್ರವಿದು. ತುಂಬಾ ವಿರಳ.

೬. ೧೯೬೯ ರಲ್ಲಿ ಅಭಿನವ ರಾಮಾನುಜರು ಚಿಕ್ಕಬಳ್ಳಾಪುರ ಸಮೀಪದಲ್ಲಿರುವ ರಂಗಸ್ಥಳದಲ್ಲಿ ಖೋಡೇ ಸಂಸ್ಥೆಯವರು ಏರ್ಪಡಿಸಿದ್ದ ಅಷ್ಟಾಕ್ಷರೀ ಮಹಾಯಾಗಕ್ಕೆ ದಯಮಾಡಿಸಿದ್ದರು. ಮೂಲ ಮೂರ್ತಿಯ ಮುಂದೆ ನಿಂತು ಸ್ವಾಮಿಗಳು ಬಹಳ ಹೊತ್ತು ಮೂರ್ತಿಯ ಸೊಬಗನ್ನು ಸವಿಯುತ್ತಾ ನಮ್ಮನ್ನೆಲ್ಲಾ ಹತ್ತಿರಕ್ಕೆ ಕರೆದು, ಕ್ಷೇತ್ರದ ಹಾಗು ಇದರ ಸಮೀಪ ಇರುವ ಚಕ್ರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತೀರ್ಥದ ಮಹಿಮೆ, ಪುರಾಣೇತಿಹಾಸ ವಿವರಗಳನ್ನು ನೀಡಿದರು. ಚಿಕ್ಕಬಳ್ಳಾಪುರದಲ್ಲಿ ಇವರ ಪೂರ್ವಾಶ್ರಮ ಗೃಹದ ಅಕ್ಕ-ಪಕ್ಕ, ಸುತ್ತಲೂ ಇರುವ ಭಕ್ತರೂ, ಬಂಧುಗಳೂ ತಂಡೋಪತಂಡವಾಗಿ ಬಂದು ಸ್ವಾಮಿಗಳನ್ನು ಸೇವಿಸಿದರು.

ಗಣ್ಯರ ಆಹ್ವಾನ

೪೫ ನೇಯ ಅಳಗಿಯ ಸಿಂಗರ್ ಸ್ವಾಮಿಗಳ ಆಹ್ವಾನದ ಮೇರೆಗೆ – ಅ) ೧೯೯೩-೯೪ ರಲ್ಲಿ ಅಹೋಬಿಲ ಮಠದ ೬೦೦ ನೆಯ ವಾರ್ಷಿಕೋತ್ಸವದ ಸಲುವಾಗಿ ಅಭಿನವ ವಾಗೀಶರು ಅಹೋಬಿಲಕ್ಕೆ ದಯಮಾಡಿಸಿದ್ದರು. ಮೇಲಿನ ಅಹೋಬಿಲದ ಉಗ್ರ ನೃಸಿಂಹ ಸನ್ನಿಧಿಯಲ್ಲಿ ಡೋಲೋತ್ಸವದ ಏರ್ಪಾಡಾಗಿತ್ತು. ನವ ನಾರಸಿಂಹ ಸನ್ನಿಧಿಗಳಲ್ಲಿ ಆರು ಸನ್ನಿಧಿಗಳ ದರ್ಶನ ಸಾಧ್ಯವಾಯಿತು. ಛತ್ರವಟ ನೃಸಿಂಹ ಸನ್ನಿಧಿಯಲ್ಲಿ ಸ್ವಾಮಿಗಳು ಬಹಳ ಹೊತ್ತು ಮೂರ್ತಿಯ ಸೌಷ್ಠವವನ್ನು ಅನುಭವಿಸುತ್ತಿದ್ದರು. ಆರಾಧನೆಯಲ್ಲಿ ಉಪಯೋಗಿಸಲು ಗಂಧದ ಕೊರಡುಗಳನ್ನು ಅಳಗಿಯ ಸಿಂಗರ್ ಸ್ವಾಮಿಗಳಿಗೆ ಸಮರ್ಪಿಸಿದರು. ಆ) ೧೯೯೮ ರಲ್ಲಿ ತಿರುವಳ್ಳೂರ್ ಕ್ಷೇತ್ರದ ಸಂಪ್ರೋಕ್ಷಣೆಗಾಗಿ ಐದು ದಿನಗಳ ಪ್ರವಾಸವನ್ನು ಕೈಗೊಂಡರು. ಮೂರನೆಯ ದಿನದಂದು ಸಂಪ್ರೋಕ್ಷಣೆ ಹಾಗು ಇತರ ಕಲಾಪಗಳು ಮುಗಿದು, ಸ್ವಾಮಿಗಳು ಶ್ರೀಮುಷ್ಣಂ ಕ್ಷೇತ್ರವನ್ನು ಸಂದರ್ಶಿಸಿ ಹಿಂತಿರುಗಿದರು. ಮಾರನೆಯ ದಿನ ಅಂದರೆ ಐದನೆಯ ದಿನ ಸಾಯಂಕಾಲ ಭಾರಿ ಮಳೆಯೊಂದಿಗೆ ಬೆಂಗಳೂರಿಗೆ ಹಿಂತಿರುಗಿದರು.

ಈ ಯಾತ್ರೆಗೆ ಎರಡು ದಿನಗಳ ಮುಂಚೆ ಶ್ರೀಪೆರುಂಬೂದೂರಿನ ದೇಶಿಕ ಸನ್ನಿಧಿಯ ನೂತನ ಕಟ್ಟಡದ ಉದ್ಘಾಟನೆಗಾಗಿ ಅಭಿನವ ವಾಗೀಶರೊಂದಿಗೆ ರಂಗಪ್ರಿಯ ಸ್ವಾಮಿಗಳೂ ದಯ ಮಾಡಿಸಿದ್ದರು.

ಅಭಿನವ ವಾಗೀಶರ ೧೯೯೭ ರ ಪ್ರಥಮ ಯಾತ್ರೆಯಲ್ಲಿ ಸ್ವಾಮಿಗಳ ಆಗಮನವನ್ನೇ ನಿರೀಕ್ಷಿಸುತ್ತಿದ್ದವರ ಪೈಕಿ 'ಸೇವಾ ಸ್ವಾಮಿ' ಎಂದು ಪ್ರಸಿದ್ಧರಾಗಿದ್ದ ಶ್ರೀನಿವಾಸರಾಘವಾಚಾರ್ಯರೂ ಒಬ್ಬರು. ಇವರು ನಡೆಸುತ್ತಿದ್ದ ವಿಲ್ಲಿವಾಕಂನ ಹಯಗ್ರೀವ ದೇವಸ್ಥಾನಕ್ಕೆ ಸ್ವಾಮಿಗಳನ್ನು ಆಹ್ವಾನಿಸಿದ್ದರು. ಇವರು ಹೊರಡಿಸಿರುವ 'ದೇಶಿಕ ಸೇವಾ' ಪತ್ರಿಕೆ, ದೇಶಿಕ ದರ್ಶನ ಡೈರಿ, ನಡೆಸುತ್ತಿರುವ ದೇಶಿಕ ಸಂಶೋಧನಾ ಕೇಂದ್ರ, ಇವುಗಳ ಬಗ್ಗೆ ಮಾಹಿತಿಗಳನ್ನು ನೀಡಿ, ದೇಶಿಕ ಸಂಪ್ರದಾಯಕ್ಕೆ ಇವು ಎಷ್ಟರ ಮಟ್ಟಿಗೆ ಸಹಕಾರಿಯಾಗಿವೆ ಎಂದು ವರ್ಣಿಸಿದರು.

ಸ್ವಾಮಿಗಳು ಚೆನ್ನೈನಲ್ಲಿದ್ದಾರೆಂದು ತಿಳಿದ ಪಾಂಡಿಚ್ಚೇರಿ ಶ್ರೀವೈಷ್ಣವ ಸಭೆಯ ಸದಸ್ಯರು ತಕ್ಷಣ ಹೊರಟು ಚೆನ್ನೈಗೆ ಧಾವಿಸಿ, ಸ್ವಾಮಿಗಳನ್ನು ಆಹ್ವಾನಿಸುವುದು ಕಳೆದ ನಾಲ್ಕೈದು ಯಾತ್ರೆಗಳಿಂದ ನಡೆದುಬಂದಿದೆ. ಪಾಂಡಿಚ್ಚೇರಿ ಎಂದ ಮೇಲೆ ತಿರುವಹೀಂದ್ರಪುರಕ್ಕೆ ಹೋಗುವುದು ಸ್ವಾಮಿಗಳ ಅಭೀಚ್ಛೆಯಾಗಿದೆ.

ಇತ್ತೀಚಿನ ಚೆನ್ನೈ ಪ್ರವಾಸದಲ್ಲಿ ಅಭಿನವ ವಾಗೀಶರು ಆಳ್ವಾರ್ ಪೇಟ್ಟೈಯಲ್ಲಿರುವ ಆಂಡವನ್ ಆಶ್ರಮದ ವೇಣುಗೋಪಾಲಸ್ವಾಮಿ, ಶ್ರೀನಿವಾಸ ಮೂರ್ತಿ ಹಾಗು ಶ್ರೀಮುಷ್ಣಂ ಆಂಡವನ್ ಸ್ವಾಮಿಗಳವರನ್ನು ಸಂದರ್ಶಿಸಿ, ಅದೇ ಸಂಜೆ ಸೇಲೈಯೂರಿಗೆ ಹೊರಟು, ಹಿರಿಯ ಹಾಗು ಕಿರಿಯ ಅಳಗಿಯಸಿಂಗರ್ ಸ್ವಾಮಿಗಳನ್ನು ಸಂದರ್ಶಿಸಿದರು.

೧೯೯೮ ಜನವರಿಯಲ್ಲಿ ಅರೈಯರ್ ಶ್ರೀರಾಮಭಾರತಿಯವರ ಆಹ್ವಾನದ ಮೇರೆಗೆ, ಚೆನ್ನೈನ ಜಲಡಾಂಪಟ್ಟಿ ಬಡಾವಣೆಯ ಶ್ರೀಶಠಕೋಪ ದಿವ್ಯಪ್ರಬಂಧ ಪಾಠಶಾಲೆಗೆ ಎರಡು ದಿನಗಳ ಮುಕ್ಕಾಂ, ಸಾಯಂಕಾಲ ಆಳ್ವಾರರುಗಳ ಪಾಶುರಗಳನ್ನು ಸಂಗೀತ, ತಾಳ ಅಭಿನಯಗಳೊಂದಿಗೆ ಅರೈಯರ್ ಎಲ್ಲರನ್ನೂ ರಂಜಿಸಿದರು.

ಹೈದೆರಾಬಾದ್ ನಗರದಲ್ಲೇ ಗದ್ವಾಲ್ ಸಂಸ್ಥಾನದ ರಾಜ ರಾಮಭೂಪಾಲರ ವಂಶದವರು ಏರ್ಪಡಿಸಿದ್ದ ಡೋಲೋತ್ಸವವು ತುಂಬಾ ಆಕರ್ಷಣೀಯವಾಗಿತ್ತು. ಎರಡು ಮಹಾದ್ವಾರಗಳು, ಚಿಲುಮೆಗಳು, ವಿವಿಧ ಪುಷ್ಪ-ವೃಕ್ಷಗಳಿಂದ ಕೂಡಿದ ಆರಮನೆಯೋ ಎಂಬಂತಿರುವ ಮಹಲಿನಲ್ಲಿ ಅದ್ಭುತ ದೀಪಾಲಂಕಾರ, ೧೦-೧೫ ಕುಕ್ಕೆಗಳಲ್ಲಿ ವಿವಿಧ ರೀತಿಯ ಪುಷ್ಪಗಳು, ಹಣ್ಣುಗಳು, ಶ್ರೀಮಂತವಾದ ಪೂಜಾಗೃಹ ಇತ್ಯಾದಿ ವೈಭವದೊಂದಿಗೆ ಡೋಲೋತ್ಸವ ಮತ್ತು ಹನ್ನೆರಡು ಆರತಿಗಳು ಜರುಗಿದವು.ಅಲ್ಲಿ ನೆರೆದಿದ್ದವರೆಲ್ಲರು ಕನ್ನಡ ಭಾಷೆಯನ್ನು ಚೆನ್ನಾಗಿಯೇ ಮಾತನಾಡುತ್ತಿದ್ದರು.

ವಾಗೀಶ ಸ್ವಾಮಿಗಳ ಪ್ರಪೌತ್ರರ ಆಹ್ವಾನದ ಮೇರೆಗೆ ಗದ್ವಾಲ್ನಲ್ಲಿರುವ ಸ್ವಾಮಿಗಳ ಪೂರ್ವಾಶ್ರಮದ ಗೃಹದಲ್ಲಿ ಡೋಲೋತ್ಸವ, ಅದೇ ರಸ್ತೆಯ ಕೊನೆಯಲ್ಲಿರುವ ಅಹೋಬಿಲಮಠಕ್ಕೂ ಭೇಟಿಕೊಟ್ಟು, ಮುಂದುವರೆಯುವುದು ವಾಡಿಕೆ.

೨೦೦೨ ರಲ್ಲಿ ಧರ್ಮದರ್ಶಿಗಳ ಆಹ್ವಾನದ ಮೇರೆಗೆ ಯಾದಗಿರಿಯ ನೃಸಿಂಹ ಕ್ಷೇತ್ರವನ್ನು ಸಂದರ್ಶಿಸಿದರು. ಬೆಂಗಳೂರಿನ ಸುತ್ತಮುತ್ತ ಇರುವ ಮಲ್ಲೇಶ್ವರಂ ಕೃಷ್ಣದೇವಸ್ಥಾನ, ಯಲಹಂಕ, ವಿಜಯಪುರ, ಕೆ.ಆರ್.ಪುರಂ ನ ಶ್ರೀನಿವಾಸ ಕ್ಷೇತ್ರಗಳ ಸಂಪ್ರೋಕ್ಷಣೆ, ಬ್ರಹ್ಮೋತ್ಸವ ಮುಂತಾದವುಗಳಲ್ಲಿ ಸ್ವಾಮಿಗಳು ಆಗಿದ್ದಾಗೆ ದಯಮಾಡಿಸಿ ಪಾಲ್ಗೊಳ್ಳುವರು.

೨೦೧೦ ರಲ್ಲಿ ಕರಮನಪಲ್ಲಿ (ಕರಂಬಟ್ಟಿ) ಶ್ರೀನಿವಾಸ ಕ್ಷೇತ್ರದ ಧರ್ಮದರ್ಶಿಗಳ ಆಹ್ವಾನದ ಮೇರೆಗೆ ಕುಂಭಾಭಿಷೇಕ ಮಹೋತ್ಸವಕ್ಕಾಗಿ ಅಭಿನವ ವಾಗೀಶರು ದಯಮಾಡಿಸಿದ್ದರು. ಇದರ ಸಮೀಪದಲ್ಲಿರುವ ಲಕ್ಷ್ಮೀಪುರಂ ಕ್ಷೇತ್ರಕ್ಕೆ ಐದು ಬಾರಿ ಭೇಟಿಕೊಟ್ಟಿದ್ದಾರೆ. ಹಲವಾರು ವರ್ಷಗಳ ಹಿಂದೆ ಲಕ್ಷ್ಮೀಹಯಗ್ರೀವ, ಕೇತಾಂಡಪಟ್ಟಿ ಸ್ವಾಮಿಗಳ ವಿಗ್ರಹಗಳನ್ನೂ, ಇವರ ಶಿಷ್ಯತ್ರಯರ ಪಾದುಕೆಗಳನ್ನೂ ಪ್ರತಿಷ್ಠಾಪಿಸಲಾಯಿತು. ಇಲ್ಲಿಂದ ಸುಮಾರು ೩೦ ಕಿಲೋಮೀಟರ್ ದೂರದಲ್ಲಿರುವ ಶ್ರೀರಂಗರಾಮಾನುಜ ಮಹಾದೇಶಿಕರ ಅವತಾರಸ್ಥಳವಾದ ಕೇತಾಂಡಪಟ್ಟಿ ಕ್ಷೇತ್ರಕ್ಕೆ ತೆರಳಿ ಸಂದರ್ಶಿಸುವುದು ಸ್ವಾಮಿಗಳ ಸಂಕಲ್ಪವಾಗಿರುತ್ತದೆ.

ಶ್ರೀಮಠದ ನೂತನ ಶಾಖೆಗಳು

೧. ೧೯೯೭ ರಲ್ಲಿ ಅಭಿನವ ರಾಮಾನುಜರ ರಾಮನಾಥಪುರದ ಪ್ರವಾಸ ಗಮನಾರ್ಹವಾದುದು. ಆ) ಹಯಗ್ರೀವ ಮಂದಿರ ಹಾಗು ವಿದ್ಯಾರ್ಥಿ ನಿಲಯದ ನಿರ್ಮಾಣದ ಬಗ್ಗೆ ಸ್ಥಳೀಯರೊಂದಿಗೆ ದೀರ್ಘ ಚರ್ಚೆ ಮಾಡಿದರು. ಆದರೆ ಮುಂಬರುವ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವರ್ಷಗಳಲ್ಲಿ ಮೈಸೂರಿನ ಕಲ್ಯಾಣ ಮಂಟಪದ ನಿರ್ಮಾಣ ಯೋಜನೆ ಇದನ್ನು ಹಿಂದಿಕ್ಕಿತು. ಆ) ವಜ್ರ ಡೋಲೋತ್ಸವಕ್ಕಾಗಿ ಇಡೀ ಊರಿನ ಜನರು ಪ್ರಾರ್ಥಿಸಿದ್ದರು. ಆದರೆ ಭದ್ರತಾ ದೃಷ್ಟಿಯಿಂದ ಡೋಲಿಕೆಯನ್ನು ಯಾತ್ರೆಯಲ್ಲಿ ತರಲಿಲ್ಲ. ಇಂದಿನ ಸ್ವಾಮಿಗಳು (ಅಂದು ಶ್ರೀನಿವಾಸಾಚಾರ್ಯ [ದೊಚ್ಚು ಶತ್ಯ]) ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ನನ್ನ ಕಡೆ ಬೆರಳು ಮಾಡಿ "ಗೋವಿಂದ ಇದ್ದಾನಲ್ಲ. ಮೈಸೂರಿಗೆ ಹೋಗಿ ಡೋಳಿಕೆಯನ್ನು ತರಲಿ" ಎಂದು ಸಲಹೆ ಕೊಟ್ಟಿದ್ದಕ್ಕೆ ಸ್ವಾಮಿಗಳು ಒಪ್ಪಿದರು. ಶ್ರೀಮಠದ ವಾಹನದಲ್ಲಿಯೇ ಮೈಸೂರಿಗೆ ಹೋಗಿ ಡೋಳಿಕೆಯನ್ನು ತಂದೊಪ್ಪಿಸುವಷ್ಟರಲ್ಲಿ ಹತ್ತು ಜನ ಶಿಷ್ಯರಿಗೆ ಚಕ್ರಾಂಕನವು ಮುಗಿದಿತ್ತು.

೨. "ನೂರು ತಡಾ ವೆಣ್ಣೈ ನೂರು ತಡಾ ನಿರೈಂದ ಆಕ್ಕಾರವಡಿಸಿಲ್" ಎಂಬ ಆಂಡಾಳ್ ಮಾತೆಯ ಹರಕೆಯನ್ನು ಭಗವದ್ರಾಮಾನುಜರು ನೆರವೇರಿಸಿದಂತೆ, ಪೆರಿಯ ಸ್ವಾಮಿ ಶ್ರೀಮದಭಿನವ ರಂಗನಾಥರ ಅಭೀಷ್ಟವಾಗಿದ್ದ "ತಿರುಪತಿ ವಿದ್ವತ್ ಸಭೆ" ಎಂಬ ಶ್ರೀಮಂತ ಸಂಪ್ರದಾಯವನ್ನು ಅಭಿನವ ವಾಗೀಶರು ೨೦೦೧ ಸೆಪ್ಟೆಂಬರ್ನಲ್ಲಿ ನೆರವೇರಿಸಿದರು. ಹಲವಾರು ವರ್ಷಗಳಿಂದ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ೨೦೦೧ ರಲ್ಲಿ ಹಯಗ್ರೀವ ಕಲ್ಯಾಣಮಂಟಪ (ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠದ ತಿರುಮಲೆಯ ಶಾಖೆ) ಅಸ್ತಿತ್ವಕ್ಕೆ ಬಂದು, ವಿದ್ವತ್ ಸಭೆ ಪ್ರಥಮ ಮಂಗಳ ಕಾರ್ಯವಾಯಿತು. ಈ ನೂತನ ಕಟ್ಟಡವು ಅಹೋಬಿಲ ಮಠ ಹಾಗು ಆಂಡವನ್ ಆಶ್ರಮದ ಕಟ್ಟಡಗಳ ಸಮೀಪವಿದೆ. ಕಲ್ಯಾಣ ಮಂಟಪಗಳ ಸಂಕೀರ್ಣ ಎಂದರೆ ಸರಿಹೊಂದುವುದು. ಆಲಯದ ಎದುರಿಗಿದ್ದ ಹಯಗ್ರೀವ ಸನ್ನಿಧಿ ಹಾಗು ಶ್ರೀಮಠ ಸ್ಥಳಾಂತರಗೊಂಡುವು.

ಅದು ಬ್ರಹ್ಮೋತ್ಸವ ಕಾಲವಾದ್ದರಿಂದ ಪ್ರತಿನಿತ್ಯವೂ ಶ್ರೀಮಠದಲ್ಲಿ ಬೆಳಗ್ಗೆ ೧೦–೧೨ ವಿವಿಧ ವೇದ ಪಾರಾಯಣ ಗೋಷ್ಠಿಗಳಿಂದ ಸುಮಾರು ೧ ಘಂಟೆ ಪಾರಾಯಣಗಳು ಜರುಗಿದುವು. ಅಭಿಗಮನ ಆರಾಧನೆಯಲ್ಲಿ ತೀರ್ಥ ಶಠಾರಿಯ ಸಮಯಕ್ಕೆ ಆಲಯದ ಅರ್ಚಕ ವರ್ಗದವರೂ, ಅಧಿಕಾರಿಗಳೂ, ಇತರ ಗಣ್ಯರೂ ಆಗಮಿಸುತ್ತಿದ್ದರು. ನಮಗೆಲ್ಲಾ ಈ ಯಾತ್ರೆ ತುಂಬಾ ತೃಪ್ತಿಯನ್ನು ತಂದಿತು. ಕಾರಣ ಆ) ಬೆಳಗ್ಗೆ ೭ ಘಂಟೆಗೆ ಜೀಯರ್ಸ್ವಾಮಿಗಳ ಜೊತೆ ಶಾತ್ತುಮುರೈ ಸೇವೆ. ಆ) ಬೆಳಗ್ಗೆ ಹಾಗು ಸಾಯಂಕಾಲದ ಹೊರ ಪ್ರಾಕಾರೋತ್ಸವಗಳಲ್ಲಿ ಪ್ರಬಂಧ ಗೋಷ್ಠಿಯೊಂದಿಗೆ ಸೇರಿ, ಎರಡು ಬಾರಿ ಮೂಲವರ ಸೇವೆ. ಇ) ಪ್ರತಿ ಸಂಜೆ ಶ್ರೀವಿಲ್ಲಿಪುತ್ತೂರಿನಿಂದ ಬಂದ ಘನ ಪುಷ್ಪಹಾರದ ಬುಟ್ಟಿಯನ್ನು ಜೀಯರ್ ಸ್ವಾಮಿಗಳು ಶಿರಸ್ಸಿನ ಮೇಲಿಟ್ಟುಕೊಂಡು ಮೂಲವರ ಸನ್ನಿಧಿಗೆ ತೆರಳುವಾಗ, ಅಭಿನವ ವಾಗೀಶರೊಂದಿಗೆ ದಿನಕ್ಕೊಬ್ಬರಂತೆ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದರು. ನನ್ನ ಜೀವಮಾನದಲ್ಲಿಯೇ ೪೦ ನಿಮಿಷಗಳ ಕಾಲ ಮೂಲವರ ಸೇವೆ ಮಾಡಿದ್ದು ಮರೆಯಲಾಗದ ಘಟನೆ. ಈ) ಪ್ರತಿ ರಾತ್ರಿ ದೀಪಾಲಂಕಾರದಲ್ಲಿ ವಿವಿಧ ವಾಹನಗಳಲ್ಲಿ ಉತ್ಸವರ ದರ್ಶನ. ಉ) ಮಳೆಯ ಕಾರಣ ದೂರದಿಂದಲೇ ರಥೋತ್ಸವವನ್ನು ದರ್ಶನ ಮಾಡಿದೆವು. ಊ) ಶ್ರವಣದ ದೇಶಿಕರ ತಿರುನಕ್ಷತ್ರದಂದು ಪೆರಿಯ ಶಾತ್ತುಮುರೈಯನ್ನು ಮುಗಿಸಿಕೊಂಡು ಚಕ್ರಸ್ನಾನ (ಅವಭೃತ) ದಲ್ಲಿ ಪಾಲ್ಗೊಳ್ಳಲು ಸ್ವಾಮಿಗಳು ಪುಷ್ಕರಿಣಿಗೆ ತೆರಳಿದರು. ಋ) ಸೆಪ್ಟೆಂಬರ್ ೨೪ ರಂದು ಮಧ್ಯಾಹ್ನ ೩ ಘಂಟೆಗೆ ವಿದ್ವತ್ ಸದಸ್ಸಿನಲ್ಲಿ ಶ್ರೀರಂಗಪ್ರಿಯ ಸ್ವಾಮಿಗಳು, ಕಂಚೀ ಕಾಮಕೋಟಿ ಪೀಠದ ಸ್ವಾಮಿಗಳೂ ಉಪಸ್ಥಿತರಿದ್ದರು. ಅಭಿನವ ವಾಗೀಶರು ಶ್ರೀನಿವಾಸ ಹಾಗು ವ್ಯೂಹ ಪಂಚಕ ಎಂಬ ವಿಷಯವನ್ನು ಆರಂಭಿಸಿದರು. ೠ) ತಿರುಮಲೆಯನ್ನು ನಿರ್ಗಮಿಸುವಾಗ ಸ್ವಾಮಿಗಳೊಂದಿಗೆ ಪರಿವಾರದ ನಾವೆಲ್ಲರೂ ಮೂಲವರ ಸೇವೆಯನ್ನು ಮಾಡಿ ಕೃತಾರ್ಥರಾದೆವು.

ಕೆಳಗಿನ ತಿರುಪತಿಯಲ್ಲಿ ತಿರುಚ್ಚಾನೂರು ಸಮೀಪದಲ್ಲಿನ ನವಜ್ಯೋತಿ ನೇತ್ರಧಾಮ ಎಂಬ ಅಂಧ ಬಾಲಕ–ಬಾಲಕಿಯರ ಆಸ್ಪತ್ರೆ ಹಾಗು ವಸತಿ ಸಹಿತ ಹಾಸ್ಟೆಲ್ನಲ್ಲಿ ಬಿಡಾರ ಮಾಡಿ ಎಲ್ಲರಿಗೂ ಅನುಗ್ರಹಿಸಿ ಮಧ್ಯಾಹ್ನ ತಾಯಾರ್ ಸೇವೆಯನಂತರ ಶ್ರೀ ಗೋವಿಂದರಾಜಸ್ವಾಮಿಯನ್ನು ಸಂದರ್ಶಿಸಿದರು. ಆಲಯದ ಮಾರ್ಗದಲ್ಲಿದ್ದ ಪರಕಾಲ ಮಠದ ಶಾಖೆಗೂ ಭೇಟಿ ಕೊಟ್ಟರು.

೩. ಅಭಿನವ ವಾಗೀಶರ ಚೆನ್ನೈನ ಸಂಕೀರ್ಣ ಯಾತ್ರೆಯಲ್ಲಿ ಇಡೀ ಶ್ರೀವೈಷ್ಣವ ಸಮುದಾಯಕ್ಕೆ ಬಳುವಳಿಯೊಂದು ಕಾದಿತ್ತು. ಮೈಲಾಪುರದ ಪಲ್ಲಾತೋಪ್ಪಿನಲ್ಲಿ (ರೈಲು ನಿಲ್ದಾಣದ ಬಳಿ) ಎರಡಂತಸ್ತಿನ ಭಾರೀ ಹಯಗ್ರೀವ ಭವನ ಅಸ್ತಿತ್ವಕ್ಕೆ ಬಂದಿತು. ಇದರಿಂದ ೧) ಸ್ವಾಮಿಗಳ ವಸತಿ ಸಮಸ್ಯೆ ಬಗೆ ಹರೆಯಿತು. ೨) ಸ್ವತಂತ್ರ ಸಂಸ್ಥೆಯಾಗಿ ಧಾರ್ಮಿಕ ಅಭಿವೃದ್ಧಿ ಹಾಗು ಆಡಳಿತದ ಉಪಕೇಂದ್ರವೂ ಆಯಿತು. ೩) ಶ್ರೀಮಠದ ಗೌರವ ಪ್ರತಿಷ್ಠೆಗಳ ಪತಾಕೆ ಏರಿ ಎಲ್ಲೆರಿಂದಲೂ ಗುರುತಿಸಲ್ಪಟ್ಟಿತು.

ಇದಕ್ಕೆ ಮುಂಚೆ ೧೯೬೭ ರ ಪ್ರಥಮ ಯಾತ್ರೆಯಿಂದಲೂ ದ್ವಿಕೇಂದ್ರೀಕರಣದ ಬಿಡಾರ ವ್ಯವಸ್ಥೆ ಅನಿವಾರ್ಯವಾಗಿತ್ತು. ಅಂದು ಶ್ರೀಪೆರುಂಬೂದೂರಿನಲ್ಲಿ ಅನುಷ್ಠಾನಗಳನ್ನು ಮುಗಿಸಿಕೊಂಡು ಚೆನ್ನೈ ಸೇರಿದಾಗ ರಾತ್ರಿ ೦೯–೦೮ ಘಂಟೆಯಾಗಿತ್ತು. ಆದ್ದೂರಿಯ ಸ್ವಾಗತದೊಂದಿಗೆ ಆಳ್ವಾರ್ ಪೇಟೆಯ ಆಂಡವನ್ ಆಶ್ರಮವನ್ನು ಸೇರಿ, ಅಲ್ಲಿ ಒಂದು ೧೦–೧೨ ದಿನಗಳೂ, ನಂತರ ಓರಿಯಂಟಲ್ ಶಾಲೆ, ನಂತರ ಮೈಲಾಪುರದ ದೇಶಿಕರ ಸನ್ನಿಧಿ, ನಂಗನಲ್ಲೂರು ಸಮುದಾಯ ಭವನ ಹಾಗು ಭಕ್ತರ ಗೃಹಗಳಲ್ಲಿ ತಲಾ ೨–೩ ದಿವಸಗಳ ಬಿಡಾರ ಮಾಡಿದರು. ಈ ವ್ಯವಸ್ಥೆಯಲ್ಲಿ ವಿವಿಧ ಬಡಾವಣೆಗಳಲ್ಲಿರುವ ಭಕ್ತರಿಗೆ ಸೇವಾವಕಾಶಗಳು ಹಾಗು ಶ್ರೀಮಠಕ್ಕೆ ಒಳ್ಳೆಯ ಪ್ರಚಾರ ದೊರೆಯುತ್ತಿತ್ತು.

೪. ಹೈದೆರಾಬಾದಿನಲ್ಲಿಯೂ ಬಹಳ ವರ್ಷಗಳ ಕಾಲ ವಿಕೇಂದ್ರೀಕೃತವಾದ ಬಿಡಾರ ವ್ಯವಸ್ಥೆಯಲ್ಲಿ ಹಳೆಯ ಹೈದರಾಬಾದ್ ಬಾಗಂಪೇಟೆಯ ಅಹೋಬಿಲ ಮಠದಲ್ಲಿ ಹಲವಾರು ದಿನಗಳೂ, ಸಿಕಂದರಾಬಾದಿನ ಪಶ್ಚಿಮ ಮರೇಡ್ ಪಲ್ಲಿಯ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಹಲವಾರು ದಿನಗಳೂ, ಆಲವಾಲ್, ಕಪಾರಾ ಬಡಾವಣೆಯ ಆಂಡವನ್ ಆಶ್ರಮ ಹಾಗು ಭಕ್ತರ ಗೃಹಗಳಲ್ಲಿ ಎರಡೆರಡು ದಿನಗಳ ಬಿಡಾರ ವ್ಯವಸ್ಥೆಯಲ್ಲಿ ಈ ಅವಳೀ ನಗರದ ಎಲ್ಲಾ ಭಕ್ತರಿಗೂ ಸೇವಾವಕಾಶವಾಯಿತು. ೨೦೧೦ ರಲ್ಲಿ ಮಾಡಿದ ಯಾತ್ರೆ ಗಮನಾರ್ಹ. ನಗರದ ಉಪ್ಪಲ್ ಬಡಾವಣೆಯ ಮೇತಪಲ್ಲಿಯಲ್ಲಿ ಶ್ರೀಮಠದ ಶಾಖೆ ಅಧಿಕೃತವಾಗಿ ಆರಂಭವಾಯಿತು. ಈ ಸತ್ಕಾರ್ಯವು ೨೦೦೨ರಲ್ಲಿಯೇ ಗಣ್ಯರು ಹಾಕಿಕೊಂಡಿದ್ದ ಯೋಜನೆ ಹಾಗು ದೀರ್ಘ ಚರ್ಚೆಗಳೊಂದಿಗೆ ಆರಂಭವಾಯಿತು. ಭಕ್ತರೊಬ್ಬರು ಖಾಲೀ ನಿವೇಶವೊಂದನ್ನು ದಾನ ಮಾಡಿದರು. ಇನ್ನೂ ಕೆಲ ಭಕ್ತರು ಕಟ್ಟಡಗಳಲ್ಲಿ ಬರುವ ವಿವಿಧ ಹಂತಗಳ ನಿರ್ಮಾಣಕ್ಕಾಗಿ ಅಂದೇ ಆಶ್ವಾಸನೆಯನ್ನಿತ್ತರು. ಳಖನೇಯ ಆಳಗಿಯ ಸಿಂಗರ್ ಸ್ವಾಮಿಗಳ ಸಮ್ಮುಖದಲ್ಲಿ ನಮ್ಮ ಸ್ವಾಮಿಗಳು ಫಲ ಮಂತ್ರಾಕ್ಷತೆಯೊಂದಿಗೆ ಭೂಮಿ ಪೂಜೆಯನ್ನು ಮಾಡಿದ್ದರು. ಈ ನೂತನ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶಾಖೆಯಲ್ಲಿ ಶ್ರೀಲಕ್ಷ್ಮೀಹಯಗ್ರೀವ, ಶ್ರೀನಿವಾಸ, ಮಹಾಲಕ್ಷ್ಮೀದೇವಿಯವರ ಅರ್ಚಾ ವಿಗ್ರಹಗಳೂ, ಪಂಚಲೋಹದ ಉತ್ಸವ ಮೂರ್ತಿಗಳೂ ಹಾಗು ಆಳ್ವಾರಾಚಾರ್ಯಮೂರ್ತಿಗಳು ಪ್ರತಿಷ್ಠಿತವಾಗಿವೆ. ಪ್ರತ್ಯೇಕವಾಗಿ ಸುದರ್ಶನ, ಹನುಮರ ಸನ್ನಿಧಿಗಳಿವೆ. ಪ್ರತಿಷ್ಠಾಪನೆಯ ಕಾರ್ಯವು ಬೆಂಗಳೂರಿನ ಅರ್ಚಕ ತಂಡದವರಿಂದ ಚೆನ್ನಾಗಿಯೇ ನಡೆಯಿತು. ಕಡಿಮೆಯೆಂದರೆ ೨೦೦೦ ಭಕ್ತರು ಹೋಮ, ಹವನ, ತಿರುಮಂಜನ, ಶಾತ್ತುಮುರೆಗಳಲ್ಲಿ ಪಾಲ್ಗೊಂಡಿದ್ದರು. ಕಾರ್ಯಕಾರಿ ಸಮಿತಿಯು ಶ್ರದ್ಧೆ ವಹಿಸಿ ತುಂಬಾ ಶ್ರಮಿಸಿ ಈ ಸಾಹಸ ಕಾರ್ಯವನ್ನು ಮಾಡಿರುವುದು ಅಭಿನವ ವಾಗೀಶರಿಗೆ ಅತ್ಯಾನಂದವನ್ನುಂಟುಮಾಡಿದೆ.

ಇತ್ತೀಚಿನ ಪಾಂಡಿಚ್ಚೇರಿ ಯಾತ್ರೆಯಲ್ಲಿ ಸ್ವಾಮಿಗಳ ವಸತಿ ಸೌಕರ್ಯಕ್ಕಾಗಿ ಭಕ್ತರೊಬ್ಬರು ವರದರಾಜ ತಿರುಮಾಳಿಗೈ ಎಂಬ ತಮ್ಮ ಗೃಹವನ್ನೇ ದಾನಮಾಡಿರುತ್ತಾರೆ.

ಇತರ ಅದ್ಭುತ ಘಟನಾವಳೀ ೧೯೯೯–೨೦೦೦

೧. ತುಂಬಾ ದೀರ್ಘ ಯಾತ್ರೆಯೆಂದರೆ ಮುಂಬಾಯಿ, ಸೂರತ್, ಬರೋಡಾ, ಅಹಮದಾಬಾದ್. ಈ ಯಾತ್ರೆಯಲ್ಲಿ ಮಹಾರಾಷ್ಟ್ರ ರಾಜ್ಯ ಕಾರ್ಯದರ್ಶಿಗಳ ಆಜ್ಞೆಯಮೇರೆಗೆ ಪೋಲೀಸ್ ಭದ್ರತಾ ವ್ಯವಸ್ಥೆ ಬಿಗಿಯಾಗಿತ್ತು. ಇದರಲ್ಲಿ ಒಂದು ಉಲ್ಲೇಖಾರ್ಹ. ಮುಂಬಾಯಿ–ಸೂರತ್ ಭಾರತದಲ್ಲಿಯೇ ಹೆಚ್ಚಿನ ಸಾಂದ್ರತೆಯುಳ್ಳ ಹೆದ್ದಾರಿ. ಲಾರಿಗಳು ಒಂದು ಕಿಲೋಮೀಟರ್ ಉದ್ದಕ್ಕೂ ಸರಪಣಿಯಂತೆ ಕಾಣುವುವು. ಪೈಲಟ್ ಜೀಪಿನಲ್ಲಿ ಪೋಲೀಸರು ವೇಗವಾಗಿ ಚಲಿಸಿ ಇವುಗಳ ಮುಂದೆ ಬಂದು ಹಾಗು ಎದುರುಕಡೆಯಿಂದ ಬರುವ ವಾಹನಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಸ್ವಾಮಿಗಳ ಯಾತ್ರೆ ಸುಗಮವಾಗಿ ಮುಂದುವರೆಯಲು ಅನುಕೂಲಮಾಡಿಕೊಟ್ಟರು.

೨. ಪಟೇಲ್ ಮನೆತನದ ಭಕ್ತರು ಈ ಮೂರೂ ಪಟ್ಟಣಗಳಲ್ಲಿ ಸ್ವಾಮಿಗಳನ್ನು ಚೆನ್ನಾಗಿ ಭಾವಿಸಿ ಗೌರವಿಸಿದರು. ಸೂರತ್ ನ ಅಖಂಡ ಸಹಸ್ರನಾಮ ಗೋಷ್ಠಿ ಉಲ್ಲೇಖಾರ್ಹ. ಪ್ರತಿ ಶನಿವಾರ ಹಾಗು ಭಾನುವಾರ ನಗರದ ವಿವಿಧ ಭಜನ ಮಂದಿರಗಳಲ್ಲಿ ಮದುವೆಯ ಕರೆಯೋಲೆಯಂತೆ ಆಹ್ವಾನ ಪತ್ರಿಕೆಗಳನ್ನು ಸ್ವೀಕರಿಸಿದ ಭಕ್ತರ ತಂಡ ದಿನಕ್ಕೆ ಹನ್ನೆರಡು ಬಾರಿ ಪಠಿಸುವುದು. ಎರಡು ದಿನಗಳ ಮುಕ್ಕಾಂ ನಲ್ಲಿ ಸ್ವಾಮಿಗಳು ತಪತಿಯಲ್ಲಿ ಮಿಂದು ಅಭಿಗಮನ ಆರಾಧನೆಯನ್ನು ನೆರವೇರಿಸಿದರು. ಸುಮಾರು ಐದು ಕಿಲೋಮೀಟರ್ ದೂರದ ಹೊಲಗದ್ದೆ ನಿವಾಸಕ್ಕೆ ತೀರ್ಥ ಶಠಾರಿಗಾಗಿ ಸಹಸ್ರನಾಮ ಗೋಷ್ಠಿಯೂ ಹಾಗು ನೂರಾರು ಭಕ್ತರು ಬಂದು ಸೇರುತ್ತಿದ್ದರು.

೩. ದಾಬಾಯ್ ಎಂಬ ಸಣ್ಣ ಪಟ್ಟಣದಲ್ಲಿ ಪೆರಿಯ ಸ್ವಾಮಿ ಅಭಿನವ ರಂಗನಾಥರ ಶಿಷ್ಯರೊಬ್ಬರು ಶ್ರೀನಿವಾಸ ಕ್ಷೇತ್ರವನ್ನು ನಡೆಸುತ್ತಿದ್ದರು. ಇಲ್ಲಿ ಅಭಿನವ ವಾಗೀಶರು ಎರಡು ದಿನಗಳು ಬಿಡಾರ ಮಾಡಿದ್ದರು. ಬರೋಡಾ–ಅಹ್ಮದಾಬಾದ್ ಹೆದ್ದಾರಿಯಲ್ಲಿರುವ ಸ್ವಾಮಿ ನಾರಾಯಣ ಆಶ್ರಮಕ್ಕೆ ಭೇಟಿ ಕೊಟ್ಟು ಬರೋಡಾದ ಪಟೇಲರ ಗೃಹಕ್ಕೆ ಬಂದಾಗ ರಾತ್ರಿ ೧೧ ಘಂಟೆಯಾಗಿತ್ತು. ಆದರೂ ಅಂದು ಶುಕ್ರವಾರದ ಪ್ರಯುಕ್ತ ಹನ್ನೆರಡು ಆರತಿಗಳು ಬೆಳಗಿದುವು. ಯಾತ್ರೆಯಿಂದ ಹಿಂತಿರುಗುವಾಗ ಬರೋಡಾದಿಂದ ಮುಂಬಾಯಿಯ ದೊಂಬಿವಿಲಿಯಲ್ಲಿ ಒಂದು ದಿನ ಬಿಡಾರ ಮಾಡಿ ಮಾರನೆಯ ದಿನ ಪೂನಾ–ಧಾರವಾಡಾ–ದಾವಣಗೆರೆ ದ್ವಾರಾ ಮೈಸೂರನ್ನು ತಲುಪಿದರು. ಮಾರ್ಗದ ಮಧ್ಯೆ ಕೊಲ್ಲಾಪುರ ಕ್ಷೇತ್ರದ ಮೂಲಕ ಹೋಗಬೇಕಾಗಿದ್ದುದರಿಂದ ಪೋಲೀಸರ ನೆರವಿನಿಂದ ದರ್ಶನ ಮಾಡಿ ಮುಂದುವರೆದವು.

ಒಂದೆರಡು ದಶಕಗಳಿಂದಲೂ ಅನೂಚಾನವಾಗಿ ನಡೆದುಬಂದಿರುವ ಸತ್ಸಂಪ್ರದಾಯವೆಂದರೆ ಸತ್ಯಾಗಾಲ ಕ್ಷೇತ್ರದಲ್ಲಿನ ಅವಭೃತ. ೨೦೧೦ ನೇ ವರ್ಷ ಈ ಕ್ಷೇತ್ರದ ಭಾಗ್ಯೋದಯವೆಂದು ಹೇಳಬೇಕು. ಕಾರಣ ಅ) ವರದರಾಜ ದೇವಸ್ಥಾನದ ರಾಜಗೋಪುರದ ನಿರ್ಮಾಣ, ಆ) ಇದಕ್ಕೇ ಸೇರಿದ ಶ್ರೀಮಠದ ಕಟ್ಟಡಗಳ ವ್ಯಾಪ್ತಿ.

ಪ್ರತಿವರ್ಷವೂ ಚಾತುರ್ಮಾಸ ಸಂಕಲ್ಪದ ಅಂತಿಮ ಕಾರ್ಯಕ್ರಮವಾದ 'ಉತ್ಥಾನ' ಶ್ರೀರಂಗಪಟ್ಟಣದ ಕೊಪ್ಪಲು ಮಠದಲ್ಲಿ ನೆರವೇರುವುದು. ಆಂದು ಕಾವೇರಿಯಲ್ಲಿ ಚಿಕ್ಕ ಸಂಪುಟದಲ್ಲಿರುವ ಮೂರ್ತಿಗಳಿಗೆ ಸ್ನಾನ ಹಾಗು ಸ್ವಾಮಿಗಳು ತೀರ್ಥಾನುಷ್ಠಾನಗಳನ್ನು ಮಾಡಿ ಮಠಕ್ಕೆ ದಯಮಾಡಿಸಿ, ಅಭಿಗಮನ, ತೀರ್ಥ ಶಠಾರಿ, ಶ್ರೀನಿವಾಸ ಬ್ರಹ್ಮತಂತ್ರ ಸ್ವಾಮಿ ಹಾಗು ಶ್ರೀನಿವಾಸ ದೇಶಿಕೇಂದ್ರ ಸ್ವಾಮಿಗಳ ಬೃಂದಾವನಗಳನ್ನು ಪ್ರದಕ್ಷಿಣೆ ಮಾಡಿ, ಭಾಗವತರುಗಳಿಗೆ ಸಂಭಾವನೆ, ಭೋಜನ ಕಲಾಪಗಳ ನಂತರ ಮೈಸೂರಿಗೆ ತೆರಳುವರು.

ಕೊನೆಯ ಮಾತು

ಕೈಂಕರ್ಯ ಮಾಡುವವರ ಸಂಖ್ಯೆ, ಅದರಲ್ಲಿಯೂ ಆರಾಧಕ ಪರಿಚಾರಕ ವರ್ಗ ತೀರ ಕಡಿಮೆ. ಉಭಯವೇದ ಗೋಷ್ಠಿಯ ಕೊರತೆ, ವಾಹನ ಚಾಲಕರ ಕೊರತೆ, ಇನ್ನೂ ತತ್ಸಂಬಂಧಿತ ಸಮಸ್ಯೆಗಳೊಂದಿಗೆ ಇದುವರೆಗೂ ಅಭಿನವ ವಾಗೀಶರು ಬಹಳ ಶ್ರಮಿಸಿ ಎಲ್ಲಾ ಯಾತ್ರೆಗಳನ್ನೂ ಯಶಸ್ವಿಯಾಗಿ ನೆರವೇರಿಸಿರುವುದು ಅವರ ಧೃಢಸಂಕಲ್ಪ, ನಿಷ್ಠೆ ಹಾಗು ನಿರ್ವಹಣೆಯ ಸಾಮರ್ಥ್ಯಕ್ಕೆ ಕುರುಹಾಗಿದೆ.

ಶ್ರೀಲಕ್ಷ್ಮೀ ಹಯಗ್ರೀವ ದಿವ್ಯ ಪಾದುಕಾ ಸೇವಕ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾ ದೇಶಿಕಾಯ ನಮಃ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀವರದನಾಥ ವೈಭವಂ

ಶ್ರೀಮಲ್ಲಕ್ಷ್ಮಣಯೋಗೀಂದ್ರ ಸಿದ್ಧಾಂತವಿಜಯಧ್ವಜಂ ।
ವಿಶ್ವಾಮಿತ್ರಕುಲೋದ್ಭೂತಂ ವರದಾರ್ಯಂ ಅಹಂ ಭಜೇ ॥

ಅಷ್ಟಮಿಯ ಚಂದಿರನು ರೋಹಿಣಿಯಲಿ ಮಿನುಗುತಿರೆ
ಬುಧಜನರು ಕೃಷ್ಣನಾ ವೈಭವವ ಪಠಿಸುತಿರೆ
ಶೇಶನಾ ದರ್ಶನಕೆ ಧ್ವಜಪಟವು ತಾನಾಗಿ
ಜನಿಸಿದನು ವರದನು ದೇಶಿಕನಿಗೆ ಶಿಶುವಾಗಿ ..೧..

ಯಾದವನು ನಂದನಿಗೆ ತೋರಿದಾ ಹರುಷವನು
ವರದನು ದೇಶಿಕನಿಗೆ ತೋರಿದನು ತಾ ಬಂದು
ದೀಪದಿಂ ಬೆಳಗಿದಾ ದೀಪಸಮ ತಾ ಮಿನುಗಿ
ಬೆಳಗಿದನು ದೇಶಿಕನಾ ಪದಕಮಲ ತಾನಾಗಿ ..೨..

ತಂದೆಯೂ ಗುರುಗಳೂ ಆಗಿರಲು ದೇಶಿಕನು
ನಿಂತನೂ ವರದನು ತನ ಭಾಗ್ಯ ನೆನೆಯುತಲಿ
ದೇಶಿಕನ ಪದಛಾಯೆ ತನ ಬೀಡು ಎಂದಿದ್ದು
ನುಡಿದನು ಪ್ರಾಪ್ಯವು ಪ್ರಾಪಕನು ನೀನೆಚಿದು ..೩..

ದೈವವು ದೇಶಿಕನು, ಅವನುಡಿಯು ವೇದಗಳು
ಎನ್ನುತಾ ಪೊಗಳಿದನು ತನ ಸ್ವಾಮಿ ಹಿರಿಮೆಯನು
ಸೃಷ್ಟಿಸಿದನು ಪುಷ್ಪಗಳ ಮಾಲೆಯನು ಭಕ್ತಿಯಲಿ
ಎರಗಿದನು ಅವುಗಲನು ತನ ನಾಥ ಚರಣದಲಿ ..೪..

ಶಠಕೋಪನಾದನು ಆಲೆಲೆಯು ಪ್ರಲಯದೀ
ಕೇಶವನು ತಾ ಬಂದು ಆದಮೇಲೆ ಮಲಗಿದನು
ಯಾದವನು ಕಲಿಯುಗದಿ ವರದನಾಗಿರಲೀಗ
ಪಡೆದನು ಮಾರನಾ ಪರಮಕೃಪೆ ತನಗೆಂದು ..೫..

ಕವಿಕಥಕ ಸಿಂಹನು ನಿನ ಧನವು ಆಗಿರಲು
ಆ ಚರಣಗಳನುಪಚರಿಸುವ ನಿತ್ಯ ನೀನಾಗಲು
ಧನ್ಯನು ನೀನಯ್ಯ ದೇಶಿಕನ ಪಡೆದಿರಲು
ಆಗುವರು ಧನ್ಯರು ನಿನೆ ಮಹಿಮೆ ಪಾಡುವವರು ..೬..

ಶ್ರಾವಣೇ ಮಾಸಿ ರೋಹಿಣ್ಯಾಂ ಜಾತಂ ವೇಂಕಟದೇಶಿಕಾತ್ ।
ವಿಶ್ವಾಮಿತ್ರಾನ್ವಯಾಬ್ಧೀಂದುಂ ವರದಾರ್ಯಮಹಂ ಭಜೇ ॥

ಶ್ರೀವರದನಾಥ ನಯನಾರಾಚಾರ್ಯ ಮಹಾ ದೇಶಿಕಾಯ ನಮಃ

Srimath Kavitarkika Brahmatantra Swatantra Parakala Swamy (13th pattam) has written a maha-kavyam on Swamy Deshika titled "*Venkatanatheeyam*". He also authored a commentary to Srimadrahasyatrayasaram using the Srisuktis of Swamy Deshika itself as the final pramanam. Unfortunately, both the works have not stood the test of time.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ

ಅವ್ಯಾಜ ಪ್ರೀತಿಯ ಅನಂತಾಚಾರ್ಯರು

ಶ್ರೀಮಾನ್ ಉ|| ವೇ|| ಎಸ್. ಶ್ರೀಧರ್, ಬೆಂಗಳೂರು

ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿಗಳ ಸರಳತೆ, ಸಜ್ಜನಿಕೆಗಳು ಚಿಕ್ಕಂದಿನಲ್ಲಿಯೇ ನನ್ನನ್ನು ಅವರತ್ತ ಆಕರ್ಷಿಸಿದ್ದವು. ಅನಂತಾಚಾರ್ ಎಂಬ ನಾಮಧೇಯದಿಂದ ಸ್ವಾಮಿಗಳು ಪೂರ್ವಾಶ್ರಮದಲ್ಲಿ ಹಾಸನದ ಮುನಿಸಿಪಲ್ ಹೈಸ್ಕೂಲಿನಲ್ಲಿ ಸಂಸ್ಕೃತ ಪಂಡಿತರಾಗಿ ಕೆಲಸ ಮಾಡುತ್ತಿದ್ದಾಗ ನಮ್ಮ ಅಜ್ಜಿ ಶ್ರೀಮತಿ ಜಾನಕಮ್ಮನವರ (ಕನ್ನಡ ಪಂಡಿತರಾಗಿದ್ದ ದಿ. ಕಸ್ತೂರಿರಂಗಾಚಾರ್ ಅವರ ಪತ್ನಿ) ಮನೆಯಲ್ಲಿ ಕೆಲಕಾಲ ವಾಸ್ತವ್ಯ ಮಾಡಿದ್ದರು. ಭದ್ರಾವತಿಯಿಂದ ರಚೆಯಲ್ಲಿ ಅಜ್ಜಿಯ ಮನೆಗೆ ಹೋದಾಗ ಹಸನ್ಮುಖಿ ಮೇಷ್ಟರ ಒಡನಾಟ ನಮಗೆ ಬಲುಹಿತ. ಮಕ್ಕಳೊಂದಿಗೆ ಮಗುವಾಗಿ ಬೆರೆತು, ನಕ್ಕು ನಲಿದು ಮಕ್ಕಳ ಮನಗೆದ್ದು ತಮ್ಮತ್ತ ಒಲಿಸಿಕೊಳ್ಳುವ ಕಲೆ ಅವರಿಗೆ ಚೆನ್ನಾಗಿ ಕರಗತವಾಗಿತ್ತು. ಸಂಜೆಯಾಗುತ್ತಿದ್ದಂತೆ ಆಟವನ್ನೂ ಮರೆತು ಮಕ್ಕಳು ಅವರನ್ನು ಸುತ್ತುವರೆಯುತ್ತಿದ್ದರು. ಮಾಗಿದ ಮೂಸಂಬಿಹಣ್ಣು ಕೊಯ್ದು, ಸಿಪ್ಪೆ ಸುಲಿದು, ತೊಳೆ ಬಿಡಿಸಿ, ಬೀಜ ತೆಗೆದು ರಸವತ್ತಾದ ಕುಸುಮವನ್ನು ತಿನ್ನಲು ಕೊಡುತ್ತಿದ್ದರು. ಚೆನ್ನಾಗಿದೆ ಅಂದರೆ ಅದನ್ನೇ ಪೀಠಿಕೆ ಹಾಕಿ ಮಕ್ಕಳ ಮನಸ್ಸಲ್ಲಿ ಉದಾತ್ತ ಚಿಂತನೆಗಳನ್ನು ಬಿತ್ತುತ್ತಿದ್ದರು. ನೀವೇ ನೋಡಿದಂತೆ ರಸವತ್ತಾದ ಹಣ್ಣನ್ನು ಸವಿಯಬೇಕಾದರೆ ಕಹಿಯಾದ ಸಿಪ್ಪೆ ತೆಗೆದು, ತೊಳೆ ಬಿಡಿಸಿ, ನಾರು, ಬೀಜ ತೆಗೆದು ಹಾಕಬೇಕು. ಹಾಗೆಯೇ ನಾವು ಸದಾ ಆಟ, ಊಟಗಳಲ್ಲೇ ಕಾಲಕಳೆಯದೆ ಅಂತರ್ಮುಖಿಗಳಾಗಿ ಹೃದಯದಲ್ಲಿ ನೆಲೆಸಿರುವ ಪರಮಾತ್ಮನನ್ನು ನೋಡಲು ಪ್ರಯತ್ನಿಸಿದರೆ ಶಾಶ್ವತ ಸುಖ, ಶಾಂತಿಗಳು ನಮ್ಮದಾಗುತ್ತವೆ ಎಂದು ಮಕ್ಕಳ ಮನ ಒಲಿಸುತ್ತಿದ್ದರು. ಭಗವಂತನ ಕಾರುಣ್ಯ, ಸೌಶೀಲ್ಯ, ವಾತ್ಸಲ್ಯಗಳನ್ನು ಎತ್ತಿಹಿಡಿಯುವ ಅನೇಕ ಪೌರಾಣಿಕ ಕಥೆಗಳನ್ನು ಹೇಳಿ, ಎಲ್ಲ ಕಾಲದಲ್ಲೂ ಎಲ್ಲ ರೀತಿಯಲ್ಲೂ ನಮ್ಮನ್ನು ಕೈಹಿಡಿದು ಕಾಪಾಡುವ ದೇವರನ್ನು ಸ್ತುತಿಸಿ ನಮ್ಮ ಕೃತಜ್ಞತೆ ಸಲ್ಲಿಸೋಣ ಎಂದು ಅನೇಕ ಸ್ತೋತ್ರಗಳನ್ನು ಹೇಳಿಕೊಡುತ್ತಿದ್ದರು. ಅವುಗಳನ್ನು ಸುಶ್ರಾವ್ಯವಾಗಿ ಹಾಡಿ, ಯಾವ ರಾಗ ಗುರುತಿಸಿ ಎಂದು ಕೇಳುತ್ತಿದ್ದರು. ಯಾವ ರಾಗ ಯಾವ ಭಾವಕ್ಕೆ ಹೊಂದುತ್ತದೆ, ರಾಗ ಭಾವಗಳ ಹೊಂದಾಣಿಕೆ ಮನಕ್ಕೆ ಹೇಗೆ ಮುದ ನೀಡುತ್ತದೆ ಎಂದು ವಿವರಿಸುತ್ತಿದ್ದರು. ಭಗವಂತ ಸಂಗೀತಪ್ರಿಯ. ನೀವೆಲ್ಲ ಚಿಕ್ಕಂದಿನಲ್ಲೇ ಸಂಗೀತಾಭ್ಯಾಸ ಮಾಡಿ ಅಂತ ಪ್ರೋತ್ಸಾಹಿಸುತ್ತಿದ್ದರು. ಭಾರತೀಯ ಸಂಸ್ಕೃತಿಯ ಹಿರಿಮೆಯ ಪರಿಚಯ ಮಾಡಿಸಿ, ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಜವಾಬ್ದಾರಿ ನಿಮ್ಮದು ಎನ್ನುತ್ತಿದ್ದರು. ನಮ್ಮ ಸಂಸ್ಕೃತಿ, ಸಾಹಿತ್ಯವನ್ನರಿಯಲು ನೀವೆಲ್ಲ ಅವಶ್ಯವಾಗಿ ಸಂಸ್ಕೃತ ಕಲಿಯಬೇಕು ಎಂದು ಪ್ರೇರೇಪಿಸಿ, ತಾವೇ ಸಂಸ್ಕೃತ ಕಲಿಸುತ್ತಿದ್ದರು. ಅಷ್ಟೇ ಅಲ್ಲದೆ ಆಸಕ್ತರನ್ನು ಸಂಸ್ಕೃತ ಪರೀಕ್ಷೆಗೆ ತಯಾರುಮಾಡಿ ಪ್ರಶಸ್ತಿ ಪತ್ರ ಕೊಡಿಸುತ್ತಿದ್ದರು. ಸದಾ ಉತ್ಸಾಹದ ಚಿಲುಮೆಯಾಗಿ ಎಲ್ಲರನ್ನೂ ನಗಿಸುತ್ತ ಬದುಕನ್ನು ಬಂದಂತೆ ಸ್ವೀಕರಿಸಿ ಬಾಳುವ ಕಲೆಯನ್ನು ಬದುಕಿ ತೋರಿಸಿದ ಮಹಾನುಭಾವರವರು. ಸ್ವಇಚ್ಛೆಯಿಂದ ನಮ್ಮ ಮನೆಯ ದೇವತಾರಾಧನೆಯನ್ನು ಪ್ರತಿದಿನ ಅವರೇ ಮಾಡುತ್ತಿದ್ದರು. ರಾಮನವಮಿ, ಗೋಕುಲಾಷ್ಟಮಿ, ನರಸಿಂಹ ಜಯಂತಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಅವರ ಸಡಗರ ಹೇಳತೀರದು. ಮಂಟಪದ ಅಲಂಕಾರ, ಅರ್ಚನೆಯ ವೈಭವ, ಪ್ರಸಾದದಸವಿ, ಎಲ್ಲಕ್ಕಿಂತ ಮಿಗಿಲಾಗಿ ಅಂದಿನ ವೈಶಿಷ್ಟ್ಯವನ್ನು ರಸವತ್ತಾಗಿ ವರ್ಣಿಸುವ ಪರಿ ಅನನ್ಯವಾದದ್ದು. ಸಕ್ಕರೆ ಪೊಂಗಲ್ ಪ್ರಸಾದವನ್ನು ವಿಶೇಷವಾಗಿ ಸವಿಯುತ್ತಿದ್ದ ಮೇಷ್ಟರಿಗೆ ಸಕ್ಕರೆ ಕಾಯಿಲೆ ತಲೆದೋರಿದ್ದು ವಿಪರ್ಯಾಸವೇ ಸರಿ. ನಮ್ಮಂತೆಯೇ ನಮ್ಮ ಅಜ್ಜಿಯನ್ನು ಬಾಯಿ ತುಂಬ "ಪಾಟಿ" ಎಂದು ಕರೆಯುತ್ತಿದ್ದ ಮೇಷ್ಟ್ರು ಬಿಡುವಾದಾಗ ಆಳ್ವಾರ್, ಆಚಾರ್ಯರ ಕೃತಿಗಳ ವಿಚಾರವಾಗಿ ಪಾಟಿಗೆ ಅನೇಕ ಸಂಗತಿ ಹೇಳುತ್ತಿದ್ದರು. ಪಾಟಿ ತಮ್ಮ ಕಷ್ಟಸುಖಗಳ ಬಗ್ಗೆ ಅವರ ಬಳಿ ಮನ ಬಿಚ್ಚಿ ಮಾತಾಡಿ ಹೃದಯ ಹಗುರ ಮಾಡಿಕೊಳ್ಳುತ್ತಿದ್ದರು. ವಯೋಧರ್ಮಕ್ಕನುಗುಣವಾಗಿ ದೇಹ ಶಕ್ತಿ ಕುಗ್ಗುತ್ತ, ಕಣ್ಣು ಮಂಜಾಗುತ್ತಿರುವ ಬಗ್ಗೆ ನಮ್ಮ ಪಾಟಿ ಬೇಸರ ವ್ಯಕ್ತಪಡಿಸಿ ಮುಂದಿನ ದಿನಗಳ ಬಗ್ಗೆ ಆತಂಕ ಪಟ್ಟಾಗ, ಸುತ್ತ ಅಷ್ಟಗ್ರಾಮದಿಂದ ಹಾಸನಕ್ಕೆ ಕಾರ್ಯಾರ್ಥವಾಗಿ ಬಂದವರೆಲ್ಲ ನಿಮ್ಮ ಮನೆಯಲ್ಲಿ ಸಂತೋಷದಿಂದ ಊಟಮಾಡಿ ತೃಪ್ತಿಯಿಂದ ಹಿಂದಿರುಗುತ್ತಾರೆ. ಎಷ್ಟು ವಿದ್ಯಾರ್ಥಿಗಳಿಗೆ ಅನ್ನದಾನ ಮಾಡಿ ವಿದ್ಯಾಭ್ಯಾಸ ಮುಂದುವರಿಸಲು ಸಹಾಯ ಮಾಡಿದ್ದೀರಿ, ದೇವರು ನಿಮ್ಮ ಕೈ ಬಿಡುವುದಿಲ್ಲ. ಅನ್ನದಾನದ ಮಹಿಮೆ ಅಪಾರ. ದೇವರೇ ಬಂದು ನಿಮ್ಮನ್ನು ತನ್ನ ಬಳಿ ಕರೆದೊಯ್ಯುತ್ತಾನೆ. ಸುಮ್ಮನೆ ಚಿಂತಿಸದೆ ಹರಿಸ್ಮರಣೆ ಮಾಡಿ ಎಂದು ಸಂತೈಸುತ್ತಿದ್ದರು. ಅಂದು ಅವರಾಡಿದ ಮಾತು ಹಲವು ವರ್ಷದ ಬಳಿಕ ಸತ್ಯವಾದ ಪರಿಯನ್ನು ಕಣ್ಣಾರೆ ಕಂಡ ಅನುಭವ ಇಂದಿಗೂ ನನ್ನನ್ನು ರೋಮಾಂಚನಗೊಳಿಸುತ್ತದೆ. ನಾನು ಅಜ್ಜಿಯ ಮನೆಯಲ್ಲಿದ್ದುಕೊಂಡು ಹಾಸನದ ಮಲೆನಾಡ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಒಂದು ದಿನ ರಾತ್ರಿ ಎಲ್ಲರೂ ಊಟ ಮಾಡಿ ಮಲಗಿದ್ದೆರು. ವ್ಯಾಸಂಗ ಮುಗಿಸಿ ನಾನೂ ಮಲಗಲು ಹೊರಟೆ. ಅಷ್ಟರಲ್ಲಿ ಅಜ್ಜಿ "ಶ್ರೀಧರಾ, ಭಗವದ್ಗೀತೆ ಪುಸ್ತಕ ತೆಗೊಂಡು ಬಾ" ಅಂತ ಕರೆದರು. ಇಷ್ಟು ಹೊತ್ತಲ್ಲಿ ಭಗವದ್ಗೀತೆ ತರಲು ಏಕೆ ಹೇಳ್ತಿದ್ದಾರೆ ಅಂತ ಮನೆ ಮಂದಿ ಎಲ್ಲ ಎದ್ದು ಬಂದರು. ನಾನು ಕೈಕಾಲು ತೊಳೆದುಕೊಂಡು ದೇವರ ಮನೆಯಿಂದ ಅವರು ನಿತ್ಯ ಪಾರಾಯಣ ಮಾಡುತ್ತಿದ್ದ ಭಗವದ್ಗೀತೆಯ ಪುಸ್ತಕ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ತರುವಷ್ಟರಲ್ಲಿ "ಶ್ರೀ ಕೃಷ್ಣ" ಎಂದ ಅಜ್ಜಿ ಕೃಷ್ಣನಲ್ಲಿ ಐಕ್ಯವಾಗಿದ್ದ ದೃಶ್ಯ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಪರಮಸಾತ್ವಿಕರ ಮಾತಿಗೆ ಎಷ್ಟು ಶಕ್ತಿ ಇರುತ್ತದೆ; ದೇವರೂ ಅವರ ಆಜ್ಞಾನುವರ್ತಿಯಾಗಿರುತ್ತಾನೆ ಎಂಬುದಕ್ಕೆ ಇದು ಪ್ರತ್ಯಕ್ಷ ನಿದರ್ಶನ.

ನಾನು ಭದ್ರಾವತಿಯ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾಗ ನನ್ನ ಮದುವೆ ಮೈಸೂರಿನ ಹುಡುಗಿಯೊಂದಿಗೆ ನಿಶ್ಚಯವಾದಾಗ ಮತ್ತೆ ನನ್ನ ನೆಚ್ಚಿನ ಗುರುಗಳನ್ನು ನಮಿಸುವ ಸುಯೋಗ ಒದಗಿತು. ಅಷ್ಟರಲ್ಲಿ ಅವರು ಮೈಸೂರಿನ ಪರಕಾಲಮಠದ 35ನೆಯ ಪೀಠಾಧಿಪತಿಗಳಾಗಿದ್ದರು. ಮದುವೆಗೆ ಆಹ್ವಾನಿಸಿ ಸ್ವಾಮಿಗಳ ಆಶೀರ್ವಾದ ಪಡೆಯಲು ನಮ್ಮ ತಾಯಿ ತಂದೆಯರು ಶ್ರೀ ಮಠಕ್ಕೆ ತೆರಳಿದ್ದಾಗ ಸ್ವಾಮಿಗಳು ಮದುವೆಯಾದ ಮರುದಿನ ಬೆಳಗ್ಗೆ ಏಳುಗಂಟೆಗೆ ಶುಭ್ರಸ್ನಾತರಾದ, ನಿರಾಹಾರಿಗಳಾದ ನವದಂಪತಿಗಳನ್ನು ಲಕ್ಷ್ಮೀಹಯಗ್ರೀವರ ದರ್ಶನಕ್ಕೆ ಕರೆತನ್ನಿ ಎಂದು ಅಪ್ಪಣೆ ನೀಡಿದರು. ಅದರಂತೆ ನಾವು ಮಠ ತಲುಪಿದಾಗ ಸ್ನಾನ, ಆಹ್ನೀಕಗಳನ್ನೆಲ್ಲ ಮುಗಿಸಿ ಸ್ವಾಮಿಗಳು ನಮ್ಮ ದಾರಿ ಕಾಯುತ್ತಿದ್ದರು. ಲಕ್ಷ್ಮೀ ಹಯಗ್ರೀವರಿಗೆ ಧರಿಸಿದ್ದ ಎರಡು ಹಾರಗಳನ್ನು ನಮಗಿತ್ತು ಪರಸ್ಪರ ಹಾರ ಬದಲಾಯಿಸಿಕೊಳ್ಳಲು ಹೇಳಿದರು. ಕಾರಣಾಂತರದಿಂದ ನಿಮ್ಮ ಮದುವೆಗೆ ಬರಲಾಗಲಿಲ್ಲ. ಈಗ ನೋಡಿ ಸಂತೋಷ ಪಡುತ್ತಿದ್ದೇನೆ ಎಂದು ಮಕ್ಕಳಂತೆ ಚಪ್ಪಾಳೆ ತಟ್ಟಿ ನಲಿದರು. ಹೊಸ ಬಟ್ಟೆ ಧರಿಸಿದ ಮಕ್ಕಳಿಗೆ "ಹೊಸ ಅಂಗಿ ಗುದ್ದು" ನೀಡುವಂತೆ ನಿಮ್ಮ ಮದುವೆಯ ಸವಿನೆನಪಿಗಾಗಿ ಸಮಾಶ್ರಣ ಮಾಡಿ ಚುರುಕು ಮುಟ್ಟಿಸುತ್ತೇನೆ ಎಂದು ನಗುನಗುತ್ತ ಮುದ್ರಾಧಾರಣೆ ಮಾಡಿ, ತಿರುಮಂತ್ರೋಪದೇಶಮಾಡಿ ಭಗವಂತನೊಂದಿಗೆ ಆತ್ಮವಿವಾಹ ಮಾಡಿಸಿದ ಸದ್ಗುರುಗಳ ಕೃಪೆಗೆ ಎಣೆಯುಂಟೆ ! ಬ್ರಹ್ಮಚರ್ಯ, ವಾನಪ್ರಸ್ಥ, ಸನ್ಯಾಸಾಶ್ರಮಿಗಳಿಗೆ ಊಟ ಉಪಚಾರಗಳನ್ನೊದಗಿಸುವ ಸೌಭಾಗ್ಯ ಗೃಹಸ್ಥರದು. ಆದ್ದರಿಂದಲೇ "ಧನ್ಯೋಗೃಹಸ್ಥಾಶ್ರಮೀ" ಎಂದು ಗೃಹಸ್ಥರನ್ನು ಕೊಂಡಾಡುತ್ತಾರೆ. ನಿಯತವಾಗಿ ನಿತ್ಯನೈಮಿತ್ತಿಕಕರ್ಮಗಳನ್ನು ಆಚರಿಸುತ್ತ ಪುತ್ರಪೌತ್ರರೊಂದಿಗೆ ಸುಖವಾಗಿರಿ ಎಂದು ಫಲಮಂತ್ರಾಕ್ಷತೆ ನೀಡಿ ಮನಸಾರೆ ಹರಸಿದರು. ಯಥಾಶಕ್ತಿ ಕಾಣಿಕೆ ನೀಡಲು ಮುಂದಾದಾಗ ನಯವಾಗಿ ತಿರಸ್ಕರಿಸಿ, ಮಠದಲ್ಲಿ ದೇವರ ಪ್ರಸಾದ ಸ್ವೀಕರಿಸುತ್ತ ವಿದ್ಯೆ ಕಲಿಯುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ "ನಿತ್ಯಕೈಂಕರ್ಯಸೇವೆ" ಎಂಬ ಯೋಜನೆಗೆ ಸಹಾಯ ಮಾಡಲು ನಿಮ್ಮ ಬಂಧುಬಳಗದವರನ್ನೆಲ್ಲ ಪ್ರೇರೇಪಿಸಿ ಎಂದರು.

ಮುಂದೆ ನನ್ನ ಮಗ ಎರಡು ವರ್ಷದ ಪೋರನಾಗಿದ್ದಾಗ ನನಗೆ ಮೈಸೂರಿಗೆ ವರ್ಗವಾಗಿ, ಸ್ವಾಮಿಗಳ ಆಶೀರ್ವಾದ ಪಡೆಯಲು ಮಠಕ್ಕೆ ಹೋದೆ. "ಮೈಸೂರಲ್ಲೇ ಕೆಲಸ ಅಂತೀಯ, ಸರಿ ಮತ್ತೆ ಮನೆಕಟ್ಟಿ ಬಂದು ಕರಿ. ಲಕ್ಷ್ಮೀಹಯಗ್ರೀವರನ್ನು ಕರೆತಂದು ಡೋಲೋತ್ಸವ ಮಾಡ್ತೀನಿ ಅಂದರು. ಆಗ ನನಗೆ ಬರುತ್ತಿದ್ದ 800 ರೂ ಸಂಬಳದಲ್ಲಿ ಮನೆ ಬಾಡಿಗೆ, ಸಂಸಾರದ ವೆಚ್ಚ, ಮಗನ ವಿದ್ಯಾಭ್ಯಾಸದ ಖರ್ಚು ಪೂರೈಸಿದರೆ ಸಾಕು ಎಂದುಕೊಳ್ಳುತ್ತಿದ್ದ ನನಗೆ ಸ್ವಾಮಿಗಳ ಮಾತು ಪೂರೈಸುವುದು ಅಸಾಧ್ಯವೆನಿಸಿ ಮಾತಾಡದೆ ಅವರಿಗೆ ನಮಿಸಿ ಮರಳಿದೆ. ಆದರೆ ವಾಕ್‌ಸಿದ್ಧಿ ಹೊಂದಿದ್ದ ಸ್ವಾಮಿಗಳ ಆಶೀರ್ವಾದ ಶೀಘ್ರದಲ್ಲಿಯೇ ಸತ್ಯವಾದ ಪರಿ ಅತ್ಯಾಶ್ಚರ್ಯಕರ. ನಾವು ಬಾಡಿಗೆಗಿದ್ದ ಆಸ್ತಿಕ ಬ್ರಾಹ್ಮಣರು ತಮ್ಮ ಮಗನಿಗೆ ಬ್ರಹ್ಮೋಪದೇಶ ಮಾಡುವ ಸಲುವಾಗಿ ತಮ್ಮ ಮನೆಗೆ ಸೇರಿದಂತಿದ್ದ 23X60 ನಿವೇಶನವನ್ನು ಮಾರಾಟ ಮಾಡಲು ಬಯಸಿದರು. ಅವರು ನನ್ನಲ್ಲಿ ಈ ವಿಷಯ ಪ್ರಸ್ತಾಪಿಸಿ, ಹಣದ ಅಗತ್ಯ ತಮಗಿದ್ದರೂ ಮನ ಒಪ್ಪದವರಿಗೆ ನಿವೇಶನ ನೀಡಲಾಗುವುದಿಲ್ಲ. ನೀವು ನಮ್ಮೊಂದಿಗೆ ಚೆನ್ನಾಗಿ ಹೊಂದಿಕೊಂಡಿದ್ದೀರಿ; ದೇವರು, ಗುರುಹಿರಿಯರಲ್ಲಿ ಭಕ್ತಿಯುಳ್ಳವರಾಗಿದ್ದೀರಿ; ನೀವೇ ಕೊಂಡುಕೊಳ್ಳಿ ಎಂದು ದುಂಬಾಲು ಬಿದ್ದರು. ಬರಗಾಲದಲ್ಲಿ ಅಧಿಕಮಾಸ ಎದುರಿಸಲಾರದೆ ನಾನು ಅವರ ಮನವಿಯನ್ನು ತಿರಸ್ಕರಿಸಬೇಕಾಯಿತು. ಈ ವಿಷಯ ತಿಳಿದ ನನ್ನ ನಾದಿನಿ ತಾವು ಆ ನಿವೇಶನ ಖರೀದಿಸುವುದಾಗಿ ಮಾತುಕತೆ ನಡೆಸಿ ರಿಜಿಸ್ಟ್ರೇಷನ್ ಮಾಡಿಸಲು ದಿನಾಂಕ ನಿಷ್ಕರ್ಷಿಸಿದರು. ಆದರೆ ಅವರ ಹಿತೈಷಿಯೊಬ್ಬರು ನಿವೇಶನದ ಅಗಲ ತುಂಬ ಕಡಿಮೆ ಇರುವುದರಿಂದ ಒಂದರ ಹಿಂದೊಂದು ಕೊಠಡಿಯನ್ನು ರೈಲ್ವೆ ಬೋಗಿಯಂತೆ ಕಟ್ಟಬೇಕಾಗುತ್ತದೆ. ಚೆನ್ನಾಗಿರುವುದಿಲ್ಲ ಎಂದು ಸಲಹೆ ನೀಡಿದ್ದರಿಂದ ಅವರು ಕರಾರನ್ನು ಕೈಬಿಟ್ಟರು. ಉಪನಯನದ ದಿನ ಹತ್ತಿರವಾಗುತ್ತಿದೆ, ವಿಷಮ ಅಳತೆಯ ನಿವೇಶನ ಕೊಳ್ಳಲು ಮುಂದಾಗುವವರು ಕಡಿಮೆ; ಅದರಲ್ಲೂ ಮನೆಯೊಡೆಯರ ನಿರ್ಬಂಧ ಬೇರೆ; ನಮ್ಮ ಕಡೆಯಿಂದ ಅವರಿಗೆ ತೊಂದರೆಯಾಗುತ್ತದೆಂಬ ಧರ್ಮಸಂಕಟ - ಎಲ್ಲ ಸೇರಿ ನಿವೇಶನ ಕೊಳ್ಳುವುದು ಅನಿವಾರ್ಯವಾಯಿತು. ನಿವೇಶನ ಕೈಸೇರಿದ ಮೇಲೆ ಬಾಳೆ ತೋಟಕ್ಕೆ ಲಗ್ಗೆ ಇಟ್ಟು ಕೈಯಲ್ಲಿ ಬಾಳೆಹಣ್ಣು ಹಿಡಿದು ಉಪವಾಸ ಮಾಡಲು ಹೊರಟ ಮಂಗಗಳ ಪರಿಸ್ಥಿತಿ ನನ್ನದಾಯಿತು. ವಿದ್ಯುಚ್ಛಕ್ತಿ ಮಂಡಳಿ ಮನೆಕಟ್ಟಲು ಸಾಲ ನೀಡುತ್ತದೆ. ಸುಲಭ ಕಂತುಗಳಲ್ಲಿ ಸಾಲ ತೀರಿಸಬಹುದು. ಬಾಡಿಗೆ ಹಣ ಉಳಿತಾಯವಾಗುತ್ತದೆ ಎಂಬ ಸ್ನೇಹಿತರ ಸಲಹೆಯಂತೆ ಅರ್ಜಿ ಹಾಕಿ ಸಾಲ ಸಿಗುತ್ತದೆಂಬ ಆಶ್ವಾಸನೆಯ ಮೇರೆಗೆ ಮನೆಕಟ್ಟಲು ಮುಂದಾದೆ. ಆದರೆ ಆರ್ಥಿಕ ಮುಗ್ಗಟ್ಟಿನಿಂದ ಆ ವರ್ಷ ಮಂಡಳಿ ಸಾಲ ನೀಡಲಿಲ್ಲ. ಕಟ್ಟಡದ ಕೆಲಸ ಪ್ರಾರಂಭಿಸಿದ್ದು, ಮಧ್ಯೆ ನಿಲ್ಲಿಸಲಾಗದ ಪರಿಸ್ಥಿತಿ ಬಂದೊದಗಿ, ಬೆಂಗಳೂರಿನಲ್ಲಿದ್ದ ನಿವೇಶನವನ್ನು ಮಾರಿ ಮನೆಕಟ್ಟಿ ಪೂರೈಸಿದೆ. ವಿಷಯ ತಿಳಿದ ಸ್ವಾಮಿಗಳು ಸಂತೋಷದಿಂದ ಒಂದು ಶುಭದಿನ ಸಂಜೆ ಲಕ್ಷ್ಮೀಹಯಗ್ರೀವರನ್ನು ಮನೆಗೆ ಬಿಜಯಮಾಡಿಸಿ ಅವೋಘವಾಗಿ ಡೋಲೋತ್ಸವ ನೆರವೇರಿಸಿದರು. ಮನೆ ಚಿಕ್ಕದಾದರೂ ಚೊಕ್ಕವಾಗಿದೆ. ಮನೆ ಅಲ್ಲ, ಮನಸ್ಸು ದೊಡ್ಡದಾಗಿರಬೇಕು. ಮಹಡಿಯನ್ನೂ ಕಟ್ಟು. ಅಲ್ಲೂ ಡೋಲೋತ್ಸವ ಮಾಡೋಣ ಅಂತ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅಪ್ಪಣೆ ನೀಡಿದರು. ಆಗ ತಾನೇ ಮನೆಕಟ್ಟಿ ನೋಡಿದ ನನಗೆ ಸ್ವಾಮಿಗಳ ಮಾತು ಖಂಡಿತ ಪಥ್ಯವೆನಿಸಲಿಲ್ಲ. ಆದರೆ ಕೆಲಸಮಯದಲ್ಲಿಯೇ ಸ್ವಾಮಿಗಳ ಮಾತು ಈಡೇರುವ ಕಾಲ ಸನ್ನಿಹಿತವಾಯಿತು. ಮಂಡಳಿಯಿಂದ ನನಗೆ ಸಾಲ ಮಂಜೂರಾಗಿದೆ ಎಂಬ ಮಾಹಿತಿ ಒಂದಗಿ, ಕಡಿಮೆ ಬಡ್ಡಿದರದಲ್ಲಿ ಸುಲಭಕಂತುಗಳಲ್ಲಿ ತೀರಿಸಬಹುದಾದ ಈ ಅವಕಾಶವನ್ನು ಕಳೆದುಕೊಳ್ಳಬೇಡ ಎಂಬ ಹಿರಿಯರ ಸಲಹೆಯಂತೆ ಮಹಡಿ ಕಟ್ಟುವ ಕೆಲಸಕ್ಕೆ ಕೈ ಹಾಕಿದೆ. ಸ್ವಾಮಿಗಳ ಆಶೀರ್ವಾದದಿಂದ ಕ್ಷಿಪ್ರದಲ್ಲೇ ಮಹಡಿಯಲ್ಲೂ ವಜ್ರದ ತೊಟ್ಟಿಲಲ್ಲಿ ಲಕ್ಷ್ಮೀಹಯಗ್ರೀವರ ಡೋಲೋತ್ಸವ ಅಮೋಘವಾಗಿ ನೆರವೇರಿ ಅವರ ಶ್ರೀರಕ್ಷೆ ನಮಗೊದಗಿತು, ಮನೆಗೆ ಬಂದು ಪೂಜೆ ನೆರವೇರಿಸಲು ಯಾವ ಶುಲ್ಕವನ್ನೂ ನಿರೀಕ್ಷಿಸದ ಸ್ವಾಮಿಗಳು ತಮ್ಮ ಜೊತೆಯಲ್ಲಿ ಬರುವ ಅರ್ಚಕರು, ಪರಿಚಾರಕರಿಗೆ ಯಥಾಶಕ್ತಿ ದಕ್ಷಿಣೆ, ತಾಂಬೂಲ ನೀಡಿದರೆ ಸಾಕು ಎನ್ನುತ್ತಿದ್ದರು. ಬೆಲೆ ಕಟ್ಟಲಾಗದಂತಹ ವಜ್ರದ ತೊಟ್ಟಿಲನ್ನು ಸೂಕ್ತ ರಕ್ಷಣೆ ಇಲ್ಲದೆ ಹೀಗೆ ಮನೆ ಮನೆಗೆ ತರುವಿರಲ್ಲ. ಇದು ತರವೇ ಎಂದು ಪ್ರಶ್ನಿಸಿದರೆ "ಅವನ ಸೊತ್ತು; ಅವನೇ ರಕ್ಷಿಸ್ಕೋತಾನೆ. ನಮಗೇಕೆ ಯೋಚನೆ ? ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕ ಅವನು. ಅವನ ಲೀಲೆಗಳನ್ನು ನಮ್ಮಿಂದ ತಿಳಿಯಲಾದೀತೇ ? ಅವನು ಪ್ರೇರೇಪಿಸಿದ ಕೆಲಸ ಮಾಡುವುದಷ್ಟೇ ನಮಗೆ ಸೇರಿದ್ದು. ಉಳಿದದ್ದು ಅವನ ಚಿತ್ತ" ಅಂತ ನಿರಾಳವಾಗಿರುತ್ತಿದ್ದರು. ಅಂತಹ ಪರಮಸಾತ್ವಿಕರು ಅತಿ ವಿರಳ.

ನನಗೆ ಸಮಯದೊರೆತಾಗ ಮನೆಯವರೊಂದಿಗೆ ಶ್ರೀಮಠಕ್ಕೆ ಹೋಗಿ ಸ್ವಾಮಿಗಳ ಆಶೀರ್ವಾದ ಪಡೆಯುತ್ತಿದ್ದೆ. ನನ್ನ ಹಿರಿಯ ಮಗ ಚಿ|| ಸ್ವರೂಪ್‌ಗೆ ಚಿಕ್ಕಂದಿನಿಂದ ಸಂಗೀತದ ಬಗ್ಗೆ ಒಲವು. ಎಳೆಯವನಾಗಿದ್ದಾಗಲೇ ಶಾಸ್ತ್ರೀಯ ಸಂಗೀತ, ವೀಣೆ ಕಲಿಯುತ್ತಿದ್ದ. ಎತ್ತರ ಸಾಲದೆ ತೊಡೆಯ ಮೇಲೆ ದಿಂಬನ್ನಿಟ್ಟುಕೊಂಡು ಅದರ ಮೇಲೆ ವೀಣೆಯ ಬುರುಡೆಯನ್ನಿಟ್ಟುಕೊಂಡು ಎಳೆಯ ಬೆರಳುಗಳನ್ನು ವೀಣೆಯ ಮೇಲೆ ಸರಿದಾಡಿಸುವ ಕಸರತ್ತು ನೋಡಿ ಸ್ವಾಮಿಗಳು ಮನಸಾರೆ ನಗುತ್ತಿದ್ದರು. ಮಠಕ್ಕೆ ಹೋದಾಗಲೆಲ್ಲ ಯಾವ ಹಾಡು ಕಲಿತೆ ? ಎಂದು ಕೇಳಿ ಅವನ ಬಾಲಪಾಠವನ್ನೇ ಮೆಚ್ಚಿ ತಲೆದೂಗಿ, ಬೆನ್ನು ತಟ್ಟುತ್ತಿದ್ದರು. ಒಮ್ಮೆ ಸ್ವಾಮಿಗಳ ತಿರುನಕ್ಷತ್ರದ ಹಿಂದಿನ ದಿನ ಮಠದಿಂದ ಕಾರ್ಯದರ್ಶಿಗಳು ನಮ್ಮ ಮನೆಗೆ ದೂರವಾಣಿಯಲ್ಲಿ ಕರೆಮಾಡಿ ಮರುದಿನ ನಮ್ಮ ಮಗನನ್ನು ವೀಣೆಯ ಸಮೇತ ಮಠಕ್ಕೆ ಬರ ಹೇಳಿದರು. ಸ್ವಾಮಿಗಳ ಸಮಕ್ಷಮದಲ್ಲಿ ವೀಣೆ ನುಡಿಸಬೇಕೆಂದು ಅಪ್ಪಣೆಯಾಗಿದೆ ಅಂತ ತಿಳಿಸಿದರು. ತಿರುನಕ್ಷತ್ರದಂದು ಮಠಕ್ಕೆ ಸಾವಿರಾರು ಭಕ್ತರು ಬಂದಿರುತ್ತಾರೆ. ಇನ್ನೂ ಚಿಕ್ಕವನಾದ ನಮ್ಮ ಹುಡುಗ ಎಲ್ಲರೆದುರು ವೀಣೆ ನುಡಿಸುವಷ್ಟು ಕಲಿತಿಲ್ಲ. ಹೋಗುವುದು ಬೇಡ. ಆಮೇಲೆ ಸ್ವಾಮಿಗಳಲ್ಲಿ ಕ್ಷಮೆ ಕೇಳೋಣ ಅಂತ ನಿರ್ಧರಿಸಿದೆವು. ಮರುದಿನ ಮಧ್ಯಾಹ್ನ ಒಂದು ಗಂಟೆಗೆ ಮಠದಿಂದ ಮತ್ತೆ ಕರೆ ಬಂತು. ನೀವೇಕೆ ಇನ್ನೂ ಬಂದಿಲ್ಲ. ಸ್ವಾಮಿಗಳು ವಿಚಾರಿಸಲು ಹೇಳಿದರು ಅಂತ. ಹುಡುಗ ಶಾಲೆಗೆ ಹೋಗಿದ್ದಾನೆ ಅಂತ ನೆಪ ಹೇಳಿ ಬರಲಾಗದಿದ್ದದ್ದಕ್ಕೆ ಕ್ಷಮೆ ಯಾಚಿಸಿದೆವು. ರಾತ್ರಿ ಎಂಟು ಗಂಟೆಗೆ ಮತ್ತೆ ಬಂದ ಕರೆ ಕೂಡಲೇ ಮಠಕ್ಕೆ ಬರಬೇಕೆಂದೂ, ಸ್ವಾಮಿಗಳು ಕಾಯುತ್ತಿದ್ದಾರೆಂದೂ ಹೇಳಿದಾಗ ನಿರ್ವಾಹವಿಲ್ಲದೆ ಮಠಕ್ಕೆ ಹೋಗಬೇಕಾಯಿತು.

"ಏನಯ್ಯಾ ದೊರೆ, ಇಷ್ಟು ಚಿಕ್ಕ ವಯಸ್ಸಿಗೇ ನಿನಗೆ ಇಷ್ಟೊಂದು ಡಿಮ್ಯಾಂಡು" ಅಂತ ಅವನಿಂದ ನಾಲ್ಕಾರು ದೇವರನಾಮಗಳನ್ನು ಹಾಡಿಸಿ, ನಿರಂತರವಾಗಿ ಹಯಗ್ರೀವರಿಗೆ ಸಂಗೀತ ಸೇವೆ ಮಾಡು ಎಂದು ಹರಸಿದರು. ನೀನು ಡಾಕ್ಟರಾಗಬೇಕು, ಅಮೆರಿಕಾಗೆ ಹೋಗಬೇಕು ಎಂದು ಆಶಿಸಿ ಬೆಳ್ಳಿ ಬಟ್ಟಲ ತುಂಬ ಕಲ್ಲುಸಕ್ಕರೆ ತುಂಬಿ ನೀಡಿ, ಶಾಲು ಹೊದಿಸಿ ಸನ್ಮಾನಿಸಿದರು. ಅವರ ಆಶೀರ್ವಾದದ ಬಲದಿಂದ ನನ್ನ ಮಗ ವೀಣೆ ಹಾಗೂ ಹಾಡುಗಾರಿಕೆಯಲ್ಲಿ ವಿದ್ವಾಂಸನಾಗಿ ಅನೇಕ ಕಚೇರಿಗಳನ್ನು ನಡೆಸುವಂತಾದ. ತಂದೆಯಂತೆಯೇ ಮಗ ಇಂಜಿನಿಯರ್ ಆದರೂ ಅಮೆರಿಕದ ಜಾನ್‌ಹಾಪ್‌ಕಿನ್ಸ್ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್‌ಡಿ ಪದವಿ ಗಳಿಸಿ ಡಾಕ್ಟರೆನಿಸಿಕೊಂಡ. ಸತ್ಕುಲ ಪ್ರಸೂತೆಯಾದ ಸತಿಯೊಡನೆ ಅಮೆರಿಕದಲ್ಲಿ ನೆಲೆಸಿದ್ದು, ಪರಮಭಾಗವತರ ಸಂಸರ್ಗ ದೊರೆತು, ಅವನು ಸದಾಚಾರ ಸಂಪನ್ನನಾಗಿರಲು ಸ್ವಾಮಿಗಳ ಹಾರೈಕೆಯೇ ಕಾರಣ.

ನನ್ನ ಕಿರಿಯ ಮಗ ಚಿ|| ಸುಹಾಸ್‌ನ ಮೊದಲ ಹುಟ್ಟುಹಬ್ಬದಂದು ಸ್ವಾಮಿಗಳು ನಮ್ಮ ಮನೆಯಲ್ಲಿ ಲಕ್ಷ್ಮೀ ಹಯಗ್ರೀವರ ಡೋಲೋತ್ಸವ ನಡೆಸಿ ಆಶೀರ್ವದಿಸಿದರು. ಇನ್ನೂ ತೆಗೆಸದ ಜುಟ್ಟಿಗೆ ಮಲ್ಲಿಗೆ ಮುಡಿದು, ದುಂಡಗೆ ಕಂಗೊಳಿಸುತ್ತಿದ್ದ ಮಗುವನ್ನು ನೋಡಿದ ಸ್ವಾಮಿಗಳು "ಈ ರಾಣಿ ವಿಕ್ಟೋರಿಯಾ ತರಹ ಪ್ರಸಿದ್ಧಳಾಗ್ತಾಳೆ" ಅಂತ ಹರಸಿದರು. ಅಂತೆಯೇ ಬಿ.ಕಾಮ್‌ನಲ್ಲಿ ರ‍್ಯಾಂಕ್ ಪಡೆದು ಚಾರ್ಟರ್ಡ್ ಅಕೌಂಟೆಂಟ್ ಆಗಲು ಕೊನೆಯ ಹಂತದ ತಯಾರಿ ನಡೆಸುತ್ತಿರುವ ನಮ್ಮ ಮಗ ಎಲ್ಲ ಕ್ಷೇತ್ರದಲ್ಲೂ ಬೆಳೆದಿರುವುದಕ್ಕೆ ಸ್ವಾಮಿಗಳ ಕೃಪಾಕಟಾಕ್ಷವೇ ಕಾರಣ.

ಸಕಲ ವಿದ್ಯೆಗಳನ್ನೂ ದಯಪಾಲಿಸುವ ಲಕ್ಷ್ಮೀಹಯಗ್ರೀವರನ್ನು ಪೂಜಿಸಿರಿ. ಇಹದಲ್ಲಿ ಸಕಲ ಭೋಗಭಾಗ್ಯಗಳನ್ನು ನೀಡಿ, ದೇಹಾಂತ್ಯದಲ್ಲಿ ಅಪವರ್ಗ ಮೋಕ್ಷ ನೀಡುತ್ತಾನೆ ಎಂದು ಭಕ್ತರಿಗೆ ಉಪದೇಶಿಸುತ್ತಿದ್ದ ಸಾಕ್ಷಾತ್ ಕಲ್ಪವೃಕ್ಷ, ಕಾಮಧೇನು ಸ್ವರೂಪಿ ಸ್ವಾಮಿಗಳ ಅನುಗ್ರಹದಿಂದ ಭಕ್ತವೃಂದಕ್ಕೆ ಇಹಪರಸೌಖ್ಯ ಲಭ್ಯವಾಗುತ್ತದೆ.

"ಪ್ರಯಚ್ಛಸಿ ಗುರುಃ ಪ್ರೀತೋ ವೈಕುಂಠಂ ಯೋಗಿ ದುರ್ಲಭಂ"

ಶ್ರೀರಸ್ತು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ಶ್ರೀಮತೇ ಲಕ್ಷ್ಮೀಹಯಗ್ರೀವಾಯ ನಮಃ
ಶ್ರಿಮದಭಿನವ ರಂಗನಾಥ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ
ಶ್ರಿಮದಭಿನವ ಶ್ರೀನಿವಾಸ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ
ಶ್ರಿಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ
ಶ್ರಿಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ

ಪರಬ್ರಹ್ಮನು ಯಾರು?

ಒಂದು ಪ್ರಯತ್ನ

ಶ್ರೀಮಾನ್ ಉ. ವೇ. ಸಿ. ಜಿ. ಸಂಪತ್‌ಕುಮಾರ್
ಬೆಂಗಳೂರು

ಆಚಾರ್ಯ ಸಾರ್ವಭೌಮರಾದಂತಹ ಶ್ರೀ ಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕರ ಶತಮಾನೋತ್ಸವ ತಿರುನಕ್ಷತ್ರದಲ್ಲಿ ಪಾಲ್ಗೊಂಡು ಆಚರಿಸುವುದು ನಮ್ಮೆಲ್ಲರ ಜೀವನದಲ್ಲಿ ಒಂದು ದೊಡ್ಡ ಭಾಗ್ಯ ವಿಶೇಷ ಎನ್ನಿಸಿಕೊಂಡಿದೆ, ಮತ್ತು ಈ ಶತಮಾನೋತ್ಸವ ಸಂದರ್ಭದಲ್ಲಿ ಸಂಪ್ರದಾಯ ವಿಷಯವಾಗಿ ಒಂದು ಲೇಖನವನ್ನು ಅರ್ಪಿಸುವುದು ಮತ್ತೊಂದು ಭಾಗ್ಯ ವಿಶೇಷ ಎನ್ನಿಸಿಕೊಂಡಿದೆ.

ತತ್ವಗಳನ್ನು ಮೂರು ಬಗೆಯಾಗಿ ವಿಂಗಡಿಸಲ್ಪಟ್ಟಿದೆ ಅವು ಯಾವುದೆಂದರೆ –

೧. ಅಚೇತನ

೨. ಚೇತನ

೩. ಪರಬ್ರಹ್ಮ

ಅಚೇತನ – ಅಚೇತನವು ಜಡತ್ವ, ನಿತ್ಯತ್ವ, ವಿಕಾರತ್ವ ಮತ್ತು ಅಧೇಯತ್ವ ವಿಶೇಷಣಗಳಿಂದ ನಿರೂಪಿತವಾಗಿದೆ.

ಜಡತ್ವ – ಜಡವಸ್ತು ಅಂದರೆ ಜ್ಞಾನವು ಇರುವುದಿಲ್ಲ, ಅಚೇತನಕ್ಕೆ ತನಗೆ ತಾನೆ ತಿಳಿದುಕೊಳ್ಳುವ ಸ್ವಯಂಪ್ರಕಾಶ ಜ್ಞಾನವು ಇರುವುದಿಲ್ಲ ಮತ್ತು ಇತರ ದ್ರವ್ಯಗಳನ್ನು ತಿಳಿದುಕೊಳ್ಳುವ ಧರ್ಮಭೂತಜ್ಞಾನವೂ ಇರುವುದಿಲ್ಲ.

ನಿತ್ಯತ್ವ – ಅಚೇತನವು ಸೂಕ್ಷ್ಮಾವಸ್ಥೆಯಲ್ಲಿ ನಿತ್ಯ ವಸ್ತು ಅಂದರೆ ಅನಾದಿ ಕಾಲದಿಂದ ಇದೆ (ಮೂಲ ಪ್ರಕೃತಿ), ಅಚೇತನಕ್ಕೆ ಸೃಷ್ಟಿ ಮತ್ತು ನಾಶವೂ ಇಲ್ಲ ಹಾಗು ಅಚೇತನಕ್ಕೆ ಸ್ವರೂಪದಲ್ಲಿ ಯಾವ ನಾಮ ರೂಪವೂ ಇರುವುದಿಲ್ಲ. ಆದರೆ ಸೃಷ್ಟಿಕಾಲದಲ್ಲಿ ಪರಬ್ರಹ್ಮನು ಅಚೇತನಕ್ಕೆ ವಿಧ ವಿಧವಾದ ನಾಮ ರೂಪಗಳನ್ನು ಉಂಟು ಮಾಡುತ್ತಾನೆ.

ವಿಕಾರತ್ವ – ಪರಬ್ರಹ್ಮನ ಸಂಕಲ್ಪಕ್ಕೆ ಅನುಸಾರವಾಗಿ ಅಚೇತನವು ಅದರ ಸ್ವರೂಪ ಮತ್ತು ಸ್ವಭಾವ ಎರಡರಲ್ಲೂ ವಿಕಾರವನ್ನು ಹೊಂದುತ್ತದೆ, ಉದಾಹರಣೆಗೆ ಮಾವಿನ ಹಣ್ಣು ಆರಂಭದಲ್ಲಿ ಹೊರಗೆ ಮತ್ತು ಒಳಗೆ ಗಟ್ಟಿಯಾಗಿರುತ್ತವೆ ಆದರೆ ಕಾಲಕ್ರಮೇಣ ಮಾವಿನ ಹಣ್ಣು ಮೃದುವಾಗಿ ಪರಿಣಾಮ ಹೊಂದುತ್ತದೆ. ಈ ರೀತಿ ಅಚೇತನವು ಸ್ವರೂಪ ಮತ್ತು ಸ್ವಭಾವ ಎರಡರಲ್ಲೂ ವಿಕಾರವನ್ನು ಹೊಂದುತ್ತದೆ.

ಅಧೇಯತ್ವ – ಅಚೇತನಕ್ಕೆ ಸ್ವತಂತ್ರ ಇರುವಿಕೆ ಇರುವುದಿಲ್ಲ. ಅಚೇತನದ ಇರುವಿಕೆಗೆ ಪರಬ್ರಹ್ಮನ ಇರುವಿಕೆ ಮತ್ತು ಅವನ ಪರಿಪೂರ್ಣ ಆಧಾರವು ಅತ್ಯಂತ ಅವಶ್ಯಕ, ಪರಬ್ರಹ್ಮನ ಇರುವಿಕೆ ಇಲ್ಲದಿದ್ದರೆ ಅಚೇತನದ ಇರುವಿಕೆ ಸಾಧ್ಯವಿಲ್ಲ.

ಸರ್ವಸಾಮಾನ್ಯವಾಗಿ ಅಚೇತನವು ಸಂಖ್ಯೆಯಲ್ಲಿ ಅಪರಿಮಿತವಾಗಿದೆ, ಅಚೇತನ ವರ್ಗವು ಪರಬ್ರಹ್ಮನನ್ನು ಆಂತರ್ಯಾಮಿಯಾಗಿ ಹೊಂದಿವೆ ಮತ್ತು ಅಚೇತನವನ್ನು ಪರಬ್ರಹ್ಮನಿಂದ ಬೇರ್ಪಡಿಸುವುದಕ್ಕೆ ಆಗುವುದಿಲ್ಲ. ಸೃಷ್ಟಿಕಾಲದಲ್ಲಿ ಪರಬ್ರಹ್ಮನ ಸಂಕಲ್ಪಕ್ಕೆ ಅನುಗುಣವಾಗಿ ಎಲ್ಲಾ ಅಚೇತನಗಳು ಸೂಕ್ಷ್ಮಾವಸ್ಥೆಯಿಂದ ಸ್ಥೂಲಾವಸ್ಥೆಗೆ ಬಂದು, ಆವನಿಂದ ಸ್ಥಿತಿಯನ್ನು ಹೊಂದಿ ಮತ್ತು ಪ್ರಳಯಕಾಲದಲ್ಲಿ ಪುನ: ಪರಬ್ರಹ್ಮನಲ್ಲೇ ಸೂಕ್ಷ್ಮವಾಗಿ ಸೇರುತ್ತದೆ.

ಅಚೇತನವು ಮೂರು ವಿಧವಾಗಿ ವಿಂಗಡಿಸಲ್ಪಟ್ಟಿದೆ. ಅವು ಯಾವುವೆಂದರೆ – ಪ್ರಕೃತಿ, ಕಾಲ ಮತ್ತು ಶುದ್ಧಸತ್ವ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಚೇತನ (ಜೀವಾತ್ಮ) – ಜೀವಾತ್ಮನು ಜ್ಞಾತೃತ್ವ, ಆನಂದತ್ವ, ಅಮಲತ್ವ, ಶೇಷತ್ವ, ಅಣುತ್ವ, ನಿತ್ಯತ್ವ, ಸ್ವಭಾವ ವಿಕಾರತ್ವ, ಆಧೇಯತ್ವ ಮತ್ತು ಕರ್ತೃತ್ವ ವಿಶೇಷಣಗಳಿಂದ ನಿರೂಪಿಸಲ್ಪಟ್ಟಿದ್ದಾನೆ.

ಜ್ಞಾತೃತ್ವ – ಜೀವಾತ್ಮನು ಜ್ಞಾನ ಸ್ವರೂಪನಾಗಿದ್ದಾನೆ. ಇವನಿಗೆ ಎರಡು ವಿಧವಾದ ಜ್ಞಾನವು ಇರುವುದು, ಒಂದು ಸ್ವರೂಪಜ್ಞಾನ ಮತ್ತೊಂದು ಧರ್ಮಭೂತಜ್ಞಾನ. ಸ್ವರೂಪಜ್ಞಾನದಿಂದ ಜೀವಾತ್ಮನು ತನ್ನನ್ನು ತಾನೆ ತಿಳಿದುಕೊಳ್ಳುತ್ತಾನೆ ಮತ್ತು ಧರ್ಮಭೂತಜ್ಞಾನದಿಂದ ಇತರ ದ್ರವ್ಯಗಳನ್ನು ತಿಳಿದುಕೊಳ್ಳುತ್ತಾನೆ.

ಜೀವಾತ್ಮನು ನಿತ್ಯನು ಅಂದರೆ ಅನಾದಿಕಾಲದಿಂದ ಇದ್ದಾನೆ, ಜೀವಾತ್ಮನಿಗೆ ಸೃಷ್ಟಿ ಮತ್ತು ನಾಶವು ಇಲ್ಲ ಮತ್ತು ಇವನ ಕರ್ಮವು ಅನಾದಿ. ಈ ಕರ್ಮಸಂಬಂಧದ ಕಾರಣದಿಂದ ಜೀವಾತ್ಮನ ಧರ್ಮಭೂತ ಜ್ಞಾನವು ವ್ಯತ್ಯಾಸವನ್ನು ಹೊಂದಿ ಸಂಕುಚಿತವಾಗಿರುತ್ತದೆ. ಆದರೆ ಯಾವ ಜೀವಾತ್ಮನು ಶಾಸ್ತ್ರವನ್ನು ಪ್ರಮಾಣವಾಗಿ ಇಟ್ಟುಕೊಂಡು ಪರಬ್ರಹ್ಮನನ್ನೇ ಸ್ಮರಿಸಿ ಮತ್ತು ಮೋಕ್ಷಪ್ರಾಪ್ತಿಗೆ ಪರಬ್ರಹ್ಮನಲ್ಲೇ ಸಾಧ್ಯೋಪಾಯವನ್ನು ಅನುಷ್ಠಿಸಿತ್ತಾನೆಯೋ, ಅಂತಹ ಜೀವಾತ್ಮನು ಪರಬ್ರಹ್ಮನ ಅನುಗ್ರಹವನ್ನು ಪಡೆದು ತನ್ನ ಪ್ರಾರಬ್ಧಕರ್ಮವನ್ನೆಲ್ಲಾ ಕಳೆದುಕೊಂಡು ನಿತ್ಯವಿಭೂತಿಯಲ್ಲಿ ಪರಬ್ರಹ್ಮನ ಪ್ರಾಪ್ತಿಯಾನ್ನು ಪಡೆದು ವಿಭುವಾದ ಧರ್ಮಭೂತಜ್ಞಾನದೊಂದಿಗೆ ಪ್ರಕಾಶಿಸುತ್ತಾನೆ.

ಜೀವಾತ್ಮನಿಗೆ ಸಾಧಾರಣವಾಗಿ ಯಾವ ನಾಮ ರೂಪವೂ ಇರುವುದಿಲ್ಲ ಆದರೆ ಪರಬ್ರಹ್ಮನು ಸೃಷ್ಟಿಕಾಲದಲ್ಲಿ ಜೀವಾತ್ಮನಿಗೆ ನಾಮ ರೂಪವನ್ನು ಉಂಟುಮಾಡುತ್ತಾನೆ. ಜೀವಾತ್ಮನು ಪೂರ್ವ ಜನ್ಮದಲ್ಲಿ ಮಾಡಿದ ಪುಣ್ಯ ಮತ್ತು ಪಾಪ ಕರ್ಮ ಫಲಕ್ಕೆ ಅನುಸಾರವಾಗಿ ಪರಬ್ರಹ್ಮನು ಜೀವಾತ್ಮನಿಗೆ ನಾಮರೂಪವನ್ನು ಉಂಟುಮಾಡುತ್ತಾನೆ. ಈ ಕಾರಣದಿಂದ ಜೀವಾತ್ಮನಿಗೆ ವಿಧವಿಧವಾದ ನಾಮರೂಪವು ಉಂಟಾಗಬಹುದು. ಉದಾಹರಣೆ ಮನುಷ್ಯ, ಪ್ರಾಣಿ, ಪಕ್ಷಿ ಮತ್ಸ್ಯ ಇತ್ಯಾದಿ. ನಾಮ ರೂಪವನ್ನು ಉಂಟುಮಾಡುವುದು ಎಂದರೆ ಪರಬ್ರಹ್ಮನು ಜೀವಾತ್ಮನಿಗೆ ಇಂದ್ರಿಯಗಳು, ಮನಸ್ಸು, ಬುದ್ಧಿ, ಪ್ರಾಣ ಮತ್ತು ಶರೀರಗಳ ಸಂಬಂಧವನ್ನು ಕೊಡುತ್ತಾನೆ.

ಆನಂದತ್ವ – ಜೀವಾತ್ಮನಿಗೆ ಆನಂದತ್ವವು ಸ್ವರೂಪ ಸಿದ್ಧವಾದ ಪ್ರಕರಣವಾಗಿದೆ. ಆದರೆ ಬದ್ಧಾವಸ್ಥೆಯಲ್ಲಿ ಜೀವಾತ್ಮನು ತನ್ನ ಕರ್ಮಸಂಬಂಧದಿಂದ ಬ್ರಹ್ಮಾನಂದವನ್ನು ಪಡೆಯುವುದಿಲ್ಲ. ಆದರೆ ಯಾವ ಜೀವಾತ್ಮನು ಶಾಸ್ತ್ರವನ್ನು ಪ್ರಮಾಣವಾಗಿ ಇಟ್ಟುಕೊಂಡು ಪರಬ್ರಹ್ಮನನ್ನೇ ಸ್ಮರಿಸಿ ಮತ್ತು ಮೋಕ್ಷಪ್ರಾಪ್ತಿಗೆ ಪರಬ್ರಹ್ಮನಲ್ಲೇ ಸಾಧ್ಯೋಪಾಯವನ್ನು ಅನುಷ್ಠಿಸಿತ್ತಾನೆಯೋ, ಅಂತಹ ಜೀವಾತ್ಮನು ಪರಬ್ರಹ್ಮನ ಅನುಗ್ರಹವನ್ನು ಪಡೆದು ತನ್ನ ಪ್ರಾರಬ್ಧಕರ್ಮವನ್ನೆಲ್ಲಾ ಕಳೆದುಕೊಂಡು, ನಿತ್ಯವಿಭೂತಿಯಲ್ಲಿ ಪರಬ್ರಹ್ಮನ ಪ್ರಾಪ್ತಿಯನ್ನು ಪಡೆದು ಅಪರಿಮಿತವಾದ ಬ್ರಹ್ಮಾನಂದದೊಂದಿಗೆ ಪ್ರಕಾಶಿಸುತ್ತಾನೆ.

ಅಮಲತ್ವ – ಜೀವಾತ್ಮನು ಸ್ವರೂಪದಲ್ಲಿ ಕೇವಲ ಜ್ಞಾನಸ್ವರೂಪನು ಮತ್ತು ಪರಿಶುದ್ಧನು ಹಾಗು ಯಾವುದೇ ರೀತಿಯ ದೋಷಗಂಧ ಇಲ್ಲದವನು. ಅಂದರೆ ಯಾವ ವಿಧವಾದ ಹೇಯ ಗುಣಗಳು ಜೀವಾತ್ಮನಿಗೆ ಇರುವುದಿಲ್ಲ. ಆದರೇ ಜೀವಾತ್ಮನು ಇಂದ್ರಿಯ, ಮನಸ್ಸು, ಬುದ್ಧಿ ಮತ್ತು ಶರೀರ ಇವುಗಳ ಜೊತೆ ಸೇರಿ ಮಾಡಿರುವ ಅನೇಕ ಪಾಪ ಕರ್ಮಗಳಿಂದ ಕರ್ಮಸಂಬಂಧವನ್ನು ಹೊಂದುತ್ತಾನೆ.

ಶೇಷತ್ವ – ಜೀವಾತ್ಮನು ಪರಬ್ರಹ್ಮನಿಗೇ ಶೇಷನು ಮತ್ಯಾರಿಗೂ ಶೇಷನಲ್ಲನು. ಶೇಷನೆಂದರೆ ಜೀವಾತ್ಮನು ಪರಬ್ರಹ್ಮನಿಗೆ ದಾಸನು, ಅಧೀನನು ಮತ್ತು ಪರಬ್ರಹ್ಮನ ಪ್ರಯೋಜನಕ್ಕಾಗಿಯೇ ಇರುವವನು. ಜೀವಾತ್ಮನು ಅಹಂಕಾರ ಮಮಕಾರವನ್ನು ತ್ಯಜಿಸಿ ಯಾವಾಗಲೂ ಪರಬ್ರಹ್ಮನನ್ನೇ ಸ್ಮರಿಸಿ ಮತ್ತು ಪರಬ್ರಹ್ಮನಿಗೆ ಸಂತೋಷವಾಗುವ ಹಾಗೆ ಸಕಲ ಕೈಂಕರ್ಯಗಳನ್ನು ಸಲ್ಲಿಸಬೇಕು.

ಅಣುತ್ವ – ಜೀವಾತ್ಮನು ಸ್ವರೂಪದಲ್ಲಿ ಅತ್ಯಂತ ಅಣುವಾಗಿ ಇರುವವನು. ಹೇಗೆಂದರೆ ಒಂದು ಬತ್ತದ ಮೊನೆಯನ್ನು ನೂರು ಭಾಗ ಮಾಡಿ, ಒಂದು ಭಾಗವನ್ನು ಪುನ: ನೂರು ಭಾಗ ಮಾಡಿದರೆ ಎಷ್ಟು ಅಲ್ಪವೋ, ಆ ರೀತಿ ಜೀವಾತ್ಮನು ಸ್ವರೂಪದಲ್ಲಿ ಅತ್ಯಂತ ಅಲ್ಪನು.

ನಿತ್ಯತ್ವ – ಜೀವಾತ್ಮನು ಅನಾದಿಕಾಲದಿಂದ ಇದ್ದಾನೆ ಹಾಗು ಇವನಿಗೆ ಸೃಷ್ಟಿ ಮತ್ತು ನಾಶವು ಇಲ್ಲ.

ಸ್ವಭಾವ ವಿಕಾರತ್ವ – ಜೀವಾತ್ಮನು ಜ್ಞಾನಸ್ವರೂಪನಾಗಿದ್ದು ಸ್ವರೂಪದಲ್ಲಿ ಯಾವ ವಿಕಾರವನ್ನು ಹೊಂದದೇ ಸ್ವಭಾವದಲ್ಲಿ ಮಾತ್ರ ವಿಕಾರವನ್ನು ಹೊಂದುತ್ತಾನೆ. ಜೀವಾತ್ಮನು ಕರ್ಮಸಂಬಂಧವಿರುವುದರಿಂದ ಪ್ರಾಕೃತ ಶರೀರವನ್ನು ಹೊಂದಿ ಪ್ರಕೃತಿಯ ಪರಿಣಾಮಕ್ಕೆ ವಿಧವಿಧವಾದ ವಿಕಾರವನ್ನು ಹೊಂದುತ್ತಾನೆ. ವಿಕಾರಗಳು ಏನೆಂದರೆ ಬಾಲತ್ವ, ಯುವತ್ವ, ಸ್ಥವಿರತ್ವ ಜರತ್ವ ಇತ್ಯಾದಿಗಳು. ಅಂತೆಯೇ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ್ಯ ಇತ್ಯಾದಿಗಳೂ ಸ್ವಭಾವ ವಿಕಾರಗಳೇ. ಈ ಎಲ್ಲಾ ವಿಕಾರಗಳು ಜೀವಾತ್ಮನ ಶರೀರಕ್ಕೆ ಸಂಭವಿಸುವುದು ಆದರೆ ಸ್ವರೂಪದಲ್ಲಿ ಯಾವುದೇ ವಿಕಾರವನ್ನು ಹೊಂದುವುದಿಲ್ಲ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆಧೇಯತ್ವ – ಜೀವಾತ್ಮನಿಗೆ ಸ್ವತಂತ್ರ ಇರುವಿಕೆ ಇರುವುದಿಲ್ಲ. ಜೀವಾತ್ಮನ ಇರುವಿಕೆಗೆ ಪರಬ್ರಹ್ಮನ ಇರುವಿಕೆ ಮತ್ತು ಪರಬ್ರಹ್ಮನ ಪರಿಪೂರ್ಣ ಆಧಾರವು ಅತ್ಯಂತ ಅವಶ್ಯಕ. ಪರಬ್ರಹ್ಮನ ಇರುವಿಕೆ ಇಲ್ಲದಿದ್ದರೆ ಜೀವಾತ್ಮನ ಇರುವಿಕೆ ಸಾಧ್ಯವಿಲ್ಲ.

ಕರ್ತೃತ್ವ – ಜೀವಾತ್ಮನಿಗೆ ಪರಬ್ರಹ್ಮನ ಸಂಕಲ್ಪಕ್ಕೆ ಅನುಸಾರವಾಗಿ ಕರ್ತೃತ್ವವು ಉಂಟು. ಜೀವಾತ್ಮನು ತಾನು ಮಾಡುವ ಒಳ್ಳೆಯ ಅಥವ ಕೆಟ್ಟ ಕಾರ್ಯಗಳಿಗೆಲ್ಲಾ ತಾನೆ ಜವಾಬ್ದಾರಿಯಾಗಿದ್ದಾನೆ. ಜೀವಾತ್ಮನು ಪೂರ್ವ ಜನ್ಮದಲ್ಲಿ ಮಾಡಿದ ಪುಣ್ಯ ಪಾಪ ಕರ್ಮಗಳಿಗೆ ಅನುಸಾರವಾಗಿ ಪರಬ್ರಹ್ಮನು ಜೀವಾತ್ಮನಿಗೆ ಇಂದ್ರಿಯ, ಮನಸ್ಸು, ಬುದ್ಧಿ, ಪ್ರಾಣ, ಶರೀರವನ್ನು ಕೊಡುತ್ತಾನೆ. ಜೀವನು ಇವುಗಳನ್ನು ಒಳ್ಳೆಯ ಸತ್ಕಾರ್ಯಗಳನ್ನು ಮಾಡುವುದಕ್ಕೆ ಉಪಯೋಗಿಸಬೇಕು ಮತ್ತು ಪರಬ್ರಹ್ಮನನ್ನೇ ಅನನ್ಯವಾಗಿ ಸ್ಮರಿಸುವುದಕ್ಕೆ ಮತ್ತು ಪ್ರಾಪ್ತಿ ಹೊಂದುವುದಕ್ಕೆ ಉಪಯೋಗಿಸಬೇಕು. ಪರಬ್ರಹ್ಮನು ಜೀವಾತ್ಮನ ಅಂತರ್ಯಾಮಿಯಾಗಿರುವುದರಿಂದ ಜೀವಾತ್ಮನ ಎಲ್ಲಾ ಕಾರ್ಯಗಳು ಪರಬ್ರಹ್ಮನಿಂದ ನಿಯಂತ್ರಿತವಾಗಿರುತ್ತದೆ.

ಸಾಮಾನ್ಯವಾಗಿ ಜೀವಾತ್ಮರು ಸಂಖ್ಯೆಯಲ್ಲಿ ಅಪರಿಮಿತವಾಗಿದ್ದಾರೆ. ಎಲ್ಲಾ ಜೀವಾತ್ಮರು ಪರಬ್ರಹ್ಮನನ್ನು ಅಂತರ್ಯಾಮಿಯಾಗಿ ಹೊಂದಿದ್ದಾರೆ ಮತ್ತು ಜೀವಾತ್ಮರನ್ನು ಪರಬ್ರಹ್ಮನಿಂದ ಬೇರ್ಪಡಿಸುವುದಕ್ಕೆ ಅಸಾಧ್ಯ. ಎಲ್ಲಾ ಜೀವಾತ್ಮರು ಸೃಷ್ಟಿಕಾಲದಲ್ಲಿ ಪರಬ್ರಹ್ಮನ ಸಂಕಲ್ಪಕ್ಕೆ ಅನುಸಾರವಾಗಿ ಸೂಕ್ಷ್ಮಾವಸ್ಥೆಯಿಂದ ಸ್ಥೂಲಾವಸ್ಥೆಗೆ ಬಂದು, ಅವನಿಂದ ಸ್ಥಿತಿಯನ್ನು ಪಡೆದು ಹಾಗು ಪ್ರಳಯಕಾಲದಲ್ಲಿ ಮತ್ತೆ ಪರಬ್ರಹ್ಮನಲ್ಲೇ ಸೂಕ್ಷ್ಮವಾಗಿ ಸೇರುತ್ತಾರೆ. ಸಮಸ್ತ ಜೀವಾತ್ಮರು ಪರಬ್ರಹ್ಮನನ್ನೇ ಅಂತರ್ಯಾಮಿಯಾಗಿ ಧ್ಯಾನಿಸಿ ಮತ್ತು ಪರಬ್ರಹ್ಮನ್ನಲ್ಲೇ ಸಾಧ್ಯೋಪಾಯವನ್ನು ಅನುಷ್ಠಿಸಿ ಪರಬ್ರಹ್ಮನ ಪ್ರಾಪ್ತಿಯನ್ನು ಹೊಂದಬೇಕು. ಛಾಂದೋಗ್ಯ ಉಪನಿಷತ್ತು ಇದನ್ನೇ ಹೇಳುತ್ತದೆ "ತಸ್ಯತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇ ಅಥ ಸಂಪತ್ಸ್ಯೇ" ಯಾವ ಜೀವಾತ್ಮನು ಪರಬ್ರಹ್ಮನನ್ನು ಅಂತರ್ಯಾಮಿಯಾಗಿ ಧ್ಯಾನಿಸುವನೋ ಅವನು ಈ ಸಂಸಾರ ಬಂಧನದಿಂದ ಬಿಡುಗಡೆ ಹೊಂದಿ ಪರಬ್ರಹ್ಮನನ್ನು ಹೊಂದುತ್ತಾನೆ. ಈ ರೀತಿ ಜೀವಾತ್ಮನು ಉಪಾಸಕನು ಹಾಗು ಪರಬ್ರಹ್ಮನು ಉಪಾಸ್ಯನು.

ಜೀವಾತ್ಮರು ಮೂರು ವಿಧವಾಗಿ ವಿಂಗಡಿಸಲ್ಪಟ್ಟಿದ್ದಾರೆ ಅವರು ಬದ್ಧರು, ಮುಕ್ತರು ಮತ್ತು ನಿತ್ಯರು.

ಬದ್ಧರು – ಈ ವರ್ಗದ ಜೀವಾತ್ಮರು ಅವರ ಅನಾದಿ ಕರ್ಮ ಸಂಬಂಧದಿಂದ ಸಂಸಾರಬಂಧನವನ್ನು ಹೊಂದಿ ಕರ್ಮವಶ್ಯದ ಶರೀರವನ್ನು ಹೊಂದಿದ್ದಾರೆ ಮತ್ತು ಇವರಿಗೆ ಜ್ಞಾನದಲ್ಲಿ ವ್ಯತ್ಯಾಸವು ಮತ್ತು ಸಂಕೋಚವು ಇರುತ್ತದೆ ಹಾಗು ಅಪರಿಮಿತವಾದ ಬ್ರಹ್ಮಾನಂದವು ಇರುವುದಿಲ್ಲ. ಬದ್ಧಜೀವಾತ್ಮರು ಸೃಷ್ಟಿಗೆ ಮೊದಲು ಅನೇಕ ಸಲ ಜನ್ಮಸಂತತಿಯನ್ನು ಹೊಂದಿರುವವರು ಮತ್ತು ಇವರು ಪ್ರಾಕೃತ ಶರೀರವನ್ನು ಹೊಂದಿ ಪ್ರಕೃತಿಯ ಪರಿಣಾಮಕ್ಕೆ ವಿಧವಿಧವಾದ ವಿಕಾರವನ್ನು ಹೊಂದುತ್ತಾರೆ.

ಮುಕ್ತರು – ಈ ವರ್ಗದ ಜೀವಾತ್ಮರು ಸಂಸಾರ ಬಂಧನದಲ್ಲಿ ಇದ್ದು, ಆದರೆ ನಂತರ ಶಾಸ್ತ್ರವನ್ನು ಪರಿಶೋಧಿಸಿ ಶಾಸ್ತ್ರವನ್ನು ಪ್ರಮಾಣವಾಗಿ ಇಟ್ಟುಕೊಂಡು ಪರಬ್ರಹ್ಮನನ್ನೇ ಸ್ಮರಿಸಿ, ಅವನಲ್ಲೇ ಮೋಕ್ಷಪ್ರಾಪ್ತಿಗೆ ಸಾಧ್ಯೋಪಾಯವನ್ನು ಅನುಷ್ಠಿಸಿ, ಪರಬ್ರಹ್ಮನ ಅನುಗ್ರಹವನ್ನು ಪಡೆದು ಪ್ರಾರಬ್ಧಕರ್ಮವನ್ನೆಲ್ಲಾ ಕಳೆದುಕೊಂಡು, ನಿತ್ಯವಿಭೂತಿಗೆ ಹೋಗಿ ಪರಬ್ರಹ್ಮನ ಪ್ರಾಪ್ತಿಯನ್ನು ಹೊಂದಿ, ಅಪರಿಮಿತವಾದ ಜ್ಞಾನಾನಂದವನ್ನು ಮತ್ತು ಬ್ರಹ್ಮಾನುಭವವನ್ನು ಹೊಂದಿರುತ್ತಾರೆ. ಮುಕ್ತಜೀವಾತ್ಮರಿಗೆ ಜ್ಞಾನದಲ್ಲಿ ವ್ಯತ್ಯಾಸವು ಮತ್ತು ಸಂಕೋಚವು ಇರುವುದಿಲ್ಲ. ಇವರ ಜ್ಞಾನವು ಪರಬ್ರಹ್ಮನ ಹಾಗೆ ವಿಭೂವಾಗಿ ಎಲ್ಲಾಕಡೆಗಳಲ್ಲೂ ಪ್ರಕಾಶವಾಗಿ ಇರುವುದು ಮತ್ತು ಇವರು ಪ್ರಕೃತಿಯ ಪರಿಣಾಮಕ್ಕೆ ಯಾವ ವಿಧವಾದ ವಿಕಾರವನ್ನು ಹೊಂದದೇ ಇರುವ ಅಪ್ರಾಕೃತ ಶರೀರವನ್ನು ಹೊಂದಿದ್ದಾರೆ.

ನಿತ್ಯರು – ಪರಬ್ರಹ್ಮನ ಸಂಕಲ್ಪದಿಂದ ಈ ವರ್ಗದ ಜೀವಾತ್ಮರು ಯಾವವಿಧವಾದ ಕರ್ಮ ಸಂಬಂಧವು ಇಲ್ಲದೆ, ಅನಾದಿ ಕಾಲದಿಂದ ನಿತ್ಯವಿಭೂತಿಯಲ್ಲಿ ಇದ್ದುಕೊಂಡು ಪರಬ್ರಹ್ಮನನ್ನು ಅನುಭವಿಸುತ್ತಾ ಅಪರಿಮಿತವಾದ ಜ್ಞಾನ, ಆನಂದ ಮತ್ತು ಬ್ರಹ್ಮಾನುಭವವನ್ನು ಹೊಂದಿದ್ದಾರೆ. ನಿತ್ಯಜೀವಾತ್ಮರಿಗೆ ಜ್ಞಾನದಲ್ಲಿ ವ್ಯತ್ಯಾಸವು ಮತ್ತು ಸಂಕೋಚವು ಇರಿವುದಿಲ್ಲ, ಇವರ ಜ್ಞಾನವು ಪರಬ್ರಹ್ಮನ ಹಾಗೆ ವಿಭೂವಾಗಿ ಎಲ್ಲಾಕಡೆಗಳಲ್ಲೂ ಪ್ರಕಾಶವಾಗಿ ಇರುವುದು. ಇವರು ಪ್ರಕೃತಿಯ ಪರಿಣಾಮಕ್ಕೆ ಯಾವ ವಿಧವಾದ ವಿಕಾರವನ್ನು ಹೊಂದದೇ ಇರುವ ಅಪ್ರಾಕೃತ ಶರೀರವನ್ನು ಹೊಂದಿದ್ದಾರೆ.

ಪರಬ್ರಹ್ಮ – ಪರಬ್ರಹ್ಮನು ಈ ಸಮಸ್ತ ವಿಶ್ವವನ್ನೇ ಆಳುವ ಪರಮ ಶ್ರೇಷ್ಠ ಮಹಾಪುರುಷನು ಹಾಗು ಉತ್ಕೃಷ್ಟ ಲೋಕವಾದ ನಿತ್ಯವಿಭೂತಿಯಲ್ಲಿ ನೆಲೆಸಿರುವವನು. ನಿತ್ಯವಿಭೂತಿಯು ಪೃಥಿವಿ ಮತ್ತು ಸ್ವರ್ಗ ಲೋಕಗಳಿಗಿಂತ ಮೇಲಿರುವ ಲೋಕ. ಪರಬ್ರಹ್ಮನು ಸರ್ವ ದೇಶ, ಸರ್ವ ಕಾಲ ಮತ್ತು ಸರ್ವ ವಸ್ತುಗಳಲ್ಲೂ ಇದ್ದು, ಎಲ್ಲಾ ಚೇತನ ಮತ್ತು ಅಚೇತನಗಳಿಗೆ ಅಂತರ್ಯಾಮಿಯಾಗಿದ್ದಾನೆ. ಸೃಷ್ಟಿಗೆ ಮೊದಲು ಎಲ್ಲಾ ಚೇತನ ಮತ್ತು ಅಚೇತನಗಳು ಪರಬ್ರಹ್ಮನಲ್ಲೇ ಸೂಕ್ಷ್ಮವಾಗಿ ಇರುತ್ತದೆ ಆದರೆ ಸೃಷ್ಟಿಕಾಲದಲ್ಲಿ ಪರಬ್ರಹ್ಮನ ಸಂಕಲ್ಪಕ್ಕೆ ಅನುಗುಣವಾಗಿ ಎಲ್ಲಾ ಚೇತನ ಮತ್ತು ಅಚೇತನಗಳು ಸೂಕ್ಷ್ಮಾವಸ್ಥೆಯಿಂದ ಸ್ಥೂಲಾವಸ್ಥೆಗೆ ಬಂದು, ಅವನಿಂದ ಸ್ಥಿತಿಯನ್ನು ಹೊಂದಿ ಮತ್ತು ಪ್ರಳಯಕಾಲದಲ್ಲಿ ಪುನ: ಪರಬ್ರಹ್ಮನಲ್ಲೇ ಸೂಕ್ಷ್ಮವಾಗಿ ಸೇರುತ್ತದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪರಬ್ರಹ್ಮನು ಅಪರಿಮಿತವಾದ ಜ್ಞಾನ, ಆನಂದ ಹಾಗು ಕಲ್ಯಾಣಗುಣಗಳನ್ನು ಹೊಂದಿದ್ದು ಅಂತೆಯೇ ಹೇಯಪ್ರತ್ಯನೀಕನು, ಅಂದರೆ ಯಾವುದೇ ಹೇಯಗುಣಗಳಿಲ್ಲದವನು. ಪರಬ್ರಹ್ಮನು ಸಮಸ್ತ ಜೀವಾತ್ಮರಿಗೆಲ್ಲಾ ನಾಥನು ಮತ್ತು ಎಲ್ಲಾ ಜೀವಾತ್ಮರು ಪರಬ್ರಹ್ಮನನ್ನೇ ಸ್ಮರಿಸಿ ಅವನ ಪ್ರಾಪ್ತಿಯನ್ನು ಹೊಂದಬೇಕು.

ಪರಬ್ರಹ್ಮನು ಸತ್ಯತ್ವ, ಜ್ಞಾತೃತ್ವ, ಅನಂತತ್ವ, ಅಮಲತ್ವ, ಆನಂದತ್ವ, ಸತ್ಯಸಂಕಲ್ಪತ್ವ, ಶೇಷಿತ್ವ, ದಯಾಗುಣತ್ವ, ಆಧಾರತ್ವ, ನಿಯಾಮಕತ್ವ ಮತ್ತು ರಕ್ಷಕತ್ವ ಹಾಗು ಇನ್ನೂ ಅನೇಕ ಪ್ರಶಸ್ತವಾದ ವಿಶೇಷಣಗಳಿಂದ ನಿರೂಪಿತನಾಗಿದ್ದಾನೆ.

ಸತ್ಯತ್ವ – ಪರಬ್ರಹ್ಮನು ದಿವ್ಯ ಮಂಗಳರೂಪವನ್ನು ಹೊಂದಿದ್ದಾನೆ, ಈ ರೂಪವು ಅತ್ಯಂತ ಸ್ಥಿರವಾದ ರೂಪವು ಆದ್ದರಿಂದ ಇವನು ಸ್ವರೂಪದಲ್ಲಾಗಲಿ ಅಥವಾ ಸ್ವಭಾವದಲ್ಲಾಗಲಿ ಯಾವ ವಿಧವಾದ ವಿಕಾರವನ್ನು ಹೊಂದುವುದಿಲ್ಲ. ಪರಬ್ರಹ್ಮನು ಅಪ್ರಾಕೃತ ಶರೀರವನ್ನು ಹೊಂದಿದ್ದಾನೆ ಅಂದರೆ ಪ್ರಕೃತಿಯ ಪರಿಣಾಮಕ್ಕೆ ಯಾವ ವಿಧವಾದ ವಿಕಾರವನ್ನು ಹೊಂದದೆ ಇದ್ದಾನೆ. ಬಾಲತ್ವ, ಯುವತ್ವ, ಸ್ಥವಿರತ್ವ, ಜರತ್ವ ಮುಂತಾದ ಯಾವ ವಿಕಾರಗಳು ಪರಬ್ರಹ್ಮನಿಗೆ ಸಂಭವಿಸುವುದಿಲ್ಲ.

ಚೇತನನು ಸ್ವಭಾವದಲ್ಲಿ ವಿಕಾರವನ್ನು ಹೊಂದುತ್ತಾನೆ ಮತ್ತು ಅಚೇತನವು ಸ್ವರೂಪ ಮತ್ತು ಸ್ವಭಾವ ಎರಡರಲ್ಲೂ ವಿಕಾರವನ್ನು ಹೊಂದುತ್ತದೆ ಆದರೆ ಚೇತನ ಮತ್ತು ಅಚೇತನಗಳ ಅಂತರ್ಯಾಮಿಯಾಗಿರುವ ಪರಬ್ರಹ್ಮನು ಯಾವ ವಿಧವಾದ ವಿಕಾರವನ್ನು ಹೊಂದುವುದಿಲ್ಲ.

ಸೃಷ್ಟಿಗೆ ಮೊದಲು ಚೇತನ ಮತ್ತು ಅಚೇತನಗಳು ಯಾವ ನಾಮ ರೂಪಗಳೂ ಇಲ್ಲದೆ ಸೂಕ್ಷ್ಮಾವಸ್ಥೆಯಲ್ಲಿ ಇರುತ್ತವೆ ಆದರೆ ಸೃಷ್ಟಿಕಾಲದಲ್ಲಿ ಪರಬ್ರಹ್ಮನ ಸಂಕಲ್ಪದಿಂದ ಎಲ್ಲಾ ಚೇತನ ಮತ್ತು ಅಚೇತನಗಳು ನಾಮ ರೂಪವನ್ನು ಹೊಂದಿ ಸ್ಥೂಲಾವಸ್ಥೆಯನ್ನು ಹೊಂದುತ್ತವೆ. ಈ ಕ್ರಮದಲ್ಲಿ ಚೇತನ ಮತ್ತು ಅಚೇತನಗಳಿಗೆ ವಿಕಾರ ಮತ್ತು ಬದಲಾವಣೆಗಳು ಆಗುತ್ತದೆ. ಆದರೆ ಚೇತನ ಮತ್ತು ಅಚೇತನಗಳ ಅಂತರ್ಯಾಮಿಯಾಗಿರುವ ಪರಬ್ರಹ್ಮನಿಗೆ ಯಾವ ವಿಧವಾದ ವಿಕಾರವು ಮತ್ತು ಬದಲಾವಣೆಗಳು ಆಗುವುದಿಲ್ಲ.

ಜ್ಞಾತೃತ್ವ – ಪರಬ್ರಹ್ಮನು ತಾನೇ ಜ್ಞಾನಸ್ವರೂಪನಾಗಿದ್ದು, ಸ್ಥಿರವಾದ, ಅಪರಿಮಿತವಾದ, ವಿಭುವಾದ ಹಾಗು ಉತ್ಕೃಷ್ಟವಾದ ಜ್ಞಾನವನ್ನು ಹೊಂದಿದ್ದಾನೆ. ಇವನಿಗೆ ಜ್ಞಾನ ವ್ಯತ್ಯಾಸವು ಯಾವ ಕಾಲದಲ್ಲು ಸಂಭವಿಸುವುದಿಲ್ಲ.

ಅನಂತತ್ವ – ಪರಬ್ರಹ್ಮನು ಸರ್ವ ಸ್ಥಳಗಳಲ್ಲಿ, ಸರ್ವ ಕಾಲ ಮತ್ತು ಸರ್ವ ಚೇತನ ಹಾಗು ಅಚೇತನಗಳಲ್ಲೂ ಇದ್ದಾನೆ. ಸಕಲ ಚೇತನಾ ಮತ್ತು ಅಚೇತನಗಳಿಗೆ ಅಂತರ್ಯಾಮಿಯಾಗಿದ್ದಾನೆ ಮತ್ತು ಚೇತನ ಹಾಗು ಅಚೇತನಗಳಿಂದ ಪರಬ್ರಹ್ಮನನ್ನು ಬೇರ್ಪಡಿಸುವುದಕ್ಕಾಗುವುದಿಲ್ಲ.

ಅಮಲತ್ವ – ಪರಬ್ರಹ್ಮನು ಹೇಯಪ್ರತ್ಯನೀಕನು ಅಂದರೆ ಸದಾಕಾಲ ಪರಿಶುದ್ಧನಾಗಿದ್ದು, ಯಾವ ವಿಧವಾದ ದೋಷಗಂಧವು ಹಾಗು ಹೇಯಗುಣಗಳನ್ನು ಹೊಂದದೇ ಇದ್ದಾನೆ. ಪರಬ್ರಹ್ಮನು ಅಪಹತಪಾಪ್ಮ ಅಂದರೆ ಯಾವ ವಿಧವಾದ ಕರ್ಮ ಸಂಬಂಧವು ಹೊಂದದೆ ಚೇತನ ಹಾಗು ಅಚೇತನಗಳ ಅಂತರ್ಯಾಮಿಯಾಗಿದ್ದರೂ ಅವುಗಳ ದೋಷವು ಪರಬ್ರಹ್ಮನಿಗೆ ಸಂಭವಿಸುವುದಿಲ್ಲ. ಹೇಗೆ ಆಕಾಶಕ್ಕೆ ಆಯಾಪದಾರ್ಥಗಳ ದೋಷವುಂಟಾಗುವುದಿಲ್ಲವೋ ಆ ರೀತಿ ಪರಬ್ರಹ್ಮನಿಗೂ ಯಾವ ದೋಷವೂ ಸಂಭವಿಸುವುದಿಲ್ಲ.

ಆನಂದತ್ವ – ಪರಬ್ರಹ್ಮನು ಅಪರಿಮಿತವಾದ ಬ್ರಹ್ಮಾನಂದವನ್ನು ನಿರತಿಶಯವಾಗಿ ಒಂದಕ್ಕಿಂತ ಮತ್ತೊಂದು ನೂರರಷ್ಟು ಹೆಚ್ಚಾದುದು ಎಂಬಂತೆ ಹೊಂದಿದ್ದಾನೆ.

ಸತ್ಯಸಂಕಲ್ಪತ್ವ – ಪರಬ್ರಹ್ಮನು ಸತ್ಯಸಂಕಲ್ಪತ್ವವನ್ನು ಹೊಂದಿದ್ದಾನೆ ತನ್ನ ಇಷ್ಟಾನುಸಾರ ಸಮಸ್ತ ಕಾರ್ಯಗಳನ್ನು ಯಾವ ಪ್ರತಿಬಂಧಕವಿಲ್ಲದೆ ಮಾಡುತ್ತಾನೆ ಮತ್ತು ಪ್ರಕೃತಿ, ಇಂದ್ರಿಯಗಳು, ಮನಸ್ಸು, ಬುದ್ಧಿ, ಶರೀರ ಇವುಗಳ ಸಹಾಯವಿಲ್ಲದೆ ಜಗತ್ಸೃಷ್ಟ್ಯಾದಿ ಸಮಸ್ತ ಕಾರ್ಯಗಳನ್ನು ಸಂಕಲ್ಪ ಮಾತ್ರದಿಂದಲೇ ಮಾಡುತ್ತಾನೆ.

ಆಧಾರತ್ವ – ಪರಬ್ರಹ್ಮನು ಸ್ವತಂತ್ರ ಇರುವಿಕೆ ಹೊಂದಿದ್ದಾನೆ ಅಂದರೆ ಯಾವ ದ್ರವ್ಯಗಳ ಸಹಾಯವಿಲ್ಲದೆ ಸ್ವತಂತ್ರವಾಗಿ ಇದ್ದಾನೆ. ಪರಬ್ರಹ್ಮನು ಸಮಸ್ತ ಚೇತನ ಹಾಗು ಅಚೇತನಗಳಿಗೆ ಅಂತರ್ಯಾಮಿಯಾಗಿ ಅವುಗಳಿಗೆ ಪರಿಪೂರ್ಣ ಆಶ್ರಯ ಮತ್ತು ಆಧಾರನಾಗಿದ್ದಾನೆ.

ನಿಯಂತೃತ್ವ – ಪರಬ್ರಹ್ಮನು ಸಮಸ್ತ ಚೇತನ ಮತ್ತು ಅಚೇತನಗಳಿಗೆ ಅಂತರ್ಯಾಮಿಯಾಗಿರುವಂತೆ ಅವುಗಳಿಗೆ ನಿಯಾಮಕನೂ ಆಗಿದ್ದಾನೆ. ಚೇತನ ಮತ್ತು ಅಚೇತನಗಳ ಸ್ವರೂಪ, ಸ್ಥಿತಿ, ಪ್ರವೃತ್ತಿಯು ಪರಬ್ರಹ್ಮನ ಸಂಕಲ್ಪಕ್ಕೆ ಅಧೀನವಾಗಿ ಇರುತ್ತದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶೇಷಿತ್ವ – ಪರಬ್ರಹ್ಮನು ಸಮಸ್ತ ಚೇತನ ಮತ್ತು ಅಚೇತನಗಳಿಗೆ ಶೇಷಿಯಾಗಿದ್ದಾನೆ ಅಂದರೆ ಸಮಸ್ತ ಚೇತನ ಮತ್ತು ಅಚೇತನಗಳು ಪರಬ್ರಹ್ಮನ ಪ್ರಯೋಜನಕ್ಕಾಗಿ ಮತ್ತು ಅವನ ಸಂತೋಷಕ್ಕಾಗಿಯೇ ಇರುವುದು. ಅಚೇತನವು ಜಡ ವಸ್ತು ಆದ್ದರಿಂದ ಶೇಷತ್ವ ಜ್ಞಾನವು ತಿಳಿಯುವುದಿಲ್ಲ ಆದರೆ ಚೇತನನು ಜ್ಞಾನಸ್ವರೂಪನಾದ್ದರಿಂದ, ಪರಬ್ರಹ್ಮನು ಸರ್ವಶೇಷಿ ಮತ್ತು ಚೇತನನು ದಾಸನು ಎಂಬ ಜ್ಞಾನವನ್ನು ತಿಳಿದುಕೊಂಡು ಚೇತನನು ಸದಾಕಾಲ ಪರಬ್ರಹ್ಮನನ್ನೇ ಸ್ಮರಿಸಿ ಮತ್ತು ಪರಬ್ರಹ್ಮನಿಗೆ ಸಂತೋಷಪಡಿಸುವ ಹಾಗೆ ಸಕಲ ಕೈಂಕರ್ಯಗಳನ್ನು ಸಲ್ಲಿಸಬೇಕು.

ದಯಾಗುಣತ್ವ – ಪರಬ್ರಹ್ಮನ ಅನಂತ ಕಲ್ಯಾಣಗುಣಗಳಲ್ಲಿ ದಯಾಗುಣವು ಬಹಳ ಮುಖ್ಯವಾದ ಗುಣ. ಪರಬ್ರಹ್ಮನ ದಯೆಯು ಚೇತನರ ಪಾಪಕರ್ಮಗಳನ್ನು ಕ್ಷಮಿಸಿ ಮತ್ತು ಚೇತನರನ್ನು ಸಂಸಾರಬಂಧನದಿಂದ ಬಿಡಿಸಿ ಮೋಕ್ಷವನ್ನು ಅನುಗ್ರಹಮಾಡಬಲ್ಲದ್ದು. ಪರಬ್ರಹ್ಮನಿಗೆ ಚೇತನರ ಮೇಲೆ ಅಪಾರವಾದ ಮತ್ತು ಸಹಜವಾದ ದಯೆ, ಸೃಷ್ಟಿಕಾಲದಲ್ಲಿ ಪರಬ್ರಹ್ಮನು ಚೇತನರಿಗೆ ಇಂದ್ರಿಯ, ಮನಸ್ಸು, ಬುದ್ಧಿ, ಶರೀರಾದಿಗಳನ್ನು ಕೊಟ್ಟು ಚೇತನರು ತಮ್ಮ ಪಾಪಕರ್ಮಗಳನ್ನು ಕಳೆದುಕೊಳ್ಳಲು ಮತ್ತು ಪರಬ್ರಹ್ಮನ ಪ್ರಾಪ್ತಿಯನ್ನು ಹೊಂದುವ ಉದ್ಧಾರಮಾರ್ಗದ ಅವಕಾಶವನ್ನು ದಯಪಾಲಿಸುತ್ತಾನೆ. ಚೇತನರು ತಿಳಿದೊ ತಿಳಿಯದೆಯೋ ನಾನಾ ರೀತಿಯ ಪಾಪಕರ್ಮಗಳನ್ನು ಮಾಡುತ್ತಾರೆ. ಇವುಗಳಿಗೆ ಪರಬ್ರಹ್ಮನು ಚೇತನರನ್ನು ಶಿಕ್ಷಿಸಲು ಸಂಕಲ್ಪಿಸುತ್ತಾನೆ. ಆದರೆ ಚೇತನರು ತಾವು ಮಾಡಿದ ಪಾಪಕರ್ಮಗಳಿಗಾಗಿ ಪಶ್ಚಾತ್ತಾಪ ಪಟ್ಟು ಪ್ರಾಯಶ್ಚಿತ್ತಾದಿಗಳನ್ನು ಆಚರಿಸಿದರೆ ಪರಬ್ರಹ್ಮನ ನಿಗ್ರಹಸಂಕಲ್ಪವು ಬದಲಾಗುತ್ತದೆ. ಈ ರೀತಿ ಪರಬ್ರಹ್ಮನು ಕರುಣಾಸಾಗರನು.

ಸಾಮಾನ್ಯವಾಗಿ ಅಚೇತನವು ಸ್ವರೂಪ ಮತ್ತು ಸ್ವಭಾವ ಎರಡರಲ್ಲೂ ವಿಕಾರವನ್ನು ಹೊಂದುತ್ತದೆ. ಜೀವಾತ್ಮನು ಸ್ವರೂಪದಲ್ಲಿ ವಿಕಾರವನ್ನು ಹೊಂದುವುದಿಲ್ಲ ಆದರೆ ಸ್ವಭಾವದಲ್ಲಿ ವಿಕಾರವನ್ನು ಹೊಂದುತ್ತಾನೆ. ಆದ್ದರಿಂದ ಜೀವಾತ್ಮನು ಅಚೇತನಕ್ಕಿಂತ ಶ್ರೇಷ್ಠನು. ಪರಬ್ರಹ್ಮನು ಸ್ವರೂಪ ಮತ್ತು ಸ್ವಭಾವ ಎರಡರಲ್ಲೂ ವಿಕಾರವನ್ನು ಹೊಂದುವುದಿಲ್ಲ. ಆದ್ದರಿಂದ ಪರಬ್ರಹ್ಮನು ಜೀವಾತ್ಮನಿಗಿಂತ ಮತ್ತು ಅಚೇತನಕ್ಕಿಂತ ಶ್ರೇಷ್ಠನು. ವೇದಗಳನ್ನು ಪ್ರಮಾಣವಾಗಿ ಇಟ್ಟುಕೊಂಡು ಪರಬ್ರಹ್ಮನನ್ನು ತಿಳಿದುಕೊಂಡು ಪ್ರಾಪ್ತಿ ಹೊಂದಬೇಕು. ಈಗ ಮೇಲೆ ಹೇಳಿದ ವಿಶೇಷಣಗಳೆಲ್ಲಾ ಹೊಂದಿರುವ ಪರಬ್ರಹ್ಮನು ಯಾರು? ಎಂದು ಒಂದು ದೊಡ್ಡ ಪ್ರಶ್ನೆಯು ಬರುತ್ತದೆ.

ವೇದಗಳು "ಶ್ರೀಮನ್ನಾರಾಯಣನೇ ಪರಬ್ರಹ್ಮನು" ಎಂದು ಬಹಳ ಸ್ಪಷ್ಟವಾಗಿ ಹೇಳುತ್ತದೆ ಮತ್ತು ಶ್ರೀಮನ್ನಾರಾಯಣನೇ ಜಗತ್ಸೃಷ್ಟಿಕರ್ತನು, ಸಮಸ್ತ ಚೇತನ ಮತ್ತು ಅಚೇತನಗಳಿಗೆ ಅಂತರಾತ್ಮನು, ಸರ್ವ ಕರ್ಮಗಳಿಗೂ ಫಲ ಪ್ರಸಾದ್ಯನು, ವೇದಗಳಲ್ಲಿ ಹೇಳಿರುವ ಉತ್ಕೃಷ್ಟವಾದ ಸಿದ್ಧೋಪಾಯನು ಆಗಿದ್ದಾನೆ ಹಾಗು ಮೇಲೆ ಹೇಳಿದ ಸತ್ಯತ್ವ, ಜ್ಞಾತೃತ್ವ ಇತ್ಯಾದಿ ಗುಣಗಳೆಲ್ಲಾ ಶ್ರೀಮನ್ನಾರಾಯಣನೊಬ್ಬನಿಗೇ ಹೊಂದುತ್ತದೆ. ಆಧಾರವನ್ನು ನಾವು ವೇದಗಳ ಶಿರಸ್ಸು ಎಂದು ಹೆಸರಾಗಿರುವ ಉಪನಿಷತ್ ಭಾಗದ ಮಹಾನಾರಾಯಣೋಪನಿಷತ್ತಿನಲ್ಲಿ ಕಾಣಬಹುದು.

ನಾರಾಯಣ ಪರಂ ಬ್ರಹ್ಮ ತತ್ವಂ ನಾರಾಯಣ: ಪರ: । ನಾರಾಯಣ ಪರೋ ಜ್ಯೋತಿರಾತ್ಮಾ ನಾರಾಯಣ: ಪರ: ॥
ಮಹಾನಾರಾಯಣೋಪನಿಷತ್ - 93

ನಾರಾಯಣನೇ ಪರಬ್ರಹ್ಮನು. ನಾರಾಯಣನು ಸ್ವರೂಪದಲ್ಲಾಗಲಿ ಅಥವ ಸ್ವಭಾವದಲ್ಲಾಗಲಿ ಯಾವ ವಿಧವಾದ ವಿಕಾರವನ್ನು ಹೊಂದದೇ ಸ್ಥಿರವಾದ ರೂಪವನ್ನು ಹೊಂದಿರುವ ಪರಮಶ್ರೇಷ್ಠ ಮಹಾಪುರುಷನು. ನಾರಾಯಣನೇ ಪರಮಶ್ರೇಷ್ಠ ಜ್ಯೋತಿರ್ಮಯನು. ನಾರಾಯಣನೇ ಸಮಸ್ತ ದ್ರವ್ಯಗಳಿಗೆ (ಚೇತನ ಮತ್ತು ಅಚೇತನ) ಅಂತರಾತ್ಮನಾಗಿದ್ದಾನೆ.

ಯಚ್ಚಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಪಿವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತ: ॥
ಮಹಾನಾರಾಯಣೋಪನಿಷತ್ - 94

ಈ ವಿಶ್ವದಲ್ಲಿ ಯಾವ ದ್ರವ್ಯಗಳು (ಚೇತನ ಮತ್ತು ಅಚೇತನ) ದೃಶ್ಯವಾಗಿ ಮತ್ತು ಶ್ರುತವಾಗಿ ಇರುತ್ತವೆಯೋ ಆ ಎಲ್ಲಾ ದ್ರವ್ಯಗಳ ಒಳಗೂ ಮತ್ತು ಹೊರಗೂ ಶ್ರೀಮನ್ನಾರಾಯಣನು ಅಂತರ್ಯಾಮಿಯಾಗಿ ಮತ್ತು ಅಂತರ್ನಿಯಾಮಕನಾಗಿ ವ್ಯಾಪಿಸಿದ್ದಾನೆ.

ಪತಿಂ ವಿಶ್ವಸ್ಯಾತ್ಮೇಶ್ವರಗ್ಂ ಶಾಶ್ವತಗ್ಂ ಶಿವಮಚ್ಯುತವ್। ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮ್ ।
ಮಹಾನಾರಾಯಣೋಪನಿಷತ್ - 92

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಾರಾಯಣನು ಸಮಸ್ತ ವಿಶ್ವಕ್ಕೂ ಈಶ್ವರನಾಗಿದ್ದಾನೆ. ನಾರಾಯಣನು ಸ್ವತಂತ್ರನು ತನ್ನನ್ನು ತಾನೇ ಆಳುತ್ತಾನೆ. ನಾರಾಯಣನು ಯಾವಾಗಲು ಯಾವ ವಿಧವಾದ ದೋಷಗಂಧವೂ ಇಲ್ಲದೆ ಹೇಯಪ್ರತ್ಯನೀಕನಾಗಿದ್ದಾನೆ. ನಾರಾಯಣನು ತನ್ನ ಸ್ವರೂಪದಲ್ಲಾಗಲಿ ಅಥವಾ ಸ್ವಭಾವದಲ್ಲಾಗಲಿ ಯಾವ ವಿಧವಾದ ವಿಕಾರವನ್ನು ಹೊಂದದೆ ಸ್ಥಿರವಾದ ರೂಪವನ್ನು ಹೊಂದಿದ್ದಾನೆ. ನಾರಾಯಣನೇ ಉತ್ಕೃಷ್ಟವಾದ ಉಪಾಸ್ಯನು ಮತ್ತು ಪ್ರಾಪ್ಯನು. ನಾರಾಯಣನು ಈ ವಿಶ್ವಕ್ಕೇ ಅಂತರಾತ್ಮನಾಗಿದ್ದಾನೆ.

ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಮ್ಭುವಮ್ ।
ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪ್ರಭುಮ್ ।

ಮಹಾನಾರಾಯಣೋಪನಿಷತ್ - 90

ಯಾವ ಪುರುಷನಿಗೆ ಸಹಸ್ರ ಶಿರಸ್ಸು ಇರುವುದೋ, ಯಾವ ಪುರುಷನ ದೃಷ್ಟಿಯು ಎಲ್ಲಾ ಕಡೆಗಳಲ್ಲೂ ವಿಭೂವಾಗಿ ಪ್ರಕಾಶವಾಗಿರುವುದೋ, ಯಾವ ಪುರುಷನು ಎಲ್ಲಾ ಕರ್ಮಗಳಿಗೂ ಫಲ ಪ್ರಸಾದ್ಯನಾಗಿರುವನೋ, ಯಾವ ಪುರುಷನು ಯಾವ ವಿಧವಾದ ವಿಕಾರವೂ ಇಲ್ಲದೆ ಸ್ಥಿರವಾದ ರೂಪವನ್ನು ಹೊಂದಿರುವನೋ, ಯಾವ ಪುರುಷನು ಸಮಸ್ತ ವಿಶ್ವಕ್ಕೆ ಅಂತರ್ಯಾಮಿಯಾಗಿರುವನೋ ಮತ್ತು ಪರಬ್ರಹ್ಮನಾಗಿರುವನೋ, ಈ ರೀತಿ ಹೇಳಿರುವ ಮಹಾಪುರುಷನು ಸಾಕ್ಷಾತ್ ಶ್ರೀಮನ್ನಾರಾಯಣನು.

ಯಸ್ಮಿನ್ನಿದಗ್ಂ ಸಂ ಚ ವಿಚೈತಿ ಸರ್ವಂ ಯಸ್ಮಿನ್ದೇವಾ ಅಧಿವಿಶ್ವೇ ನಷೇದುಃ ।
ತದೇವಭೂತಂ ತದು ಭವ್ಯಮಾ ಇದಂ ತದಕ್ಷರೇ ಪರಮೇ ವ್ಯೋಮನ್ ।

ಮಹಾನಾರಾಯಣೋಪನಿಷತ್ - 2

ಯಾವ ಪುರುಷನ ಸಂಕಲ್ಪಕ್ಕೆ ಅನುಸಾರವಾಗಿ ಪ್ರಳಯ ಕಾಲದಲ್ಲಿ ಸಮಸ್ತ ಚೇತನ ಮತ್ತು ಅಚೇತನವು ಸ್ಥೂಲಾವಸ್ಥೆಯಿಂದ ಸೂಕ್ಷ್ಮಾವಸ್ಥೆಯನ್ನು ಹೊಂದಿ ಆ ಪುರುಷನಲ್ಲೇ ಸೇರುತ್ತವೆಯೋ, ಸೃಷ್ಟಿಕಾಲದಲ್ಲಿ ಯಾವ ಪುರುಷನ ಸಂಕಲ್ಪದಿಂದ ಸಮಸ್ತ ಚೇತನ ಮತ್ತು ಅಚೇತನಗಳು ಆ ಪುರುಷನಿಂದ ಹೊರಬಂದು ಸ್ಥೂಲಾವಸ್ಥೆಯನ್ನು ಹೊಂದಿ ನಾಮರೂಪಗಳನ್ನು ಹೊಂದುತ್ತವೆಯೋ, ಯಾವ ಪುರುಷನಲ್ಲಿ ಸಮಸ್ತ ದೇವತೆಗಳು ಆಶ್ರಯವನ್ನು ಹೊಂದುತ್ತಾರೆಯೋ ಮತ್ತು ಈ ಪುರುಷನು ಭೂತಕಾಲ, ವರ್ತಮಾನಕಾಲ, ಭವಿಷ್ಯಕಾಲ ಎಲ್ಲಾ ಕಾಲದಲ್ಲೂ ಯಾವ ವಿಧವಾದ ವಿಕಾರವನ್ನು ಹೊಂದದೇ ಇದ್ದಾನೆಯೋ, ಈ ರೀತಿ ಹೇಳಿರುವ ಮಹಾಪುರುಷನು ಶ್ರೀಮನ್ನಾರಾಯಣನು.

ಅತಸ್ಸಮುದ್ರಾಗಿರಯಶ್ಚ ಸರ್ವೇಸ್ಮಾತ್ಸ್ಯನ್ದಂತೇ ಸಿನ್ಧವಸರ್ವರೂಪಾಃ ।
ಅತಶ್ಚ ವಿಶ್ವಾ ಓಷಧಯೋ ರಸಾಶ್ಚ ಯೇನೈಷಭೂತಸ್ತಿಷ್ಠತ್ಯನ್ತರಾತ್ಮಾ ।

ಮಹಾನಾರಾಯಣೋಪನಿಷತ್ - 68

ಯಾವ ಪುರುಷನಿಂದ ಸಮಸ್ತ ಸಮುದ್ರಗಳು ಮತ್ತು ಶಿಖರಗಳು ಪ್ರಾದುರ್ಭಾವವಾಯಿತೋ, ಯಾವ ಪುರುಷನಿಂದ ನದಿಗಳು ಎಲ್ಲಾರೂಪದಲ್ಲಿ ಹರಿಯುವುದೋ, ಯಾವ ಪುರುಷನಿಂದ ಸಮಸ್ತ ಸಂಜೀವಿನಿಯು ಮತ್ತು ರಸಗಳು ಉಂಟಾಯಿತೋ, ಈ ಕಾರಣಗಳಿಂದ ಈ ಮಹಾಪುರುಷನು ಸಮಸ್ತ ದ್ರವ್ಯಗಳಿಗೂ (ಚೇತನ ಮತ್ತು ಅಚೇತನ) ಅಂತರಾತ್ಮ ಮತ್ತು ಅಂತರ್ನಿಯಾಮಕನಾಗಿದ್ದಾನೆ. ಈ ರೀತಿ ಹೇಳಿರುವ ಮಹಾಪುರುಷನು ಶ್ರೀಮನ್ನಾರಾಯಣನು.

ಯಸ್ಮಾಜ್ಜಾತಾ ನ ಪರಾ ನೈವ ಕಿಂಚನಾ ಸ ಯ ಆವಿವೇಶ ಭುವನಾನ ವಿಶ್ವಾ ।
ಪ್ರಜಾಪತಿಃ ಪ್ರಜಯಾ ಸಂವಿದಾನಸ್ತ್ರೀಣಿ ಜ್ಯೋತೀಗ್ಂಷಿ ಸಚತೇ ಸಷೋಡಶೀ ।

ಮಹಾನಾರಾಯಣೋಪನಿಷತ್ - 72

ಯಾವ ಪುರುಷನಿಂದ ಸಮಸ್ತ ಜಗತ್ತುಗಳ ಪರಿಣಾಮಗಳು ಉಂಟಾಯಿತೋ, ಸೃಷ್ಟಿಗೆ ಮೊದಲು ಆ ಮಹಾಪುರುಷನೊಬ್ಬನೇ ಇದ್ದನು, ಯಾವ ಪುರುಷನು ಸಮಸ್ತ ಚೇತನ ಮತ್ತು ಅಚೇತನಗಳಿಗೆ ಅಂತರಾತ್ಮನಾಗಿರುವನೋ, ಯಾವ ಮಹಾಪುರುಷನ ಸಂಕಲ್ಪದಿಂದ ಸೃಷ್ಟಿಯ ಕಾಲದಲ್ಲಿ ಸಮಸ್ತ ಚೇತನ ಮತ್ತು ಅಚೇತನಗಳು ಆ ಪುರುಷನಿಂದ ಹೊರಬಂದು ಸ್ಥೂಲಾವಸ್ಥೆಯನ್ನು ಹೊಂದಿ ನಾಮರೂಪಗಳನ್ನು ಹೊಂದುತ್ತವೆಯೋ, ಯಾವ ಪುರುಷನು ಸಮಸ್ತ ಜೀವಾತ್ಮರಿಗೂ ನಾಥನು ಮತ್ತು ಉಪಾಸ್ಯನಾಗಿರುವನೋ, ಸೂರ್ಯ, ಚಂದ್ರ, ಅಗ್ನಿ ಮತ್ತು ಪಂಚಭೂತಗಳಿಗೆ ಯಾವ ಪುರುಷನು ಅಂತರ್ಯಾಮಿಯಾಗಿರುವನೋ, ಈ ರೀತಿ ಹೇಳಿರುವ ಪುರುಷನು ಶ್ರೀಮನ್ನಾರಾಯಣನು.

ಸುಭಾಲ ಉಪನಿಷತ್ತು ಶ್ರಿಮನ್ನಾರಾಯಣನೇ ಸರ್ವವ್ಯಾಪಿ ಎಂದು ಸ್ಪಷ್ಟವಾಗಿ ಹೇಳುತ್ತದೆ. ಆಧಾರವನ್ನು ನಾವು ಕಾಣಬಹುದು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಸ್ಯಾವ್ಯಕ್ತಂ ಶರೀರಂ, ಯಸ್ಯಾಕ್ಷರಂ ಶರೀರಂ, ಯಸ್ಯ ಮೃತ್ಯು: ಶರೀರಂ, ಏಷ ಸರ್ವಭೂತಾಂತರಾತ್ಮಾ ಅಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣ: ।

ಸುಭಾಲೋಪನಿಷತ್

ಯಾರಿಗೆ ಸೂಕ್ಷ್ಮಾವಸ್ಥೆಯಲ್ಲಿರುವ ದ್ರವ್ಯಗಳು ಶರೀರವೋ, ಯಾರಿಗೆ ಮೃತ್ಯು ಶರೀರವೋ, ಯಾರು ಸಮಸ್ತ ದ್ರವ್ಯಗಳಿಗೆ (ಚೇತನ ಮತ್ತು ಅಚೇತನ) ಅಂತರಾತ್ಮನಾಗಿರುವನೋ, ಯಾರಿಗೆ ಯಾವ ವಿಧವಾದ ಕರ್ಮ ಸಂಬಂಧವು ಇಲ್ಲದೆ ಹೇಯಪ್ರತ್ಯನೀಕನಾಗಿದ್ದಾನೆಯೋ, ಈ ಮಹಾ ಪುರುಷನು ಉತ್ಕೃಷ್ಟವಾದ ಜ್ಯೋತಿರ್ಮಯನಾದ ಶ್ರೀಮನ್ನಾರಾಯಣನು.

ಪುರುಷಸೂಕ್ತವು ಶ್ರೀಮನ್ನಾರಾಯಣನೇ ಪರಬ್ರಹ್ಮನು ಎಂದು ಸ್ಪಷ್ಟವಾಗಿ ಹೇಳಿದೆ, ಪುರುಷಸೂಕ್ತದಲ್ಲಿ ಹೇಳಿರುವ ಉತ್ಕೃಷ್ಟವಾದ ಪುರುಷನು ಶ್ರೀಮನ್ನಾರಾಯಣನೇ. ಏಕೆಂದರೆ ಪುರುಷಸೂಕ್ತದ ಅಂತ್ಯದಲ್ಲಿ "ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ" ಎಂದು ವಾಕ್ಯವು ಕಂಡುಬರುತ್ತದೆ. ಇತರ ಶ್ರುತಿ ಸ್ಮೃತಿಗಳಲ್ಲಿ ಲಕ್ಷ್ಮೀಪತಿಯು ಸಾಕ್ಷಾತ್ ಶ್ರೀಮನ್ನಾರಾಯಣನೇ ಎಂದು ಬಹಳ ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ಪುರುಷಸೂಕ್ತವು ಶ್ರೀಮನ್ನಾರಾಯಣನನ್ನೇ ಕುರಿತು ಹೇಳಿ ಅವನನ್ನೇ ಜಗತ್ಕಾರಣನೂ, ಉತ್ಕೃಷ್ಟ ಉಪಾಸ್ಯನೂ ಮತ್ತು ಪ್ರಾಪ್ಯನೂ ಎಂದು ಹೇಳಿದೆ. ಆಧಾರವನ್ನು ನಾವು ಈ ರೀತಿ ಕಾಣಬಹುದು.

ವೇದಾಹಮೇತಂ ಪುರುಷಂ ಮಹಾಂತಂ ಆದಿತ್ಯವರ್ಣಂ ತಮಸಸ್ತು ಪಾರೇ ।
ಸರ್ವಾಣಿ ರೂಪಾಣಿ ವಿಚಿತ್ಯ ಧೀರ: ನಾಮಾನಿ ಕೃತ್ವಾಭಿವದನ್ ಯದಾಸ್ತೇ॥

ಪುರುಷಸೂಕ್ತ

ಈ ಪುರುಷನು ಸೂರ್ಯನಂತೆ ನಿರತಿಶಯಕಾಂತಿಯುಳ್ಳವನು, ಪೃಥಿವಿ ಮತ್ತು ಸ್ವರ್ಗ ಲೋಕಗಳಿಗಿಂತ ಉತ್ಕೃಷ್ಟವಾದ ಲೋಕ ಎಂದು ಹೆಸರಾದ ನಿತ್ಯವಿಭೂತಿಯಲ್ಲಿ ಇರುವನು. ಇಂತಹ ಪರಮಶ್ರೇಷ್ಠ ಮಹಾಪುರುಷನನ್ನು ನಾನು ತಿಳಿಯುತ್ತೇನೆ. ಈ ಪುರುಷನು ಸಮಸ್ತ ಚೇತನ ಮತ್ತು ಅಚೇತನಗಳಿಗೆ ನಾಮರೂಪವನ್ನು ಸೃಷ್ಟಿಸಿದ್ದಾನೆ. ಉತ್ಕೃಷ್ಟವಾದ ಜ್ಞಾನವನ್ನು ಹೊಂದಿರುವ ಮಹಾಪುರುಷನನ್ನು ನಾನು ಆರಿತಿದ್ದೇನೆ.

ವೇದಾಹಮೇತಂ ಪುರುಷಂ ಮಹಾಂತಂ ಆದಿತ್ಯವರ್ಣಂ ತಮಸ: ಪರಸ್ತಾತ್ ।
ತಮೇವಂ ವಿದ್ವಾನಮೃತ ಇಹ ಭವತಿ ನಾನ್ಯ: ಪಂಥಾ ವಿದ್ಯತೇಯನಾಯ ॥

ಪುರುಷಸೂಕ್ತ

ಈ ಪರಮಪುರುಷನು ಉತ್ಕೃಷ್ಟವಾದ ಜ್ಯೋತಿರ್ಮಯನು ಮತ್ತು ಪೃಥಿವಿ ಹಾಗು ಸ್ವರ್ಗ ಲೋಕಗಳಿಗಿಂತ ಉತ್ಕೃಷ್ಟವಾದ ಲೋಕ ಎಂದು ಹೆಸರಾದ ನಿತ್ಯವಿಭೂತಿಯಲ್ಲಿ ಇರುವವನು. ಯಾವ ಜೀವಾತ್ಮನು ಶಾಸ್ತ್ರವನ್ನು ಪ್ರಮಾಣವಾಗಿ ಇಟ್ಟುಕೊಂಡು ಈ ಪರಮಪುರುಷನನ್ನೇ ಸ್ಮರಿಸಿ ಮತ್ತು ಮೋಕ್ಷಪ್ರಾಪ್ತಿಗೆ ಈ ಪರಮಪುರುಷನಲ್ಲೇ ಸಾಧ್ಯೋಪಾಯವನ್ನು (ಭಕ್ತಿಯೋಗ ಅಥವಾ ಪ್ರಪತ್ತಿ) ಅನುಷ್ಠಿಸಿತ್ತಾನೆಯೋ, ಆಂಥ ಜೀವಾತ್ಮನು ತನ್ನ ಪ್ರಾರಬ್ಧಕರ್ಮಗಳನ್ನೆಲ್ಲಾ ಕಳೆದುಕೊಂಡು ಮತ್ತು ಸಂಸಾರಬಂಧನದಿಂದ ಮುಕ್ತಗೊಂಡು ನಿತ್ಯವಿಭೂತಿಗೆ ಹೋಗಿ ಆ ಪರಮ ಪುರುಷನ ಪ್ರಾಪ್ತಿಯನ್ನು ಹೊಂದುತ್ತಾನೆ. ಈ ರೀತಿ ಸಂಸಾರ ಬಂಧನದಿಂದ ಮುಕ್ತಹೊಂದಬೇಕಾದರೇ ಆ ಪರಮಪುರುಷನನ್ನೇ ಸ್ಮರಣೆ ಮಾಡುವುದಕ್ಕಿಂತ ಬೇರೊಂದು ಮಾರ್ಗವು ಇಲ್ಲ. ಈ ರೀತಿ ಹೇಳಿರುವ ಪರಮ ಪುರುಷನು ಶ್ರೀಮನ್ನಾರಾಯಣನೇ.

ಶುಕ ಮಹರ್ಷಿಗಳು ತಮ್ಮ ಅದ್ಭುತ ಗ್ರಂಥವಾದ ಭಾಗವತದಲ್ಲಿ ಶ್ರೀಮನ್ನಾರಾಯಣನೇ ಸರ್ವವ್ಯಾಪಿಯು ಮತ್ತು ಉತ್ಕೃಷ್ಟವಾದ ಉಪಾಸ್ಯನು ಹಾಗು ಪ್ರಾಪ್ಯನು ಎಂದು ವ್ಯಕ್ತಪಡಿಸಿದ್ದಾರೆ. ಆಧಾರವನ್ನು ನಾವು ಕಾಣಬಹುದು.

ದೇವರ್ಷಿಭೂತಾತ್ಮ ನೃಣಾಂ ಪಿತೃಣಾಂ ನಕಿಂಕರೋ ನಾಯಮೃಣೀ ಚ ರಾಜನ್ ।
ಸರ್ವಾತ್ಮನಾಯ ಶ್ಮರಣಂ ಶರಣ್ಯಂ ನಾರಾಯಣಂ ಲೋಕಗುರುಂಪ್ರಪನ್ನ: ॥

ಭಾಗವತ

ಶ್ರೀಮನ್ನಾರಾಯಣನೇ ಸರ್ವಲೋಕಕ್ಕೂ ಆಚಾರ್ಯನು, ಸಮಸ್ತ ಚೇತನ ಹಾಗು ಅಚೇತನಗಳಿಗೆ ಅಂತರಾತ್ಮನು ಮತ್ತು ಅಂತರ್ನಿಯಾಮಕನು, ಸಮಸ್ತ ಜೀವಾತ್ಮರಿಗೂ ಶ್ರೀಮನ್ನಾರಾಯಣನೇ ಉತ್ಕೃಷ್ಟವಾದ ಸಿದ್ಧೋಪಾಯನು ಹಾಗು ಸಾಧ್ಯೋಪಾಯನು. ಸಮಸ್ತ ಜೀವಾತ್ಮರು ಸಂಸಾರ ಬಂಧನದಿಂದ ಮುಕ್ತಗೊಂಡು ಮೋಕ್ಷವನ್ನು ಪಡೆಯಬೇಕಾದರೆ ಶ್ರೀಮನ್ನಾರಾಯಣನಲ್ಲೇ ಶರಣಾಗತಿಯನ್ನು ಅನುಷ್ಠಿಸಬೇಕು. ಈ ರೀತಿ ಯಾವ ಜೀವಾತ್ಮನು ಶ್ರೀಮನ್ನಾರಾಯಣನಲ್ಲಿ ಶರಣಾಗತಿಯನ್ನು ಅನುಷ್ಠಿಸುವನೋ ಆಂಥಹ ಜೀವಾತ್ಮನು ಶ್ರೀಮನ್ನಾರಾಯಣನೊಬ್ಬನಿಗೇ ಶೇಷನು ಮತ್ತು ದೇವತೆಗಳೂ, ಋಷಿಗಳೂ, ಭೂತಗಳೂ, ಆತ್ಮರುಗಳೂ, ಮನುಷ್ಯರೂ, ಪಿತೃಗಳೂ ಇವರುಗಳಿಗೆಲ್ಲಾ ಶೇಷನಲ್ಲವು ಮತ್ತು ಅವರುಗಳ ಋಣವಾದರೂ ಈತನಿಗೆ ಇರುವುದಿಲ್ಲವು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವೇದ ವ್ಯಾಸ ಮಹರ್ಷಿಗಳು ತಮ್ಮ ಆದ್ಭುತ ಗ್ರಂಥವಾದ ಮಹಾಭಾರತದಲ್ಲಿ ಶ್ರೀಮನ್ನಾರಾಯಣನೇ ಸರ್ವ ಲೋಕಗಳಿಗೂ ಉತ್ಕೃಷ್ಟವಾದ ಉಪಾಸ್ಯನು ಹಾಗು ಪ್ರಾಪ್ಯನು ಎಂದು ವ್ಯಕ್ತಪಡಿಸಿದ್ದಾರೆ. ಆಧಾರವನ್ನು ನಾವು ಕಾಣಬಹುದು.

ಸರ್ವೇಷಾಮೇವ ಲೋಕಾನಾಂ ಪಿತಾಮಾತಾಚ ಮಾಧವ: । ಗಚ್ಛಧ್ವಮೇನಂ ಶರಣಂ ಶರಣ್ಯಂ ಪುರುಷರ್ಷಭಾ: ॥

ಮಹಾಭಾರತ

ಓ ಪುರುಷಶ್ರೇಷ್ಠರುಗಳಿರಾ, ಲಕ್ಷ್ಮೀಪತಿಯಾದ ಮಾಧವನು ಸರ್ವಲೋಕಗಳಿಗೂ ಈಶ್ವರನಾಗಿದ್ದಾನೆ ಮತ್ತು ಉತ್ಕೃಷ್ಟವಾದ ಉಪಾಸ್ಯನು ಮತ್ತು ಪ್ರಾಪ್ಯನು ಆಗಿದ್ದಾನೆ. ಆದ್ದರಿಂದ ಸಂಸಾರಬಂಧನದಿಂದ ಮುಕ್ತಗೊಂಡು ಮೋಕ್ಷವನ್ನು ಪಡೆಯಬೇಕಾದರೇ ಆ ಲಕ್ಷ್ಮೀಪತಿಯಾದ ಮಾಧವನಲ್ಲಿ ಶರಣಾಗತಿಯನ್ನು ಅನುಷ್ಠಿಸಿರಿ.

ವೇದವ್ಯಾಸ ಮಹರ್ಷಿಗಳು ಮೇಲಿನ ಶ್ಲೋಕದಲ್ಲಿ ಶ್ರೀಮನ್ನಾರಾಯಣನ ದ್ವಾದಶನಾಮಗಳಲ್ಲಿ ಒಂದು ನಾಮವಾಗಿರುವ ಮಾಧವ ಎಂಬ ಪದವನ್ನು ಉಪಯೋಗಿಸಿದ್ದಾರೆ. ಶ್ರೀಮನ್ನಾರಾಯಣನಿಗೆ ಮಾಧವ ಎಂಬ ಶ್ರೀನಾಮವು ಉಂಟು, ಕಾರಣ ಶ್ರೀಮನ್ನಾರಾಯಣನ ವಕ್ಷಸ್ಥಲದಲ್ಲಿ ಶ್ರೀಮಹಾಲಕ್ಷ್ಮಿಯು ನಿತ್ಯಸಾನಿಧ್ಯವನ್ನು ಹೊಂದಿದ್ದಾಳೆ. ಆದ್ದರಿಂದ ವೇದವ್ಯಾಸ ಮಹರ್ಷಿಗಳ ಉದ್ದೇಶವೇನೆಂದರೇ ಶ್ರೀಮನ್ನಾರಾಯಣನು ಮತ್ತು ಶ್ರೀಮಹಾಲಕ್ಷ್ಮಿಯು ಸಮಸ್ತ ಲೋಕಗಳಿಗೂ ಈಶ್ವರರಾಗಿದ್ದು, ಅಂತೆಯೇ ಉತ್ಕೃಷ್ಟವಾದ ಉಪಾಸ್ಯರೂ ಮತ್ತು ಪ್ರಾಪ್ಯರೂ ಆಗಿದ್ದಾರೆ.

ಶ್ರೀಮಹಾಲಕ್ಷ್ಮಿಯು ಸದಾಕಾಲ ಶ್ರೀಮನ್ನಾರಾಯಣನ ವಕ್ಷಸ್ಥಲದಲ್ಲಿ ನಿತ್ಯಯೋಗವನ್ನು ಹೊಂದಿ ಈಶ್ವರತ್ವದಲ್ಲಿ ಶ್ರೀಮನ್ನಾರಾಯಣನ ಸಮವಾಗಿದ್ದಾಳೆ. ಶ್ರೀಮನ್ನಾರಾಯಣನ ಸತ್ಯತ್ವ, ಜ್ಞಾತೃತ್ವ, ಆನಂತತ್ವ ಇತ್ಯಾದಿ ಗುಣಗಳೆಲ್ಲವೂ ಶ್ರೀಮಹಾಲಕ್ಷ್ಮಿಗೂ ಉಂಟು. ಶ್ರೀಮಹಾಲಕ್ಷ್ಮಿಯೂ ಸರ್ವವ್ಯಾಪಿಯಾಗಿ ಸಮಸ್ತ ಚೇತನರಿಗೆ ಸಿದ್ಧೋಪಾಯ, ಸಾಧ್ಯೋಪಾಯ ಮತ್ತು ಶೇಷಿಯಾಗಿದ್ದಾಳೆ. ಆಧಾರವನ್ನು ನಾವು ವೇದಭಾಗದ ಕಠವಲ್ಲಿಯಲ್ಲಿ ಕಾಣಬಹುದು.

ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೇ ಶ್ರೀಮತೇ ನಾರಾಯಣಾಯ ನಮ: ।

ದ್ವಯಮಂತ್ರ

ಈ ಮೇಲಿನ ವೇದ ವಾಕ್ಯದಲ್ಲಿ "ಶ್ರೀಮತ್" "ಶ್ರೀಮತೇ" ಎಂಬ ವಿಶೇಷಣಗಳಿಂದ ಶ್ರಿಯ: ಪತಿತ್ವವು ವ್ಯಕ್ತಪಟ್ಟು ಶ್ರೀಮಹಾಲಕ್ಷ್ಮಿಯು ಕೂಡ ಶ್ರೀಮನ್ನಾರಾಯಣನ ಹಾಗೆ ಸಮಸ್ತ ಚೇತನರಿಗೂ ಪ್ರಾಪ್ಯಳು, ಪ್ರಾಪಕಳು, ಆಧಾರಳು, ಅಂತರ್ನಿಯಾಮಕಳು ಮತ್ತು ಸಾಧ್ಯೋಪಾಯಳು ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಶ್ರೀಮಹಾಲಕ್ಷ್ಮಿಯೂ ಕೂಡ ಶ್ರೀಮನ್ನಾರಾಯಣನ ಹಾಗೆ ಎಲ್ಲಕಡೆಯಲ್ಲು ವ್ಯಾಪಿಸಿದ್ದಾಳೆ. ಆಧಾರವನ್ನು ನಾವು ಪರಾಶರ ಮಹರ್ಷಿಗಳು ರಚಿಸಿರುವ ವಿಷ್ಣುಪುರಾಣದಲ್ಲಿ ಕಾಣಬಹುದು.

ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ । ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮಾ॥

ವಿಷ್ಣುಪುರಾಣ

ಈ ಲೋಕಮಾತೆಯಾದ ಲಕ್ಷ್ಮಿಯು ಶ್ರೀಮನ್ನಾರಾಯಣನಿಗೂ ಸಂಪತ್ತನ್ನುಂಟುಮಾಡುವಳು ಮತ್ತು ಶ್ರೀಮನ್ನಾರಾಯಣನ ವಕ್ಷಸ್ಥಲದಲ್ಲಿ ನಿತ್ಯಯೋಗವನ್ನು ಹೊಂದಿರುವವಳು. ಶ್ರೀಮನ್ನಾರಾಯಣನು ಹೇಗೆ ಸಮಸ್ತ ಚೇತನಾ ಹಾಗು ಅಚೇತನವನ್ನು ಅಂತರ್ಯಾಮಿಯಾಗಿ ವ್ಯಾಪಿಸಿದ್ದಾನೆಯೋ ಹಾಗೆಯೇ ಶ್ರೀಮಹಾಲಕ್ಷ್ಮಿಯೂ ಕೂಡ ಸಮಸ್ತ ಚೇತನ ಮತ್ತು ಅಚೇತನವನ್ನು ಅಂತರ್ಯಾಮಿಯಾಗಿ ವ್ಯಾಪಿಸಿರುವವಳು.

ಶ್ರೀಮಹಾಲಕ್ಷ್ಮಿಯು ಕೂಡ ಶ್ರೀಮನ್ನಾರಾಯಣನಂತೆ ಸಮಸ್ತ ಶೇಷಿ ಎಂದು ಕಠಶ್ರುತಿಯಲ್ಲಿ ಬಹಳ ಸ್ಪಷ್ಟವಾಗಿಕಾಣಬಹುದು.

ಅಕಾರೇಣೋಚ್ಯತೇ ವಿಷ್ಣು ಸ್ಸರ್ವಲೋಕೇಶ್ವರೋ ಹರಿ: । ಉದ್ಘೃತಾ ವಿಷ್ಣುನಾ ಲಕ್ಷ್ಮೀರುಕಾರೇಣೋಚ್ಯತೇ ತಥಾ । ಮಕಾರಸ್ತು ತಯೋರ್ದಾಸ ಇತಿ ಪ್ರಣವ ಲಕ್ಷಣಂ ॥

ಕಠಶ್ರುತಿ

ದಾಸನಾದ ಜೀವಾತ್ಮನು ಸರ್ವಲೋಕಗಳಿಗೂ ಈಶ್ವರೇಶ್ವರಿಗಳಾದ ಮತ್ತು ಲೋಕದಂಪತಿಗಳಾದ ಶ್ರೀಮನ್ನಾರಾಯಣನಿಗೆ ಮತ್ತು ಶ್ರೀಮಹಾಲಕ್ಷ್ಮಿಗೇ ಶೇಷನು ಮತ್ತು ಜೀವಾತ್ಮನು ಸರ್ವವಿಧ ಕೈಂಕರ್ಯವು ಶ್ರೀಮನ್ನಾರಾಯಣನಿಗೆ ಮತ್ತು ಶ್ರೀಮಹಾಲಕ್ಷ್ಮಿಗೇ ಸಲ್ಲಿಸಬೇಕೇ ವಿನಾ ಬೇರೆ ಯಾರಿಗೂ ಅಲ್ಲವೆಂಬರ್ಥವು ಬಹಳ ಸ್ಪಷ್ಟವಾಗಿ ಕಠಶ್ರುತಿಯಲ್ಲಿ ಹೇಳಲ್ಪಟ್ಟಿದೆ.

ಈ ರೀತಿ ವೇದ, ಶ್ರುತಿ ಹಾಗು ಸ್ಮೃತಿಗಳಲ್ಲಿ ಶ್ರೀಮನ್ನಾರಾಯಣನು ಮತ್ತು ಶ್ರೀಮಹಾಲಕ್ಷ್ಮಿಯೇ ಪರಬ್ರಹ್ಮತ್ವ ಎಂದು ಬಹಳ ಸ್ಪಷ್ಟವಾಗಿ ಸಮರ್ಥಿಸಲ್ಪಟ್ಟಿದೆ. ಸಮಸ್ತ ಚೇತನರು ಸಂಸಾರ ಬಂಧನದಿಂದ ಮುಕ್ತಿಹೊಂದ ಬೇಕಾದರೇ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀಮಹಾಲಕ್ಷ್ಮಿ ಮತ್ತು ಶ್ರಿಮನ್ನಾರಾಯಣನನ್ನೇ ಸ್ಮರಿಸಿ ಮತ್ತು ಇವರಲ್ಲೇ ಸಾಧ್ಯೋಪಾಯವಾದ ಭಕ್ತಿ ಅಥವಾ ಶರಣಾಗತಿಯನ್ನು ಅನುಷ್ಠಿಸಬೇಕು.

ಅವತಾರ ಪುರುಷರಾದಂತಹ ಆಳ್ವಾರರು ಲಕ್ಷ್ಮೀವಿಶಿಷ್ಟನಾದ ನಾರಾಯಣನೇ ಪರಬ್ರಹ್ಮನು ಎಂದು ಸ್ಪಷ್ಟವಾಗಿ ದಿವ್ಯಪ್ರಬಂಧದಲ್ಲಿ ನಿರೂಪಿಸಿದ್ದಾರೆ. ಆಚಾರ್ಯ ಶ್ರೇಷ್ಠರಾದಂತಹ ಭಗವಾನ್ ರಾಮಾನುಜಾಚಾರ್ಯರು ಕೂಡ ತಮ್ಮ ಎಲ್ಲಾ ಗ್ರಂಥಗಳಲ್ಲಿ ಲಕ್ಷ್ಮೀವಿಶಿಷ್ಟನಾದ ನಾರಾಯಣನೇ ಪರಬ್ರಹ್ಮನು ಎಂದು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಆಧಾರವನ್ನು ವೇದಾಂತದೀಪ ಗ್ರಂಥದ ಮಂಗಳಶ್ಲೋಕದಲ್ಲಿ ನಾವು ಕಾಣಬಹುದು.

ಶ್ರಿಯ: ಕಾಂತೋನನ್ಯೋ ವರಗುಣ್ಯೈಕಾಸ್ಪದವಪು: ಹತಾಶೇಷಾವದ್ಯ: ಪರಮುಖಿಪದೋ ವಾಂಗ್ಮನಸಯೋ: ।
ಅಭೂಮಿರ್ಭೂಮಿರ್ಯೋ ನತಜನದೃಶಾಮಾದಿಪುರುಷೋ ಮನಸ್ತತ್ಪಾದಾಬ್ಜೇ ಪರಿಚರಣಸಕ್ತಂ ಭವತು ಮೇ ॥
ವೇದಾಂತದೀಪ

ಆಚಾರ್ಯ ಸಾರ್ವಭೌಮರಾದಂತಹ ಸ್ವಾಮಿ ವೇದಾಂತ ದೇಶಿಕರು ತಮ್ಮ ಎಲ್ಲಾ ಗ್ರಂಥಗಳಲ್ಲು ಶ್ರೀಮಹಾಲಕ್ಷ್ಮಿ ಮತ್ತು ಶ್ರೀಮನ್ನಾರಾಯಣನೇ ಉತ್ಕೃಷ್ಟವಾದ ಪ್ರಾಪ್ಯರು, ಸರ್ವಶೇಷಿಯರು ಮತ್ತು ಸಮಸ್ತ ಚೇತನರು ಸಂಸಾರ ಬಂಧನದಿಂದ ಮುಕ್ತ ಹೊಂದಬೇಕಾದರೇ ಶ್ರೀಮಹಾಲಾಕ್ಷ್ಮಿ ಮತ್ತು ಶ್ರಿಮನ್ನಾರಾಯಣನನ್ನಲ್ಲಿಯೇ ಸಾಧ್ಯೋಪಾಯವಾದ ಶರಣಾಗತಿಯನ್ನು ಅನುಷ್ಠಿಸಬೇಕು ಎಂದು ಬಹಳ ಸ್ಪಷ್ಟವಾಗಿ ಸಕಲ ಆಧಾರಗಳ ಸಹಿತ ನಿರೂಪಣೆಮಾಡಿದ್ದಾರೆ. ಆಧಾರವನ್ನು ನಾವು ರಹಸ್ಯತ್ರಯಾಸಾರದ ಅರ್ಥಪಂಚಕಾಧಿಕಾರದಲ್ಲಿ ಕಾಣಬಹುದು.

ಪ್ರಾಪ್ಯಂ ಬ್ರಹ್ಮ ಸಮಸ್ತ ಶೇಷಿ ಪರಮಂ ಪ್ರಾಪ್ತಾಹಮಸ್ಯೋಚಿತ: ಪ್ರಾಪ್ತಿರ್ದಾಯಧನ ಕ್ರಮಾದಿಹ ಮಮ ಪ್ರಾಪ್ತಾ ಸ್ವತಸ್ಸೂರಿವತ್ । ಹಂತೈನಾಮತಿ ವೃತ್ತವಾನಹಮಹಮ್ಮತ್ಯಾ ವಿಮತ್ಯಾಶ್ರಯ ಸ್ಸೇತು ಸ್ಸಂಪ್ರತಿ ಶೇಷಿ ದಂಪತಿ(ಶೇಷಸಂಪದಿ) ಭರನ್ಯಾಸಸ್ತುಮೇ ಶಿಷ್ಯತೇ॥
ರಹಸ್ಯತ್ರಯಸಾರ

ಈ ಮೇಲಿನ ಶ್ಲೋಕದಲ್ಲಿ, ಸ್ವಾಮಿ ನಿಗಮಾಂತ ಮಹಾದೇಶಿಕರು ಶ್ರೀಮಹಾಲಕ್ಷ್ಮಿ ಮತ್ತು ಶ್ರೀಮನ್ನಾರಾಯಣನೇ ಉತ್ಕೃಷ್ಟವಾದ ಪ್ರಾಪ್ಯರು ಎಂದು ಸೂಚಿಸುವುದಕ್ಕೆ "ಶೇಷಿ ದಂಪತಿ" ಎಂಬ ಪದವನ್ನು ಉಪಯೋಗಿಸಿದ್ದಾರೆ.

ಶ್ರೀಮಹಾಲಕ್ಷ್ಮಿ ಮತ್ತು ಶ್ರೀಮನ್ನಾರಾಯಣರೇ ಪರಬ್ರಹ್ಮತತ್ವ. ಅವರೇ ಸಮಸ್ತ ಚೇತನ ಮತ್ತು ಅಚೇತನಕ್ಕೆ ಆಧಾರರು, ಅಂತರಾತ್ಮರು, ನಿಯಾಮಕರು ಮತ್ತು ಶೇಷಿಯು ಆಗಿದ್ದಾರೆ.

ಶ್ರೀಮಹಾಲಕ್ಷ್ಮಿ ಮತ್ತು ಶ್ರೀಮನ್ನಾರಾಯಣರೇ ಸಮಸ್ತ ಚೇತನರಿಗೆ ಉತ್ಕೃಷ್ಟವಾದ ಸಿದ್ಧೋಪಾಯರೂ ಮತ್ತು ಸಾಧ್ಯೋಪಾಯರೂ ಆಗಿದ್ದಾರೆ.

ಈ ಮೇಲಿನ "ಪರಬ್ರಹ್ಮನು ಯಾರು" ಎಂಬ ವಿಮರ್ಶೆಯನ್ನು ಮತ್ತು ವೇದವಾಕ್ಯಗಳ ಅನುವಾದವನ್ನು ಉಭಯವೇದಾಂತ ವಿದ್ವಾನ್ ಡಾ ಎನ್. ಎಸ್. ಆನಂತರಂಗಾಚಾರ್ಯ ಸ್ವಾಮಿಗಳು ಬರೆದಿರುವ "ರಾಮಾನುಜ ದರ್ಶನ" ಮತ್ತು "ಪುರುಷಸೂಕ್ತಭಾಷ್ಯ" ಎಂಬ ಶ್ರೀಸೂಕ್ತಿಗಳಿಂದ ಆರಿಸಲ್ಪಟ್ಟಿದೆ.

ಸಂಸ್ಕೃತ ಶ್ಲೋಕದ ಕನ್ನಡ ಅನುವಾದವನ್ನು ಉಭಯವೇದಾಂತ ವಿದ್ವಾನ್ ವಿಜಯರಾಘವಾಚಾರ್ಯ ಸ್ವಾಮಿಗಳು ಬೆರೆದಿರುವ "ಶ್ರೀಮದ್ರಹಸ್ಯತ್ರಯಸಾರದ ಕನ್ನಡ ಅನುವಾದ" ಶ್ರೀಸೂಕ್ತಿಯಿಂದ ಆರಿಸಲ್ಪಟಿದೆ.

ॐ ॐ ॐ

ಆತ್ಮನೋ ದುರ್ದಶಾಪತ್ತಿಂ ವಿಮೃಶ್ಯ ಚ ಗುಣಾನ್ಮಮ ।
ಮದೇಕೋಪಾಯ ಸಂವಿತ್ತಿರ್ಮಾಂ ಪ್ರಪನ್ನೋ ವಿಮುಚ್ಯತೇ ॥

ಚೇತನನಿಗೆ ಈಗ ಪ್ರಾಪ್ತಿಯಾಗಿರುವ ದುರ್ದೆಶೆಯನ್ನು ಮತ್ತು ತನ್ನಲ್ಲಿರುವ ಕಲ್ಯಾಣಗುಣಗಳಾದ ದಯಾ, ವಾತ್ಸಲ್ಯ, ಸೌಲಭ್ಯ, ಸೌಶೀಲ್ಯಾದಿ ಗುಣಗಳನ್ನು ವಿಮರ್ಶೆಮಾಡಿ, ಪರಮಾತ್ಮನೇ ಮುಖ್ಯೋಪಾಯವೆಂಬ ಜ್ಞಾನದಿಂದ ಶರಣಾಗತಿಯನ್ನು ಅನುಷ್ಠಿಸಿ ಸಂಸಾರ ಬಂಧದಿಂದ ಬಿಡುಗಡೆ ಹೊಂದುವನು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಲಕ್ಷ್ಮೀಹಯಗ್ರೀವ ಸ್ತುತಿ

ರಚನೆ – ಕೆ.ವಿ. ಶ್ರೀನಿವಾಸ ಪ್ರಸಾದ್

ಜ್ಞಾನದಾದಿಯು ಚತುರ್ವೇದ ವಿದ್ಯೆಗಳು
ಅಪಹರಿಸೆ ದಾನವರು, ಮಧು ಕೈಟಭರು
ತಳೆದೆ ಹಯಾಸ್ಯ ರೂಪ, ಮರ್ಧಿಸಿ, ಮರಳಿ ತರಲು
ನಮನವಿದೋ ವಿದ್ಯಾಧೀಶ ಲಕ್ಷ್ಮಿ ಹಯಗ್ರೀವ

ಸಮನಿಲ್ಲ ಜ್ಞಾನಕೆ, ಅಪೌರುಷೇಯವದು
ಭಗವಂತನರಿವುದೇ ನಿಜವಾದ ಜ್ಞಾನ
ಸಾರುವುದದನು ಸಕಲ ವೇದ ಉಪನಿಷತ್ತು
ವೇದಗಳ ರಕ್ಷಿಸಿದ ಮಧುಕೈಟಭಾರಿಯೇ, ನಮನ

ಜ್ಞಾನದರಿವು ನೀಡುವುದು ಚಿರಂತನ ಆನಂದ
ಕರುಣಿಸು ಎನಗೆ ಆನಂದಮಯ ದಿವ್ಯ ಜ್ಞಾನ
ಕರಗಳಲಿ ಶಂಖ ಚಕ್ರ ವೇದ ಗ್ರಂಥವ ಹಿಡಿದು
ವ್ಯಾಖ್ಯಾಮುದ್ರೆ ತೋರುತಿರುವ ಹಯಾಸ್ಯ, ನಮನ

ನಮಿಪೆ ಭಕ್ತಿಯಲಿ, ಸ್ತುತಿಸೆ ನಿನ್ನ, ತನ್ಮಯದಿ
ಆರಾಧಿಸೆ ಶ್ರದ್ಧೆಯಲಿ, ಭಜಿಸೆ ಪೂಜ್ಯ ಭಾವದಿ
ಕರುಣಿಸುವೆ ಸಕಲ ವಿದ್ಯೆಗಳ, ದಯಾ ಕಟಾಕ್ಷದಿ
ವಂದಿಪೆವು ಹಯವದನ ನೀಡೆಮಗೆ ವಿದ್ಯೆಯ

ಲಭಿಸಿತಂದು ಶಾರದಾ ಪೂಜಿತ ಮಂಗಳ ಮೂರ್ತಿ
ಭಗವದ್ರಾಮಾನುಜರಿಗೆ ಭಾರತಾಗ್ರದ ಕಾಶ್ಮೀರದಿ
ಮೂರ್ತಿಯದು ಬಂದಿತು ಕವಿಸಿಂಹ ವೆಂಕಟರಿಗೆ
ಪರಕಾಲಶ್ರಯದಿ ಇರುವ ಲಕ್ಷ್ಮೀ ಹಯಗ್ರೀವ, ನಮನ

ರಚನೆ – ಕೆ.ವಿ. ಶ್ರೀನಿವಾಸ ಪ್ರಸಾದ್

ಓಂ ಓಂ ಓಂ

ಕುಕ್ಷೌ ತಿಷ್ಠತಿ ಯಸ್ಯಾನ್ನಂ ವೇದಾಭ್ಯಾಸೇನ ಜೀರ್ಯತೆ ।
ಸ ತು ತಾರಯತೇ ತೇಷಾಂ ದಶ ಪೂರ್ವಾನ್ ದಶಾಪರಾನ್ ॥

ಯಾವನ ಉದರದಲ್ಲಿರುವ ಅನ್ನವು ವೇದಾಭ್ಯಾಸದೊಂದಿಗೆ ಜೀರ್ಣವಾಗುವುದೋ, ಅಂತಹವನು ತನ್ನ ಹತ್ತು ತಲೆ ಪೂರ್ವಜರನ್ನೂ, ಹತ್ತು ತಲೆ ಅನಂತರದವರನ್ನೂ ಉದ್ಧರಿಸುವನು.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ದಿವ್ಯದೇಶ ರಸಪ್ರಶ್ನೋತ್ತರಗಳು

ಪ್ರೊ. ಸಿ. ಗೋವಿಂದಾಚಾರ್

1 ಬಲರಾಮನ ತೀರ್ಥಯಾತ್ರೆಯಲ್ಲಿ ಫಾಲ್ಗುನಕ್ಷೇತ್ರ ಎಂದು ಕರೆಯಲ್ಪಡುವ ದಿವ್ಯದೇಶ ಯಾವುದು?

2. ತಿರುಪತಿ ಗೋವಿಂದರಾಜ ಪಟ್ಟಣದ ಪೂರ್ವದ ಹೇಸರೇನು?

3. ತಿರುಮಲೈ ರಂಗನಾಥ ಎಲ್ಲಿದ್ದಾನೆ?

4. 'ಗೋಪಾಷ್ಟಮಿ' ಎಂದರೇನು?

5. ನಿಜವಾದ ಕೇಶವಿರುವ ಅಚಾಮೂರ್ತಿಯ ಕ್ಷೇತ್ರವನ್ನು ಹೆಸರಿಸಿ.

6. ಹೋಮಧೇನು ಯಾವುದು?

7. ಕಳ್ಳ ಅಳಹರ್ ಎಲ್ಲಿದ್ದಾನೆ?

8. "ನೀವು ಈಗತಾನೆ ಬರುತ್ತಿದ್ದುದನ್ನು ನಾನು ದೂರದಿಂದಲೇ ನೋಡಿದೆ ಬನ್ನಿ ಬನ್ನಿ" ಎಂದು ಕೈಬೀಸಿ ಕರೆದು ಕೃಪೆ ಮಾಡುವ ಸ್ವಾಮಿಕ್ಷೇತ್ರ ಯಾವುದು?

9. ಇವು ಎಲ್ಲಿದೆ - 1) ಯದುಗಿರಿ 2) ಯಾದಗಿರಿ

10 ದರ್ಶನ ಪುಷ್ಕರಿಣಿ ಎಲ್ಲಿದೆ? ವೈಶಿಷ್ಟ್ಯವೇನು?

11 ರಾಮಕೃಷ್ಣರಿಬ್ಬರೂ ಏಕಕಾಲದಲ್ಲಿ ಎಲ್ಲ ಭಕ್ತರಿಗೂ ದರ್ಶನವಿತ್ತ ಸ್ಥಳಾದರ್ಶವನ್ನು ಆಂಡಾಳ್ ಏನೆಂದು ಕರೆದಿರುತ್ತಾಳೆ?

12 ನೀಲಾದ್ರಿ ಎಂಬುದು ಯಾವ ಕ್ಷೇತ್ರದ ಹೆಸರು?

13 ಅಪ್ಪ ಅಥವಾ ಅಪ್ಪಣ್ಣ ಎಂಬ ದಿವ್ಯನಾಮ ಯಾವ ಕ್ಷೇತ್ರದ ದೇವರಿಗೆ ಸಲ್ಲುವುದು?

14. ಶ್ರೀ ಕೃಷ್ಣನ ದೇಹೋತ್ಸರ್ಗವಾದ ಸ್ಥಳಾದರ್ಶಯಾವುದು ತಿಳಿಸಿ.

15. ಶ್ರೀರಾಮಾನು ಜಟಾಯುವಿಗೆ ಮೋಕ್ಷವನ್ನು ಅನುಗ್ರಹಿಸಿದ ದಿವ್ಯ ದೇಶ ಯಾವುದು?

ಉತ್ತರಗಳು

1) ತಿರುವಿಣ್ಣಗರ (ಒಪ್ಪಿಲಿಯಪ್ಪನ್)

2) ಶ್ರೀನಿವಾಸಮಂಗಾಪುರಂ 3ಕಿ.ಮೀ. ದೂರದಲ್ಲಿ ಶ್ರೀನಿವಾಸ ಮಂಗಾಪುರಂ -ತಿರುವಿಣ್ಣಗರ ರಸ್ತೆಯಲ್ಲಿ ಸಿಗುವ ಸ್ಥಳ

ತಿರುಪತಿ (ಶ್ರೀನಿವಾಸ-ಶ್ರೀನಿವಾಸಮಂಗಾಪುರಂ)

3) ತಿರುಪತಿ ಗೋವಿಂದರಾಜ ಪಟ್ಟಣದ ಪಶ್ಚಿಮಕ್ಕೆ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿ ಸಿಗುವ ಬೆಟ್ಟ

ತಿರುಮಲೈ-ತಿರುಪತಿ ಬೆಟ್ಟಗಳು (ಏಳುಬೆಟ್ಟಗಳು)

4) ಶ್ರೀಕೃಷ್ಣ ಜನ್ಮಾಷ್ಟಮಿ (ಕೃಷ್ಣಾಷ್ಟಮಿ)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಶ್ರೀ ಲಕ್ಷ್ಮೀ ಹಯಗ್ರೀವ ದಿವ್ಯಪಾದುಕಾಸೇವಕ

ಶ್ರೀಮದಭಿನವರಾಮಾನುಜ ಬ್ರಹ್ಮತಂತ್ರಸ್ವತಂತ್ರ ಪರಕಾಲಸ್ವಾಮಿಗಳ ಅಷ್ಟೋತ್ತರಶತ ನಾಮಾವಳೀ

ಓಂ ಶ್ರೀ ಶ್ರೀಮತೇ ನಮಃ
ಓಂ ಶ್ರೀ ಅನಂತಾಯ ನಮಃ
ಓಂ ಶ್ರೀ ಸುಗುಣೋಜ್ಜ್ವಲಾಯ ನಮಃ
ಓಂ ಶ್ರೀ ದೇಶಿಕತಲ್ಲಜಾಯ ನಮಃ
ಓಂ ಶ್ರೀ ದಯಾಪಾಂಗಾಯ ನಮಃ
ಓಂ ಶ್ರೀ ಪರಕಾಲಮಠಾಧಿಪಾಯ ನಮಃ
ಓಂ ಶ್ರೀ ರಾಮಾನುಜಾಯ ನಮಃ
ಓಂ ಶ್ರೀ ಯತಿಶ್ರೇಷ್ಠಾಯ ನಮಃ
ಓಂ ಶ್ರೀ ಶ್ರೀಮತ್ತಿರುಮಲಕುಲಕ್ಷೀರಾರ್ಣವಸುಧಾಕರಾಯ ನಮಃ
ಓಂ ಶ್ರೀ ಪಿಂಗಳಾಬ್ದ ನಿಜಭಾದ್ರಶುಕ್ಲಪಕ್ಷೈಕಾದಶೀ ಗುರುವಾಸರ ಶ್ರವಣಭೇ ಅವತೀರ್ಣಾಯ ನಮಃ
ಓಂ ಶ್ರೀ ಶೇಸಮ್ಮಾಗರ್ಭಸಂಭವಾಯ ನಮಃ
ಓಂ ಶ್ರೀ ಪಿತೃವ್ಯಕೃಷ್ಣಮಾಚಾರ್ಯಶಿಕ್ಷಾಲಬ್ಧಕಲಾಚಯಾಯ ನಮಃ
ಓಂ ಶ್ರೀ ಆಂಧ್ರಾಂಗ್ಲಸುರಕರ್ಣಾಟಭಾರತೀವಿಚಕ್ಷಣಾಯ ನಮಃ
ಓಂ ಶ್ರೀ ರಂಗನಾಥಕೃಪಾಪಾತ್ರಾಯ ನಮಃ
ಓಂ ಶ್ರೀ ತದೀಯವಚನೇಸ್ಥಿತಾಯ ನಮಃ
ಓಂ ಶ್ರೀ ತತ್ಪ್ರಾಪ್ತಶಂಖಚಿಕ್ರಾಂಕಾಯ ನಮಃ
ಓಂ ಶ್ರೀ ರಂಗನಾಥಪದಾಂಭೋಜರಚಿತಾತ್ಮಭರಾರ್ಪಣಾಯ ನಮಃ
ಓಂ ಶ್ರೀ ವೇದಾಧ್ಯಯನಸಂಪನ್ನಾಯ ನಮಃ
ಓಂ ಶ್ರೀ ಸದಾಚಾರಪರಾಯಣಾಯ ನಮಃ
ಓಂ ಶ್ರೀ ವಿರೋಧಿಕೃಜ್ಜ್ಯೇಷ್ಠಶುದ್ಧದಶಮೀಗುರುವಾಸರೇ ಪ್ರಾತಸ್ತ್ವೀಕೃತ ತುರ್ಯಾಶ್ರಮಾಯ ನಮಃ
ಓಂ ಶ್ರೀ ಆಶ್ರಿತವತ್ಸಲಾಯ ನಮಃ
ಓಂ ಶ್ರೀ ತ್ರಿದಂಡಪಿಲಸತ್ಪಾಣಯೇ ನಮಃ
ಓಂ ಶ್ರೀ ಯಜ್ಞಸೂತ್ರಪರಿಷ್ಕೃತಾಯ ನಮಃ
ಓಂ ಶ್ರೀ ಊರ್ಧ್ವಪುಂಡ್ರಲಸತ್ಕಾಯಾಯ ನಮಃ
ಓಂ ಶ್ರೀ ಶಿಖಾಶೋಭಿತಮಸ್ತಕಾಯ ನಮಃ
ಓಂ ಶ್ರೀ ಕಾಷಾಯಪಿಲಸತ್ಕಾಯಾಯ ನಮಃ
ಓಂ ಶ್ರೀ ತ್ರಿಕಾಲಸ್ನಾನತತ್ಪರಾಯ ನಮಃ
ಓಂ ಶ್ರೀ ಪದ್ಮಾಕ್ಷಮಾಲಾಗ್ರೈವೇಯಾಯ ನಮಃ
ಓಂ ಶ್ರೀ ತುಲಸೀಮಾಲಿಕಾಂಚಿತಾಯ ನಮಃ
ಓಂ ಶ್ರೀ ಧರ್ಮಾನುಷ್ಠಾನಶ್ರದ್ಧಾಳವೇ ನಮಃ
ಓಂ ಶ್ರೀ ಹಯಗ್ರೀವಾರ್ಚನರತಾಯ ನಮಃ
ಓಂ ಶ್ರೀ ಹಯಗ್ರೀವಜಪಾಸಕ್ತಾಯ ನಮಃ
ಓಂ ಶ್ರೀ ಹಯಗ್ರೀವಾಂಘ್ರಿಸೇವಕಾಯ ನಮಃ
ಓಂ ಶ್ರೀ ಶ್ರೀಹಯಾಸ್ಯಪದಾಂಭೋಜ ಬಂಭರಾಯಿತಮಾನಸಾಯ ನಮಃ
ಓಂ ಶ್ರೀ ಮಾನಸಾಂಬುಜನಿರ್ಧೂತಕಾಮಕ್ರೋಧಾದಿಷಟ್ಪದಾಯ ನಮಃ
ಓಂ ಶ್ರೀ ಷಟ್ಪದತ್ರೈಂಧವಗ್ರೀವಪಂಕಜಾಯಿತಮಾನಸಾಯ ನಮಃ
ಓಂ ಶ್ರೀ ಮುಮುಕ್ಷುಜನಮಂದಾರಾಯ ನಮಃ
ಓಂ ಶ್ರೀ ವಿಶಿಷ್ಟಾದ್ವೈತಬೋಧಕಾಯ ನಮಃ
ಓಂ ಶ್ರೀ ಹಸನ್ಮುಖಾಯ ನಮಃ
ಓಂ ಶ್ರೀ ದಯಾಸಿಂಧವೇ ನಮಃ
ಓಂ ಶ್ರೀ ಮೃದುಭಾಷಣಶೋಭಿತಾಯ ನಮಃ
ಓಂ ಶ್ರೀ ಅವರ್ಜಿತಾಖಿಲಚ್ಛಾತ್ರಾಯ ನಮಃ
ಓಂ ಶ್ರೀ ಶಿಷ್ಯಸಾರದುರಂಧರಾಯ ನಮಃ
ಓಂ ಶ್ರೀ ಸೂಪದಿಷ್ಟಮನೂತ್ತಂಸಾಯ ನಮಃ
ಓಂ ಶ್ರೀ ಸುಗ್ರಾಹಿತಪದೋದಕಾಯ ನಮಃ
ಓಂ ಶ್ರೀ ಪರಾಪರಸ್ವರೂಪಜ್ಞಾಯ ನಮಃ
ಓಂ ಶ್ರೀ ತತ್ತ್ವತ್ರಯವಿಚಕ್ಷಣಾಯ ನಮಃ
ಓಂ ಶ್ರೀ ವ್ಯೂಹಾವತಾರತತ್ತ್ವಜ್ಞಾಯ ನಮಃ
ಓಂ ಶ್ರೀ ವಿಭವೋದಂತಕೋವಿದಾಯ ನಮಃ
ಓಂ ಶ್ರೀ ಜ್ಞಾತಾಂತರಾತ್ಮಮಹಾತ್ಮ್ಯಾಯ ನಮಃ
ಓಂ ಶ್ರೀ ವಿದಿತಾರ್ಚಾವತಾರಕಾಯ ನಮಃ
ಓಂ ಶ್ರೀ ವಿರೋಧಿಜ್ಞಾನನಿಷ್ಣಾತ್ರೆ ನಮಃ
ಓಂ ಶ್ರೀ ವಾಸುದೇವೈಕತತ್ಪರಾಯ ನಮಃ
ಓಂ ಶ್ರೀ ಜ್ಞಾತಾರ್ಥಪಂಚಕಜ್ಞಾನಾಯ ನಮಃ
ಓಂ ಶ್ರೀ ಸಂತ್ಯಕ್ತವಿಷಯಾಂತರಾಯ ನಮಃ
ಓಂ ಶ್ರೀ ಅಕಾರಾರ್ಥಸ್ವರೂಪಜ್ಞಾಯ ನಮಃ
ಓಂ ಶ್ರೀ ಮಕಾರಾರ್ಥವಿಚಕ್ಷಣಾಯ ನಮಃ
ಓಂ ಶ್ರೀ ಉಕಾರಭಾವನಿಷ್ಣಾತ್ರೇ ನಮಃ
ಓಂ ಶ್ರೀ ನಾರಾಯಣಪರಾಯಣಾಯ ನಮಃ
ಓಂ ಶ್ರೀ ವಿಜ್ಞಾತಮೂಲಮಂತ್ರಾರ್ಥಾಯ ನಮಃ
ಓಂ ಶ್ರೀ ತದ್ಬೋಧನಕೃತಾದಾರಾಯ ನಮಃ
ಓಂ ಶ್ರೀ ನಿತ್ಯದ್ವಯಾನುಸಂಧಾನಾಯ ನಮಃ
ಓಂ ಶ್ರೀ ಚರಮಾರ್ಥವಿದ್ವರಾಯ ನಮಃ
ಓಂ ಶ್ರೀ ಆಟಾಟ್ಯಾರಚಿತೋತ್ಸಾಹಾಯ ನಮಃ
ಓಂ ಶ್ರೀ ಧರ್ಮದಿಗ್ವಿಜಯರತಾಯ ನಮಃ
ಓಂ ಶ್ರೀ ಇಡುಗೂರುಜನಾನಂದಸಂಧಾಯಕಾಯ ನಮಃ
ಓಂ ಶ್ರೀ ಮಹಾಮತಯೇ ನಮಃ
ಓಂ ಶ್ರೀ ಕೃಷ್ಣಯ್ಯರಚಿತಾತಿಥ್ಯಹೃಷ್ಟಾಯ ನಮಃ
ಓಂ ಶ್ರೀ ಸರ್ವಜನಾದೃತಾಯ ನಮಃ
ಓಂ ಶ್ರೀ ಸಪ್ತಾಹಯಜ್ಞಸಂತುಷ್ಟಾಯ ನಮಃ
ಓಂ ಶ್ರೀ ಉಪದಿಷ್ಟಪರಿವೈಭವಾಯ ನಮಃ
ಓಂ ಶ್ರೀ ಸರಸೋಕ್ತಿವಿನಿರ್ಧೂತಮೋಹಾಯ ನಮಃ
ಓಂ ಶ್ರೀ ನಿರ್ವ್ಯಾಜಬಾಂಧವಾಯ ನಮಃ
ಓಂ ಶ್ರೀ ಬೆಂಗಳೂರುಜನಾನಂದಕಂದಾಯ ನಮಃ
ಓಂ ಶ್ರೀ ಜ್ಞಾನೋಪದೇಶಿಕಾಯ ನಮಃ
ಓಂ ಶ್ರೀ ತತ್ತ್ವೋಪದೇಶಪ್ರಹ್ವಾನ್ನಲೋಕಾಯ ನಮಃ
ಓಂ ಶ್ರೀ ಲೋಕಸರ್ವಜನಾದೃತಾಯ ನಮಃ
ಓಂ ಶ್ರೀ ಹಯಾಸ್ಯವಜ್ರಡೋಲೋತ್ಸವಾನಂದಿತಜನಾರ್ಣವಾಯ ನಮಃ
ಓಂ ಶ್ರೀ ತ್ವತ್ಪಾದಪೂಜಾಸಂಪ್ರೀತಶಿಷ್ಯಾಯ ನಮಃ
ಓಂ ಶ್ರೀ ಶಿಷ್ಯಾರ್ತಿಮೋಕ್ಷಕಾಯ ನಮಃ
ಓಂ ಶ್ರೀ ಹಿಂದೂಪುರ ಜನಮನಶ್ಯತಪತ್ರದಿವಾಕರಾಯ ನಮಃ
ಓಂ ಶ್ರೀ ವಾದಿತ್ರೇಣೋದಕುಂಭೇನ ಪ್ರತ್ಯುದ್ಗತಾಯ ನಮಃ
ಓಂ ಶ್ರೀ ಜನಸ್ತುತಾಯ ನಮಃ
ಓಂ ಶ್ರೀ ಅಲಂಕೃತಗೃಹಾಳಿಂದನೀರಾಜನಸಭಾಜಿತಾಯ ನಮಃ
ಓಂ ಶ್ರೀ ಶ್ರೀಧರ್ಮಪರಸದ್ಭಕ್ತಜನಾಪತಾಯ ನಮಃ
ಓಂ ಶ್ರೀ ಮಹೋದಯಾಯ ನಮಃ
ಓಂ ಶ್ರೀ ತದರ್ಚಿತಮಹಾಂಭೋಜಾಯ ನಮಃ
ಓಂ ಶ್ರೀ ಮುಕ್ತಿಮಾರ್ಗಪ್ರದರ್ಶಕಾಯ ನಮಃ
ಓಂ ಶ್ರೀ ಸಂಥಾನಿತಕವಿವ್ರಾತಾಯ ನಮಃ
ಓಂ ಶ್ರೀ ಸುಸಂತರ್ಪಿತಕವಿವ್ರಾತಾಯ ನಮಃ
ಓಂ ಶ್ರೀ ಅಪಾರಸಂಸಾರಸಿಂಧುಕರ್ಣಧಾರಾಯ ನಮಃ
ಓಂ ಶ್ರೀ ಕೃಪಾರ್ಣವಾಯ ನಮಃ
ಓಂ ಶ್ರೀ ಭಕ್ತ್ಯುತ್ತರಾಯ ನಮಃ
ಓಂ ಶ್ರೀ ಆರ್ತಸಂತ್ರಾತೇ ನಮಃ
ಓಂ ಶ್ರೀ ಹರಿಪ್ರಾಪಣಲಗ್ನಕಾಯ ನಮಃ
ಓಂ ಶ್ರೀ ನಿಶ್ರೇಯಸಮನಿಶ್ರೇಣಿಭೂತನ್ಯಾಸಪ್ರದಾಯಕಾಯ ನಮಃ
ಓಂ ಶ್ರೀ ಅಜ್ಞಾನತಿಮಿರಾದಿತ್ಯಾಯ ನಮಃ
ಓಂ ಶ್ರೀ ಜ್ಞಾನಾಂಬುಧಿಸುಧಾಕರಾಯ ನಮಃ
ಓಂ ಶ್ರೀ ಪ್ರಪನ್ನೌಘಕರಾಲಂಬಾಯ ನಮಃ
ಓಂ ಶ್ರೀ ಮಾರ್ಜಿತಾಖಿಲಕಲ್ಮಷಾಯ ನಮಃ
ಓಂ ಶ್ರೀ ಛಾತ್ರೀಕೃತಮಹಾರಾಜಾಯ ನಮಃ
ಓಂ ಶ್ರೀ ಮಹಾರಾಜಸುಪೂಜಿತಾಯ ನಮಃ
ಓಂ ಶ್ರೀ ಪೂಜಿತಾಶ್ವಶಿರಃಪಾದಾಯ ನಮಃ
ಓಂ ಶ್ರೀ ಪಾದಾನತಮಹಾಜನಾಯ ನಮಃ
ಓಂ ಶ್ರೀ ಜನಹರಿವಚೋಲ್ಲಾಸಾಯ ನಮಃ
ಓಂ ಶ್ರೀ ಉಲ್ಲಾಸಿತಾಖಿಲಮಾನಸಾಯ ನಮಃ
ಓಂ ಶ್ರೀ ಶ್ರೀಮದ್ವೇದಾಂತದೇಶಿಕಪಾದಾಂಬುಜಭೃಮರಾಯ ನಮಃ
ಓಂ ಶ್ರೀ ಶ್ರೀ ಬ್ರಹ್ಮತಂತ್ರಾಭಿನವರಾಮಾನುಜಾಯ ನಮಃ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri

ಶ್ರೀ ಲಕ್ಷ್ಮೀ ಹಯಗ್ರೀವ ದಿವ್ಯಪಾದುಕಾಸೇವಕ
ಶ್ರೀ ಮದಭಿನವವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕಾನಾಂ

ಅಷ್ಟೋತ್ತರ ಶತನಾಮಾವಳೀ

ತಃ

ಹಯಾಸ್ಯಂ ಕುರಂತೇ ನತ್ವಾ ವೇಙ್ಕಟೇಶಕವಿರ್ಮುದಾ |
ಅಷ್ಟೋತ್ತರಶತಂ ನಾಮ ನವ್ಯವಾಗೀಶಯೋಗಿನಾಮ್ ||

ತಃ ಯೋಗಿನೇ, ಮಂತ್ರ ಸಿದ್ಧಾಯ ಹಯಾಸ್ಯಪದಸೇವಿನೇ |
ತಪೋನಿಷ್ಠಾಯ ಧೀರಾಯ ತುರೀಯಪದಲಕ್ಷ್ಮಣೇ ||1||

ದಾನ್ತಾಯ ಪರಮಾರ್ಥಾಯ ಕೃತಿನೇ ಗುಣಿನೇ ನಮಃ |
ಯಮಿನೇ ಪಾರಲಕ್ಷ್ಯಾಯ ಪರಮೈಕಾನ್ತಿನೇ ಯತೇ ||2||

ಬೋದಕಾಯಾರ್ಥಿಲಕ್ಷ್ಯಾಯ ಸಾಂಖ್ಯಾಯಾ ಮಿತತೇಜಸೇ |
ಸತೇ ಸ್ಥಿರಾಯ ಸಿದ್ಧಾಯ ಬ್ರಹ್ಮನಿಷ್ಠಾಯ ಭೂಯಸೇ ||3||

ತ್ರಯ್ಯನ್ತಾರ್ಥಾಯ ನಾಥಾಯ ತಾರಕಾಯ ಮಹಾತ್ಮನೇ |
ಶ್ರೀಮತೇ ಮುನಯೇಽಗಾಧಭಗವದ್ಭಕ್ತಿ ಸಿನ್ಧವೇ ||4||

ವೈರಾಗ್ಯನಿಧಯೇ ಶಾಸ್ತ್ರೇ ವಿವೇಕ-ಸ್ವ-ಪ್ರಕಾಶಿನೇ |
ಹಂಸಾಯ ಪರಮಹಂಸಾಯ ತತ್ತ್ವವೇತ್ರೇ ದಯಾಲವೇ ||5||

ದೇಶಿಕಾಯಾ ತ್ಮಲೋಕಾಯ ಬ್ರಹ್ಮದಂಡಾಯ ದಂಡಿನೇ |
ಅಧ್ಯಾತ್ಮದೀಕ್ಷಿತಾಯಾಸ್ಮೈ ಪುರುಷಾಯ ಪರಾತ್ಮನೇ ||6||

ಮಂಗಲಾಯ ಸ್ವಸಾಧ್ಯಾಯ ಸಾಧನಾಯ ಪ್ರಕಾರಿಣೇ |
ಸತ್ತ್ವಾಯ ಧೀಮತೇ ಭೋಕ್ತ್ರೇ ಗುರುಭಾವಾನುರಾಗಿಣೇ ||7||

ಸ್ವಾಧ್ಯಾಯಪದನಿಷ್ಠಾಯ ಪಂಚಕಾಲಪ್ರಕಾಶಿನೇ |
ಸವನತ್ರಯನಿಷ್ಠಾಯ ಶಿಷ್ಯಚಿತ್ತಾಪಹಾರಿಣೇ ||8||

ತೀಕ್ಷ್ಣಾಯ ಮೃದವೇ ಧಾತ್ರೇ ವಿಧಾತ್ರೇ ದೀರ್ಘಬಂಧವೇ |
ಅನಘಾಯ ಸ್ಮಿತಾಸ್ಯಾಯ ಸ್ವ-ಪರ-ನ್ಯೂನ-ದರ್ಶಿನೇ ||9||

ಶ್ರೀ ದಂಡಾಯ ನೃಸಿಂಹಾಯ ರಾಜ್ಞೇ ರಾಜಸ್ತುಂದಡಿನೇ |
ಲಕ್ಷ್ಮಣಾರ್ಯಾಥತತ್ತ್ವಾಯ ವೇದಮಾರ್ಗವಿಧಾಯಿನೇ ||10||

ಅರ್ಥಪಂಚಕಲಕ್ಷ್ಯಾಯ ಸಂನ್ಯಾಸಾಶ್ರಮರೂಪಿಣೇ |
ಹಯಾಸ್ಯಾರ್ಚಾವಿಧಾನಾಯ ತ್ರಿದಂಡ ಸ್ವಪ್ರಮಾಯುಜೇ ||11||
-ಪ್ರಮಾಭುಜೇ ||

ಊರ್ಧ್ವಮೂಲೋರ್ಧ್ವಪುಂಡ್ರಾಯ ಯಜ್ಞಸೂತ್ರಾನುಶಾಸಿನೇ |
ನವ್ಯರಂಗೇಂದ್ರ ಶಿಷ್ಯಾಯ ನವ್ಯಲಕ್ಷ್ಮಣಭೀಕ್ಷವೇ ||12||

ಪರಕಾಲಪದೇಶಾಯ ಬ್ರಹ್ಮತಂತ್ರಸ್ವತಂತ್ರಿಣೇ |
ತ್ರಿಕಾಲ ಜ್ಞಾನಯಜ್ಞಾಯ ಜ್ಞಾನಾಧ್ವರ್ಯವಭಾಸಿನೇ ||13||

ಸ್ವಾಪಹರ್ತ್ಯಪಕಾರಾಯ ಸ್ವಾಪಕರ್ತ್ರನುರಾಗಿಣೇ |
ನಿರ್ದ್ವಂದ್ವಾಯ ಸ್ವತಂತ್ರಾಯ ಸತ್ಯಸಂಧವ್ರತಾತ್ಮನೇ ||14||

ಪಾದುಕಾರ್ಚನದೀಕ್ಷಾಢ್ಯರಾಜಸದ್ಮಪ್ರಭಾಸ್ವತೇ |
ರಾಜಸ್ವಪದ್ಮ ಮಿತ್ರಾಯ ಭಾರತಾಯಾರ್ಷಭಾಗಿನೇ ||15||

ನಿರ್ವಿಶೇಷವಿಶೇಷಾರ್ಥತತ್ತ್ವಭೂಮ್ನ್ಯನುಷಜ್ಗಿಣೇ |
ಭಕ್ತಿಪ್ರಪತ್ತಿತತ್ತ್ವಾರ್ಥ ಪ್ರಮಾನುಷ್ಠಾನಲಕ್ಷ್ಮಣೇ ||16||

ಸ್ವಚ್ಛಂದವೃತ್ತನಿಷ್ಠಾಯ ಸ್ವಾರ್ಥಚ್ಛಂದಪ್ರವರ್ತಿನೇ |
ವಿಶ್ವಾಮಿತ್ರಾನ್ವಯಾರ್ಕಾಯ ಚೇತನಾಯ ವಿಪಶ್ಚಿತೇ ||17||

ರಂಗವೇಙ್ಕೀರ ಸತ್ತ್ವಾಯ ಶ್ರೀನಿವಾಸವಿಹಾರಿಣೇ |
ಶ್ರೀನಿವಾಸಾತ್ತದೀಕ್ಷಾಯ ಶಠಕೋಪಾಪ್ತಮಂತ್ರಿಣೇ ||18||

ಕೃಷ್ಣಮಾರ್ಯಕೃಪಾಪ್ರಾಪ್ತಮಂತ್ರದೀಕ್ಷಾ ಪ್ರಮಾವತೇ |
ದ್ರಾವಿಡಾಮ್ನಾಯ ಸೂಕ್ತ್ಯರ್ಥಮಾಧುರ್ಯಾಸ್ವಾದಕಾರಿಣೇ ||19||

ಯೂವೋದ್ಭವವಸನ್ತಾಢ್ಯಮಧು-ಲೋಕವಿರಾಡ್ಯುಜೇ |
ಪೂಷಾನುಭೂ ಅಲಕ್ಷ್ಮಾರ್ಘ್ಯಮಹರ್ಷಿ ಪದಭೊಗಿನೇ ||20||

ಚಿದಚಿತ್ಪರತತ್ತ್ವಾರ್ಥ ವ್ರತಷಟ್ಪದ ಚಾರಿಣೇ |
ಭವಚ್ಛಿದೇ, ಸ್ವಬಂಧಾಯ ಬಂಧತ್ರಯವಿವೇಕಿನೇ ||21||

ಶರಣಾಗತ ರಕ್ಷೈಕಸಂಕಲ್ಪಾಯ ಸ್ವಚಕ್ಷುಷೇ |
ವೇದವೇದಾಂತ ದೀಪಾಯ ಜ್ಞಾನಚೂಡಾಸ್ವಬೋಧಿನೇ ||22||

ಶ್ರೀಭಾಷ್ಯಭಾವಬೋಧಾರ್ಥ ಪ್ರಭಾಮಂಡಲಲಾಸಿನೇ |
ರಹಸ್ಯತ್ರಯಸಾರಾರ್ಥಗ್ರಹಣೋಜ್ಜ್ವಲಂಕಾಂತಯೇ ||23||

ವಾಗೀಶಪದಲಕ್ಷ್ಯಾಯ ನವ್ಯವಾಗಿಶಯೋಗಿನೇ |
ಶ್ರೀಹಯಾಸ್ಯ ಪದದ್ವಂದ್ವ ವೃತ್ತಗೋತ್ರನಿವಸಿನೇ ||24||

ತಃ

ವ್ಯತನೋದ್ವೇಙ್ಕಟೋ ನಾಥ ಇತ್ಥಮಷ್ಟೋತ್ತರಂಶತಂ |
ವಾಗೀಶನವ್ಯವಾಗೀಶ ಕೃಪಾಮುದ್ರಾತ್ಮ ಲಕ್ಷಣಃ ||

ಇತ್ಥಮಾಚಾರ್ಯಸೇವಕಃ
ವೇದರತ್ನಂ, ಮಹಾಮಹೋಪಾಧ್ಯಾಯಃ
ಎ.ಎಸ್. ವೆಂಕಟನಾಥನ್, ಶ್ರೀ ಕಾರ್ಯಕರ್ತರು,
ಪರಕಾಲಮಠ, ಮೈಸೂರು - 570 027

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.



ಶ್ರೀಮದಭಿನವ ವಾಗೀಶಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವದಲ್ಲಿ ಸಹಸ್ರಧಾರಾಭಿಷೇಕ

Sahasradharabhishekam during Prakrutam Swamy's ashrama sweekaram

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri





ಶ್ರೀಮದಭಿನವ ವಾಗೀಶಸ್ವಾಮಿಗಳ
ಪಟ್ಟಾಭಿಷೇಕ ಮಹೋತ್ಸವದ ದೃಶ್ಯಗಳು

Scenes from Pattabhishekam of Prakrutam Swamy



CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.



Scenes from Pattabhishekam of Prakrutam Swamy
ಪಟ್ಟಾಭಿಷೇಕದಲ್ಲಿ ಹಿರಿಯ ಸ್ವಾಮಿಗಳಿಗೆ ಅಂಜಲಿಯನ್ನು ಸಮರ್ಪಿಸುತ್ತಿರುವ ಕಿರಿಯ ಸ್ವಾಮಿಗಳು





ಈರ್ವರು ಆಚಾರ್ಯರುಗಳು ಡೋಲೋತ್ಸವದ ಸಂದರ್ಭದಲ್ಲಿ ಅಭಿನವ ವಾಗೀಶ ಪರಕಾಲ ಸ್ವಾಮಿಗಳಿಂದ ಉಪನ್ಯಾಸ



ಮೂವರು ಯತಿಶ್ರೇಷ್ಠರ ಪವಿತ್ರ ಸಂಗಮ



ಹಿರಿಯ ಮತ್ತು ಕಿರಿಯ ಸ್ವಾಮಿವರ್ಯರುಗಳು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.



Scenes from Thiruvaaradhanam



Swamy at Navalpakkam Sri Annayarya Mahadeshika Sri Bhashya Vidwat Sadas

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.



ಆಚಾರ್ಯರೇ ಸ್ತೋತ್ರಪಾಠವನ್ನು
ಕೊಡುತ್ತಿರುವ ಅದ್ಭುತ ದೃಶ್ಯ
Swamy Teaching Stothrapatam



ಶಿಷ್ಯವೃಂದವನ್ನೂ ಅನುಗ್ರಹಿಸುತ್ತಿರುವ ಶ್ರೀ ಶ್ರೀಗಳವರು

ಶ್ರೀಮದಭಿನವ ರಾಮಾನುಜರ ಚರಣ ಪಾದುಕೆಗಳು
Swamy's Padukas



ಆಚಾರ್ಯರ ಪ್ರತ್ಯೇಕ ಲಘು ಗ್ರಂಥಭಂಡಾರದ ಒಂದು ದೃಶ್ಯ
Swamy's Personal Library



ಸ್ವಾಮಿಗಳ ಹಸ್ತಾಕ್ಷರ
Swamy's Hasthaksharam

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.



ಶ್ರೀಮದಭಿನವ ರಾಮಾನುಜರ
ಪರಮಪದದ ನಂತರ
ಕಾಂಚೀಪುರದಲ್ಲಿ ನಡೆದ ಇಯಲ್ ಗೋಷ್ಠಿ
Swamy's Iyal Goshti at Kanchipuram



ಶ್ರೀಮದಭಿನವ ರಾಮಾನುಜರ
ಪರಮಪದದ ನಂತರ
ಕಾಂಚೀಪುರದಲ್ಲಿ ನಡೆದ ಶ್ರೀಚೂರ್ಣ ಪರಿಪಾಲನೆ
Srichurna paripalanam of Swamy at Kanchipuram

ತಿರುನಕ್ಷತ್ರದಂದು ಶ್ರೀಮದಭಿನವ
ರಾಮಾನುಜರ ಬೃಂದಾವನದಲ್ಲಿ
ಅರುಳಪ್ಪಾಡು ಸಮರ್ಪಣೆ
Brindavana Aaradhanam on Swamy's Thirunakshatram

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅಭಿನವ ರಾಮಾನುಜ ಪರಕಾಲ ಸ್ವಾಮಿಗಳ ತಿರುನಕ್ಷತ್ರದಂದು
ಬೃಂದಾವನ ಸನ್ನಿಧಿಯ ಆರಾಧನೆಯ ಒಂದು ದೃಶ್ಯ

ಅಭಿನವ ರಾಮಾನುಜ ಸ್ವಾಮಿಗಳ ಬೃಂದಾವನ
ಸನ್ನಿಧಿಯಲ್ಲಿ ತಿರುನಕ್ಷತ್ರದಂದು ಆಚಾರ್ಯರು
ಸಂಭಾವನೆಯನ್ನು ಸಮರ್ಪಿಸುತ್ತಿರುವುದು



ಶತಮಾನೋತ್ಸವದ ಅಂಗವಾಗಿ ನಡೆದ ಪ್ರತಿ ಮಾಸ ಶ್ರವಣ ತಿರುನಕ್ಷತ್ರಗಳ ದೃಶ್ಯ
Celebrations of maasa sharavana thirunakshatrams

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri



ಸ್ವಾಮಿಗಳು ಸಮರ್ಪಿಸಿದ ಸ್ವರ್ಣ ಪಲ್ಲಕ್ಕಿಯಲ್ಲಿ ಬೆಳಗುತ್ತಿರುವ
ತೂಪ್ಪುಲ್ ವೇದಾಂತ ದೇಶಿಕರು

Thuppul Vedantha Deshika on the Golden Palanquin presented by Swamy

ಸ್ವಾಮಿಗಳು ಸಮರ್ಪಿಸಿದ ರಥದಲ್ಲಿ ಬೆಳಗುತ್ತಿರುವ
ತೂಪ್ಪುಲ್ ವೇದಾಂತ ದೇಶಿಕರು

Thuppul Vedantha Deshika on the Chariot (Ther) presented by Swamy



ಪಲ್ಲಕ್ಕಿಯಲ್ಲಿ ಕಾಣಬಹುದಾದಂತಹ
ಶ್ರೀಪರಕಾಲ ಮಠದ ಪ್ರಾಚೀನ ಶಾಸನ

Archaic inscriptions of Sri Parakala Matam seen in the Golden Palanquin

ಶಿಷ್ಯರೊಬ್ಬರಿಂದ ನಿರ್ಮಿತವಾದ ಸ್ವಾಮಿಯ ಚಿತ್ರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ஶ்ரீ

ஶ்ரீ லக்ஷ்மி ஹயக்ரீவபரப்ரம்ஹணே நம:

ஶ்ரீமதே நிகமாந்த மஹாதேசிகாய நம:

ஶ்ரீமதபிநவரங்கநாத ப்ரம்மதந்த்ரஸ்வதந்த்ர பரகாலமஹாதேசிகாய நம:

ஶ்ரீமதபிநவராமாநுஜ ப்ரம்மதந்த்ரஸ்வதந்த்ர பரகாலமஹாதேசிகாய நம:

ஶ்ரீமத் பகவத்கீதா அவதாரவைபவம்

ஶ்ரீ உ.வே. வித்வான் திருக்கண்ணமங்கை

ஶ்ரீநிவாசராகவாசார்யார்,

ஆராதகர் ஶ்ரீலக்ஷ்மி ஹயக்ரீவர் ஸந்நிதி, மைசூர்.

अस्थान स्नेह कारुण्य धर्माधर्मभयाकुलम्।

पार्थं प्रपन्नमुद्दिश्य शास्त्रावतरणं कृतम्॥

- गीतार्थ संग्रह प्रथमश्लोक:

தத்வங்களை அறிவதற்கு ப்ரமாணங்கள் தேவை. அந்த ப்ரமாணமும் சிற்றறிவுள்ள மனிதர்களால் ஏற்பட்டிருந்தால் ப்ரயோஜனமில்லை. சரி, சிறந்த ப்ரமாணம் உண்டா? என்றால், உண்டு என்றனர் பெரியோர்கள். அதுதான் வேதம் என்ற ப்ராமாணம், அது மனிதனால் செய்யப்பட்டதில்லை, பகவான் என்றெருவன் எல்லாவற்றிற்கும் மேலாக ஆரம்பமில்லாமல் இருக்கிறான், அதுபோலத்தான் ஆரம்பம் இல்லாத அந்த பகவானைச் சொல்லும் வேதமும் இருக்கிறது, வேதப்பொருளை அறிந்துகொண்டால், தத்வங்களை தெளிவாகப் புரிந்துகொள்ளலாம் – என்பர் பெரியோர்.

ஆனால் வேதம் புரியாத சொற்கள் கொண்ட ஒரு கடினமான சாஸ்திரம். அதற்கென்றே அமைந்த வ்யாகரணம், நிருத்தம், சந்தஸ் என்ற பல சாஸ்திரத்தை நன்கு தெரிந்து, வேதங்களின் பொருளை தெரிந்துகொள்ளவேண்டும். வேதங்களில் முன்பாகம், பின்பாகம் என்று இரு பிரிவுகள் உண்டு. பூர்வபாகம் இந்திரன் முதலான தேவதைகளைப் பற்றியும், அவர்களை ஆராதிக்கும் யாகம் யக்ஞம் முதலியவைகளைப் பற்றியும், உத்திரபாகம் என்னும் உபநிஷத்பாகம் உலகம் ஏற்படக் காரணமான பகவானைப் பற்றியும், அவனை அடைவதற்கான உபாயங்களைப் பற்றியும் சொல்கிறது. 'அனந்தாவை வேதா:' என்றபடி வேதமானது முடிவில்லாத சாஸ்திரம். பூர்வபாகமான கர்மகாண்டம் அல்பமான பலன்களைக் கொடுக்கும் ஸ்வர்க்கம் முதலியவற்றைப் பற்றிச் சொல்வதால், நிலையான சுகத்தைப் பெற ஆசைப்படுபவனுக்கு அது தேவையில்லை என்று பெரியோர்கள் அதைவிட்டு உத்திரபாகமான உபநிஷத்துக்கள் கொண்ட பகுதியை படித்தனர்.

ஆனால், அந்த உபநிஷத்பாகமும் உண்மையைப் புரியும்படிச் சொல்லவில்லை. ஒரு இடத்தில் ஒரே வஸ்து இருப்பதாகவும், மற்றெரு இடத்தில் மூன்று வஸ்துக்கள் இருப்பதாகவும், பிரிதொரு இடத்தில் மூன்று வஸ்துக்கள் ஒரு வஸ்துவில் இணைந்து அடங்கி இருப்பதாகவும் கூறி மனதைக் குழப்புகிறது. வேதங்களைக் கொண்டு தத்வங்களை புரிந்துகொள்ள முயற்றவர்களை கலங்கவைத்து, கற்பனையான அர்த்தங்களை சொல்ல வைக்கிறது. ஆகையால் மூலப்பிரமாணமான வேதங்களை நன்றாகத்

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

தெரிந்தவர்கள் விளங்கினால்தான் புரியுமேஒழிய, நாமாக புரிந்துகொள்ள முயன்றால், குழம்பத்தான் வேண்டும்.

பகவான்தான் எல்லாம் தெரிந்தவன். தத்வங்களை இயக்கிவைப்பவனும், அதன் காரிய காரணங்களை அறிந்தவனும் அவனே, அவன்தான் வேதங்களின் பொருளை விளக்கிச்சொல்ல முடியும். வேதங்களை அறிந்து தத்வங்களை புரிந்துகொண்டு, உலகம் உஜ்ஜீவிப்பதற்காக, பகவானே வேதங்களின் உட்பொருளை விளக்கிச் சொல்லவேண்டியதாயிற்று. அந்தக் காரியத்தை கிருஷ்ணாவதாரத்தில் பகவான் செய்தான். உபநிஷத்து முழுவதும், ஆங்காங்கே மறைந்து நமக்குப் புரியாமல் நிற்கும் அர்த்தங்களை எல்லாம் ஒரு கோர்வையாக்கி, நாமெல்லாம் அறிவதற்கு வழியாக, அர்ஜுனனை முகாந்தரமாகக் கொண்டு கீதை என்ற சாஸ்த்திரத்தை அவதரிப்பித்தான்.

பகவானாலே சொல்லப்பட்டதாகையாலே பகவத்கீதை என்று பெயர்பெற்றது. உலகமெல்லாம் இன்பத்துடன் வாழவேண்டுமென்ற கருணையுடன் அவர் சொன்னபடியால், அது நமக்கு முழுக்க முழுக்க ப்ரமாண சாஸ்த்திரமாகிறது. எல்லாவற்றுக்கும் ஈச்வரனான பகவான் அருளிய சாஸ்த்திரமாகையால், எந்நாட்டவரும் விரும்பி ஏற்கும் பெருமையுடன் விளங்குகிறது. ஆயிரம் தாய் தகப்பனைவிட நமக்கு ஹிதம் செய்வதாக பெரியோர்கள் சொல்வார்கள். அப்படி பரம ஹிதங்களை பகவான் மிகுந்த கருணையுடன் அருளிச்செய்தான். வேதங்களின் அர்த்தங்களை அறிவது கஷ்டம் என்பதற்காக, புராணம், இதிஹாசங்களைக் கொண்டு, அவைகளின் பொருளை புரிந்துகொள்ள வேண்டுமென்று மஹரிஷிகள் சொன்னார்கள். புராணங்களை விட இதிஹாசம் உயர்ந்ததென்றும் நிர்ணயித்திருக்கிறார்கள். இராமாயணத்தையும், மஹாபாரதத்தையும் இதிஹாசமென்று சொல்வார்கள். ராமாயணம் பகவானுடைய அவதாரக் கதையை ப்ரதானமாகச் சொல்லிற்று. மஹாபாரதமோ பகவானுடைய கதையையும் இடையில் சொல்வதோடு, எத்தனையோ தர்மங்களையும், வாழ்க்கை முறைகளையும், விஸ்தாரமாகச் சொல்லி, அத்யாத்ம சாஸ்த்திரமான பகவான் சொன்ன கீதையையும் தன்னில் அடக்கிக்கொண்டு இருப்பதால் மிகவும் உயர்ந்ததாகிறது. அதை ஐந்தாம் வேதம் என்று சொல்கிறார்கள். எல்லா உபநிஷத்தும் பசுக்களென்றும், அந்தப் பசுக்களிடமிருந்து அமிர்தம் போன்ற பாலைக் கறந்து தருகிறான் கோபாலனான பகவான் என்றும், பசு பால் சுரப்பு விடுவதற்கு, கன்று ஊட்டினால்தான் முடியும் என்பதால், கன்றுபோல் அர்ஜுனன் என்றும், கன்று வாய்வைத்து ஊட்டியவுடன் இடையன் கரக்க கரக்க மேலும் பால்சுரக்கும் பசு போல் அர்ஜுனன் கேட்டான் என்ற காரணத்தைக் கொண்டு, உபநிஷத்துக்களும் தங்களின் ஸாரமானபொருளை பகவான் மூலமாக கீதை என்ற பெயரில் வழங்கியிருக்கிறது என்றும் பெரியோர்கள் சொல்கிறார்கள்.

உலக ஸ்ருஷ்டியைப் பற்றியும், ஜீவராசிகளைப் பற்றியும், தத்துவங்களைப் பற்றியும் வேதம் உபநிஷத்துக்களைக் கொண்டுதான் தெரிந்துகொள்ள முடியும் என்று சொல்லப்பட்டது. அவைகளின் பொருளை புரிந்துகொள்வது சிரமம் என்பதற்காக, கீதையின் மூலம் பகவான் விளக்கினார் என்று ஆசார்யர்கள் சொன்னார்கள். பொதுவாக கீதையின் உபதேசம் மாத்திரம் எல்லோருக்கும் புரிகிறமாதிரி இருக்கிறது. ஆனால் அடிப்படைத் தத்வங்கள் மாத்திரம் குழப்பமாகவே இருக்கிறது. உயிரினங்கள் என்று சொன்னோம், ஆனால் உயிர் என்பது என்ன என்று யாரும் சொல்லமுடியவில்லை. உயிர்கள் உடம்பில் எப்படி வேலை செய்கின்றன, எவ்வளவு நாள் உடம்போடு உயிர் இருக்கும், உடம்பை விட்டு தனியான இருப்பு உயிர்க்குக் கிடையாதா? என்ற கேள்விக்கொல்லாம், யாரும் விடைசொல்ல முடியவில்லை. ஏன் முடியவில்லை. உண்மையான அர்த்தங்கள் பகவானின் பூர்ணமான அருள் உள்ளவனுக்குத்தான் விளங்கும், மற்றவர்களுக்குச் சில அம்சங்கள்தான் புரியுமே தவிர முழுவதும் புரியாது. ஸ்ரீராமாநுஜர், அவரைப் பின்பற்றிய ஆசார்யர்கள், பகவானுடைய பூர்ண அருளுக்குப் பாத்ரமானவர்கள். அவர்களுடைய

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

உள்ளத்தில், பகவான் கருணையால் உண்மையான வெளிச்சத்தை உண்டுபண்ணி, தத்துவங்களை சந்தேகக் குழப்பமறப் புரியவைத்தான். அவர்கள் நமக்குத் தங்களின் பாஷ்யங்களின் மூலம் அந்த விஷயங்களைத் தெளிவாக்கினார்கள். உபநிஷத்துக்கள், ப்ரும்ஹசாஸ்த்திரம் முதலியவை தத்வங்களை மற்றும் வெளிப்படுத்துகின்றன. பகவத்கீதை தத்வங்களை வெளிப்படுத்துவதோடு க்ரியா சாஸ்திரமாகவும் (செய்முறை) அமைந்திருக்கிறது. உலகம் எப்படி வந்தது? – பகவான் படைத்தார். உயிர்கள் என்பது எவை? – அவைகள் ஜீவாத்மா என்று சொல்லப்படுபவை. ஜீவாத்மாக்கள் எண்ணற்றவை. அவைகளுக்கு அனாதியாக கர்மங்கள் உண்டு. அந்தந்த கர்மங்களின் அனுபவத்துக்கென்று, அந்த ஆத்மாக்களுக்கு உடம்பைக் கொடுத்து, அவைகள் வாழ்வதற்காக உலகைப்படைக்கிறான். ஆத்மாக்கள் பல உடம்புகள் மூலம் கர்மாக்களை அனுபவிக்கின்றன. கர்மம் உடம்பினால் எவ்வளவு சுகத்தை அனுபவிக்க முடியுமோ, அவ்வளவு சுகம்தான் அடையமுடியும். கர்மம் நீங்கி உடம்பும் போனால் எல்லையில்லாத சுகத்தை அனுபவிக்கமுடியும்.

மூலத்தின்படி திருக்கண்ணமங்கை ஸ்ரீநிவாசராகவாச்சார்யார்,

ஆராதகர் ஸ்ரீலக்ஷ்மி ஹயக்ரீவர் ஸந்நிதி, மைசூர்.

(ஸ்ரீலக்ஷ்மிஹயக்ரீவ திவ்யமணி பாதுகாஸேவக ஸ்ரீமதபினவராமாநுஜ ப்ரம்மதந்த்ர பராகால மஹாதேசிகனின் பரிபூர்ண கடாக்ஷபாத்ர பாக்யம் பெற்ற தாஸன்.)

மானேய்நோக்கி மடவாளை மாற்பிற்கொண்டாய் ! மாதவா!
கூனேசிதைய உண்டைவில் நிறத்தில் தெறித்தாய் ! கோவிந்தா !
வானார்சோதி மணிவண்ணா ! மதுசூதா ! நீ யருளாயுன்
தேனே மலரும் திருப்பாதம் சேருமாறு வினையேனே. – திருவாய்மொழி 1–5–5.

இந்தப்பசுரம் நம் பரகாலமடத்தில் எழுந்தருளியிருக்கும் ப்ராசீன அர்ச்சா விக்ரஹ மூர்த்திகளான ஸ்ரீலக்ஷ்மிநாராயணன் (மாதவன்), ஸ்ரீகண்ணன் (கோவிந்தன்) மற்றும் நடுநாயகமாய் விளங்கும் ஸ்ரீலக்ஷ்மிஹயக்ரீவனையும் (மதுசூதனன்) பாடியதாக நம்மடத்து முன்னோர்கள் சொல்வதுண்டு.

<u>பாசுரப் பொருள்:</u>

பெரியபிராட்டிக்கு நாதனே! மான் நோக்குக்கு ஒப்பான பார்வையையுடைய மடப்பமுள்ளவளை உனது திருமார்பிலே வைத்துக்கொண்டவனே! கோவிந்தனே! உருண்டையான வில்லானது தெறிக்க அவ்வடிவு தொலைவது போல் த்ரிவக்ரையின் கூன்பாகமே அழிந்துபோகும்படி தாக்கியெழுந்தவனே–பாய்ந்தவனே! பரமாகாசம் நிறையும் ஒளியையுடைய நீலமணிநிறமான திருமேனியையுடையவனே! மது என்ற அசுரனை அழித்தவனே! பாபியான நான் முழுமையும் தேனாகிய உனது மேன்மை பொருந்திய திருவடிகளை அடியும்படியை சிறந்த ஸௌசீல்யமுடைய நீ திருவுள்ளம் பற்ற வேண்டும்.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

மோக்ஷோபாயம்

ஸ்ரீ உ.வே. நாவல்பாக்கம் சித்தியார்ய
ராமாநுஜ தாததேசிகன் ஸ்வாமி

காலாவர்த்தான் ப்ரக்ருதி விக்ருதீ: காமபோகேஷ்வ தோஷான்
ஜ்வாலாவர்த்த ப்ரதிம தரிதோ தர்க துக்காநு பூதிம் |
யாதாதத்யம் ஸ்வபரநியதம் யச்சதிவ்யம் பதம் தத்
காராகல்பம் வபுரபிவிதம் கஸ்திதிக்ஷேத பந்தம் ||

சுழல் போன்று மாறி மாறி வரும் காலதத்வத்தையும், மூலப்ரக்ருதி மற்றும் அதன் பரிமாணங்களான மஹத் அஹங்காரம் முதலிய தத்வங்களையும், பூலோகத்திலும், ஸ்வர்க்கம் முதலான மேலுலகங்களிலும் உள்ள தோஷங்களையும், அதனால் உண்டாகும் நெருப்புக்குழிகள் போன்ற பாபங்களால் உண்டாகும் பயனாநுதுக்காநுபவத்தையும் தன்னுடையவும், எம்பெருமானுடையவும், சரீர சரீரபால நித்ய ஸம்பந்தத்தின் உண்மைத் தன்மையையும் சிறந்ததான பரமபதத்தையும், சிறை வாழ்க்கை போன்ற சரீரத் தன்மையையும் அறிகின்ற எவன் தான் துக்கத்தால் கட்டுண்ட ஸம்ஸார பந்தத்தை பொறுத்துக்கொள்வான்? அதைப் பொறுக்கமாட்டாமல் மோக்ஷத்தையடைய முயல்பவனேயாவான்.

மோக்ஷம் என்ற சொல்லிற்கு முக்தி மற்றும் விடுதலை என்று பொருள். அதாவது கட்டுப்படுத்தப்பட்ட ஒருவன் அந்ததத்தையினின்று மீள்வதே மோக்ஷம். இந்நில உலகிலுள்ள அனைவருமே தாங்கள் முற்பிறவியில் செய்த வினைகளுக்குக் கட்டுப்பட்டு அவைகளுக்கணுகுணமான புண்யபாபங்களை இப்பிறவியில் அனுபவித்து வருகின்றவர்களாவர். இப்புண்ய-பாபானுரூபமான ஸம்ஸாரபந்தம் எப்பொழுது ஆரம்பித்தது என்று கூறத்தக்கதல்லாததால் அனாதி எனப்படுகிறது. இக்கர்மங்களில் புண்யச் செயல்கள் ஸுகத்தை அளிக்கவல்லவையானாலும் பொன் விலங்கு போன்று ஜீவனைக் கட்டுப்படுத்தவே செய்யும். புண்யத்தின் பலன் முடிந்ததும் பாபத்தின் பலனான துக்கத்தையும் அனுபவிக்க வேண்டிவரும். இப்படி மாறி மாறி பல பிறப்புகள் பிறந்து ஸுக துக்கங்களான ஸம்ஸார பந்தத்திலிருந்து விடுதலை பெறுவதுதான் முக்தி அல்லது மோக்ஷம் எனப்படுகிறது. அதை அடைய இம்மைப் பயன்களுக்கு ஸாதனமான கர்மாதிகளைக் கைவிட்டு மோக்ஷத்தைப் பெற வழிவகுப்பதான கார்யங்களைச் செய்ய முற்படவேண்டும். அதன் பயனாகத்தான் மோக்ஷம் உண்டாகும். இதனை "வைகுந்தம் புகுவது மண்ணவர் விதியே" (திருவாய்மொழி 10-9-9) என்றார் நம்மாழ்வார். இப்படி மோஷத்திற்காக முயற்சி செய்பவர்கள் முமுக்ஷுக்கள் எனப்படுகின்றனர். இப்படிப்பட்டவர்களே மாந்தர்களுள் மிகச்சிறந்தவர்கள் என்று சாஸ்த்ரங்கள் புகழ்கின்றன. அதாவது

நிர்மமா நிரஹங்காரா: நிர்தக்தா: ஸம்யமேந்த்ரியா: |
த்யானயோகரதாச்சைவ தத்ர கச்சந்தி ஸாதவ: ||

(அஹங்கார மமகாரங்களன்றி ஸுக துக்கங்களைப் பொறுத்துக்கொண்டு இந்த்ரியங்களை அடக்கி எம்பெருமானுடைய த்யானத்தில் ப்ரீதியுடன் ஈடுபட்டுள்ள மோக்ஷார்த்திகளே பரமபதத்தைச் சென்றடைகின்றனர். – பாரத-வனபர்வ 217-39).

CC-0. Bhagavad Ramanuja National Research Institute, Melukote Collection.

 Funding: Tattva Heritage Foundation,Kolkata. Digitization: eGangotri.

இப்படிப்பட்டவர்கள் தாங்கள் அனுபவித்து வருகின்ற பிறவியின் முடிவில் பரமபதத்தை அடைந்து மறுபடியும் பிறந்து இறக்கும்படியான கர்ம சரீர பந்தமின்றி பரமபத்திலேயே நித்யவாஸம் பண்ணத் தகுந்தவர்களாகின்றனர். பரமபதத்திற்கு ஸ்ரீவைகுண்டம் என்று பெயர். இது ப்ரஹ்மாவின் இருப்பிடத்திற்கு மேல் சுத்தமாய் எப்பொழுதும் இருக்கக்கூடியதாய் ஸ்வயம் ப்ரகாசமாய் உள்ளதாகும். இது ப்ரஹ்மத்தை அனுப்பவிக்கக்கூடிய இடமாய் இருப்பதால் ஸ்ரீ வைகுண்டமே பரப்ரஹ்மம் என்றும் அழைக்கப்படுகிறது. இதனை

ப்ரஹ்மண: ஸதனாதூர்த்வம் தத்விஷ்ணோ: பரமம் பதம் |
சுத்தம் ஸனாதனம் ஜ்யோதி: பரம் ப்ரஹ்மேதி தத்விது: ||

என்ற (பாரத வன பர்வ 317–37) வசனத்தால் அறியலாம்.

முமுக்ஷு முக்தியடைந்ததுடன் ஸ்ரீவைகுண்டத்தில் பரமாத்மாவிற்கு ஸமானமான உருவம் (ஸாரூப்யம்) உறைவிடம் (ஸாலோக்யம்) உகப்பான சேர்த்தி (ஸாயுஜ்யம்) ஆகியவைகளையடைந்து உடனிருந்து (ஸாமீப்யம்) கைங்கர்யம் செய்யும் பேற்றினைப் பெற்று ஆனந்தானுபவம் செய்யவல்லவனாகிறான். உலகத்தைப் படைத்து காத்து அழிக்கும் செயல் ஒன்றுதான் பரமாத்மாவான ஸ்ரீமந்நாராயணனுக்கே உரியதாகும். மற்றவிதமான பகவதானந்தங்கள் அனைத்தையும் முக்த ஜீவன் அனுபவித்துணரும் பாக்யம் பெற்றவனாகிறான். இந்த ஆனந்தானுபவத்தைக் "கொள்ளமாளா இன்பவெள்ளம்" (திருவாய்மொழி 4–72) என்றார் நம்மாழ்வார். "யதோ வாசோ நிவர்த்தந்தே | அப்ராப்யமனஸா ஸஹ | ஆனந்தம் ப்ரஹ்மனோ வித்வான் |" என்று ப்ரஹ்மானந்தம் நினைத்து அளவிடமுடியாதது என்றது தைத்ரீயோபநிஷத். அப்படிப்பட்ட ஆனந்தானுபவம் முக்தனுக்கு ஏற்படத் தக்கதாகும். ஸ்ரீவைகுண்டம் ஸுத்தஸத்வமயமானபடியால் அங்குள்ளவைகள் நமது அறிவிற்கு அப்பாற்பட்டதாகும். வேதங்களிலும், ஆகமங்களிலும் கூறப்பட்டுள்ளவைகளெல்லாம் ஸ்ரீவைகுண்டத்தைப் பற்றிய ஸூசனைகளே என்றறியத்தக்கதாகும். அங்கு சென்றடைந்தவர்களுக்கே அறிந்துணரத் தக்கதாம். இப்படிப்பட்ட மோக்ஷானந்தத்தை அடைவதற்கு முயல வேண்டியது அனைவருடைய கடமையாகும்.

மோக்ஷத்தை அடைவதற்கு பக்தி – ப்ரபத்தி என்கிற இரு உபாயங்கள் கூறப்பட்டுள்ளன. இவைகளை அனுஷ்டிப்பவர்கள் முறையே பக்தர் என்றும் ப்ரபன்னர் என்றும் இருவகைப்படுவர். பக்தி ப்ரபத்திகளில் ஏதாவதொன்றை அநுஷ்டித்தாலல்லாது மோக்ஷத்தைப் பெறமுடியாதென்று ஸ்வாமி தேசிகன் பின்வருமாறு கூறியுள்ளார்.

ப்ரபன்னாதன்யேஷாம் நதிசதி முகுந்தோ நிஜபதம்
ப்ரபன்னஶ்ச த்வேதா ஸுசரித பரீபாகபிதயா |
விளம்பேன ப்ராப்திர் பஜன ஸுகமேகஸ்ய விபுலம்
பரஸ்யாசுப்ராப்தி: பரிமிதரஸா ஜீவிததஶா ||

(எம்பெருமான் ப்ரபத்தி செய்தவர்களைத் தவிர்த்த மற்றவர்களுக்குத் தன் திருவடியையும், தனது இடமான பரமபதத்தையும் தருவதில்லை. ப்ரபன்னர்களும் தமது புண்ய முதிர்ச்சியின் வேறுபாட்டால் பக்தன், ப்ரபன்னன் என்று இருவகைப்பட்டவராவர். இவர்களில் ஒருவனான பக்தனுக்கு முக்தியானது தாமதித்துத்தான் வரும். ஆனால் பக்தியோக காலத்தில் உண்டாகும் பகவதனுபவத்தின் ஆனந்தம் அளவற்றதாக இருக்கும். மற்றவனான ப்ரபன்னனுக்கு முக்தியானது அந்தப் பிறவிலேயே சீக்கிரமாகக் கிடைக்கத்தக்கது. ஆனால் தான் உயிருடன் வாழும் காலத்தின் ஆனந்தம் குறைந்த ஸுகத்தைத் தரவல்லதாகவே இருக்கும் (ச்லோகம் 21, அதிகாரிவிபாகாதிகாரம்)

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

